# ಕರ್ನಾಟಕ ವಿಧಾನ ಪರಿಷತ್ತು

## ಬುಧವಾರ, 04ನೇ ಡಿಸೆಂಬರ್ 2013

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಪೂರ್ವಾಹ್ನ 11 ಗಂಟೆ 30 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಹೆಚ್. ಶಂಕರಮೂರ್ತಿ)ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

## 1. ಪ್ರಶ್ನೋತ್ತರಗಳು

## (ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.

### ಹಿರಿಯೂರು ವಾಣಿವಿಲಾಸ್ ಸಹಕಾರಿ ಸಕ್ಕರೆ ಕಾರ್ಖಾನೆ ಕುರಿತು

### 676, ಶ್ರೀ ರಘು ಆಚಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಅ) ಹಿರಿಯೂರು ವಾಣಿವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆ ಪುನರಾರಂಭ ಮಾಡಲು ಸರ್ಕಾರ ತೀರ್ಮಾನಿಸಿದೆಯೆ?

ಆ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಇಲ್ಲವಾದಲ್ಲಿ ಕಾರಣ ತಿಳಿಸುವುದು)

### ಶ್ರೀ ಪ್ರಕಾಶ ಬಾ. ಹುಕ್ಕೇರಿ (ಸಣ್ಣ ಕೈಗಾರಿಕೆಗಳು, ಮುಜರಾಯಿ ಹಾಗೂ ಸಕ್ಕರೆ ಸಚಿವರು)

ಅ) –ಇಲ್ಲ–

ಆ) ವಾಣಿವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಗುತ್ತಿಗೆ ನೀಡಲು ಮೂರು ಬಾರಿ ಟೆಂಡರ್ ಕರೆಯಲಾಗಿತ್ತು. ಕಾರ್ಖಾನೆಯನ್ನು ಗುತ್ತಿಗೆ ಆಧಾರದ ಮೇಲೆ ಪಡೆಯಲು ಯಾವೊಬ್ಬ ಟೆಂಡರ್‌ದಾರರು ಮುಂದೆ ಬಂದಿರುವುದಿಲ್ಲ. ಆದಕಾರಣ ಅಂತಿಮವಾಗಿ ಕಾರ್ಖಾನೆಯ ಆಸ್ತಿ-ಪಾಸ್ತಿಗಳನ್ನು ಮೌಲ್ಯಮಾಪನ ಮಾಡಿಸಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯಿದೆಯನ್ವಯ ಹಾಗೂ ಸ್ಪರ್ಧಾತ್ಮಕ ಪ್ರತಿಕ್ರಿಯೆಯ ಮೂಲಕ ಕಾರ್ಖಾನೆಯನ್ನು "ಎಲ್ಲಿದೆಯೋ, ಹೇಗಿದೆಯೋ ಹಾಗೆ" (as is where is basis) ಮಾರಾಟ ಮಾಡಲು ಹಾಗೂ ಮಾರಾಟದಿಂದ ಬರುವ ಮೊತ್ತದಿಂದ ಕಾರ್ಖಾನೆಯ ಕಾರ್ಮಿಕರ ವೇತನ, ಹಣಕಾಸು ಸಂಸ್ಥೆಗಳಿಗೆ ಪಾವತಿಸಬೇಕಾದ ಬಾಕಿ, ಸರ್ಕಾರದ ಸಾಲಗಳು, ಸಾಲ ಮರುಪಾವತಿ ಮತ್ತಿತರೆ ಯಾವುದೇ ಶಾಸನಬದ್ಧ ಹೊಣೆಗಳನ್ನು ಇತ್ಯರ್ಥಪಡಿಸುವ ಷರತ್ತಿನೊಂದಿಗೆ ಕಾರ್ಖಾನೆಯನ್ನು ಮಾರಾಟ ಮಾಡಲು ಸರ್ಕಾರದ

ಆದೇಶ ಸಂಖ್ಯೆ:ವಾಕೈ/98/ಸಸಕಾ/2011 ದಿನಾಂಕ:30–01–2013 ರಂತೆ ಅನುಮೋದನೆ ನೀಡಲಾಗಿದೆ. ಅದರಂತೆ ಈ ಕಾರ್ಖಾನೆಯನ್ನು ಟೆಂಡರ್/ಬಹಿರಂಗ ಹರಾಜು ಮೂಲಕ ಮಾರಾಟ ಮಾಡಲು ಚಿತ್ರದುರ್ಗ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ.

ಅಲ್ಲದೆ ಸದರಿ ಕಾರ್ಖಾನೆಯನ್ನು ದಿನಾಂಕ:30–09–2013 ರಿಂದ ಜಾರಿಗೆ ಬರುವಂತೆ ಸಮಾಪನೆಗೊಳಿಸಿ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ 1959 ರ ಕಲಂ–73 ರನ್ವಯ, ಕಾರ್ಖಾನೆಯ ಸಮಾಪನಾಧಿಕಾರಿಯಾಗಿ ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಇವರನ್ನು ನೇಮಿಸಲಾಗಿದೆ. ಅದರನ್ವಯ ಸಮಾಪನಾಧಿಕಾರಿಯವರು, ಕಾರ್ಖಾನೆಯ ಸಮಗ್ರ ಆಸ್ತಿಯನ್ನು ವಶಕ್ಕೆ ತೆಗೆದುಕೊಂಡು, ಕಾರ್ಖಾನೆಯ ಆಸ್ತಿ–ಜವಾಬ್ದಾರಿಯನ್ನು ವಿಲೇವಾರಿ ಮಾಡಲು ಕ್ರಮಕೈಗೊಳ್ಳಲಿದ್ದಾರೆ.

**ಶ್ರೀ ಜಿ.ರಘು ಆಚಾರ್:–** ಮಾನ್ಯ ಸಭಾಪತಿಯವರೆ, ಈ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭಿಸಲು ಸಾಧ್ಯವಿಲ್ಲ ಎನ್ನುವ ಉತ್ತರವನ್ನು ಮಾನ್ಯ ಸಚಿವರು ನೀಡಿದ್ದಾರೆ. ಆದರೆ ಅಲ್ಲಿರತಕ್ಕ ನೌಕರರಿಗೆ ಸಂಬಳ ಯಾವಾಗ ಸಿಗುತ್ತದೆ ಮತ್ತು ಅದಕ್ಕೆ ಏನಾದರೂ ಕಾಲಮಿತಿಯನ್ನು ನಿಗದಿ ಮಾಡಲಾಗಿದೆಯೇ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ಪ್ರಕಾಶ್ ಬಿ.ಹುಕ್ಕೇರಿ:–** ಮಾನ್ಯ ಸಭಾಪತಿಗಳೇ, ಈ ಕಾರ್ಖಾನೆಯನ್ನು ಪುನರ್ ಆರಂಭ ಮಾಡಬೇಕೆಂದು ಹಿಂದಿನ ಸರ್ಕಾರದಲ್ಲಿ 15–10–2007, 17–2–2009, 14–7–2010ರಲ್ಲಿ ಮೂರು ಬಾರಿ ಟೆಂಡರ್ ಕರೆದು ಸಾಕಷ್ಟು ಪ್ರಯತ್ನವನ್ನು ಮಾಡಿದರೂ ಸಹ ಅದಕ್ಕೆ ಯಾರು ಟೆಂಡರ್ ಹಾಕಲಿಲ್ಲ. ಅಲ್ಲಿ ಕಬ್ಬಿನ ಕ್ಷೇತ್ರ ಇಲ್ಲ. ಈ ಕಾರ್ಖಾನೆಯು ಚಿತ್ರದುರ್ಗ ಮತ್ತು

ತುಮಕೂರಿನ ವ್ಯಾಪ್ತಿಗೆ ಬರುವುದರಿಂದ ಆ ಭಾಗದಲ್ಲಿನ ರೈತರು ಯಾರು ಕಬ್ಬನ್ನು ಬೆಳೆಯುತ್ತಿಲ್ಲ. ಆದ್ದರಿಂದ ಮೂರು ಸಲ ಟೆಂಡರ್ ಕರೆದರೂ ಸಹ ಯಾರು ಮುಂದೆ ಬರಲಿಲ್ಲ. ಈ ಹಿನ್ನೆಲೆಯಲ್ಲಿ ಹಿಂದಿನ ಸರ್ಕಾರ ಈ ಕಾರ್ಖಾನೆಯನ್ನು ಹರಾಜು ಮಾಡಬೇಕೆಂದು ಒಂದು ಆದೇಶವನ್ನು ಮಾಡಿದ್ದ ಹಿನ್ನಲೆಯಲ್ಲಿ ಹಿಂದಿನ ಸರ್ಕಾರ ಈ ಕಾರ್ಖಾನೆಯನ್ನು ಹರಾಜು ಮಾಡಬೇಕೆಂದು ಒಂದು ಆದೇಶವನ್ನು ಮಾಡಿದ್ದ ಹಿನ್ನಲೆಯಲ್ಲಿ ಈಗ ಅದಕ್ಕೆ ಜಿಲ್ಲಾಧಿಕಾರಿಯವರನ್ನು ಅಧ್ಯಕ್ಷರನ್ನಾಗಿ ಮಾಡಿ, ಇನ್ನುಳಿದಂತೆ ಜಂಟಿ ಕೃಷಿ ನಿರ್ದೇಶಕರು, ಉಪವಿಭಾಗಾಧಿಕಾರಿಗಳು, ಸಹಕಾರಿ ಸಂಘಗಳ ಉಪನಿಬಂಧಕರು ಮತ್ತು ವಿಶೇಷಾಧಿಕಾರಿಗಳು ವಾಣಿ ವಿಲಾಸ ಸಕ್ಕರೆ ಕಾರ್ಖಾನೆ, ಈ 5 ಜನರ ಒಂದು ಸಮಿತಿಯನ್ನು ಮಾಡಿ ಈ ಕಾರ್ಖಾನೆಯನ್ನು ಹರಾಜು ಮಾಡಲಿಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಮಾನ್ಯ ಶಾಸಕರು ಕೇಳಿರುವ ರೀತಿ 11 ಕೋಟಿ 30 ಲಕ್ಷ ರೂಪಾಯಿಗಳ ಬಾಕಿ ವೇತನವನ್ನು ನೌಕರರಿಗೆ ನೀಡಬೇಕಾಗಿದೆ. ಆ ಕಾರ್ಖಾನೆಯ ಆಸ್ತಿ 36 ಕೋಟಿ 59 ಲಕ್ಷ ರೂಪಾಯಿಗಳಾಗಿರುವುದರಿಂದ ಈಗಾಗಲೇ ನೌಕರರು ನ್ಯಾಯಾಲಯಕ್ಕೆ ಹೋಗಿದ್ದಾರೆ. ಇದರ ಬಗ್ಗೆ ಉಚ್ಛ ನ್ಯಾಯಾಲಯ ಕೂಡ ಆರು ತಿಂಗಳ ಒಳಗೆ ಈ ಬಾಕಿಯನ್ನು ನೀಡಬೇಕೆನ್ನುವ ಒಂದು ತೀರ್ಪನ್ನು ನೀಡಿದೆ. ಆದರೆ ಈಗಾಗಲೇ ಆರು ತಿಂಗಳ ಸಮಯ ಕೂಡ ಮುಗಿದು ಹೋಗಿದೆ. ಈ ನೌಕರರ ಹಿತದೃಷ್ಟಿಯಿಂದ ಆದಷ್ಟು ಬೇಗ ನಾವು ಟೆಂಡರ್ ಕರೆದು ಕಾರ್ಖಾನೆಯನ್ನು ಹರಾಜು ಮಾಡಿ ನೌಕರರಿಗೆ ವೇತನ ನೀಡುವ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡುತ್ತೇವೆ. ಇದು ವಿಳಂಬ ಆದಲ್ಲಿ ಈಗಾಗಲೇ ನಾವು ನೌಕರರಿಗೆ ಸಂಬಳ ನೀಡಲು ಮತ್ತು ಇನ್ನೂ ನಾಲ್ಕೈದು ವಿಚಾರಗಳಿಗೆ ಹಣವನ್ನು ನೀಡಬೇಕಾಗಿದೆ. ಆದ್ದರಿಂದ ಆರ್ಥಿಕ ಇಲಾಖೆಗೆ ಒಂದು ಪ್ರಸ್ತಾವನೆಯನ್ನು ಕಳುಹಿಸಿಕೊಡಲಾಗಿದೆ, ಈಗ ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೆ 12 ಕೋಟಿರೂಪಾಯಿಗಳನ್ನು ಸರ್ಕಾರದಿಂದ ನೀಡಲಾಗಿದೆ. ಅದು ಕೂಡ ಪ್ರಾರಂಭ ಆಗುವುದಿಲ್ಲ. ಆದರೆ ಅಲ್ಲಿನ ನೌಕರರ ಹಿತದೃಷ್ಟಿಯಿಂದ ನೌಕರರ ಸಂಬಳ ಮತ್ತು ಬ್ಯಾಂಕುಗಳಿಂದ ಪಡೆದಿರುವ ಸಾಲ ಮತ್ತು ಬಡ್ಡಿ ನೀಡುವ

ಸಲುವಾಗಿ 12 ಕೋಟಿ ರೂಪಾಯಿಗಳ ಒಂದು ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸಿ ಅವರಿಂದ ಸಹಮತಿಯನ್ನು ಪಡೆಯಲಾಗಿದೆ. ಈ ಕಾರ್ಖಾನೆಯಲ್ಲೂ ಸಹ ನೌಕರರ ಸಂಬಳ ನೀಡಲು ವಿಳಂಬ ಆದಲ್ಲಿ ಆರ್ಥಿಕ ಇಲಾಖೆಗೆ ಈ ಬಗ್ಗೆ ಒಂದು ಪ್ರಸ್ತಾವನೆಯನ್ನು ಕಳುಹಿಸಿ ಅವರಿಂದ ಮಂಜೂರಾತಿಯನ್ನು ಪಡೆದು ಆದಷ್ಟು ಬೇಗ ಆ ಕಾರ್ಖಾನೆಯಲ್ಲಿರುವ 416 ಜನ ನೌಕರರಿಗೆ ಸಂಬಳ ನೀಡುವ ವ್ಯವಸ್ಥೆಯನ್ನು ಮಾಡಲಾಗುವುದು.

**ಸಭಾಪತಿಯವರು:–** ಇದನ್ನೆಲ್ಲ ಎಷ್ಟು ದಿವಸಗಳಲ್ಲಿ ಯಾವಾಗ ಮಾಡುತ್ತೀರಿ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

**ಶ್ರೀ ಪ್ರಕಾಶ್ ಬಿ ಹುಕ್ಕೇರಿ:–** ಮಾನ್ಯ ಸಭಾಪತಿಗಳೇ, ಹರಾಜು ಮಾಡುವುದು ತಡ ಆದಲ್ಲಿ, ಇದು ಬಹಳ ಹಳೆಯ ಕಾರ್ಖಾನೆ ಆದ್ದರಿಂದ ಹರಾಜಿನಲ್ಲಿ ಖರೀದಿಸಲು ಯಾರಾದರೂ ಮುಂದೆ ಬರುತ್ತಾರೋ ಇಲ್ಲವೋ ಎನ್ನುವುದು ನಮಗೆ ಗೊತ್ತಿಲ್ಲ. ಆದ್ದರಿಂದಲೇ ವೇತನದ ಪಾವತಿಗೆ ನಾವು ಬೇರೆ ದಾರಿಯನ್ನು ಹುಡುಕಿದ್ದೇವೆ. ಆದಷ್ಟು ಬೇಗನೆ ಆರ್ಥಿಕ ಇಲಾಖೆಯ ಸಹಮತಿಯನ್ನು ಪಡೆದುಕೊಂಡು ನೌಕರರ ವೇತನವನ್ನು ನೀಡುವ ವ್ಯವಸ್ಥೆಯನ್ನು ಮಾಡುತ್ತೇವೆ.

## ಹೇಮಾವತಿ ಆಣೆಕಟ್ಟು ನೀರು ವಿಸ್ತರಣೆಯಿಂದ ರೈತರಿಗೆ ಆಗುವ ತೊಂದರೆ ಕುರಿತು

### 912, ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ನಾಮನಿರ್ದೇಶಿತರು)

ಅ) ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಗೆ ಸೇರಿದ ಹೇಮಾವತಿ ಅಣೆಕಟ್ಟಿನ ನೀರಿನ ಪ್ರಮಾಣ ಎಷ್ಟು;

ಆ) ಈ ಪ್ರಮಾಣಕ್ಕೆ ತಕ್ಕಂತೆ ವ್ಯಾಪ್ತಿಯ ರೈತರಿಗೆ ನೀರು ಕೊಡಲಾಗಿದೆಯೇ;

ಇ) ಯಾವ ರೀತಿ ನೀರನ್ನು ಹೊಲಗದ್ದೆಗಳಿಗೆ ಹಂಚಲಾಗುತ್ತಿದೆ. ಇದಕ್ಕೆ ಮಾನದಂಡವೇನು;

ಈ) ಈಗಾಗಲೇ ನಿಗಧಿ ಮಾಡಿರುವ ಜಮೀನುಗಳಿಗೆ ಸಮರ್ಪಕವಾಗಿ ನೀರು ಪೂರೈಸಲಾಗುತ್ತಿದೆಯೇ;

ಉ) ಇತ್ತೀಚಿನ ದಿನಗಳಲ್ಲಿ ಬೇರೆ ಬೇರೆ ತಾಲ್ಲೂಕು ಜಿಲ್ಲೆಗಳಿಗೆ ನೀರು ಹರಿಸಲು ಯೋಜನೆ ಮಾಡಲಾಗಿರುವುದೇ ಅಥವಾ ಬೇಡಿಕೆ ಬಂದಿರುವುದೇ;

ಊ) ಹಾಗಿದ್ದಲ್ಲಿ, ಮೊದಲು ನಿಗಧಿಪಡಿಸಿದ ರೈತರ ಪಾಡೇನು?

**ಶ್ರೀ ಎಂ.ಬಿ.ಪಾಟೀಲ್(ಜಲ ಸಂಪನ್ಮೂಲ ಸಚಿವರು)**

ಅ) ಹೇಮಾವತಿ ಅಣೆಕಟ್ಟೆಯ ಒಟ್ಟು ನೀರಿನ ಸಂಗ್ರಹಣಾ ಸಾಮರ್ಥ್ಯ 37.103 ಟಿ.ಎಂ.ಸಿ. ಆಗಿದ್ದು, ಇದರಲ್ಲಿ ಬಳಕೆಗೆ ಲಭ್ಯವಿರುವ ನೀರಿನ ಪ್ರಮಾಣ 32.131 ಟಿ.ಎಂ.ಸಿ. ಆಗಿರುತ್ತದೆ.

ಉಪಯೋಗಿಸಬಹುದಾದ ಒಟ್ಟು ನೀರಿನ ಪ್ರಮಾಣ ಯೋಜನಾ ವರದಿಯ ಪ್ರಕಾರ 56.67 ಟಿ.ಎಂ.ಸಿ. ಆಗಿರುತ್ತದೆ.

ಆ) ಹೇಮಾವತಿ ಯೋಜನೆಯಲ್ಲಿ ಒಟ್ಟಾರೆ 2,83,592 ಹೆಕ್ಟೇರ್ ಅಚ್ಚುಕಟ್ಟನ್ನು ನೀರಾವರಿಗೆ ಒಳಪಡಿಸಲು ಉದ್ದೇಶಿಸಲಾಗಿದೆ.

ಈ ಯೋಜನೆಯನ್ನು ಅನುಷ್ಠಾನಗಗೊಳಿಸಲು ಸ್ಥಾಪಿಸಿರುವ ಗೊರೂರು ವಲಯ ಹಾಗೂ ತುಮಕೂರು ವಲಯಗಳಲ್ಲಿ ಈವರೆಗೆ ಒಟ್ಟಾರೆ 2,45,285 ಹೆಕ್ಟೇರ್ ನೀರಾವರಿ ಸಾಮರ್ಥ್ಯವನ್ನು ಕಲ್ಪಿಸಲಾಗಿದೆ.

ನೀರಾವರಿ ಸಾಮರ್ಥ್ಯ ಕಲ್ಪಿಸಿರುವ 2,45,285 ಹೆಕ್ಟೇರ್ ಪೈಕಿ ಗೊರೂರು ವಲಯದಲ್ಲಿ ಕಲ್ಪಿಸಿರುವ 1,25,837 ಹೆಕ್ಟೇರ್ ಅಚ್ಚುಕಟ್ಟನ್ನು ನೀರಾವರಿಗೆ ಘೋಷಿಸಲಾಗಿದೆ. ತುಮಕೂರು

ವಲಯದ ಅಚ್ಚುಕಟ್ಟನ್ನು ಕಾವೇರಿ ಜಲ ವಿವಾದದ ಹಿನ್ನೆಲೆಯಲ್ಲಿ ಈವರೆವಿಗೂ ನೀರಾವರಿಗೆ ಘೋಷಣೆ ಮಾಡಿರುವುದಿಲ್ಲ.

ನೀರಾವರಿ ಸಲಹಾ ಸಮಿತಿಯಲ್ಲಿ ಕೈಗೊಂಡ ತೀರ್ಮಾನದಂತೆ ಹೇಮಾವತಿ ಎಡದಂಡೆ ನಾಲೆ, ಹೇಮಾವತಿ ಬಲದಂಡೆ ನಾಲೆ ಹಾಗೂ ಹೇಮಾವತಿ ಬಲ ಮೇಲ್ದಂಡೆ ನಾಲೆಗಳ ಅಚ್ಚುಕಟ್ಟಿಗೆ (1,25,837 ಹೆಕ್ಟೇರ್) ನೀರನ್ನು ಹರಿಸಲಾಗುತ್ತಿದೆ.

ತುಮಕೂರು ವಲಯದಲ್ಲಿ ತುಮಕೂರು ಶಾಖಾ ನಾಲೆ ಮತ್ತು ನಾಗಮಂಗಲ ಶಾಖೆ ಅಚ್ಚುಕಟ್ಟಿನಲ್ಲಿ ಬರುವ ಕೆರೆ ಕಟ್ಟೆಗಳಿಗೆ ಕುಡಿಯುವ ನೀರಿಗಾಗಿ ನೀರು ಹರಿಸಲಾಗುತ್ತಿದೆ ಮತ್ತು ಭೂ ಅಭಿವೃದ್ಧಿ ಚಟುವಟಿಕೆಗೆ ನೀರನ್ನು ಒದಗಿಸಲಾಗುತ್ತಿದೆ.

ಇ) ವಿತರಣಾ ನಾಲೆಗಳ ಮುಖಾಂತರ ಕಟ್ಟು ನೀರು ಪದ್ಧತಿಯಂತೆ ಬೆಳೆ ಪದ್ಧತಿಗನುಗುಣವಾಗಿ ನೀರನ್ನು ಹರಿಸಲಾಗುತ್ತಿದೆ.

**ಈ)** ಈ ಯೋಜನೆಯಲ್ಲಿನ ಹೇಮಾವತಿ ಎಡದಂಡೆ ನಾಲೆಯ ಅಚ್ಚುಕಟ್ಟನ್ನು ಅರೆ ಖುಷ್ಕಿ ಬೆಳೆ ಬೆಳೆಯಲು ಮತ್ತು ವಿತರಣಾ ನಾಲೆ 57 ರಿಂದ 72 ರವರೆಗಿನ ಅಚ್ಚುಕಟ್ಟನ್ನು 50% ಖಾರೀಫ್ ಹಾಗೂ 50% ರಬಿ ನೀರಾವರಿಗೆ ಒಳಪಡಿಸಲು ಯೋಜಿಸಿದ್ದು, ಕೆಲವು ಭಾಗಗಳಲ್ಲಿ ಬೆಳೆ ಪದ್ಧತಿ ಉಲ್ಲಂಘನೆ ಮಾಡಿ ಭತ್ತವನ್ನು ಬೆಳೆಯುತ್ತಿರುವುದರಿಂದ ಈ ನಾಲೆಯ ಕೊನೆಯ ಹಂತದಲ್ಲಿನ ಅಚ್ಚುಕಟ್ಟಿಗೆ ಸಮರ್ಪಕವಾಗಿ ನೀರು ಪೂರೈಕೆಯಾಗದಿರುವುದು ಕಂಡುಬಂದಿರುತ್ತದೆ.

ಹೇಮಾವತಿ ಎಡದಂಡೆ ನಾಲೆಯಲ್ಲಿ ವಿನ್ಯಾಸಕ್ಕನುಗುಣವಾಗಿ ನೀರನ್ನು ಹರಿಸುವ ಸಲುವಾಗಿ ಹೇಮಾವತಿ ಎಡದಂಡೆ ನಾಲೆಯನ್ನು ಆಧುನೀಕರಣಗೊಳಿಸಲು ಉದ್ದೇಶಿಸಿದ್ದು, ಡಿ.ಪಿ.ಆರ್ ತಯಾರಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

**ಉ)** ಹೌದು. ಬೇಡಿಕೆಗಳು ಬಂದಿರುತ್ತವೆ. ಇತ್ತೀಚಿನ ದಿನಗಳಲ್ಲಿ ಕುಡಿಯುವ ನೀರು ಒದಗಿಸಲು ಬೇಡಿಕೆ ಬಂದಿರುವ ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

**ಊ)** ತುಮಕೂರು ವಲಯದ ವ್ಯಾಪ್ತಿಯಲ್ಲಿ ಪ್ರಸ್ತುತ ಬೇಡಿಕೆಗನುಗುಣವಾಗಿ ಹೇಮಾವತಿ ಯೋಜನೆಯ ನೀರಾವರಿ ಸಲಹಾ ಸಮಿತಿಯಲ್ಲಿ ಕೈಗೊಂಡ ತೀರ್ಮಾನಗಳಂತೆ ಕುಡಿಯುವ ನೀರಿಗಾಗಿ ಕುಡಿಯುವ ನೀರಿನ ಜಲಸಂಗ್ರಹಾಗಾರಗಳು ಮತ್ತು ಕೆರೆ–ಕಟ್ಟೆಗಳಿಗೆ ಹಾಗೂ ಭೂ ಅಭಿವೃದ್ಧಿ ಚಟುವಟಿಕೆಗಳಿಗೆ ನೀರನ್ನು ಒದಗಿಸಲಾಗುತ್ತಿದ್ದು, ಅಚ್ಚುಕಟ್ಟನ್ನು ಘೋಷಣೆ ಮಾಡಿದ ನಂತರ ರೈತರ ಜಮೀನುಗಳಿಗೆ ನೀರು ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

## ಅನುಬಂಧ–1

## ಹೊಸದಾಗಿ ಬಂದಿರುವ ಕುಡಿಯುವ ನೀರು ಪ್ರಸ್ತಾವನೆಗಳು

| ಕ್ರ. ಸಂ. | ಕುಡಿಯುವ ನೀರು ಯೋಜನೆ | ತಾಲ್ಲೂಕು | ನೀರಿನ ಪ್ರಮಾಣ (ಟಿ.ಎಂ.ಸಿ. ಗಳಲ್ಲಿ) | ಷರಾ |
|---|---|---|---|---|
| 1 | ತುಮಕೂರು ತಾಲ್ಲೂಕು ಹೆಬ್ಬೂರು ಮತ್ತು ಗೂಳೂರು ಹೋಬಳಿಯ 52 ಗ್ರಾಮಗಳ ಕೆರೆಗಳಿಗೆ ಕುಡಿಯುವ ನೀರು ಒದಗಿಸುವುದು. (ತುಮಕೂರು ಶಾಖಾ ನಾಲೆಯ 142.225 ಕಿ.ಮೀ. ನಿಂದ ಎತ್ತಿ ಸರಬರಾಜು ಮಾಡುವುದು). | ತುಮಕೂರು | 0.2433 | ಸರ್ಕಾರದ ಪತ್ರ ಸಂಖ್ಯೆ:ಜಸಂಇ 82 ಎನ್‌ಹೆಚ್‌ಪಿ 2001, ದಿನಾಂಕ: 21.10.2002 ಮತ್ತು ಸರ್ಕಾರದ ಸಂಖ್ಯೆ: ಜಸಂಇ 315 ಎನ್‌ಹೆಚ್‌ಪಿ 2003, ದಿನಾಂಕ: 11.02.2009 ಹಾಗೂ ಸರ್ಕಾರದ ಪತ್ರ ಸಂಖ್ಯೆ: ಜಸಂಇ 78 ಎನ್‌ಹೆಚ್‌ಪಿ 2012 ದಿ: 15.11.2012 |
| 2 | ತಿಪಟೂರು ತಾಲ್ಲೂಕು ಹೊನ್ನವಳ್ಳಿ ಹೋಬಳಿಯ ಹೊನ್ನವಳ್ಳಿ ಕೆರೆ ಹಾಗೂ ಇತರೆ ಕೆರೆಗಳಿಗೆ ಕುಡಿಯುವ ನೀರು ಒದಗಿಸುವುದು (ತುಮಕೂರು ಶಾಖಾ ನಾಲೆಯ 9.900 ಕಿ.ಮೀ. ನಿಂದ ಏತ ನೀರಾವರಿ ಮೂಲಕ) | ತಿಪಟೂರು | 0.201 | ಸರ್ಕಾರದ ಪತ್ರ ಸಂಖ್ಯೆ: ಜಸಂಇ 211 ಎನ್‌ಹೆಚ್‌ಪಿ 2001 ದಿನಾಂಕ:21.10.2002 ಮತ್ತು ಸರ್ಕಾರದ ಪತ್ರ ಸಂಖ್ಯೆ: ಜಸಂಇ 26 ಎನ್‌ಹೆಚ್‌ಪಿ 2008, ದಿನಾಂಕ: 11.02.2009 ಕಾಮಗಾರಿ ಪ್ರಗತಿಯಲ್ಲಿದೆ. |
| 3 | ತುಮಕೂರು ಶಾಖಾ ನಾಲೆ 45.15 ಹಾಗೂ 48.17 ಕಿ.ಮೀ. ನಿಂದ ನೀರನ್ನು ಎತ್ತಿ ಕುಡಿಯುವ ನೀರು ಒದಗಿಸುವುದು. | ಚಿಕ್ಕ ನಾಯಕನ | 0.8 | ಸರ್ಕಾರದ ಪತ್ರ ಸಂಖ್ಯೆ: ಜಸಂಇ 74 ಎನ್‌ಹೆಚ್‌ಪಿ 2009, |

| | | | | |
|---|---|---|---|---|
| | | ಹಳ್ಳಿ ತಾಲ್ಲೂಕಿನ ಗ್ರಾಮಗಳು | | ದಿನಾಂಕ:20.07.2011 ರಲ್ಲಿ ಸರ್ಕಾರದ ಅನುಮೋದನೆ ದೊರೆತಿರುತ್ತದೆ. |
| 4 | ತುರುವೇಕೆರೆ ತಾಲ್ಲೂಕು ದಬ್ಬೇಘಟ್ಟ ಹೋಬಳಿಯ 10 ಗ್ರಾಮಗಳಿಗೆ ಕುಡಿಯುವ ನೀರಿಗಾಗಿ ನಾಗಮಂಗಲ ಶಾಖಾ ನಾಲೆಯ ಸರ: 22.75 ಕಿ.ಮೀ. ನಿಂದ ಹಾಗೂ 27.325 ಕಿ.ಮೀ. ನಿಂದ ನೀರನ್ನು ಎತ್ತಿ ಕ್ರಮವಾಗಿ ಹಬಕನಹಳ್ಳಿ ಹಾಗೂ ಕಣತ್ತೂರು ಕೆರೆಗಳಿಗೆ ಹರಿಸುವ ಅಂದಾಜಿನ ಬಗ್ಗೆ. | ತುರುವೇಕೆರೆ | 0.01275 | ಸರ್ಕಾರದ ಪತ್ರ ಸಂಖ್ಯೆ: ಜಸಂಇ 2 ಎನ್‌ಹೆಚ್‌ಪಿ 2013 (1), ದಿನಾಂಕ:23.09.2013 |
| 5 | ತುರುವೇಕೆರೆ ತಾಲ್ಲೂಕು ದಬ್ಬೇಘಟ್ಟ ಹೋಬಳಿಯ 6 ಗ್ರಾಮಗಳಿಗೆ ಕುಡಿಯುವ ನೀರಿಗಾಗಿ ನಾಗಮಂಗಲ ಶಾಖಾ ನಾಲೆಯ ಸರಪಳಿ 42.856 ಕಿ.ಮೀ. ನಿಂದ ನೀರನ್ನು ಎತ್ತಿ ದಬ್ಬೇಘಟ್ಟ ಹಾಗೂ ಗೊಟ್ಟಿಕೆರೆ ಕೆರೆಗಳಿಗೆ ಹರಿಸುವ ಅಂದಾಜಿನ ಬಗ್ಗೆ. | ತುರುವೇಕೆರೆ | 0.0164 | ಸರ್ಕಾರದ ಪತ್ರ ಸಂಖ್ಯೆ: ಜಸಂಇ 2 ಎನ್‌ಹೆಚ್‌ಪಿ 2013 (1), ದಿನಾಂಕ:23.09.2013 |
| 6 | ಗುಬ್ಬಿ ತಾಲ್ಲೂಕು ದೊಡ್ಡಗುಣಿ ಗ್ರಾಮದ ಕೆರೆಗೆ ನೀರು ಹರಿಸುವುದು(ತುಮಕೂರು ಶಾಖಾ ನಾಲೆಯ 65.00 ಕಿ.ಮೀ. ನಿಂದ ದೊಡ್ಡಗುಣಿ ಕೆರೆಗೆ) | ಗುಬ್ಬಿ | 0.0182 | ಸರ್ಕಾರದ ಪತ್ರ ಸಂಖ್ಯೆ: ನೀಇ 338 ಎನ್‌ಹೆಚ್‌ಪಿ 1998, ದಿನಾಂಕ:26.08.2000 |
| 7 | ಬೆಳ್ಳಾವಿ ಸುತ್ತಮುತ್ತಲ ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವುದು(ತುಮಕೂರು ಶಾಖಾ ನಾಲೆಯ 117.030 ಕಿ.ಮೀ. ನಿಂದ ಅಸ್ಲಿಪುರ ಕೆರೆಗೆ ಹರಿಸಿ) | ತುಮಕೂರು | 0.01056 | ಸರ್ಕಾರದ ಪತ್ರ ಸಂಖ್ಯೆ: ಜಸಂಇ 35 ಎನ್‌ಹೆಚ್‌ಪಿ 2002 ದಿನಾಂಕ:09.06.2003 ಹಾಗೂ ಪತ್ರ ಸಂಖ್ಯೆ: ಜಸಂಇ 07 ಎನ್‌ಹೆಚ್‌ಪಿ 2009 ದಿ:29.07.2009 ಕಾಮಗಾರಿಯನ್ನು ಪಂಚಾಯತ್ |

| | | | | |
|---|---|---|---|---|
| | | | | ರಾಜ್ ಇಂಜಿನಿಯರಿಂಗ್ ಇಲಾಖೆ ಯಿಂದ ಕೈಗೊಳ್ಳಬೇಕಾಗಿದೆ. |
| 8 | ತುಮಕೂರು ಜಿಲ್ಲೆ ಪಾವಗಡ ಪಟ್ಟಣಕ್ಕೆ ಹಾಗೂ ಮಾರ್ಗ ಮಧ್ಯದ ಹಳ್ಳಗಳಿಗೆ ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರ: 126.37 ಕಿ.ಮೀ.ನಲ್ಲಿ ನೀರನ್ನು ಪಡೆಯುವುದು. | ತುಮಕೂರು | 0.55 | ಸರ್ಕಾರದ ಪತ್ರ ಸಂಖ್ಯೆ; ಜಸಂಇ 25 ಎನ್‌ಹೆಚ್‌ಪಿ 2012, ದಿನಾಂಕ: 28.03.2012 ರಲ್ಲಿ 55 ಕ್ಯೂಸೆಕ್ಸ್ ನೀರನ್ನು ಪಡೆಯಲು ಸರ್ಕಾರದ ಅನುಮೋದನೆ ದೊರೆತಿರುತ್ತದೆ. |
| 9 | ಗುಬ್ಬಿ ತಾಲ್ಲೂಕು ಬೆಳ್ಳಾವಿ ಹಾಗೂ ಇತರೆ ಐದು ಕೆರೆಗಳಿಗೆ ನೀರು ಹರಿಸಿ ಸುತ್ತಮುತ್ತಲ ಆರು ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವುದು. | ಗುಬ್ಬಿ | 0.075 | ಸರ್ಕಾರದ ಪತ್ರ ಸಂಖ್ಯೆ:ಜಸಂಇ 79 ಎನ್‌ಹೆಚ್‌ಪಿ 2010, ದಿ:19.03.2012 ರಲ್ಲಿ ಅನುಮೋದನೆ ನೀಡಿದೆ. |
| 10 | ಮದಲೂರು ಕೆರೆಗೆ ನೀರು ಹರಿಸಿ ಸುತ್ತಮುತ್ತಲ ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವುದು (ತುಮಕೂರು ಶಾಖಾ ನಾಲೆ ಸರ: 140.50 ಕಿ.ಮೀ.) | ಶಿರಾ | 1.08 | ಪರಿಶೀಲನೆಯಲ್ಲಿದೆ. |
| 11 | ಮಾಗಡಿ ತಾಲ್ಲೂಕಿನ ಕೆರೆ ಕಟ್ಟೆಗಳಿಗೆ ನೀರು ಹರಿಸುವುದು (ತುಮಕೂರು ಶಾಖಾ ನಾಲೆ ಕಿ.ಮೀ. 190 ರಲ್ಲಿ) | ಮಾಗಡಿ | 0.9 | ಅಂದಾಜು ತಯಾರಿಕೆಯಲ್ಲಿದೆ. |
| 12 | ಗುಬ್ಬಿ ತಾಲ್ಲೂಕಿನ ಹೊಸಕೆರೆ, ಆಳಿಲುಘಟ್ಟ ಹಾಗೂ ಅಮ್ಮನಕೆರೆ ಕೆರೆಗಳಿಗೆ ನೀರು ಹರಿಸಿ 16 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವುದು (ತುಮಕೂರು ಶಾಖಾ ನಾಲೆ ಸರ: 88.35 ಕಿ.ಮೀ.). | ಗುಬ್ಬಿ | 0.0327 | ಅಂದಾಜು ತಯಾರಿಕೆಯಲ್ಲಿದೆ. |
| 13 | ಗುಬ್ಬಿ ತಾಲ್ಲೂಕಿನ ಚೇಳೂರು ಕೆರೆಗೆ ನೀರು ಹರಿಸಿ 21 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವುದು (ತುಮಕೂರು ಶಾಖಾ ನಾಲೆ ಸರ: 101.38 ಕಿ.ಮೀ.) | ಗುಬ್ಬಿ | 0.02974 | ಅಂದಾಜು ತಯಾರಿಕೆಯಲ್ಲಿದೆ. |

| | | | | |
|---|---|---|---|---|
| 14 | ಗುಬ್ಬಿ ತಾಲ್ಲೂಕಿನ ಹಾಗಲವಾಡಿ ಕೆರೆಗೆ ನೀರು ಹರಿಸಿ 36 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವುದು (ತುಮಕೂರು ಶಾಖಾ ನಾಲೆ ಸರ: 83.34 ಕಿ.ಮೀ.) | ಗುಬ್ಬಿ | 0.03585 | ಅಂದಾಜು ತಯಾರಿಕೆಯಲ್ಲಿದೆ. |
| 15 | ಗುಬ್ಬಿ ತಾಲ್ಲೂಕಿನ ಕೊಡಿಯಾಳ ಕೆರೆಗೆ ನೀರು ಹರಿಸಿ 2 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವುದು (ತುಮಕೂರು ಶಾಖಾ ನಾಲೆ ಸರ: 98.85 ಕಿ.ಮೀ.) | ಗುಬ್ಬಿ | 0.01229 | ಅಂದಾಜು ತಯಾರಿಕೆಯಲ್ಲಿದೆ. |
| 16 | ಗುಬ್ಬಿ ತಾಲ್ಲೂಕಿನ ಮತ್ತಿಕೆರೆ, ಹೊಸಹಳ್ಳಿ ಶಿವನಹಳ್ಳಿ ಕೆರೆಗಳಿಗೆ ನೀರು ಹರಿಸಿ 6 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವುದು (ತುಮಕೂರು ಶಾಖಾ ನಾಲೆ ಸರ: 93.85 ಕಿ.ಮೀ.) | ಗುಬ್ಬಿ | 0.01029 | ಅಂದಾಜು ತಯಾರಿಕೆಯಲ್ಲಿದೆ. |
| 17 | ಗುಬ್ಬಿ ತಾಲ್ಲೂಕಿನ ಮಠದಹಳ್ಳಿ ಕೆರೆಗೆ ನೀರು ಹರಿಸಿ 39 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವುದು (ತುಮಕೂರು ಶಾಖಾ ನಾಲೆ ಸರ: 101.80 ಕಿ.ಮೀ.) | ಗುಬ್ಬಿ | 0.06507 | ಅಂದಾಜು ತಯಾರಿಕೆಯಲ್ಲಿದೆ. |
| 18 | ಗುಬ್ಬಿ ತಾಲ್ಲೂಕಿನ 19 ಕೆರೆಗಳಿಗೆ ನೀರು ಹರಿಸಿ ಬಿಕ್ಕೇಗುಡ್ಡ ಹಾಗೂ ಇತರ ಹೋಬಳಿಗಳ 30 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವುದು (ತುಮಕೂರು ಶಾಖಾ ನಾಲೆ ಸರ: 69.55 ಕಿ.ಮೀ.) | ಗುಬ್ಬಿ | 0.0783 | ಅಂದಾಜು ತಯಾರಿಕೆಯಲ್ಲಿದೆ. |
| 19 | ಗುಬ್ಬಿ ತಾಲ್ಲೂಕಿನ ಶಿವಸಂದ್ರ, ಕೊಡ್ಲಿ, ಮುಸುಕೊಡ್ಲಿ, ಅರೆನಹಳ್ಳಿ, ಎಮ್ಮೆದೊಡ್ಡನಹಳ್ಳಿ ಹಾಗೂ ಸೋಪನಹಳ್ಳಿ ಕೆರೆಗಳಿಗೆ ನೀರು ಹರಿಸಿ 12 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವುದು (ತುಮಕೂರು ಶಾಖಾ ನಾಲೆ ಸರ: 77.565 ಕಿ.ಮೀ.) | ಗುಬ್ಬಿ | 0.02313 | ಅಂದಾಜು ತಯಾರಿಕೆಯಲ್ಲಿದೆ. |

| | | | | |
|---|---|---|---|---|
| 20 | ತುಮಕೂರು ಶಾಖಾ ನಾಲೆಯಿಂದ ಮಧುಗಿರಿ ಮತ್ತು ಕೊರಟಗೆರೆ ತಾಲ್ಲೂಕಿನ ಸುಮಾರು 120 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವುದು. | ಮಧುಗಿರಿ, ಕೊರಟಗೆರೆ | | ಪರಿಶೀಲನೆಯಲ್ಲಿದೆ. |
| 21 | ಕುಡಿಯುವ ನೀರಿಗಾಗಿ ಬಾಗೂರು–ನವಿಲೆ ಸುರಂಗದ ಆಗಮನ ಕಾಲುವೆಯಿಂದ ನೀರನ್ನು ಎತ್ತಿ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ನುಗ್ಗೇಹಳ್ಳಿ ಹೋಬಳಿಯ ಹನ್ನೊಂದು ಕೆರೆಗಳನ್ನು ತುಂಬಿಸುವ ಯೋಜನೆ | ಚನ್ನರಾಯ ಪಟ್ಟಣ | 0.171 | ಸರ್ಕಾರದ ಪತ್ರ ಸಂಖ್ಯೆ: ಜಸಂಇ 54 ಎನ್‌ಹೆಚ್‌ಪಿ 2011, ದಿನಾಂಕ:19.03.2012 ರಲ್ಲಿ ಅನುಮೋದನೆ ನೀಡಿದೆ. |
| 22 | ಚನ್ನರಾಯಪಟ್ಟಣ ತಾಲ್ಲೂಕಿನ ಹಿರೇಸಾವೆ–ಶ್ರವಣಬೆಳಗೊಳ ಹೋಬಳಿ ಮತ್ತು ಕೆ.ಆರ್.ಪೇಟೆ ತಾಲ್ಲೂಕಿನ ಸಂತೆಬಾಚನಹಳ್ಳಿ ಹೋಬಳಿ ಕೆರೆಗಳನ್ನು ಏತ ನೀರಾವರಿ ಯೋಜನೆ ಮೂಲಕ ಕುಡಿಯುವ ನೀರಿಗಾಗಿ ತುಂಬಿಸುವ ಯೋಜನೆ ಬಗ್ಗೆ. | ಚನ್ನರಾಯ ಪಟ್ಟಣ, ಕೆ.ಆರ್. ಪೇಟೆ | 0.161 | ಅಂದಾಜು ತಯಾರಿಕೆಯಲ್ಲಿದೆ. |

**ಶ್ರೀ ಎಂ.ಡಿ.ಲಕ್ಷ್ಮಿನಾರಾಯಣ:-** ಮಾನ್ಯ ಸಭಾಪತಿಗಳೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ. ಹೇಮಾವತಿ ನದಿ ಮತ್ತು ಗೊರೂರು ವಲಯ ಮತ್ತು ತುಮಕೂರು ವಲಯಗಳಿಗೆ ಈಗಾಗಲೇ 2,83,592 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಕಳೆದ 10 ವರ್ಷಗಳಿಂದ ಹರಿಸುತ್ತಿದ್ದೇವೆ ಎನ್ನುವ ಮಾತನ್ನು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಈ ಪ್ರದೇಶದಲ್ಲಿ ಇದರ ಶೇಕಡ 50ರಷ್ಟು ನೀರು ಸಹ ಹರಿಯುತ್ತಿಲ್ಲ. ಮೇಲ್ಭಾಗದ ಎಡದಂಡೆ ಮತ್ತು ಬಲದಂಡೆಗಳಿಗೆ ನೀರನ್ನು ಹರಿಸುವುದು ಬಹಳ ಸಮಸ್ಯೆ ಆಗಿರುವ ಸಂದರ್ಭದಲ್ಲಿ ಇನ್ನೂ ಲೈನಿಂಗ್ ಕಾಮಗಾರಿಗಳು ಬಹಳಷ್ಟು ಉಳಿದುಕೊಂಡಿವೆ. ಇದರಿಂದ ಆ ಭಾಗದ ಹೊಲಗದ್ದೆಗಳಿಗೆ ನೀರನ್ನು ಹರಿಸಲು ಸಾಧ್ಯವಾಗದೇ ಇರುವಂತಹ ಸಂದರ್ಭದಲ್ಲಿ ಇನ್ನೂ ಮುಂದುವರೆದು ಬೇರೆ ಬೇರೆ ಜಿಲ್ಲೆಗಳಿಗೆ ಬೇರೆ ಬೇರೆ ತಾಲ್ಲೂಕುಗಳಿಗೆ ನೀರನ್ನು ಕೊಡುವ ಯೋಜನೆ ಕೈಗೊಳ್ಳುವುದು ಸರ್ಕಾರದ ಗಮನಕ್ಕೆ ಬಂದಿದೆ ಎನ್ನುವ ಮಾತನ್ನು ಸಚಿವರು ಹೇಳಿದ್ದಾರೆ. ಒಂದು ಯೋಜನೆಯ ಮೂಲಕ 3 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರನ್ನು ಹರಿಸುವ ಚಿಂತನೆ ಏನು ಸರ್ಕಾರಕ್ಕೆ ಇದೆ ಅದು ಸಮರ್ಪಕವಾಗಿ ಆಗಬೇಕೆನ್ನುವ ಚಿಂತನೆ ನಮ್ಮದು. ಇದಾದ ಮೇಲೆ ಮುಂದಿನ ಯೋಜನೆಗಳ ಪ್ರಸ್ತಾವನೆಯನ್ನು ಸಚಿವರು ಮಾಡುವುದರ ಮೂಲಕ ಉಳಿದಿರತಕ್ಕ ಕಾಮಗಾರಿಗಳಿಗೆ ಗಮನ ಹರಿಸಬೇಕು. ಈ ಯೋಜನೆಗೆ ಸಾಕಷ್ಟು ಹಣ ಬಿಡುಗಡೆ ಆಗುತ್ತಿಲ್ಲ, ಇದರಿಂದ ಲೈನಿಂಗ್, ಸಿಮೆಂಟ್ ಕಾಂಕ್ರೀಟ್ ಕಾಮಗಾರಿಗಳು ಮುಗಿದ ನಂತರ ಮುಂದಿನವುಗಳ ಬಗ್ಗೆ ಸರ್ಕಾರ ಚಿಂತನೆಯನ್ನು ಮಾಡಬೇಕು. ಇದಕ್ಕೆ ಮಾನ್ಯ ಸಚಿವರು ಉತ್ತರ ನೀಡಬೇಕೆಂದು ಕೋರುತ್ತೇನೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಗಳೇ, ಈಗಾಗಲೇ ಹೇಮಾವತಿ ಅಣೆಕಟ್ಟು ನೀರಿನ ಸಂಗ್ರಹ ಸಾಮರ್ಥ್ಯ 37.103 ಟಿಎಂಸಿ ಆಗಿದೆ. ಲಭ್ಯವಿರುವ ಪ್ರಮಾಣ 32.13 ಟಿಎಂಸಿ ಆಗಿರುತ್ತದೆ. ಯೋಜನಾ ವರದಿಯ ಪ್ರಕಾರ ಉಪಯೋಗಿಸಬಹುದಾದ ಒಟ್ಟು ನೀರಿನ ಪ್ರಮಾಣ 56.67 ಟಿಎಂಸಿ ಆಗಿರುತ್ತದೆ. ನ್ಯಾಯಾಧೀಕರಣದ ತೀರ್ಪಿನ ಪ್ರಕಾರ 43.67

ಟಿಎಂಸಿ ನೀರು ಹೇಮಾವತಿಗೆ allocate ಆಗಿದೆ. ಈಗ ತುಮಕೂರು ಜಿಲ್ಲೆಯಲ್ಲಿ 1.25 ಲಕ್ಷ ಎಕರೆ ಪ್ರದೇಶಕ್ಕೆ ನಾವು notify ಮಾಡುತ್ತಿದ್ದೇವೆ. Shortly ಅದನ್ನು clear ಮಾಡುತ್ತಿದ್ದೇವೆ. ಅಚ್ಚುಕಟ್ಟಿನ notify ಮಾಡುತ್ತಿದ್ದೇವೆ. ಮುಖ್ಯವಾಗಿ ಲೈನಿಂಗ್ ಮತ್ತಿತರ ಕಾಮಗಾರಿಗಳ ಬಗ್ಗೆ ಇಲಾಖೆಯವರಿಗೆ ನಾನು ನಿರ್ದೇಶನ ನೀಡುತ್ತೇನೆ. ಅದಲ್ಲದೇ ಹೇಮಾವತಿ ಎಡದಂಡೆ ನಾಲೆಯ ಆಧುನೀಕರಣ ಮಾಡಲು ವಿನ್ಯಾಸಿಸುವ ಸಲುವಾಗಿ ಇವತ್ತು DPR (Detailed Project Report) advance stage ನಲ್ಲಿದೆ. ಇದರ ಬಗ್ಗೆ ಶೀಘ್ರವಾಗಿ ಟೆಂಡರ್ ಕರೆದು ಕಾಮಗಾರಿಗಳನ್ನು ಆದಷ್ಟು ಬೇಗ ಮುಗಿಸಲಾಗುವುದು. Modernization ಆದ ಮೇಲೆ tail-enders ಗೆ ನೀರು ಹೋಗುತ್ತದೆ. ಲೈನಿಂಗ್ ಮತ್ತಿತರ ಕಾಮಗಾರಿಗಳನ್ನು ಕೂಡ ಕೈಗೆತ್ತಿಕೊಳ್ಳಲಾಗುವುದು.

**ಶ್ರೀ ಎಂ.ಡಿ.ಲಕ್ಷ್ಮಿನಾರಾಯಣ:-** ಮಾನ್ಯ ಸಭಾಪತಿಗಳೇ, ಹೇಮಾವತಿ ಎಡದಂಡೆ ನಾಲೆ ವಿನ್ಯಾಸಕ್ಕೆ ಅನುಗುಣವಾಗಿ ನೀರನ್ನು ಹರಿಸಲು ಇದನ್ನು ಆಧುನೀಕರಣಗೊಳಿಸಲು DPR ತಯಾರು ಮಾಡಲು ನಿರ್ದೇಶನ ನೀಡುವುದಾಗಿ ಸಚಿವರು ಹೇಳಿದರು. ಆದರೆ ಬಹಳ ವರ್ಷಗಳಿಂದಲೂ ಈ ಕೆಲಸ ಬಹಳ ತಡ ಆಗುತ್ತಿದೆ. ಇದನ್ನು ತುರ್ತಾಗಿ ಮಾಡಬೇಕಾದ ಅಗತ್ಯವಿದೆ. ಏಕೆಂದರೆ ಸರ್ಕಾರ ರೈತರಿಗೆ ಕಟಿಬದ್ಧವಾಗಿ ಏನೆಲ್ಲಾ ಮೂಲಭೂತ ಸೌಕರ್ಯಗಳನ್ನು ನೀಡುವುದಾಗಿ ಉಲ್ಲೇಖವನ್ನು ಮಾಡಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದ್ದರಿಂದ DPR ಮಾಡುವುದರಲ್ಲಿ ಸರ್ಕಾರ ತಡ ಮಾಡುವುದು ಬೇಡ. ಅದನ್ನು ಶೀಘ್ರವಾಗಿ ತಯಾರು ಮಾಡಿ ರೈತರಿಗೆ ಅನುಕೂಲವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಆ ಭಾಗದಲ್ಲಿರುವ ತುರುವೇಕೆರೆ, ಗುಬ್ಬಿ, ಚಿಕ್ಕನಾಯಕನಹಳ್ಳಿ, ತುಮಕೂರು, ಭಾಗಗಳಲ್ಲಿ ಮೇಲ್ಭಾಗಕ್ಕೆ ನೀರನ್ನು ಹರಿಸುವುದು ಸ್ವಲ್ಪ ಕಠಿಣ. ಇಂತಹ ಸಂದರ್ಭದಲ್ಲಿ ಈ ಕಾಮಗಾರಿಗಾಗಿ ಹೆಚ್ಚಿನ ಅನುದಾನವನ್ನು ನೀಡಿ, ಈ ಕೆಲಸವನ್ನು ಆದಷ್ಟು ಬೇಗ ಪೂರೈಸಬೇಕೆನ್ನುವುದು ನನ್ನ ಆಗ್ರಹ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಗಳೇ, ಈಗಾಗಲೇ DPR ತಯಾರು ಮಾಡುವುದು ಬಹಳ advance stage ನಲ್ಲಿ ತಯಾರಿ ನಡೆಯುತ್ತಿದೆ. ಶೀಘ್ರದಲ್ಲಿ ಡಿಪಿಆರ್ ತಯಾರು ಮಾಡಿ, ಟೆಂಡರ್ ಪ್ರಕ್ರಿಯೆಯನ್ನು ಮುಗಿಸಿ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

**ಶ್ರೀ ಪಟೇಲ್ ಶಿವರಾಂ:-** ಮಾನ್ಯ ಸಭಾಪತಿಗಳೇ, ಮಾನ್ಯ ಸಚಿವರು ಈ ಕಾಮಗಾರಿಗಳನ್ನು ಆದಷ್ಟು ಬೇಗನೆ ಪ್ರಾರಂಭ ಮಡುವುದಾಗಿ ಹೇಳಿದರು. ಈಗ ಜನವರಿ ಫೆಬ್ರವರಿಯಲ್ಲಿ ಬೇಸಿಗೆ ಆರಂಭ ಆಗುತ್ತದೆ. ಅಷ್ಟರಲ್ಲಿ ಈ ಕಾಮಗಾರಿಗಳನ್ನು ಸಂಪೂರ್ಣ ಮಾಡದಿದ್ದರೆ ಅಥವಾ ಈ ಕಾಮಗಾರಿಯನ್ನು ಅರ್ಧಂಬರ್ಧ ಮಾಡಿಬಿಟ್ಟರೆ ಬಹಳ ಸಮಸ್ಯೆಗಳು ಉದ್ಭವವಾಗುತ್ತದೆ. ಅದು ಬೇಸಿಗೆಯಲ್ಲಿ ಬಹಳ ತೊಂದರೆ ಆಗುತ್ತದೆ. ಮಾನ್ಯ ಸದಸ್ಯರಾದ ಲಕ್ಷ್ಮಿ ನಾರಾಯಣರವರು ಕೇಳಿರತಕ್ಕ ಪ್ರಶ್ನೆಗೆ ನೀವು ಉತ್ತರವನ್ನು ಹೇಳಿದ್ದೀರಿ. ಈ ಕಾಮಗಾರಿಗಳನ್ನು ಏಪ್ರಿಲ್, ಮೇ ತಿಂಗಳೊಳಗೆ ಮಾಡದಿದ್ದರೆ ಯಾವುದೇ ಪ್ರಯೋಜನ ಆಗುವುದಿಲ್ಲ. ಆದ್ದರಿಂದ ಅಗತ್ಯವಿರುವ ಕಾಮಗಾರಿಗಳನ್ನು ತುರ್ತಾಗಿ ಮಾಡಬೇಕು.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಗಳೇ, ಆದಷ್ಟು ಬೇಗ ಈ ಕೆಲಸ ಕಾರ್ಯಗಳನ್ನು ಮಾಡಲಾಗುವುದು.

**ಬಾಣೋಜಿಪಂಥ್ ಯೋಜನೆಯ ಪಂಪ್‌ಸೆಟ್ಟುಗಳ ದುರಸ್ತಿ ಕುರಿತು**

**591, ಶ್ರೀ ಬಿ.ರಾಮಕೃಷ್ಣ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು ಬಾಣೋಜಿಪಂಥ್ ಯೋಜನೆಯ ಪಂಪ್‌ಸೆಟ್‌ಗಳು ಆಗಾಗ ದುರಸ್ತಿಗೆ ಬಂದಿವೆಯೇ;

ಆ) ಹಾಗಿದ್ದಲ್ಲಿ ದುರಸ್ತಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಹಾಗಿದ್ದಲ್ಲಿ ಈ ವ್ಯಾಪ್ತಿಗೆ ಒಳಪಡುವ ಕೆರೆಗಳ ಸಂಖ್ಯೆ ಎಷ್ಟು;

ಇ) ಬಾಣೋಜಿಪಂಥ್ ಯೋಜನೆಯಿಂದ ತಾಲ್ಲೂಕಿನ ಎಷ್ಟು ಕೆರೆಗಳಿಗೆ ನೀರು ತುಂಬಿಸಲಾಗಿದೆ;

**ಈ)** ಉಳಿದ ಕೆರೆಗಳನ್ನು ನೀರು ತುಂಬಿಸಲು ಕೈಗೊಂಡ ಕ್ರಮಗಳೇನು?

**ಶ್ರೀ ಎಂ.ಬಿ.ಪಾಟೀಲ್(ಜಲ ಸಂಪನ್ಮೂಲ ಸಚಿವರು)**

**ಅ)** ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಬಾಣೋಜಿಪಂಥ್ ಏತ ನೀರಾವರಿ ಯೋಜನೆಯಲ್ಲಿ ಮೊದಲನೇ ಹಂತದಲ್ಲಿ 200 ಹೆಚ್‌ಪಿ ಸಾಮರ್ಥ್ಯದ 2+1 ಪಂಪುಗಳು ಹಾಗೂ ಎರಡನೇ ಹಂತದಲ್ಲಿ 45 ಹೆಚ್‌ಪಿ ಸಾಮರ್ಥ್ಯದ 2+1 ಪಂಪ್‌ಗಳಿದ್ದು, ಯಂತ್ರೋಪಕರಣಗಳು ವಿದ್ಯುಚ್ಛಕ್ತಿಯ ಸರಬರಾಜಿನ ವ್ಯತ್ಯಯದಿಂದ ಪದೇ ಪದೇ ದುರಸ್ತಿಗೆ ಬಂದಿರುತ್ತವೆ.

ಪ್ರಸ್ತುತ ಮೊದಲನೇ ಹಂತದ 1 ಪಂಪ್ ಹಾಗೂ ಎರಡನೇ ಹಂತದ 2 ಪಂಪ್‌ಗಳು ದುರಸ್ತಿಗೆ ಬಂದಿರುತ್ತದೆ.

**ಆ)** ಹಾಲಿ ದುರಸ್ತಿಗೆ ಬಂದಿರುವ 1ನೇ ಹಂತದ ಒಂದು ಪಂಪ್ ಹಾಗೂ ಎರಡನೇ ಹಂತದ 2 ಪಂಪ್‌ಗಳನ್ನು ದುರಸ್ತಿಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಬಾಣೋಜಿಪಂಥ ಏತ ನೀರಾವರಿ ಯೋಜನೆಯಲ್ಲಿ ಒಟ್ಟು 4 ಕೆರೆಗಳು (ಕೆ.ಹೊನ್ನಲಗೆರೆ ಚಿಕ್ಕಕೆರೆ, ಕೆ.ಹೊನ್ನಲಗೆರೆ ದೊಡ್ಡಕೆರೆ, ಭೀಮನಕೆರೆ ಮತ್ತು ಬಾಣೋಜಿಪಂಥ್ ಕೆರೆ) ಬರುತ್ತದೆ.

ಇ) ಬಾಣೋಜಿಪಂಥ ಏತ ನೀರಾವರಿ ಯೋಜನೆಯಲ್ಲಿ ಬರುವ ಒಟ್ಟು 4 ಕೆರೆಗಳಲ್ಲಿ, 1 ಕೆರೆಗೆ (ಕೆ. ಹೊನ್ನಲಗೆರೆಯ ಚಿಕ್ಕಕೆರೆ) ಪೂರ್ಣ ಪ್ರಮಾಣದಲ್ಲಿ ನೀರನ್ನು ತುಂಬಿಸಲಾಗಿರುತ್ತದೆ.

ಕೆ.ಹೊನ್ನಲಗೆರೆ ದೊಡ್ಡಕೆರೆ ಮತ್ತು ಬಾಣೋಜಿಪಂಥ ಕೆರೆಗಳು ಭಾಗಶಃ ತುಂಬಿರುತ್ತದೆ.

**ಈ)** ಮೊದಲನೇ ಹಂತದಲ್ಲಿ ಬರುವ ಕೆ.ಹೊನ್ನಲಗೆರೆ ದೊಡ್ಡಕೆರೆಗೆ ನೀರನ್ನು ಹರಿಸಲಾಗುತ್ತಿದ್ದು, ಈ ಕೆರೆ ತುಂಬಿದ ನಂತರ ಭೀಮನಕೆರೆಗೆ ನೀರನ್ನು ಹರಿಸಲಾಗುವುದು.

ಎರಡನೇ ಹಂತದ ಎರಡು ಪಂಪುಗಳನ್ನು ಶೀಘ್ರದಲ್ಲೇ ದುರಸ್ತಿಪಡಿಸಿ ಬಾಣೋಜಿಪಂಥ್ ಕೆರೆಗೆ, ಪೂರ್ಣ ಪ್ರಮಾಣದ ನೀರನ್ನು ತುಂಬಿಸಲು ಕ್ರಮ ಕೈಗೊಳ್ಳಲಾಗುವುದು.

ಒಟ್ಟಾರೆಯಾಗಿ, ಈ ಏತ ನೀರಾವರಿ ಯೋಜನೆಯಡಿಯಲ್ಲಿ ಬರುವ ಕೆರೆಗಳನ್ನು ಡಿಸೆಂಬರ್ 2013ರ ಮಾಹೆಯ ಅಂತ್ಯದೊಳಗೆ ತುಂಬಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

**ಶ್ರೀ ಬಿ.ರಾಮಕೃಷ್ಣ:-** ಮಾನ್ಯ ಸಭಾಪತಿಗಳೆ, ಈ ಪ್ರಶ್ನೆಯನ್ನು ಸದನದಲ್ಲಿ ಸುಮಾರು 5-6 ಸಾರಿ ತರಲಾಗಿದೆ. 4-6 ಕೆರೆಗಳನ್ನು ತುಂಬಿಸಲು ಸರ್ಕಾರಕ್ಕೆ ಎಷ್ಟು ಸಮಯಬೇಕಾಗುತ್ತದೆ? ಎರಡನೆಯ ಪ್ರಶ್ನೆ ಎಂದರೆ, ಹಳೆಯ ಪಂಪ್‌ಗಳನ್ನೇ ರಿಪೇರಿ ಮಾಡಿ-ಮಾಡಿ ಕೆಟ್ಟು ಹೋಗಿವೆ, ಹೊಸ ವೈಜ್ಞಾನಿಕ ಪಂಪ್‌ಗಳನ್ನು ಹಾಕಿ ನೀರು ಒದಗಿಸಲು ಏನು ಸಮಸ್ಯೆ ಇವರಿಗೆ? ಕೇವಲ ನಾಲ್ಕು ಕೆರೆಗಳನ್ನು ತುಂಬಿಸಲು ಆಗುವುದಿಲ್ಲ ಎಂದರೆ ಹೇಗೆ?

**ಸಭಾಪತಿಯವರು:-** ಮಾನ್ಯ ಸದಸ್ಯರ ಪ್ರಶ್ನೆಯನ್ನು ಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕು. ಪ್ರಾರಂಭದಲ್ಲಿ ಅವರು ಈ ಪ್ರಶ್ನೆಯನ್ನು ಸದನದಲ್ಲಿ 4-5 ಸಾರಿ ನಾನೇ ತಂದಿದ್ದೇನೆ ಎಂದು ಅವರು ಹೇಳಿದರು. ಅದು ನಿಜ, ಆದರೆ ಅವರ ಪ್ರಶ್ನೆ ತುಂಬಾ ಸಿಂಪಲ್ ಆಗಿದೆ. ಆ ಕೆರೆಗಳಿಗೆ ನೀರು ಕೊಡಬೇಕು. ನೀರು ಕೊಡಲು ಏಕೆ ಆಗುತ್ತಿಲ್ಲ ಎನ್ನುವುದಕ್ಕೆ ತಾಂತ್ರಿಕ ಕಾರಣವನ್ನು ಕೇಳಿ-ಕೇಳಿ ಅವರಿಗೆ ಬೇಜಾರಾಗಿ ಹೋಗಿದೆ. ಯಾವಾಗ ಕೆರೆ ತುಂಬಿಸುತ್ತೀರಾ ಎಂದು ಅವರು ಕೇಳಿದ್ದಾರೆ ಅದಕ್ಕೆ ಉತ್ತರ ಹೇಳಿ. ಅಥವಾ ಏನು ವ್ಯವಸ್ಥೆ ಮಾಡಿದ್ದೀರಾ ಎನ್ನುವುದನ್ನು ಹೇಳಿ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಗಳೆ, ಮೊದಲನೆಯ ಹಂತದಲ್ಲಿ ಪಂಪಿಂಗ್‌ಗೆ ಏನು ತೊಂದರೆ ಇಲ್ಲ. ಎರಡನೆಯ ಹಂತದಲ್ಲಿ ಮಾನ್ಯ ಸದಸ್ಯರು ಹೇಳಿದ ಹಾಗೆ ಪಂಪ್ ಹಾಳಾಗಿತ್ತು ನಿನ್ನೆಯೇ ಆ ಪಂಪ್‌ನ್ನು ರೆಡಿ ಮಾಡಲಾಗಿದೆ. ಅಲ್ಲಿ ಕಾರ್ಯ ನಡೆಯುತ್ತಿದೆ. ಡಿಸೆಂಬರ್ ಒಳಗಾಗಿ ಬಾಣೋಜಿಪಂಥ್ ಮತ್ತು ಮೊದಲನೆಯ ಹಂತದಲ್ಲಿ ಹೆಚ್ಚುವರಿ ಟ್ಯಾಂಕ್ ಏನಿದೆ ಅದನ್ನು gravity ಮುಖಾಂತರ ರೈತರೇ ಮಾಡಿಕೊಂಡಿದ್ದಾರೆ ಎನ್ನುವುದನ್ನು ನಾನು ಕೇಳಿದ್ದೇನೆ. ಅದನ್ನು ಕೂಡಾ ತುಂಬಿಸಲಾಗುತ್ತದೆ. ಈಗ ಎರಡು ಹಂತದ ಪಂಪ್‌ಗಳು ಕಾರ್ಯನಿರ್ವಹಿಸುತ್ತಿವೆ. ಡಿಸೆಂಬರ್ ಒಳಗಾಗಿ ನಾಲ್ಕು ಕೆರೆಗಳಿಗೆ ನೀರು ಕೊಡಲಾಗುತ್ತದೆ.

**ಸಭಾಪತಿಯವರು:-** ಜನವರಿಯಲ್ಲಿ ಸದನ ನಡೆಯುತ್ತದೆ, ಆಗ ಕೆರೆಗಳು ತುಂಬಿರದಿದ್ದರೆ ಮಾನ್ಯ ರಾಮಕೃಷ್ಣರವರನ್ನು ನಾನು ಕಂಟ್ರೋಲ್ ಮಾಡಲು ಆಗುವುದೇ ಇಲ್ಲ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಗಳೆ, ಸಣ್ಣ ನೀರಾವರಿ ಯೋಜನೆಗೆ Express Lines ನ್ನು ಕೊಡುವುದಿಲ್ಲ. ಮೇಲಿಂದ ಮೇಲೆ fluctuation of current ಏನು ಇದೆ ಅದರಿಂದ ಸ್ವಲ್ಪ electrical prolem ಆಗಿ ಪಂಪ್‌ಸೆಟ್‌ಗಳು ಕೆಡುತ್ತಿವೆ. ಆದುದರಿಂದ Electrical Department ನ್ನು consult ಮಾಡಿ ಅಲ್ಲಿ stabilizer ವ್ಯವಸ್ಥೆ ಮಾಡಿ ಪಂಪ್‌ಸೆಟ್‌ಗಳು ಹಾಳಾಗದಂತೆ ನೋಡಿಕೊಳ್ಳಬೇಕೆಂದು ನಿರ್ದೇಶನವನ್ನು ಕೊಟ್ಟಿದ್ದೇವೆ. ಇವುಗಳು burn ಆಗುವುದರಿಂದ ಸಣ್ಣ ನೀರಾವರಿ ಯೋಜನೆಗಳಿಗೆ Express Lines ನ್ನು ಕೊಡುವುದಿಲ್ಲ.

**ಸಭಾಪತಿಯವರು:-** ಡಿಸೆಂಬರ್‌ನಲ್ಲಿ ಸರಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಜನವರಿ ಒಳಗೆ ಮಾಡಲೇ ಬೇಕು ಎನ್ನುವುದನ್ನು ನಾನು ಈಗಾಗಲೇ ಹೇಳಿದ್ದೇನೆ.

**ಶ್ರೀ ಬಿ.ರಾಮಕೃಷ್ಣ:-** ಮಾನ್ಯ ಸಭಾಪತಿಗಳೆ, ಒಂದೇ ಉಪಪ್ರಶ್ನೆ, ಇದು ಬಾಣೋಜಿಪಂಥ್ ಏತ ನೀರಾವರಿ ಯೋಜನೆ. ಇದು ಚಾಲನೆಯಲ್ಲಿ ಬಂದು

ಸಮಾರು ವರ್ಷಗಳಾಗಿದೆ. ಆದರೆ ಇದುವರೆಗೂ ಆ ಬಾಣೋಜಿಪಂಥ್ ಕೆರೆಗೆ ನೀರೇ ತುಂಬಿಲ್ಲ.

**ಸಭಾಪತಿಯವರು:-** ನೀರೆ ಬರದಿದ್ದರೆ ಏತ ನೀರಾವರಿ ಹೇಗೆ ಮಾಡುತ್ತೀರಾ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಗಳೆ, ಪಂಪ್‌ಸೆಟ್‌ಗಳನ್ನು ಬದಲಾವಣೆ ಮಾಡಿ. ಇಲ್ಲವೆಂದರೆ 10 ವರ್ಷವಾದರೂ ನೀರು ತುಂಬಿಸುವುದಕ್ಕೆ ಆಗುವುದಿಲ್ಲ. ಸುಮ್ಮನೆ ಏಕೆ ಕಥೆಗಳನ್ನು ಹೇಳುತ್ತೀರಿ?

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಗಳೆ, ಅದನ್ನು ಪರಿಶೀಲನೆ ಮಾಡಿಸಿ, ಆ ಪಂಪ್‌ಸೆಟ್‌ಗಳು ಸರಿ ಇಲ್ಲದಿದ್ದರೆ ಬದಲಾವಣೆ ಮಾಡಲು ಕ್ರಮ ತೆಗೆದುಕೊಳ್ಳುತ್ತೇವೆ. ಬಾಣೋಜಿ ಕೆರೆ ಈಗ 30% ತುಂಬಿದೆ. ನಾನು ಈಗ iPod ನಲ್ಲಿ ಅದರ photo ವನ್ನು ನೋಡಿಕೊಂಡು ಬಂದಿದ್ದೇನೆ. Motor ಕೆಟ್ಟು ಬಂದ್ ಆಗಿತ್ತು, ಈಗ ಪ್ರಾರಂಭವಾಗಿದೆ. ಡಿಸೆಂಬರ್ ತಿಂಗಳಷ್ಟರಲ್ಲಿ ಆ ಕೆರೆಯನ್ನು ತುಂಬಿಸಲಾಗುತ್ತದೆ.

**ಸಭಾಪತಿಯವರು:-** ಧನ್ಯವಾದಗಳು, ಮುಂದಿನ ಪ್ರಶ್ನೆ ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರದು.

## ಇಲಾಖಾ ನೇಮಕಾತಿ ಹೊಂದಿದ ಮತ್ತು ಪರವಾನಗಿ ಪಡೆದ ಭೂಮಾಪಕರ ಬಗ್ಗೆ

### 919, ಶ್ರೀ ಕೆ.ಪ್ರತಾಪ ಚಂದ್ರ ಶೆಟ್ಟಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಅ) ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ಭೂಮಾಪಕರ ಸಂಖ್ಯೆ ಎಷ್ಟು? ಇವರಲ್ಲಿ ಇಲಾಖೆಯಿಂದ ನೇಮಿಸಲ್ಪಟ್ಟ ಮತ್ತು ಪರವಾನಗಿ ಪಡೆದ ಭೂಮಾಪಕರ ಸಂಖ್ಯೆ ಎಷ್ಟು;(ತಾಲ್ಲೂಕುವಾರು ವಿವರ ನೀಡುವುದು)

ಆ) ರಾಜ್ಯದಲ್ಲಿ ಕಳೆದ ಆರು ತಿಂಗಳುಗಳಲ್ಲಿ ಭೂಮಾಪನಕ್ಕೆ ಕೋರಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು; ಭೂಮಾಪನ ಆಗಿರುವ ಅರ್ಜಿಗಳೆಷ್ಟು; ಹಿಂದಿನದೂ ಸೇರಿ ಒಟ್ಟು ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

ಇ) ಈ ವಿಳಂಬವನ್ನು ತಪ್ಪಿಸಲು ಎಷ್ಟು ತಿಂಗಳ ಕಾಲಾವಕಾಶ ಬೇಕಾಗುವುದು?

**ಶ್ರೀ ವಿ.ಶ್ರೀನಿವಾಸ ಪ್ರಸಾದ್(ಕಂದಾಯ ಸಚಿವರು)**

ಅ) ರಾಜ್ಯದಲ್ಲಿ ಒಟ್ಟು ಕಾರ್ಯ ನಿರ್ವಹಿಸುತ್ತಿರುವ ಭೂಮಾಪಕರು

| ಖಾಯಂ ಭೂಮಪಾಕರ ಸಂಖ್ಯೆ | ಪರವಾನಗಿ ಭೂಮಾಪಕರ ಸಂಖ್ಯೆ |
|---|---|
| **3462** | **2202** |

ತಾಲ್ಲೂಕುವಾರು ಪಟ್ಟಿ ಅಲಾಯಿದ ಲಗತ್ತಿಸಿದೆ.

ಆ) ರಾಜ್ಯದಲ್ಲಿ ಕಳೆದ ಆರು ತಿಂಗಳುಗಳಲ್ಲಿ ಮೇ 2013 ರಿಂದ ಅಕ್ಟೋಬರ್ 2013ರ ಮಾಹೆಯವರೆವಿಗೆ ಭೂಮಾಪನಕ್ಕೆ ಕೋರಿ ಬಂದ ಅರ್ಜಿಗಳ ಸಂಖ್ಯೆ 173079, ಭೂಮಾಪನ ಆಗಿರುವ ಅರ್ಜಿಗಳು 118645, ಬಾಕಿ ಇರುವ ಅರ್ಜಿಗಳ ಸಂಖ್ಯೆ 54434 ತಾಲ್ಲೂಕುವಾರು ಪಟ್ಟಿ ಅಲಾಯಿದಾ ಲಗತ್ತಿಸಿದೆ.

ಇ) ಸಾರ್ವಜನಿಕರಿಗೆ ಉತ್ತಮವಾದ ಸೇವೆಯನ್ನು ಒದಗಿಸಲು ಈ ಕೆಳಕಂಡಂತೆ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಈ ಹಿಂದೆ ತಾಲ್ಲೂಕು ಕಚೇರಿಗೆ ಬಂದು ಸಲ್ಲಿಸಬೇಕಾದ ಅರ್ಜಿಗಳನ್ನು ಹೋಬಳಿ ಮಟ್ಟದ ನಾಡ ಕಚೇರಿಗಳಲ್ಲಿ ಸ್ವೀಕರಿಸಲು ಹಾಗೂ ಅಂತಿಮ ಅನುಮೋದನೆಯಾದ ನಕ್ಷೆಗಳನ್ನು ನಾಡಕಚೇರಿಗಳಿಂದಲೇ ವಿತರಿಸಲು ವ್ಯವಸ್ಥೆ ಕಲ್ಪಿಸಲಾಗಿದೆ.

2. ಇಲಾಖೆಯ ಇತರೆ ಎಲ್ಲಾ ಸೇವೆಗಳನ್ನು ದಿನಾಂಕ 01/11/2013 ರಿಂದ ಮೋಜಿಣಿ ತಂತ್ರಾಂಶದಲ್ಲಿ ಅಳವಡಿಸಲಾಗಿದೆ. ಇದರಿಂದಾಗಿ ಅರ್ಜಿಯನ್ನು ತ್ವರಿತವಾಗಿ ಹಾಗೂ ಪಾರದರ್ಶಕವಾಗಿ (FIFO) ಸ್ವೀಕೃತಿಯ ಸರದಿ ಅನುಸರಿಸಿ ವಿಲೇವಾರಿ ಮಾಡಲು ಸಹಕಾರಿಯಾಗಿದೆ.
3. ಇಲಾಖೆಯಲ್ಲಿ 1869 ಜನ ಭೂಮಾಪಕರ ನೇಮಕಾತಿಯನ್ನು ಮಾಡಲಾಗಿದ್ದು, ಅವರುಗಳು ಇನ್ನು 6 ತಿಂಗಳಲ್ಲಿ ತರಬೇತಿ ಪೂರೈಸಿ ಸಾರ್ವಜನಿಕರ ಸೇವೆಗೆ ಲಭ್ಯವಾಗುತ್ತಾರೆ.
4. ಪರವಾನಗಿ ಭೂಮಾಪಕರುಗಳಿಗೆ ನೀಡುವ ಸೇವಾ ಶುಲ್ಕವನ್ನು ಪರಿಷ್ಕರಿಸಿದ್ದು ಹೆಚ್ಚಿನ ಉತ್ಸಾಹದಿಂದ ಕೆಲಸ ನಿರ್ವಹಿಸಲು ಸಹಕಾರಿಯಾಗಿರುತ್ತದೆ.
5. ಇಲಾಖೆಯಲ್ಲಿ 150 ವರ್ಷಗಳ ಹಿಂದೆ ತಯಾರಿಸಿರುವ ದಾಖಲೆಗಳನ್ನು ಸಂರಕ್ಷಿಸುವ ಸಲುವಾಗಿ ಎಲ್ಲಾ ದಾಖಲೆಗಳನ್ನು ಸ್ಕ್ಯಾನ್ ಮಾಡಲಾಗಿದೆ.
6. 150 ವರ್ಷಗಳ ಸರ್ವೆ ದಾಖಲೆಗಳನ್ನು ಗಣಕೀಕರಣ ಗೊಳಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.
7. ಮೋಜಿಣಿ ತಂತ್ರಾಂಶದ 2ನೇ ಆವೃತ್ತಿಯಲ್ಲಿ ಹಕ್ಕುದಾರಿಕೆ ಅನುಸರಿಸಿ ಅಳತೆ ಕೆಲಸ ಪೂರೈಸಿದ ಬಾಬ್ತು ದುರಸ್ತಿ ಕ್ರಮವನ್ನು ಆನ್ ಲೈನ್‌ನಲ್ಲಿ ಅಳವಡಿಸಿಕೊಂಡು ದುರಸ್ತಿ ಕ್ರಮ ಜರುಗಿಸಲಾಗುತ್ತಿದೆ.
8. ಸರ್ಕಾರದ ಸುತ್ತೋಲೆಯನ್ವಯ ಪೌತಿ ಖಾತೆಗೆ 11ಇ ನಕ್ಷೆ ಹಾಜರುಪಡಿಸುವುದರಿಂದ ವಿನಾಯತಿ ನೀಡಲಾಗಿದೆ.
9. ಪಹಣಿಯಲ್ಲಿ ದಾಖಲಾಗಿರುವ ವಿಸ್ತೀರ್ಣಗಳನ್ನು ಆಕಾರಬಂದ್‌ನೊಂದಿಗೆ ಪರಿಶೀಲಿಸಿ ಸರಿಪಡಿಸಲು ಸರ್ಕಾರದವತಿಯಿಂದ ಹಾಗೂ ಇಲಾಖೆವತಿಯಿಂದ ಹಲವು ಸುತ್ತೋಲೆಗಳನ್ನು ನೀಡಿ ಕ್ರಮ ಜರುಗಿಸಲಾಗಿದೆ.

| ಜಿಲ್ಲೆ | ತಾಲ್ಲೂಕು | ಆರಂಭ ಶಿಲ್ಕು | ಆರು ತಿಂಗಳ ಅವಧಿಯಲ್ಲಿ ಸ್ವೀಕೃತಿಯಾದ ಅರ್ಜಿಗಳ ಸಂಖ್ಯೆ | ಒಟ್ಟು ಸ್ವೀಕೃತಿ ಯಾದ ಅರ್ಜಿಗಳ ಸಂಖ್ಯೆ | ಆರು ತಿಂಗಳ ಅವಧಿಯಲ್ಲಿ ವಿಲೆಯಾದ ಪ್ರಕರಣಗಳ ಸಂಖ್ಯೆ | ಬಾಕಿ |
|---|---|---|---|---|---|---|
| ದಕ್ಷಿಣ ಕನ್ನಡ | ಮಂಗಳೂರು ನಗರಾಸ್ತಿ | 0 | 0 | 0 | 0 | 0 |
| ದಕ್ಷಿಣ ಕನ್ನಡ | ಮೂಡಬಿದರೆ | 651 | 515 | 1166 | 462 | 704 |
| ದಕ್ಷಿಣ ಕನ್ನಡ | ಸುಳ್ಯ | 504 | 572 | 1076 | 347 | 729 |
| **ದಕ್ಷಿಣ ಕನ್ನಡ ಒಟ್ಟು** | | **6622** | **6700** | **13322** | **4807** | **8515** |
| ಮಂಡ್ಯ | ಕೆ.ಆರ್.ಪೇಟೆ | 920 | 1264 | 2184 | 537 | 1647 |
| ಮಂಡ್ಯ | ನಾಗಮಂಗಲ | 1266 | 1316 | 2582 | 562 | 2020 |

| | | | | | | |
|---|---|---|---|---|---|---|
| ಮಂಡ್ಯ | ಪಾಂಡವಪುರ | 305 | 718 | 1023 | 550 | 473 |
| ಮಂಡ್ಯ | ಮಂಡ್ಯ | 1349 | 1423 | 2772 | 748 | 2024 |
| ಮಂಡ್ಯ | ಮದ್ದೂರು | 1646 | 2025 | 3671 | 1006 | 2665 |
| ಮಂಡ್ಯ | ಮಳವಳ್ಳಿ | 1203 | 1569 | 2772 | 892 | 1880 |
| ಮಂಡ್ಯ | ಶ್ರೀರಂಗಪಟ್ಟಣ | 896 | 1072 | 1968 | 752 | 1216 |
| **ಮಂಡ್ಯ ಒಟ್ಟು** | | **7585** | **9387** | **16972** | **5047** | **11925** |
| ಮೈಸೂರು | ಕೆ.ಆರ್.ನಗರ | 723 | 1368 | 2091 | 973 | 1118 |
| ಮೈಸೂರು | ಟಿ.ನರಸೀಪುರ | 435 | 1006 | 1441 | 816 | 625 |
| ಮೈಸೂರು | ನಂಜನಗೂಡು | 694 | 1376 | 2070 | 1055 | 1015 |
| ಮೈಸೂರು | ಪಿರಿಯಾಪಟ್ಟಣ | 679 | 1041 | 1720 | 1106 | 614 |
| ಮೈಸೂರು | ಮೈಸೂರು | 796 | 1963 | 2759 | 1309 | 1450 |

| | | | | | | |
|---|---|---|---|---|---|---|
| ಮೈಸೂರು | ಮೈಸೂರು ನಗರಾಸ್ತಿ | 196 | 253 | 449 | 194 | 255 |
| ಮೈಸೂರು | ಹುಣಸೂರು | 664 | 1317 | 1981 | 1106 | 875 |
| ಮೈಸೂರು | ಹೆಗ್ಗಡದೇವನಕೋಟೆ | 481 | 676 | 1157 | 553 | 604 |
| **ಮೈಸೂರು ಒಟ್ಟು** | | **4668** | **9000** | **13668** | **7112** | **6556** |
| ಹಾಸನ | ಅರಕಲಗೂಡು | 554 | 1250 | 1804 | 644 | 1160 |
| ಹಾಸನ | ಅರಸೀಕೆರೆ | 1548 | 2685 | 4233 | 792 | 3441 |
| ಹಾಸನ | ಆಲೂರು | 171 | 644 | 815 | 365 | 450 |
| ಹಾಸನ | ಚನ್ನರಾಯಪಟ್ಟಣ | 2439 | 2374 | 4813 | 1951 | 2862 |
| ಹಾಸನ | ಬೇಲೂರು | 264 | 962 | 1226 | 688 | 538 |
| ಹಾಸನ | ಸಕಲೇಶಪುರ | 207 | 642 | 849 | 598 | 251 |
| ಹಾಸನ | ಹಾಸನ | 2615 | 2827 | 5442 | 2450 | 2992 |

| | | | | | | |
|---|---|---|---|---|---|---|
| ಹಾಸನ | ಹೊಳೆನರಸೀಪುರ | 410 | 1529 | 1939 | 936 | 1003 |
| **ಹಾಸನ ಒಟ್ಟು** | | **8208** | **12913** | **21121** | **8424** | **12697** |
| ಉತ್ತರಕನ್ನಡ | ಅಂಕೋಲ | 101 | 342 | 443 | 318 | 125 |
| ಉತ್ತರಕನ್ನಡ | ಕಾರವಾರ | 101 | 430 | 531 | 355 | 176 |
| ಉತ್ತರಕನ್ನಡ | ಕುಮಟಾ | 241 | 476 | 717 | 405 | 312 |
| ಉತ್ತರಕನ್ನಡ | ಜೋಯಿಡ | 17 | 36 | 53 | 44 | 9 |
| ಉತ್ತರಕನ್ನಡ | ಭಟ್ಕಳ | 249 | 497 | 746 | 367 | 379 |
| ಉತ್ತರಕನ್ನಡ | ಮುಂಡಗೋಡ | 100 | 211 | 311 | 203 | 108 |
| ಉತ್ತರಕನ್ನಡ | ಯಲ್ಲಾಪುರ | 22 | 143 | 165 | 132 | 33 |
| ಉತ್ತರಕನ್ನಡ | ಸಿದ್ದಾಪುರ | 91 | 237 | 328 | 178 | 150 |
| ಉತ್ತರಕನ್ನಡ | ಸಿರ್ಸಿ | 154 | 439 | 593 | 415 | 178 |

| | | | | | | |
|---|---|---|---|---|---|---|
| ಉತ್ತರಕನ್ನಡ | ಹಳಿಯಾಳ | 83 | 247 | 330 | 204 | 126 |
| ಉತ್ತರಕನ್ನಡ | ಹೊನ್ನಾವರ | 327 | 464 | 791 | 430 | 361 |
| **ಉತ್ತರಕನ್ನಡ ಒಟ್ಟು** | | **1486** | **3522** | **5008** | **3051** | **1957** |
| ಗದಗ | ಗಜೇಂದ್ರಗಡ | 8 | 158 | 166 | 123 | 43 |
| ಗದಗ | ಗದಗ | 127 | 616 | 743 | 358 | 385 |
| ಗದಗ | ನರಗುಂದ | 33 | 272 | 305 | 147 | 158 |
| ಗದಗ | ಮುಂಡರಗಿ | 21 | 280 | 301 | 187 | 114 |
| ಗದಗ | ರೋಣ | 90 | 377 | 467 | 430 | 37 |
| ಗದಗ | ಲಕ್ಷ್ಮೇಶ್ವರ | 69 | 259 | 328 | 193 | 135 |
| ಗದಗ | ಶಿರಹಟ್ಟಿ | 64 | 237 | 301 | 196 | 105 |
| **ಗದಗ ಒಟ್ಟು** | | **412** | **2199** | **2611** | **1634** | **977** |

| | | | | | | |
|---|---|---|---|---|---|---|
| ಧಾರವಾಡ | ಕಲಘಟಗಿ | 52 | 296 | 348 | 266 | 82 |
| ಧಾರವಾಡ | ಕುಂದಗೋಳ | 100 | 408 | 508 | 391 | 117 |
| ಧಾರವಾಡ | ಧಾರವಾಡ | 143 | 596 | 739 | 506 | 233 |
| ಧಾರವಾಡ | ಧಾರವಾಡ ನಗರಾಸ್ತಿ | 1 | 0 | 1 | 0 | 1 |
| ಧಾರವಾಡ | ನವಲಗುಂದ | 119 | 708 | 827 | 732 | 95 |
| ಧಾರವಾಡ | ಹುಬ್ಬಳ್ಳಿ | 112 | 335 | 447 | 383 | 64 |
| ಧಾರವಾಡ | ಹುಬ್ಬಳ್ಳಿ ನಗರಾಸ್ತಿ | 2 | 9 | 11 | 5 | 6 |
| **ಧಾರವಾಡ ಒಟ್ಟು** | | **529** | **2352** | **2881** | **2283** | **598** |
| ಬಾಗಲಕೋಟೆ | ಇಳಕಲ್ಲು | 25 | 153 | 178 | 91 | 87 |
| ಬಾಗಲಕೋಟೆ | ಗುಳೇದಗುಡ್ಡ | 63 | 113 | 176 | 126 | 50 |
| ಬಾಗಲಕೋಟೆ | ಜಮಖಂಡಿ | 268 | 723 | 991 | 417 | 574 |

| | | | | | | |
|---|---|---|---|---|---|---|
| ಬಾಗಲಕೋಟೆ | ಬಾಗಲಕೋಟೆ | 30 | 215 | 245 | 144 | 101 |
| ಬಾಗಲಕೋಟೆ | ಬಾದಾಮಿ | 221 | 532 | 753 | 322 | 431 |
| ಬಾಗಲಕೋಟೆ | ಬೀಳಗಿ | 62 | 449 | 511 | 244 | 267 |
| ಬಾಗಲಕೋಟೆ | ಮುಧೋಳ | 173 | 657 | 830 | 317 | 513 |
| ಬಾಗಲಕೋಟೆ | ಹುನಗುಂದ | 70 | 428 | 498 | 169 | 329 |
| **ಬಾಗಲಕೋಟೆ ಒಟ್ಟು** | | **912** | **3270** | **4182** | **1830** | **2352** |
| ಬಿಜಾಪುರ | ಇಂಡಿ | 271 | 663 | 934 | 504 | 430 |
| ಬಿಜಾಪುರ | ಚಡಚಣ | 169 | 337 | 506 | 257 | 249 |
| ಬಿಜಾಪುರ | ತಾಳಿಕೋಟೆ | 81 | 257 | 338 | 202 | 136 |
| ಬಿಜಾಪುರ | ನಿಡಗುಂದಿ | 236 | 227 | 463 | 169 | 294 |
| ಬಿಜಾಪುರ | ಬಬಲೇಶ್ವರ | 183 | 309 | 492 | 328 | 164 |

| | | | | | | |
|---|---|---|---|---|---|---|
| ಬಿಜಾಪುರ | ಬಸವನ ಬಾಗೇವಾಡಿ | 460 | 657 | 1117 | 536 | 581 |
| ಬಿಜಾಪುರ | ಬಿಜಾಪುರ | 361 | 988 | 1349 | 686 | 663 |
| ಬಿಜಾಪುರ | ಮುದ್ದೇಬಿಹಾಳ | 121 | 564 | 685 | 385 | 300 |
| ಬಿಜಾಪುರ | ಸಿಂಧಗಿ | 396 | 773 | 1169 | 726 | 443 |
| **ಬಿಜಾಪುರ ಒಟ್ಟು** | | **2278** | **4775** | **7053** | **3793** | **3260** |
| ಬೆಳಗಾವ | ಅಥಣಿ | 714 | 1830 | 2544 | 913 | 1631 |
| ಬೆಳಗಾವ | ಕಿತ್ತೂರು | 53 | 184 | 237 | 124 | 113 |
| ಬೆಳಗಾವ | ಖಾನಾಪುರ | 277 | 420 | 697 | 314 | 383 |
| ಬೆಳಗಾವ | ಗೋಕಾಕ್ | 142 | 1087 | 1229 | 855 | 374 |
| ಬೆಳಗಾವ | ಚಿಕ್ಕೋಡಿ | 548 | 1251 | 1799 | 708 | 1091 |
| ಬೆಳಗಾವ | ನಿಪ್ಪಾಣಿ | 116 | 277 | 393 | 125 | 268 |

| | | | | | | |
|---|---|---|---|---|---|---|
| ಬೆಳಗಾವ | ಬೆಳಗಾಂ | 662 | 1265 | 1927 | 980 | 947 |
| ಬೆಳಗಾವ | ಬೈಲಹೊಂಗಲ | 50 | 306 | 356 | 293 | 63 |
| ಬೆಳಗಾವ | ರಾಮದುರ್ಗ | 104 | 439 | 543 | 217 | 326 |
| ಬೆಳಗಾವ | ರಾಯಬಾಗ್ | 246 | 750 | 996 | 556 | 440 |
| ಬೆಳಗಾವ | ಸವದತ್ತಿ | 336 | 1054 | 1390 | 626 | 764 |
| ಬೆಳಗಾವ | ಹುಕ್ಕೇರಿ | 361 | 811 | 1172 | 576 | 596 |
| **ಬೆಳಗಾವ ಒಟ್ಟು** | | **3609** | **9674** | **13283** | **6287** | **6996** |
| ಹಾವೇರಿ | ಬ್ಯಾಡಗಿ | 58 | 351 | 409 | 199 | 210 |
| ಹಾವೇರಿ | ರಾಣಿಬೆನ್ನೂರು | 117 | 923 | 1040 | 399 | 641 |
| ಹಾವೇರಿ | ಶಿಗ್ಗಾಂವ್ | 132 | 296 | 428 | 257 | 171 |
| ಹಾವೇರಿ | ಸವಣೂರು | 39 | 389 | 428 | 210 | 218 |

| | | | | | | |
|---|---|---|---|---|---|---|
| ಹಾವೇರಿ | ಹಾನಗಲ್ | 127 | 518 | 645 | 419 | 226 |
| ಹಾವೇರಿ | ಹಾವೇರಿ | 118 | 607 | 725 | 341 | 384 |
| ಹಾವೇರಿ | ಹಿರೇಕೆರೂರು | 141 | 700 | 841 | 366 | 475 |
| **ಹಾವೇರಿ ಒಟ್ಟು** | | **732** | **3784** | **4516** | **2191** | **2325** |
| ಕೊಪ್ಪಳ | ಕರಟಗಿ | 294 | 166 | 460 | 62 | 398 |
| ಕೊಪ್ಪಳ | ಕುಷ್ಟಗಿ | 455 | 870 | 1325 | 330 | 995 |
| ಕೊಪ್ಪಳ | ಕೊಪ್ಪಳ | 791 | 745 | 1536 | 610 | 926 |
| ಕೊಪ್ಪಳ | ಗಂಗಾವತಿ | 635 | 710 | 1345 | 166 | 1179 |
| ಕೊಪ್ಪಳ | ಯಲ್ಬುರ್ಗ | 1116 | 995 | 2111 | 477 | 1634 |
| **ಕೊಪ್ಪಳ ಒಟ್ಟು** | | **3291** | **3486** | **6777** | **1645** | **5132** |
| ಗುಲ್ಬರ್ಗ | ಅಫ್ಜಲಪುರ | 247 | 684 | 931 | 617 | 314 |

| | | | | | | |
|---|---|---|---|---|---|---|
| ಗುಲ್ಬರ್ಗ | ಆಳಂದ | 1207 | 1405 | 2612 | 587 | 2025 |
| ಗುಲ್ಬರ್ಗ | ಕಾಳಗಿ | 404 | 530 | 934 | 296 | 638 |
| ಗುಲ್ಬರ್ಗ | ಗುಲ್ಬರ್ಗ | 818 | 1009 | 1827 | 518 | 1309 |
| ಗುಲ್ಬರ್ಗ | ಗುಲ್ಬರ್ಗ ಉತ್ತರ | 251 | 251 | 502 | 111 | 391 |
| ಗುಲ್ಬರ್ಗ | ಚಿಂಚೋಳಿ | 701 | 673 | 1374 | 389 | 985 |
| ಗುಲ್ಬರ್ಗ | ಚಿತ್ತಾಪುರ | 523 | 588 | 1111 | 352 | 759 |
| ಗುಲ್ಬರ್ಗ | ಜೇವರ್ಗಿ | 1014 | 775 | 1789 | 277 | 1512 |
| ಗುಲ್ಬರ್ಗ | ಯಡ್ರಾಮಿ | 725 | 483 | 1208 | 190 | 1018 |
| ಗುಲ್ಬರ್ಗ | ಸೇಡಂ | 465 | 737 | 1202 | 614 | 588 |
| **ಗುಲ್ಬರ್ಗ ಒಟ್ಟು** | | **6355** | **7135** | **13490** | **3951** | **9539** |
| ಬಳ್ಳಾರಿ | ಕುರುಗೋಡು | 342 | 589 | 931 | 407 | 524 |

| | | | | | | |
|---|---|---|---|---|---|---|
| ಬಳ್ಳಾರಿ | ಕೂಡ್ಲಿಗಿ | 380 | 926 | 1306 | 859 | 447 |
| ಬಳ್ಳಾರಿ | ಬಳ್ಳಾರಿ | 681 | 1059 | 1740 | 913 | 827 |
| ಬಳ್ಳಾರಿ | ಬಳ್ಳಾರಿ ನಗರಾಸ್ತಿ | 5 | 9 | 14 | 12 | 2 |
| ಬಳ್ಳಾರಿ | ಸಂಡೂರು | 249 | 326 | 575 | 356 | 219 |
| ಬಳ್ಳಾರಿ | ಸಿರಗುಪ್ಪ | 650 | 1615 | 2265 | 1298 | 997 |
| ಬಳ್ಳಾರಿ | ಹಗರಿ ಬೊಮ್ಮನಹಳ್ಳಿ | 294 | 996 | 1290 | 741 | 549 |
| ಬಳ್ಳಾರಿ | ಹಡಗಲಿ | 301 | 911 | 1212 | 756 | 456 |
| ಬಳ್ಳಾರಿ | ಹೊಸಪೇಟೆ | 218 | 633 | 851 | 554 | 297 |
| **ಬಳ್ಳಾರಿ ಒಟ್ಟು** | | **3120** | **7064** | **10184** | **5866** | **4318** |
| ಬೀದರ್ | ಔರಾದ್ | 899 | 560 | 1459 | 509 | 950 |
| ಬೀದರ್ | ಚಿಟಗುಪ್ಪ | 95 | 160 | 255 | 84 | 171 |

| | | | | | | |
|---|---|---|---|---|---|---|
| ಬೀದರ್ | ಬಸವಕಲ್ಯಾಣ | 1014 | 1064 | 2078 | 934 | 1144 |
| ಬೀದರ್ | ಬೀದರ್ | 1634 | 620 | 2254 | 435 | 1819 |
| ಬೀದರ್ | ಭಾಲ್ಕಿ | 738 | 973 | 1711 | 501 | 1210 |
| ಬೀದರ್ | ಹುಮ್ನಾಬಾದ್ | 253 | 701 | 954 | 424 | 530 |
| **ಬೀದರ್ ಒಟ್ಟು** | | **4633** | **4078** | **8711** | **2887** | **5824** |
| ಯಾದಗಿರ್ | ಗುರುಮಿಟ್ಕಲ್ | 515 | 238 | 753 | 60 | 693 |
| ಯಾದಗಿರ್ | ಯಾದಗಿರ್ | 1081 | 1021 | 2102 | 384 | 1718 |
| ಯಾದಗಿರ್ | ವಡಗೇರ | 409 | 332 | 741 | 110 | 631 |
| ಯಾದಗಿರ್ | ಶಹಪುರ | 997 | 716 | 1713 | 350 | 1363 |
| ಯಾದಗಿರ್ | ಶೋರಪುರ | 1288 | 658 | 1946 | 499 | 1447 |
| ಯಾದಗಿರ್ | ಹುಣಿಸಿಗಿ | 864 | 353 | 1217 | 115 | 1102 |

| | | | | | | |
|---|---|---|---|---|---|---|
| **ಯಾದಗಿರ್ ಒಟ್ಟು** | | **5154** | **3318** | **8472** | **1518** | **6954** |
| ರಾಯಚೂರು | ದೇವದುರ್ಗ | 1365 | 1118 | 2483 | 938 | 1545 |
| ರಾಯಚೂರು | ಮಸ್ಕಿ | 395 | 221 | 616 | 140 | 476 |
| ರಾಯಚೂರು | ಮಾನ್ವಿ | 2980 | 2072 | 5052 | 1360 | 3692 |
| ರಾಯಚೂರು | ರಾಯಚೂರು | 1830 | 1711 | 3541 | 689 | 2852 |
| ರಾಯಚೂರು | ಲಿಂಗಸೂಗೂರು | 1500 | 1018 | 2518 | 600 | 1918 |
| ರಾಯಚೂರು | ಸಿಂಧನೂರು | 2441 | 2912 | 5353 | 1466 | 3887 |
| **ರಾಯಚೂರು ಒಟ್ಟು** | | **10511** | **9052** | **19563** | **5193** | **14370** |
| **ಒಟ್ಟು** | | **111970** | **173079** | **285049** | **118645** | **166404** |

| ಕಳೆದ ಆರು ತಿಂಗಳಲ್ಲಿ ಮೇ 2013 ರಿಂದ ಅಕ್ಟೋಬರ್ 2013 ರವರೆಗೆ ಯೋಜಿನೆಯಲ್ಲಿ ಸಾಧಿಸಿದ ಪ್ರಗತಿ ವಿವರ | | | | | |
|---|---|---|---|---|---|
| ಕ್ರಮ ಸಂಖ್ಯೆ | ಆರಂಭ ಶಿಲ್ಕು | ಸ್ವೀಕೃತಿಯಾದ ಅರ್ಜಿಗಳ ಸಂಖ್ಯೆ | ಒಟ್ಟು | ವಿಲೆಯಾದ ಪ್ರಕರಣಗಳ ಸಂಖ್ಯೆ | ಬಾಕಿ |
| 1 | 111970 | 173079 | 285049 | 118645 | 166404 |

**ದಿನಾಂಕ: 22–11–2013 ರಂದು ಲಾಗಿನ್ ಚಾಲ್ತಿಯಲ್ಲಿರುವಂತೆ ರಾಜ್ಯದಲ್ಲಿ ಕೆಲಸ ನಿರ್ವಹಿಸುತ್ತಿರುವ ಪರವಾನಗಿ ಭೂಮಾಪಕರುಗಳಿಗೆ ಜಿಲ್ಲಾವಾರು ಪಟ್ಟಿ:–**

| ಕ್ರಮ ಸಂಖ್ಯೆ | ಜಿಲ್ಲೆ | ಕೆಲಸ ನಿರ್ವಹಿಸುತ್ತಿರುವ ಪರವಾನಗಿ ಭೂಮಾಪಕರ ಸಂಖ್ಯೆ |
|---|---|---|
| 1 | ಉಡುಪಿ | 38 |
| 2 | ಉತ್ತರಕನ್ನಡ | 29 |
| 3 | ಕೊಡಗು | 20 |
| 4 | ಕೊಪ್ಪಳ | 79 |
| 5 | ಕೋಲಾರ | 86 |
| 6 | ಗದಗ | 25 |
| 7 | ಗುಲ್ಬರ್ಗ | 70 |
| 8 | ಚಾಮರಾಜನಗರ | 45 |

| | | |
|---|---|---|
| 9 | ಚಿಕ್ಕಬಳ್ಳಾಪುರ | 102 |
| 10 | ಚಿಕ್ಕಮಗಳೂರು | 50 |
| 11 | ಚಿತ್ರದುರ್ಗ | 41 |
| 12 | ತುಮಕೂರು | 199 |
| 13 | ದಕ್ಷಿಣ ಕನ್ನಡ | 59 |
| 14 | ದಾವಣಗೆರೆ | 66 |
| 15 | ಧಾರವಾಡ | 49 |
| 16 | ಬಳ್ಳಾರಿ | 139 |
| 17 | ಬಾಗಲಕೋಟೆ | 32 |
| 18 | ಬಿಜಾಪುರ | 35 |
| 19 | ಬೀದರ್ | 59 |
| 20 | ಬೆಂಗಳೂರು ಗ್ರಾಮಾಂತರ | 85 |
| 21 | ಬೆಂಗಳೂರು ಜಿಲ್ಲೆ | 75 |
| 22 | ಬೆಳಗಾವ | 93 |
| 23 | ಮಂಡ್ಯ | 62 |
| 24 | ಮೈಸೂರು | 204 |
| 25 | ಯಾದಗಿರ್ | 46 |
| 26 | ರಾಮನಗರ | 85 |
| 27 | ರಾಯಚೂರು | 86 |

| | | |
|---|---|---|
| 28 | ಶಿವಮೊಗ್ಗ | 38 |
| 29 | ಹಾವೇರಿ | 41 |
| 30 | ಹಾಸನ | 164 |
| | **Total** | **2202** |

**ಖಾಲಿ ಇರುವ ಭೂಮಾಪಕರ ಹುದ್ದೆಯ ವಿವರ ದಿನಾಂಕ: 21–11–2013 ರಂತೆ**

| ಜಿಲ್ಲೆ/ಉಪವಿಭಾಗ/ ತಾಲ್ಲೂಕು ಕಛೇರಿಯ ಹೆಸರು | ಮಂಜೂರಾದ ಹುದ್ದೆಗಳು | ಭರ್ತಿ | ಖಾಲಿ |
|---|---|---|---|
| **1** | **2** | **3** | **4** |
| **ಬೆಂಗಳೂರು ನಗರ ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ, ಬೆಂಗಳೂರು ನಗರ | 2 | 2 | 0 |
| ಉಪ ವಿಭಾಗಾಧಿಕಾರಿ ಕಛೇರಿ, ಬೆಂ. ಉತ್ತರ | 1 | 1 | 0 |
| ಬೆಂಗಳೂರು ಉತ್ತರ ತಾಲ್ಲೂಕು | 13 | 13 | 0 |
| ತಹಶೀಲ್ದಾರ್, ಬೆಂಗಳೂರು ಉತ್ತರ, ಅಪರ (ಪಿಯುಸಿ) | 3 | 2 | 1 |
| ತಹಶೀಲ್ದಾರ್, ಬೆಂಗಳೂರು ಉತ್ತರ, ಯಲಹಂಕ (ಪಿಯುಸಿ) | 4 | 4 | 0 |
| ಉಪ ವಿಭಾಗಾಧಿಕಾರಿ ಕಛೇರಿ, | 1 | 1 | 0 |

| | | | |
|---|---|---|---|
| ಬೆಂ. ದಕ್ಷಿಣ | | | |
| ಬೆಂಗಳೂರು ದಕ್ಷಿಣ ತಾಲ್ಲೂಕು | 10 | 10 | 0 |
| ಬೆಂಗಳೂರು ದಕ್ಷಿಣ ತಾಲ್ಲೂಕು (ಪಿಯುಸಿ) | 4 | 4 | 0 |
| ಬೆಂಗಳೂರು ಪೂರ್ವ ತಾಲ್ಲೂಕು | 8 | 8 | 0 |
| ಪಿಯುಸಿ, ಕೆ.ಆರ್.ಪುರಂ | 4 | 4 | 0 |
| ಆನೇಕಲ್ ತಾಲ್ಲೂಕು | 10 | 10 | 0 |
| **ಒಟ್ಟು** | **60** | **59** | **1** |
| **ಬೆಂಗಳೂರು ಗ್ರಾಮಾಂತರ ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 2 | 2 | 0 |
| ಉಪ ವಿಭಾಗಾಧಿಕಾರಿ ಕಛೇರಿ, ಡಿ.ಬಿ.ಪುರ | 1 | 1 | 0 |
| ದೊಡ್ಡಬಳ್ಳಾಪುರ ತಾಲ್ಲೂಕು | 13 | 13 | 0 |
| ದೇವನಹಳ್ಳಿ ತಾಲ್ಲೂಕು | 10 | 9 | 1 |
| ಹೊಸಕೋಟೆ ತಾಲ್ಲೂಕು | 12 | 12 | 0 |
| ನೆಲಮಂಗಲ ತಾಲ್ಲೂಕು | 10 | 10 | 0 |
| **ಒಟ್ಟು** | **48** | **47** | **1** |
| **ರಾಮನಗರ ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 1 | 1 | 0 |
| ಉಪ ವಿಭಾಗಾಧಿಕಾರಿ ಕಛೇರಿ, | 1 | 1 | 0 |

| | | | |
|---|---|---|---|
| ರಾಮನಗರ | | | |
| ರಾಮನಗರ ತಾಲ್ಲೂಕು | 9 | 8 | 1 |
| ಚನ್ನಪಟ್ಟಣ ತಾಲ್ಲೂಕು | 9 | 7 | 2 |
| ಕನಕಪುರ ತಾಲ್ಲೂಕು | 15 | 15 | 0 |
| ಮಾಗಡಿ ತಾಲ್ಲೂಕು | 13 | 13 | 0 |
| **ಒಟ್ಟು** | **48** | **45** | **3** |
| **ಕೋಲಾರ ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 1 | 1 | 0 |
| ಉಪ ವಿಭಾಗಾಧಿಕಾರಿ ಕಛೇರಿ, ಕೋಲಾರ | 1 | 1 | 0 |
| ಕೋಲಾರ ತಾಲ್ಲೂಕು | 9 | 6 | 3 |
| ಬಂಗಾರಪೇಟೆ ತಾಲ್ಲೂಕು | 10 | 9 | 1 |
| ಮಾಲೂರು ತಾಲ್ಲೂಕು | 13 | 11 | 2 |
| ಮುಳಬಾಗಿಲು ತಾಲ್ಲೂಕು | 13 | 10 | 3 |
| ಶ್ರೀನಿವಾಸಪುರ ತಾಲ್ಲೂಕು | 9 | 6 | 3 |
| **ಒಟ್ಟು** | **56** | **44** | **12** |
| **ಚಿಕ್ಕಬಳ್ಳಾಪುರ ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 1 | 1 | 0 |
| ಉಪ ವಿಭಾಗಾಧಿಕಾರಿ ಕಛೇರಿ, ಚಿಕ್ಕಬಳ್ಳಾಪುರ | 1 | 1 | 0 |

| | | | |
|---|---|---|---|
| ಚಿಕ್ಕಬಳ್ಳಾಪುರ ತಾಲ್ಲೂಕು | 10 | 10 | 0 |
| ಬಾಗೇಪಲ್ಲಿ ತಾಲ್ಲೂಕು | 9 | 6 | 3 |
| ಚಿಂತಾಮಣಿ ತಾಲ್ಲೂಕು | 10 | 4 | 6 |
| ಗೌರಿಬಿದನೂರರು ತಾಲ್ಲೂಕು | 13 | 13 | 0 |
| ಗುಡಿಬಂಡೆ ತಾಲ್ಲೂಕು | 5 | 3 | 2 |
| ಶಿಡ್ಲಘಟ್ಟ ತಾಲ್ಲೂಕು | 9 | 8 | 1 |
| **ಒಟ್ಟು** | **58** | **46** | **12** |
| **ತುಮಕೂರು ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 2 | 2 | 0 |
| ಉಪ ವಿಭಾಗಾಧಿಕಾರಿ ಕಛೇರಿ, ತುಮಕೂರು | 1 | 1 | 0 |
| ತುಮಕೂರು ತಾಲ್ಲೂಕು | 19 | 19 | 0 |
| ಗುಬ್ಬಿ ತಾಲ್ಲೂಕು | 16 | 16 | 0 |
| ಕುಣಿಗಲ್ ತಾಲ್ಲೂಕು | 20 | 19 | 1 |
| ಉಪ ವಿಭಾಗಾಧಿಕಾರಿ ಕಛೇರಿ, ತಿಪಟೂರು | 1 | 1 | 0 |
| ತಿಪಟೂರು ತಾಲ್ಲೂಕು | 13 | 12 | 1 |
| ಚಿಕ್ಕನಾಯಕನಹಳ್ಳಿ ತಾಲ್ಲೂಕು | 13 | 10 | 3 |
| ತುರುವೇಕೆರೆ ತಾಲ್ಲೂಕು | 16 | 16 | 0 |
| ಉಪ ವಿಭಾಗಾಧಿಕಾರಿ ಕಛೇರಿ, | 1 | 1 | 0 |

| | | | |
|---|---|---|---|
| ಮಧುಗಿರಿ | | | |
| ಮಧುಗಿರಿ ತಾಲ್ಲೂಕು | 15 | 15 | 0 |
| ಕೊರಟಗೆರೆ ತಾಲ್ಲೂಕು | 13 | 12 | 1 |
| ಪಾವಗಡ ತಾಲ್ಲೂಕು | 10 | 8 | 2 |
| ಶಿರಾ ತಾಲ್ಲೂಕು | 13 | 13 | 0 |
| **ಒಟ್ಟು** | **153** | **145** | **8** |
| **ಚಿತ್ರದುರ್ಗ ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 1 | 1 | 0 |
| ಉಪ ವಿಭಾಗಾಧಿಕಾರಿ ಕಛೇರಿ, ಚಿತ್ರದುರ್ಗ | 0 | 0 | 0 |
| ಚಿತ್ರದುರ್ಗ ತಾಲ್ಲೂಕು | 12 | 12 | 0 |
| ಚಳ್ಳಕೆರೆ ತಾಲ್ಲೂಕು | 12 | 9 | 3 |
| ಹಿರಿಯೂರು ತಾಲ್ಲೂಕು | 13 | 13 | 0 |
| ಹೊಳಲ್ಕೆರೆ ತಾಲ್ಲೂಕು | 13 | 13 | 0 |
| ಹೊಸದುರ್ಗ ತಾಲ್ಲೂಕು | 10 | 10 | 0 |
| ಮೊಳಕಾಲ್ಮೂರು ತಾಲ್ಲೂಕು | 10 | 9 | 1 |
| **ಒಟ್ಟು** | **71** | **67** | **4** |
| **ಶಿವಮೊಗ್ಗ ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 1 | 1 | 0 |
| ಉಪ ವಿಭಾಗಾಧಿಕಾರಿ ಕಛೇರಿ, | 0 | 0 | 0 |

| | | | |
|---|---|---|---|
| ಶಿವಮೊಗ್ಗ | | | |
| ಶಿವಮೊಗ್ಗ ತಾಲ್ಲೂಕು | 13 | 13 | 0 |
| ಭದ್ರಾವತಿ ತಾಲ್ಲೂಕು | 10 | 5 | 5 |
| ತೀರ್ಥಹಳ್ಳಿ ತಾಲ್ಲೂಕು | 7 | 5 | 2 |
| ಉಪ ವಿಭಾಗಾಧಿಕಾರಿ ಕಛೇರಿ, ಸಾಗರ | 0 | 0 | 0 |
| ಸಾಗರ ತಾಲ್ಲೂಕು | 8 | 4 | 4 |
| ಹೊಸನಗರ ತಾಲ್ಲೂಕು | 6 | 4 | 2 |
| ಶಿಕಾರಿಪುರ ತಾಲ್ಲೂಕು | 13 | 12 | 1 |
| ಸೊರಬ ತಾಲ್ಲೂಕು | 9 | 6 | 3 |
| **ಒಟ್ಟು** | **67** | **50** | **17** |
| **ದಾವಣಗೆರೆ ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 2 | 2 | 0 |
| ಉಪ ವಿಭಾಗಾಧಿಕಾರಿ ಕಛೇರಿ, ದಾವಣಗೆರೆ | 1 | 0 | 1 |
| ದಾವಣಗೆರೆ ತಾಲ್ಲೂಕು | 13 | 13 | 0 |
| ಚನ್ನಗಿರಿ ತಾಲ್ಲೂಕು | 13 | 12 | 1 |
| ಹರಿಹರ ತಾಲ್ಲೂಕು | 10 | 10 | 0 |
| ಹೊನ್ನಾಳಿ ತಾಲ್ಲೂಕು | 12 | 8 | 4 |
| ಉಪ ವಿಭಾಗಾಧಿಕಾರಿ ಕಛೇರಿ, | 0 | 0 | 0 |

| | | | |
|---|---|---|---|
| ಹರಪನಹಳ್ಳಿ | | | |
| ಹರಪನಹಳ್ಳಿ ತಾಲ್ಲೂಕು | 9 | 8 | 1 |
| ಜಗಳೂರು ತಾಲ್ಲೂಕು | 10 | 9 | 1 |
| **ಒಟ್ಟು** | **70** | **62** | **8** |
| **ಬೆಂಗಳೂರು ವಿಭಾಗದ ಒಟ್ಟು** | **631** | **565** | **66** |
| ತಹಶೀಲ್ದಾರ್ ಪಿ.ಯು.ಸಿ.ಯಲ್ಲಿನ ಒಟ್ಟು ಹುದ್ದೆಗಳು (–) | 15 | 15 | 0 |
| **ಬೆಂಗಳೂರು ವಿಭಾಗದ ಒಟ್ಟು** | **616** | **550** | **66** |
| **ಬೆಳಗಾಂ ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 1 | 1 | 0 |
| ಉಪ ವಿಭಾಗಾಧಿಕಾರಿ ಕಛೇರಿ, ಬೆಳಗಾಂ | 0 | 0 | 0 |
| ಬೆಳಗಾಂ ತಾಲ್ಲೂಕು | 12 | 9 | 3 |
| ಹುಕ್ಕೇರಿ ತಾಲ್ಲೂಕು | 10 | 6 | 4 |
| ಖಾನಾಪುರ ತಾಲ್ಲೂಕು | 11 | 8 | 3 |
| ಉಪ ವಿಭಾಗಾಧಿಕಾರಿ ಕಛೇರಿ, ಬೈಲಹೊಂಗಲ | 0 | 0 | 0 |
| ಬೈಲಹೊಂಗಲ ತಾಲ್ಲೂಕು | 10 | 7 | 3 |
| ಗೋಕಾಕ್ ತಾಲ್ಲೂಕು | 11 | 8 | 3 |
| ರಾಮದುರ್ಗ ತಾಲ್ಲೂಕು | 9 | 8 | 1 |

| | | | |
|---|---|---|---|
| ಸವದತ್ತಿ ತಾಲ್ಲೂಕು | 9 | 4 | 5 |
| ಉಪ ವಿಭಾಗಾಧಿಕಾರಿ ಕಛೇರಿ, ಚಿಕ್ಕೋಡಿ | 0 | 0 | 0 |
| ಚಿಕ್ಕೋಡಿ ತಾಲ್ಲೂಕು | 11 | 7 | 4 |
| ಅಥಣಿ ತಾಲ್ಲೂಕು | 9 | 7 | 2 |
| ರಾಯಭಾಗ್ ತಾಲ್ಲೂಕು | 7 | 3 | 4 |
| **ಒಟ್ಟು** | **100** | **68** | **32** |
| **ವಿಜಾಪುರ ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 2 | 2 | 0 |
| ಉಪ ವಿಭಾಗಾಧಿಕಾರಿ ಕಛೇರಿ, ವಿಜಾಪುರ | 1 | 1 | 0 |
| ವಿಜಾಪುರ ತಾಲ್ಲೂಕು | 12 | 11 | 1 |
| ಬಸವನಬಾಗೇವಾಡಿ ತಾಲ್ಲೂಕು | 11 | 8 | 3 |
| ಮುದ್ದೇಬಿಹಾಳ ತಾಲ್ಲೂಕು | 10 | 9 | 1 |
| ಉಪ ವಿಭಾಗಾಧಿಕಾರಿ ಕಛೇರಿ, ಇಂಡಿ | 1 | 1 | 0 |
| ಇಂಡಿ ತಾಲ್ಲೂಕು | 10 | 9 | 1 |
| ಸಿಂಧಗಿ ತಾಲ್ಲೂಕು | 13 | 11 | 2 |
| **ಒಟ್ಟು** | **60** | **52** | **8** |
| **ಬಾಗಲಕೋಟೆ ಜಿಲ್ಲೆ** | | | |

| | | | |
|---|---|---|---|
| ಜಿಲ್ಲಾಧಿಕಾರಿ ಕಛೇರಿ | 2 | 1 | 1 |
| ಉಪ ವಿಭಾಗಾಧಿಕಾರಿ ಕಛೇರಿ, ಬಾಗಲಕೋಟೆ | 1 | 1 | 0 |
| ಬಾಗಲಕೋಟೆ ತಾಲ್ಲೂಕು | 6 | 4 | 2 |
| ಬಾದಾಮಿ ತಾಲ್ಲೂಕು | 9 | 6 | 3 |
| ಹುನಗುಂದ ತಾಲ್ಲೂಕು | 7 | 5 | 2 |
| ಉಪ ವಿಭಾಗಾಧಿಕಾರಿ ಕಛೇರಿ, ಜಮಖಂಡಿ | 1 | 0 | 1 |
| ಜಮಖಂಡಿ ತಾಲ್ಲೂಕು | 9 | 6 | 3 |
| ಬೀಳಗಿ ತಾಲ್ಲೂಕು | 10 | 8 | 2 |
| ಮುಧೋಳ ತಾಲ್ಲೂಕು | 7 | 4 | 3 |
| **ಒಟ್ಟು** | **52** | **35** | **17** |
| **ಧಾರವಾಡ ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 2 | 2 | 0 |
| ಉಪ ವಿಭಾಗಾಧಿಕಾರಿ ಕಛೇರಿ, ಧಾರವಾಡ | 1 | 0 | 1 |
| ಧಾರವಾಡ ತಾಲ್ಲೂಕು | 13 | 8 | 5 |
| ಹುಬ್ಬಳ್ಳಿ ತಾಲ್ಲೂಕು | 10 | 8 | 2 |
| ಕಲಘಟಗಿ ತಾಲ್ಲೂಕು | 7 | 4 | 3 |
| ಕುಂದಗೋಳ ತಾಲ್ಲೂಕು | 7 | 5 | 2 |

| | | | |
|---|---|---|---|
| ನವಲಗುಂದ ತಾಲ್ಲೂಕು | 6 | 5 | 1 |
| **ಒಟ್ಟು** | **46** | **32** | **14** |
| **ಗದಗ ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 1 | 1 | 0 |
| ಉಪ ವಿಭಾಗಾಧಿಕಾರಿ ಕಛೇರಿ, ಗದಗ | 0 | 0 | 0 |
| ಗದಗ ತಾಲ್ಲೂಕು | 6 | 3 | 3 |
| ಮುಂಡರಗಿ ತಾಲ್ಲೂಕು | 5 | 3 | 2 |
| ನರಗುಂದ ತಾಲ್ಲೂಕು | 7 | 5 | 2 |
| ರೋಣ ತಾಲ್ಲೂಕು | 9 | 6 | 3 |
| ಶಿರಹಟ್ಟಿ ತಾಲ್ಲೂಕು | 5 | 4 | 1 |
| **ಒಟ್ಟು** | **33** | **22** | **11** |
| **ಹಾವೇರಿ ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 2 | 2 | 0 |
| ಉಪ ವಿಭಾಗಾಧಿಕಾರಿ ಕಛೇರಿ, ಹಾವೇರಿ | 0 | 0 | 0 |
| ಹಾವೇರಿ ತಾಲ್ಲೂಕು | 10 | 8 | 2 |
| ಬ್ಯಾಡಗಿ ತಾಲ್ಲೂಕು | 5 | 4 | 1 |
| ಹಿರೇಕೆರೂರು ತಾಲ್ಲೂಕು | 8 | 6 | 2 |
| ರಾಣಿಬೆನ್ನೂರು ತಾಲ್ಲೂಕು | 10 | 9 | 1 |

| | | | |
|---|---|---|---|
| ಉಪವಿಭಾಗಾಧಿಕಾರಿ ಕಛೇರಿ ಸವಣೂರು | 0 | 0 | 0 |
| ಸವಣೂರು ತಾಲ್ಲೂಕು | 8 | 5 | 3 |
| ಹಾನಗಲ್ ತಾಲ್ಲೂಕು | 7 | 4 | 3 |
| ಶಿಗ್ಗಾಂವ್ ತಾಲ್ಲೂಕು | 5 | 3 | 2 |
| **ಒಟ್ಟು** | **55** | **41** | **14** |
| **ಉತ್ತರ ಕನ್ನಡ ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 1 | 0 | 1 |
| ಉಪ ವಿಭಾಗಾಧಿಕಾರಿ ಕಛೇರಿ, ಕಾರವಾರ | 0 | 0 | 0 |
| ಕಾರವಾರ ತಾಲ್ಲೂಕು | 9 | 6 | 3 |
| ಹಳಿಯಾಳ ತಾಲ್ಲೂಕು | 5 | 3 | 2 |
| ಸೂಪಾ ತಾಲ್ಲೂಕು (ಜೋಯಿಡಾ) | 1 | 1 | 0 |
| ಉಪವಿಭಾಗಾಧಿಕಾರಿ ಕಛೇರಿ ಶಿರಸಿ | 0 | 0 | 0 |
| ಶಿರಸಿ ತಾಲ್ಲೂಕು | 9 | 4 | 5 |
| ಮುಂಡಗೋಡ ತಾಲ್ಲೂಕು | 5 | 1 | 4 |
| ಸಿದ್ದಾಪುರ ತಾಲ್ಲೂಕು | 7 | 1 | 6 |
| ಯಲ್ಲಾಪುರ ತಾಲ್ಲೂಕು | 7 | 4 | 3 |
| ಉಪವಿಭಾಗಾಧಿಕಾರಿ ಕಛೇರಿ ಕುಮಟಾ | 0 | 0 | 0 |

| | | | |
|---|---|---|---|
| ಕುಮಟಾ ತಾಲ್ಲೂಕು | 9 | 6 | 3 |
| ಅಂಕೋಲ ತಾಲ್ಲೂಕು | 8 | 3 | 5 |
| ಭಟ್ಕಳ ತಾಲ್ಲೂಕು | 6 | 4 | 2 |
| ಹೊನ್ನಾವರ ತಾಲ್ಲೂಕು | 8 | 2 | 6 |
| **ಒಟ್ಟು** | **75** | **35** | **40** |
| **ಬೆಳಗಾಂ ವಿಭಾಗದ ಒಟ್ಟು** | **421** | **285** | **136** |
| **ಘೋಷ್ವಾರೆ** | | | |
| ಬೆಂಗಳೂರು ವಿಭಾಗ | 616 | 550 | 66 |
| ಬೆಳಗಾಂ ವಿಭಾಗ | 421 | 285 | 136 |
| ಮೈಸೂರು ವಿಭಾಗ | 541 | 467 | 74 |
| ಗುಲ್ಬರ್ಗ ವಿಭಾಗ | 235 | 199 | 36 |
| **ಒಟ್ಟು** | **1813** | **1501** | **312** |

| **ಜಿಲ್ಲೆ/ಉಪವಿಭಾಗ/ ತಾಲ್ಲೂಕು ಕಛೇರಿಯ ಹೆಸರು** | **ಮಂಜೂರಾದ ಹುದ್ದೆಗಳು** | **ಭರ್ತಿ** | **ಖಾಲಿ** |
|---|---|---|---|
| **1** | **2** | **3** | **4** |
| **ಮೈಸೂರು ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 2 | 2 | 0 |
| ಉಪ ವಿಭಾಗಾಧಿಕಾರಿ ಕಛೇರಿ, | 1 | 1 | 0 |

| | | | |
|---|---|---|---|
| ಮೈಸೂರು | | | |
| ಮೈಸೂರು ತಾಲ್ಲೂಕು | 13 | 13 | 0 |
| ನಂಜನಗೂಡು ತಾಲ್ಲೂಕು | 13 | 13 | 0 |
| ಟೀ ನರಸೀಪುರ ತಾಲ್ಲೂಕು | 10 | 9 | 1 |
| ಉಪ ವಿಭಾಗಾಧಿಕಾರಿ ಕಛೇರಿ, ಹುಣಸೂರು | 1 | 0 | 1 |
| ಹುಣಸೂರು ತಾಲ್ಲೂಕು | 13 | 11 | 2 |
| ಪಿರಿಯಾಪಟ್ಟಣ ತಾಲ್ಲೂಕು | 13 | 13 | 0 |
| ಹೆಗ್ಗಡೆದೇವನಕೋಟೆ ತಾಲ್ಲೂಕು | 15 | 14 | 1 |
| ಕೆ.ಆರ್.ನಗರ ತಾಲ್ಲೂಕು | 10 | 7 | 3 |
| **ಒಟ್ಟು** | **91** | **83** | **8** |
| **ಚಾಮರಾಜನಗರ ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 1 | 1 | 0 |
| ಉಪ ವಿಭಾಗಾಧಿಕಾರಿ ಕಛೇರಿ, ಚಾಮರಾಜನಗರ | 0 | 0 | 0 |
| ಚಾಮರಾಜನಗರ ತಾಲ್ಲೂಕು | 11 | 11 | 0 |
| ಗುಂಡ್ಲುಪೇಟೆ ತಾಲ್ಲೂಕು | 13 | 13 | 0 |
| ಕೊಳ್ಳೇಗಾಲ ತಾಲ್ಲೂಕು | 13 | 13 | 0 |
| ಯಳಂದೂರು ತಾಲ್ಲೂಕು | 5 | 4 | 1 |
| **ಒಟ್ಟು** | **43** | **42** | **1** |

| | | | |
|---|---|---|---|
| **ಮಂಡ್ಯ ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 2 | 0 | 2 |
| ಉಪ ವಿಭಾಗಾಧಿಕಾರಿ ಕಛೇರಿ, ಮಂಡ್ಯ | 1 | 1 | 0 |
| ಮಂಡ್ಯ ತಾಲ್ಲೂಕು | 13 | 13 | 0 |
| ಮದ್ದೂರು ತಾಲ್ಲೂಕು | 13 | 9 | 4 |
| ಮಳವಳ್ಳಿ ತಾಲ್ಲೂಕು | 16 | 12 | 4 |
| ಉಪ ವಿಭಾಗಾಧಿಕಾರಿ ಕಛೇರಿ, ಪಾಂಡವಪುರ | 1 | 1 | 0 |
| ಪಾಂಡವಪುರ ತಾಲ್ಲೂಕು | 13 | 11 | 2 |
| ಕೃಷ್ಣರಾಜಪೇಟೆ ತಾಲ್ಲೂಕು | 16 | 15 | 1 |
| ನಾಗಮಂಗಲ ತಾಲ್ಲೂಕು | 11 | 9 | 2 |
| ಶ್ರೀರಂಗಪಟ್ಟಣ ತಾಲ್ಲೂಕು | 10 | 9 | 1 |
| **ಒಟ್ಟು** | **96** | **80** | **16** |
| **ಹಾಸನ ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 2 | 2 | 0 |
| ಉಪ ವಿಭಾಗಾಧಿಕಾರಿ ಕಛೇರಿ, ಹಾಸನ | 0 | 0 | 0 |
| ಹಾಸನ ತಾಲ್ಲೂಕು | 15 | 13 | 2 |
| ಅರಸೀಕೆರೆ ತಾಲ್ಲೂಕು | 15 | 14 | 1 |

| | | | |
|---|---|---|---|
| ಚನ್ನರಾಯಪಟ್ಟಣ ತಾಲ್ಲೂಕು | 15 | 13 | 2 |
| ಹೊಳೆನರಸೀಪುರ ತಾಲ್ಲೂಕು | 13 | 11 | 2 |
| ಉಪ ವಿಭಾಗಾಧಿಕಾರಿ ಕಛೇರಿ, ಸಕಲೇಶಪುರ | 0 | 0 | 0 |
| ಸಕಲೇಶಪುರ ತಾಲ್ಲೂಕು | 12 | 10 | 2 |
| ಆಲೂರು ತಾಲ್ಲೂಕು | 8 | 6 | 2 |
| ಅರಕಲಗೂಡು ತಾಲ್ಲೂಕು | 9 | 9 | 0 |
| ಬೇಲೂರು ತಾಲ್ಲೂಕು | 12 | 10 | 2 |
| ಒಟ್ಟು | 101 | 88 | 13 |
| **ಚಿಕ್ಕಮಗಳೂರು ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 1 | 1 | 0 |
| ಉಪ ವಿಭಾಗಾಧಿಕಾರಿ ಕಛೇರಿ, ಚಾಮರಾಜನಗರ | 0 | 0 | 0 |
| ಚಿಕ್ಕಮಗಳೂರು ತಾಲ್ಲೂಕು | 11 | 9 | 2 |
| ಕೊಪ್ಪ ತಾಲ್ಲೂಕು | 5 | 3 | 2 |
| ಮೂಡಿಗೆರೆ ತಾಲ್ಲೂಕು | 10 | 8 | 2 |
| ಶೃಂಗೇರಿ ತಾಲ್ಲೂಕು | 4 | 3 | 1 |
| ಉಪ ವಿಭಾಗಾಧಿಕಾರಿ ಕಛೇರಿ, ತರೀಕೆರೆ | 1 | 0 | 1 |
| ತರೀಕೆರೆ ತಾಲ್ಲೂಕು | 9 | 7 | 2 |

| | | | |
|---|---|---|---|
| ಕಡೂರು ತಾಲ್ಲೂಕು | 11 | 9 | 2 |
| ನರಸಿಂಹರಾಜಪುರ ತಾಲ್ಲೂಕು | 4 | 3 | 1 |
| **ಒಟ್ಟು** | **56** | **43** | **43** |
| **ದಕ್ಷಿಣಕನ್ನಡ ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 2 | 1 | 1 |
| ಉಪ ವಿಭಾಗಾಧಿಕಾರಿ ಕಛೇರಿ, ಮಂಗಳೂರು | 1 | 1 | 0 |
| ಮಂಗಳೂರು ತಾಲ್ಲೂಕು | 13 | 12 | 1 |
| ಭಂಟ್ವಾಳ ತಾಲ್ಲೂಕು | 13 | 13 | 0 |
| ಉಪ ವಿಭಾಗಾಧಿಕಾರಿ ಕಛೇರಿ, ಪುತ್ತೂರು | 1 | 1 | 0 |
| ಪುತ್ತೂರು ತಾಲ್ಲೂಕು | 16 | 15 | 1 |
| ಬೆಳ್ತಂಗಡಿ ತಾಲ್ಲೂಕು | 13 | 11 | 2 |
| ಸುಳ್ಯ ತಾಲ್ಲೂಕು | 8 | 6 | 2 |
| **ಒಟ್ಟು** | **67** | **60** | **7** |
| **ಉಡುಪಿ ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 2 | 0 | 2 |
| ಉಪ ವಿಭಾಗಾಧಿಕಾರಿ ಕಛೇರಿ, ಕುಂದಾಪುರ | 1 | 0 | 1 |
| ಕುಂದಾಪುರ ತಾಲ್ಲುಕು | 16 | 14 | 2 |

| | | | |
|---|---|---|---|
| ಉಡುಪಿ ತಾಲ್ಲೂಕು | 19 | 17 | 2 |
| ಕಾರ್ಕಳ ತಾಲ್ಲೂಕು | 13 | 11 | 2 |
| **ಒಟ್ಟು** | **51** | **42** | **9** |
| **ಕೊಡಗು ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 2 | 1 | 1 |
| ಉಪ ವಿಭಾಗಾಧಿಕಾರಿ ಕಛೇರಿ, ಮಡಿಕೇರಿ | 1 | 0 | 1 |
| ಮಡಿಕೇರಿ ತಾಲ್ಲೂಕು | 11 | 9 | 2 |
| ಸೋಮವಾರಪೇಟೆ ತಾಲ್ಲೂಕು | 9 | 6 | 3 |
| ವಿರಾಜಪೇಟೆ ತಾಲ್ಲೂಕು | 13 | 13 | 0 |
| **ಒಟ್ಟು** | **36** | **29** | **7** |
| **ಮೈಸೂರು ವಿಭಾಗದ ಒಟ್ಟು** | **541** | **467** | **74** |
| **ಗುಲ್ಬರ್ಗಾ ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 2 | 2 | 0 |
| ಉಪ ವಿಭಾಗಾಧಿಕಾರಿ ಕಛೇರಿ, ಗುಲ್ಬರ್ಗಾ | 1 | 1 | 0 |
| ಗುಲ್ಬರ್ಗಾ ತಾಲ್ಲೂಕು | 13 | 13 | 0 |
| ಅಫಜಲ್‌ಪುರ ತಾಲ್ಲೂಕು | 8 | 7 | 1 |
| ಆಳಂದ ತಾಲ್ಲೂಕು | 12 | 10 | 2 |
| ಜೇವರ್ಗಿ ತಾಲ್ಲೂಕು | 9 | 7 | 2 |

| | | | |
|---|---|---|---|
| ಉಪವಿಭಾಗಾಧಿಕಾರಿ ಕಛೇರಿ ಸೇಡಂ | 0 | 0 | 0 |
| ಸೇಡಂ ತಾಲ್ಲೂಕು | 7 | 6 | 1 |
| ಚಿಂಚೋಳಿ ತಾಲ್ಲೂಕು | 6 | 5 | 1 |
| ಚಿತ್ತಾಪುರ ತಾಲ್ಲೂಕು | 5 | 4 | 1 |
| **ಒಟ್ಟು** | **63** | **55** | **8** |
| **ಯಾದಗಿರಿ ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 2 | 0 | 2 |
| ಉಪ ವಿಭಾಗಾಧಿಕಾರಿ ಕಛೇರಿ, ಯಾದಗೀರ | 0 | 0 | 0 |
| ಯಾದಗೀರ ತಾಲ್ಲೂಕು | 7 | 6 | 1 |
| ಶಹಾಪುರ ತಾಲ್ಲೂಕು | 5 | 5 | 0 |
| ಸುರಪುರ ತಾಲ್ಲೂಕು | 4 | 3 | 1 |
| **ಒಟ್ಟು** | **18** | **14** | **4** |
| **ರಾಯಚೂರು ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 1 | 1 | 0 |
| ಉಪ ವಿಭಾಗಾಧಿಕಾರಿ ಕಛೇರಿ, ರಾಯಚೂರು | 0 | 0 | 0 |
| ರಾಯಚೂರು ತಾಲ್ಲೂಕು | 5 | 4 | 1 |
| ಮಾನ್ವಿ ತಾಲ್ಲೂಕು | 6 | 5 | 1 |

| | | | |
|---|---|---|---|
| ಉಪವಿಭಾಗಾಧಿಕಾರಿ ಕಛೇರಿ ಲಿಂಗಸೂಗೂರು | 0 | 0 | 0 |
| ಲಿಂಗಸೂಗೂರು ತಾಲ್ಲೂಕು | 5 | 4 | 1 |
| ದೇವದುರ್ಗ ತಾಲ್ಲೂಕು | 6 | 5 | 1 |
| ಸಿಂಧನೂರು ತಾಲ್ಲೂಕು | 6 | 4 | 2 |
| **ಒಟ್ಟು** | **29** | **23** | **6** |
| **ಕೊಪ್ಪಳ ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 1 | 0 | 1 |
| ಉಪ ವಿಭಾಗಾಧಿಕಾರಿ ಕಛೇರಿ, ಕೊಪ್ಪಳ | 0 | 0 | 0 |
| ಕೊಪ್ಪಳ ತಾಲ್ಲೂಕು | 8 | 7 | 1 |
| ಗಂಗಾವತಿ ತಾಲ್ಲೂಕು | 4 | 3 | 1 |
| ಕುಷ್ಟಗಿ ತಾಲ್ಲೂಕು | 8 | 8 | 0 |
| ಯಲುಬುರ್ಗ ತಾಲ್ಲೂಕು | 8 | 7 | 1 |
| **ಒಟ್ಟು** | **29** | **25** | **4** |
| **ಬೀದರ್ ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 1 | 0 | 1 |
| ಉಪ ವಿಭಾಗಾಧಿಕಾರಿ ಕಛೇರಿ, ಬೀದರ್ | 1 | 1 | 0 |
| ಬೀದರ್ ತಾಲ್ಲೂಕು | 9 | 8 | 1 |

| | | | |
|---|---|---|---|
| ಔರಾದ ತಾಲ್ಲೂಕು | 8 | 7 | 1 |
| ಉಪವಿಭಾಗಾಧಿಕಾರಿ ಕಛೇರಿ ಬಸವಕಲ್ಯಾಣ | 0 | 0 | 0 |
| ಬಸವಕಲ್ಯಾಣ ತಾಲ್ಲೂಕು | 5 | 4 | 1 |
| ಭಾಲ್ಕೀ ತಾಲ್ಲೂಕು | 7 | 6 | 1 |
| ಹುಮನಾಬಾದ್ ತಾಲ್ಲೂಕು | 9 | 8 | 1 |
| **ಒಟ್ಟು** | **40** | **34** | **6** |
| **ಬಳ್ಳಾರಿ ಜಿಲ್ಲೆ** | | | |
| ಜಿಲ್ಲಾಧಿಕಾರಿ ಕಛೇರಿ | 1 | 0 | 1 |
| ಉಪ ವಿಭಾಗಾಧಿಕಾರಿ ಕಛೇರಿ, ಬಳ್ಳಾರಿ | 0 | 0 | 0 |
| ಬಳ್ಳಾರಿ ತಾಲ್ಲೂಕು | 12 | 11 | 1 |
| ಸಿರಗುಪ್ಪ ತಾಲ್ಲೂಕು | 7 | 6 | 1 |
| ಸಂಡೂರು ತಾಲ್ಲೂಕು | 7 | 6 | 1 |
| ಉಪವಿಭಾಗಾಧಿಕಾರಿ ಕಛೇರಿ ಹೊಸಪೇಟೆ | 0 | 0 | 0 |
| ಹೊಸಪೇಟೆ ತಾಲ್ಲೂಕು | 9 | 8 | 1 |
| ಹಡಗಲಿ ತಾಲ್ಲೂಕು | 5 | 4 | 1 |
| ಹಗರಿಬೊಮ್ಮನಹಳ್ಳಿ ತಾಲ್ಲೂಕು | 6 | 5 | 1 |
| ಕೂಡ್ಲಿಗಿ ತಾಲ್ಲೂಕು | 9 | 8 | 1 |

| | | | |
|---|---|---|---|
| **ಒಟ್ಟು** | **56** | **48** | **8** |
| **ಗುಲ್ಬರ್ಗಾ ವಿಭಾಗದ ಒಟ್ಟು** | **235** | **199** | **36** |

**ದಿನಾಂಕ: 22–11–2013 ರಂದು ಲಾಗಿನ್ ಚಾಲ್ತಿಯಲ್ಲಿರುವಂತೆ ರಾಜ್ಯದಲ್ಲಿ ಕೆಲಸ ನಿರ್ವಹಿಸುತ್ತಿರುವ ಪರವಾನಗಿ ಭೂಮಾಪಕರುಗಳ ತಾಲ್ಲೂಕುವಾರು ಪಟ್ಟಿ:–**

| **ಕ್ರಮ ಸಂಖ್ಯೆ** | **ತಾಲ್ಲೂಕು** | **ಕೆಲಸ ನಿರ್ವಹಿಸುತ್ತಿರುವ ಪರವಾನಗಿ ಭೂಮಾಪಕರ ಸಂಖ್ಯೆ** |
|---|---|---|
| 1 | ಉಡುಪಿ | 11 |
| 2 | ಕಾರ್ಕಳ | 8 |
| 3 | ಕುಂದಾಪುರ | 8 |
| 4 | ಬ್ರಹ್ಮಾವರ | 9 |
| 5 | ಬೈಂದೂರು | 2 |
| 6 | ಅಂಕೋಲ | 2 |
| 7 | ಕಾರವಾರ | 2 |
| 8 | ಕುಮಟಾ | 4 |
| 9 | ಜೋಯಿಡ | 1 |
| 10 | ಭಟ್ಕಳ | 3 |

| | | |
|---|---|---|
| 11 | ಮುಂಡಗೋಡ | 2 |
| 12 | ಯಲ್ಲಾಪುರ | 2 |
| 13 | ಸಿದ್ದಾಪುರ | 2 |
| 14 | ಸಿರ್ಸಿ | 3 |
| 15 | ಹಳಿಯಾಳ | 3 |
| 16 | ಹೊನ್ನಾವರ | 5 |
| 17 | ಮಡಿಕೇರಿ | 5 |
| 18 | ವಿರಾಜಪೇಟೆ | 8 |
| 19 | ಸೋಮವಾರಪೇಟೆ | 7 |
| 20 | ಕರಟಗಿ | 9 |
| 21 | ಕುಷ್ಟಗಿ | 14 |
| 22 | ಕೊಪ್ಪಳ | 22 |
| 23 | ಗಂಗಾವತಿ | 19 |
| 24 | ಯಲ್ಬುರ್ಗ | 15 |
| 25 | ಕೆ.ಜಿ.ಎಫ್ | 2 |
| 26 | ಕೋಲಾರ | 23 |
| 27 | ಬಂಗಾರಪೇಟೆ | 13 |
| 28 | ಮಾಲೂರು | 22 |
| 29 | ಮುಳಬಾಗಿಲು | 15 |

| | | |
|---|---|---|
| 30 | ಶ್ರೀನಿವಾಸಪುರ | 11 |
| 31 | ಗಜೇಂದ್ರಗಡ | 2 |
| 32 | ಗದಗ | 8 |
| 33 | ನರಗುಂದ | 3 |
| 34 | ಮುಂಡರಗಿ | 3 |
| 35 | ರೋಣ | 3 |
| 36 | ಲಕ್ಷ್ಮೇಶ್ವರ | 3 |
| 37 | ಶಿರಹಟ್ಟಿ | 3 |
| 38 | ಅಫ್ಜಲಪುರ | 10 |
| 39 | ಆಳಂದ | 8 |
| 40 | ಕಾಳಗಿ | 6 |
| 41 | ಗುಲ್ಬರ್ಗ | 6 |
| 42 | ಗುಲ್ಬರ್ಗ ಉತ್ತರ | 2 |
| 43 | ಚಿಂಚೋಳಿ | 10 |
| 44 | ಚಿತ್ತಾಪುರ | 8 |
| 45 | ಜೇವರ್ಗಿ | 4 |
| 46 | ಯಡ್ರಾಮಿ | 6 |
| 47 | ಸೇಡಂ | 10 |
| 48 | ಕೊಳ್ಳೇಗಾಲ | 6 |

| | | |
|---|---|---|
| 49 | ಗುಂಡ್ಲುಪೇಟೆ | 5 |
| 50 | ಚಾಮರಾಜನಗರ | 17 |
| 51 | ಯಳಂದೂರು | 4 |
| 52 | ಹನೂರು | 13 |
| 53 | ಗುಡಿಬಂಡೆ | 2 |
| 54 | ಗೌರಿಬಿದನೂರು | 33 |
| 55 | ಚಿಂತಾಮಣಿ | 16 |
| 56 | ಚಿಕ್ಕಬಳ್ಳಾಪುರ | 22 |
| 57 | ಬಾಗೇಪಲ್ಲಿ | 15 |
| 58 | ಶಿಡ್ಲಘಟ್ಟ | 14 |
| 59 | ಕಡೂರು | 15 |
| 60 | ಕೊಪ್ಪ | 1 |
| 61 | ಚಿಕ್ಕಮಗಳೂರು | 16 |
| 62 | ತರೀಕೆರೆ | 11 |
| 63 | ನರಸಿಂಹರಾಜಪುರ | 2 |
| 64 | ಮೂಡಿಗೆರೆ | 4 |
| 65 | ಶೃಂಗೇರಿ | 1 |
| 66 | ಚಳ್ಳಕೆರೆ | 9 |
| 67 | ಚಿತ್ರದುರ್ಗ | 11 |

| | | |
|---|---|---|
| 68 | ಮೊಳಕಾಲ್ಮೂರು | 2 |
| 69 | ಹಿರಿಯೂರು | 5 |
| 70 | ಹೊಸದುರ್ಗ | 10 |
| 71 | ಹೊಳಲ್ಕೆರೆ | 4 |
| 72 | ಕುಣಿಗಲ್ | 12 |
| 73 | ಕೊರಟಗೆರೆ | 19 |
| 74 | ಗುಬ್ಬಿ | 26 |
| 75 | ಚಿಕ್ಕನಾಯಕನಹಳ್ಳಿ | 14 |
| 76 | ತಿಪಟೂರು | 21 |
| 77 | ತುಮಕೂರು | 42 |
| 78 | ತುರುವೇಕೆರೆ | 14 |
| 79 | ಪಾವಗಡ | 14 |
| 80 | ಮಧುಗಿರಿ | 17 |
| 81 | ಸಿರಾ | 20 |
| 82 | ಕಡಬ | 3 |
| 83 | ಪುತ್ತೂರು | 11 |
| 84 | ಬಂಟ್ವಾಳ | 15 |
| 85 | ಬೆಳ್ತಂಗಡಿ | 6 |
| 86 | ಮಂಗಳೂರು | 11 |

| | | |
|---|---|---|
| 87 | ಮಂಗಳೂರು ನಗರಾಸ್ತಿ | 1 |
| 88 | ಮೂಡಬಿದರೆ | 5 |
| 89 | ಸುಳ್ಯ | 7 |
| 90 | ಚನ್ನಗಿರಿ | 16 |
| 91 | ಜಗಳೂರು | 3 |
| 92 | ದಾವಣಗೆರೆ | 18 |
| 93 | ಹರಪನಹಳ್ಳಿ | 11 |
| 94 | ಹರಿಹರ | 7 |
| 95 | ಹೊನ್ನಾಳಿ | 11 |
| 96 | ಕಲಘಟಗಿ | 5 |
| 97 | ಕುಂದಗೋಳ | 5 |
| 98 | ಧಾರವಾಡ | 15 |
| 99 | ಧಾರವಾಡ ನಗರಾಸ್ತಿ | 1 |
| 100 | ನವಲಗುಂದ | 8 |
| 101 | ಹುಬ್ಬಳ್ಳಿ | 14 |
| 102 | ಹುಬ್ಬಳ್ಳಿ ನಗರಾಸ್ತಿ | 1 |
| 103 | ಕುರುಗೋಡು | 11 |
| 104 | ಕೂಡ್ಲಿಗಿ | 17 |
| 105 | ಬಳ್ಳಾರಿ | 21 |

| | | |
|---|---|---|
| 106 | ಬಳ್ಳಾರಿ ನಗರಾಸ್ತಿ | 1 |
| 107 | ಸಂಡೂರು | 9 |
| 108 | ಸಿರಗುಪ್ಪ | 33 |
| 109 | ಹಗರಿ ಬೊಮ್ಮನಹಳ್ಳಿ | 18 |
| 110 | ಹಡಗಲಿ | 17 |
| 111 | ಹೊಸಪೇಟೆ | 12 |
| 112 | ಇಳಕಲ್ಲು | 2 |
| 113 | ಗುಳೇದಗುಡ್ಡ | 1 |
| 114 | ಜಮಖಂಡಿ | 10 |
| 115 | ಬಾಗಲಕೋಟೆ | 2 |
| 116 | ಬಾದಾಮಿ | 5 |
| 117 | ಬೀಳಗಿ | 2 |
| 118 | ಮುಧೋಳ | 6 |
| 119 | ಹುನಗುಂದ | 4 |
| 120 | ಇಂಡಿ | 6 |
| 121 | ಚಡಚಣ | 5 |
| 122 | ತಾಳಿಕೋಟೆ | 3 |
| 123 | ನಿಡಗುಂದಿ | 2 |
| 124 | ಬಬಲೇಶ್ವರ | 2 |

| | | |
|---|---|---|
| 125 | ಬಸವನ ಬಾಗೇವಾಡಿ | 4 |
| 126 | ಬಿಜಾಪುರ | 2 |
| 127 | ಮುದ್ದೇಬಿಹಾಳ | 3 |
| 128 | ಸಿಂಧಗಿ | 8 |
| 129 | ಔರಾದ್ | 10 |
| 130 | ಚಿಟಗುಪ್ಪ | 4 |
| 131 | ಬಸವಕಲ್ಯಾಣ | 12 |
| 132 | ಬೀದರ್ | 11 |
| 133 | ಭಾಲ್ಕಿ | 11 |
| 134 | ಹುಮ್ನಾಬಾದ್ | 11 |
| 135 | ದೇವನಹಳ್ಳಿ | 23 |
| 136 | ದೊಡ್ಡಬಳ್ಳಾಪುರ | 20 |
| 137 | ನೆಲಮಂಗಲ | 16 |
| 138 | ಹೊಸಕೋಟೆ | 26 |
| 139 | ಆನೇಕಲ್ | 16 |
| 140 | ಬೆಂಗಳೂರು ಉತ್ತರ | 6 |
| 141 | ಬೆಂಗಳೂರು ದಕ್ಷಿಣ | 21 |
| 142 | ಬೆಂಗಳೂರು ಪೂರ್ವ | 26 |
| 143 | ಯಲಹಂಕ | 6 |

| | | |
|---|---|---|
| 144 | ಅಥಣಿ | 9 |
| 145 | ಕಿತ್ತೂರು | 2 |
| 146 | ಖಾನಾಪುರ | 7 |
| 147 | ಗೋಕಾಕ್ | 8 |
| 148 | ಚಿಕ್ಕೋಡಿ | 11 |
| 149 | ನಿಪ್ಪಾಣಿ | 3 |
| 150 | ಬೆಳಗಾಂ | 10 |
| 151 | ಬೈಲಹೊಂಗಲ | 3 |
| 152 | ರಾಮದುರ್ಗ | 6 |
| 153 | ರಾಯಬಾಗ್ | 14 |
| 154 | ಸವದತ್ತಿ | 11 |
| 155 | ಹುಕ್ಕೇರಿ | 9 |
| 156 | ಕೆ.ಆರ್.ಪೇಟೆ | 14 |
| 157 | ನಾಗಮಂಗಲ | 6 |
| 158 | ಪಾಂಡವಪುರ | 14 |
| 159 | ಮಂಡ್ಯ | 10 |
| 160 | ಮದ್ದೂರು | 5 |
| 161 | ಮಳವಳ್ಳಿ | 10 |
| 162 | ಶ್ರೀರಂಗಪಟ್ಟಣ | 3 |

| | | |
|---|---|---|
| 163 | ಕೆ.ಆರ್.ನಗರ | 43 |
| 164 | ಟಿ. ನರಸೀಪುರ | 16 |
| 165 | ನಂಜನಗೂಡು | 40 |
| 166 | ಪಿರಿಯಾಪಟ್ಟಣ | 25 |
| 167 | ಮೈಸೂರು | 35 |
| 168 | ಮೈಸೂರು ನಗರಾಸ್ತಿ | 1 |
| 169 | ಹುಣಸೂರು | 27 |
| 170 | ಹೆಗ್ಗಡದೇವನಕೋಟೆ | 17 |
| 171 | ಗುರುಮಿಟ್ಕಲ್ | 5 |
| 172 | ಯಾದಗಿರ್ | 13 |
| 173 | ವಡಗೇರ | 3 |
| 174 | ಶಹಪುರ | 9 |
| 175 | ಶೋರಪುರ | 11 |
| 176 | ಹುಣಿಸಿಗಿ | 5 |
| 177 | ಕನಕಪುರ | 34 |
| 178 | ಚನ್ನಪಟ್ಟಣ | 19 |
| 179 | ಮಾಗಡಿ | 12 |
| 180 | ರಾಮನಗರ | 20 |
| 181 | ದೇವದುರ್ಗ | 13 |

| | | |
|---|---|---|
| 182 | ಮಸ್ಕಿ | 8 |
| 183 | ಮಾನ್ವಿ | 17 |
| 184 | ರಾಯಚೂರು | 15 |
| 185 | ಲಿಂಗಸೂಗೂರು | 13 |
| 186 | ಸಿಂಧನೂರು | 20 |
| 187 | ತೀರ್ಥಹಳ್ಳಿ | 4 |
| 188 | ಭದ್ರಾವತಿ | 7 |
| 189 | ಶಿಕಾರಿಪುರ | 5 |
| 190 | ಶಿವಮೊಗ್ಗ | 7 |
| 191 | ಶಿವಮೊಗ್ಗ ನಗರಾಸ್ತಿ | 1 |
| 192 | ಸಾಗರ | 6 |
| 193 | ಸೊರಬ | 5 |
| 194 | ಹೊಸನಗರ | 3 |
| 195 | ಬ್ಯಾಡಗಿ | 4 |
| 196 | ರಾಣಿಬೆನ್ನೂರು | 7 |
| 197 | ಶಿಗ್ಗಾಂವ್ | 4 |
| 198 | ಸವಣೂರು | 4 |
| 199 | ಹಾನಗಲ್ | 6 |
| 200 | ಹಾವೇರಿ | 8 |

| | | |
|---|---|---|
| 201 | ಹಿರೇಕೆರೂರು | 8 |
| 202 | ಅರಕಲಗೂಡು | 19 |
| 203 | ಅರಸೀಕೆರೆ | 22 |
| 204 | ಆಲೂರು | 5 |
| 205 | ಚನ್ನರಾಯಪಟ್ಟಣ | 40 |
| 206 | ಬೇಲೂರು | 15 |
| 207 | ಸಕಲೇಶಪುರ | 6 |
| 208 | ಹಾಸನ | 39 |
| 209 | ಹೊಳೆನರಸೀಪುರ | 18 |
| | **Grand Total** | **2202** |

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಗಳೆ, ರಾಜ್ಯದಲ್ಲಿ ಕಳೆದ 6 ತಿಂಗಳಲ್ಲಿ ಭೂ ಮಾಪನಕ್ಕೆ ಎಷ್ಟು ಅರ್ಜಿಗಳು ಬಂದಿವೆ, ಎಷ್ಟು ಅರ್ಜಿಗಳು ಇತ್ಯರ್ಥವಾಗಿವೆ ಎನ್ನುವುದನ್ನು ಕೇಳಿದ್ದೇನೆ. 1,73,079 ಭೂ ಮಾಪನಕ್ಕೆ ಬಂದಿರುವಂತಹ ಅರ್ಜಿಗಳು, ಅದರಲ್ಲಿ ಭೂ ಮಾಪನ ಆಗಿರುವುದು 1,18,645 ಅರ್ಜಿಗಳು, ಬಾಕಿ ಇರುವಂತಹ ಅರ್ಜಿಗಳು 54,434. ಈ ವಿಳಂಬವನ್ನು ತಪ್ಪಿಸಲು ಎಷ್ಟು ತಿಂಗಳ ಕಾಲಾವಕಾಶ ಬೇಕು ಎಂದು ಕೇಳಿದ್ದೇನೆ. ಅದಕ್ಕೆ ಸರ್ಕಾರದಿಂದ ಸ್ಪಷ್ಟವಾದ ಉತ್ತರ ಸಿಕ್ಕಿರುವುದಿಲ್ಲ.

**ಸಭಾಪತಿಯವರು:–** ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ ಎಂದು ಉತ್ತರದಲ್ಲಿ ಹೇಳಿದ್ದಾರೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಗಳೆ, ಪ್ರಶ್ನೆಯ ಉದ್ದೇಶ ಏನು ಇರುತ್ತದೆ ಎಂದರೆ, ರೈತರಿಗೆ ಅನಾನುಕೂಲವಾಗದಂತೆ ಸರ್ಕಾರ

ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ. ಅಲ್ಲಿ ಸಮಸ್ಯೆ ಇದೆ ಅದನ್ನು ಯಾವಾಗ ಬಗೆಹರಿಸುತ್ತೀರಿ ಎನ್ನುವುದನ್ನು ಹೇಳಬೇಕು.

**ಸಭಾಪತಿಯವರು:–** ಅವರು ಪ್ರಮಾಣಿಕವಾಗಿ ಹೇಳಿದರು. ಅವರನ್ನು ಮಂತ್ರಿಗಳು ಅಭಿನಂದಿಸಬೇಕು.

**ಶ್ರೀ ವಿ.ಶ್ರೀನಿವಾಸ ಪ್ರಸಾದ್:–** ಮಾನ್ಯ ಸಭಾಪತಿಗಳೆ, ಸಮಸ್ಯೆಯನ್ನು ಬಗೆಹರಿಸಲು ಎಷ್ಟು ತಿಂಗಳ ಸಮಯಾವಕಾಶ ಬೇಕಾಗುತ್ತದೆ ಎಂದು ಕೇಳಿದ್ದಾರೆ. ಇದು ತಿಂಗಳ ಪ್ರಶ್ನೆಯಲ್ಲ, ಎಷ್ಟು ಬೇಗ ಸಾಧ್ಯ ಅಷ್ಟು ಬೇಗ ಈ ಭೂಮಾನವನ್ನು ನಾವು ಮಾಡಿಕೊಡಬೇಕಾಗಿದೆ. ಅದಕ್ಕೆ ಬಹಳ ಸ್ಪಷ್ಟವಾದ ಉತ್ತರವನ್ನು ಕೊಟ್ಟಿದ್ದೇನೆ. ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಒಂದು ಅಥವಾ ಎರಡು ತಿಂಗಳು ಎಂದು ಹೇಳಲು ಆಗುವುದಿಲ್ಲ. ಒಂದು ತಿಂಗಳು ಆಗಬಹುದು, ಎರಡು ತಿಂಗಳು ಆಗಬಹುದು. ಅದಕ್ಕೆ ಇರುವ ಅಡ್ಡಿಗಳೇನು ಅದನ್ನು ಯಾವ ರೀತಿ ಸುಧಾರಣೆ ಮಾಡಬೇಕು ಎನ್ನುವುದನ್ನು ಉತ್ತರದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಅದನ್ನು ಮಾನ್ಯ ಸದಸ್ಯರು ಓದಿದ್ದಾರೆ. ಹಲವಾರು ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಉದಾಹರಣೆಗೆ, ಹಿಂದೆ ತಾಲ್ಲೂಕು ಕಛೇರಿಗೆ ಬಂದು ಅರ್ಜಿಯನ್ನು ಸಲ್ಲಿಸಬೇಕಾಗಿತ್ತು. ಈಗ ಹೋಬಳಿ ಮಟ್ಟದ ನಾಡಕಛೇರಿಯಲ್ಲಿಯೇ ಅರ್ಜಿಗಳನ್ನು ಸ್ವೀಕರಿಸಿ, ಅಂತಿವಾಗಿ ತಕ್ಷಣ ಅವುಗಳನ್ನು ನಾಡಕಛೇರಿಯಲ್ಲಿಯೇ ವಿತರಣೆ ಮಾಡುವ ಅವಕಾಶವನ್ನು ಮಾಡಿಕೊಡಲಾಗಿದೆ. ಬಹಳ ಮುಖ್ಯ ಸಮಸ್ಯೆ ಎಂದರೆ, ಸರ್ವೇಯರ್‌ಗಳ ಕೊರತೆ ಇತ್ತು. ಈಗ ಹೊಸದಾಗಿ 1869 ಜನ ಭೂ ಮಾಪಕರನ್ನು ನೇಮಕ ಮಾಡಿಕೊಂಡಿದ್ದೇವೆ. ಆರು ತಿಂಗಳ ಅವರ ತರಬೇತಿ ಮುಗಿದ ತಕ್ಷಣ ಅವರು ಸಾರ್ವಜನಿಕರ ಸೇವೆಗೆ ಸಿಗುತ್ತಾರೆ. ಪರವಾನಗಿ ಭೂಮಾಪನ ಶುಲ್ಕವನ್ನು ಹೆಚ್ಚು ಮಾಡಿರುವುದರಿಂದ ಇನ್ನು ಹೆಚ್ಚಿನ ಉತ್ಸಾಹದಿಂದ ಭೂ ಮಾಪನ ಕಾರ್ಯವನ್ನು ಅವರು ಮಾಡಿಕೊಡುತ್ತಾರೆ ಎನ್ನುವುದನ್ನು ಹೇಳಿದ್ದೇವೆ. ಇಲಾಖೆಗಳಲ್ಲಿ 100 ವರ್ಷಗಳಿಂದ ಇರುವ ದಾಖಲೆಗಳನ್ನು ಸಂರಕ್ಷಿಸುವ ಸಲುವಾಗಿ ದಾಖಲೆಗಳನ್ನು scan ಮಾಡುತ್ತಿದ್ದೇವೆ. ಇದೆ ರೀತಿ ಗಣಕೀಕರಣವನ್ನು ಮಾಡಲಾಗಿದೆ. ಈ ರೀತಿ

ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಸುಧಾರಣೆ ಮಾಡುತ್ತಾ, ಆದಷ್ಟು ಬೇಗ ಭೂಮಾಪನ ಮಾಡುವಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆ. ಈ ನಿಟ್ಟಿನಲ್ಲಿ ನಾವು ಕಾರ್ಯನಿರ್ವಹಿಸುತ್ತಿದ್ದೇವೆ.

**ಐಟಿಐ ಕಾಲೇಜುಗಳಿಗೆ ವೇತನಾನುದಾನ ಕುರಿತು**

**928, ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ)**

**ಅ)** ರಾಜ್ಯದಲ್ಲಿರುವ ಅನುದಾನರಹಿತ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಹೆಸರು, ವಿಳಾಸ ಸಹಿತ ಮಾಹಿತಿ ನೀಡುವುದು)

**ಆ)** ಸದರಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಬೋಧಕೇತರ ಸಂಖ್ಯೆ ಎಷ್ಟು? (ವಿವರ ಒದಗಿಸುವುದು)

**ಇ)** ಸದರಿ ಕಾಲೇಜುಗಳಿಗೆ ವೇತನಾನುದಾನ ನೀಡಲು ಸರ್ಕಾರ ಯೋಚಿಸುವುದೇ?

**ಈ)** ಸದರಿ ಕಾಲೇಜುಗಳಿಗೆ ವೇತನಾನುದಾನ ನೀಡಲು ಬೇಕಾಗುವ ಅಂದಾಜು ಮೊತ್ತವೆಷ್ಟು?

**ಉ)** ಯಾವ ಕಾಲಮಿತಿಯಲ್ಲಿ ವೇತನಾನುದಾನ ನೀಡಲಾಗುತ್ತದೆ?

**ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ(ಕಾರ್ಮಿಕ ರಾಜ್ಯ ಸಚಿವರು)**

**ಅ)** ಪ್ರಸ್ತುತ ರಾಜ್ಯದಲ್ಲಿ 1148 ಅನುದಾನ ರಹಿತ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. (ಜಿಲ್ಲಾವಾರು ವಿವರವನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗಿದೆ)

**ಆ)** ಸದರಿ ಕಾಲೇಜುಗಳಲ್ಲಿ 4787 ಬೋಧಕ 1626 ಬೋಧಕೇತರ ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿರುತ್ತಾರೆ. (ವಿವರಗಳನ್ನು ಮಾನ್ಯ ಸದಸ್ಯರಿಗೆ ಪ್ರತ್ಯೇಕ ಒದಗಿಸಲಾಗಿದೆ)

ಇ) 2010 ರಲ್ಲಿ ಸರ್ಕಾರವು 1997 ರ ಅನುದಾನ ಸಂಹಿತೆ ಅಡಿಯಲ್ಲಿ ನೀಡಲಾಗುತ್ತಿದ್ದ ಸಿಬ್ಬಂದಿ ಆಧಾರಿತ ವೇತನಾನುದಾನವನ್ನು ಇನ್ನು ಮುಂದೆ ಹೊಸ ಸಂಸ್ಥೆಗಳಿಗೆ ನೀಡುವುದಿಲ್ಲ ಬದಲಿಗೆ ವಿದ್ಯಾರ್ಥಿ ಕೇಂದ್ರೀಕೃತ ಅನುದಾನವನ್ನು ಜಾರಿ ಮಾಡಿ ಆದೇಶಿಸಿದೆ.

**ಈ)** ವಿದ್ಯಾರ್ಥಿ ಕೇಂದ್ರೀಕೃತ ಅನುದಾನ ನೀಡಲು ವಾರ್ಷಿಕವಾಗಿ ₹ 2055 ಲಕ್ಷ ಅನುದಾನದ ಅಗತ್ಯವಿರುತ್ತದೆ.

**ಉ)** ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲಾ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಗಳೆ, ಉತ್ತರವನ್ನು ಕೊಟ್ಟಿದ್ದಾರೆ, ಆದರೆ ಸದರಿ ಕಾಲೇಜುಗಳಿಗೆ ವೇತನಾನುದಾನವನ್ನು ಕೇಂದ್ರೀಕೃತವಾಗಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಇದನ್ನು ಯಾವಾಗ ಕೊಡಲಾಗುತ್ತದೆ ಎನ್ನುವುದಕ್ಕೆ ನಿರ್ಧಿಷ್ಟವಾಗಿ ಹೇಳಲು ಆಗುವುದಿಲ್ಲ ಎಂದು ಹೇಳಿದ್ದಾರೆ. ಆದರೆ ನಾನು ಕೇಳುವುದು, ಈ ಎಲ್ಲಾ ಕಾಲೇಜುಗಳಿಗೆ ದಯಮಾಡಿ 100ರಷ್ಟು ವೇತನಾನುದಾನವನ್ನು ಕೊಡಬೇಕು. ನಿರ್ದಿಷ್ಟ ಅವಧಿಯಲ್ಲಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು ಎನ್ನುವುದು ನನ್ನ ಒತ್ತಾಯ. ಕೇಂದ್ರೀಕೃತವಾಗಿ ಕೊಟ್ಟರೆ ಯಾವ ಶಿಕ್ಷಕರು ಕೆಲಸ ಮಾಡಲು ಆಗುವುದಿಲ್ಲ. 60% ವೇತನಾನುದಾನ ಇರುವುದನ್ನು 100% ನೀವೇ ಮಾಡಿದ್ದೀರಿ, ಅದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇವರಿಗೂ ಕೂಡಾ 100% ವೇತನಾನುದಾನವನ್ನು ವಿಸ್ತರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಪಿ.ಟಿ.ಪರಮೇಶ್ವರ ನಾಯಕ್:–** ಮಾನ್ಯ ಸಭಾಪತಿಗಳೆ, 2010ರಲ್ಲಿ 1967ರ ಅನುದಾನ ಸಂಹಿತೆ ಅಡಿಯಲ್ಲಿ ನೀಡಲಾಗುತ್ತಿದ್ದ ಸಿಬ್ಬಂದಿ ಆಧಾರಿತ ವೇತನಾನುದಾನವನ್ನು ಇನ್ನು ಮುಂದೆ ಹೊಸ ಸಂಸ್ಥೆಗಳಿಗೆ ಕೊಡಬಾರದು ಎಂದು ತೀರ್ಮಾನ ಮಾಡಿ, ಅದರ ಬದಲಿಗೆ ವಿದ್ಯಾರ್ಥಿ ಕೇಂದ್ರೀಕೃತ ಅನುದಾನವನ್ನು ಜಾರಿ ಮಾಡಿ ಆದೇಶ ಮಾಡಿರುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತಮ್ಮ ಮುಖಾಂತರ ತರಲು ಬಯಸುತ್ತೇನೆ. ಮಾನ್ಯ

ಪುಟ್ಟಣ್ಣನವರು ವಿದ್ಯಾರ್ಥಿ ಕೇಂದ್ರೀಕೃತ ಅನುದಾನ ಜಾರಿ ಮಾಡುವುದು ಅಷ್ಟು ಸಮಂಜಸವಲ್ಲ, ಅದನ್ನು ಮಾರ್ಪಾಡು ಮಾಡಬೇಕು, ವಿದ್ಯಾರ್ಥಿ ಹಿತದೃಷ್ಟಿಯಿಂದ ಮತ್ತು ಸಂಸ್ಥೆಯ ಹಿತದೃಷ್ಟಿಯಿಂದ ಹೊಸ ವ್ಯವಸ್ಥೆಯನ್ನು ಮಾಡಿ ಇದನ್ನು 100% grant in aidಗೆ ಒಳಪಡಿಸಿ ಎಂದು ಪ್ರಸ್ತಾಪ ಮಾಡಿದ್ದಾರೆ. ಆದರೆ ಸರ್ಕಾರ ಅನುದಾನಿತ ಮತ್ತು ಅನುದಾನ ರಹಿತ ಖಾಸಗಿ ಐಟಿಐ ಕಾಲೇಜುಗಳ ಸಮಗ್ರ ಅಧ್ಯಯನವನ್ನು ಮಾಡಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕು ಎಂದು ಮಾನ್ಯ ಪಿ.ಎಸ್.ಎಸ್.ಥಾಮಸ್‌ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮಾಡಿತ್ತು. ರಾಜ್ಯದಲ್ಲಿಯ ಖಾಸಗಿ ಮತ್ತು ಅನುದಾನಿತ ಐಟಿಐ ಕಾಲೇಜುಗಳ ಸ್ಥಿತಿ-ಗತಿಯನ್ನು ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸಬೇಕು ಎಂದು ಆದೇಶ ಮಾಡಿತ್ತು. ಸದರಿ ಸಮಿತಿಯು ಹಲವಾರು ಶಿಫಾರಸ್ಸುಗಳೊಂದಿಗೆ ಜೂನ್ 2007ರಲ್ಲಿ ತನ್ನ ವರದಿಯನ್ನು ಮಂಡನೆ ಮಾಡಿದೆ. ಆ ವರದಿಯಲ್ಲಿ 100% ವೇತನ, ವಿದ್ಯಾರ್ಥಿ ಕೇಂದ್ರೀಕೃತ ಅನುದಾನ ನೀಡಬೇಕು, ಪಿಂಚಣಿ ಇನ್ನಿತರ ಸೌಲಭ್ಯಗಳ ಬಗ್ಗೆ ಆರ್ಥಿಕ ಇಲಾಖೆಯ ಅಭಿಪ್ರಾಯ ಹಾಗೂ ಶಿಕ್ಷಣ ಇಲಾಖೆಯಲ್ಲಿರುವ ಮಾದರಿಯಲ್ಲಿಯೇ Triple Benefit Scheme ನಲ್ಲಿ ಪಿಂಚಣಿ ನೀಡುವ ಬಗ್ಗೆ ಪ್ರಸ್ತಾವನೆಯನ್ನು ಅರ್ಜಿ ಸಮಿತಿಯಲ್ಲಿ ಸೂಚಿಸಿರುವಂತೆ ಸಚಿವ ಸಂಪುಟದ ಮುಂದೆ ಮಂಡನೆ ಮಾಡಲಾಗುತ್ತದೆ. ಅನುದಾನ ಸಂಹಿತೆಗೆ ಪಿ.ಎಸ್.ಎಸ್.ಥಾಮಸ್ ಸಮಿತಿಯ ಶಿಫಾರಸ್ಸಿನಂತೆ ತಿದ್ದುಪಡಿ ತರಲು ಕ್ರಮ ಕೈಗೊಳ್ಳಲಾಗುತ್ತಿದೆ.

(11–30 ಗಂಟೆ)

ಇವತ್ತು ನಮಗೆ ವಿದ್ಯಾರ್ಥಿ ಕೇಂದ್ರೀಕೃತ ಅನುದಾನ ನೀಡಲು ವಾರ್ಷಿಕವಾಗಿ ₹ 2,055 ಲಕ್ಷಗಳ ಅಗತ್ಯತೆ ಇದೆ. ವೇತನಾನುದಾನಕ್ಕೆ ಒಳಪಡಿಸಲು 436 ಐಟಿಐ ಕಾಲೇಜುಗಳಿಗೆ ವಾರ್ಷಿಕವಾಗಿ ₹ 66–76 ಕೋಟಿಗಳ ಅವಶ್ಯಕತೆ ಇದೆ. ಆದ್ದರಿಂದ ಇದರ ಬಗ್ಗೆ ಪರಿಶೀಲನೆ ಮಾಡಿ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಹಿಂದಿನ ಸದನದಲ್ಲಿ ಈ ವಿಚಾರದ ಬಗ್ಗೆ ಮಾನ್ಯ ನಾರಾಯಣಸ್ವಾಮಿಯವರು, ಶ್ರೀ ಪುಟ್ಟಣ್ಣನವರು,

ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಹಾಗೂ ಶ್ರೀ ಬಸವರಾಜ ಹೊರಟ್ಟಿಯವರು ವಿಸ್ತೃತವಾಗಿ ಚರ್ಚೆ ಮಾಡಿ, ಸಾಕಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ಇವರೆಲ್ಲರನ್ನೂ ಆಹ್ವಾನ ಮಾಡಿ, ಪ್ರತ್ಯೇಕ ಸಭೆಯನ್ನು ಮಾಡುತ್ತೇನೆ. ಈಗಾಗಲೇ ಇವರೆಲ್ಲರ ಸಲಹೆಗಳನ್ನು ಪಡೆದುಕೊಂಡಿದ್ದೇನೆ. ಇದರ ಬಗ್ಗೆ ಸಚಿವ ಸಂಪುಟಕ್ಕೆ ಶಿಫಾರಸ್ಸನ್ನು ಮಾಡಿದ್ದೇನೆ. ಸಚಿವ ಸಂಪುಟದಲ್ಲಿ ವಿಸ್ತೃತವಾದ ಚರ್ಚೆಯಾದ ಮೇಲೆ ಇವತ್ತು ಸಲಹೆ ಮಾಡಿರುವ ಸದಸ್ಯರ ಸಲಹೆಗಳನ್ನು ಪರಿಶೀಲನೆ ಮಾಡುತ್ತೇನೆ ಎಂದು ಹೇಳುತ್ತೇನೆ.

**ಕಾರ್ಮಿಕರ ಕಲ್ಯಾಣ ಕಾರ್ಯಗಳ ಕುರಿತು**

**835, ಶ್ರೀ ಎಂ.ಆರ್.ಹುಲಿನಾಯ್ಕರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಕಾರ್ಮಿಕ ಮಂಡಳಿಯಲ್ಲಿ ನೋಂದಾಯಿಸಿದ ಕಾರ್ಮಿಕರ ಸಂಖ್ಯೆ ಎಷ್ಟು?

ಆ) ಅವರಿಗೆ ಮಂಡಳಿಯಿಂದ ಸಿಗುವ ಅನುಕೂಲಗಳೇನು?

ಇ) ವೈದ್ಯಕೀಯ ವೆಚ್ಚ ಭರಿಸಲು ಇಎಸ್‌ಐ ಆಸ್ಪತ್ರೆ ಅಲ್ಲದೆ, ಬೇರೆ ವ್ಯವಸ್ಥೆ ಇದೆಯೇ?

**ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ(ಕಾರ್ಮಿಕ ರಾಜ್ಯ ಸಚಿವರು)**

ಅ) ಇಲಾಖೆಯಲ್ಲಿ ಈ ಕೆಳಕಂಡ ಕಲ್ಯಾಣ ಮಂಡಳಿಗಳು ಕೆಲಸ ಮಾಡುತ್ತಿದ್ದು, ನೋಂದಾಯಿಸಿದ ಕಾರ್ಮಿಕರ ಸಂಖ್ಯೆ ಈ ರೀತಿ ಇದೆ.

**1. ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:**

**ನೋಂದಾಯಿಸಿದ ಕಾರ್ಮಿಕರ ಸಂಖ್ಯೆ:**

ಅ) ಎನ್‌ಪಿಎಸ್ ಲೈಟ್–ಸ್ವಾವಲಂಭನ್ ಪಿಂಚಣಿ ಯೋಜನೆಯಡಿ–ಈವರೆಗೆ 15,302 ಕಾರ್ಮಿಕರು ನೋಂದಣಿಯಾಗಿರುತ್ತಾರೆ.

ಆ) ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆಯಡಿ–ಈವರೆಗೆ 1,34,075 ಕಾರ್ಮಿಕರು ನೋಂದಣಿಯಾಗಿರುತ್ತಾರೆ.

ಇ) ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ನೋಂದಾಯಿಸಿದ ಕಾರ್ಮಿಕರ ಸಂಖ್ಯೆ: 3,32,467

ಈ) **ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ:** ಈ ಮಂಡಳಿಯಲ್ಲಿ ಕಾರ್ಮಿಕರು ನೋಂದಣಿ ಆಗುವುದಿಲ್ಲ. ಆದರೆ ಈ ಯೋಜನೆ ಅಡಿಯಲ್ಲಿ ಅರ್ಹ ಕಾರ್ಮಿಕರು ಮತ್ತು ಅವರ ಅವಲಂಬಿತರು ಸೌಲಭ್ಯವನ್ನು ಪಡೆದುಕೊಳ್ಳುತ್ತಾರೆ.

**ಆ) 1) ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ವತಿಯಿಂದ:**

ಅ) ಎನ್.ಪಿ.ಎಸ್ ಲೈಟ್–ಸ್ವಾವಲಂಭನ್ ಪಿಂಚಣಿ ಯೋಜನೆಯನ್ವಯ ವಾರ್ಷಿಕ ಕನಿಷ್ಠ ₹ 1,200/– ವಂತಿಕೆ ಪಾವತಿ ಮಾಡುವ ವಂತಿಕೆದಾರರಿಗೆ ರಾಜ್ಯ ಸರ್ಕಾರವು ವಾರ್ಷಿಕ ಗರಿಷ್ಠ ₹ 1,200/– ಸಮಾನಾಂತರ ವಂತಿಕೆಯನ್ನು (Matching Countribution) ಪಾವತಿಸುತ್ತಿದೆ. ಅದೇ ರೀತಿ ಪ್ರತಿ ವರ್ಷ ಕನಿಷ್ಠ ₹ 1,000/– ಗಳನ್ನು ಪಾವತಿಸುವ ವಂತಿಕೆದಾರರು ಕೇಂದ್ರದ ಸ್ವಾವಲಂಭನ್ ಯೋಜನೆಯಿಂದ ಪ್ರತಿ ವರ್ಷ ಗರಿಷ್ಠ ₹ 1,000/– ವಂತಿಕೆ ಪಡೆಯಲು ಅರ್ಹರಾಗಿರುತ್ತಾರೆ. ಫಲಾನುಭವಿಗೆ 60 ವರ್ಷ ತುಂಬಿದ

ನಂತರ ಮಾಸಿಕ ಪಿಂಚಣಿ ಪಡೆಯಲು ಅವಕಾಶವಿರುತ್ತದೆ. ಫಲಾನುಭವಿಯು 60 ವರ್ಷ ಪೂರೈಸಿದಾಗ ಆತನ ಪ್ರಾನ್ (PRAN) ಖಾತೆಯಲ್ಲಿ ಸಂಗ್ರಹವಾದ ಮೊತ್ತದ ಶೇ.60ನ್ನು ನಗದು ರೂಪದಲ್ಲಿ ಪಡೆಯಬಹುದಾಗಿದ್ದು ಬಾಕಿ ಶೇ.40ನ್ನು ಲೆಕ್ಕಹಾಕಿ ಮಾಸಿಕ ಪಿಂಚಣಿಯನ್ನು ನಿಗಧಿಗೊಳಿಸಲಾಗುವುದು. ವಂತಿಕೆದಾರನು/ಳು ಇಚ್ಛಿಸಿದ್ದಲ್ಲಿ ಸಂಗ್ರಹವಾದ ಸಂಪೂರ್ಣ ಮೊತ್ತವನ್ನು ಪಿಂಚಣಿಗಾಗಿ ಠೇವಣಿ ಮಾಡಲು ಅವಕಾಶವಿರುತ್ತದೆ.

ಆ) ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆ – ಈ ಯೋಜನೆ ಅಡಿಯಲ್ಲಿ ನೋಂದಾಯಿತ ಚಾಲಕರು ಕರ್ತವ್ಯದಲ್ಲಿರುವಾಗ ಅಥವಾ ಕರ್ತವ್ಯದಲ್ಲಿಲ್ಲದಿರುವಾಗ ಅಪಘಾತಕ್ಕೀಡಾಗಿ ಮರಣ ಹೊಂದಿದಲ್ಲಿ/ಶಾಶ್ವತ ದುರ್ಬಲತೆ ಉಂಟಾದಲ್ಲಿ, ಚಾಲಕನ ನಾಮನಿರ್ದೇಶಿತರಿಗೆ/ಚಾಲಕನಿಗೆ ₹ 2 ಲಕ್ಷ ವಿಮಾ ಪರಿಹಾರ ದೊರಕಲಿದೆ.

ಚಾಲಕನಿಗೆ ತಾತ್ಕಾಲಿಕವಾಗಿ ದುರ್ಬಲತೆ ಹೊಂದಿದಲ್ಲಿ ಆಸ್ಪತ್ರೆಯ ವೆಚ್ಚವು ಸೇರಿದಂತೆ ಗರಿಷ್ಠ ₹ 1 ಲಕ್ಷದವರೆಗೆ ವಿಮಾ ಸೌಲಭ್ಯ ಪಡೆಯಲು ಅರ್ಹರಾಗುತ್ತಾರೆ.

ಇ) **ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ**

ಕಟ್ಟಡ ಕಾರ್ಮಿಕರಿಗೆ ಹಾಗೂ ಅವರ ಅವಲಂಬಿತರಿಗೆ ಮಂಡಳಿಯಿಂದ 12 ರೀತಿಯ ಕಲ್ಯಾಣ ಯೋಜನೆಗಳನ್ನು ರೂಪಿಸಿದೆ. ವಿವರಗಳನ್ನು ಅನುಬಂಧ–1ರಲ್ಲಿ ಒದಗಿಸಲಾಗಿದೆ.

ಈ) **ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ:** ಮಂಡಳಿಗೆ ವಂತಿಕೆ ಪಾವತಿ ಮಾಡುವ ಸಂಸ್ಥೆಗಳು ಮತ್ತು ಆ ಸಂಸ್ಥೆಯ ಕಾರ್ಮಿಕರು ಅನುಕ್ರಮವಾಗಿ ವಾರ್ಷಿಕ 12 ಮತ್ತು 6 ರೂಪಾಯಿಗಳನ್ನು ವಂತಿಕೆ ಆಗಿ ಪಾವತಿ ಮಾಡುತ್ತಾರೆ. ಸರ್ಕಾರ ಸಮಾನಾಂತರ ವಂತಿಕೆಯಾಗಿ ಪ್ರತಿ ಕಾರ್ಮಿಕನಿಗೆ ₹ 6/– ವಂತಿಕೆಯನ್ನು ಮಂಡಳಿಗೆ ನೀಡುತ್ತದೆ. ಮಂಡಳಿಯಲ್ಲಿ ಈ ಕೆಳಗಿನ ಯೋಜನೆಗಳು ಜಾರಿಯಲ್ಲಿವೆ.

1) ವಿದ್ಯಾರ್ಥಿ ವೇತನ

2) ಕಾರ್ಮಿಕರಿಗೆ ವೈದ್ಯಕೀಯ ನೆರವು

3) ಗಣಕ ಯಂತ್ರ ತರಬೇತಿ

4) ಅಂಗವಿಕಲ ಕಾರ್ಮಿಕರಿಗೆ ಮೂರು ಚಕ್ರ ಸೈಕಲ್ ಖರೀದಿಸಲು ಧನ ಸಹಾಯ

5) ಕಾರ್ಮಿಕರಿಗೆ ಅಪಘಾತ ಧನ ಸಹಾಯ

6) ವಾರ್ಷಿಕ ವೈದ್ಯಕೀಯ ಶಿಬಿರ ನಡೆಸುವ ಟ್ರೇಡ್ ಯೂನಿಯನ್ ಸಂಸ್ಥೆಗೆ ಧನ ಸಹಾಯ

7) ವಾರ್ಷಿಕ ಕ್ರೀಡಾ ಚಟುವಟಿಕೆಗೆ ಹಮ್ಮಿಕೊಳ್ಳುವ ನೊಂದಾಯಿತ ಕಾರ್ಮಿಕ ಸಂಘಗಳಿಗೆ ಧನ ಸಹಾಯ.

8) ಮೃತ ಕಾರ್ಮಿಕರ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ

9) ಹಿಮೋಫಿಲಿಯಾ ಖಾಯಿಲೆಯಿಂದ ಬಳಲುತ್ತಿರುವ ಕಾರ್ಮಿಕರಿಗೆ ನೊಂದಾಯಿತ ಹಿಮೋಫಿಲಿಯಾ

ಸೊಸೈಟಿಗಳಿಂದ ಚಿಕಿತ್ಸೆ ನೀಡುವ ಸಂಸ್ಥೆಗಳಿಗೆ ಧನ ಸಹಾಯ.

10) ಕಡಿಮೆ ವೆಚ್ಚದಲ್ಲಿ ಕಾರ್ಮಿಕರು ಮತ್ತು ಅವಲಂಬಿತರು ಮದುವೆ ಮತ್ತು ಇನ್ನಿತರೆ ಸಮಾರಂಭಗಳನ್ನು ನಡೆಸಲು ಸಮುದಾಯ ಭವನದ ವ್ಯವಸ್ಥೆ.

ಉ) **ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ:**

ಈ ಯೋಜನೆಯಡಿ ಸ್ಮಾರ್ಟ್‌ಕಾರ್ಡ್‌ಗಳನ್ನು ಪಡೆದ ಫಲಾನುಭವಿ ಕುಟುಂಬದವರಿಗೆ ಒಂದು ವರ್ಷಕ್ಕೆ ಗರಿಷ್ಠ ₹ 30,000/–ವರೆಗೆ ನಿಗದಿತ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸಾ ಸೌಲಭ್ಯ ದೊರಕಲಿದೆ.

- ಶಸ್ತ್ರಚಿಕಿತ್ಸೆ ಸೇರಿದಂತೆ 1,090ಕ್ಕೂ ಹೆಚ್ಚು ಚಿಕಿತ್ಸಾ ಕ್ರಮಗಳಿಗೆ ಉಚಿತ ಚಿಕಿತ್ಸೆ.
- ಆಸ್ಪತ್ರೆಗೆ ದಾಖಲಾಗುವ ಫಲಾನುಭವಿಗೆ ಗುರುತಿಸಲಾದ ಆಸ್ಪತ್ರೆಗಳಲ್ಲಿ ಪ್ರತಿ ಚಿಕಿತ್ಸೆಗೆ ₹ 100/– ರಂತೆ ವಾರ್ಷಿಕ ₹ 1,000/– ಗಳನ್ನು ಮೀರದಂತೆ ಪ್ರಯಾಣ ವೆಚ್ಚ ನೀಡಲಾಗುವುದು.
- ಈಗಾಗಲೇ ಅಸ್ತಿತ್ವದಲ್ಲಿರುವ ಎಲ್ಲಾ ಖಾಯಿಲೆಗಳು (pre-existing diseases) ಮತ್ತು ಹೆರಿಗೆ ಚಿಕಿತ್ಸೆ ವೆಚ್ಚ ಹಾಗೂ ವಿಮಾ ಅವಧಿಯಲ್ಲಿ ಜನಿಸುವ ಶಿಶುಗಳಿಗೂ ಸಹ ಉಚಿತ ವಿಮಾ ಸೌಲಭ್ಯ ದೊರಕಲಿದೆ.
- ಒಂದೇ ಕುಟುಂಬದ ಸದ್ಯರು ಬೇರೆ ಬೇರೆ ಸ್ಥಳಗಳಲ್ಲಿ ವಾಸವಿದ್ದಲ್ಲಿ, ಅಂತಹ ಸಂದರ್ಭದಲ್ಲಿ ₹ 30,000/– ಮೀರದಂತೆ, ಹೆಚ್ಚುವರಿಯಾಗಿ

ಮತ್ತೊಂದು ಕಾರ್ಡ್ (split card) ನೀಡಲು ಅವಕಾಶವಿದೆ.

- ದೇಶದಾದ್ಯಂತ ನೊಂದಾಯಿತ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಸೌಲಭ್ಯ ಲಭ್ಯ.

ಇ) **ವೈದ್ಯಕೀಯ ವೆಚ್ಚ ಭರಿಸಲು ಇ.ಎಸ್.ಐ. ಆಸ್ಪತ್ರೆ ಅಲ್ಲದೆ ಬೇರೆ ವೈದ್ಯಕೀಯ ವ್ಯವಸ್ಥೆ ಈ ಕೆಳಕಂಡಂತಿದೆ;**

ಅ) **ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:–** ಈ ಮಂಡಳಿ ಅಡಿಯಲ್ಲಿ ಜಾರಿ ಮಾಡಿರುವ ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆ ಅಡಿಯಲ್ಲಿ ಖಾಸಗಿ ವಾಣಿಜ್ಯ ವಾಹನಗಳಾದ ಆಟೋ, ಟ್ಯಾಕ್ಸಿ, ಮ್ಯಾಕ್ಸಿ ಕ್ಯಾಬ್, ಬಸ್ ಮತ್ತು ಲಾರಿ ಚಾಲಕರು ಅಪಘಾತದಿಂದ ತಾತ್ಕಾಲಿಕ ದುರ್ಬಲತೆ ಹೊಂದಿದಲ್ಲಿ, ಯಾವುದೇ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಪಡೆದ ಚಿಕಿತ್ಸೆಗೆ ಗರಿಷ್ಠ ₹ 1 ಲಕ್ಷದವರೆಗೆ ಹಿಂಪಡೆಯಲು ಅವಕಾಶವಿರುತ್ತದೆ.

**ಆ)** ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಾಯಿತರಾದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಎರಡು ವಿಧದಲ್ಲಿ ವೈದ್ಯಕೀಯ ವೆಚ್ಚವನ್ನು ಪಡೆಯುತ್ತಾರೆ.

1. ಒಳರೋಗಿಯಾಗಿ ಸರ್ಕಾರಿ/ಅನುಮೋದಿತ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳುವುದಕ್ಕೆ ₹ 400 ರಿಂದ ₹ 600 ರವರೆಗೆ ಧನಸಹಾಯವನ್ನು ಪಾವತಿಸಲಾಗುತ್ತಿದೆ.
2. ಪ್ರಮುಖ ಖಾಯಿಲೆಗಳಾದ ಹೃದ್ರೋಗ, ಕಿಡ್ನಿ ಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮ ಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದ ತೊಂದರೆಗೆ

ಸಂಬಂಧಿತ ಚಿಕಿತ್ಸೆ, ಮೂತ್ರಪಿಂಡದಲ್ಲಿನ ಕಲ್ಲು ತೆಗೆಯುವ ಚಿಕಿತ್ಸೆ, ಮೆದುಳಿನ ರಕ್ತಸ್ರಾವದ ಚಿಕಿತ್ಸೆ, ಅಲ್ಸರ್ ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿ ಶಸ್ತ್ರ ಚಿಕಿತ್ಸೆ, ಇ.ಎನ್.ಟಿ. ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯೂಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ಡಿಸ್‌ಲೊಕೇಶನ್ ಚಿಕಿತ್ಸೆ, ಸಾಮಾನ್ಯ ಶಸ್ತ್ರಚಿಕಿತ್ಸೆ, ಇವುಗಳ ಚಿಕಿತ್ಸೆ/ಶಸ್ತ್ರ ಚಿಕಿತ್ಸೆಗಾಗಿ ₹ 2,00,000/- ದವರೆಗೆ ವೈದ್ಯಕೀಯ ಧನಸಹಾಯ ದೊರಕುತ್ತದೆ.

ಇ) **ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಗೆ** ವಂತಿಕೆ ಪಾವತಿಸುವ ಕಾರ್ಮಿಕರಿಗೆ ವೈದ್ಯಕೀಯ ನೆರವು ಯೋಜನೆ ಅಡಿಯಲ್ಲಿ ಕನಿಷ್ಠ ₹ 1,000/- ಗಳಿಂದ ಗರಿಷ್ಠ ₹ 10,000/- ಗಳ ವರೆಗೆ ಧನ ಸಹಾಯ ನೀಡಲಾಗುವುದು.

**ಈ)** ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ ಅಡಿಯಲ್ಲಿ ಸ್ಮಾರ್ಟ್‌ಕಾರ್ಡ್ ಪಡೆದ ಕುಟುಂಬದ ಸದಸ್ಯರು ಎಂಪ್ಯಾನೆಲ್ ಆದ 216 ಸರ್ಕಾರಿ ಆಸ್ಪತ್ರೆಗಳೂ ಸೇರಿದಂತೆ ಒಟ್ಟು 640 ಆಸ್ಪತ್ರೆಗಳಲ್ಲಿ ಉಚಿತವಾಗಿ, ವಾರ್ಷಿಕ ಗರಿಷ್ಠ ₹ 30,000/- ದ ವರೆಗೆ ಉಚಿತ ಚಿಕಿತ್ಸೆ ಸೌಲಭ್ಯವನ್ನು ಪಡೆಯಬಹುದು.

## ಅನುಬಂಧ-1

### ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಮಂಡಳಿಯಲ್ಲಿ ನೋಂದಾಯಿಸಿದ ತಕ್ಷಣ ಫಲಾನುಭವಿಗೆ ಸಿಗುವ ಸೌಲಭ್ಯಗಳು:

**1.** **ಒಳರೋಗಿ ಧನಸಹಾಯ:** ಸರ್ಕಾರಿ ಮತ್ತು ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಗಳಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದುದಕ್ಕೆ ₹ 400-00 ರಿಂದ ₹ 6,000-00 ವರೆಗೆ.

2. **ಅಪಘಾತ ಪರಿಹಾರ:** ಫಲಾನುಭವಿಯು ಕೆಲಸ ಮಾಡುತ್ತಿದ್ದ ಸಮಯದಲ್ಲಿ ಮತ್ತು ಕೆಲಸದ ಸ್ಥಳದಿಂದ ಮನೆಗೆ ಹೋಗುವಾಗ ಅಥವಾ ಮನೆಯಿಂದ ಕೆಲಸಕ್ಕೆ ಹೋಗುವ ಮಾರ್ಗದ ಮಧ್ಯದಲ್ಲಿ ಅಪಘಾತಕ್ಕೀಡಾಗಿ ತೀರಿಕೊಂಡಲ್ಲಿ, ಅವರ ಅವಲಂಬಿತರು ಅಥವಾ ಫಲಾನುಭವಿಯು ಸಂಪೂರ್ಣ ಶಾಶ್ವತ ದುರ್ಬಲತೆಗೊಂಡಲ್ಲಿ ₹ 2,00,000–00. ಅರ್ಹರಾಗುವರು.

   **ಭಾಗಶಃ ಶಾಶ್ವತ ಅಂಗವಿಕಲರಾದಲ್ಲಿ,** ಅಂಗವಿಕಲತೆಯ ಶೇಕಡವಾರು ಅನುಪಾತಕ್ಕನುಗುಣವಾಗಿ ಪರಿಹಾರಕ್ಕೆ ಅರ್ಹರು. (ಉದಾ: ಶೇ. 40 ಅಂಗವಿಕಲತೆ ಉಂಟಾದಲ್ಲಿ ಅಂಥ ಫಲಾನುಭವಿಯು ₹ 80,000–00 ಪರಿಹಾರಕ್ಕೆ ಅರ್ಹರು).

3. **ಪ್ರಮುಖ ಖಾಯಿಲೆಗಳ ಚಿಕಿತ್ಸೆಗೆ:** ಹೃದಯ ಶಸ್ತ್ರಚಿಕಿತ್ಸೆ, ಕಿಡ್ನಿ ಜೋಡಣೆ, ಕಣ್ಣಿನ ಆಪರೇಷನ್, ಪಾರ್ಶ್ವವಾಯು ಚಿಕಿತ್ಸೆ, ಮೂಳೆ ಆಪರೇಷನ್, ಗರ್ಭಕೋಶದ ಆಪರೇಷನ್ಸ್, ಅಸ್ತಮ ಚಿಕಿತ್ಸೆ, ಗರ್ಭಪಾತದ ಪ್ರಕರಣಗಳು, ಪಿತ್ತಕೋಶದ ತೊಂದರೆ ಚಿಕಿತ್ಸೆ, ಮೂತ್ರಪಿಂಡದಲ್ಲಿನ ಕಲ್ಲು ತೆಗೆಯವುದು, ಮೆದುಳಿನ ರಕ್ತಸ್ರಾವದ ಚಿಕಿತ್ಸೆ, ಅಲ್ಸರ್ ಚಿಕಿತ್ಸೆ, ಕ್ಯಾನ್ಸರ್ ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿ ಸಂಬಂಧಿತ ಶಸ್ತ್ರಚಿಕಿತ್ಸೆ, ಇ.ಎನ್.ಟಿ. ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯೂಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಸೈಟಿಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ಡಿಸ್‌ಲೊಕೇಶನ್ ಚಿಕಿತ್ಸೆ ಮತ್ತು ಸಾಮಾನ್ಯ ಶಸ್ತ್ರಚಿಕಿತ್ಸೆಗೆ **₹ 2,00,000/– ದವರೆಗೆ ಧನಸಹಾಯ.**

4. **ಅಂಗವಿಕಲತೆ ಪಿಂಚಣಿ:** ಕುಷ್ಠರೋಗ, ಕ್ಯಾನ್ಸರ್, ಪಾರ್ಶ್ವವಾಯು, ಟಿ.ಬಿ. ಕಾಯಿಲೆಗಳಿಂದ ಶಾಶ್ವತ ದುರ್ಬಲತೆ ಹೊಂದಿದಲ್ಲಿ ಮಾಸಿಕ ₹ 500–00 ವರೆಗೆ ಎಕ್ಸ್‌ಗ್ರೇಷಿಯಾ ಧನಸಹಾಯ.

5. **ಅಂತ್ಯಕ್ರಿಯೆ ಹಾಗೂ ಅನುಗ್ರಹ ರಾಶಿ:** ಮೃತನ ಕುಟುಂಬಕ್ಕೆ ಅಂತ್ಯಕ್ರಿಯೆಗಾಗಿ ₹ 4,000–00 ಮತ್ತು ಅನುಗ್ರಹ ರಾಶಿ ₹ 50,000–00.

**ಒಂದು ವರ್ಷ ಸದಸ್ಯತ್ವ ಪೂರ್ಣಗೊಂಡ ಫಲಾನುಭವಿಗೆ ದೊರಕುವ ಸೌಲಭ್ಯಗಳು:**

6. **ಹೆರಿಗೆ ಸೌಲಭ್ಯ:** ಮಹಿಳಾ ಫಲಾನುಭವಿಗೆ ಮೊದಲ ಎರಡು ಹೆರಿಗೆಗಳಿಗೆ–**₹ 15,000–00**.

7. **ಶೈಕ್ಷಣಿಕ ಧನಸಹಾಯ:** [**ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸೀಮಿತ**].

   i) 5, 6 ಹಾಗೂ 7ನೇ ತರಗತಿಯಲ್ಲಿ ಓದುತ್ತಿರುವವರಿಗೆ ಪ್ರತಿ ವರ್ಷಕ್ಕೆ ₹ 2,000–00

   ii) 8 ಹಾಗೂ 9ನೇ ತರಗತಿ ಓದುತ್ತಿರುವವರಿಗೆ ಪ್ರತಿ ವರ್ಷಕ್ಕೆ ₹ 3,000–00.

   iii) ಎಸ್.ಎಸ್.ಎಲ್.ಸಿ. ಓದುತ್ತಿರುವವರಿಗೆ ₹ 5,000–00.

   iv) ಪ್ರಥಮ ಅಥವಾ ದ್ವಿತೀಯ ಪಿ.ಯು.ಸಿ. ಉತ್ತೀರ್ಣರಾದವರಿಗೆ ಪ್ರತಿ ವರ್ಷಕ್ಕೆ ₹ 5,000–00.

   v) ಐಟಿಐ/ಡಿಪ್ಲೋಮಾ ಓದುತ್ತಿರುವವರಿಗೆ ₹ 5,000–00.

   vi) ಪದವಿ ಓದುತ್ತಿರುವವರಿಗೆ ಪ್ರತಿ ವರ್ಷಕ್ಕೆ ₹ 5,000–00.

   vii) ಸ್ನಾತಕೋತ್ತರ ಪದವಿ ಓದುತ್ತಿರುವವರಿಗೆ ಪ್ರತಿ ವರ್ಷಕ್ಕೆ ₹ 15,000–00.

   viii) ವೈದ್ಯಕೀಯ / ಇಂಜಿನಿಯರಿಂಗ್ ಪದವಿ ಓದುತ್ತಿರುವವರಿಗೆ ಸರ್ಕಾರುವ ಅರ್ಹತೆಯ ಸ್ಥಾನಕ್ಕೆ ನಿಗದಿಪಡಿಸಿದ ಶುಲ್ಕ ಪಾವತಿ ಮತ್ತು ಪ್ರತಿ ತಿಂಗಳಿಗೆ ₹ 1,000–00 ಗಳ ಹಾಜರಾತಿ ಭತ್ಯೆ.

**8**. **ಮದುವೆಗೆ:** ಫಲಾನುಭವಿಗೆ ಅಥವಾ ಅವರ ಇಬ್ಬರು ಮಕ್ಕಳಿಗೆ ₹ 50,000–00.

**ಎರಡು ವರ್ಷ ಸದಸ್ಯತ್ವ ಪೂರ್ಣಗೊಂಡ ಫಲಾನುಭವಿಗೆ ದೊರಕುವ ಸೌಲಭ್ಯ:**

**9**. **ಉಪಕರಣಗಳ ಸಹಾಯಧನ:** ₹ 5,000–00 ವರೆಗೆ ಉಪಕರಣಗಳನ್ನು ಖರೀದಿಸಲು ಸಹಾಯಧನ.

**ಐದು ವರ್ಷ ಸದಸ್ಯತ್ವ ಪೂರ್ಣಗೊಂಡ ಫಲಾನುಭವಿಗೆ ದೊರಕುವ ಸೌಲಭ್ಯಗಳು:**

**10**. **ಪಿಂಚಣಿ: ಮಾಸಿಕ** ₹ 500–00.

**11**. **ಮನೆ ಕಟ್ಟುವುದಕ್ಕೆ/ಖರೀದಿಸುವುದಕ್ಕೆ ಸಹಾಯ ಧನ:** ₹ 50,000–00

**ನೋಂದಾಯಿತರಲ್ಲದ ಕಟ್ಟಡ ಕಾರ್ಮಿರಿಗೆ ಸಿಗುವ ಸೌಲಭ್ಯಗಳು:**

**12**. **ಎಕ್ಸ್‌ಗ್ರೇಷಿಯಾ ಪರಿಹಾರಧನ:** ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರು ನಿರ್ಮಾಣ ಹಂತದಲ್ಲಿರುವ ಕಟ್ಟಡ ಕುಸಿತದ ಅಪಘಾತದಿಂದ ಮೃತರಾದಲ್ಲಿ ಅವರ ಅವಲಂಬಿತರು ₹ 50,000–00 ಪರಿಹಾರಧನಕ್ಕೆ ಅರ್ಹರು. ಇಂತಹುದೇ ಅಪಘಾತದಲ್ಲೀ ಗಂಭೀರ ಗಾಯಗೊಂಡಲ್ಲಿ ₹ 10,000–00 ಎಕ್ಸ್–ಗ್ರೇಷಿಯಾ ಪರಿಹಾರಧನ.

**ಸಭಾಪತಿಯವರು:–** ಒಂದು ಸಣ್ಣ ಮನವಿ. ಇದನ್ನು ಮಾನ್ಯ ಹುಲಿನಾಯ್ಕರ್ ಅವರಲ್ಲದೇ ಎಲ್ಲರಿಗೂ ತಿಳಿಸಬಯಸುತ್ತೇನೆ. ಪ್ರಶ್ನೆ ನೇರವಾಗಿ ಇರಲಿ, explanation ಬೇಡ. ಮಾನ್ಯ ಸಚಿವರಲ್ಲಿಯೂ ವಿನಂತಿಸುವುದೇನೆಂದರೆ ನೇರವಾಗಿ ಉತ್ತರ ಕೊಡಿ, ನನಗೆ ಸಮಯ ಉಳಿಯುತ್ತದೆ. ಇಲ್ಲದಿದ್ದರೆ ಸಮಯ ಮುಂದಕ್ಕೆ ಹೋಗಿಬಿಡುತ್ತದೆ. ನಿನ್ನೆ ಪ್ರಶ್ನೋತ್ತರ ಅವಧಿ ಸ್ವಲ್ಪ ಜಾಸ್ತಿ ಉದ್ದ ಆದ ಕಾರಣದಿಂದ ನಾನು unnecessaryಯಾಗಿ ಹಲವು ಟೀಕೆಗಳಿಗೆ ಗುರಿಯಾಗಿದೆ. ದಯಮಾಡಿ ಅದಕ್ಕೆ ಅವಕಾಶ ಕೊಡಬೇಡಿ. ಪ್ರಶ್ನೆ ನೇರವಾಗಿ ಇರಲಿ ಮತ್ತು ಉತ್ತರವೂ

ನೇರವಾಗಿ ಇರಲಿ. ಪ್ರಶ್ನೋತ್ತರ ಅವಧಿಯಲ್ಲಿ ಎಲ್ಲ ಪ್ರಶ್ನೆಗಳನ್ನು ನಾನು ಮುಗಿಸಬೇಕಾಗುತ್ತದೆ. ತಾವು ದಯವಿಟ್ಟು ಪ್ರಶ್ನೆ ಕೇಳಿ.

**ಶ್ರೀ ಎಂ.ಆರ್.ಹುಲಿನಾಯ್ಕರ್:–** ಮಾನ್ಯ ಸಭಾಪತಿಯವರೇ, ಅನೇಕ unorganized workers ಗೆ registration ಮಾಡಿಕೊಳ್ಳಲಿಲ್ಲ. ನಾನು ತುಮಕೂರು ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಸುಮಾರು 2,40,000ದಷ್ಟು ಜನ unorganized sector ನಲ್ಲಿ ಕೆಲಸ ಮಾಡುತ್ತಿದ್ದಾರೆ. ಅದು ಮರಳು ತೆಗೆಯುವವರು ಇರಬಹುದು, ವಿದ್ಯುತ್ ಕೆಲಸ ಮಾಡುವವರು ಇರಬಹುದು, ಗಾರೆ ಕೆಲಸ ಮಾಡುವವರು ಇರಬಹುದು, ಇಂತಹವರು ನಮ್ಮ ಜಿಲ್ಲೆಯಲ್ಲಿ ಸುಮಾರು 11,500 ಜನರ ನೋಂದಣಿಯಾಗಿದೆ. ಇದನ್ನು ತಾವು ಹೆಚ್ಚಿನ ಸಂಖ್ಯೆಯಲ್ಲಿ ನೋಂದಣಿ ಮಾಡಿಸುವ ಹಾಗೆ ಆಗಬೇಕು. ಅದರ ಜೊತೆ ಜೊತೆಗೆ ಹೊಸ ಕಟ್ಟಡಗಳಿಗೆ ಏನು ಒಟ್ಟು ವೆಚ್ಚ ಬರುತ್ತದೆ, ಅದರ ಶೇಕಡ 1ರಷ್ಟು ಕಾರ್ಮಿಕರ ಕಲ್ಯಾಣ ನಿಧಿ ಸಲುವಾಗಿ ತೆಗೆದುಕೊಳ್ಳುತ್ತಿದ್ದೀರಿ. ಈಗ ಸುಮಾರು ₹ 1880 ಕೋಟಿಗಳಷ್ಟು ಹಣ ಸಂಗ್ರಹವಾಗಿದ್ದು, ಕೇಂದ್ರ ಸರ್ಕಾರದ ಯೋಜನೆ ಪ್ರಕಾರ ಕಾರ್ಮಿಕರಿಗೆ ಅನುಕೂಲವಾಗುವ 12 ಯೋಜನೆಗಳಿಗೆ ಎಂದು specify ಮಾಡಿದ್ದಾರೆ. ಅದನ್ನು ಬಿಟ್ಟು ವಸತಿ ಶಾಲೆ ಕಟ್ಟಡ ಕಟ್ಟಲು, ಕೌಶಲ್ಯ ಶಾಲೆ ಮತ್ತು ಕಲ್ಯಾಣ ಭವನಗಳನ್ನು ಕಟ್ಟಲು ದೊಡ್ಡದಾದ ಹಣ ವ್ಯಯ ಮಾಡುತ್ತಿದ್ದಾರೆ. ಈ ರೀತಿ ಸಂಗ್ರಹ ಮಾಡಿದ ಹಣವನ್ನು ದಯವಿಟ್ಟು ನೇರವಾಗಿ ಕಾರ್ಮಿಕರಿಗೆ ಅನುಕೂಲವಾಗುವಂತಹ ಹೆರಿಗೆ ಭತ್ಯೆ ಇರಬಹುದು, ಆಸ್ಪತ್ರೆಯ ಚಿಕಿತ್ಸೆಗೆ ಇರಬಹುದು, ಮರಣದ ನಂತರ ಕೊಡುವ ಹಣ ಇರಬಹುದು, ಹೀಗೆ ಕೇಂದ್ರ ಸರ್ಕಾರ ತಿಳಿಸಿರುವ 12 ವಿಷಯಗಳಿಗೆ ಉಪಯೋಗಿಸಿಕೊಳ್ಳಬೇಕೆಂದು ನನ್ನ ಭಾವನೆ. ಹಾಗೆ ₹ 1,000 ಗಳನ್ನು ಪಿಂಚಣಿ ಕೊಡುತ್ತಿದ್ದು, ಇಂದಿನ ಕಾಲಮಾನದಲ್ಲಿ ಇದು ಯಾವುದಕ್ಕೂ ಸಾಲುವುದಿಲ್ಲವಾದ್ದರಿಂದ ಇದನ್ನು ಹೆಚ್ಚಿಸಬೇಕು. ಇದರ ಬಗ್ಗೆ ಕಾರ್ಮಿಕರ ಬೇಡಿಕೆಯೂ ಇದೆ. ಇದನ್ನು ಕನಿಷ್ಟ ₹ 3,000ಗಳನ್ನು ಮಾಡುವ ಯೋಜನೆಯನ್ನು ಹಾಕಿಕೊಳ್ಳಬೇಕಾಗುತ್ತದೆ. ಅದರ ಜೊತೆಗೆ ಮದುವೆಗೆ

ಸಹಾಯ ಧನ ಕೊಡುವ ಬಗ್ಗೆ ಘೋಷಣೆ ಮಾಡಿದ್ದು, ಸುಮಾರು 8 ತಿಂಗಳಿಂದ ಸಹಾಯ ಧನವು ಇಲಾಖೆಯಿಂದ ಯಾರಿಗೂ ವಿತರಣೆ ಆಗಿಲ್ಲ. ಇದು ಸಹ ಒಂದು ಪೊಳ್ಳು ಭರವಸೆ ಎನಿಸುತ್ತಿದೆ. ಕಾರ್ಮಿಕರ ಮಕ್ಕಳಿಗೆ ₹ 1,000, ₹ 2,000, ₹ 3,000ಗಳ ಸಹಾಯ ಧನ ಮಾಡುತ್ತಿದ್ದು, ಕಳೆದ ವರ್ಷದಿಂದ ಇದರ benefit ಯಾವ ಮಕ್ಕಳಿಗೂ ಸಿಕ್ಕಿಲ್ಲ. ಜೊತೆಗೆ ಕಾರ್ಮಿಕರಿಗೆ ದೊಡ್ಡ ದೊಡ್ಡ ಕಾಯಿಲೆಗಳಿಗೆ ₹ 2 ಲಕ್ಷಗಳನ್ನು ಕೊಡುತ್ತಿದ್ದು, ಇದು ಕೇವಲ ಕಾರ್ಮಿಕರಿಗೆ ಮಾತ್ರವಾಗಿದ್ದು, ಇದು accident ಗೆ ಅನ್ವಯಿಸುವುದಿಲ್ಲ. ಇದನ್ನು ಅವರ ತಂದೆ ತಾಯಿಗಳು ಅಥವಾ dependent ಗೂ extend ಮಾಡಿದರೆ ಕಾರ್ಮಿಕರಿಗೆ ಅನುಕೂಲವಾಗುತ್ತದೆ ಎನ್ನುವುದು ನನ್ನ ಭಾವನೆ.

**ಶ್ರೀ ಪಿ.ಟಿ.ಪರಮೇಶ್ವರ ನಾಯಕ:-** ಮಾನ್ಯ ಸಭಾಪತಿಯವರೇ, ಸದನದ ಸದಸ್ಯರು ಬಹಳ ಮಹತ್ವವಾದ ಪ್ರಶ್ನೆಯನ್ನು ಕಾರ್ಮಿಕರ ಹಿತವನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತಾಪ ಮಾಡಿದ್ದಾರೆ. ಅವರಿಗೆ ಪೂರ್ಣ ಪ್ರಮಾಣದ ಉತ್ತರವನ್ನು ಕೊಡಲಾಗಿದೆ. ಕಾರ್ಮಿಕ ಇಲಾಖೆಯಲ್ಲಿ ಮೂರು ಮಂಡಳಿಗಳಿದ್ದು, ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಮತ್ತು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಂಡಳಿ, ಕರ್ನಾಟಕ ಹಾಗೂ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ಎಂದಿದ್ದು, ಈ ಮೂರು ಮಂಡಳಿಯಲ್ಲಿ 4,81,844 ಕಾರ್ಮಿಕರನ್ನು ನೋಂದಣಿ ಮಾಡುವ ಕೆಲಸ ಇಲಾಖೆಯಿಂದ ಆಗಿದೆ. ಮಾನ್ಯ ಸದಸ್ಯರು ಹೆಚ್ಚಿನ ಸದಸ್ಯರು ನೋಂದಣಿ ಆಗಿಲ್ಲ ಎಂದು ವ್ಯಕ್ತಪಡಿಸಿರುವ ಆತಂಕವನ್ನು ನಾನು ಖಂಡಿತವಾಗಿಯೂ ಒಪ್ಪಿಕೊಳ್ಳುತ್ತೇನೆ. ಈಗಾಗಲೇ ಎರಡು-ಮೂರು ಬಾರಿ ಇಲಾಖೆಯ ಅಧಿಕಾರಿಗಳ ಸಭೆಯನ್ನು ಮಾಡಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳಿಗೆ ಕಟ್ಟಡ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದು, ನೋಂದಣಿ ಬಗ್ಗೆ ಅವರಿಗೆ ಪೂರ್ಣ ಮಾಹಿತಿ ಇಲ್ಲದಿರುವುದರಿಂದ ಹೆಚ್ಚಿನ ಗಮನವನ್ನು ಹರಿಸಿ ನೋಂದಣಿ ಅಭಿಯಾನವನ್ನು ಮಾಡಲು ಆದೇಶವನ್ನು ಮಾಡಿದ್ದೇನೆ. ಈ ವರ್ಷ 6 ಲಕ್ಷ ಕಟ್ಟಡ ಮತ್ತು ಇತರೆ ನಿರ್ಮಾಣ

ಕಾರ್ಮಿಕರ ನೋಂದಣಿಯ ಗುರಿ ನಿಗದಿ ಮಾಡಿ ಆದೇಶ ಮಾಡಲಾಗಿದೆ. ಹಾಗೆ ಕಳೆದ ಐದಾರು ತಿಂಗಳುಗಳಿಂದ ಅವರಿಗೆ ಮದುವೆ, ವಿದ್ಯಾಭ್ಯಾಸ ಇತ್ಯಾದಿಗಳಿಗೆ ಧನ ಸಹಾಯ ಆಗುತ್ತಿಲ್ಲ ಎಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವುದು ನನ್ನ ಗಮನದಲ್ಲಿ ಇದೆ. Accountant General ರವರು ಕೆಲವು objection ಗಳನ್ನು ಮಾಡಿದ ಹಿನ್ನಲೆಯಲ್ಲಿ ಕಳೆದ 21ನೇ ತಾರೀಖು ಸಭೆಯನ್ನು ಮಾಡಿದ್ದು, ಆ ಸಭೆಯಲ್ಲಿ ಎಲ್ಲಾ observation ಗಳನ್ನು correction ಮಾಡಿ, ಇಲ್ಲಿಯವರೆಗೂ ಇರುವ ಎಲ್ಲಾ ಅರ್ಜಿಗಳನ್ನು ವಿಲೇ ಮಾಡಲಿಕ್ಕೆ ಮತ್ತು ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳ ಅಕೌಂಟ್ ಹಣ ವರ್ಗಾವಣೆ ಮಾಡಿ, ಅದರ ಮೂಲಕ ಅರ್ಹ ಫಲಾನುಭವಿಗಳಿಗೆ ಹಣವನ್ನು ತಲುಪಿಸಬೇಕು. ಅದು ಮದುವೆ ಪ್ರೋತ್ಸಾಹ ಧನ ಇರಬಹುದು, ಶಿಕ್ಷಣ ಅಥವಾ ಆಸ್ಪತ್ರೆಯ ವೆಚ್ಚ ಇರಬಹುದು. ಹೀಗೆ ನಿಯಮಾವಳಿಯಲ್ಲಿರುವ ಹತ್ತು ಹಲವು ವಿಚಾರಗಳನ್ನು ಅವರಿಗೆ ಮುಟ್ಟಿಸಲು ಆದೇಶವನ್ನು ಮಾಡಿದ್ದೇವೆ.

**ಶ್ರೀ ಎಂ.ಆರ್.ಹುಲಿನಾಯ್ಕರ್:-** ಕಾರ್ಮಿಕರ ಆರೋಗ್ಯಕ್ಕೆ ಕೊಡುವುದನ್ನು ಅವರ ತಂದೆ ತಾಯಿಗಳಿಗೆ ವಿಸ್ತರಿಸಬೇಕೆಂದು ಕೋರುತ್ತೇನೆ.

**ಶ್ರೀ ಪಿ.ಟಿ.ಪರಮೇಶ್ವರ ನಾಯಕ್:-** ಪರಿಶೀಲನೆ ಮಾಡುತ್ತೇನೆ.

**ಶ್ರೀ ಅಶ್ವತ್ ನಾರಾಯಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಕಾರ್ಮಿಕ ಸಚಿವರನ್ನು ಪ್ರಶ್ನೆ ಕೇಳಿದ್ದು, ಅದು unstarred ಪ್ರಶ್ನೆಯಾಗಿದ್ದು, ಮಾನ್ಯ ಹುಲಿನಾಯ್ಕರ್‌ರವರ ಪ್ರಶ್ನೆಗೆ ಸಂಬಂಧಿಸಿದಂತೆ ಮೊನ್ನೆ ಪತ್ರಿಕೆಯಲ್ಲಿ ಒಂದು statement ಬಂದಿದ್ದು, ಕಾರ್ಮಿಕರ ಫಂಡ್‌ನಿಂದ ಸಂಗ್ರಹ ಮಾಡಿದ ₹ 2,500 ಕೋಟಿ ಕಾರ್ಮಿಕ ಇಲಾಖೆಯಲ್ಲಿ ಇದ್ದು, ಇದರಲ್ಲಿ ವಸತಿ ಶಾಲೆಗಳನ್ನು ಕಟ್ಟಿ private institution ಗೆ hand over ಮಾಡುತ್ತೇವೆ ಎಂದು ಹೇಳಿರುವುದನ್ನು ಪತ್ರಿಕೆಗಳಲ್ಲಿ ನೋಡಿದ್ದೇನೆ. ಇದೊಂದು ದೊಡ್ಡ ಲಾಬಿಯಾಗಿದ್ದು, ಕಾರ್ಮಿಕರ ಹಣ ಇಂತಹದ್ದಕ್ಕೆ ಉಪಯೋಗ ಆಗಬಾರದು. ಕಾರ್ಮಿಕರಿಗೆ ನಿಜವಾಗಿ ಉಪಯೋಗ ಆಗಬೇಕು. ದಿನನಿತ್ಯ ಪತ್ರಿಕೆಗಳನ್ನು ನೋಡಿದಾಗ ಒಂದಲ್ಲ

ಒಂದು ಕಟ್ಟಡ ಕುಸಿದು ಕಾರ್ಮಿಕರು ಸತ್ತಿದ್ದಾರೆ. Atleast ನಾಳೆ ಸದನ ಮುಗಿಯವುದರೊಳಗೆ ಬೆಂಗಳೂರಿನಲ್ಲಿ ಸತ್ತಿರುವ ಕಾರ್ಮಿಕರಿಗೆ ಇಲಾಖೆಯಿಂದ ಹುಡುಕಿಕೊಂಡು ಹೋಗಿ ಫಂಡ್ ಕೊಟ್ಟಿರುವ ಮಾಹಿತಿ ಕೊಟ್ಟರೆ ಒಳ್ಳೆಯದು. ನನ್ನ ಪ್ರಶ್ನೆ unstarred ಆಗಿರುವುದರಿಂದ ಈ ಮಾಹಿತಿ ಕೇಳುತ್ತಿದ್ದು, ಕಾರ್ಮಿಕರ ವಸತಿ ಮತ್ತು ಕಲ್ಯಾಣಕ್ಕೆ ಸಂಬಂಧಪಟ್ಟಂತೆ ಯಾವುದೇ ರೀತಿಯ ಖಾಸಗಿ ಲಾಬಿಗೆ ಮಣಿಯಬಾರದು. ಈಗಾಗಲೇ ಪತ್ರಿಕೆಗಳಲ್ಲಿ ಬಂದಂತಹ ವರದಿಗಳನ್ನು ಲಘುವಾಗಿ ತೆಗೆದುಕೊಂಡಿದ್ದೀರಿ. ಈ ಹಿನ್ನೆಲೆ ನೋಡಿದಾಗ ಎಲ್ಲೋ ಒಂದು ಕಡೆ ಲಾಬಿಗೆ ಒಳಗಾಗುತ್ತಾರೋ ಎಂದು ಕಂಡು ಬರುತ್ತದೆ. ದಯವಿಟ್ಟು ಅಂತಹದ್ದಕ್ಕೆ ಒಳಗಾಗಬಾರದು.

**ಶ್ರೀ ಪಿ.ಟಿ.ಪರಮೇಶ್ವರ ನಾಯಕ್:–** ಮಾನ್ಯ ಸದಸ್ಯರು ವಿಚಾರವನ್ನು ಪ್ರಸ್ತಾಪ ಮಾಡಿದ್ದು, ನಮ್ಮ ಕಟ್ಟಡ ಮತ್ತು ಇತರೆ ನಿರ್ಮಾಣ ಮಂಡಳಿಯಲ್ಲಿ cess ಮೂಲಕ ಸಂಗ್ರಹ ಆಗಿರುವ ಹಣ ₹ 1800 ಕೋಟಿ, ಇದರ ಬಡ್ಡಿ ಸೇರಿ ₹ 2170 ಕೋಟಿ ಮಂಡಳಿಯಲ್ಲಿ ಇದೆ. ಹಾಗಾಗಿ ವಸತಿ ಸಮುಚ್ಛಯವನ್ನು ನಿರ್ಮಾಣ ಮಾಡುವುದರ ಜೊತೆಗೆ ಕಾರ್ಮಿಕರ ಮಕ್ಕಳಿಗೆ ಉನ್ನತ ಮಟ್ಟದ ಶಿಕ್ಷಣ ದೊರೆಯಬೇಕೆನ್ನುವ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಚರ್ಚೆ ಮಾಡಿ ಅವರ ಸಲಹೆಗಳನ್ನು ಪಡೆಯುದರ ಜೊತೆಗೆ ಮಂಡಳಿಯಲ್ಲಿಯೂ ಸಹ ಇದರ ಬಗ್ಗೆ ಚರ್ಚೆ ಮಾಡಿ, ಕಾರ್ಮಿಕರ ಮಕ್ಕಳು ಉನ್ನತ ವ್ಯಾಸಂಗವನ್ನು ಪಡೆಯಬೇಕೆನ್ನುವ ಹಿನ್ನೆಲೆಯಲ್ಲಿ ಮತ್ತು ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಬಂದಿರುವಂತಹ ಒಟ್ಟು ಸೆಸ್ ಹಣದಲ್ಲಿ ಶೇಕಡಾ 20ರಷ್ಟು ಹಣವನ್ನು ಕಾರ್ಮಿಕರ ಕಲ್ಯಾಣ ಕಾರ್ಯಕ್ರಮಗಳಿಗೆ ಉಪಯೋಗಿಸಿಕೊಳ್ಳಬೇಕೆನ್ನುವ ನಿರ್ದೇಶನದ ಹಿನ್ನೆಲೆಯಲ್ಲಿ ರಾಜ್ಯದ ಮಹಾನಗರಪಾಲಿಕೆಗಳಲ್ಲಿ ಕಾರ್ಮಿಕರಿಗೆ ಭದ್ರತೆಯನ್ನು ಒದಗಿಸಬೇಕು ಮತ್ತು ವಸತಿ ಸೌಲಭ್ಯವನ್ನು ನೀಡಬೇಕೆನ್ನುವ ಹಿನ್ನೆಲೆಯಲ್ಲಿ ವಸತಿ ಸಮುಚ್ಛಯವನ್ನು ನಿರ್ಮಾಣ ಮಾಡುವುದಕ್ಕೆ ಸರ್ಕಾರ ಬದ್ಧವಾಗಿದೆ. ಕಾರ್ಮಿಕರ ಮಕ್ಕಳಿಗೆ ಬೆಂಗಳೂರಿನ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನಾಲ್ಕು ಕಡೆ ಮತ್ತು ರಾಜ್ಯದ ಮಹಾನಗರ ವ್ಯಾಪ್ತಿಯಲ್ಲಿ

ವಸತಿನಿವಾಸಿತ ಶಾಲೆಗಳನ್ನು ತೆರೆಯಬೇಕೆನ್ನುವ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ. ಯಾವುದೇ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಮಣಿದು ನಾವು ಈ ತೀರ್ಮಾನವನ್ನು ತೆಗೆದುಕೊಂಡಿಲ್ಲ. ಕಾರ್ಮಿಕರ ಮಕ್ಕಳ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಧಾರವನ್ನು ಮಾಡಲಾಗಿದೆ. ಖಾಸಗಿ ಪ್ರತಿಷ್ಠಿತ ವಿದ್ಯಾ ಸಂಸ್ಥೆಗಳು ಉಳ್ಳವರ ಮತ್ತು ಹಿರಿಯ ಅಧಿಕಾರಿಗಳ ಮಕ್ಕಳಿಗೆ ಯಾವ ಗುಣಮಟ್ಟದ ವಿದ್ಯಾಭ್ಯಾಸವನ್ನು ನೀಡುತ್ತಿದೆ, ಆ ಗುಣಮಟ್ಟದ ಶಿಕ್ಷಣ ಕಟ್ಟಡ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ ದೊರೆಯಬೇಕು ಮತ್ತು ಕಾರ್ಮಿಕರ ಮಕ್ಕಳು ರಾಜ್ಯದಲ್ಲಿನ ಉನ್ನತ ಮಟ್ಟದ ಹುದ್ದೆಗಳಿಗೆ ಬರುವುದಕ್ಕೆ ಇದು ಸಹಕಾರವಾಗಲಿ ಎನ್ನುವ ಉದ್ದೇಶದಿಂದ ಅವರಿಗೆ ವಸತಿ ಶಾಲೆಯನ್ನು ತೆರೆಯುವುದಕ್ಕೆ ಮುಂದಾಗಿದ್ದೇವೆಯೇ ವಿನಾಃ ಯಾವುದೇ ಲಾಬಿಗೆ ಸರ್ಕಾರ ಮಣಿದಿಲ್ಲ ಎನ್ನುವುದನ್ನು ಸ್ಪಷ್ಟಪಡಿಸುವುದಕ್ಕೆ ಬಯಸುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಆಕಸ್ಮಿಕವಾಗಿ ಅಪಘಾತದಲ್ಲಿ ಮರಣ ಹೊಂದಿದವರಿಗೆ ಪರಿಹಾರವನ್ನು ನೀಡಬೇಕೆನ್ನುವುದು ಮಾನ್ಯ ಸದಸ್ಯರ ಎರಡನೆಯ ಪ್ರಶ್ನೆಯಾಗಿದೆ ಅದಕ್ಕೆ ತಮ್ಮಿಂದ ಉತ್ತರ ಬರಲಿಲ್ಲ.

**ಶ್ರೀ ಪಿ.ಟಿ.ಪರಮೇಶ್ವರ ನಾಯಕ್:–** ಸನ್ಮಾನ್ಯ ಸಭಾಪತಿಯವರೇ, ಕಳೆದ ಆರು ತಿಂಗಳಿನಲ್ಲಿ ಮಹಾ ಲೆಕ್ಕಪಾಲರ ಅಭ್ಯಂತರವಿದ್ದ ಕಾರಣ ಸ್ವಲ್ಪ ಪೆಂಡಿಂಗ್ ಇತ್ತು. ಕಳೆದ ತಿಂಗಳ 21ನೇ ತಾರೀಖಿನಂದು ಮಂಡಳಿಯ ಮೀಟಿಂಗ್ ಮಾಡಿ ಮಹಾ ಲೆಕ್ಕಪಾಲರು ಏನು ಆಕ್ಷೇಪಣೆಗಳನ್ನು ವ್ಯಕ್ತಪಡಿಸಿದ್ದರು ಅದನ್ನೆಲ್ಲ ಸರಿಪಡಿಸಿದ್ದೇವೆ. ಈಗಾಗಲೇ ಮೃತಪಟ್ಟವರಿಗೆ ಎರಡು ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಡುವುದಕ್ಕೆ ಅದೇ ರೀತಿಯಲ್ಲಿ ಶಾಶ್ವತವಾಗಿ ಅಂಗಹೀನರಾಗಿರುವವರಿಗೆ ಪರಿಹಾರವನ್ನು ಕೊಡುವುದಕ್ಕೆ ಮತ್ತು ಆಸ್ಪತ್ರೆ ವೆಚ್ಚವನ್ನು ಭರಿಸುವುದಕ್ಕೆ ಎಲ್ಲದಕ್ಕೂ ನಾವು ಈಗಾಗಲೇ ಆದೇಶವನ್ನು ಮಾಡಿದ್ದೇವೆ.

**ಶ್ರೀಮತಿ ಮೋಟಮ್ಮ:–** ಸನ್ಮಾನ್ಯ ಸಭಾಪತಿಯವರೇ, ಕಾರ್ಮಿಕ ಕಲ್ಯಾಣ ಇಲಾಖೆಯಿಂದ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗಿದೆ

ಎನ್ನುವುದರ ಬಗ್ಗೆ ಮಾನ್ಯ ಸಚಿವರು ತಿಳಿಸಿದ್ದಾರೆ. ವಸತಿ ಶಾಲೆಗಳನ್ನು ಮಾಡುತ್ತಿರುವ ಬಗ್ಗೆ ನನ್ನ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದೇನೆ. ಕಟ್ಟಡ ನಿರ್ಮಾಣ ಕಾರ್ಯಕ್ಕೆ ಬರುವಂತಹ ಕೂಲಿ ಕಾರ್ಮಿಕ ಹೆಣ್ಣುಮಕ್ಕಳು ಸಣ್ಣ ಸಣ್ಣ ಮಕ್ಕಳನ್ನು ಅವರ ಜೊತೆಗೆ ಕರೆದುಕೊಂಡು ಬರುವುದನ್ನು ನಾವು ನೋಡಿದ್ದೇವೆ. ಅವರು ಮಣ್ಣು ಇಟ್ಟಿಗೆ ಹೊರುತ್ತಿದ್ದರೆ ಆ ಮಕ್ಕಳು ಮಣ್ಣಿನಲ್ಲಿ ಆಟವಾಡುತ್ತಿರುತ್ತವೆ. ಆ ಮಕ್ಕಳಿಗೆ ಇದರಿಂದ ತೊಂದರೆಯಾಗುತ್ತಿದೆ. ಆ ಮಕ್ಕಳ ಪಾಲನೆ ಘೋಷಣೆಗೆ ಅನುಕೂಲವಾಗುವಂತೆ ಆ ಕಟ್ಟಡ ಮಾಲೀಕರು ಯಾರಿದ್ದಾರೆ ಅವರು ಆ ಮಕ್ಕಳಿಗೆ ಶಿಶು ಪಾಲನಾ ಕೇಂದ್ರಗಳನ್ನು ಮತ್ತು ಶೌಚಾಲಯಗಳನ್ನು ನಿರ್ಮಾಣ ಮಾಡುವುದಕ್ಕೆ ಒತ್ತಾಯ ಮಾಡಬೇಕಾಗುತ್ತದೆ. ಕಾರ್ಮಿಕ ಕಲ್ಯಾಣ ಇಲಾಖೆಯವರು ಎಲ್ಲೆಲ್ಲಿ ಈ ಸೌಲಭ್ಯಗಳು ಇಲ್ಲ ಎನ್ನುವುದನ್ನು ತನಿಖೆ ಮಾಡಬೇಕಾಗುತ್ತದೆ ಮತ್ತು ಮಕ್ಕಳಿಗೆ ಎಲ್ಲೆಲ್ಲಿ ತೊಂದರೆ ಆಗುತ್ತಿದೆ ಅಲ್ಲಿ ಶಿಶು ಪಾಲನಾ ಕೇಂದ್ರಗಳನ್ನು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

**ಶ್ರೀ ಪಿ.ಟಿ.ಪರಮೇಶ್ವರ ನಾಯಕ್:-** ಸನ್ಮಾನ್ಯ ಸಭಾಪತಿಯವರೇ, ಸದನದ ಹಿರಿಯ ಸದಸ್ಯರಾಗಿರುವಂತಹ ಶ್ರೀಮತಿ ಮೋಟಮ್ಮನವರು ಅತ್ಯಂತ ಮಹತ್ವವಾಗಿರುವಂತಹ ವಿಚಾರದ ಬಗ್ಗೆ ಸದನದ ಗಮನವನ್ನು ಸೆಳೆದಿದ್ದಾರೆ. ಅವರು ಪ್ರಸ್ತಾಪ ಮಾಡಿರುವಂತಹ ವಿಚಾರ ಈಗಾಗಲೇ ನಮ್ಮ ಗಮನಕ್ಕೆ ಬಂದಿದೆ. ಕಳೆದ ತಿಂಗಳು ಬೆಂಗಳೂರು ಮಹಾನಗರದಲ್ಲಿ ಕಟ್ಟಡ ಕಾರ್ಮಿಕರ ಮಗುವೊಂದು ಆಟವಾಡತ್ತಿದ್ದ ಸಂದರ್ಭದಲ್ಲಿ ಅಲ್ಲಿರುವ ನೀರಿನ ತೊಟ್ಟಿಯಲ್ಲಿ ಬಿದ್ದು ಅಸುನೀಗಿರುವುದು ನಮ್ಮ ಗಮನಕ್ಕೆ ಬಂದಿದೆ. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕಾರ್ಮಿಕರಿಗೆ ವಸತಿ ಸಮುಚ್ಚಯದ ಜೊತೆಗೆ ಆ ಮಕ್ಕಳಿಗೆ ಶಿಕ್ಷಣ ವ್ಯವಸ್ಥೆಯನ್ನು ಮಾಡುವುದಕ್ಕೆ ಖಾಸಗಿ ಕಂಪನಿಯ ಮಾಲೀಕರ ಸಹಯೋಗದಲ್ಲಿ ಕೆಲಸದ ಸಮಯದಲ್ಲಿ ಕಾರ್ಮಿಕರಿಗೆ ಮತ್ತು ಅವರ ಮಕ್ಕಳಿಗೆ ರಕ್ಷಣೆ ಕೊಡುವುದಕ್ಕೆ ಸರ್ಕಾರ ಚಿಂತನೆ ನಡೆಸಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಲು ಬಯಸುತ್ತಿದ್ದೇನೆ.

**ಜವಳಿ ಪಾರ್ಕ್ ನಿರ್ಮಾಣ ಕುರಿತು**

**927, ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳು)**

ಅ) ಬೆಳಗಾವಿ ಜಿಲ್ಲೆಯಲ್ಲಿ ಅತೀ ಹೆಚ್ಚು ನೇಕಾರಿಕೆ ಮಾಡುವ ಕುಟುಂಬಗಳಿದ್ದು, ಇಂತಹ ಬಡಜನರಿಗೆ ಅನುಕೂಲವಾಗಲೆಂದೇ ಹಿಂದಿನ ಸರ್ಕಾರವು ಬೆಳಗಾವಿಯಲ್ಲಿ ಜವಳಿ ಪಾರ್ಕ್ ನಿರ್ಮಾಣದ ಬಗ್ಗೆ ನಿರ್ಧರಿಸಿತ್ತು; ಹಾಗಿದ್ದಲ್ಲಿ, ಇದಕ್ಕೆ ಸ್ಥಳ ನಿಗದಿಯಾಗಿದೆಯೇ;

ಆ) ಯಾವ ಯಾವ ಸ್ಥಳಗಳಲ್ಲಿ ಇಂತಹ ಜವಳಿ ಪಾರ್ಕ್ ನಿರ್ಮಿಸಲಾಗುವುದು;

ಇ) ಇದಕ್ಕಾಗಿ ಆಯವ್ಯಯದಲ್ಲಿ ಎಷ್ಟು ಹಣ ನಿಗದಿಪಡಿಸಲಾಗಿದೆ?

**ಶ್ರೀ ಬಾಬುರಾವ್ ಚಿಂಚನಸೂರ(ಜವಳಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)**

ಅ) ಹೌದು. ಬೆಳಗಾವಿ ಜಿಲ್ಲೆಯ ವಾಘವಡೆ ಮತ್ತು ಬೆಕ್ಕಿನಕೇರಿ ಗ್ರಾಮಗಳಲ್ಲಿ ಜವಳಿ ಪಾರ್ಕ ಸ್ಥಾಪನೆಗೆ ಜಾಗೆಯನ್ನು ಗುರುತಿಸಲಾಗಿತ್ತು. ಆದರೆ, ಜಮೀನು ಲಭ್ಯತೆ ಆಗದ ಕಾರಣ ಜವಳಿ ಪಾರ್ಕ್ ನಿರ್ಮಿಸಲಾಗಿರುವುದಿಲ್ಲ.

ಬೋರಗಾಂವ ಗ್ರಾಮದಲ್ಲಿ ಜವಳಿ ಪಾರ್ಕ್ ಸ್ಥಾಪನೆ ಮಾಡಲು ಕೈಗಾರಿಕಾ ನಿವೇಶನಗಳ ಹಂಚಿಕೆಗೆ ಪ್ರಕಟಣೆಯನ್ನು ದಿನಾಂಕ 21–11–2013 ರಂದು ಕೆ.ಎಸ್.ಎಸ್.ಐ.ಇ.ಸಿ.ಯವರು ಹೊರಡಿಸಿರುತ್ತಾರೆ.

ಆ) ಈಗಾಗಲೇ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರದಲ್ಲಿ ಜವಳಿ ಪಾರ್ಕ ಸ್ಥಾಪಿಸಲಾಗಿದೆ ಮತ್ತು ಗುಲಬರ್ಗಾದಲ್ಲಿ ಜವಳಿ ಪಾರ್ಕ್ ಸ್ಥಾಪನೆ ಪ್ರಾರಂಭ ಹಂತದಲ್ಲಿದೆ.

ಬಳ್ಳಾರಿ, ಹಿರಿಯೂರ, ಬೆಳಗಾವಿ, ತುಮಕೂರು, ಮತ್ತು ಯಾದಗಿರಿಗಳಲ್ಲಿ ಜವಳಿ ಪಾರ್ಕ ಸ್ಥಾಪಿಸಲಾಗುವುದು.

ಇ) ಪ್ರಸಕ್ತ ಸಾಲಿನಲ್ಲಿ ಜವಳಿ ಪಾರ್ಕ ಸ್ಥಾಪನೆಗೆ ₹ 8.00 ಕೋಟಿ ಅನುದಾನವನ್ನು ನಿಗಧಿ ಮಾಡಲಾಗಿದೆ. ನೂತನ ಜವಳಿ ನೀತಿ 2013–18 ಜಾರಿಗೆ ಬಂದಿರುವದರಿಂದ 05 ವರ್ಷಗಳ ಅವಧಿಯಲ್ಲಿ ಜವಳಿ ಪಾರ್ಕಗಳನ್ನು ಸ್ಥಾಪಿಸಲು ₹ 200.00ಕೋಟಿ ಅನುದಾನ ಪ್ರಸ್ತಾಪಿಸಲಾಗಿದೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಬೆಳಗಾವಿ ಜಿಲ್ಲೆಯಲ್ಲಿ ಅತೀ ಹೆಚ್ಚು ನೇಕಾರಿಕೆ ಮಾಡುವ ಕುಟುಂಬಗಳಿದ್ದು ಇಂತಹ ಬಡ ಜನರಿಗೆ ಅನುಕೂಲವಾಗಲೆಂದೇ ಹಿಂದಿನ ಸರ್ಕಾರ ಬೆಳಗಾವಿಯಲ್ಲಿ ಜವಳಿ ಪಾರ್ಕ್ ನಿರ್ಮಾಣ ಮಾಡಲಾಗುತ್ತದೆಂದು ಹೇಳಿದ್ದರು ಮತ್ತು ಜಾಗ ನಿಗದಿಯಾಗಿದೆಯೆಂದು ಹೇಳಿದ್ದರು. ಆದರೆ, ಈಗ ಸರ್ಕಾರ ಕೊಟ್ಟಿರುವಂತಹ ಉತ್ತರದಲ್ಲಿ 'ಬೆಳಗಾವಿ ಜಿಲ್ಲೆಯ ವಾಘವಡೆ ಮತ್ತು ಬೆಕ್ಕಿನಕೇರಿ ಗ್ರಾಮಗಳಲ್ಲಿ ಜವಳಿ ಪಾರ್ಕ್ ಸ್ಥಾಪನೆಗೆ ಜಾಗವನ್ನು ಗುರುತಿಸಲಾಗಿತ್ತು. ಆದರೆ, ಜಮೀನು ಲಭ್ಯತೆ ಆಗದೇ ಇರುವ ಕಾರಣ ಜವಳಿ ಪಾರ್ಕ್‌ನ್ನು ನಿರ್ಮಿಸಲಾಗಿರುವುದಿಲ್ಲ' ಎಂದು ತಿಳಿಸಲಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಇವತ್ತು ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳು ಹೆಚ್ಚು ನೇಕಾರರನ್ನು ಹೊಂದಿರುವಂತಹ ಜಿಲ್ಲೆಳಾಗಿವೆ. ಬೆಳಗಾವಿ ನಗರ, ಚಿಕ್ಕೋಡಿ, ನಿಪ್ಪಾಣಿ ಹಾಗೂ ಬಾಗಲಕೋಟಿಯಲ್ಲಿರುವ ಅನೇಕ ಪಟ್ಟಣ ಮತ್ತು ನಗರ ಪ್ರದೇಶಗಳಲ್ಲಿ ನೇಕಾರಿಕೆಯ ಕುಟುಂಬಗಳು ಇವೆ. ಹಿಂದಿನ ಸರ್ಕಾರ ಒಂದು ನಿರ್ಧಾರ ಮಾಡಿ, ಜಮೀನು ಗುರುತಿಸಿ ಅಲ್ಲಿ ಜವಳಿ ಪಾರ್ಕ್‌ನ್ನು ನಿರ್ಮಾಣ ಮಾಡಲಾಗುತ್ತದೆ ಎಂದು ಹೇಳಿದ ನಂತರವೂ, ಈ ಸರ್ಕಾರ ಜಾಗದ ಲಭ್ಯತೆ ಇಲ್ಲದ ಕಾರಣ ಜವಳಿ ಪಾರ್ಕ್‌ನ್ನು ನಿರ್ಮಿಸಲಾಗಿರುವುದಿಲ್ಲ ಎಂದು ಹೇಳಿರುವುದು ನನಗೆ ಅತ್ಯಂತ ಖೇದವೆನಿಸುತ್ತಿದೆ. ನಮ್ಮ ಪಕ್ಕದ ರಾಜ್ಯವಾಗಿರುವಂತಹ ಮಹಾರಾಷ್ಟ್ರದಲ್ಲಿರುವಂತಹ ಇಚಲ್‌ಕರ್ಜಿ ಎನ್ನುವ ಪಟ್ಟಣವನ್ನು ಈ ದೇಶದ

ಮ್ಯಾಂಚೆಸ್ಟರ್ ಎಂದು ಕರೆಯುತ್ತಿದ್ದೇವೆ. ಅಲ್ಲಿರುವಂತಹ ಜವಳಿ ಉದ್ಯಮದ ಬಗ್ಗೆ ಹೇಳಬೇಕಾಗುತ್ತದೆ. ಅಲ್ಲಿ ಖಾಸಗಿ ವಲಯದಲ್ಲಿ 6 ನೂಲಿನ ಗಿರಣಿಗಳು ಮತ್ತು 5 ಸಹಕಾರಿ ನೂಲಿನ ಗಿರಣಿಗಳು ಇವೆ. ಸುಮಾರು 1,40,000 ವಿದ್ಯುತ್‌ಚಾಲಿತ ಗಿರಣಿಗಳಿವೆ. ಸುಮಾರು 30,000 ಆಟೋಮ್ಯಾಟಿಕ್ ಪವರ್‌ಲೂಮ್ಸ್ ಇವೆ. ಸುಮಾರು ಒಂದು ಲಕ್ಷ ಜನರಿಗೆ ಉದ್ಯೋಗಾವಕಾಶವನ್ನು ಒದಗಿಸಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದ ಚಿಕ್ಕೋಡಿ, ಬೆಳಗಾವಿ ಮತ್ತು ಬಾಗಲಕೋಟೆಯಲ್ಲಿ ಇರುವಂತಹವರು ಮಹಾರಾಷ್ಟ್ರ ರಾಜ್ಯಕ್ಕೆ ವಲಸೆ ಹೋಗುತ್ತಿರುವಂತಹ ಪರಿಸ್ಥಿತಿ ನಿರ್ಮಾಣವಾಗಿರುವಾಗ ಸರ್ಕಾರ ಈ ರೀತಿಯ ನಿರ್ಲಕ್ಷ್ಯ ಧೋರಣೆಯನ್ನು ತಳೆಯಬಾರದು ಎನ್ನುವುದು ನನ್ನ ಮನವಿಯಾಗಿದೆ. ಬೆಳಗಾವಿಯಲ್ಲಿ ಜವಳಿ ಪಾರ್ಕ್‌ನ್ನು ನಿರ್ಮಾಣ ಮಾಡಬೇಕೆನ್ನುವ ನನ್ನ ಪ್ರಶ್ನೆಗೆ ಬೋರಗಾಂವ ಗ್ರಾಮದಲ್ಲಿ ಜವಳಿ ಪಾರ್ಕ್ ನಿರ್ಮಾಣ ಮಾಡಲಾಗುವುದು ಎನ್ನುವ ಉತ್ತರವನ್ನು ನೀಡಿದ್ದಾರೆ, ಅದನ್ನು ನಾನು ಸ್ವಾಗತಿಸುತ್ತೇನೆ. ಹಾಗೆಯೇ ಅವರು ನೀಡಿರುವಂತಹ ಉತ್ತರದಲ್ಲಿ ಈ ವರ್ಷ ಜವಳಿ ಪಾರ್ಕ್ ನಿರ್ಮಾಣ ಮಾಡುವುದಕ್ಕೆ 8 ಕೋಟಿ ರೂಪಾಯಿಗಳ ಅನುದಾನವನ್ನು ನಿಗದಿ ಮಾಡಲಾಗಿದೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಇಡೀ ದೇಶದ ಹತ್ತಿ ಉತ್ಪಾದನೆಯಲ್ಲಿ ಶೇಕಡಾ ನಾಲ್ಕರಷ್ಟು ಹತ್ತಿಯನ್ನು ಉತ್ಪಾದನೆ ಮಾಡಲಾಗುತ್ತಿದೆ. ಮುಂದುವರೆದು ಮುಂದಿನ ಐದು ವರ್ಷದ ಅವಧಿಯಲ್ಲಿ ಜವಳಿ ಪಾರ್ಕ್‌ಗಳನ್ನು ಸ್ಥಾಪಿಸಲು 200 ಕೋಟಿ ರೂಪಾಯಿಗಳ ಅನುದಾನವನ್ನು ವೆಚ್ಚ ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ರಾಜ್ಯ ಸರ್ಕಾರ ಹೊಸ ಜವಳಿ ನೀತಿಯನ್ನು ರೂಪಿಸಿದೆ, ಅದನ್ನು ನಾನು ಸ್ವಾಗತಿಸುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಈ ದಿನ ಸದನದಲ್ಲಿ ಉಪಸ್ಥಿತರಿದ್ದಾರೆ. ಅವರು ಇದಕ್ಕೆ ಉತ್ತರವನ್ನು ನೀಡಬೇಕಾಗುತ್ತದೆ. ಹೊಸ ಜವಳಿ ನೀತಿಯನ್ನು ಜಾರಿಗೆ ತಂದಿರುವ ಸಂದರ್ಭದಲ್ಲಿ ಜವಳಿ ಪಾರ್ಕ್‌ಗಳನ್ನು ನಿರ್ಮಾಣ

ಮಾಡುವಂತಹ ಸಂದರ್ಭದಲ್ಲಿ ಗಡಿ ಭಾಗದಲ್ಲಿರುವ ಇಂತಹ ಜವಳಿ ಪಾರ್ಕ್‌ಗಳನ್ನು ಅಭಿವೃದ್ಧಿ ಮಾಡುವುದರಲ್ಲಿ ಯಾವ ಕ್ರಮವನ್ನು ಜರುಗಿಸಲಾಗುತ್ತದೆ ಎನ್ನುವುದರ ಬಗ್ಗೆ ತಿಳಿಸಬೇಕಾಗುತ್ತದೆ ಮತ್ತು ಬೆಳಗಾವಿಯಲ್ಲಿ ಭೂಮಿ ಸಿಕ್ಕಿಲ್ಲವೆನ್ನುವ ವಿಚಾರವನ್ನು ಇಟ್ಟುಕೊಂಡು ಜವಳಿ ಪಾರ್ಕ್ ನಿರ್ಮಾಣ ಮಾಡುವುದನ್ನು ಕೈ ಬಿಡಲಾಗಿದೆ. ಸರ್ಕಾರಿ ಭೂಮಿ ಇಲ್ಲವೆಂದು ಜವಳಿ ಪಾರ್ಕ್ ನಿರ್ಮಾಣವನ್ನು ಕೈಬಿಡುವುದು ಸರಿಯಲ್ಲ. ಸರ್ಕಾರ ಖಾಸಗಿ ಭೂಮಿಯನ್ನು ಖರೀದಿ ಮಾಡಬಹುದು. ಬೆಳಗಾವಿಯಲ್ಲಿ ಜವಳಿ ಪಾರ್ಕ್‌ನ್ನು ಸ್ಥಾಪನೆ ಮಾಡುತ್ತೇವೆ ಎನ್ನುವ ಘೋಷಣೆಯನ್ನು ಮಾನ್ಯ ಸಚಿವರಿಂದ ನಿರೀಕ್ಷೆ ಮಾಡುತ್ತಿದ್ದೇನೆ.

**ಶ್ರೀ ಬಾಬುರಾವ್ ಚಿಂಚನಸೂರ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳ ಬಂಪರ್ ಕೊಡುಗೆಯನ್ನು ನೀಡಿದ್ದಾರೆ. ವಾಘವಡೆ ಮತ್ತು ಬೆಕ್ಕಿನಕೇರಿ ಗ್ರಾಮಗಳಲ್ಲಿ ಜವಳಿ ಪಾರ್ಕ್ ಮಾಡುವಂತಹ ಉದ್ದೇಶ ಸರ್ಕಾರಕ್ಕೆ ಇತ್ತು. ಭೂಮಿ ದೊರೆಯದೇ ಇರುವ ಕಾರಣದ ಹಿನ್ನೆಲೆಯಲ್ಲಿ ಅಲ್ಲಿ ಜವಳಿ ಪಾರ್ಕ್ ನಿರ್ಮಾಣವಾಗಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ನೀಡುರವ ಬಂಪರ್ ಕೊಡುಗೆಯಲ್ಲಿ ಸುಮಾರು 10,000 ಕೋಟಿ ರೂಪಾಯಿಗಳ ಬಂಡವಾಳ ಆಕರ್ಷಣೆ ಮತ್ತು 5 ಲಕ್ಷ ಜನರಿಗೆ ಉದ್ಯೋಗ ಅವಕಾಶ ಸಿಗುತ್ತದೆ. ಆದ ಕಾರಣ ಮುಂದಿನ ಪ್ರಸ್ತುತ ಸಾಲಿನಲ್ಲಿ 8 ಕೋಟಿ ರೂಪಾಯಿಯನ್ನು ಇಡಲಾಗಿದೆ ಮತ್ತು 2013ನೇ ಸಾಲಿನಲ್ಲಿ 5 ವರ್ಷಗಳಲ್ಲಿ ನಾವು 200 ಕೋಟಿ ರೂಪಾಯಿಗಳನ್ನು ಜವಳಿ ಪಾರ್ಕ್‌ಗಾಗಿ ಖರ್ಚು ಮಾಡುತ್ತೇವೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೆ, ಬೆಳಗಾವಿಯ ಆ ಎರಡು ಊರಿನಲ್ಲಿ ಭೂಮಿ ಇಲ್ಲವೆಂದರೆ ಬೇರೆ ಕಡೆ ತೆಗೆದುಕೊಂಡು ಮಾಡಲಿ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ:–** ಮಾನ್ಯ ಸಭಾಪತಿಯವರೆ, ಈಗಾಗಲೇ ಸನ್ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಏಕೆಂದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕು. ನಾನೂ ಕೂಡ ಒಬ್ಬ ಹುಟ್ಟು

ನೇಕಾರನಾಗಿರುವ ಸಂದರ್ಭದಲ್ಲಿ ಕಳೆದ ಸಾಲಿನಲ್ಲಿ 5 ವರ್ಷಗಳ ಕಾಲ ನಾನು Karnataka Handloom Development Corporation ನ Chairman ಆಗಿದ್ದೆ. ಸರ್ಕಾರದಲ್ಲಿ 500 ಕೋಟಿ ರೂಪಾಯಿಯನ್ನು ಇಟ್ಟರೂ ಕೂಡ ಅಧಿಕಾರಿಗಳ ನಿರ್ಲಕ್ಷತನದಿಂದ 500 ಕೋಟಿ ರೂಪಾಯಿಗಳಲ್ಲಿ 5 ವರ್ಷಗಳಲ್ಲಿ ಕೇವಲ 140 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡುವುದಕ್ಕೆ ಸಾಧ್ಯವಾಯಿತು. ಇನ್ನು ಹೆಚ್ಚಿನ ಹಣವನ್ನು ನಾವು ಖರ್ಚು ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ, ನಾವು ಕೂಡ ಬೆಳಗಾವಿ ನಗರಕ್ಕೆ ಬಂದು ಸ್ಥಳವನ್ನು ವೀಕ್ಷಣೆ ಮಾಡಿ ಇಲ್ಲಿ ಜವಳಿ ಪಾರ್ಕ್ ಆಗಬೇಕೆಂದು ಕಣ್ಣಿನಿಂದ ನೋಡಿಕೊಂಡು ಹೋದಂಥ ಸಂದರ್ಭದಲ್ಲಿ, ನಿನ್ನೆಯ ದಿವಸ ತಾನೆ ಬೆಳಗಾವಿ ನಗರದಲ್ಲಿ ಒಂದು ಕ್ರೀಡಾಂಗಣವನ್ನು ಸ್ಥಾಪನೆ ಮಾಡುವುದಕ್ಕೆ ಜಾಗ ಎಲ್ಲಿದೆ ಎನ್ನತಕ್ಕಂಥ ಮಾತನ್ನು ಹೇಳಿದಾಗ ಬೆಳಗಾವಿ ಸುತ್ತಮುತ್ತ 150 ಎಕರೆ ಪ್ರದೇಶ ಖಾಲಿ ಇದೆ ಎನ್ನತಕ್ಕಂಥ ಉತ್ತರ ಸನ್ಮಾನ್ಯ ಕಂದಾಯ ಸಚಿವರಿಂದ ಬಂದಿದೆ. ದಯಮಾಡಿ ಈ ರೀತಿಯ ಜಾಗವನ್ನು ಹುಡುಕಿ ಅಲ್ಲಿ ಜವಳಿ ಪಾರ್ಕ್‌ನ್ನು ನಿರ್ಮಾಣ ಮಾಡಲಿ. ಸ್ಥಳ ಇಲ್ಲದೇ ಇರುವುದರಿಂದ ಬೇರೆ ಕಡೆ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಜಾಗವಿಲ್ಲವೆಂದು ಬಿಟ್ಟುಬಿಡಬಾರದು.

**ಸಭಾಪತಿಯವರು:–** ಮಾನ್ಯ ಕವಟಗಿಮಠರವರೆ, ಅವರು ಮಾಡುತ್ತಾರೋ ಇಲ್ಲವೋ ಎಂಬುದನ್ನು ಕೇಳಿ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ:–** ಮಾನ್ಯ ಸಭಾಪತಿಯವರೆ, ಬೆಳಗಾಂ ನಗರದಲ್ಲಿ ಸುಮಾರು 40,000 ಜನ ನೇಕಾರ ಕುಟುಂಬದವರಿದ್ದಾರೆ. ಜವಳಿ ಪಾರ್ಕ್‌ನ್ನು ಬೆಳಗಾವಿ ನಗರದಲ್ಲಿ ಮಾಡಬೇಕೆಂಬುದು ನಮ್ಮ ಒಂದು ಅಭಿಲಾಷೆ.

**ಶ್ರೀ ಪ್ರಕಾಶ್ ಹುಕ್ಕೇರಿ:–** ಮಾನ್ಯ ಸಭಾಪತಿಯವರೆ, ಬೆಳಗಾವಿ ಜಿಲ್ಲೆಯ ಬೋರಗಾವ್‌ನಲ್ಲಿ ಜವಳಿ ಪಾರ್ಕ್ ಮಾಡುತ್ತಾರೆಯೇ ಎಂದು ಕೇಳಿದ್ದಾರೆ. ಇವರ ಸರ್ಕಾರವಿದ್ದಾಗ...

**ಸಭಾಪತಿಯವರು:–** ಅದು ಹಳೆಯದು. ಈಗ ನೀವು ಏನು ಮಾಡುತ್ತೀರಿ ಎಂಬುದನ್ನು ಹೇಳಿ. ಇದು ಪ್ರಶ್ನೋತ್ತರ ಅವಧಿ, ಏಕೆ ಚರ್ಚೆ ಮಾಡುತ್ತೀರಿ ಎಂಬುದನ್ನು ಹೇಳಿ.

(ಗೊಂದಲ)

**ಶ್ರೀ ಪ್ರಕಾಶ್ ಹುಕ್ಕೇರಿ:–** ಮಾನ್ಯ ಸಭಾಪತಿಯವರೆ, ನಾವು ಮಾತನಾಡಲು ನಿಂತರೆ ಇವರೇಕೆ ಏಳುತ್ತಾರೆ. ಇವರು ನಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು.

(ಗೊಂದಲ)

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೆ, ನಾವು ಬೋರ್‌ಗಾವ್‌ನಲ್ಲಿ ಮಾಡುವುದಕ್ಕೆ ವಿರೋಧ ಮಾಡುತ್ತಿಲ್ಲ. ಆದರೆ ವಿಷಯ ಹೊರಗೆ ಬರಬೇಕಲ್ಲ.

**ಶ್ರೀ ಪ್ರಕಾಶ್ ಹುಕ್ಕೇರಿ:–** ಮಾನ್ಯ ಸಭಾಪತಿಯವರೆ, ನಾನು ಉತ್ತರವನ್ನು ಕೊಡುತ್ತಿದ್ದೇನೆ. ನಾನು ಜವಾಬ್ದಾರಿಯುತ ಸಚಿವನಾಗಿ ನೀಡಿದ ಉತ್ತರ ಸರಿ ಇದೆಯೋ ಇಲ್ಲವೋ ಎಂಬುದನ್ನು ಅವರು ಹೇಳಲಿ.

**ಶ್ರೀ ಡಿ.ವಿ.ಸದಾನಂದಗೌಡ:–** ಮಾನ್ಯ ಸಭಾಪತಿಯವರೆ, ಅದಕ್ಕೆ ಉತ್ತರ ಇಲ್ಲಿಯೇ ಇದೆ. ನಮ್ಮ ಶಾಸಕರು ಜಾಗ ಇಲ್ಲದಿದ್ದರೆ ನಾವು ಜಾಗವನ್ನು ಕೊಡುತ್ತೇವೆಂದು ಹೇಳುತ್ತಿದ್ದಾರೆ. ಅದನ್ನು ಒಪ್ಪಿಕೊಂಡು ಮಾಡುವುದು ಸರ್ಕಾರದ ಜವಾಬ್ದಾರಿ ತಾನೆ.

**ಶ್ರೀ ಪ್ರಕಾಶ್ ಹುಕ್ಕೇರಿ:–** ಮಾನ್ಯ ಸಭಾಪತಿಯವರೆ, ನನಗೆ ಮಾತನಾಡಲು ಒಂದೆರಡು ನಿಮಿಷಗಳ ಕಾಲ ಅವಕಾಶವನ್ನು ಮಾಡಿಕೊಡಿ. ಅವರು ಬೋರ್‌ಗಾವ್‌ನಲ್ಲಿ ಜವಳಿ ಪಾರ್ಕ್‌ನ್ನು ಮಾಡಿ ಎಂದು specific

ಆಗಿ mention ಮಾಡಿದ್ದಾರೆ. ಈಗಾಗಲೇ ನಾವು ಸುಮಾರು 75 ಎಕರೆ ಜಮೀನನ್ನು ಕಂದಾಯ ಇಲಾಖೆಯಿಂದ ಸ್ವಾಧೀನಪಡಿಸಿಕೊಂಡು ಅದರ ಅಭಿವೃದ್ಧಿಗೋಸ್ಕರ ಈಗಾಗಲೇ ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳು 25 ಕೋಟಿ ರೂಪಾಯಿಗಳಿಗೆ ಅನುಮೋದನೆಯನ್ನು ಕೊಟ್ಟು ಮೂಲಭೂತ ಸೌಲಭ್ಯವನ್ನು ಒದಗಿಸಲು ಈಗಾಗಲೇ ಅಲ್ಲಿ ಟೆಂಡರ್‌ನ್ನು ಕರೆದಿದ್ದೇವೆ. ಇದನ್ನು ನಾನು ತಮ್ಮ ಗಮನಕ್ಕೆ ತರಬೇಕಲ್ಲಾ. ಅವರು ಸರ್ಕಾರ ಏನು ಮಾಡಿದೆ ಎಂದು ಕೇಳಿದ ಮೇಲೆ ಸರ್ಕಾರ ಏನು ಮಾಡಿದೆ ಎನ್ನುವ ಬಗ್ಗೆ ನಾವು ಉತ್ತರವನ್ನು ಕೊಡಬೇಕಲ್ಲಾ. ಬೋರ್‌ಗಾವ್‌ದಲ್ಲಿ ಜವಳಿ ಪಾರ್ಕ್‌ನ್ನು ಮಾಡಲಿಕ್ಕೆ 75 ಎಕರೆ ಜಮೀನನ್ನು... ನಾನು ದಾಖಲೆಯನ್ನು ಕೊಡುತ್ತೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೆ, ಅವರು ಬೋರ್‌ಗಾವ್‌ನಲ್ಲಿ ಮಾಡಿರುವುದನ್ನು ನಾನು ಸ್ವಾಗತ ಮಾಡಿದ್ದೇನೆ.

**ಸಭಾಪತಿಯವರು:–** ಮಾನ್ಯ ಸಚಿವರೆ, ಗಮನಿಸಿ. ಇದು ಪ್ರಶ್ನೋತ್ತರ ಅವಧಿ. ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳುತ್ತಾರೆ. ಅದಕ್ಕೆ ತಾವು ಮಾಡುತ್ತೀರ ಇಲ್ಲವಾ ಎಂಬುದನ್ನು ಹೇಳಿ. ಮಾಡುತ್ತೇವೆ ಅಥವಾ ಇಲ್ಲವೆಂದು ಹೇಳಬೇಕು. ಮಾಡುವುದಕ್ಕಾದರೆ ಏತಕ್ಕಾಗಿ ಮಾಡುತ್ತೀರಿ, ಮಾಡುವುದಕ್ಕಾಗಲಿಲ್ಲವೆಂದರೆ ಏತಕ್ಕಾಗಿ ಮಾಡುವುದಕ್ಕಾಗುವುದಿಲ್ಲ. ಇಷ್ಟು ಹೇಳಿದರೆ ಸಾಕು.

**ಶ್ರೀ ಪ್ರಕಾಶ್ ಹುಕ್ಕೇರಿ:–** ಮಾನ್ಯ ಸಭಾಪತಿಯವರೆ, ನಾವು ಯಾವುದನ್ನು ಮಾಡಿದ್ದೇವೆ ಅದನ್ನು ಅವರಿಗೆ ಹೇಳಬೇಕಲ್ಲಾ.

**ಸಭಾಪತಿಯವರು:–** ಮಾನ್ಯ ಸಚಿವರೆ, ತಾವು ದಯಮಾಡಿ ನಾನು ಹೇಳುವುದನ್ನು ಕೇಳಿ. ತಾವು ಪ್ರಶ್ನೋತ್ತರ ಅವಧಿಯಲ್ಲಿ ಹೇಳಿಕೆಯನ್ನು ಮಾಡುತ್ತಾ ಕುಳಿತರೆ ನಾನೇನು ಮಾಡಲಿ. ಪ್ರಶ್ನೋತ್ತರ ಅವಧಿಯಲ್ಲಿ ಪ್ರಶ್ನೆಗೆ ಉತ್ತರವನ್ನು ಕೊಡಬೇಕು. ಆಮೇಲೆ ಬೇಕಾದರೆ ನೀವು ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ, ನೀವು ಮಾತನಾಡಿ.

**ಶ್ರೀ ಪ್ರಕಾಶ್ ಹುಕ್ಕೇರಿ:-** ಮಾನ್ಯ ಸಭಾಪತಿಯವರೆ, ಬೆಳಗಾವಿ ಜಿಲ್ಲೆಯ ಬೋರ್‌ಗಾವ್‌ನಲ್ಲಿ 75 ಎಕರೆ ಜಮೀನನ್ನು ಜವಳಿ ಇಲಾಖೆಯಿಂದ ಕೈಗಾರಿಕಾ ಇಲಾಖೆಗೆ ಹಸ್ತಾಂತರ ಮಾಡಿದ್ದಾರೆ. 75 ಎಕರೆ ಜಮೀನನ್ನು ನಾವು ವಶಪಡಿಸಿಕೊಂಡು 25 ಕೋಟಿ ರೂಪಾಯಿಗಳಿಗೆ ಟೆಂಡರ್‌ನ್ನು ಕರೆದು ಈಗಾಗಲೇ ನಾವು ಕಾರ್ಯವನ್ನು ಪ್ರಾರಂಭ ಮಾಡಿದ್ದೇವೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಪ್ರಕಾಶ್ ಹುಕ್ಕೇರಿಯವರು ಬರುವುದಕ್ಕೆ ಮುಂಚೆ ಬೋರ್‌ಗಾವ್‌ನಲ್ಲಿ ಜವಳಿ ಪಾರ್ಕ್ ಮಾಡುವ ಬಗ್ಗೆ ನಾನು ಸ್ವಾಗತ ಮಾಡಿದ್ದೇನೆ. ಬೆಳಗಾವಿ ನಗರದಲ್ಲಿ ಮಾಡತಕ್ಕಂಥ ಜವಳಿ ಪಾರ್ಕ್ ಬಗ್ಗೆ ಜಿಲ್ಲಾಧಿಕಾರಿಗಳಿಂದ ವರದಿ...

**ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು):-** ಸಂಬಂಧಪಟ್ಟ ಸಚಿವರು ಉತ್ತರವನ್ನು ಹೇಳುತ್ತಾರೆ, ದಯಮಾಡಿ ಕೇಳಿ.

**ಶ್ರೀ ಬಾಬುರಾವ್ ಚಿಂಚನಸೂರ:-** ಸನ್ಮಾನ್ಯ ಸಭಾಪತಿಯವರೆ, SPV (Special Purpose Vehicle) ಹೆಸರಿನಲ್ಲಿ ನೋಂದಣಿಕೆಯನ್ನು ಮಾಡಿಕೊಂಡರೆ ಅಲ್ಲಿ ನಾವು ಜವಳಿ ಪಾರ್ಕ್‌ನ್ನು ನಿರ್ಮಾಣ ಮಾಡಲಾಗುತ್ತದೆ. ಇಡೀ ದೇಶದಲ್ಲಿಯೇ ಪ್ರಥಮ ಬಾರಿಗೆ ನಮ್ಮ ಮುಖ್ಯಮಂತ್ರಿಗಳು ಜವಳಿ ನೀತಿಯನ್ನು ಜಾರಿಗೆ ತಂದಿದ್ದಾರೆ. ಇದು ಒಂದು ಬಂಪರ್ ಕೊಡುಗೆಯಾಗಿದೆ.

**ಸಭಾಪತಿಯವರು:-** ಸಚಿವರು ಮಾತನಾಡುವುದನ್ನು ಕೇಳಬೇಕು. ಸಚಿವರು ಮಾತನಾಡುವುದಕ್ಕೆ ಬಿಡುವುದಿಲ್ಲವೆಂದರೆ ಹೇಗೆ? ಅವರು ಮಾತನಾಡಲಿ ಬಿಡಿ. ಅವರು ಸ್ವಲ್ಪ adjectives ಹಾಕಿ ಮಾತನಾಡುತ್ತಾರೆ.

**ಶ್ರೀ ಬಾಬುರಾವ್ ಚಿಂಚನಸೂರ:-** ನಾನು ಸಹ 5ನೇ ಬಾರಿಗೆ ಗೆದ್ದು ಬಂದಿದ್ದೇನೆ, ದಯಮಾಡಿ ಕೇಳಿ.

ಮಾನ್ಯ ಸಭಾಪತಿಯವರೆ, ಇಡೀ ದೇಶದಲ್ಲಿಯೇ ಪ್ರಥಮ ಬಾರಿಗೆ ನಮ್ಮ ಮುಖ್ಯಮಂತ್ರಿಗಳು ಜವಳಿ ನೀತಿಯನ್ನು ಜಾರಿಗೆ ತಂದಿರುವುದು ಒಂದು ಬಂಪರ್ ಕೊಡುಗೆಯಾಗಿದೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೆ, ಮುಖ್ಯಮಂತ್ರಿಗಳಿಗೆ ಅಭಿನಂದನೆ, ಅದರ ಬಗ್ಗೆ ನಾನು ಮಾಡುತಿಲ್ಲ.

**ಶ್ರೀ ಬಾಬುರಾವ್ ಚಿಂಚನಸೂರ:–** ಮಾನ್ಯ ಸಭಾಪತಿಯವರೆ, ನಾನು ಬೆಳಗಾವಿ ಬಗ್ಗೆ ಹೇಳುತ್ತಿದ್ದೇನೆ. SPV ಹೆಸರಿನಲ್ಲಿ ನೋಂದಣಿಯನ್ನು ಮಾಡಿಕೊಂಡರೆ ಜವಳಿ ಪಾರ್ಕ್‌ನ್ನು ನಿರ್ಮಿಸಲಾಗುವುದು.

ಮಾನ್ಯ ಮೃತ್ಯುಂಜಯ ಜಿನಗಾರವರೆ, ನಿಮ್ಮ ಪ್ರಶ್ನೆ ಸಂಖ್ಯೆ 916 ವರ್ಗಾವಣೆಯಾಗಿದೆ. ಅದು ಗ್ರಾಮೀಣಾಭಿವೃದ್ಧಿ ಇಲಾಖೆಗೆ ಹೋಗಬೇಕಾಗಿದೆ.

**ಗ್ರಾಮಾಂತರ ನೋಂದಣಿಗೆ ಫಾರಂ–9 ಮತ್ತು 11 ಇವುಗಳ ಗೊಂದಲ ಕುರಿತು**

**924, ಶ್ರೀ ಕೆ.ಮೋನಪ್ಪ ಭಂಡಾರಿ(ವಿಧಾನ ಸಭಾ ಕ್ಷೇತ್ರ)**

**ಅ)** ರಾಜ್ಯದಲ್ಲಿ ಆಸ್ತಿಗಳನ್ನು ನೋಂದಣಿ ಮಾಡುವಾಗ ಫಾರಂ–9 ಮತ್ತು 11 ಕೊಡುವಂತೆ ಸರ್ಕಾರಿ ಅಧಿಸೂಚನೆ ಹೊರಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಆ)** ಪರಿವರ್ತಿತ ಭೂ ಪ್ರದೇಶದ ನೋಂದಣಿಯನ್ನು ಸ್ಥಗಿತಗೊಳಿಸಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಪ್ರತಿನಿತ್ಯ ಸಾವಿರಾರು ಕೋಟಿ ರೂಪಾಯಿಗಳು ನಷ್ಟವಾಗುತ್ತಿರುವುದು ನಿಜವೇ;

**ಇ)** ಇದಕ್ಕಾಗಿ ಪರಿಷ್ಕೃತ ಆದೇಶವನ್ನು ಹೊರಡಿಸಲಾಗಿದೆಯೇ;

ಇದೊಂದು ಕಂಪ್ಯೂಟರ್ ಕಂಪನಿಗಳ ಲಾಬಿಗೆ ಅವಕಾಶ ಮಾಡಿಕೊಟ್ಟಂತೆ ಎಂದು ಸರ್ಕಾರ ಭಾವಿಸುವುದಿಲ್ಲವೆ;

**ಈ)** ಸದರಿ 9 ಮತ್ತು 11 ಫಾರಂ ನೀಡುವ ಕುರಿತು ಯಾವ ಕಂಪನಿ ಜೊತೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ;

ಇದರಿಂದ ಜನಸಾಮಾನ್ಯರಿಗೆ, ಗ್ರಾಮೀಣರಿಗೆ, ಗ್ರಾಮ ಪಂಚಾಯ್ತಿಗಳಿಗೆ ಆಗುವ ಅನುಕೂಲಗಳೇನು?

**ಶ್ರೀ ವಿ.ಶ್ರೀನಿವಾಸ ಪ್ರಸಾದ್(ಕಂದಾಯ ಸಚಿವರು)**

**ಅ)** ಹೌದು.

**ಆ)** ಪರಿವರ್ತಿತ ಭೂ ಪ್ರದೇಶದ ನೋಂದಣಿಯನ್ನು ಸ್ಥಗಿತಗೊಳಿಸಿರುವುದಿಲ್ಲ ಆದರೆ ಅನಧಿಕೃತ ಸ್ವತ್ತುಗಳ ಮತ್ತು ಬಡಾವಣೆಗಳ ನೋಂದಣಿಯನ್ನು ತಡೆಯಿಡಿಯಲು ಗಣಕೀಕೃತ ನಮೂನೆ 9 ಮತ್ತು 11ನ್ನು ಪಡೆದು ನೋಂದಾಯಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಸುತ್ತೋಲೆ ಸಂಖ್ಯೆ: ಗ್ರಾಅಪಾ 83 ಗ್ರಾಪಂಅ 2013 ದಿನಾಂಕ:14–06–2013ರ ಆದೇಶ ಹೊರಡಿಸಿರುತ್ತದೆ.

ಸದರಿ ಸುತ್ತೋಲೆಯಿಂದಾಗಿ ಗಣಕೀಕೃತ ನಮೂನೆ 9 ಮತ್ತು 11ಗಳನ್ನು ಗ್ರಾಮ ಪಂಚಾಯಿತಿಗಳಿಂದ ವಿತರಿಸುವಲ್ಲಿ ವಿಳಂಬವಾಗಿದ್ದರಿಂದ ಸರ್ಕಾರಕ್ಕೆ ಅಂತಹ ಸ್ವತ್ತುಗಳ ನೋಂದಣಿಯಿಂದ ಬರುವ ರಾಜಸ್ವದ ಮುಂದೂಡಿಕೆಯಾಗಿರುತ್ತದೆಯೇ ವಿನಹ ನಷ್ಟವಾಗಿರುವುದಿಲ್ಲ.

**ಇ)** ಹೌದು. ಗ್ರಾಮ ಪಂಚಾಯತಿಗಳಿಂದ ಗಣಕೀಕೃತ ನಮೂನೆ 9 ಮತ್ತು 11ಗಳನ್ನು ನೀಡುವಲ್ಲಿ ವಿಳಂಬವಾಗುತ್ತಿರುವುದರಿಂದ ಅಂತಹ ಸ್ವತ್ತುಗಳ ನೋಂದಣಿಯು ಕುಂಠಿತಗೊಂಡಿರುತ್ತದೆ. ಆದ್ದರಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಪರಿಷ್ಕೃತ ಸುತ್ತೋಲೆ ಸಂಖ್ಯೆ: ಗ್ರಾಅಪಾ 83 ಗ್ರಾಪಂಅ 2013(ಭಾಗ–7) ದಿನಾಂಕ:31–10–2013ರಂತೆ ನಮೂನೆ 9 ಮತ್ತು 11ಗಳನ್ನು ದಿ:14–06–2013ರ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಆಸ್ತಿಗಳನ್ನು ಆಧರಿಸಿ

ಉಪನೋಂದಣಿ ಕಛೇರಿಯಲ್ಲಿ ನೋಂದಾಯಿಸಬಹುದು ಎಂದು ಸೂಚನೆಗಳನ್ನು ಹೊರಡಿಸಿರುತ್ತದೆ.

ಉದ್ಭವಿಸುವುದಿಲ್ಲ.

**ಈ)** ನಮೂನೆ 9 ಮತ್ತು 11ಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ತನ್ನದೇ ಆದ ಇ–ಸ್ವತ್ತು ತಂತ್ರಾಂಶದಿಂದ ಗ್ರಾಮ ಪಂಚಾಯತಿಗಳ ಮುಖಾಂತರ ವಿತರಿಸುತ್ತಿರುವುದರಿಂದ ಯಾವುದೇ ಕಂಪನಿ ಜೊತೆ ಒಪ್ಪಂದ ಮಾಡಿಕೊಂಡಿರುವುದಿಲ್ಲ.

ಯಾವುದೇ ಕಂಪನಿಯ ಜೊತೆ ಒಪ್ಪಂದ ಮಾಡಿಕೊಂಡಿಲ್ಲದಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

**ಶ್ರೀ ಕೆ.ಮೋನಪ್ಪ ಭಂಡಾರಿ:–** ಮಾನ್ಯ ಸಭಾಪತಿಯವರೆ, ಸರ್ಕಾರ ನನ್ನ (ಆ) ಪ್ರಶ್ನೆಗೆ 'ಸದರಿ ಸುತ್ತೋಲೆಯಿಂದಾಗಿ ಗಣಕೀಕೃತ ನಮೂನೆ 9 ಮತ್ತು 11 ಗಳನ್ನು ಗ್ರಾಮ ಪಂಚಾಯಿತಿಗಳಿಂದ ವಿತರಿಸುವಲ್ಲಿ ವಿಳಂಬವಾಗಿದ್ದರಿಂದ ಸರ್ಕಾರಕ್ಕೆ ಅಂತಹ ಸ್ವತ್ತುಗಳ ನೋಂದಣಿಯಿಂದ ಬರುವ ರಾಜಸ್ವದ ಮುಂದೂಡಿಕೆಯಾಗಿರುತ್ತದೆಯೇ ವಿನಃ ನಷ್ಟವಾಗಿರುವುದಿಲ್ಲ.' ಎನ್ನುವ ಉತ್ತರವನ್ನು ನೀಡಿದ್ದಾರೆ. ಆದರೆ ಅದರಿಂದ ಸಾಮಾನ್ಯ ಜನರಿಗೆ ನೋಂದಾವಣೆ ಮಾಡುವಂಥ ಸಮಸ್ಯೆಗಳಿಗೆ ಪರಿಹಾರವೇನು ಎಂಬುದನ್ನು ಹೇಳಿಲ್ಲ. ಸಾಮಾನ್ಯ ಜನರು, ಸಣ್ಣ ಸಣ್ಣ ಹಿಡುವಳಿದಾರರು ಆಸ್ತಿ ನೋಂದಣಿಗೆ ಬೇಕಾಗಿ ಬೇರೆ ಬೇರೆ ಸಂಕಷ್ಟಗಳಿಗೆ ಪರಿಹಾರಕ್ಕಾಗಿ ತಮ್ಮ ತಮ್ಮ ಆಸ್ತಿಗಳನ್ನು ಮಾರಾಟ ಮಾಡಿ ವ್ಯವಸ್ಥೆಯನ್ನು ಮಾಡಿಕೊಳ್ಳಲು ನೋಂದಾವಣೆ ಮಾಡಲು ಅಸಾಧ್ಯವಾದ ಸ್ಥಿತಿ ನಿರ್ಮಾಣವಾಗಿದೆ. ಉದಾಹರಣೆಗೆ ಮಂಗಳೂರು ಗ್ರಾಮಾಂತರ Sub-Registrar ಕಛೇರಿಯಲ್ಲಿ ಕಳೆದ ಜೂನ್ ತಿಂಗಳಿನಿಂದ ಈವರೆವಿಗೂ ಯಾವುದೇ ರಿಜಿಸ್ಟ್ರೇಶನ್ ಆಗಿಲ್ಲ, ನಿಂತು ಹೋಗಿದೆ. ಅದಕ್ಕೆ ನಾನು ಪುನಃ

ಪ್ರಶ್ನೆಯನ್ನು ಕೇಳಿದ್ದಕ್ಕೆ ಪರಿಷ್ಕೃತ ಆದೇಶವಾಗಿದೆ ಎಂದು ಹೇಳಿ ಮಾಹಿತಿಯನ್ನು ಕೊಟ್ಟಿದ್ದಾರೆ. 'ದಿನಾಂಕ:14-06-2013ರ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಆಸ್ತಿಗಳನ್ನು ಆಧರಿಸಿ ಉಪನೋಂದಣಿ ಕಛೇರಿಯಲ್ಲಿ ನೋಂದಾಯಿಸಬಹುದು ಎಂದು ಸೂಚನೆಗಳನ್ನು ಹೊರಡಿಸಿರುತ್ತದೆ.' ಎಂದು ಹೇಳಿದ್ದಾರೆ. ಆದರೆ ದಿ:14-06-2013ರ ನಂತರದ್ದಕ್ಕೆ ಅಧಿಸೂಚನೆಯಲ್ಲಿ ಏನು ಹೇಳಿದ್ದಾರೆಂದರೆ, "ಈ ಪ್ರದೇಶದಲ್ಲಿ ದಿನಾಂಕ:14-06-2013ರ ನಂತರದ ಸೃಜಿಸಬಹುದಾದ ಹೊಸ layout ಗಳಿಗೆ ಅನುಮೋದನೆ ನೀಡುವ ಅಧಿಕಾರವನ್ನು ತಾಲ್ಲೂಕು ಪಂಚಾಯ್ತಿಗಳು ನೀಡಲು ತೀರ್ಮಾನಿಸಲಾಗಿದೆ." ಎಂದು ಇದೆ. ಹಿಂದೆ ಗ್ರಾಮ ಪಂಚಾಯ್ತಿಯಲ್ಲಿ ನೀಡುತ್ತಿದ್ದರು. ಈಗ ಏನಾಗಿದೆ ಎಂದರೆ ಕಾವಲಿಯಿಂದ ತೆಗೆದು ಬಾಣಲೆಗೆ ಹಾಕಿದಂತಾಗಿದೆ. ಮೊದಲು ಸ್ವಲ್ಪ ಸ್ವಲ್ಪ ಬಿಸಿಯಾಗುತ್ತಿತ್ತು. ಈಗ ಬಾಣಲೆಗೆ ಹಾಕಿದಾಗ ಕುದಿಯುವ ಎಣ್ಣೆಗೆ ಹಾಕಿರುವಂಥ ಸ್ಥಿತಿ ಸಾಮಾನ್ಯ ಜನರಿಗೆ ನಿರ್ಮಾಣವಾಗಿದೆ. ಅದಕ್ಕೆ ಯಾವುದೇ ಪರಿಹಾರವನ್ನು ಕೊಡುವ ಕೆಲಸವನ್ನು ಮಾಡಲಿಲ್ಲ. ಆದರೆ ಹೊಸ layout plan ಗಳಿಗೆ ಅನುಮೋದನೆಯನ್ನು ನೀಡಲು ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿಗಳು ಅನುಸರಿಸಬಹುದಾದ ವಿಧಿ-ವಿಧಾನಗಳ ಬಗ್ಗೆ ಪ್ರತ್ಯೇಕ ಮಾರ್ಗಸೂಚಿಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ನಗರ ಮತ್ತು ಗ್ರಾಮಾಂತರ ಇಲಾಖೆಗೆ ನಿರ್ದೇಶನವನ್ನು ಹೊರಡಿಸಲಾಗುವುದು. ಈ ಆಜ್ಞೆಯನ್ನು 31ನೇ ಅಕ್ಟೋಬರ್ 2013ಕ್ಕೆ ಹೊರಡಿಸಿದ್ದಾರೆ. ಇವತ್ತು 4ನೇ ಡಿಸೆಂಬರ್ 2013ರಲ್ಲಿ ನಾವಿದ್ದೇವೆ. ಪರಿಷ್ಕೃತ ಸೂಚನೆಯನ್ನು ಇಷ್ಟರವರೆವಿಗೂ ಹೊರಡಿಸಲಿಲ್ಲ. ಇದರಿಂದ ಇವರು ಸೂಚನೆಯನ್ನು ಹೊರಡಿಸಲಿಕ್ಕೆ ಆಗದೇ ಇರುವ ಪರಿಸ್ಥಿತಿ ನಿರ್ಮಾಣವಾಗಿದೆ. ಇವರು ಯಾವಾಗ ಸೂಚನೆಯನ್ನು ಹೊರಡಿಸುತ್ತಾರೆ ಮತ್ತು ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆಂಬ ಬಗ್ಗೆ ಸರ್ಕಾರ ತಕ್ಷಣವೇ ಸೂಕ್ತವಾದ ಉತ್ತರವನ್ನು ಕೊಡಬೇಕು. ನಂತರ ಸ್ಥಳೀಯ ಯೋಜನಾ ಪ್ರಾಧಿಕಾರ, ಉದಾಹರಣೆಗಾಗಿ BDA, BMRDA ಇತ್ಯಾದಿ ಪ್ರದೇಶಗಳ ಒಳಗಡೆ ಇರುವ ಆಸ್ತಿಗಳಿಗೆ ಸಂಬಂಧಿಸಿದಂತೆ ದಿನಾಂಕ: 4-1-2000ರ ಸುತ್ತೋಲೆಯನ್ನು

Layout ದಾಖಲೆಯನ್ನು ಕಡ್ಡಾಯವಾಗಿ ಒದಗಿಸುವುದು ಎಂದು ಹೇಳಿದ್ದಾರೆ. Layout plan ಗಳ ಬಗ್ಗೆ ಹೇಳುವುದಾದರೆ, converted lands ಗೆ ಮಾತ್ರ ನಮೂನೆ 9 ಮತ್ತು 11 ಬೇಕಾಗಿದೆ. ಇದು ಕೃಷಿ ಭೂಮಿಗೆ ಅಗತ್ಯವಿಲ್ಲ. ಒಂದು ವೇಳೆ converted lands ನಲ್ಲಿ ಮನೆ ಇದ್ದರೆ ಅದಕ್ಕೆ layout plan ಕೊಡುವುದಿಲ್ಲ. ಗಣಕೀಕೃತ ನಮೂನೆ 9 ಮತ್ತು 11 ಕೊಡುವುದಕ್ಕೆ ಬರುವುದಿಲ್ಲ. ಇದಕ್ಕೆ ಪರಿಹಾರವನ್ನು ಸಚಿವರು ಸೂಚಿಸಬೇಕು. ಇದರ ಉದ್ದೇಶವೇನೆಂದರೆ, ಭೂಮಿಯನ್ನು ಅನಧಿಕೃತವಾಗಿ ಬೇರೆ ಬೇರೆ ವ್ಯಕ್ತಿಗಳು ಸುಳ್ಳು ದಾಖಲೆಗಳನ್ನು ನಿರ್ಮಾಣ ಮಾಡಿ ಪರಿವರ್ತನೆ ಮಾಡಿಕೊಳ್ಳುತ್ತಿದ್ದರು, ವರ್ಗಾವಣೆ ಮಾಡಿಕೊಳ್ಳುತ್ತಿದ್ದರು. ಇದಾಗಬಾರದು ಎಂದು ಸುತ್ತೋಲೆ ಹೊರಡಿಸಲಾಗಿದೆ ಎಂದು ನಾನು ಭಾವಿಸುತ್ತೇನೆ. ಆದರೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಈಗಾಗಲೇ ಸರ್ಕಾರಿ ಭೂಮಿಗಳಿಗೆ R.T.C. ಇದೆ. ಖಾಸಗಿ ಭೂಮಿಗಳಿಗೆ, ಪರಿವರ್ತನೆಯಾಗಿದ್ದರೆ ಖಾತೆಗಳಿರುತ್ತವೆ, ಒಂದು ವೇಳೆ ಪರಿವರ್ತನೆ ಆಗಿಲ್ಲ ಎಂದರೆ ಅದಕ್ಕೆ R.T.C. ಗಳಿವೆ. ಹಾಗಾಗಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಈ ರೀತಿ ಅವ್ಯವಹಾರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನನ್ನ ಇನ್ನೊಂದು ಒತ್ತಾಯ ಏನೆಂದರೆ, single site compulsory ಮಾಡಬೇಕು ಎನ್ನುವುನ್ನು ಕೈಬಿಟ್ಟು, ಕಡುಬಡವರು ಸುಲಭವಾಗಿ ರಿಜಿಸ್ಟ್ರೇಷನ್ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಉಳ್ಳವರು ಹೇಗಾದರೂ Agreement, General Body Meeting ಗಳನ್ನು ಮಾಡಿ ತಮಗೆ ಬೇಕಾದ ಹಾಗೆ trasfer ಮಾಡಿಕೊಳ್ಳುತ್ತಾರೆ. ಆ ವ್ಯವಸ್ಥೆ ಮಾಡಿಕೊಳ್ಳುವುದಕ್ಕೆ ಬಡವರಿಗೆ ಆಗುವುದಿಲ್ಲ. ಇವರ ಈ ಆದೇಶದಿಂದ ಕಡುಬಡವರು ಭೂಮಿಯನ್ನು ಮಾರಿಯೇ operation ಮಾಡಿಕೊಳ್ಳಬೇಕಾಗುತ್ತದೆ. ಇದಕ್ಕೆ ಪರಿಹಾರ ಕಂಡುಕೊಳ್ಳುವಂತಹ ಸೂಕ್ತ ಮಾರ್ಗವನ್ನು ಮಾನ್ಯ ಸಚಿವರು ಸೂಚಿಸಬೇಕು.

**ಶ್ರೀ ವಿ.ಶ್ರೀನಿವಾಸ್ ಪ್ರಸಾದ್(ಕಂದಾಯ ಸಚಿವರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು specificಆಗಿ ಯಾವುದೇ ಪ್ರಶ್ನೆ ಕೇಳಲಿಲ್ಲ. ಗಣಕೀಕೃತ ನಮೂನೆ 9 ಮತ್ತು 11ರ ಬಗ್ಗೆ ಪ್ರಶ್ನೆ ಮಾಡಿದ್ದಾರೆ. ಹಿಂದೆ

ಗಣಕೀಕೃತ ನಮೂನೆ 1 ಮತ್ತು 12 ಇತ್ತು. ಈಗ 9 ಮತ್ತು 11 ತಂದಿದ್ದೇವೆ. It is one and the same. 1 ಮತ್ತು 12 ಹಾಗೂ 9 ಮತ್ತು 11ಕ್ಕೆ ಇರುವ ವ್ಯತ್ಯಾಸವೇನೆಂದರೆ, 9 ಮತ್ತು 11ಅನ್ನು software develop ಮಾಡಿ, ಗಣಕೀಕೃತ ಮಾಡಿದ್ದೇವೆ. ಇದು R.D.P.R. ನವರು ಕಳುಹಿಸಿಕೊಟ್ಟಿರುವ ಆದೇಶವಾಗಿದೆ. ರಿಜಿಸ್ಟ್ರೇಷನ್ ಮಾಡುವಾಗ ಯಾವ ಯಾವ ದಾಖಲೆ ಜೊತೆ ಏನೇನು ಇರಬೇಕು ಎನ್ನುವುದು ನಮೂನೆ 1 ಮತ್ತು 12ರಲ್ಲಿ ಇತ್ತು. ಅದರ ಆಧಾರದ ಮೇಲೆ ಮಾಡುತ್ತಿದ್ದರು. 9 ಮತ್ತು 11 ಬಂದಮೇಲೆ ಗಣಕೀಕರಣ ಮಾಡಿ, ಯಾವುದೇ ರೀತಿಯ ಮೋಸ, ವಂಚನೆ, ನಕಲಿ ನಮೂನೆ ಆಗಬಾರದು ಎನ್ನುವ ಉದ್ದೇಶದಿಂದ ಈ system ಅನ್ನು R.D.P.R. ನಿಂದ ಜಾರಿಗೆ ತರಲಾಯಿತು. R.D.P.R. ನವರು ಏನು ಸುತ್ತೋಲೆ ಹೊರಡಿಸಿದ್ದಾರೋ ಅದರ ಪ್ರಕಾರ, ಮೂಲ ದಾಖಲೆಗಳನ್ನು ತಂದರೆ ರಿಜಿಸ್ಟ್ರೇಷನ್ ಮಾಡಬೇಕೆಂದು ಎಲ್ಲಾ Sub-Registrar Office ಗಳಿಗೆ ಆದೇಶ ಕೊಡಲಾಗಿದೆ. 9 ಮತ್ತು 11 ಬಂದರೂ ಏನೇನು ತೊಂದರೆಗಳಾಗುತ್ತಿವೆ ಎನ್ನುವುದು ಇಲ್ಲಿರುವ ಪ್ರಶ್ನೆ. ಇದರ ಬಗ್ಗೆ, ಮಂಗಳೂರು ಮತ್ತು ಇತರ ಭಾಗದ ಶಾಸಕರ ಜೊತೆ ಚರ್ಚೆ ಮಾಡಿ, ಇದಕ್ಕೆ Cabinet Sub-Committee ಮಾಡಿಕೊಂಡು, 9 ಮತ್ತು 11 ತಂದಿರುವುದರಿಂದ ಏನು ತೊಂದರೆ ಆಗುತ್ತಿದೆ ಎನ್ನುವುದರ ಬಗ್ಗೆ ಬಹಳಷ್ಟು ಚರ್ಚೆ ಮಾಡಿ, ಇದನ್ನು ಇನ್ನೂ ಸರಳೀಕರಣಗೊಳಿಸಬೇಕೆಂದು 14.6.2013ರ ಹಿಂದಿನವರೆಗೆ ಇದ್ದಂಥ ಸ್ವತ್ತುಗಳ ಆಧಾರದ ಮೇಲೆ ರಿಜಿಸ್ಟ್ರೇಷನ್ ಮಾಡಿಕೊಡಬೇಕು ಎಂದು ಆದೇಶ ಹೊರಡಿಸಿದೆವು. ಇದಾದ ಮೇಲೆ ಬರುವಂತಹ ರಿಜಿಸ್ಟ್ರೇಷನ್‌ಗಳಿಗೆ ಯಾವ ಕ್ರಮ ಅನುಸರಿಸಬೇಕು ಎಂಬ ಬಗ್ಗೆ ಇನ್ನೂ ಕೂಡ ಚರ್ಚೆ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು, ಕಂಪನಿಗಳ ಜೊತೆ ಲಾಬಿ ಇದೆಯೇ ಎಂದು ಕೇಳಿದ್ದಾರೆ. R.D.P.R. ನವರು ಅವರದೇ ಆದಂತಹ software ಅನ್ನು ಅಭಿವೃದ್ಧಿ ಮಾಡಿದ್ದಾರೆ. ಪ್ರತಿಯೊಂದು ಗ್ರಾಮ ಪಂಚಾಯಿತಿಗಳಲ್ಲಿ ಇದನ್ನು ಗಣಕೀಕರಣ ಮಾಡಬೇಕು, ಮೋಸ, ವಂಚನೆ, ನಕಲಿ ನಮೂನೆ ಇಂಥವುಗಳನ್ನು ತಪ್ಪಿಸಬೇಕು ಎನ್ನುವುದರ ಹಿನ್ನೆಲೆಯಲ್ಲಿ 9 ಮತ್ತು 11ನ್ನು ತರಲಾಗಿದೆ. ಇದರಲ್ಲಿ ಕೆಲವು ಕಡೆ ದೋಷಗಳಿವೆ. ಈಗ ಆ ದೋಷಗಳನ್ನು

R.D.P.R. ನವರು ಸರಿಪಡಿಸುತ್ತಿದ್ದಾರೆ. ಅದಾದ ಮೇಲೆ ರಿಜಿಸ್ಟ್ರೇಷನ್‌ಗೆ ಸಂಬಂಧಪಟ್ಟಂತೆ 9 ಮತ್ತು 11ನ್ನು ಏನು issue ಮಾಡುತ್ತಾರೋ ಅದರ ಆಧಾರದ ಮೇಲೆ ರಿಜಿಸ್ಟ್ರೇಷನ್ ಮಾಡುತ್ತೇವೆ. ನಿಮ್ಮ ಪ್ರದೇಶಗಳಲ್ಲೂ ಯಾವುದೇ ರೀತಿ ತೊಂದರೆ ಆಗದ ಹಾಗೆ ಆ ನಿಟ್ಟಿನಲ್ಲಿ ಸೂಕ್ತವಾದ ಆದೇಶಗಳನ್ನು ಕೊಟ್ಟಿದ್ದೇವೆ. ಇದಕ್ಕೆ ಈಗಾಗಲೇ R.D.P.R. ನವರು ಸುತ್ತೋಲೆಯನ್ನು ಹೊರಡಿಸಿರುವುದರಿಂದ ಯಾವುದೇ ರೀತಿ ತೊಂದರೆಯಾಗುತ್ತಿಲ್ಲ.

**ಡಾ॥ನಂಜುಂಡಪ್ಪ ವರದಿ ಅನುಷ್ಠಾನದ ಬಗ್ಗೆ ವಿಶೇಷ ಘಟಕ ಸ್ಥಾಪನೆ ಕುರಿತು**

**825, ಶ್ರೀ ವೀರಣ್ಣ ಮತ್ತಿಕಟ್ಟಿ(ವಿಧಾನ ಸಭಾ ಕ್ಷೇತ್ರ)**

**1)** ಉತ್ತರ ಕರ್ನಾಟಕದ ಅತೀ ಹಿಂದುಳಿದ ತಾಲ್ಲೂಕುಗಳಲ್ಲಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಸರ್ಕಾರವು ಕೈಗೊಂಡ ನೀರಾವರಿ ಯೋಜನೆಳಾವುವು?

**2)** ಸದರಿ ಯೋಜನೆಗಳಿಗಾಗಿ ಒದಗಿಸಲಾದ ಅನುದಾನದ ಮೊತ್ತ ಮತ್ತು ವೆಚ್ಚದ ವಿವರಗಳನ್ನು ನೀಡುವುದು?

**3)** ಡಾ: ನಂಜುಂಡಪ್ಪ ವರದಿ ಪ್ರಕಾರ ಈ ದಿಸೆಯಲ್ಲಿ ಸಾಧಿಸಲಾದ ಪ್ರಗತಿಯ ಪ್ರಮಾಣವೆಷ್ಟು; ಡಾ: ನಂಜುಂಡಪ್ಪನವರ ಎಲ್ಲಾ ಶಿಫಾರಸ್ಸುಗಳ ಅನುಷ್ಠಾನ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಕುರಿತು ನಿಯತಕಾಲಿಕವಾಗಿ ಪರಾಮರ್ಶಿಸಲು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ "ವಿಶೇಷ ಘಟಕ" ವನ್ನು ಸ್ಥಾಪಿಸಲಾಗುವುದೇ?

**ಶ್ರೀ ಎಂ.ಬಿ.ಪಾಟೀಲ್(ಜಲ ಸಂಪನ್ಮೂಲ ಸಚಿವರು)**

**1)** ಉತ್ತರ ಕರ್ನಾಟಕದ ಹಿಂದುಳಿದ ತಾಲ್ಲೂಕುಗಳಲ್ಲಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಇಲಾಖೆಯು ಕೈಗೊಂಡ ನೀರಾವರಿ ಯೋಜನೆಯ ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

**2)** ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

**3)** ಡಾ: ನಂಜುಂಡಪ್ಪ ವರದಿ ಪ್ರಕಾರ ಸಾಧಿಸಲಾದ ಪ್ರಗತಿಯ ವಿವರಗಳು ಈ ಕೆಳಕಂಡಂತಿವೆ:

| ಕ್ರ ಸಂ | ಯೋಜನೆಯ ಹೆಸರು | ಇದುವರೆಗೆ ಸಾಧಿಸಲಾದ ಪ್ರಗತಿ (₹ ಲಕ್ಷಗಳಲ್ಲಿ) | ಇದುವರೆಗೂ ಸಾಧಿಸಲಾದ ನೀರಾವರಿ ಕ್ಷೇತ್ರ ಹೆಕ್ಟೇರ್ ಗಳಲ್ಲಿ |
|---|---|---|---|
| 1) | ಅಮರ್ಜಾ ಯೋಜನೆ | 10211.06 | 7159 |
| 2) | ಗಂಡೋರಿನಾಲಾ ಯೋಜನೆ | 8481.25 | 7943 |
| 3) | ಬೆಣ್ಣೆತೋರಾ ಯೋಜನೆ | 6407.69 | 19978 |
| 4) | ಕೆಳದಂಡೆ ಮುಲ್ಲಾಮಾರಿ ಯೋಜನೆ | 4830.77 | 9400 |
| 5) | ತುಂಗಭದ್ರಾ ಯೋಜನೆ | 2732.73 | 362938 |
| 6) | ಹಗರಿಬೊಮ್ಮನಹಳ್ಳಿ ಯೋಜನೆ | 150.94 | 2965 |
| 7) | ಕನಕನಾಲಾ ಯೋಜನೆ | 74.38 | 1417 |
| 8) | ನಾರಿಹಳ್ಳ ಯೋಜನೆ | 292.01 | 1539 |

| | | | |
|---|---|---|---|
| 9) | ರಾಜೋಳಿ ಬಂಡಾ ತಿರುವು ಯೋಜನೆ | 120.46 | 3002 |
| 10) | ಮಸ್ಕಿನಾಲಾ ಯೋಜನೆ | 758.73 | 2380 |
| 11) | ವಿಜಯನಗರ ಕಾಲುವೆ | 1092.77 | 11222 |
| 12) | ಹಿರೇಹಳ್ಳ ಯೋಜನೆ | 5136.82 | 8330 |
| 13) | ಸಿಂಗಟಾಲೂರು ಏತ ನೀರಾವರಿ ಯೋಜನೆ | 97754.69 | 69822 |

ಕೃಷ್ಣಾ ಮೇಲ್ದಂಡೆ ಯೋಜನೆ ಘಟ್ಟ–1 ಮತ್ತು 2ರ ಕಾಮಗಾರಿಗಳು ಪೂರ್ಣಗೊಂಡಿದ್ದು, 6.13 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದ್ದು, ಒಟ್ಟು ₹ 11053.00 ಕೋಟಿ ರೂ. ವೆಚ್ಚವಾಗಿರುತ್ತದೆ.

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ "ವಿಶೇಷ ಘಟಕ" ವನ್ನು ಸ್ಥಾಪಿಸುವ ಯಾವುದೇ ಪ್ರಸ್ತಾವನೆಯು ಇರುವುದಿಲ್ಲವೆಂದು ಯೋಜನಾ ಇಲಾಖೆಯವರು ತಿಳಿಸಿರುತ್ತಾರೆ.

**ಅನುಬಂಧ–1**

**ಉತ್ತರ ಕರ್ನಾಟಕದ ಹಿಂದುಳಿದ ತಾಲ್ಲೂಕುಗಳಲ್ಲಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಜಲ ಸಂಪನ್ಮೂಲ ಇಲಾಖೆಯಿಂದ ಕೈಗೆತ್ತಿಕೊಳ್ಳಲಾದ ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನೆಗಳು ವಿವರಗಳು**

**(₹ ಕೋಟಿಗಳಲ್ಲಿ)**

| ಕ್ರ. ಸಂ. | ಯೋಜನೆಗಳು | ಅನುದಾನ ಹಂಚಿಕೆ | ಸಂಚಿತ ವೆಚ್ಚ |
|---|---|---|---|
| 1 | ಕೃಷ್ಣಾ ಮೇಲ್ದಂಡೆ ಯೋಜನೆ ಘಟ್ಟ–1 | 5668.02 | 5314.51 |

| | | | |
|---|---|---|---|
| | ಮತ್ತು ಘಟ್ಟ-2 | | |
| 2 | ರಾಮಥಾಳ(ಮರೋಳ್) ಏತ ನೀರಾವರಿ ಯೋಜನೆ | 1073.30 | 798.56 |
| 3 | ತಿಮ್ಮಾಪುರ ಏತ ನೀರಾವರಿ ಯೋಜನೆ | 167.35 | 116.88 |
| 4 | ತೆಗ್ಗಿ ಸಿದ್ದಾಪುರ ಏತ ನೀರಾವರಿ ಯೋಜನೆ | 40.41 | 35.41 |
| 5 | ಸೊನ್ನ ಏತ ನೀರಾವರಿ ಯೋಜನೆ | 9.59 | 9.59 |
| 6 | ರೊಳ್ಳಿ ಮನ್ನಿಕೇರಿ ಏತ ನೀರಾವರಿ ಯೋಜನೆ | 22.98 | 17.98 |
| 7 | ಸೊಂತಿ ಏತ ನೀರಾವರಿ ಯೋಜನೆ | 299.56 | 174.56 |
| 8 | ನಾರಾಯಣಪುರ ಬಲದಂಡೆ ವಿತರಣಾ ಕಾಲುವೆ-9ಎ ಕಾಮಗಾರಿ | 181.00 | 98.50 |
| 9 | ಗೂಗಲ್ ಬ್ಯಾರೇಜ್ | 99.47 | 94.47 |
| 10 | ರಾಜನ್ ಕೊಳ್ಳೂರು ಏತ ನೀರಾವರಿ ಯೋಜನೆ | 12.08 | 11.08 |
| 11 | ಬಿಜಾಪುರ ಜಿಲ್ಲೆಯಡಿ ಕೆರೆ ತುಂಬುವ ಯೋಜನೆ | 118.55 | 98.55 |
| 12 | 4-ಮಾಂಜ್ರಾ ಬ್ಯಾರೇಜುಗಳು | 268.05 | 248.05 |
| 13 | ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ-3 ರ ಕಾಮಗಾರಿಗಳಿಗೆ | 1830.26 | 976.41 |
| 14 | ನಾರಾಯಣಪುರ ಎಡದಂಡೆ ಕಾಲುವೆ ಜಾಲದ ಆಧುನೀಕರಣ ಕಾಮಗಾರಿಗಳಿಗೆ | 706.15 | 231.15 |

| | | | |
|---|---|---|---|
| 15 | ಭೀಮಾ ಏತ ನೀರಾವರಿ ಯೋಜನೆ | 557.93 | 401.97 |
| 16 | ಗಂಡೋರಿನಾಲಾ | 277.25 | 284.46 |
| 17 | ಬೆಣ್ಣೆತೊರಾ | 403.32 | 409.77 |
| 18 | ಮುಲ್ಲಾಮಾರಿ ಕೆಳದಂಡೆ | 224.85 | 221.79 |
| 19 | ಚಂದ್ರಂಪಳ್ಳಿ | 3.81 | 3.81 |
| 20 | ಹತ್ತಿಕುಣಿ | 0.65 | 0.65 |
| 21 | ಅಮರ್ಜ | 266.76 | 244.87 |
| 22 | ಮುಲ್ಲಾಮಾರಿ ಮೇಲ್ದಂಡೆ | 19.64 | 19.64 |
| 23 | ಸೌದಗರ್ | 5.57 | 5.57 |
| 24 | ಚುಲ್ಕಿನಾಲಾ | 72.18 | 71.68 |
| 25 | ಕಾರಂಜಾ | 640.50 | 622.94 |
| 26 | ತುಂಗಭದ್ರಾ | 4.53 | 4.53 |
| 27 | ಹಗರಿಬೊಮ್ಮನಹಳ್ಳಿ | 3.95 | 3.95 |
| 28 | ನಾರೀಹಳ್ಳ | 3.20 | 3.20 |
| 29 | ಕನಕನಾಲಾ | 1.00 | 1.00 |
| 30 | ಮಸ್ಕಿನಾಲಾ | 46.17 | 46.17 |
| 31 | ರಾಜೋಳಿಬಂಡಾ ತಿರುವು | 0.52 | 0.52 |
| 32 | ವಿಜಯನಗರ ಕಾಲುವೆ | 10.92 | 10.92 |
| 33 | ಸಿಂಗಟಲೂರು ಏನೀಯೋ | 1295.90 | 1060.90 |

| | | | |
|---|---|---|---|
| 34 | ಹಿರೇಹಳ್ಳ ಯೋಜನೆ | 224.16 | 224.16 |
| | **Total** | **14559.58** | **11868.20** |

**ಡಾ: ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಗಳೆ, ಉತ್ತರ ಕರ್ನಾಟಕದ ಬಹುಪಾಲು ನೀರಾವರಿಯಿಂದ ವಂಚಿತವಾಗಿರುವ ಕಡೆ ಈ ನೀರಾವರಿ ಯೋಜನೆಗಳು ಬರುವ ಹಿನ್ನೆಲೆಯಲ್ಲಿ ಈ ಕುರಿತು ಈ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಉತ್ತರದಲ್ಲಿ, ಕೃಷ್ಣಾ ಮೇಲ್ದಂಡೆ ಯೋಜನೆ ಘಟ್ಟ–1 ಮತ್ತು 2ರ ಕಾಮಗಾರಿಗಳು ಪೂರ್ಣಗೊಂಡಿದ್ದು, 6.13 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ ಎಂದು ತಿಳಿಸಿದ್ದಾರೆ. ಇದನ್ನು ಇನ್ನಷ್ಟು ತೀವ್ರಗತಿಯಲ್ಲಿ ಕೈಗೊಂಡು, ಈ ಭಾಗದ ರೈತರಿಗೆ ಹೆಚ್ಚು ಅನುಕೂಲ ಆಗುವ ಹಾಗೆ ಮಾಡಬೇಕು. ಮತ್ತೆ, ಏತ ನೀರಾವರಿ ಯೋಜನೆಗಳು ಬಹಳ ವರ್ಷಗಳಿಂದ ಬಾಕಿ ಇದೆ. ಹಿಂದೆ ಮಾನ್ಯ ಸಚಿವರೂ ಕೂಡ ಬಿಜಾಪುರ ಜಿಲ್ಲೆಯ ಕೆರೆ ತುಂಬಿಸುವ ಸಂಬಂಧ ಸಾಕಷ್ಟು ಹೋರಾಟ ಮಾಡಿದ್ದಾರೆ. ಅದಕ್ಕೆ ಪೂರಕವಾಗಿ, ಶಕ್ತಿಯುತವಾಗಿ ಕೆಲಸ ಮಾಡಬೇಕು. ನಿಮ್ಮ ಮೇಲೆ ನಮಗೆಲ್ಲ ವಿಶ್ವಾಸ ಇದೆ.

**ಶ್ರೀ ಎಂ.ಬಿ.ಪಾಟೀಲ್(ಜಲ ಸಂಪನ್ಮೂಲ ಸಚಿವರು):–** ಮಾನ್ಯ ಸಭಾಪತಿಗಳೆ, ನೀರಾವರಿ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳು ಸಾಕಷ್ಟು ಒತ್ತನ್ನು ನೀಡಿದ್ದಾರೆ. ನಮಗೆ ಪ್ರತಿವರ್ಷ ₹ 10 ಸಾವಿರ ಕೋಟಿಯಂತೆ 5 ವರ್ಷದ ಕಾಲ ಮಿತಿಯಲ್ಲಿ ರಾಜ್ಯದ ಎಲ್ಲಾ ನೀರಾವರಿ ಯೋಜನೆಗಳನ್ನು ಸಂಪೂರ್ಣ ಮಾಡಲಿಕ್ಕೆ ಕೆಲಸ ಮಾಡುತ್ತಿದ್ದೇವೆ. ಇದಕ್ಕೆ ಇನ್ನೂ ಹೆಚ್ಚಿನ ಹಣ ಬೇಕಾಗಿದ್ದರೂ ಮುಂದಿನ ದಿನಗಳಲ್ಲಿ ನೀಡುತ್ತೇವೆ, ಆದರೆ ಎಲ್ಲಾ ನೀರಾವರಿ ಯೋಜನೆಗಳನ್ನು ಕಾಲಮಿತಿಯೊಳಗೆ ಮುಗಿಸಬೇಕು ಎಂಬ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. U.K.P. 3ನೇ ಹಂತದ ಕಾಮಗಾರಿಗಳನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದೇವೆ. ಅಲ್ಲಿ ಮುಖ್ಯವಾಗಿ ಬರುವಂಥದ್ದು

ಭೂಸ್ವಾಧೀನ, ಪುನರ್‌ನಿರ್ಮಾಣ ಮತ್ತು ಕಾಮಗಾರಿ ವಿಷಯ. ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಭೆಯನ್ನು ರಚಿಸಲಾಗಿದೆ. ನಿನ್ನೆ ಇದರ ಸಭೆ ನಡೆಯಬೇಕಾಗಿದ್ದು, ಇವತ್ತು 2.30 ಗಂಟೆಗೆ ಆ ಸಭೆ ನಡೆಯಲಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ U.K.P. ಕಾಮಗಾರಿಗಳಷ್ಟೇ ಅಲ್ಲದೆ, ಉತ್ತರ ಕರ್ನಟಕದ ಮತ್ತು ರಾಜ್ಯದ ಎಲ್ಲಾ ನೀರಾವರಿ ಯೋಜನೆಗಳನ್ನು ತ್ವರಿತ ಗತಿಯಲ್ಲಿ ಮತ್ತು ಕಾಲಮಿತಿಯಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಡಾ: ವೀರಣ್ಣ ಮತ್ತಿಕಟ್ಟಿ:–** ನಾನು ಸರ್ಕಾರಕ್ಕೆ ಅಭಿನಂದಿಸುತ್ತಿದ್ದೇನೆ. ನನ್ನದು ಇನ್ನೊಂದು ವಿನಂತಿ ಇದೆ. ಹಿಂದೆ ವೈಎಸ್‌ಆರ್‌ರವರು ಆಂಧ್ರಪ್ರದೇಶದಲ್ಲಿ ನೀರಾವರಿಗೆ ಹೆಚ್ಚು ಆದ್ಯತೆ ಕೊಟ್ಟು ಚಳುವಳಿ ಮಾದರಿಯಲ್ಲಿ ಕೆಲಸ ಮಾಡಿದರು. ನಾವೂ ಕೂಡ ಆ ನಿಟ್ಟಿನಲ್ಲಿ ಹೆಜ್ಜೆ ಇಡಬೇಕು. ಮಾನ್ಯ ಮುಖ್ಯಮಂತ್ರಿಗಳು ಪ್ರತಿವರ್ಷಕ್ಕೆ 10 ಸಾವಿರ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಅದಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ನಿನ್ನೆ ಮಾನ್ಯ ರಾಜಶೇಖರನ್‌ರವರು ಮಾತನಾಡುತ್ತಾ ಹೇಳಿದ ಹಾಗೆ, ಈ ಕಾರ್ಯ ಬದ್ಧತೆಯಿಂದ, ಕಾಲಮಿತಿಯೊಳಗೆ ಆಗಬೇಕು. ಇಲ್ಲದೇ ಹೋದರೆ ಪ್ರತಿವರ್ಷ ಅದು escalation ಆಗುತ್ತಾ ಹೋಗುತ್ತದೆ. 50 ಸಾವಿರ ಕೋಟಿ ರೂಪಾಯಿಗಳನ್ನು ಇಟ್ಟರು ಅದರ ಉಪಯೋಗ ಕಡಿಮೆ ಆಗುತ್ತದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಈ ಸುವರ್ಣಸೌಧ ನಮ್ಮ ಅಭಿಮಾನ, ಬದ್ಧತೆಯ ಸಂಕೇತ, ಉತ್ತರ ಕರ್ನಾಟಕದ ಜನರನ್ನೂ ಮಾನಸಿಕವಾಗಿ ಒಂದುಗೂಡಿಸಿದ್ದರ ಪ್ರತೀಕವಾಗಿದೆ. ಇದರ ಸಂಪೂರ್ಣ ಉಪಯೋಗ ಆಗಬೇಕು ಎಂದು ಬಹಳ ಜನರು ಹೇಳುತ್ತಾರೆ. ಇದು ಸತ್ಯ ಕೂಡ. ಇದರ ಸದುಪಯೋಗ ಆಗಬೇಕಾದರೆ ಈ ಭಾಗದ ನೀರಾವರಿಗೆ ಸಂಬಂಧಪಟ್ಟ ಕಚೇರಿಗಳನ್ನು ಇಲ್ಲಿಗೆ ಸ್ಥಳಾಂತರ ಮಾಡುತ್ತೀರಾ ಎಂದು ಕೇಳಿದ್ದೆ.

**ಸಭಾಪತಿಯವರು:–** ಇದನ್ನು ಮಾಡುವುದಕ್ಕಾಗುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ತಮ್ಮ ಪ್ರಶ್ನೆಯಲ್ಲಿ, "ಡಾ: ನಂಜುಂಡಪ್ಪ ವರದಿ ಪ್ರಕಾರ ಈ ದಿಸೆಯಲ್ಲಿ ಸಾಧಿಸಾದ ಪ್ರಗತಿಯ ಪ್ರಮಾಣವೆಷ್ಟು; ಡಾ: ನಂಜುಂಡಪ್ಪನವರ ಎಲ್ಲಾ ಶಿಫಾರಸ್ಸುಗಳ ಅನುಷ್ಠಾನ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಕುರಿತು ನಿಯತಕಾಲಿಕವಾಗಿ ಪರಾಮರ್ಶಿಸಲು ಬೆಳಗಾವಿ ಸುವರ್ಣ ವಿಧಾನಸೌಧದಲ್ಲಿ ವಿಶೇಷ ಘಕಟವನ್ನು ಸ್ಥಾಪಿಸಲಾಗುವುದೇ ಎಂದು ಕೇಳಿದ್ದಾರೆ. ಮಾನ್ಯ ಸಭಾಪತಿಗಳೆ, ಇದನ್ನು ಯೋಜನಾ ಇಲಾಖೆಯವರು ಮಾಡಿದರೆ ಸೂಕ್ತವಾಗುತ್ತದೆ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಮತ್ತಿಕಟ್ಟಿಯವರು ಹೇಳಿದ್ದು ಸಮಂಜಸವಾಗಿದೆ. ಮುಖ್ಯಮಂತ್ರಿಗಳು ಇಲ್ಲಿ ಉಪಸ್ಥಿತರಿದ್ದಾರೆ. ಈ ವಿಚಾರವಾಗಿ ಪ್ರತ್ಯೇಕವಾದ ಚರ್ಚೆಯನ್ನು ಮೇಲಿನ ಮತ್ತು ಕೆಳಮನೆಗಳಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕು. ಸುವರ್ಣಸೌಧವನ್ನು ಸುಮಾರು ₹ 400 ಕೋಟಿ ಖರ್ಚು ಮಾಡಿ ಕಟ್ಟಲಾಗಿದೆ. ಈ ಕಟ್ಟಡ ಸದ್ವಿನಿಯೋಗ ಆಗುವ ರೀತಿಯಲ್ಲಿ Regional Office ಗಳು, Divisional Office ಗಳು, Irrigation Office ಗಳು ಇಲ್ಲಿ ಕೆಲಸ ಮಾಡುವ ವ್ಯವಸ್ಥೆ ಮಾಡಬೇಕು. ಮಾನ್ಯ ಮತ್ತಿಕಟ್ಟಿಯವರು ಹೇಳಿದ್ದು ತುಂಬಾ ಸಮಂಜಸವಾಗಿದೆ. ಹಾಗೆ ಮಾಡದೇ ಹೋದರೆ ನಾವು ಖರ್ಚು ಮಾಡಿದ ಹಣ dead money ಆಗುತ್ತದೆ. ಇದರ ಬಗ್ಗೆ ಒಂದು ಚಿಂತನೆ ಆಗಬೇಕು.

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಇದು ಸದುಪಯೋಗವಾಗಬೇಕೆನ್ನುವುದು ನಮ್ಮ ಇಚ್ಚೆ ಕೂಡ ಆಗಿದೆ. ಅದಕ್ಕೋಸ್ಕರ Additional Chief Secretary ಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದೇವೆ. ಅವರು ಯಾವ್ಯಾವ ಇಲಾಖೆಯನ್ನು ವರ್ಗಾವಣೆ ಮಾಡಬಹುದು, ಇಲ್ಲಿ ಯಾವ್ಯಾವ ಇಲಾಖೆಗಳು ಕೆಲಸ ಮಾಡಿದರೆ ಉತ್ತರ ಕರ್ನಾಟಕ ಪ್ರದೇಶದ ಅಭಿವೃದ್ಧಿ ದೃಷ್ಟಿಯಿಂದ

ಅನುಕೂಲವಾಗುತ್ತದೆ ಎನ್ನುವ ಕಾರಣಕ್ಕೋಸ್ಕರ ವರದಿ ಕೊಡಿ ಎಂದು ಹೇಳಿದ್ದೇವೆ. ವರದಿ ಬಂದ ತಕ್ಷಣ ಅದನ್ನು ನೋಡಿ ಯಾವ ಯಾವ ಇಲಾಖೆಗಳನ್ನು ಇಲ್ಲಿಗೆ ವರ್ಗಾವಣೆ ಮಾಡಬೇಕು ಇಲ್ಲಿ ಇರಬೇಕು ಎನ್ನುವುದನ್ನು ತೀರ್ಮಾನ ಮಾಡುತ್ತೇವೆ.

**ಶ್ರೀ ಸಿ.ಹೆಚ್.ವಿಜಯಶಂಕರ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಸದನದ ಅಭಿಪ್ರಾಯವನ್ನು ತೆಗೆದುಕೊಳ್ಳಿ. ಅರ್ಧ ಗಂಟೆ ಕಾಲಾವಧಿ ಚರ್ಚೆಯಲ್ಲಿ ಈ ವಿಷಯವನ್ನು ತೆಗೆದುಕೊಳ್ಳಿ.

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೇ,......

**ಸಭಾಪತಿಯವರು:–** ಸಮಿತಿ ಮಾಡಿದ್ದಾರೆ. ಅದರ report ಬರಲಿ ನೋಡೋಣ.

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು Additional Chief Secretary ಯವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿ ಇಲ್ಲಿ ಯಾವ ಯಾವ ಇಲಾಖೆ ವರ್ಗಾವಣೆಯಾಗಬೇಕೆಂದು ತೀರ್ಮಾನ ಮಾಡಿ ನಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಬಹಳ ಸಂತೋಷ, ಅದನ್ನು ಮಾಡಬೇಕಾಗುತ್ತದೆ. ಆದರೆ, ಪುನಃ 300–400 ಕೊಠಡಿ ಇರುವಂತಹ ಒಂದು ಶಾಸಕರ ಭವನವನ್ನು ಕಟ್ಟುತ್ತೇವೆ ಎನ್ನುವುದನ್ನು ಮೊನ್ನೆ ಪತ್ರಿಕೆಯಲ್ಲಿ ನೋಡಿ ಆಯಿತು. ದಯವಿಟ್ಟು ಆ ಕೆಲಸ ಮಾಡುವುದಕ್ಕೆ ಹೋಗಬೇಡಿ.

**ಸಭಾಪತಿಯವರು:–** ಆ ವಿಷಯದ ಬಗ್ಗೆ ಚರ್ಚೆ ಮಾಡಬೇಕಾದರೆ ಹೇಳಿ. ಈಗ ಅದು ಅಪ್ರಸ್ತುತ ಆಗುತ್ತದೆ. ಈಗ ಆ ವಿಷಯದ ಬಗ್ಗೆ ಬೇಡ.

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೇ, ಆ ವಿಚಾರ ಇದ್ದರೆ ಈಗಲು ಅದು ಬೇಡ.

**ಡಾ:ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಮುಖ್ಯಮಂತ್ರಿಗಳು positive ಆಗಿ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ತೆರೆದ ಹೃದಯದಿಂದ ಹೇಳಿದ್ದಾರೆ. ನಾವು ಅವರಿಗೆ ಧನ್ಯತೆಯನ್ನು ಹೇಳುತ್ತೇವೆ.

**ಶ್ರೀ ಡಿ.ವಿ.ಸದಾನಂದಗೌಡ:–** ಒಂದು ತಿಂಗಳೊಳಗೆ ಮಾಡಿ.

**ಶ್ರೀ ಸಿದ್ದರಾಮಯ್ಯ:–** ಆದಷ್ಟು ಬೇಗ ಮಾಡುತ್ತೇವೆ.

**ಜಿಲ್ಲಾಧಿಕಾರಿಗಳ ಕಛೇರಿ ನಿರ್ಮಾಣ ಕುರಿತು**

**592, ಶ್ರೀ ಟಿ.ಜಾನ್(ಸ್ಥಳೀಯ ಕ್ಷೇತ್ರ)**

**ಅ)** ಕೊಡಗು ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿ ನಿರ್ಮಾಣ ಯಾವ ಹಂತದಲ್ಲಿದೆ.

**ಆ)** ಇದಕ್ಕೆ ಇಲ್ಲಿಯವರೆಗೆ ತಗುಲಿದ ಒಟ್ಟು ವೆಚ್ಚವೆಷ್ಟು ಇನ್ನೂ ಬೇಕಾಗಿರುವ ಒಟ್ಟು ಮೊತ್ತವೆಷ್ಟು (ಸಂಪೂರ್ಣ ವಿವರ ನೀಡುವುದು)

**ಇ)** ಇನ್ನೂ ಯಾವ ಕಾಮಗಾರಿಗಳು ಬಾಕಿಯಿವೆ, (ಸಂಪೂರ್ಣ ವಿವರ ನೀಡುವುದು)

**ಈ)** ಸದರಿ ಕಛೇರಿಯ ಎಷ್ಟು ಎಕರೆ ಜಮೀನಿನಲ್ಲಿ ನಿರ್ಮಾಣಗೊಳ್ಳುತ್ತಿದೆ (ಸಂಪೂರ್ಣ ಮಾಹಿತಿ ನೀಡುವುದು)

**ಶ್ರೀ ವಿ.ಶ್ರೀನಿವಾಸ ಪ್ರಸಾದ್(ಕಂದಾಯ ಸಚಿವರು)**

**ಅ)** ಕೊಡಗು ಜಿಲ್ಲೆ ಮಡಿಕೇರಿಯಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಜಿಲ್ಲಾ ಸಂಕಿರ್ಣಾಕಟ್ಟಡದ ಕಾಮಗಾರಿಯು ಶೇ. 80 ರಷ್ಟು ಪೂರ್ಣಗೊಂಡಿರುತ್ತದೆ.

**ಆ)** ಸರ್ಕಾರದಿಂದ ಜಿಲ್ಲಾ ಸಂಕೀರ್ಣ ಕಟ್ಟಡ ನಿರ್ಮಾಣಕ್ಕೆ ಒಟ್ಟು ₹ 1444.00 ಲಕ್ಷ ಅಂದಾಜು ಮೊತ್ತದಲ್ಲಿ ಕಾಮಗಾರಿಯನ್ನು

ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಈವರೆಗೆ ₹ 940.85 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

ಜಿಲ್ಲಾ ಸಂಕೀರ್ಣ ಕಟ್ಟಡದ ಪೂರ್ವ ಭಾಗದಲ್ಲಿರುವ ಮಡಿಕೇರಿ ಮಂಗಳೂರು ರಾಜ್ಯ ಹೆದ್ದಾರಿಯ ಕಡೆ ಇಳಿಜಾರು ಪ್ರದೇಶವಿರುವುದರಿಂದ ತಡೆಗೋಡೆ ನಿರ್ಮಾಣ ಮಾಡಲು ಪ್ರಸ್ತಾವನೆ ಸಲ್ಲಿಸಿದ್ದು ಈ ಬಗ್ಗೆ ಅಂದಾಜು ಮತ್ತು ನಕ್ಷೆ ಸಿದ್ಧಪಡಿಸಿ ಸಲ್ಲಿಸಲು ಜಿಲ್ಲಾಧಿಕಾರಿಗಳನ್ನು ಕೋರಲಾಗಿದೆ.

ಇ) ಪೈಂಟಿಂಗ್ ಮತ್ತು ಕಟ್ಟಡದ ಸುತ್ತಲೂ ರಸ್ತೆ ನಿರ್ಮಾಣ ಕಾಮಗಾರಿಗಳು ಬಾಕಿ ಇದೆ.

**ಈ)** ಕೊಡಗು ಜಿಲ್ಲೆ ಮಡಿಕೇರಿ ತಾಲ್ಲೂಕು ಕರ್ಣಂಗೇರಿ ಗ್ರಾಮದ ಸರ್ವೆನಂ:471/1ರ 2.20 ಎಕರೆ ಜಾಗದಲ್ಲಿ ನಿರ್ಮಾಣಗೊಳ್ಳುತ್ತಿದೆ.

**ಶ್ರೀ ಟಿ.ಜಾನ್:-** ಮಾನ್ಯ ಸಭಾಪತಿಯವರೇ, ಉತ್ತರದಲ್ಲಿ “The proposal for the construction of retain wal at an estimated amount of ₹ 145 lakhs has been received in the Government. The letter has been addressed to D.C. to submit the plan and estimate” ಎಂದು ಹೇಳಿದ್ದಾರೆ. ಅದರಲ್ಲಿ approach road ವಿಷಯದ ಬಗ್ಗೆ ಏನು ಹೇಳಲಿಲ್ಲ. ನಮಗೆ ಮುಖ್ಯವಾಗಿ ಬೇಕಾಗಿರುವುದು ಅಲ್ಲಿ ಅದಕ್ಕೆ ಸರಿಯಾದ ರಸ್ತೆ ಇಲ್ಲ. ಆ ರಸ್ತೆಯ ಬಗ್ಗೆ ಉತ್ತರದಲ್ಲಿ ಏನು ಹೇಳಲಿಲ್ಲ. Approach road ಬಗ್ಗೆ ಏನು ಮಾಡುತ್ತಾರೆ, ಆ ರಸ್ತೆಯ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡುತ್ತಾರೆಂದು ಕೇಳಬಯಸುತ್ತೇನೆ.

**ಸಭಾಪತಿಯವರು:-** ಅವರು approach road ಬಗ್ಗೆ ಕೇಳುತ್ತಿದ್ದಾರೆ. D.C. Office ಏನೋ ಕಟ್ಟು ಬಿಡುತ್ತೀರಿ, approach road ಸರಿಯಿಲ್ಲ, ಅದರ ಬಗ್ಗೆ ಏನು ಮಾಡುತ್ತೀರಾ ಎಂದು ಕೇಳುತ್ತಿದ್ದಾರೆ.

**ಶ್ರೀ ವಿ.ಶ್ರೀನಿವಾಸ ಪ್ರಸಾದ್:-** ಮಾನ್ಯ ಸಭಾಪತಿಯವರೇ, ಅಲ್ಲಿ approach road ಎಂದೇನೂ ಇಲ್ಲ. ಅದು ರಾಜ್ಯ ಹೆದ್ದಾರಿಯಲ್ಲಿ ಬರುತ್ತಿದೆ. ಮಂಗಳೂರು ರಾಜ್ಯ ಹೆದ್ದಾರಿಯ ಕಡೆ ಇಳಿಜಾರು ಪ್ರದೇಶದಲ್ಲಿ ಬರುತ್ತಿದೆ. ಅಲ್ಲಿ ಒಂದು retain wall ಹಾಕಬೇಕೆಂದು ಆಗಿದೆ. ಅದಕ್ಕೆ ಎಷ್ಟು estimate ಬೇಕಾಗಬಹುದೆಂದು ಕೇಳಿದ್ದೇವೆ. D.C. ಯಿಂದ proposal ಕೇಳಿದ್ದೇವೆ. ಅಷ್ಟು ಹಣವನ್ನು ನಾವು retain ಹಾಕುವುದಕ್ಕೆ ಕೊಡುತ್ತೇವೆ. ಅಲ್ಲಿ encroachment ಪ್ರಶ್ನೆಯೇ ಬರುವುದಿಲ್ಲ.

**Sri T.JOHN:** Approach road ಇಲ್ಲ ಎಂದ ಮೇಲೆ ಅಲ್ಲಿ ತಡೆಗೋಡೆ ಕಟ್ಟಿ ಏನು ಪ್ರಯೋಜನ?

**Mr. CHAIRMAN:** Approach road ಇಲ್ಲ ಎಂದು ಅವರು ಹೇಳುತ್ತಿದ್ದಾರೆ.

**ಶ್ರೀ ವಿ.ಶ್ರೀನಿವಾಸ ಪ್ರಸಾದ್:-** ಮಾನ್ಯ ಸಭಾಪತಿಯವರೇ, ನನ್ನ ಮಾಹಿತಿ ಪ್ರಕಾರ ಅಲ್ಲಿ approach road ಬಗ್ಗೆ ಪ್ರಶ್ನೆ ಇಲ್ಲ. ಅದನ್ನು ನಾನು ಪರಿಶೀಲಿಸಿ ಏನು ಬೇಕು ಎಂಬುದನ್ನು ನೋಡುತ್ತೇನೆ.

**ಶ್ರೀ ಎಂ.ಸಿ.ನಾಣಯ್ಯ:-** ಜಿಲ್ಲಾಧಿಕಾರಿಗಳ ಕಚೇರಿ ಬಹುತೇಕ ಪೂರ್ಣ ಹಂತದಲ್ಲಿದೆ. ಇನ್ನು ಮೂರು ತಿಂಗಳಿನಲ್ಲಿ ಆ ಕೆಲಸ ಆಗುತ್ತದೆ. ಆ ಕಚೇರಿ ಕಟ್ಟಿರುವಂತಹ ಕಟ್ಟಡ ಯಾವುದು ಇದೆ ಅದು ಈ ಹಿಂದೆ ಕಾರ್ಮಿಕ ಇಲಾಖೆಗೆ ಸೇರಿರುವಂತಹ ಒಂದು Central Workshop ಇತ್ತು. ಆ Central Workshop ಮುಚ್ಚಿದ ಮೇಲೆ ಆ ಜಾಗದಲ್ಲಿ ಇದನ್ನು ಕಟ್ಟಿ ಆಗಿದೆ. ಆ Central Workshopಗೆ ಹೋಗತಕ್ಕಂಥದ್ದಕ್ಕೆ ಈಗಾಗಲೇ ನಮ್ಮ ಗಾಂಧಿ ಮಂಟಪದಿಂದ St. Michael ಶಾಲೆಯ ಬದಿಯಲ್ಲಿ ಹೋಗತಕ್ಕಂಥ ಒಂದು ರಸ್ತೆಯೇ ಇದೆ. ಇಲ್ಲ ಎಂದೇನೂ ಇಲ್ಲ. ಹಾಲಿ ರಸ್ತೆ ಇದೆ. ಆ ಹಾಲಿ ರಸ್ತೆಯ ಮುಖಾಂತರ ಈಗ ಅಲ್ಲಿಗೆ ಹೋಗತಕ್ಕಂಥದ್ದು. Originally conceive ಮಾಡುವಾಗ ಏನಾಯಿತು ಎಂದರೆ ಮಂಗಳೂರು ರಸ್ತೆಯಿಂದ ಈ ಕಟ್ಟಡ ಕಟ್ಟಿರುವಂಥದ್ದು ಎಷ್ಟಿದೆ ಎಂದರೆ ಸುಮಾರು 70 ಅಡಿ ಎತ್ತರದಲ್ಲಿದೆ.

ಅಲ್ಲಿ ಒಂದು ಮೇಲ್ಸೇತುವೆ ಮಾಡಬೇಕು ಅಷ್ಟೆ. ಇಲ್ಲದಿದ್ದರೆ ಅಲ್ಲಿ ರಸ್ತೆಯನ್ನು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಇವತ್ತು ಇರುವಂತಹ ರಸ್ತೆ ಇದೆಯಲ್ಲಾ ಆ ರಸ್ತೆಯನ್ನೇ ಸ್ವಲ್ಪ ಪಕ್ಕಾ ಮಾಡಿ ಆ St. Michael ಶಾಲೆಯ ಪಕ್ಕದಲ್ಲಿರಕ್ಕಂಥ compound ನ್ನು ಸ್ವಲ್ಪ ಎತ್ತರಕ್ಕೆ ಮಾಡಿಕೊಂಡರೆ ಆ ರಸ್ತೆಯೂ ಉಂಟು, ಆ ರಸ್ತೆಯನ್ನು ಕಚೇರಿ ತಲುಪಲು ಉಪಯೋಗಿಸುವುದಕ್ಕಾಗುತ್ತದೆ. ಇದರ ಬಗ್ಗೆ ನಾವು ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇವೆ. ಮಾನ್ಯ ಸಚಿವರು ಒಂದು ಸಲ ಮಡಿಕೇರಿಗೆ ಬಂದಾಗ ಅವರ ಎದುರಿಗೆ ಚರ್ಚೆ ಮಾಡಿ ಅದನ್ನು ತೀರ್ಮಾನ ಮಾಡಬಹುದು. ಅಲ್ಲಿರತಕ್ಕಂಥ ಚರ್ಚ್‌ನವರಿಗೂ, ಆ ಚರ್ಚ್‌ನ ಪಕ್ಕದಲ್ಲಿರುವಂತಹ ಶಾಲೆಯವರಿಗೂ ಸ್ವಲ್ಪ ಸಮಸ್ಯೆ ಇದೆ. ಅದನ್ನು ನಾವು ಸರಿಪಡಿಸಬೇಕಾಗುತ್ತದೆ. ಈ ರಸ್ತೆಯನ್ನು ಮಾಡತಕ್ಕಂಥದ್ದನ್ನು ಸರಿಪಡಿಸಬೇಕಾದರೆ ಮಾನ್ಯ ಸಚಿವರೇ ಬರಲಿ. ನಾನು, ಮಾನ್ಯ ಜಾನ್‌ರವರು, ಬೋಪಯ್ಯ, ಅಪ್ಪಚ್ಚು ರಂಜನ್, ಒಟ್ಟಿಗೆ ಸೇರಿ ಚರ್ಚೆ ಮಾಡೋಣ.

**ಶ್ರೀ ವಿ.ಶ್ರೀನಿವಾಸ ಪ್ರಸಾದ್:-** ಮಾನ್ಯ ಸಭಾಪತಿಯವರೇ, ಈಗ ಸಮಸ್ಯೆ ಏನು ಎಂಬುದು ಅರ್ಥವಾಗಿದೆ. ನಾನೇ ಸ್ವತಃ ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿ ಏನು ಕ್ರಮ ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಟಿ.ಜಾನ್:-** ಅಲ್ಲಿ workshop ಗೆ ಹೋಗುವಂತಹ ರಸ್ತೆ ಇದೆ. ಆದರೆ, ಅದು D.C. Office ಗೆ ಹೋಗುವುದಕ್ಕಾಗುತ್ತದೆ. ಆ ರಸ್ತೆ ಅಗಲ ಇಲ್ಲ. ಆ ರಸ್ತೆಯನ್ನು ಅಗಲ ಮಾಡಬೇಕಾದರೆ ಚರ್ಚ್ ಮತ್ತು ಶಾಲೆಯನ್ನು ಒಡೆಯಬೇಕಾಗುತ್ತದೆ. ಅದು ಈ ಎರಡರ ಮಧ್ಯೆದಲ್ಲಿದೆ. ಅವರು ಜಾಗ ಬಿಟ್ಟುಕೊಡುತ್ತಾರೆ ಎನ್ನುವುದು ನನಗೆ ಸಂಶಯವಿದೆ.

**ಶ್ರೀ ವಿ.ಶ್ರೀನಿವಾಸ ಪ್ರಸಾದ:-** ಮಾನ್ಯ ಸಭಾಪತಿಯವರೇ, ಅಲ್ಲಿ ಬದಲಾವಣೆ ಮಾಡಿದ್ದು ಏಕೆ? ಈಗ ಮೊದಲು ಅಲ್ಲಿ ಕರವಾಲೇ ಬಾಡ ಗ್ರಾಮದ ಪ್ರದೇಶದಲ್ಲಿ 5.19 ಎಕರೆಯಲ್ಲಿ 9 ಕೋಟಿ ರೂಪಾಯಿಗಳಲ್ಲಿ

District Complex ಕಟ್ಟಬೇಕೆಂದು ಆಗಿತ್ತು. ಮಾನ್ಯ ಸದಸ್ಯರು ಹೇಳಿದ ಹಾಗೆ ಅದನ್ನು ಬದಲಾವಣೆ ಮಾಡಿ ವಾಣಿಜ್ಯ ಮತ್ತು ಕೈಗಾರಿಕಾ ಪ್ರದೇಶಕ್ಕೆ ಸೇರಿರುವಂತಹ ಜಾಗದಲ್ಲಿ ಕಟ್ಟುವುದಕ್ಕೆ ಬದಲಾವಣೆ ಮಾಡಿಕೊಂಡು ಈಗ ಕಟ್ಟಿರುವಂಥದ್ದು. ಬದಲಾವಣೆ ಮಾಡಿರುವ ಉದ್ದೇಶ ಗೊತ್ತಿಲ್ಲ. ಈಗ ಕಟ್ಟಿದ್ದಾರೆ, ಅದು ಇಳಿಜಾರು ಪ್ರದೇಶದಲ್ಲಿದೆ. Retain wall ಆಗಬೇಕು ಬಹಳ ತೊಂದರೆ ಆಗುತ್ತಿದೆ ಎಂದು ಹೇಳುತ್ತಿದ್ದಾರೆ.

**ಶ್ರೀ ಎಂ.ಸಿ.ನಾಣಯ್ಯ:–** ಅಲ್ಲಿ St. Michael ಶಾಲೆ ಇದೆ. ಆ ಶಾಲೆಯಲ್ಲಿ ಸುಮಾರು ಮೂರು ಸಾವಿರ ಮಕ್ಕಳು ಇದ್ದಾರೆ. ಅವರಿಗೆ ಅವರ ಕಟ್ಟಡಕ್ಕೆ ಅವರ ಸ್ಥಳಕ್ಕೆ ಹಾನಿ ಆಗದ ಹಾಗೆ ಮತ್ತು ಅಲ್ಲಿ ಉತ್ತಮವಾದ ರಸ್ತೆ ನಿರ್ಮಾಣ ಆಗುವ ಹಾಗೆ ಕೆಲಸ ಆಗಬೇಕಾಗಿದೆ. ಆ ಕೆಲಸವನ್ನು ಮಾಡೋಣ, ತೊಂದರೆ ಏನು ಇಲ್ಲ.

**Sri T. JOHN:-** Original plan ನಲ್ಲಿ ರಸ್ತೆಯ ಬಗ್ಗೆ ಕೊಟ್ಟಿದ್ದಾರೆ. ಈಗ ಆ ಪ್ಲಾನ್‌ನ್ನು ಬದಿಗಿಟ್ಟು ಬೇರೆ ದಾರಿ ಮಾಡುವುದಕ್ಕೆ ನಮ್ಮ ಜಿಲ್ಲಾಡಳಿತ ಹೊರಟಿದೆ. ಅದು ಮಾಡಬಾರದು ಎಂಬುದು ನನ್ನ ವಾದ.

**ಸಭಾಪತಿಯವರು:–** ಅಲ್ಲಿಗೆ ಸಚಿವರೇ ಬರುತ್ತೇನೆಂದು ಹೇಳಿದ್ದಾರೆ.

**ಶ್ರೀ ವಿ.ಶ್ರೀನಿವಾಸ ಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾನೇ ಖುದ್ದಾಗಿ ಬಂದು ಪರಿಶೀಲಿಸುತ್ತೇನೆ.

**ಶ್ರೀ ಟಿ.ಜಾನ್:–** ತಾವೇ ಬಂದು inspection ಮಾಡಿದರೆ ಸಾಕು.

**ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಅತಿವೃಷ್ಠಿಯಿಂದ ಬೆಳೆಹಾನಿ ಕುರಿತು**

**882, ಡಾ:ದೊಡ್ಡರಂಗೇಗೌಡ(ನಾಮ ನಿರ್ದೇಶನ)**

ಅ) ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಈಚೆಗೆ ಅತಿವೃಷ್ಟಿಯಿಂದ ಬೆಳೆ ಹಾನಿ ಅನುಭವಿಸಿರುವ ರೈತರಿಗೆ ಪರಿಹಾರ ನೀಡಲು ಕ್ರಮ ತೆಗೆದುಕೊಳ್ಳಲಾಗಿದೆಯೇ; (ಅತಿವೃಷ್ಟಿಯಿಂದ ಬೆಳೆ ಹಾನಿಗೆ ಒಳಗಾಗಿರುವ ತಾಲ್ಲೂಕು, ಗ್ರಾಮಗಳ ಹೆಸರು, ಕೃಷಿಭೂಮಿ ಹಾಗೂ ಬೆಳೆಗಳ ವಿಸ್ತೀರ್ಣ ವಿವರಗಳನ್ನು ಒದಗಿಸುವುದು)

ಆ) ರೈತರಿಗೆ ಪರಿಹಾರ ನೀಡಲು ಕೈಗೊಂಡ ಕ್ರಮಗಳೇನು; ಪರಿಹಾರದ ಮೊತ್ತ ನಿಗದಿಪಡಿಸಲಾಗಿದೆಯೇ; (ವಿವರಗಳನ್ನು ಒದಗಿಸುವುದು)

**ಶ್ರೀ ವಿ.ಶ್ರೀನಿವಾಸ ಪ್ರಸಾದ್(ಕಂದಾಯ ಸಚಿವರು)**

ಅ) --ಹೌದು-- 2013-14ನೇ ಸಾಲಿನಲ್ಲಿ ಮಳೆ ಹಾನಿ ಪರಿಹಾರ ಕಾರ್ಯಗಳಿಗಾಗಿ ಉತ್ತರ ಕರ್ನಾಟಕದ 13 ಜಿಲ್ಲೆಗಳಿಗೆ ಒಟ್ಟು ₹ 3778.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಸದರಿ ಅನುದಾನದಲ್ಲಿ ಬೆಳೆ ಹಾನಿಗೂ ಬಳಸಿಕೊಳ್ಳಲು ಅವಕಾಶವಿರುತ್ತದೆ. ಉತ್ತರ ಕರ್ನಾಟಕದಲ್ಲಿ ಬೆಳೆ ಹಾನಿಯಾದ ವಿಸ್ತೀರ್ಣ ಹಾಗೂ ಹಾನಿಯ ಅಂದಾಜು ಮೊತ್ತದ ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) ಕೇಂದ್ರ ಸರ್ಕಾರದ ಎಸ್.ಡಿ.ಆರ್.ಎಫ್/ಎನ್.ಡಿ.ಆರ್.ಎಫ್ ಮಾರ್ಗಸೂಚಿಯ ಪ್ರಕಾರ ಕೆಳಕಂಡಂತೆ ಬೆಳೆ ಹಾನಿಗೆ ಪರಿಹಾರ ನೀಡಲಾಗುವುದು.

**ಸಣ್ಣ ಮತ್ತು ಅತೀ ಸಣ್ಣ ರೈತರಿಗೆ:**

- ಮಳೆಯಾಶ್ರಿತ ಬೆಳೆ ₹ 4500/- (ಪ್ರತಿ ಹೆಕ್ಟೇರ್)
- ನೀರಾವರಿ ಆಶ್ರಿತ ಬೆಳೆ ₹ 9000/- ಕನಿಷ್ಟ ₹ 750/- (ಪ್ರತಿ ಹೆಕ್ಟೇರ್)

➢ ಬಹುವಾರ್ಷಿಕ ಬೆಳೆ ₹ 12,000/– ಕನಿಷ್ಠ ₹ 1500/– (ಪ್ರತಿ ಹೆಕ್ಟೇರ್‌ಗೆ)

**ದೊಡ್ಡ ರೈತರಿಗೆ:** (ಗರಿಷ್ಠ 1 ಹೆಕ್ಟೇರ್ ಮಿತಿಗೊಳಪಟ್ಟು)

➢ ಮಳೆಯಾಶ್ರಿತ ಬೆಳೆ ₹ 4500/– (ಪ್ರತಿ ಹೆಕ್ಟೇರ್)

➢ ನೀರಾವರಿ ಆಶ್ರಿತ ಬೆಳೆ ₹ 9000/– (ಪ್ರತಿ ಹೆಕ್ಟೇರ್)

➢ ಬಹುವಾರ್ಷಿಕ ಬೆಳೆ ₹ 12,000/– (ಪ್ರತಿ ಹೆಕ್ಟೇರ್‌ಗೆ)

**ಅನುಬಂಧ–(*ಪ್ರಶ್ನೆ ಸಂಖ್ಯೆ: 882)**

| ಕ್ರ. ಸಂ. | ಜಿಲ್ಲೆ | ತಾಲ್ಲೂಕು | ಹಾನಿಯ ವಿವರ (ಹೆಕ್ಟೇರ್ ಗಳಲ್ಲಿ) | ಹಾನಿಯ ಅಂದಾಜು ಮೊತ್ತ (₹ ಲಕ್ಷ ಗಳಲ್ಲಿ) |
|---|---|---|---|---|
| 1 | ಯಾದಗಿರಿ | ಶಹಾಪುರ | 4.1 | 0.16 |
| | | ಸೂರಪುರ | 2161.19 | 96.13 |
| | | ಯಾದಗಿರಿ | 171.85 | 2.40 |
| 2 | ಬಾಗಲಕೋಟೆ | ಹುನಗುಂದ | 241.37 | 7.24 |
| 3 | ಬಳ್ಳಾರಿ | ಬಳ್ಳಾರಿ | 16.19 | 6.00 |
| | | ಹಗರಿಬೊಮ್ಮನಹಳ್ಳಿ | 7.7 | 4.50 |
| 4 | ಕೊಪ್ಪಳ | ಯಲಬುರ್ಗಾ | 47.83 | 2.15 |
| | | ಕುಷ್ಟಗಿ | 517.69 | 23.30 |
| 5 | ಧಾರವಾಡ | ನವಲಗುಂದ | 618.00 | 18.54 |

| | | | | |
|---|---|---|---|---|
| 6 | ಬೆಳಗಾಂ | ಬೆಳಗಾವಿ | 108.67 | 15.52 |
| | | ಚಿಕ್ಕೋಡಿ | 964.02 | 648.75 |
| | | ಅಥಣಿ | 81.32 | 83.51 |
| | | ರಾಯಭಾಗ | 150.37 | 26.24 |
| 7 | ಬಿಜಾಪುರ | ಬೆಳೆ ಹಾನಿ ಸಂಭವಿಸಿರುವುದಿಲ್ಲ | | |
| 8 | ಗದಗ | ಗದಗ | 93.80 | 1.14 |
| | | ನರಗುಂದ | 313.20 | 14.13 |
| | | ರೋಣ | 1512.30 | 49.80 |
| | | ಶಿರಹಟ್ಟಿ | 171.40 | 4.22 |
| 9 | ರಾಯಚೂರು | ರಾಯಚೂರು | 2196.00 | 65.61 |
| | | ಮಾನವಿ | 74.46 | 28.15 |
| | | ದೇವದುರ್ಗ | 42.04 | 1.89 |
| 10 | ಬೀದರ್ | ಬೀದರ್ | 52099.13 | 229.88 |
| | | ಔರಾದ್ (ಬಿ) | 10366.04 | 404.01 |
| | | ಬಸವಕಲ್ಯಾಣ | 24.73 | 1.01 |
| | | ಭಾಲ್ಕಿ | 7786.12 | 305.99 |
| | | ಹುಮನಾಬಾದ | 153.00 | 5.63 |
| 11 | ಗುಲ್ಬರ್ಗಾ | ಗುಲ್ಬರ್ಗಾ | 96.00 | 4.32 |
| | | ಆಳಂದ | 879.53 | 39.57 |

| | | | | |
|---|---|---|---|---|
| | | ಜೇವರ್ಗಿ | 9638.00 | 433.70 |
| | | ಸೇಡಂ | 2888.00 | 129.96 |
| | | ಚಿತ್ತಾಪುರ | 11050.00 | 497.28 |
| 12 | ಹಾವೇರಿ | ಹಾವೇರಿ | 2110.00 | 216.89 |
| | | ರಾಣೇಬೆನ್ನೂರು | 1265.00 | 136.53 |
| | | ಬ್ಯಾಡಗಿ | 311.00 | 34.7 |
| | | ಹಿರೇಕೆರೂರ | 279.00 | 28.37 |
| | | ಸವಣೂರ | 540.00 | 51.59 |
| | | ಶಿಗ್ಗಾಂವ | 40.00 | 3.67 |
| | | ಹಾನಗಲ್ಲ | 409.00 | 41.81 |
| 13 | ದಾವಣಗೆರೆ | ಬೆಳೆ ಹಾನಿ ಸಂಭವಿಸಿರುವುದಿಲ್ಲ | | |
| | **ಒಟ್ಟು** | | **62538.05** | **3664.36** |

**ಡಾ:ದೊಡ್ಡರಂಗೇಗೌಡ:-** ಮಾನ್ಯ ಸಭಾಪತಿಯವರೇ, ಹಿರಿಯ ಸಚಿವರು ಒಂದು ದೊಡ್ಡ ಪಟ್ಟಿಯನ್ನೇ ಕೊಟಿದ್ದಾರೆ. ಅದನ್ನು ನಾನು ಗಂಭೀರವಾಗಿ ಗಮನಿಸಿದ್ದೇನೆ. ಅತಿವೃಷ್ಟಿಯಾಗಲಿ ಅನಾವೃಷ್ಟಿಯಾಗಲಿ ಈ ಎರಡೂ ಕೂಡ ವೈಪರೀತ್ಯಗಳೇ ಆಗಿದೆ. ಸರ್ಕಾರ ಹಾಗೂ ಸಚಿವರು ಕೆಲವು ಮಾನದಂಡಗಳನ್ನು ಅನುಸರಿಸಿದ್ದಾರೆ ನಿಜ. ಆದರೆ, ನನಗನಿಸುತ್ತದೆ ಶ್ರೀಸಾಮಾನ್ಯನ ಬದುಕು ದೊಡ್ಡದು. ರೈತರ ಜೀವನ ನಿಜವಾಗಿಯೂ ಸಂಕಷ್ಟಗಳಲ್ಲಿ ಸಿಲುಕಿದೆ. ಮಾನ್ಯ ಸಚಿವರು ಹಿರಿಯರು, ಅನುಭವಿಗಳು, ಅವರು ಕೊಟ್ಟಿರುವ ಪಟ್ಟಿಯಲ್ಲಿ ಇಲ್ಲದಿರುವ ಅಂಶವನ್ನು ನಾನು ಹೇಳುತ್ತೇನೆ. ಅದನ್ನು ಮಾನ್ಯ ಸಚಿವರು ಗಮನಿಸಬೇಕು. ಆಲಮಟ್ಟಿ, ನಿಡಗುಂದಿಯಲ್ಲಿ

ತೊಗರಿ ಬೆಳೆ ಹಾನಿಯಾಗಿದೆ. ನಾನು ಇದನ್ನು ಮಾಧ್ಯಮಗಳಲ್ಲಿ ನೋಡಿದ್ದೇನೆ, ಪತ್ರಿಕೆಗಳಲ್ಲಿ ಸಾಕಷ್ಟು ಓದಿದ್ದೇನೆ. ಇಲ್ಲಿ ಸಾಕಷ್ಟು ಆಗಬೇಕಾಗಿದೆ. ದೇವರಹಿಪ್ಪರಗಿ ಅಲ್ಲಿ ಬೆಳೆ ಹಾನಿ ಆಗಿದೆ ಎಂದು ರೈತರು ಹೇಳುತ್ತಿದ್ದಾರೆ. ಗುಳೇದಗುಡ್ಡ, ತೇರದಾಳದಲ್ಲೂ ಬೆಳೆ ಹಾನಿ ಆಗಿರುವುದನ್ನು ಮಾನ್ಯ ಸಚಿವರು ಗಮನಿಸಬೇಕು. ಅವರು ಯಾವುದೋ ಒಂದು norm ನ್ನು ಅನುಸರಿಸಿದ್ದಾರೆ, ಇಲ್ಲ ಎಂದು ಹೇಳುವುದಿಲ್ಲ. ಆದರೆ, ಆ norms ಗಿಂತ ಮಾನವೀಯತೆ ದೊಡ್ಡದು ಎನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯ. ಬಹುಶಃ ಈ ಅರ್ಥದಲ್ಲಿ ಇದನ್ನು ನೋಡಿದರೆ ವರ್ಷ ವರ್ಷವೂ ಇದು ಇದ್ದದ್ದೆ. ನಮ್ಮ ಮುಖ್ಯಮಂತ್ರಿಗಳು ಈ ಸದನದಲ್ಲಿದ್ದಾರೆ. ಈ ಅತಿವೃಷ್ಟಿ ಸಂದರ್ಭದಲ್ಲಿ ಶಾಶ್ವತ ಪರಿಹಾರವನ್ನು ಏಕೆ ಕಂಡುಹಿಡಿಯಬಾರದು? ಸಂಪೂರ್ಣವಾಗಿ ರೈತರ ಬೆಳೆ ಹಾನಿ ಆಗುವುದಕ್ಕೆ ಏನಾದರೂ ಒಂದು ಕ್ರಮವನ್ನು ಪದ್ಧತಿಯನ್ನು ಅನುಸರಿಸುವಂಥದ್ದು. ವೈಜ್ಞಾನಿಕವಾಗಿ ಇಷ್ಟಕ್ಕೆ ಇಷ್ಟು ಕೊಡುವುದಿಲ್ಲ. ನಿಜವಾಗಿಯೂ ಕೂಡ ಶ್ರೀಸಾಮಾನ್ಯ ಆಘಾತಕ್ಕೆ ಒಳಗಾಗುತ್ತಾನೆ. ಸಂಪೂರ್ಣವಾಗಿ ಬೆಳೆಯೆಲ್ಲಾ ದಿವಾಳಿ ಆಗಿ ಹೋಗುತ್ತದೆ. ಅಂಥವರ ಬದುಕು ಸಂಕಷ್ಟದಲ್ಲಿ ಮುಳಗುತ್ತದೆ. ಆದ್ದರಿಂದ ಅವರ ದುಗುಡ ದುಮ್ಮಾನದಲ್ಲಿ ಸರ್ಕಾರದವರು, ನಾವೆಲ್ಲರು ಪಾಲ್ಗೊಳ್ಳಬೇಕಾದಂತಹ ಅನಿವಾರ್ಯ ಪರಿಸ್ಥಿತಿ ಇದೆ. ಆದ್ದರಿಂದ ದಯವಿಟ್ಟು ಆಲಮಟ್ಟಿ, ನಿಡಗುಂದಿ, ದೇವರಹಿಪ್ಪರಗಿ, ಗುಳೇದಗುಡ್ಡ, ತೇರದಾಳ, ತಾಳಿಕೋಟೆ, ತಾಳಿಕೋಟೆಯಲ್ಲಂತೂ ನೂರಾರು ಎಕರೆ ಬೆಳೆ ಹಾನಿಯಾಗಿದೆ. ಮನಸ್ಸಿದ್ದಲ್ಲಿ ಮಾರ್ಗ, ಕೊಪ್ಪಳದಲ್ಲೂ ಈ ರೀತಿ ಆಗಿದೆ. ನಾನು ಮಾಧ್ಯಮಗಳಲ್ಲಿ ನೋಡಿದ್ದೇನೆ, ಪತ್ರಿಕೆಗಳಲ್ಲಿ ಸುದೀರ್ಘವಾಗಿ ಅಧ್ಯಯನ ಮಾಡಿದ್ದೇನೆ. ರೈತರು ನನ್ನ ಬಳಿ ಬಂದು ನನಗೆ ಹೇಳಿದ್ದಾರೆ, ನಿಮ್ಮಂಥವರು ಮಾತನಾಡಬೇಕೆಂದು ಹೇಳುತ್ತಾರೆ. ಆದ್ದರಿಂದ ಸಂಕಷ್ಟದಲ್ಲಿರತಕ್ಕಂಥ ರೈತರ ಬದುಕು ಮಣ್ಣಿನ ಮಕ್ಕಳು ಅವರು ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ಏನಾದರೊಂದು ಶಾಶ್ವತ ಪರಿಹಾರವನ್ನು ಸರ್ಕಾರ ಕಂಡುಹಿಡಿದರೆ ಬಹಳ ಅನುಕೂಲವಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ.

**ಶ್ರೀ ವಿ.ಶ್ರೀನಿವಾಸ ಪ್ರಸಾದ್:–** ಮಾನ್ಯ ಸಭಾಪತಿಯವರೆ, ಈ ಬಗ್ಗೆ ಸುದೀರ್ಘವಾದ ಉತ್ತರವನ್ನು ಕೊಟ್ಟಿದ್ದೇವೆ. ನಮ್ಮ ಸರ್ಕಾರ ಬಂದ ಮೇಲೆ ಅತಿವೃಷ್ಟಿ ಮತ್ತು ಅನಾವೃಷ್ಟಿ ಎರಡೂ ಸಹ ಆಗಿದೆ. ಇದಕ್ಕೆ ಕೇಂದ್ರ ಸರ್ಕಾರದ ಮಾನದಂಡಗಳಿವೆ. ಅದರ ಪ್ರಕಾರ ನಾವು ಯಾವ ಒಂದು ರೀತಿಯಲ್ಲಿ ಪರಿಹಾರವನ್ನು ಕೊಡಬೇಕೆನ್ನುವ ರೀತಿಯಲ್ಲಿ ತಾವು ಅದನ್ನು ಅನುಸರಿಸಿಕೊಂಡು ಮಾಡಬೇಕಾಗಿದೆ. ಇತ್ತೀಚೆಗೆ NDRF (National Disaster Response Fund) ನಾರ್ಮ್ಸ್ ಪ್ರಕಾರ ಹೆಚ್ಚಿನ ಪರಿಹಾರವನ್ನು ಕೊಡುತ್ತಿದ್ದೇವೆ. ಅದರಲ್ಲೂ ವಿಶೇಷವಾಗಿ ಅತಿವೃಷ್ಟಿಯಾದಂತಹವರಿಗೆ ನಾವು ಯಾವ ಒಂದು ರೀತಿಯಲ್ಲಿ ಪರಿಹಾರವನ್ನು ಕೊಡುತ್ತೇವೆಂದು ನಾವು ಹೇಳಿದ್ದೇವೆ. ಮೊದಲು ಇದ್ದಕ್ಕಿಂತ ಜಾಸ್ತಿ ಮಾಡಿದ್ದೇವೆ. NDRF ನಿಂದ, SDRF (State Disaster Response Fund) ನಿಂದ ಬರತಕ್ಕಂತಹದ್ದನ್ನು ಜಾಸ್ತಿ ಮಾಡಿದ್ದೇವೆ. ಇದು ಕೇಂದ್ರ ಸರ್ಕಾರದಿಂದ ಬರುವ ನೆರವಿನ ಜೊತೆಗೆ ರಾಜ್ಯ ಸರ್ಕಾರವೂ ಸಹ ನೆರವನ್ನು ಕೊಡುತ್ತದೆ. ಕೇಂದ್ರದಿಂದ 75% ನೆರವು ಬಂದರೆ ರಾಜ್ಯ ಸರ್ಕಾರದಿಂದ 25% ರಷ್ಟು ನೆರವನ್ನು ಕೊಡಲಾಗುತ್ತದೆ.

ಹೀಗಾಗಿ, ಕೇಂದ್ರ ಸರ್ಕಾರದಿಂದ ಬರುವಂತಹ ಅನುದಾನವನ್ನು ಅನುಸರಿಸಿಕೊಂಡು ನಾವು ಇವತ್ತು ಮಾಡಬೇಕಾಗಿದೆ. ಆ ನಾರ್ಮ್ಸ್ ಅನ್ನು ಅವರು ಬದಲಾವಣೆ ಮಾಡಬೇಕಾಗಿದೆ. ನಾವು ಸದ್ಯಕ್ಕೆ ಅಂದರೆ ಅತಿವೃಷ್ಟಿ ಮತ್ತು ಅನಾವೃಷ್ಟಿಯಾಗುವಂತಹ ಸಂದರ್ಭದಲ್ಲಿ ಸಂಕಷ್ಟದಲ್ಲಿರುವಂತಹವರಿಗೆ ಸ್ಪಂದಿಸಿ ಯಾವ ರೀತಿಯಲ್ಲಿ ನೆರವು ಕೊಡಬೇಕು, ಯಾವ ರೀತಿ ಸಹಾಯ ಮಾಡಬೇಕೆನ್ನುವುದರ ಬಗ್ಗೆ ಎಲ್ಲಾ ವಿವರಗಳನ್ನು ನಾನು ಕೊಟ್ಟಿದ್ದೇನೆ. ಪ್ರಾಣ ಹಾನಿಯಾಗಿರುವಂತಹದ್ದು, ಅಥವಾ ಅವರ ಮನೆಗಳು ಹಾನಿಯಾಗಿರುವಂತಹದ್ದು, ಪ್ರಾಣಿಗಳ ಹಾನಿಯಾಗಿರುವಂತಹದ್ದು, ಯಾವ್ಯಾವ ಬೆಳೆಗಳಿಗೆ ಎಷ್ಟೆಷ್ಟು ನಷ್ಟವಾಗಿದೆ, ಎಷ್ಟೆಷ್ಟು ಪರಿಹಾರವನ್ನು ಕೊಡಬೇಕೆನ್ನುವಂತಹದ್ದು, ಹಾನಿಯಾಗಿರುವಂತಹ ರಸ್ತೆಗಳನ್ನು ದುರಸ್ತಿ ಮಾಡುವಂತಹದ್ದು, ಮತ್ತು ಗಂಜಿ ಕೇಂದ್ರಗಳನ್ನು ತೆರೆಯುವಂತಹದ್ದು ಮಾಡುವುದರಲ್ಲಿ ಕೇಂದ್ರ ಸರ್ಕಾರದ ಮಾನದಂಡದ

ಪ್ರಕಾರ ಎಲ್ಲವನ್ನೂ ನಾವು ಮಾಡಿದ್ದೇವೆ. ಕೇಂದ್ರ ಸರ್ಕಾರದಿಂದ ನೆರವು ಬರದೇ ಇದ್ದಾಗಲೂ ಕೂಡ ನಾವು ಕೆಲಸವನ್ನು ಮಾಡಿದ್ದೇವೆ. ಕೇಂದ್ರ ಸರ್ಕಾರದಿಂದ ಇನ್ನು ಹಣ ಬಂದಿಲ್ಲ. ನಮ್ಮ ರಾಜ್ಯ ಸರ್ಕಾರದಿಂದಲೇ 200 ಕೋಟಿ ರೂಪಾಯಿಗಳನ್ನು ಹಾಕಿ ಎಲ್ಲಾ ರೀತಿಯ ಪರಿಹಾರ ಕಾರ್ಯಗಳನ್ನು ತ್ವರಿತವಾಗಿಯೂ ನಾವು ಮಾಡಿದ್ದೇವೆ. ತಾವು ಏನು ಸಲಹೆಗಳನ್ನು ಕೊಟ್ಟಿದ್ದೀರಿ, ಆ ಸಲಹೆಗಳನ್ನಿಟ್ಟುಕೊಂಡು ಕೇಂದ್ರ ಸರ್ಕಾರದೊಂದಿಗೆ ಪ್ರಸ್ತಾಪ ಮಾಡಿ ಹೆಚ್ಚಿನ ನೆರವನ್ನು ಕೊಡುತ್ತೇವೆ. ಆ ನಾರ್ಮ್ಸ್ ಅನ್ನು ಏನಾದರೂ relax ಮಾಡಿ ಹೆಚ್ಚಿನ ನೆರವನ್ನು ಕೊಡುವಲ್ಲಿ ಸಾಧ್ಯವಾದರೆ ಅದನ್ನು ಮಾಡುವಲ್ಲಿ ಪ್ರಯತ್ನ ಮಾಡುತ್ತೇವೆ.

**ಡಾ॥ ದೊಡ್ಡರಂಗೇಗೌಡ:–** ಇದರ ಬಗ್ಗೆ ಇರುವಂತಹ ಮಾಹಿತಿಯನ್ನು ತಮಗೆ ಕಳುಹಿಸಿಕೊಡುತ್ತಿದ್ದೇನೆ. ಇದರ ಬಗ್ಗೆ ತ್ವರಿತಗತಿಯಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ಬಗ್ಗೆ ಸ್ವಲ್ಪ ಗಮನಿಸಿ, ಈ ಪ್ರಾಂತದ ಜನರಿಗೆ ಸಹಾಯ ಮಾಡಿದರೆ ಉತ್ತರ ಕರ್ನಾಟಕದಲ್ಲಿ ಇಂತಹ ಅಧಿವೇಶನ ನಡೆದುದಕ್ಕೆ ಸಾರ್ಥಕತೆ ಬರುತ್ತದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಅತಿವೃಷ್ಟಿಯಿಂದಾಗಿ ಎಷ್ಟು ಹಾನಿಯಾಗಿದೆ ಎಂದು ತಾವು ಏನು ಅಂದಾಜು ಮಾಡಿದ್ದೀರಿ, ಅದು ಸುಮಾರು 4 ಸಾವಿರ ಕೋಟಿ ರೂಪಾಯಿಗಳಿದೆ. ಇದು ಇಡೀ ರಾಜ್ಯದಲ್ಲಿ ಒಟ್ಟು ಆಗಿರುವಂತಹದ್ದು. ಉಲ್ಲೇಖ ಮಾಡಬೇಕಾದರೆ, 13 ಜಿಲ್ಲೆಗಳಿಗೆ 37 ಕೋಟಿ ರೂಪಾಯಿಗಳನ್ನು ನಾರ್ಮ್ಸ್ ಪ್ರಕಾರ ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದೀರಿ. ಮಾನ್ಯ ಸದಸ್ಯರು ಏನು ಉಲ್ಲೇಖ ಮಾಡಿದ್ದಾರೆಂದರೆ ಇಷ್ಟು ದೊಡ್ಡ ಪ್ರಮಾಣದಲ್ಲಿ ರೈತನಿಗೆ ಹಾನಿಯಾಗಬೇಕಾದರೆ ಈ ಮಾನದಂಡಗಳನ್ನು ಮತ್ತೊಮ್ಮೆ ತಿರುಗಿ ನೋಡುವ ಅವಶ್ಯಕತೆ ಇದೆ. 3–4 ಸಾವಿರ ಕೋಟಿ ರೂಪಾಯಿಗಳ ನಷ್ಟವಾಗಿದ್ದು, ನಾವು 30 ಕೋಟಿ, 40 ಕೋಟಿ ರೂಪಾಯಿಗಳ ಪರಿಹಾರವನ್ನು ಬಿಡುಗಡೆ ಮಾಡಿದ್ದೇವೆಂದರೆ ಆ ರೈತ ಎಲ್ಲಿಗೆ ಹೋಗಬೇಕು. ಈ ರೀತಿಯ ಅತಿವೃಷ್ಟಿಯಾದಾಗ ರೈತನ ಸಹಾಯಕ್ಕೆ ಧಾವಿಸಲಿಕ್ಕೆ ಸರ್ಕಾರದ ಮಾನದಂಡಗಳನ್ನು ನಿಷ್ಕರ್ಷೆ

ಮಾಡಬೇಕಾದರೆ, ಇದನ್ನು ಪರಿಗಣಿಸಬೇಕೆನ್ನುವ ಮಾನ್ಯ ಸದಸ್ಯರ ಸಲಹೆ ಏನಿದೆ, ಅದು ಬೆಳೆ ವಿಮೆ ಇರಬಹುದು ಅಥವಾ ಅದು ಬೇರೆ ರೀತಿಯ ವಿಮಾ ಯೋಜನೆ ಇರಬಹುದು, ಅದನ್ನು ಹೊಸದಾಗಿ ಪರಿಷ್ಕರಣೆ ಮಾಡಿಕೊಂಡು ಈ ರೀತಿಯ ಅತಿವೃಷ್ಟಿಯ ಸಂದರ್ಭದಲ್ಲಿ ರೈತನ ಸಹಾಯಕ್ಕೆ ಸರ್ಕಾರ ಧಾವಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಸರ್ವೆ ಖಾತೆ ತಿದ್ದುಪಡಿ ಕೆಲಸಗಳಿಂದ ರೈತರಿಗೆ ಆಗುತ್ತಿರುವ ತೊಂದರೆ ಕುರಿತು**

**814, ಶ್ರೀ ಇ.ಕೃಷ್ಣಪ್ಪ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯಲ್ಲಿ ಸರ್ವೆ ಖಾತೆ ಮತ್ತು ತಿದ್ದುಪಡಿ ಮಾಡಲು ಗ್ರಾಮಲೆಕ್ಕಿಗ/ರೆವೆನ್ಯೂ ಇನ್ಸ್‌ಪೆಕ್ಟರ್ ಮತ್ತು ತಹಶೀಲ್ದಾರ್‌ಗಳು ಎಷ್ಟೆಷ್ಟು ದಿನ ಕಡತ ತಮ್ಮ ಬಳಿ ಇಟ್ಟುಕೊಳ್ಳುವರು; ಒಂದು ದುರಸ್ತಿ ಆಗಬೇಕಾದರೆ ಎಷ್ಟು ದಿನ ತೆಗೆದುಕೊಳ್ಳುವರು;

ಆ) ಬೆಂಗಳೂರು ಉತ್ತರ ತಹಶೀಲ್ದಾರ್ ಕಛೇರಿಯಲ್ಲಿ ರೈತರಿಂದ ಬಂದಿರುವ ಖಾತೆ ತಿದ್ದುಪಡಿ ಸರ್ವೆ ಪೂರ್ತಿ ದುರಸ್ತಿಗೆ ಎಷ್ಟು ಖರ್ಚುಗಳು ಬಂದಿವೆ; ಅವುಗಳಲ್ಲಿ ಬಾಕಿ ಇರುವ ಅರ್ಜಿಗಳೆಷ್ಟು; ಇತ್ಯರ್ಥವಾಗಿರುವ ಅರ್ಜಿಗಳೆಷ್ಟು;

ಇ) ರೈತರಿಗೆ ಅತಿ ಜರೂರಾಗಿ ಅರ್ಜಿ ಸಲ್ಲಿಸಲು ತಕ್ಷಣ ಖಾತೆ ದುರಸ್ತಿ ಪೂರ್ತಿ ಮಾಡುವಂತೆ ಆಗಲು ಸರ್ಕಾರ ಸಂಬಂಧಪಟ್ಟವರಿಗೆ ಸೂಚನೆ ನೀಡುವುದೇ?

**ಶ್ರೀ ವಿ.ಶ್ರೀನಿವಾಸ ಪ್ರಸಾದ್(ಕಂದಾಯ ಸಚಿವರು)**

ಅ) ಸರ್ವೆ ಖಾತೆ ಮತ್ತು ತಿದ್ದುಪಡಿ ಮಾಡಲು ಗ್ರಾಮಲೆಕ್ಕಿಗ/ರೆವಿನ್ಯೂ ಇನ್ಸ್‌ಪೆಕ್ಟರ್ ಮತ್ತು ತಹಶೀಲ್ದಾರರು ಕ್ರಮ ಕೈಗೊಳ್ಳಲು 60 ದಿನಗಳ ಕಾಲಮಿತಿ ಇರುತ್ತದೆ ಮತ್ತು ದುರಸ್ತಿಗೆ ಸಂಬಂಧಿಸಿದಂತೆ ಕೆಳಕಂಡಂತೆ ಕಾಲಾವಧಿಯ ವಿವರ ಒದಗಿಸಲಾಗಿದೆ.

| ವಿಷಯ | ನಿಗದಿಯಾದ ಸಮಯ |
|---|---|
| ಐ.ಎಂ.ಪಿ | ಸಮಯ ನಿಗದಿ ಇಲ್ಲ |
| ತತ್ಕಾಲ್ ಪೋಡಿ ದುರಸ್ತಿ | ಅಳತೆ ಮತ್ತು ದುರಸ್ತಿ ಸಮಯ ಸೇರಿ ಒಂದು ತಿಂಗಳ ಕಾಲಾವಧಿ |
| ಅಲಿನೇಷನ್ ಪೋಡಿ ಮತ್ತು ದರಖಾಸ್ತು ಪೋಡಿ | ದುರಸ್ತಿ ಪ್ರಾಧಿಕಾರದಿಂದ ಅನುಮೋದನೆ ದೊರೆತಲ್ಲಿ ಒಂದು ತಿಂಗಳ ಅವಧಿ |

**ಆ)** ರೈತರಿಂದ ಬಂದಿರುವ ಖಾತೆ ಮತ್ತು ತಿದ್ದುಪಡಿ ಸರ್ವೆ ಪೂರ್ತಿ ದುರಸ್ತಿಗೆ ನವೆಂಬರ್ 2013 ತಿಂಗಳ ಅಂತ್ಯಕ್ಕೆ ಒಟ್ಟು 123 ಅರ್ಜಿಗಳು ಸ್ವೀಕೃತವಾಗಿದ್ದು, ಅವುಗಳಲ್ಲಿ 22 ಅರ್ಜಿಗಳು ವಿಲೇಯಾಗಿದ್ದು, 101 ಅರ್ಜಿಗಳು ಬಾಕಿ ಇರುತ್ತದೆ. ಬಾಕಿ ಇರುವ ಅರ್ಜಿಗಳನ್ನು ಆದ್ಯತೆ ಮೇರೆಗೆ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಇ) ರೈತರಿಗೆ ಆಗುವ ತೊಂದರೆಯನ್ನು ತಪ್ಪಿಸಲು ಖಾತೆ ದುರಸ್ತಿ ಸೇವೆಯನ್ನು "ಸಕಾಲ ಕಾಯ್ದೆ" ಅಡಿಯಲ್ಲಿ ತಂದಿದ್ದು, ಅದರನ್ವಯ ವಿಲೇವಾರಿಗೆ 60 ದಿನಗಳ ಕಾಲಾವಧಿ ನಿಗದಿಪಡಿಸಲಾಗಿದೆ.

**ಶ್ರೀ ಇ.ಕೃಷ್ಣಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಪ್ರಶ್ನೆ 2ರಲ್ಲಿ ಬೆಂಗಳೂರು ಉತ್ತರ ತಹಶೀಲ್ದಾರ್ ಕಛೇರಿಯಲ್ಲಿ ರೈತರಿಂದ ಬಂದಿರುವ ಖಾತೆ ತಿದ್ದುಪಡಿ ಸರ್ವೆ ಪೂರ್ತಿ ದುರಸ್ತಿಗೆ ಎಷ್ಟು ಅರ್ಜಿಗಳು ಬಂದಿವೆ, ಅವುಗಳಲ್ಲಿ ಬಾಕಿ ಇರುವ ಅರ್ಜಿಗಳೆಷ್ಟು, ಇತ್ಯರ್ಥವಾಗಿರುವ ಅರ್ಜಿಗಳೆಷ್ಟು ಎನ್ನುವ ನನ್ನ ಪ್ರಶ್ನೆಗೆ ಉತ್ತರವಾಗಿ ರೈತರಿಂದ ಬಂದಿರುವ ಖಾತೆ ಮತ್ತು ತಿದ್ದುಪಡಿ ಸರ್ವೆ ಪೂರ್ತಿ ದುರಸ್ತಿಗೆ ನವೆಂಬರ್ 2013 ತಿಂಗಳ ಅಂತ್ಯಕ್ಕೆ ಒಟ್ಟು 123 ಅರ್ಜಿಗಳು ಸ್ವೀಕೃತವಾಗಿದ್ದು, ಅವುಗಳಲ್ಲಿ 22 ಅರ್ಜಿಗಳು ವಿಲೇಯಾಗಿದ್ದು, 101 ಅರ್ಜಿಗಳು ಬಾಕಿ ಇರುತ್ತವೆ ಎಂದು ತಿಳಿಸಿದ್ದಾರೆ. ನಾನು ಕೇಳಿರುವುದು ಆ ಕಛೇರಿಯಲ್ಲಿ ಎಷ್ಟು ಅರ್ಜಿಗಳು ಬಾಕಿ ಇವೆ ಎಂದು ಕೇಳಿದ್ದೇನೆ.

**ಸಭಾಪತಿಯವರು:–** ಮಾನ್ಯ ಸಚಿವರು ಬರಿ ನವೆಂಬರ್ ತಿಂಗಳ ಮಾಹಿತಿಯನ್ನು ಕೊಟ್ಟಿದ್ದಾರೆ, ಮಾನ್ಯ ಸದಸ್ಯರು ಏನು ಕೇಳುತ್ತಿದ್ದಾರೆಂದರೆ, ಒಟ್ಟಾರೆ ಈ ಕಛೇರಿಯಿಂದ ಬಾಕಿಯಿರುವ ಅರ್ಜಿಗಳೆಷ್ಟು ಎಂದು ಕೇಳುತ್ತಿದ್ದಾರೆ.

**ಶ್ರೀ ಇ.ಕೃಷ್ಣಪ್ಪ:–** ಉತ್ತರ ಕೊಡುವವರು ಬುದ್ಧಿವಂತತನದಿಂದ ಉತ್ತರ ಕೊಟ್ಟಿದ್ದಾರೆ. ನಾನು ಏತಕ್ಕೆ ಈ ಪ್ರಶ್ನೆಯನ್ನು ಕೇಳಿದೆ ಎಂದರೆ ನಾನು ನನ್ನ ತಾಯಿಯ ಹೆಸರಿನಲ್ಲಿ ಒಂದು ಅರ್ಜಿಯನ್ನು ಕೊಟ್ಟು 3 ವರ್ಷಗಳಾಗಿವೆ. ನಾನು ಹುಟ್ಟುವುದಕ್ಕೆ ಮೂರು ವರ್ಷಗಳ ಹಿಂದೆಯೇ ಅಂದರೆ 1956ನೆ ಇಸವಿಯಲ್ಲಿ ಆ ಜಮೀನನ್ನು ಖರೀದಿ ಮಾಡಿದ್ದಾರೆ. ಆ ದಿವಸವೇ 10(4) ಎಂದು ಹೇಳಿ ಒಂದು ಸರ್ವೆ ನಂಬರ್ ಅನ್ನು ಕೊಟ್ಟಿದ್ದಾರೆ. ಆಕಸ್ಮಿಕವಾಗಿ ಅದು 10ನೇ ಸರ್ವೆ ನಂಬರ್‌ನಿಂದ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರು ಆ ಆಸ್ತಿಯನ್ನು ಮಕ್ಕಳಿಗೆ ದಾನ ಮಾಡಬೇಕು. 3 ವರ್ಷಗಳಿಂದ ಸತತವಾಗಿ ನಾನು ಆ ತಾಲ್ಲೂಕು ಆಫೀಸ್‌ಗೆ ಹೋಗುತ್ತಿದ್ದೇನೆ. ಅದು ಆ ರೀತಿ ಮಾಡುವುದಕ್ಕಾಗುವುದಿಲ್ಲ, ಅದು 10ನೇ ಸರ್ವೆ ನಂಬರಿನ ಜಮೀನು ಪೂರ್ಣವಾಗಿ ಸರ್ವೆ ಆಗಬೇಕೆಂದು ಹೇಳುತ್ತಿದ್ದಾರೆ. ಅದು 1956 ರಲ್ಲಿಯೇ ಪೋಡಿಯಾಗಿದೆ. ಪಹಣಿಗೆ ತಂದಿಲ್ಲ. ಈ ವಿಚಾರವನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇದು ಒಂದೇ ವಿಷಯವಲ್ಲ, ಬೆಂಗಳೂರು ಉತ್ತರ ತಾಲ್ಲೂಕಿನ ತಹಶೀಲ್ದಾರ್‌ರವರ ಕಚೇರಿ, ಅದು ಒಂದು ರೀತಿಯಲ್ಲಿ ಬ್ರೋಕರ್ ಆಫೀಸ್ ರೀತಿ ಆಗಿದೆ. ಯಾರೂ ಆಫೀಸ್‌ನಲ್ಲಿ ಕುಳಿತುಕೊಳ್ಳುವುದಿಲ್ಲ. ಸಾಯಂಕಾಲ 4–30 ಗಂಟೆಯಿಂದ 5–00 ಗಂಟೆಗೆ ಆಫೀಸ್‌ಗೆ ಬರುತ್ತಾರೆ. ಕೆಲವು ಬೋಕರ್ಸ್ ಅನ್ನು ಬಿಟ್ಟುಕೊಂಡಿರುತ್ತಾರೆ. ಯಾರ ಹಣ ಸಂದಾಯವಾಗಿರುತ್ತದೆ. ಅಂತಹವರ ಫೈಲ್‌ಗಳು ಆ ಕಾರಿಗೆ ಹೋಗುತ್ತವೆ, ಆ ಫೈಲ್‌ಗಳ ಕೆಲಸ ಮಾತ್ರ ಆಗುತ್ತದೆ. ನಾನು ಸತತವಾಗಿ 3 ವರ್ಷಗಳಿಂದ ಅಂದರೆ ಮಾನ್ಯ ಶ್ರೀ ಸದಾನಂದಗೌಡರು ಮುಖ್ಯಮಂತ್ರಿಗಳಾಗಿದ್ದಂತಹ ಸಮಯದಲ್ಲೂ ಸಹ ಜಿಲ್ಲಾಧಿಕಾರಿಯವರನ್ನು ಕರೆದು ಈ ಕೆಲಸ ಈ ರೀತಿಯಲ್ಲಿದೆ ಎಂದು ಹೇಳಿದಾಗ ಅವರು ಅಂದು

ಒಪ್ಪಿಕೊಂಡು ಹೋದವರು ಇಂದಿನವರೆಗೂ ಈ ಕೆಲಸವನ್ನು ಮಾಡಿಕೊಟ್ಟಿಲ್ಲ. ಒಬ್ಬ ಶಾಸಕನ ಕೆಲಸವನ್ನು ಆ ಕಂದಾಯ ಕಛೇರಿ ಈ ರೀತಿಯಲ್ಲಿ ಮಾಡುತ್ತದೆ ಎಂದರೆ ಹೇಗೆ? ಶೀಯುತ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾದಂತಹ ಸಂದರ್ಭದಲ್ಲಿ ಸರ್ಕಾರಕ್ಕೆ ಚುರುಕು ಮುಟ್ಟಿಸುತ್ತೇನೆ, ಎಲ್ಲರನ್ನು ವೇಗವಾಗಿ ಕೆಲಸ ಮಾಡುವಂತೆ ಮಾಡುತ್ತೇನೆ ಎಂದಾಗ ನಾನು ತುಂಬಾ ಖುಷಿಪಟ್ಟಿದ್ದೇನೆ. ಈ ಉತ್ತರವನ್ನು ನೋಡಿದರೆ ಅವರು ಎಷ್ಟು ಜಾಣ್ಮೆಯಿಂದ ಉತ್ತರವನ್ನು ಕೊಟ್ಟಿದ್ದಾರೆ. ಈ ಜಾಣ್ಮೆ ಬೇಕಾಗಿತ್ತೇ? ನಾನು ಮಾನ್ಯ ಕಂದಾಯ ಸಚಿವರಲ್ಲಿ ಕೇಳುವುದೇನೆಂದರೆ ಬೆಂಗಳೂರು ತಾಲ್ಲೂಕು ತಹಶೀಲ್ದಾರ್‌ರವರ ಕಚೇರಿಗಳಲ್ಲಿ ಖಾತೆ, ಪೋಡಿ ಮತ್ತಿತರ ಕೆಲಸಗಳಿಗೆ ಇಲ್ಲಿಯವರೆಗೆ ಎಷ್ಟು ಅರ್ಜಿಗಳು ಪೆಂಡಿಂಗ್ ಇವೆ, ಪೆಂಡಿಂಗ್ ಇರುವಂತಹ ಅರ್ಜಿಗಳನ್ನು ಎಷ್ಟು ದಿನಗಳಲ್ಲಿ ತ್ವರಿತವಾಗಿ ಮಾಡಿಕೊಡುತ್ತಾರೆನ್ನುವುದನ್ನು ಹೇಳಬೇಕು. ಅದು ಬೆಂಗಳೂರು ಉತ್ತರ ತಾಲ್ಲೂಕು ಇರಬಹುದು, ಬೆಂಗಳೂರು ನಗರ ಜಿಲ್ಲೆ ಇರಬಹುದು. ಜಮೀನುದಾರರು ಅದಕ್ಕೆ ಮಾಲೀಕರಲ್ಲ, ಅಲ್ಲಿ ಇರುವಂತಹ ಅಧಿಕಾರಿಗಳೇ ಮತ್ತು ಬ್ರೋಕರ್‌ಗಳೇ ಅದಕ್ಕೆ ಮಾಲೀಕರು ಆಗಿರುತ್ತಾರೆ. ಜಮೀನುದಾರರು ತಹಶೀಲ್ದಾರ್ ಕಚೇರಿಗೆ ಹೋಗಿ ಈ ಕೆಲಸವನ್ನು ಮಾಡಿಕೊಡಬೇಕೆಂದು ಕೇಳಿದರೆ ನೀನು ಆಚೆ ಇರಯ್ಯ ಆಮೇಲೆ ನೋಡುತ್ತೇನೆಂದು ಹೇಳುತ್ತಾರೆ. ಅವನು ಬ್ರೋಕರ್ ಮೂಲಕ ಬಂದರೆ ಅವನನ್ನು ಒಳಗೆ ಕೂರಿಸಿ ಮಾತನಾಡುತ್ತಾರೆ. ಇದರ ಬಗ್ಗೆ ನನ್ನ ಸ್ವಂತ ಅನುಭವವನ್ನು ಹೇಳಲಿಕ್ಕೆ ಬಯಸುತ್ತೇನೆ. ನಾನು ಒಂದು ಬಾರಿ ಬೆಂಗಳೂರು ನಗರ ಜಿಲ್ಲೆಯ ಡಿ.ಸಿ. ಕಚೇರಿಗೆ ಹೋದಾಗ ಅಲ್ಲಿನ ಜಿಲ್ಲಾಧಿಕಾರಿಯವರು ನನಗೆ ಸ್ವಲ್ಪ ಇರಿ ಎಂದು ಹೇಳಿ ಬ್ರೋಕರ್ಸ್ ಜೊತೆಗೆ ಫೈಲ್ ಹಿಡಿದುಕೊಂಡು ಆ್ಯಂಟಿ ಚೇಂಬರ್‌ಗೆ ಮಾತನಾಡಿಕೊಂಡು ಹೋಗುತ್ತಾರೆ. ಆ ಚಪ್ರಾಸಿಗಳು ನನ್ನ ಮುಂದೆ ಏನೂ ಅಲ್ಲ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ನಾನು ಶಾಸಕನಾಗಿ ಹೇಳಬಾರದು. ಹೇಳಿದರೆ ನಾಚಿಕೆಯಾಗುತ್ತದೆ. ಈಗ ಮಾನ್ಯ ಶ್ರೀ ಸಿದ್ದರಾಮಯ್ಯನವರು ಮತ್ತು ಕಂದಾಯ ಸಚಿವರು ಏನಿದ್ದಾರೆ, ಇವರುಗಳು ಪ್ರಾಮಾಣಿಕರಿರುವುದರಿಂದ ಈ ಮನೆಯಲ್ಲಿ ಈ ವಿಚಾರವಾಗಿ ಹೇಳುತ್ತಿದ್ದೇನೆ.

ನೀವು ಬೆಂಗಳೂರು ನಗರ ಜಿಲ್ಲೆಯನ್ನು ಸರಿಪಡಿಸಿದರೆ ಇಡಿ ರಾಜ್ಯವನ್ನು ಸರಿಪಡಿಸಿದಂತಾಗುತ್ತದೆ. ದಯವಿಟ್ಟು ಈ ಒಂದು ಕೆಲಸವನ್ನು ಮಾಡಬೇಕು. ಅರ್ಜಿ ವಿಲೇವಾರಿಯನ್ನು ಕಡತ ವಿಲೇವಾರಿ ಕೆಲಸವನ್ನು 60 ದಿನಗಳಲ್ಲಿ ಮುಗಿಸುತ್ತಾರೆಯೇ ಎನ್ನುವುದನ್ನು ಸದನಕ್ಕೆ ಒಪ್ಪಿಸಬೇಕೆಂದು ಮಾನ್ಯ ಸಚಿವರನ್ನು ಕೇಳಲಿಕ್ಕೆ ಬಯಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರು ನೇರವಾಗಿ ಆಪಾದನೆ ಮಾಡಿದ್ದಾರೆ.

**ಶ್ರೀ ವಿ.ಶ್ರೀನಿವಾಸ ಪ್ರಸಾದ್:-** ಮಾನ್ಯ ಸದಸ್ಯರ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರು ತಮ್ಮ ಪ್ರಶ್ನೆಗೆ ಕೊಟ್ಟಿರುವಂತಹ ಉತ್ತರ ತಪ್ಪಿದೆ ಎಂದು ಹೇಳುತ್ತಿದ್ದಾರೆ. ಅವರು ಪ್ರಶ್ನೆ ಕೇಳಿರುವಂತಹದ್ದು ಏನೆಂದರೆ ಒಟ್ಟಾರೆ ಎಷ್ಟು ಬಾಕಿ ಇದೆ ಎಂದು ಕೇಳಿದ್ದಾರೆ. ನವೆಂಬರ್ ತಿಂಗಳಿನದ್ದು ಮಾತ್ರ ಕೊಟ್ಟಿದ್ದೀರಿ. ಬಹಳಷ್ಟು ವರ್ಷಗಳಿಂದ ಅರ್ಜಿಗಳು ಬಾಕಿ ಇದೆ. ಇದರ ಜೊತೆಗೆ ನನ್ನ ಅರ್ಜಿ ಕೊಟ್ಟು 3 ವರ್ಷಗಳು ಕಳೆದಿದೆ, ಇದು ಈ ನವೆಂಬರ್ ಲೆಕ್ಕದಲ್ಲಿ ಬರುವುದಿಲ್ಲ, ಮತ್ತೆ ಅಲ್ಲಿ ಅವ್ಯವಹಾರಗಳು ನಡೆಯುತ್ತಿವೆ ಎನ್ನುವಂತಹ ವಿಷಯಗಳನ್ನು ತಮ್ಮ ಮುಂದೆ ಇಟ್ಟಿದ್ದಾರೆ. ಅದಕ್ಕೆ ತಾವು ನೇರವಾಗಿ ಉತ್ತರವನ್ನು ಹೇಳಿ.

**ಶ್ರೀ ವಿ.ಶ್ರೀನಿವಾಸ ಪ್ರಸಾದ್:-** ಬೆಂಗಳೂರು ನಗರ ಜಿಲ್ಲೆಯಲ್ಲಿ ತುಂಬಾ ಸಮಸ್ಯೆಗಳಿವೆ, ತುಂಬಾ litigations, disputes, ವ್ಯಾಜ್ಯಗಳು ತುಂಬಾ ಇವೆ. ಹೇಳಬೇಕೆಂದರೆ ಭೂ-ವ್ಯಾಜ್ಯಗಳೇ ತುಂಬಾ ಇವೆ. ಹೇಳಬೇಕೆಂದರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸುಮಾರು 3 ಸಾವಿರ ಭೂ-ವ್ಯಾಜ್ಯಗಳಿವೆ. ಏಕೆ ಹೇಳುತ್ತಿದ್ದೇನೆಂದರೆ, ಬೆಂಗಳೂರಿನದ್ದೇ ತುಂಬಾ ಸಮಸ್ಯೆ ಇರುವಂತಹದ್ದಾಗಿದೆ. ತಾವು ಕೇಳಿದ್ದಕ್ಕೆ ನಿರ್ದಿಷ್ಟವಾಗಿ ಉತ್ತರ ಕೊಟ್ಟಿದ್ದೇನೆ. ತಮ್ಮ ಅನುಭವದಲ್ಲಿ ಏನಾಗಿದೆ ಎನ್ನುವುದನ್ನು ನನ್ನ ಗಮನಕ್ಕೆ ತಂದಿದ್ದೀರಿ, ಈ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಹ ಸದನದಲ್ಲಿದ್ದಾರೆ. ನಾನು

ಈಗಾಗಲೇ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ನಾನು ಇದನ್ನು ಪರಿಶೀಲಿಸುತ್ತೇನೆ.

**ಶ್ರೀ ಇ.ಕೃಷ್ಣಪ್ಪ:–** ನವೆಂಬರ್ ತಿಂಗಳಿನ ಮಾಹಿತಿಯನ್ನು ಕೇಳಿಲ್ಲ. ಎಷ್ಟು ಅರ್ಜಿಗಳು ಬಾಕಿ ಇವೆ ಎಂದು ಕೇಳಿದ್ದೇನೆ. ಅವರು ಬುದ್ಧಿವಂತಿಕೆಯಿಂದ ನವೆಂಬರ್ ತಿಂಗಳಿನ ಮಾಹಿತಿಯನ್ನು ಮಾತ್ರ ಕೊಟ್ಟಿದ್ದಾರೆ.

**ಶ್ರೀ ವಿ.ಶ್ರೀನಿವಾಸ ಪ್ರಸಾದ್:–** ಬೆಂಗಳೂರಿನಲ್ಲಿ ಈ ರೀತಿಯ ಅನೇಕ ದೂರುಗಳು ಬಂದಿವೆ ಎನ್ನುವುದನ್ನು ಮಾನ್ಯ ಸದಸ್ಯರಾದ ಶ್ರೀಯುತ ಕೃಷ್ಣಪ್ಪನವರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ನಾನು ತಮಗೆ ಏನು ಹೇಳಲಿಕ್ಕೆ ಬಯಸುತ್ತೇನೆಂದರೆ ವಿಶೇಷವಾಗಿ ಬೆಂಗಳೂರು ಜಿಲ್ಲೆಗೆ ಸಂಬಂಧಪಟ್ಟಂತೆ ಈ ರೀತಿಯ ಸಮಸ್ಯೆಗಳನ್ನು ನಾನೇ ಗಮನದಲ್ಲಿಟ್ಟುಕೊಂಡು ಅದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಒಂದು ಸಭೆ ಕರೆದು, ಕೂಲಂಕಷವಾಗಿ ಅದರ ಬಗ್ಗೆ ಚರ್ಚೆ ಮಾಡುವುದರ ಮೂಲಕ ತಿಳಿದುಕೊಂಡು, ಅದನ್ನು ಯಾವ ರೀತಿ ಪರಿಹಾರ ಕೊಡಬೇಕು, ಯಾವ ರೀತಿಯಲ್ಲಿ ತಕ್ಷಣದಲ್ಲಿಯೇ ಕೆಲಸಕಾರ್ಯಗಳು ಮತ್ತೊಂದು ಎಲ್ಲವೂ ಆಗಬೇಕು, ಪೋಡಿಗೆ, ಖಾತೆ ತಿದ್ದುಪಡಿ, ಮತ್ತಿತರ ಕೆಲಸಗಳು ಯಾವ ರೀತಿಯಲ್ಲಿ ಆಗಬೇಕೆನ್ನುವ ಬಗ್ಗೆ ಸಮಗ್ರವಾಗಿ ನಾನು ಚರ್ಚೆ ಮಾಡುತ್ತಿದ್ದೇನೆ. ಏಕೆಂದರೆ, ಈ ರೀತಿಯ ಸಮಸ್ಯೆಗಳು ಬಹಳ ವರ್ಷಗಳಿಂದ ನಡೆದುಕೊಂಡು ಬಂದಿದೆ. ಆ ವಿಚಾರ ತಮಗೆಲ್ಲಾ ಗೊತ್ತಿದೆ. ಈ ಬಗ್ಗೆ ನಾನು ವಿಶೇಷವಾಗಿ ಒಂದು ಸಭೆಯನ್ನು ನಡೆಸಿ, ನೀವು ಈಗ ಏನು ಪ್ರಸ್ತಾಪ ಮಾಡಿದ್ದೀರಿ, ಅದಕ್ಕೆ ಪರಿಹಾರ ಕೊಡತಕ್ಕಂತಹ ರೀತಿಯಲ್ಲಿ ಆದಷ್ಟು ಬೇಗ ರೈತರಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡುವುದರ ಮೂಲಕ ಈ ಕೆಲಸವನ್ನು ಮಾಡಿಕೊಡುತ್ತೇನೆ.

**ತುಬಚಿ-ಬಬಲೇಶ್ವರ ನೀರಾವರಿ ಯೋಜನೆ ಕುರಿತು**

**837, ಶ್ರೀ ಜಿ.ಎಸ್.ನ್ಯಾಮಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ತುಬಚಿ-ಬಬಲೇಶ್ವರ ನೀರಾವರಿ ಯೋಜನೆಯ ನೀರಾವರಿ ಕ್ಷೇತ್ರವೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಆ) ಸದರಿ ಯೋಜನೆಗಾಗಿ ಮೀಸಲಿಟ್ಟ ಹಣವೆಷ್ಟು? ತಾಂತ್ರಿಕ ಸಮಿತಿ ಒಪ್ಪಿಗೆ ನೀಡಿದೆಯೇ?

ಇ) ಬರಪೀಡಿತ ಪ್ರದೇಶದಲ್ಲಿ ಅಂತರ ಜಲಮಟ್ಟ ಹೆಚ್ಚಿಸುವುದಕ್ಕಾಗಿ ಈ ಯೋಜನೆ ಉಪಯುಕ್ತವೇ?

ಈ) ಕಾರ್ಯಾರಂಭವಾಗುವುದು ಯಾವಾಗ?

**ಶ್ರೀ ಎಂ.ಬಿ.ಪಾಟೀಲ್(ಜಲ ಸಂಪನ್ಮೂಲ ಸಚಿವರು)**

ಅ) ತುಬಚಿ-ಬಬಲೇಶ್ವರ ಏತ ನೀರಾವರಿ ಯೋಜನೆಯ ಒಟ್ಟು ನೀರಾವರಿ ಕ್ಷೇತ್ರ 32,500 ಹೆ.

i. ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನಲ್ಲಿ – 7660 ಹೆ.
ii. ಬಿಜಾಪೂರ ಜಿಲ್ಲೆ ಬಿಜಾಪೂರರ ತಾಲ್ಲೂಕಿನಲ್ಲಿ – 21250 ಹೆ.
iii. ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನಲ್ಲಿ – 3590 ಹೆ.

ಒಟ್ಟು 32500 ಹೆ.

ಆ) ತುಬಚಿ-ಬಬಲೇಶ್ವರ ನೀರಾವರಿ ಯೋಜನೆಗಾಗಿ 2013-14ನೇ ಸಾಲಿನಲ್ಲಿ ಅಗತ್ಯ ಅನುದಾನವನ್ನು ಕಲ್ಪಿಸಲಾಗುವುದು. ಯೋಜನೆಗೆ 32,500 ಹೆ.ನೀರಾವರಿ ಕ್ಷೇತ್ರಕ್ಕೆ ₹ 950.57 ಕೋಟಿಗಳ ವಿವರವಾದ ಯೋಜನಾ ವರದಿಯ ಮೇಲೆ ತಾಂತ್ರಿಕ ಉಪ ಸಮಿತಿಯು ಸೂಚಿಸಿದ ಕೆಲವು ಆಕ್ಷೇಪಣೆಗಳನ್ನು ಸರಿಪಡಿಸಿಕೊಂಡು ಯೋಜನಾವರದಿ ಸಿದ್ಧಪಡಿಸಿಕೊಳ್ಳಲಾಗಿತ್ತು. 2013-14ನೇ ಸಾಲಿನ ಬಜೆಟ್ ಮಂಡನೆಯಲ್ಲಿ, ತುಬಚಿ-ಬಬಲೇಶ್ವರ ಏತ ನೀರಾವರಿ

ಯೋಜನೆಯಡಿ ಸೂಕ್ಷ್ಮ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಳ್ಳಲು ಪ್ರಸ್ತಾಪಿಸಿರುವುದರಿಂದ ಸೂಕ್ಷ್ಮ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಂಡು ಡಿಸೆಂಬರ್ ಅಂತ್ಯದ ಒಳಗೆ ಪೂರ್ಣ ಪ್ರಮಾಣದ ಡಿ.ಪಿ.ಆರ್. ತಯಾರಿಸುವ ಪ್ರಕ್ರಿಯೆಯು ಕರ್ನಾಟಕ ನೀರಾವರಿ ನಿಗಮದಲ್ಲಿ ಜಾರಿಯಲ್ಲಿದೆ.

ಇ) ಬರ ಪೀಡಿತ ಪ್ರದೇಶದಲ್ಲಿ ಅಂತರ್ಜಲಮಟ್ಟ ಹೆಚ್ಚಿಸಲು ಈ ಯೋಜನೆ ಉಪಯುಕ್ತವಿರುತ್ತದೆ.

**ಈ)** ತುಬಚಿ–ಬಬಲೇಶ್ವರ ಏತ ನೀರಾವರಿ ಯೋಜನೆಯನ್ನು ಈ ಮೊದಲು ಹರಿಕಾಲುವೆ (Flow Irrigation) ಮೂಲಕ ಕಲ್ಪಿಸಲು ಯೋಜಿಸಲಾಗಿತ್ತು. ಇದರಿಂದ 32,500 ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಒದಗಿಸಬಹುದಾಗಿತ್ತು. ಆದರೆ, ಈ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳು ಹೆಚ್ಚು ಇರುವುದರಿಂದ ಹಾಗೂ ಹೆಚ್ಚು ಪ್ರದೇಶವನ್ನು ನೀರಾವರಿಗೆ ಒಳಪಡಿಸುವ ಉದ್ದೇಶದಿಂದ ಸೂಕ್ಷ್ಮ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಲು ನಿರ್ಧರಿಸಲಾಗಿದ್ದು, ಇದರಿಂದ ಒಟ್ಟಾರೆ 42,500 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ವಿವರವಾದ ಯೋಜನಾ ವರದಿಯನ್ನು ತಯಾರಿಸುವ ಕಾರ್ಯವು ಕರ್ನಾಟಕ ನೀರಾವರಿ ನಿಗಮದಲ್ಲಿ ಪ್ರಗತಿಯಲ್ಲಿದ್ದು, ವಿವರವಾದ ಯೋಜನಾ ವರದಿಯನ್ನು ಕರ್ನಾಟಕ ನೀರಾವರಿ ನಿಗಮದಿಂದ ಪಡೆದ ನಂತರ, ಆಡಳಿತಾತ್ಮಕ ಅನುಮೋದನೆಯನ್ನು ನೀಡಿ, 2014ನೇ ಸಾಲಿನಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲು ಯೋಜಿಸಲಾಗಿರುತ್ತದೆ.

**ಶ್ರೀ ಜಿ.ಎಸ್.ನ್ಯಾಮಗೌಡ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ತುಬಚಿ ಮತ್ತು ಬಬಲೇಶ್ವರ ನೀರಾವರಿ ಯೋಜನೆಯ ಕ್ಷೇತ್ರವೆಷ್ಟು ಎನ್ನುವುದಕ್ಕೆ ತಾಲ್ಲೂಕುವಾರು ಎಷ್ಟು ಎಂದು ಉತ್ತರವನ್ನು ಒದಗಿಸಿದ್ದಾರೆ. ಮತ್ತೆ ಸದರಿ ಯೋಜನೆಗಾಗಿ ಮೀಸಲಿಟ್ಟ ಹಣವೆಷ್ಟು ಎಂದು ಕೇಳಿರುವ ಪ್ರಶ್ನೆಗೆ 950.57 ಕೋಟಿ

ರೂಪಾಯಿಗಳು ಎಂದು ತಿಳಿಸಿದ್ದಾರೆ. ಮತ್ತೆ, ಬರಪೀಡಿತ ಪ್ರದೇಶದಲ್ಲಿ ಅಂತರ ಜಲಮಟ್ಟ ಹೆಚ್ಚಿಸುವುದಕ್ಕಾಗಿ ಈ ಯೋಜನೆ ಉಪಯುಕ್ತವೇ ಎನ್ನುವ ಪ್ರಶ್ನೆಗೆ ಈ ಯೋಜನೆ ಉಪಯುಕ್ತವಿರುತ್ತದೆ ಎಂದು ಹೇಳಿದ್ದಾರೆ. ಆದರೆ, ಈ drip irrigation ಮಾಡುವುದರಿಂದ ಅಂತರ್‌ಜಲದ ಮಟ್ಟ ಹೇಗೆ ಹೆಚ್ಚಾಗುತ್ತದೆನ್ನುವುದರ ಬಗ್ಗೆ ಸ್ವಲ್ಪಮಟ್ಟಿಗೆ ಸಂಶಯ ಬರುತ್ತದೆ. ನಾವು ಹರಿಕಾಲುವೆ ಮೂಲಕ ನೀರಾವರಿ ಮಾಡಿದರೆ ಹಳ್ಳ-ಕೊಳ್ಳ ಮತ್ತು ಕೆರೆ-ಕಟ್ಟೆಗಳು ತುಂಬಿ ಅಂತರ್ ಜಲ ಮಟ್ಟ ಹೆಚ್ಚಾಗಲಿಕ್ಕೆ ಸಾಧ್ಯವಾಗುತ್ತದೆ. ಆದರೆ, ಸೂಕ್ಷ್ಮ ಹನಿ ನೀರಾವರಿಯಿಂದ ಈ ಅಂತರ್ ಜಲ ಮಟ್ಟ ಹೆಚ್ಚಾಗಲಿಕ್ಕೆ ಸಾಧ್ಯವಾಗುವುದಿಲ್ಲ. ಅದರ ಜೊತೆಗೆ ನಮ್ಮ ಈ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಯೋಜನೆ ಮಾಡಿ ಎಂದು ಹೇಳುತ್ತಾರೆ. ತೋಟಗಾರಿಕೆಯ ಯಾವುದೇ ಬೆಳೆಯು ಒಂದು ವರ್ಷದ ಕೆಳಗೆ ಬರುವುದಿಲ್ಲ. ಹೆಚ್ಚಿನ ತೋಟಗಾರಿಕೆ ಬೆಳೆಗಳು ವರ್ಷದ ಬೆಳೆಗಳೇ ಆಗಿರುವುದರಿಂದ ಇವುಗಳಿಂದ ಬೇಸಿಗೆ ನೀರಿಗೆ ಕೊರತೆಯಾಗುತ್ತದೆ. ಇದಕ್ಕೆ ಹರಿಕಾಲುವೆಯಿಂದ ಇದನ್ನು ಮಾಡುವುದರಿಂದ ನೀರಿನಿಂದ ಬಾವಿ, ಹಳ್ಳ-ಕೊಳ್ಳಗಳು ತುಂಬಿ ಅಂತರ್ ಜಲದ ಮಟ್ಟ ಜಾಸ್ತಿಯಾಗಿ, ಅದನ್ನು ಬೇಸಿಗೆಯಲ್ಲಿ ರೈತರು ತಮ್ಮ ಬೋರು ಅಥವಾ ಬಾವಿಯ ಮೂಲಕ ಸ್ವಂತ ಹನಿ ನೀರಾವರಿ ಮಾಡಿಕೊಂಡರೆ ವರ್ಷದ 12 ತಿಂಗಳು ಪೂರ್ಣವಾಗಿ ರೈತರಿಗೆ ಅನುಕೂಲವಾಗುತ್ತದೆನ್ನುವುದು ನನ್ನ ಭಾವನೆಯಾಗಿದೆ. ಈ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ಎಂ.ಬಿ.ಪಾಟೀಲ್(ಜಲ ಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೆ, ಇಲ್ಲಿ ನೀರಿನ ಲಭ್ಯತೆ ನಮಗೆ ಮುಖ್ಯವಾಗಿ ಇರುವಂತಾದ್ದು ಆಗಿದೆ. ಈ ತುಬಚಿ, ಬಬಲೇಶ್ವರ್ ಏತ ನೀರಾವರಿ ಕೃಷ್ಣಾ ಮೇಲ್ದಂಡೆ ಮೂರನೇ ಯೋಜನೆಯಲ್ಲಿ ನೀರಿನ ಅಲೋಕೇಷನ್ ಆಗಿಲ್ಲ. ಈಗ ಇರುವ 2.8 ಟಿ.ಎಂ.ಸಿ. ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಅದು ಸಾವಳಗಿ ಮತ್ತು ತಿಕೋಟಾ ಹೋಬಳಿ, ಬಬಲೇಶ್ವರ ಏತ ನೀರಾವರಿಗೆ ಸಂಬಂಧಪಟ್ಟಿದ್ದರೂ ಕೂಡ ಅದು ನನ್ನ ಮತ ಕ್ಷೇತ್ರಕ್ಕೂ ಕೂಡ

ಸಂಬಂಧಪಡುತ್ತದೆ. ಅಲ್ಲಿ ಇದ್ದಂತಹ ನೀರಿನಲ್ಲಿ ಬಹಳಷ್ಟು ತೋಟಗಾರಿಕಾ ಬೆಳೆಯನ್ನು ಬೆಳೆಯುತ್ತಿದ್ದೇವೆ. ಮೂಲ ತುಬಚಿ–ಬಬಲೇಶ್ವರ ಯೋಜನೆ ಸಮರ್ಪಕವಾಗಿ ಜಾರಿಗೆ ಬಂದದ್ದೇ ಆದರೆ 32,500 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿಯಾಗುತ್ತಿತ್ತು. ಮೊನ್ನೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನಮ್ಮ ಮುಖ್ಯಮಂತ್ರಿಗಳು ಹನಿ ನೀರಾವರಿಯ ಪದ್ಧತಿಯನ್ನು ಜಾರಿಗೆ ತಂದಿರುವುದರಿಂದ 42,500 ಹೆಕ್ಟೇರ್ ಪ್ರದೇಶಕ್ಕೆ ನೀರನ್ನು ಒದಗಿಸಬಹುದಾಗಿದೆ. ಅಂದರೆ ಅದಕ್ಕೂ ಇದಕ್ಕೂ ಹೋಲಿಕೆ ಮಾಡಿ ನೋಡಿದಲ್ಲಿ 10,000 ಹೆಕ್ಟೇರ್ ಪ್ರದೇಶ ಹೆಚ್ಚಿಗೆ ನೀರಾವರಿಗೆ ಒಳಪಡುತ್ತದೆ. ಮಾನ್ಯ ಸದಸ್ಯರು ಹೇಳಿದ ಹಾಗೆ flow irrigation ಮಾಡಿದ್ದೇ ಆದರೆ ಬಹಳಷ್ಟು ಕ್ಷೇತ್ರ ಇದರಿಂದ ಬಿಟ್ಟು ಹೋಗುತ್ತದೆ. ಆದರೆ ಈ ಹನಿ ನೀರಾವರಿಯನ್ನು ಮಾಡಿದ್ದೇ ಆದರೆ ಬಹಳ ಜನರಿಗೆ ಅನುಕೂಲವಾಗುತ್ತದೆ. ಈ ಹನಿ ನೀರಾವರಿಗೆ ಈ ಜಾಗ ಹೇಳಿ ಮಾಡಿಸಿದಂತಿದೆ. ಅದರಲ್ಲೂ ವಿಶೇಷವಾಗಿ 21,250 ಹೆಕ್ಟೇರ್ ಪ್ರದೇಶ ನನ್ನ ಮತ ಕ್ಷೇತ್ರಕ್ಕೆ ಬರುತ್ತದೆ. ಆ ಭಾಗ ಅತ್ಯಂತ ಎತ್ತರವಾದ ಪ್ರದೇಶ ಇರುವುದರಿಂದ ಮತ್ತು ಆ ಭಾಗ ಆಲಮಟ್ಟಿ ಡ್ಯಾಂ ನಿಂದ 640 ಆರ್.ಎಲ್. ಮೀಟರ್‌ಗಿಂತ ಹೆಚ್ಚು ಇರುವುದರಿಂದ ಅಲ್ಲಿ ಬೋರ್‌ವೆಲ್ ಮುಖಾಂತರ ಹನಿ ನೀರಾವರಿ ಪದ್ಧತಿ ಮುಖಾಂತರ ವಿಶೇಷವಾಗಿ ದ್ರಾಕ್ಷಿ ಬೆಳೆಯನ್ನು ಬೆಳೆಯಲಾಗುತ್ತಿದೆ. ನೀರಿನ ಲಭ್ಯತೆ ಬಹಳ ಕಡಿಮೆ ಇದೆ. ಇಷ್ಟು ಆದರೂ ಕೂಡ ಬಹಳಷ್ಟು ಪ್ರದೇಶಗಳು ಉಳಿದು ಹೋಗುತ್ತವೆ. ಅಷ್ಟಾದರೂ ಕೂಡ ಇದನ್ನು ಹನಿ ನೀರಾವರಿ ಮೂಲಕ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

**ಶ್ರೀ ಜಿ.ಎಸ್.ನ್ಯಾಮಗೌಡ:–** ಏತ ನೀರಾವರಿಗೆ 2.87 ಟಿ.ಎಂ.ಸಿ. ನೀರನ್ನು ಒದಗಿಸಲಾಗಿದೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಗೋದಾವರಿ ಡೈವರ್ಷನ್‌ನಲ್ಲಿ ಈ ಯೋಜನೆಗೆ 23 ಟಿ.ಎಂ.ಸಿ. ನೀರನ್ನು ಒದಗಿಸಲು ಸಾಧ್ಯವೇ ಎಂದು ಪ್ರಶ್ನೆ ಕೇಳಬಯಸುತ್ತೇನೆ.

**ಸಭಾಪತಿಯವರು:–** ಇಲ್ಲಿ ಹನಿ ನೀರಾವರಿ ಪ್ರಶ್ನೆಯನ್ನು ತಾವು ಕೇಳಿದ್ದೀರಿ. ಈಗ ಗೋದಾವರಿ ಬಗ್ಗೆ ಏನು ಕೇಳುತ್ತಿದ್ದೀರಿ ಇದು ಬೇರೆ

ಪ್ರಶ್ನೆಯಾಗುತ್ತದೆ. ಆದ್ದರಿಂದ ಈ ಪ್ರಶ್ನೆಯನ್ನು ಈಗ ಕೇಳುವುದಕ್ಕೆ ಬರುವುದಿಲ್ಲ.

**ನಿವೃತ್ತ ನೌಕರರಿಂದ ಹಣ ಪಡೆದು ನಿರ್ದೇಶನ ನೀಡದಿರುವ ಬಗ್ಗೆ**

**528, ಶ್ರೀಮತಿ ತಾರಾಅನುರಾಧ(ನಾಮನಿರ್ದೇಶಿತರು)**

ಅ) ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ದಿನಾಂಕ:19-04-2006ರ ಸರ್ಕಾರಿ ಆದೇಶದನ್ವಯ ಬಿಡಿಎ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಬಿಡಿಎ ನೌಕರರಿಗೆ ನಿವೇಶನಗಳನ್ನು ಹಂಚಿರುವುದು ನಿಜವೇ; ಹಾಗಿದ್ದಲ್ಲಿ, ಎಷ್ಟು ನೌಕರ ಸದಸ್ಯರುಗಳಿಗೆ ಯಾವ ಅಳತೆಯುಳ್ಳ ನಿವೇಶನಗಳನ್ನು ಎಲ್ಲೆಲ್ಲಿ ವಿತರಿಸಲಾಗಿದೆ; (ನೌಕರ ಸದಸ್ಯರ ಹೆಸರು, ಸದಸ್ಯತ್ವ ಸಂಖ್ಯೆ ನಿವೇಶನಕ್ಕಾಗಿ ಪಡೆದ ಮೌಲ್ಯ ಮತ್ತು ನಿವೇಶನ ವಿತರಿಸಿದ ದಿನಾಂಕವಾರು ಮಾಹಿತಿಗಳನ್ನು ನೀಡುವುದು);

ಆ) ಬಿಡಿಎ ನೌಕರರಲ್ಲದೇ ಇತರ ಎರವಲು ಸೇವೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದವರು, ಬೇರೆ ಇಲಾಖೆಗಳ ನೌಕರರು ಮತ್ತು ಸಾರ್ವಜನಿಕರಿಗೆ ನಿವೇಶನಗಳನ್ನು ವಿತರಿಸಲಾಗಿದೆಯೆ; (ಹಾಗಿದ್ದಲ್ಲಿ ಅವರ ಹೆಸರು ಸದಸ್ಯತ್ವ ಸಂಖ್ಯೆ, ನಿವೇಶನಕ್ಕಾಗಿ ಪಡೆದ ಮೌಲ್ಯ ಮತ್ತು ನಿವೇಶನ ವಿತರಿಸಿದ ದಿನಾಂಕವಾರು ಮಾಹಿತಿಗಳನ್ನು ನೀಡುವುದು) ಇದಕ್ಕೆ ಸರ್ಕಾರದಿಂದ ಅನುಮತಿ ಪಡೆಯಲಾಗಿದೆಯೇ?

ಇ) ನಿವೇಶನ ವಿತರಿಸುವ ಸಲುವಾಗಿ ಬಿಡಿಎ ನಿವೃತ್ತ ನೌಕರರಿಂದ ಸದಸ್ಯತ್ವವನ್ನು ಪಡೆದಿರುವುದು ನಿಜವೇ; (ಹಾಗಿದ್ದಲ್ಲಿ ಒಟ್ಟು ಸದಸ್ಯತ್ವ ಪಡೆದಿರುವ ನಿವೃತ್ತ ನೌಕರರ ವಿವರ ಮತ್ತು ನಿವೇಶನಗಳನ್ನು ವಿತರಿಸಿರುವ ಸದಸ್ಯರ ವಿವರಗಳನ್ನು ನೀಡುವುದು);

**ಈ)** ಇನ್ನೂ ನಿವೇಶನಗಳನ್ನು ವಿತರಿಸಬೇಕಾದ ನಿವೃತ್ತ ನೌಕರ ಸದಸ್ಯರುಗಳು ಎಷ್ಟು; ಅವರುಗಳ ಮಾಹಿತಿ ಒದಗಿಸುವುದು; ಅವರಿಗೆ ನಿವೇಶನ ವಿತರಿಸಲಾಗುತ್ತದೆಯೇ; ಸೇವಾವಧಿಪೂರ್ಣ ಬಿಡಿಎನಲ್ಲಿ ಕರ್ತವ್ಯ ನಿರ್ವಹಿಸಿದ ನಿವೃತ್ತ ನೌಕರರಿಂದ ಹಣ ಸಂದಾಯ ಮಾಡಿಸಿಕೊಂಡು ನಿವೇಶನ ವಿತರಿಸದಿದ್ದರೆ ಅವರಿಗೆ ಅನ್ಯಾಯವಾಗುವುದಿಲ್ಲವೇ?

**ಶ್ರೀ ವಿ.ಶ್ರೀನಿವಾಸ ಪ್ರಸಾದ್(ಕಂದಾಯ ಸಚಿವರು)**

**ಅ) , ಆ), ಇ)** ಮತ್ತು **ಈ)** ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 18658/2009ರಲ್ಲಿನ ದಿನಾಂಕ:10.01.2012ರ ಆದೇಶದಂತೆ ಸದರಿ ಸಂಘಕ್ಕೆ ಸಂಬಂಧಿಸಿದ ಎಲ್ಲಾ ಮೂಲ ಕಡತಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಕರಣವು ನ್ಯಾಯಾಲಯದಲ್ಲಿರುವುದರಿಂದ ಪ್ರಸ್ತುತ ಯಾವುದೇ ಮಾಹಿತಿಯು ಲಭ್ಯವಿರುವುದಿಲ್ಲ.

ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ: 10.01.2012ರ ಆದೇಶದ ಪ್ರತಿಯನ್ನು ಲಗತ್ತಿಸಿದೆ.

RMRJ:

10.1.2012 W.P.NO.18658/2009(BDA)

**ORDER**

On 15.12.2011, having heard the learned counsel for the 5th respondent-Association, the following order was passed.

"Lerned Counsel for the Association, 5th respondent, files objections and a memo dt. 27/10/2010 enclosing list of allottees with addresses. In paragraph 7 of the objection statement, it is asserted that sites were mainly allotted to Group-D employees and other employees in the employment of BDA and some persons in its discretionary quota, while Annex.D to the write petition is a circular stating that sites will be allotted by drawing of lots. Learned Counsel for the 5th respondent submits that, that procedure was not followed. In that view of the matter, there shall be an interim order of stay of execution and registration of instruments conveying sites to allottees and also allotment of sites by the 5th respondent-Association, until further orders.

List this petition on **10/1/2012**. By which time the 5th respondent-Association to place before court all and every relevant material relating to the allotment of sites from its inception and originals of sanctioned layout plans".

Till date there is non-compliance with the order dated 15.12.2011. Although, a faint submission is made by the learned Sr.counsel for the 5th respondent that records have been complied and would be filed in the course of the day, I am afraid, in the

absence of an application seeking permission of the Court to file the same, such a request is impermissible. The order dated 15.12.2011 in unmistakable terms reads states that the records must be placed before court by today and not that records to be submitted today.

There are serious disputes over the members of the Society i.e. persons eligible for membership and allotment of sites, as also the sanction accorded to plans without providing Civic Amenity Area, for short, there appears to be prima facie non-compliance with the rule of law in the matter of membership, allotment and sanction of layout plan. A bare perusal of paragraph 10 of the statement of objections filed by the 5th respondent-Association is a clear indicator of the fact that Civic Amenity Sites, Parks and Open Space were not sanctioned when the layout plan for 135 sites was sanctioned, while such Parks and Open Space were demarcated in an extent of 2 acres 13.75 guntas and Civic Amenity Site in acre 9.75 guntas out of 3 acres, granted to the 5th respondent-Association on 28.6.2011. In other words, when Annexure-R3 plan was sanctioned neither Parks norre Civic Amenity Area was demarcated. It appears that the BDA without authority of law sanctioned the said plan and in order to overcome the difficulty of there being no Civic Amenity sites, on 28.6.2011, granted 3 acres, from out of which the Parks and Civic Amenity Sites appear to be carved out. This speaks volumes of the nature of business conducted by the BDA. It is apparent that the Association has the nomenclature of BDA Employees Welfare Association and a direct nexus between the employees of the BDA

and BDA itself. Neither the State-Respondents 1 to 3 nor the 4th respondent-BDA have contested the allegation in the writ petition.

Since the 5th respondent-Association has failed to produce the records before the Court, it is constrained to pass the following order:

"Respondents 1 to 3 shall forthwith ensure the seizure of records from the 5th respondent-Association and the BDA in relation to the sanction of layout to the 5th respondent, its membership, resolutions, and allotment of sites, and place the same before the Court on 13.1.2012."

Let a copy of this order be made available to the learned counsel for the respondents.

Sd/-

JUDGE

(12–30 ಗಂಟೆ)

**ಶ್ರೀಮತಿ ತಾರಾ ಅನುರಾಧ:–** ಮಾನ್ಯ ಸಭಾಪತಿಯವರೆ, ಮಾನ್ಯ ಕಂದಾಯ ಸಚಿವರು ಉತ್ತರಗಳನ್ನು ಕಳುಹಿಸಿದ್ದಾರೆ. ಈ ಪ್ರಕರಣ ಉಚ್ಛ ನ್ಯಾಯಾಲಯದಲ್ಲಿ ಇದೆ ಎಂದು ಉತ್ತರವನ್ನು ನೀಡಿದ್ದಾರೆ. ಈ ವಿಚಾರ ನನಗೆ ಗೊತ್ತಿದೆ. ಈ ತಡೆಯಾಜ್ಞೆಯನ್ನು ದಯಮಾಡಿ vacate ಮಾಡಿಸಬೇಕು. 200 ರಿಂದ 250 ಬಡ ಕುಟುಂಬಗಳು ಇದನ್ನು ಅವಲಂಬಿಸಿದೆ. ಹಲವಾರು ನಿವೃತ್ತ ನೌಕರರು ಇದರಲ್ಲಿ ಇದ್ದಾರೆ. 1,50,000 ಹಣವನ್ನು ಕಟ್ಟಿ ಈ ನಿವೇಶನಗಳನ್ನು ಖರೀದಿ ಮಾಡಿದ್ದಾರೆ. ಇದರಲ್ಲಿ ಸಂಘದ ಸದಸ್ಯರಿಂದ ಆಗಲೀ ಇಲ್ಲವೇ ಯಾವುದೇ ಬಿ.ಡಿ.ಎ. ನೌಕರರಾಗಲೀ ಕೋರ್ಟಿಗೆ ಹೋಗಿರುವುದಿಲ್ಲ. ಸಾರ್ವಜನಿಕರು ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆಯನ್ನು ತಂದಿದ್ದಾರೆ. ದಯಮಾಡಿ ಆ ಕುಟುಂಬ ವರ್ಗದವರಿಗೆ ಈ ನಿವೇಶನ ಸಿಗುವಂತೆ ನೋಡಿಕೊಳ್ಳಬೇಕೆಂಬುದು ನನ್ನ ಆಶಯವಾಗಿದೆ.

**ಶ್ರೀ ವಿ.ಶ್ರೀನಿವಾಸ ಪ್ರಸಾದ್:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಹಿಂದೆ ಇರುವ ಉದ್ದೇಶದಲ್ಲಿನ ಪ್ರಶ್ನೆ ನನಗೆ ಅರ್ಥವಾಗಿದೆ. ಉತ್ತರವನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಈ ನಿವೇಶನಗಳನ್ನು ಬಿ.ಡಿ.ಎ. ನೌಕರರ ಸಂಘದವರು ಆ ಬಿ.ಡಿ.ಎ. ನೌಕರರಿಗೆ ಸುವರ್ಣ ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಹಂಚಿಕೆ ಮಾಡಲಾಗಿರುತ್ತದೆ. ಇವರಲ್ಲಿ ಹಲವಾರು ನೌಕರರು ನಿವೃತ್ತಿಯನ್ನು ಹೊಂದಿರುತ್ತಾರೆ. ಇನ್ನು ಕೆಲವರು ಮರಣವನ್ನು ಹೊಂದಿರುತ್ತಾರೆ. ನಾನು ಉತ್ತರದಲ್ಲಿ ಹೇಳಿರುವ ರೀತಿಯಲ್ಲಿ ಈ ಬಗ್ಗೆ ಹೈಕೋರ್ಟಿನಲ್ಲಿ ರಿಟ್ ಅರ್ಜಿಯನ್ನು ಹಾಕಿದ್ದಾರೆ. ಅವರು ಎಲ್ಲಾ ದಾಖಲೆಗಳನ್ನು ಕೂಡ ಮುಟ್ಟುಗೋಲು ಮಾಡಿಕೊಂಡಿರುತ್ತಾರೆ. ನಮ್ಮ ಹತ್ತಿರ ಯಾವುದೇ ದಾಖಲಾತಿಗಳು ಇಲ್ಲ. ಆದುದರಿಂದ ಈ ಬಗ್ಗೆ ಮಾನ್ಯ ಉಚ್ಛ ನ್ಯಾಯಾಲಯವು ಏನು ಆದೇಶವನ್ನು ಮಾಡುತ್ತದೆ ಅದರಂತೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಈಗ ಸದ್ಯಕ್ಕೆ ನಮ್ಮಲ್ಲಿ ಈ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಆದುದರಿಂದಾಗಿ ನಾವು ಇಲ್ಲಿ ಯಾವುದೇ ವಿಚಾರವನ್ನು

ಹೇಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಬಗೆಗಿನ ಎಲ್ಲಾ ದಾಖಲಾತಿಗಳು ಅಲ್ಲಿಯೇ ಇವೆ. ಈಗ ನಾವು ಇಲ್ಲಿ ಏನೇ ಹೇಳಿದರೂ ಕೂಡ ಅದು subjudice ಆಗುತ್ತದೆ. ಕೋರ್ಟಿನ ನಿಂದನೆ ಆಗುತ್ತದೆ. ಹೈಕೋರ್ಟಿನ ಮುಂದೆ ಇರುವುದರಿಂದ ಅಲ್ಲಿ ಇದು ಇತ್ಯರ್ಥವಾಗಬೇಕಾಗಿದೆ.

**ಶ್ರೀ ಡಿ.ವಿ.ಸದಾನಂದಗೌಡ:–** ಮಾನ್ಯ ಸಭಾಪತಿಯವರೆ, ತಮ್ಮ ಉತ್ತರ ಸರಿಯಾಗಿ ಇದೆ. ಸರ್ಕಾರ ಈ ಕೇಸಿಗೆ ಸಂಬಂಧಿಸಿದಂತೆ ಒಬ್ಬ ಸರ್ಕಾರೀ ವಕೀಲರನ್ನು ಏನು ನೇಮಿಸಿದ್ದೀರಿ, ಅವರು ಈ ತಡೆಯಾಜ್ಞೆಯನ್ನು ತೆಗೆಸಿ ಆ ಜನಗಳಿಗೆ ನ್ಯಾಯ ಸಿಗುವ ರೀತಿಯಲ್ಲಿ ಪ್ರಯತ್ನ ಮಾಡುವಂತೆ ಇದನ್ನು speedup ಮಾಡುವಂತೆ ನೋಡಿಕೊಳ್ಳಬೇಕೆಂದು ವಿನಂತಿ. ಇದು ಬಹಳ ವರ್ಷಗಳಿಂದ ಪೆಂಡಿಂಗ್ ಇರುತ್ತದೆ. ಅದರಲ್ಲೂ ಇವರೆಲ್ಲರೂ ಬಿ.ಡಿ.ಎ.ಯ ಕೆಳದರ್ಜೆ ನೌಕರರಾಗಿದ್ದಾರೆ. ಬಾಕಿ ಅಧಿಕಾರಿಗಳು ಬೇರೆಯವರನ್ನು ಹಿಡಿದುಕೊಂಡು ಎಲ್ಲಾ ಮಾಡಿಕೊಂಡಾಗಿದೆ. ಆದರೆ ಇವರು ಕೆಳ ದರ್ಜೆ ನೌಕರರಾಗಿದ್ದಾರೆ. ಇದು ಬಹಳ ದಿನಗಳಿಂದ ಪೆಂಡಿಂಗ್ ಇರುತ್ತದೆ. ಈ ತಡೆಯಾಜ್ಞೆಯನ್ನು ತೆರವು ಮಾಡಿ ಅವರುಗಳಿಗೆ ನ್ಯಾಯವನ್ನು ಒದಗಿಸಿ ಕೊಡಿ ಎಂದು ಅವರ ಬೇಡಿಕೆಯಾಗಿದೆ.

**ಶ್ರೀ ವಿ.ಶ್ರೀನಿವಾಸ ಪ್ರಸಾದ್:–** ತಾವು ಏನು ಹೇಳಿದ್ದೀರಿ ಅದರ ಬಗ್ಗೆ ಸಂಬಂಧಪಟ್ಟ ವಕೀಲರು ಕೋರ್ಟಿನ ಮುಂದೆ ಹಾಜರಾಗಿ ತಡೆಯಾಜ್ಞೆಯನ್ನು vacate ಮಾಡಿಸುವ ಮೂಲಕ ಅವರಿಗೆ ನ್ಯಾಯ ಸಿಗುವ ರೀತಿಯಲ್ಲಿ ಪ್ರಯತ್ನ ಮಾಡುತ್ತೇನೆ.

**ಸಭಾಪತಿಯವರು:–** ಈಗ ಪ್ರಶ್ನೋತ್ತರ ಅವಧಿ ಮುಕ್ತಾಯವಾಯಿತು.

## (ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಎಸ್.ಆರ್.ಪಾಟೀಲ್ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೆ, ದಿನಾಂಕ 4ನೇ ಡಿಸೆಂಬರ್ 2013ರ 4ನೇ ಪಟ್ಟಿಯಲ್ಲಿನ

ಒಟ್ಟು 102 ಪ್ರಶ್ನೆಗಳ ಪೈಕಿ 90 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸರ್ಕಾರಿ ಪರವಾನಗಿ ಭೂಮಾಪಕರು**

**933 (728), ಡಾ: ಎ.ಹೆಚ್.ಶಿವಯೋಗಿಸ್ವಾಮಿ (ಪದವೀಧರರ ಕ್ಷೇತ್ರ)**

**ಅ)** ರಾಜ್ಯದಲ್ಲಿರುವ ಸರ್ಕಾರಿ ಪರವಾನಗಿ ಭೂಮಾಪಕರ ಸಂಖ್ಯೆ ಎಷ್ಟು;

**ಆ)** ಭೂಮಾಪಕರಿಗೆ ನಿಗದಿಪಡಿಸಿರುವ ಆದಾಯ, ಸೇವಾ ಭದ್ರತೆ ನೀಡಲಾಗಿದೆಯೇ; ಪರವಾನಗಿ ಭೂಮಾಪಕರ ನಿಯಮಾವಳಿ ರೂಪಿಸಲು ತೀರ್ಮಾನಿಸಲಾಗಿದೆಯೇ; ಯಾವಾಗ ಮಾಡಲಾಗುವುದು?

**ಶ್ರೀ ವಿ.ಶ್ರೀನಿವಾಸ ಪ್ರಸಾದ್(ಕಂದಾಯ ಸಚಿವರು)**

**ಅ)** ರಾಜ್ಯದಲ್ಲಿರುವ ಸರ್ಕಾರಿ ಪರವಾನಗಿ ಭೂಮಾಪಕರ ಸಂಖ್ಯೆ:2202 ಆಗಿರುತ್ತದೆ.

**ಆ)** ಪರವಾನಗಿ ಭೂಮಾಪಕರುಗಳು ಸರ್ಕಾರಿ ನೌಕರುಗಳಲ್ಲ. ಇವರುಗಳಿಗೆ ಕೆ.ಸಿ.ಎಸ್.ಆರ್. ಅನ್ವಯಿಸುವುದಿಲ್ಲ.

ಕರ್ನಾಟಕ ಭೂಕಂದಾಯ ಅಧಿನಿಯಮ 1964 ಹಾಗೂ ನಿಯಮಗಳು 1966 ರ ನಿಯಮ 46(ಎ ಯಿಂದ ಕೆ ವರೆಗೆ) ಕ್ಕೆ ತಿದ್ದುಪಡಿಯನ್ನು ತಂದು ಪರವಾನಗಿ ಭೂಮಾಪಕರ ತರಬೇತಿ, ಪರವಾನಗಗಿ, ಕಾರ್ಯಕ್ಷೇತ್ರ, ಸೇವಾ ಶುಲ್ಕ, ಕೆಲಸದ ವಿವರಗಳು, ಅಮಾನತ್ತು ಮತ್ತು ಪರವಾನಗಿ ರದ್ದತಿ ಇತ್ಯಾದಿಗಳನ್ನು ನಿಯಂತ್ರಿಸುವ ಬಗ್ಗೆ ನಿಯಮಾವಳಿಯನ್ನು ರೂಪಿಸಲಾಗಿದೆ.

**ಬನಹಟ್ಟಿ ನೂಲಿನ ಕಾರ್ಖಾನೆಯ ಬಗ್ಗೆ**

**931, ಡಾ: ಎ.ಹೆಚ್.ಶಿವಯೋಗಿಸ್ವಾಮಿ (ಪದವೀಧರರ ಕ್ಷೇತ್ರ)**

ಅ) ಬನಹಟ್ಟಿ ನೂಲಿನ ಕಾರ್ಖಾನೆಯನ್ನು ತೆರವುಗೊಳಿಸಬೇಕೆಂದು ಅರಣ್ಯ ಇಲಾಖಾಧಿಕಾರಿಗಳು ಕಾರ್ಖಾನೆ ಆಡಳಿತ ವರ್ಗಕ್ಕೆ ತಿಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) 50 ವರ್ಷಗಳ ಹಳೆಯದಾದ ಈ ಕಾರ್ಖಾನೆಯನ್ನು ಮುಚ್ಚುವುದರಿಂದ ಅಲ್ಲಿನ ನೇಕಾರರಿಗೆ ಆಗುವ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಐತಿಹಾಸಿಕವಾಗಿ ಬಟ್ಟೆಗಳ ತಯಾರಿಕೆಗಳಿಗೆ ಹೆಸರುವಾಸಿಯಾದ ಈ ಪ್ರಾಂತ್ಯದ ಕಾರ್ಖಾನೆಯ ನೂಲಿನ ಮೇಲೆ ಅವಲಂಬಿತವಾದ ಕೈಮಗ್ಗ ಮತ್ತು ಪವರ್‌ಲೂಮ್ ನೇಕಾರರಿಗೆ ಆಗುವ ಸಮಸ್ಯೆಗಳ ಬಗ್ಗೆ ಸರ್ಕಾರ ಏನು ಯೋಜನೆ ಮಾಡಿದೆ?

**ಶ್ರೀ ಬಾಬುರಾವ್ ಚಿಂಚನಸೂರ (ಜವಳಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)**

ಅ) ಹೌದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

1) ಬನಹಟ್ಟಿ ಸಹಕಾರಿ ನೂಲಿನ ಗಿರಣಿ ನಿಯಮಿತ, ಬನಹಟ್ಟಿ ರವರಿಗೆ ಒಟ್ಟು 50 ಎಕರೆ ಅರಣ್ಯ ಪ್ರದೇಶವನ್ನು ದಿನಾಂಕ 14-06-1977 ರಲ್ಲಿ 30 ವರ್ಷಗಳ ಅವಧಿಗೆ ಗೇಣಿ ಗುತ್ತಿಗೆಗೆ ಮಂಜೂರಾಗಿದ್ದು, ದಿನಾಂಕ 15-01-2006ಕ್ಕೆ ಗುತ್ತಿಗೆ ಅವಧಿ ಮುಕ್ತಾಯವಾಗಿರುತ್ತದೆ. ನಂತರ, ಗುತ್ತಿಗೆ ಅವಧಿಯನ್ನು ನವೀಕರಿಸಲು ಗಿರಣಿಯವರು ಪ್ರಸ್ತಾವನೆಯನ್ನು ಅರಣ್ಯ ಇಲಾಖೆಗೆ ಸಲ್ಲಿಸಿರುತ್ತಾರೆ.

2) ಆದರೆ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ನೆಡುತೋಪು ಬೆಳೆಸುವ ಖರ್ಚು ಮತ್ತು ಎನ್‌ಪಿವಿ ತುಂಬಿದಲ್ಲಿ

ಮಾತ್ರ ನವೀಕರಣವನ್ನು ಪರಿಗಣಿಸಲಾಗುವುದೆಂದು ಅರಣ್ಯ ಇಲಾಖೆ ಸಂಸ್ಥೆಗೆ ತಿಳಿಸಿರುತ್ತದೆ.

3) ಆದರೆ ಸದರಿ ಗಿರಣಿಯು ಸಿ.ಎ. ಮೊತ್ತ ಮತ್ತು ಎನ್‌ಪಿವಿ ಮೊತ್ತ ತುಂಬಲು ಆಗುವದಿಲ್ಲವೆಂದು ತಿಳಿಸಿರುವದರಿಂದ ನವೀಕರಣ ಪ್ರಸ್ತಾವನೆಯನ್ನು ಅರಣ್ಯ ಇಲಾಖೆಯಿಂದ ತಿರಸ್ಕರಿಸಲಾಗಿದೆ.

ಆ) ಈ ಗಿರಣಿಯಲ್ಲಿ ಸುಮಾರು 450 ಕಾರ್ಮಿಕರು ಇರುತ್ತಾರೆ. ಒಂದು ವೇಳೆ ಈ ಗಿರಣಿಯನ್ನು ಮುಚ್ಚಿದಲ್ಲಿ ನೇಕಾರರಿಗೆ ಸಮಸ್ಯೆಗಳು ಉಂಟಾಗುತ್ತದೆನ್ನುವದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಇ) ಈ ಪ್ರಾಂತ್ಯದ ಕಾರ್ಖಾನೆಯ ನೂಲಿನ ಮೇಲೆ ಅವಲಂಬಿತವಾದ ಕೈಮಗ್ಗ ಮತ್ತು ಪವರ್‌ಲೂಮ್ ನೇಕಾರರಿಗೆ ಆಗುವ ಸಮಸ್ಯೆಗಳ ಬಗ್ಗೆ ಸರಕಾರ ಕೆಳಕಂಡಂತೆ ಯೋಜನೆಗಳನ್ನು ರೂಪಿಸಿದೆ.

- ನೇಕಾರರು ಬಟ್ಟೆ ಉತ್ಪಾದನೆಗೆ ಉಪಯೋಗಿಸಲು ಅಗತ್ಯವಾದ ಹತ್ತಿ ನೂಲನ್ನು ಕೇಂದ್ರ ಸರ್ಕಾರವು ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮದ (ಎನ್.ಹೆಚ್.ಡಿ.ಸಿ.) ಮುಖಾಂತರ ಶೇ.10 ರ ಸಹಾಯಧನದೊಂದಿಗೆ ಒದಗಿಸುತ್ತಿದೆ.
- ಎನ್.ಹೆಚ್.ಡಿ.ಸಿ. ಯ ಮೂಲಕ ನೂಲು ಖರೀದಿಸುವ ಕೈಮಗ್ಗ ಸಹಕಾರಿ ಸಂಘಗಳಿಗೆ ರಾಜ್ಯ ಸರ್ಕಾರದ ವತಿಯಿಂದ ಪ್ರತಿ ಕೆ.ಜಿ.ಗೆ ₹ 15/– ರಂತೆ ಸಹಾಯಧನವನ್ನು ಮರುಪಾವತಿ ಮಾಡಲಾಗುತ್ತಿದೆ.
- ಕೈಮಗ್ಗ ನೇಕಾರರಿಗೆ ಬೇಡಿಕೆಗೆ ತಕ್ಕಂತೆ ಕನಿಷ್ಠ ಪ್ರಮಾಣದಲ್ಲಿ ನೂಲು ಸರಬರಾಜು ಮಾಡುವುದಕ್ಕಾಗಿ ಚಿಲ್ಲರೆ ನೂಲು ಮಾರಾಟ ಡಿಪೋಗಳನ್ನು ತೆರೆಯಲು ಸರ್ಕಾರ ಮಂಜೂರಾತಿ ನೀಡಿದೆ.

## ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳ ಸಾಮಾಜಿಕ ಅರಣ್ಯ ವಲಯಕ್ಕೆ ನೀಡಿರುವ ಅನುದಾನ ಕುರಿತು

**937, ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳ ಸಾಮಾಜಿಕ ಅರಣ್ಯ ವಲಯಕ್ಕೆ ಬಿಡುಗಡೆಯಾದ ಅನುದಾನವೆಷ್ಟು;

ಆ) ನೀರಾವರಿ ಸೌಲಭ್ಯಕ್ಕೆ ಒಳಪಟ್ಟಿರುವ ಈ ಎರಡೂ ಜಿಲ್ಲೆಗಳಲ್ಲಿ ಅರಣ್ಯ ಅಭಿವೃದ್ಧಿ ಸಾಕಷ್ಟು ಅವಕಾಶವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕಳೆದ ಐದು ವರ್ಷಗಳಲ್ಲಿ ಈ ಎರಡೂ ಜಿಲ್ಲೆಗಳಲ್ಲಿ ಅರಣ್ಯ ಭೂಮಿ ಒತ್ತುವರಿಯಾಗಿದೆಯೇ (ವಿವರ ನೀಡುವುದು)

**ಶ್ರೀ ಬಿ.ರಮಾನಾಥ ರೈ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)**

ಅ) ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳ ಸಾಮಾಜಿಕ ಅರಣ್ಯ ವಿಭಾಗಗಳಿಗೆ ಒಟ್ಟು ಬಿಡುಗಡೆಯಾದ ಅನುದಾನ ಈ ಕೆಳಕಂಡಂತಿರುತ್ತದೆ.

**(ಅನುದಾನ ₹ ಲಕ್ಷಗಳಲ್ಲಿ)**

| ಕ್ರ. ಸಂ. | ವರ್ಷ | ಯಾದಗಿರಿ (ಸಾಅವಿ) | ಗುಲ್ಬರ್ಗಾ (ಸಾಅವಿ) |
|---|---|---|---|
| 1 | 2010–11 | 103.76 | 243.385 |
| 2 | 2011–12 | 106.09 | 249.125 |
| 3 | 2012–13 | 77.42 | 254.625 |
| 4 | 2013–14 10/2013ರ ಅಂತ್ಯಕ್ಕೆ | 54.21 | 182.990 |
| | **ಒಟ್ಟು ಮೊತ್ತ ರೂ.** | **341.48** | **930.125** |

ಆ) ಹೌದು.

ಇ) ಕಳೆದ ಐದು ವರ್ಷಗಳಲ್ಲಿ ಎರಡು ಜಿಲ್ಲೆಗಳಲ್ಲಿ ಯಾವುದೇ ಅರಣ್ಯ ಭೂಮಿ ಒತ್ತುವರಿಯಾಗಿರುವುದಿಲ್ಲ.

**ಕರ್ನಾಟಕ ವಿಧಾನ ಪರಿಷತ್ತು**

**733(934), ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಗುಲ್ಬರ್ಗಾ ನೀರಾವರಿ ವಲಯದ ಬೆಣ್ಣೆತೊರಾ ಕಾಡಾ ವ್ಯಾಪ್ತಿಯಲ್ಲಿ ಬರುವ ಕಾಲುವೆಗಳ ಕೊನೆಗೆ ಇರುವ ರೈತರಿಗೆ ತುಂತುರು ನೀರಾವರಿ ಮೂಲಕ ನೀರನ್ನು ಒದಗಿಸುವ ಯೋಜನೆ ಸರ್ಕಾರದ ಮುಂದಿದೆಯೇ;

ಆ) ಈ ಕುರಿತು ಯೋಜನೆಯ ಕಾಮಗಾರಿ ಕೈಗೊಳ್ಳಲು ಸರ್ಕಾರ ತೆಗೆದುಕೊಂಡು ಕ್ರಮಗಳೇನು?

**ಶ್ರೀ ಎಂ.ಬಿ.ಪಾಟೀಲ್ (ಜಲ ಸಂಪನ್ಮೂಲ ಸಚಿವರು)**

ಅ) ಗುಲ್ಬರ್ಗಾ ನೀರಾವರಿ ವಲಯದ ಬೆಣ್ಣೆತೊರಾ ಯೋಜನಾ ವ್ಯಾಪ್ತಿಯಲ್ಲಿ ತುಂತುರು ನೀರಾವರಿ ಮೂಲಕ ನೀರನ್ನು ಒದಗಿಸುವ ಯೋಜನೆಯ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

**ಜೇವರ್ಗಿ ತಾಲ್ಲೂಕಿನ ಏತ ನೀರಾವರಿಗಳು**

**935, ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನಲ್ಲಿರುವ ಏತ ನೀರಾವರಿಗಳು ಎಷ್ಟು;

**ಆ)** ಈ ಯೋಜನೆಗಳಲ್ಲಿ ಅನೇಕ ಯೋಜನೆಗಳು ನಿಷ್ಕ್ರೀಯಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಈ ಯೋಜನೆಗಳ ಸಮಗ್ರ ಮಾಹಿತಿ ನೀಡುವುದು;

**ಇ)** ನಿಷ್ಕ್ರೀಯಗೊಂಡಿರುವ ಯೋಜನೆಗಳ ಪುನಃಶ್ಚೇತನಕ್ಕೆ ಸರಕಾರ ಕೈಗೊಂಡಿರುವ ಕ್ರಮಗಳೇನು?

**ಶ್ರೀ ಶಿವರಾಜ ಎಸ್. ತಂಗಡಗಿ (ಸಣ್ಣ ನೀರಾವರಿ ಸಚಿವರು)**

**ಅ)** ನಾಲ್ಕು.

**ಆ)** ಬಂದಿದೆ, ಈ ಯೋಜನೆಗಳು ಕೃಷ್ಣಾ ಮೇಲ್ದಂಡೆ ಯೋಜನೆಯ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ಬರುವುದರಿಂದ ರೈತರ ಬೇಡಿಕೆ ಇರದ ಕಾರಣ ಕಾರ್ಯನಿರ್ವಹಿಸುತ್ತಿಲ್ಲ.

**ಇ)** ಸರ್ಕಾರದ ಆದೇಶ ಸಂ:ಪಿಡಬ್ಲ್ಯೂಡಿ 209 ಐಎಫ್‌ವೈ 81 ದಿನಾಂಕ:19-4-1982 ರನ್ವಯ ಕಟ್ಟಿಸಂಗಾವಿ, ನಾಗರಾಣಿ ಮತ್ತು ನೆಲೋಗಿ ಏತ ನೀರಾವರಿ ಯೋಜನೆಗಳನ್ನು ಕೃಷ್ಣಾ ಮೇಲ್ದಂಡೆ ಯೋಜನೆಗೆ ಹಸ್ತಾಂತರಿಸಿಕೊಳ್ಳಲು ಕಾರ್ಯಪಾಲಕ ಅಭಿಯಂತರು, ಸಣ್ಣ ನೀರಾವರಿ ವಿಭಾಗ, ಗುಲಬರ್ಗಾ ಇವರು, ಪತ್ರ ಸಂ:2195/ದಿನಾಂಕ:30-6-2010ರ ಮೂಲಕ ಮುಖ್ಯ ಇಂಜನೀಯರರು, ಕೃ.ಭಾ.ಜ.ನಿ.ನಿ., ಕಾಲುವೆ ವಲಯ ನಂ.-1, ಭೀಮರಾಯನಗುಡಿ ಇವರನ್ನು ವಿನಂತಿಸಿದ್ದು, ಅದಕ್ಕೆ ಪ್ರತಿಯಾಗಿ ಮುಖ್ಯ ಇಂಜನೀಯರರು, ಕೃ.ಭಾ.ಜ.ನಿ.ನಿ, ಕಾಲವೆ ವಲಯ ನಂ.-1, ಭೀಮರಾಯನಗುಡಿ ಇವರು ತಮ್ಮ ಕಚೇರಿ ಪತ್ರ

ಸಂ:670/ದಿನಾಂಕ:12–7–2010ರ ಮೂಲಕ ಸದರಿ ಸರ್ಕಾರಿ ಆದೇಶದಲ್ಲಿ ಸಣ್ಣ ನೀರಾವರಿ ಯೋಜನೆಗಳನ್ನು ನಿಗಮಕ್ಕೆ ಹಸ್ತಾಂತರಿಸಿಕೊಳ್ಳಲು ನಿರ್ದಿಷ್ಟವಾದ ಆದೇಶ ಇರುವುದಿಲ್ಲವೆಂದು ತಿಳಿಸಿರುವರು. ಈ ಹಿನ್ನೆಲೆಯಲ್ಲಿ, ಪತ್ರ ಸಂ:4254/ದಿನಾಂಕ:27–7–2010 ರ ಮೂಲಕ ಬೃಹತ್ ಮತ್ತು ಮಧ್ಯಮ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸಣ್ಣ ನೀರಾವರಿ ಯೋಜನೆಗಳನ್ನು ಆ ಇಲಾಖೆಗೆ ಹಸ್ತಾಂತರಿಸುವ ಒಟ್ಟಾರೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಜಲಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಗಳಿಗೆ ಪತ್ರ ಬರೆದು ಬೃಹತ್ ನೀರಾವರಿ ವಲಯಗಳಿಗೆ ಸದರಿ ಕಾಮಗಾರಿಗಳನ್ನು ಹಸ್ತಾಂತರಿಸಿಕೊಳ್ಳಲು ಅನುಕೂಲವಾಗುವಂತೆ ನಿರ್ದಿಷ್ಟ ಆದೇಶ ನೀಡಲು ವಿನಂತಿಸಲಾಗಿದೆ.

ಮಲ್ಲಾ (ಕೆ) ಏತ ನೀರಾವರಿ ಯೋಜನೆಯು ಕೂಡ ಯು.ಕೆ.ಪಿ. ಅಚ್ಚುಕಟ್ಟು ಪ್ರದೇಶದಲ್ಲಿ ಬರುತ್ತಿರುವ ಕಾರಣ ಹಾಗೂ ಸದರಿ ಯೋಜನೆಯು ಈಗಾಗಲೇ ನಿಷ್ಕ್ರೀಯಗೊಂಡಿರುವ ಕಾರಣ ಈ ಯೋಜನೆಯನ್ನು ನಿಷ್ಕ್ರಿಯಗೊಳಿಸಲು ಪರಿಶೀಲಿಸಲಾಗುತ್ತಿದೆ.

## ಮುಜರಾಯಿ ದೇವಸ್ಥಾನಗಳ ಅಭಿವೃದ್ಧಿ

**938, ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಮುಜರಾಯಿ ಇಲಾಖೆಗೆ ಒಳಪಟ್ಟಿರುವ ದೇವಸ್ಥಾನಗಳು ಎಷ್ಟು; ಇವುಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು;

**ಆ)** ಈ ದೇವಸ್ಥಾನಗಳಿಗೆ ಕಳೆದ 05 ವರ್ಷಗಳಲ್ಲಿ ಬಿಡುಗಡೆಯಾಗಿರುವ ಅನುದಾನ ಎಷ್ಟು; ಈ ಅನುದಾನ ಪೂರ್ಣ ಬಳಕೆಯಾಗಿದೆಯೇ?

**ಶ್ರೀ ಪ್ರಕಾಶ್ ಬಾ.ಹುಕ್ಕೇರಿ (ಸಣ್ಣ ಕೈಗಾರಿಕೆ, ಸಕ್ಕರೆ ಮತ್ತು ಮುಜರಾಯಿ ಸಚಿವರು)**

ಅ) ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟ ದೇವಸ್ಥಾನಗಳ ಸಂಖ್ಯೆ ಈ ಕೆಳಕಂಡಂತಿದೆ:-

| **ಕ್ರಮ ಸಂಖ್ಯೆ** | **ಜಿಲ್ಲೆ** | **ಅಧಿಸೂಚಿತ ಸಂಸ್ಥೆಗಳ ಸಂಖ್ಯೆ** |
|---|---|---|
| 01 | ಗುಲ್ಬರ್ಗಾ | 1628 |
| 02 | ಯಾದಗಿರಿ | 1211 |

2013-14ನೇ ಸಾಲಿನಲ್ಲಿ ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ದೇವಾಲಯಗಳ ಜೀರ್ಣೋದ್ಧಾರ/ದುರಸ್ಥಿ/ನವೀಕರಣ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ, ಗುಲ್ಬರ್ಗಾ ಮತ್ತು ಯಾದಗರಿ ಜಿಲ್ಲೆಗಳಿಗೆ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ತಲಾ ₹ 10.00 ಲಕ್ಷದಂತೆ ಈ ಕೆಳಕಂಡ ಮೊತ್ತವನ್ನು ಬಿಡುಗಡೆ ಮಾಡಲಾಗಿರುತ್ತದೆ.

| **ಕ್ರಮ ಸಂಖ್ಯೆ** | **ಜಿಲ್ಲೆ** | **ವಿಧಾನಸಭಾ ಕ್ಷೇತ್ರಗಳ ಸಂಖ್ಯೆ** | **ಮಂಜೂರು ಮಾಡಿರುವ ಅನುದಾನ (₹ ಲಕ್ಷಗಳಲ್ಲಿ)** |
|---|---|---|---|
| 01 | ಗುಲ್ಬರ್ಗಾ | 09 | 90.00 |
| 02 | ಯಾದಗಿರಿ | 04 | 40.00 |

ಹಾಗೂ ಸರ್ಕಾರದ ಆದೇಶ ಸಂಖ್ಯೆ ಕಂಇ 178 ಮುಅಬಿ 2013, ದಿನಾಂಕ:08-11-2013 ರಲ್ಲಿ 2008-09ನೇ ಸಾಲಿನಿಂದ 2012-13ನೇ ಸಾಲಿನವರೆಗೆ ಮಂಜೂರಾಗಿ ಬಳಕೆಯಾಗದೇ ಉಳಿದಿರುವ ಅನುಪಯುಕ್ತ ಅನುದಾನದಲ್ಲಿ ಈ ಎರಡು ಜಿಲ್ಲೆಗಳ ಪ್ರತಿ

ವಿಧಾನಸಭಾ ಕ್ಷೇತ್ರಗಳಿಗೆ ತಲಾ ₹ 15.00 ಲಕ್ಷಗಳಂತೆ ಈ ಕೆಳಕಂಡ ಮೊತ್ತವನ್ನು ಹಂಚಿಕೆ ಮಾಡಿ ಆದೇಶಿಸಲಾಗಿರುತ್ತದೆ.

| ಕ್ರಮ ಸಂಖ್ಯೆ | ಜಿಲ್ಲೆ | ವಿಧಾನಸಭಾ ಕ್ಷೇತ್ರಗಳ ಸಂಖ್ಯೆ | ಮಂಜೂರು ಮಾಡಿರುವ ಅನುದಾನ (₹ ಲಕ್ಷಗಳಲ್ಲಿ) |
|---|---|---|---|
| 01 | ಗುಲ್ಬರ್ಗಾ | 09 | 135.00 |
| 02 | ಯಾದಗಿರಿ | 04 | 60.00 |

ಆ) ಕಳೆದ ಐದು ವರ್ಷಗಳಲ್ಲಿ (2008–09 ರಿಂದ 2012–13 ರವರೆಗೆ) ಈ ದೇವಸ್ಥಾನಗಳ ಪೈಕಿ ಅನುದಾನ ಬಿಡುಗಡೆ ಮಾಡಲಾಗಿರುವ ಸಂಸ್ಥೆಗಳ ಸಂಖ್ಯೆ ಮತ್ತು ಮೊತ್ತದ ವಿವರ ಈ ಕೆಳಕಂಡಂತಿದೆ:

| ಮಂಜೂ–ರಾದ ಸಂಸ್ಥೆಗಳ ಸಂಖ್ಯೆ | ಸರ್ಕಾರ–ದಿಂದ ಮಂಜೂ–ರಾದ ಮೊತ್ತ | ಖರ್ಚಾದ ಸಂಸ್ಥೆಗಳ ಸಂಖ್ಯೆ | ಮೊತ್ತ | ಬಾಕಿ–ಯಿರುವ ಸಂಸ್ಥೆಗಳ ಸಂಖ್ಯೆ | ಮೊತ್ತ |
|---|---|---|---|---|---|
| **ಗುಲ್ಬರ್ಗಾ ಜಿಲ್ಲೆ** | | | | | |
| **97** | **1,93,80,000** | **71** | **1,14,30,000** | **26** | **79,50,000** |
| **ಯಾದಗಿರಿ ಜಿಲ್ಲೆ** | | | | | |
| **34** | **2,15,55,000** | **16** | **2,18,40,000** | **18** | **33,15,000** |

ಹಾಗೂ ವರ್ಷವಾರು ಬಿಡುಗಡೆ ಮಾಡಿರುವ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ. ಈ ಜಿಲ್ಲೆಯ ಧಾರ್ಮಿಕ ಸಂಸ್ಥೆಗಳಿಗೆ 2008–09ನೇ ಸಾಲಿನಿಂದ 2011–12ನೇ ಸಾಲಿನವರೆಗೆ ಬಿಡುಗಡೆ

ಮಾಡಲಾದ ಅನುದಾನದಲ್ಲಿ ಬಳಕೆಯಾಗದೆ ಉಳಿದಿರುವ ಅನುಪಯುಕ್ತ ಅನುದಾನವನ್ನು ಆರ್ಥಿಕ ಇಲಾಖೆಯ ಸಹಮತದೊಂದಗೆ ಸರ್ಕಾರಿ ಆದೇಶ ಸಂಖ್ಯೆ:ಕಂಇ 178 ಮುಅಬಿ 2013, ದಿನಾಂಕ:08–11–2013ರಲ್ಲಿ ಹಿಂದಕ್ಕೆ ಪಡೆಯಲಾಗಿರುತ್ತದೆ.

## ಅನುಬಂಧ

## ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲಾ ವ್ಯಾಪ್ತಿಗೆ ಬರುವ ಮುಜರಾಯಿ ದೇವಾಲಯಗಳಿಗೆ ಕಳೆದ ಐದು ವರ್ಷಗಳಲ್ಲಿ ಬಿಡುಗಡೆ ಮಾಡಿರುವ ಅನುದಾನದ ವಿವರ

## ಗುಲ್ಬರ್ಗಾ ಜಲ್ಲೆ

| ಕ್ರ. ಸಂ. | ವರ್ಷ | ಸರ್ಕಾರದಿಂದ ಅನುದಾನ ಬಿಡುಗಡೆಯಾದ ಸಂಸ್ಥೆಗಳ ವಿವರ | | ಬಾಕಿ ಇರುವ ಸಂಸ್ಥೆಗಳ ವಿವರ | | ಖರ್ಚಾದ ಅನುದಾನ ಸಂಸ್ಥೆಗಳ ವಿವರ | |
|---|---|---|---|---|---|---|---|
| | | ಒಟ್ಟು ಸಂಖ್ಯೆ | ಒಟ್ಟು ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 1 | 2008–09 | 63 | 3580000 | 13 | 700000 | 50 | 2880000 |
| 2 | 2009–10 | 2 | 5270000 | | | 2 | 5270000 |
| 3 | 2010–11 | 8 | 1450000 | 2 | 300000 | 6 | 1150000 |
| 4 | 2011–12 | 13 | 2130000 | | | 13 | 2130000 |
| 5 | 2012–13 | 11 | 6950000 | 11 | 6950000 | | |
| | | **97** | **19380000** | **26** | **7950000** | **71** | **11430000** |

## ಯಾದಗಿರಿ ಜಿಲ್ಲೆ

| ಕ್ರ. ಸಂ. | ವರ್ಷ | ಸರ್ಕಾರದಿಂದ ಅನುದಾನ ಬಿಡುಗಡೆಯಾದ ಸಂಸ್ಥೆಗಳ ವಿವರ | | ಬಾಕಿ ಇರುವ ಸಂಸ್ಥೆಗಳ ವಿವರ | | ಖರ್ಚಾದ ಅನುದಾನ ಸಂಸ್ಥೆಗಳ ವಿವರ | |
|---|---|---|---|---|---|---|---|
| | | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ |
| 1 | 2008–09 | | | | | | |
| 2 | 2009–10 | 20330000 | 7 | 20330000 | 7 | – | – |
| 3 | 2010–11 | 575000 | 7 | 300000 | 2 | 275000 | 5 |
| 4 | 2011–12 | 1750000 | 11 | 410000 | 3 | 1340000 | 8 |
| 5 | 2012–13 | 2500000 | 9 | 800000 | 4 | 1700000 | 5 |
| | ಒಟ್ಟು | **25155000** | **34** | **21840000** | **16** | **3315000** | **18** |

## ಮಂಚನಬೆಲೆ ಡ್ಯಾಂನಲ್ಲಿ ಅವಘಡ

### 941, ಶ್ರೀ ಅಶ್ವತ್ಥ ನಾರಾಯಣ (ವಿಧಾನ ಸಭಾ ಕ್ಷೇತ್ರ)

ಅ) ರಾಮನಗರ ಜಿಲ್ಲೆ, ಮಂಚನಬೆಲೆ ಡ್ಯಾಂ ಇತ್ತೀಚೆಗೆ ಮೋಜಿಗೆ ತೆರಳಿ ಡ್ಯಾಂನಲ್ಲಿ ಮುಳುಗಿ ಸಾಯುವವರ ಸಂಖ್ಯೆ ಜಾಸ್ತಿಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ತಡೆಗಟ್ಟಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ;

ಆ) ಮಂಚನಬೆಲೆ ಡ್ಯಾಂನಿಂದ ರಾಮನಗರದ ಕೆಲವು ಭಾಗಗಳಿಗೆ ಕುಡಿಯುವ ನೀರಿಗಾಗಿ ಯೋಜನೆ ರೂಪಿಸಲಾಗಿದೆ; ರೂಪಿಸಿದ್ದರೆ, ಯಾವ ಯಾವ ಹಳ್ಳಿಗೆ ಈ ಯೋಜನೆ ವಿಸ್ತರಣೆಯಾಗುತ್ತದೆ;

ಇ) ಹೇಮಾವತಿಯಿಂದ ತಿಪ್ಪಗೊಂಡನಹಳ್ಳಿಗೆ ನೀರು ತರುವ ಯೋಜನೆ ಸರ್ಕಾರದ ಮುಂದಿದೆಯೇ; ಈ ಯೋಜನೆ ಯಾವ ಹಂತದಲ್ಲಿದೆ?

### ಶ್ರೀ ಎಂ.ಬಿ.ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಗಮನಕ್ಕೆ ಬಂದಿದೆ.

ಮಂಚನಬೆಲೆ ಡ್ಯಾಂನಲ್ಲಿ ಆಕಸ್ಮಿಕವಾಗಿ ಸಂಭವಿಸುತ್ತಿರುವ ಪ್ರಾಣ ಹಾನಿಯನ್ನು ತಡೆಯುವ ದೃಷ್ಟಿಯಿಂದ ಈ ಕೆಳಕಂಡ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಅವಘಡ ಸಂಭವಿಸಬಹುದಾದ ಸ್ಥಳಗಳಲ್ಲಿ ಎಚ್ಚರಿಕೆಯ ನಾಮಫಲಕಗಳನ್ನು ಹಾಕಲಾಗಿದೆ.
2. ಈ ಅಪಾಯದ ಸ್ಥಳಗಳಿಗೆ ಪ್ರವಾಸಿಗರನ್ನು ನಿರ್ಬಂಧಿಸಲು ಎರಡೂ ಕಡೆ ಗೇಟ್‌ಗಳನ್ನು ಅಳವಡಿಸಿ ವಾಚ್‌ಮನ್ ಷೆಡ್ ನಿರ್ಮಿಸಲಾಗಿರುತ್ತದೆ.
3. ಈ ರಸ್ತೆಯ ಪ್ರಾರಂಭದ ವಾಡಹಳ್ಳಿ ಗೇಟ್‌ನಿಂದ ಅವ್ವೇರಹಳ್ಳಿ ಗ್ರಾಮದವರೆಗೆ ಅವಶ್ಯವಿರುವ ಸ್ಥಳಗಳಲ್ಲಿ 1530

ಮೀ. ಉದ್ದಕ್ಕೆ ಆರ್.ಸಿ.ಸಿ. ಕಂಬಗಳು ಒಳಗೊಂಡಂತೆ ತಂತಿ ಬೇಲಿ ನಿರ್ಮಿಸಲಾಗಿರುತ್ತದೆ.

4. ಸಿ.ಸಿ. ಕ್ಯಾಮರಾಗಳನ್ನು ಅಳವಡಿಸುವುದನ್ನು ಒಳಗೊಂಡಂತೆ ಇನ್ನು ಹೆಚ್ಚಿನ ಸುರಕ್ಷತ ಕ್ರಮ ಕೈಗೊಳ್ಳುವ ಬಗ್ಗೆ ವಿವರವಾದ ಯೋಜನಾ ವರದಿಯು ತಯಾರಿಕೆ ಹಂತದಲ್ಲಿರುತ್ತದೆ.

ಆ) ಮಂಚನಬೆಲೆ ಡ್ಯಾಂನಿಂದ ರಾಮನಗರದ ಯಾವುದೇ ಭಾಗಗಳಿಗೆ ಕುಡಿಯುವ ನೀರಿಗಾಗಿ ಯೋಜನೆಯನ್ನು ಜಲಸಂಪನ್ಮೂಲ ಇಲಾಖೆಯು ರೂಪಿಸಿರುವುದಿಲ್ಲ.

ಇ) ಹೇಮಾವತಿಯಿಂದ ತಿಪ್ಪಗೊಂಡನಹಳ್ಳಿಗೆ ನೀರು ತರುವ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಮುಂದೆ ಇರುವುದಿಲ್ಲ.

**ರಾಮನಗರದಲ್ಲಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್**

**940, ಶ್ರೀ ಅಶ್ವತ್ ನಾರಾಯಣ (ವಿಧಾನ ಸಭೆಯಿಂದ ಚುನಾಯಿತರಾದವರು)**

ಅ) ರಾಮನಗರದಲ್ಲಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್, ಕ್ರೀಡಾ ಸಮುಚ್ಛಯ, ಸ್ಟೇಡಿಯಂ, ಇಂಡಿಯನ್ ಸ್ಟೇಡಿಯಂ ನಿರ್ಮಾಣದ ಯೋಜನೆ ಸರ್ಕಾರದ ಮುಂದೆ ಇದೆಯೇ: ಇದ್ದರೆ, ಯೋಜನೆ ಯಾವ ಹಂತದಲ್ಲಿ ಇದೆ?

**ಶ್ರೀ ಕೆ. ಅಭಯಚಂದ್ರ (ಯುವಜನ ಸೇವೆ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು)**

ಅ) ರಾಮನಗರದಲ್ಲಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್, ಕ್ರೀಡಾ ಸಮುಚ್ಛಯ, ಸ್ಟೇಡಿಯಂ, ಇಂಡಿಯನ್ ಸ್ಟೇಡಿಯಂ ನಿರ್ಮಾಣ ಮಾಡುವ ಯಾವುದೇ ಪ್ರಸ್ತಾವನೆಯು ಪ್ರಸ್ತುತ 2013–14ನೇ ಸಾಲಿನಲ್ಲಿ ಸರ್ಕಾರದ ಮುಂದೆ ಇರುವುದಿಲ್ಲ.

**ಅಸಂಘಟಿತ ಕಾರ್ಮಿಕರ ಕಲ್ಯಾಣ**

**942, ಶ್ರೀ ಅಶ್ವತ್ಥನಾರಾಯಣ (ವಿಧಾನ ಸಭಾ ಕ್ಷೇತ್ರ)**

ಅ) ರಾಜ್ಯದಲ್ಲಿ ಕಳೆದ 5 ವರ್ಷಗಳಲ್ಲಿ ಅಸಂಘಟಿತ ಕಾರ್ಮಿಕರ ಕಲ್ಯಾಣ ನಿಧಿಗಾಗಿ ರಾಜ್ಯದಲ್ಲಿ ಸಂಗ್ರಹವಾದ ಹಣವೆಷ್ಟು? ಯಾವ ಯಾವ ಉದ್ದೇಶಗಳಿಗೆ ಸದರಿ ಹಣ ಉಪಯೋಗಿಸಲಾಗಿದೆ.

ಆ) ಸಂಗ್ರಹವಾದ ಹಣದಲ್ಲಿ ಯಾವ ಯಾವ ಯೋಜನೆ ರೂಪಿಸಲಾಗಿದೆ. ಮೃತ ಕಾರ್ಮಿಕರ ಕುಟುಂಬಗಳಿಗೆ ಬಿಡುಗಡೆಯಾದ ಹಣವೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಇ) ಬಿಬಿಎಂಪಿ ವ್ಯಾಪ್ತಿ ಬಿಎಂಆರ್‌ಡಿ ವ್ಯಾಪ್ತಿ ಹಾಗೂ ಬಿಡಿಎ ವ್ಯಾಪ್ತಿಗಳಲ್ಲಿ ಕಟ್ಟಡ ನಿರ್ಮಾಣ ಮಾಲೀಕರಿಂದ ಮತ್ತು ಡೆವಲಪರ್‌ಗಳಿಂದ ಸಂಗ್ರಹವಾದ ಹಣವೆಷ್ಟು? (ವಿವರ ನೀಡುವುದು)

**ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ(ಮಾನ್ಯ ಕಾರ್ಮಿಕ ರಾಜ್ಯ ಸಚಿವರು)**

ಅ) ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಈ ಕೆಳಕಂಡ ಮಂಡಳಿಗಳನ್ನು ರಚಿಸಲಾಗಿದೆ:

1. ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ.

2. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ.

1. ಅಸಂಘಟಿತ ಕಾರ್ಮಿಕರಿಗೆ ಈ ಮಂಡಳಿಯಡಿಯಲ್ಲಿ:

ಅ. **ಎನ್‌ಪಿಎಸ್ ಲೈಟ್-ಸ್ವಾವಲಂಭನ್ ಯೋಜನೆಯನ್ನು** ಅನುಷ್ಠಾನ ಮಾಡುತ್ತಿದ್ದು, ಈ ಯೋಜನೆಗೆ ಯಾವುದೇ ನಿಧಿಯನ್ನು ಸಂಗ್ರಹಿಸುತ್ತಿಲ್ಲ. ಬದಲಿಗೆ ರಾಜ್ಯ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದಿಂದ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ರಾಜ್ಯ ಸರ್ಕಾರದಿಂದ ಕಳೆದ 4 ವರ್ಷಗಳಲ್ಲಿ ಈ ಕೆಳಕಂಡಂತೆ ಅನುದಾನ ಬಿಡುಗಡೆಯಾಗಿರುತ್ತದೆ. ಯೋಜನೆ 2010-11ನೇ ಸಾಲಿನಿಂದ ಪ್ರಾರಂಭವಾಗಿರುತ್ತದೆ.

| **ವರ್ಷ** | **ರಾಜ್ಯ ಸರ್ಕಾರದ ಅನುದಾನ (ಲಕ್ಷಗಳಲ್ಲಿ)** |
|---|---|
| 2010–11 | 70.00 |
| 2011–12 | 53.06 |
| 2012–13 | 250.00 |
| 2013–14 | 112.50 |
| **ಒಟ್ಟು** | **485.56** |

ಆ. **ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆ:** ಈ ಯೋಜನೆ 2011–12ನೇ ಸಾಲಿನಲ್ಲಿ ಪ್ರಾರಂಭವಾಗಿರುತ್ತದೆ.

| **ವರ್ಷ** | **ರಾಜ್ಯ ಸರ್ಕಾರದ ಅನುದಾನ (ಕೋಟಿಗಳಲ್ಲಿ)** |
|---|---|
| 2011–12 | 2.00 |
| 2012–13 | 1.00 |
| 2013–14 | 1.00 |
| **ಒಟ್ಟು** | **4.00** |

ಸರ್ಕಾರವು ಬಿಡುಗಡೆಮಾಡಿದ ಅನುದಾನವನ್ನು ಮಂಡಳಿಯು ಮೇಲೆ ತಿಳಿಸಿದ ಯೋಜನೆಗಳ ಅನುಷ್ಠಾನಕ್ಕಾಗಿ ಉಪಯೋಗಿಸಲಾಗುತ್ತಿದೆ.

2. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿಯನ್ನು 18–01–2007ರಂದು ಸ್ಥಾಪಿಸಲಾಗಿರುತ್ತದೆ.

ಕಟ್ಟಡ ನಿರ್ಮಾಣದಾರರಿಂದ ಶೇ.1ರಂತೆ ಸುಂಕ ಸಂಗ್ರಹಿಸುವುದನ್ನು ಹೊರತುಪಡಿಸಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಸರ್ಕಾರದಿಂದ ಯಾವುದೇ ಅನುದಾನ ಬರುವುದಿಲ್ಲ.

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ 01–11–2006ರಿಂದ ಅಕ್ಟೋಬರ್ 2013ರವರೆಗೆ ಸುಂಕ (cess) ರೂಪದಲ್ಲಿ ಒಟ್ಟು ₹ 1858,51,06,969/– ಗಳನ್ನು ಸಂಗ್ರಹಿಸಲಾಗಿದೆ. ಸುಂಕದ ಮೇಲೆ ಬಡ್ಡಿ, ಫಲಾನುಭವಿಗಳ ನೋಂದಣಿ ಮತ್ತು ನವೀಕರಣ ಶುಲ್ಕ ಹಾಗೂ ಇತರೆ ಅದಾಯ ಸೇರಿ ಮಂಡಳಿಯಲ್ಲಿ ₹ 2170,87,85,086/– ಗಳ ನಿಧಿ ಇರುತ್ತದೆ. ಈ ನಿಧಿಯನ್ನು ಆಡಳಿತಾತ್ಮಕ ಖರ್ಚು ಒಳಗೊಂಡಂತೆ ಕಲ್ಯಾಣ ಯೋಜನೆಗಳಿಗೆ ವಿನಿಯೋಗಿಸಲಾಗುತ್ತಿದೆ.

ಆ) ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಗೆ ರಾಜ್ಯ ಸರ್ಕಾರ ಬಿಡುಗಡೆ ಮಾಡಿದ ಆಯವ್ಯಯದಲ್ಲಿ ಈ ಕೆಳಕಂಡ ಯೋಜನೆಗಳನ್ನು ರೂಪಿಸಿದೆ:

**1. ಎನ್.ಪಿ.ಎಸ್. ಲೈಟ್–ಸ್ವಾವಲಂಭನ್ ಪಿಂಚಣಿ ಯೋಜನೆ**

2010–11ನೇ ಸಾಲಿನಿಂದ **ಎನ್.ಪಿ.ಎಸ್. ಲೈಟ್–ಸ್ವಾವಲಂಭನ್ ಪಿಂಚಣಿ ಯೋಜನೆಯನ್ನು ಅನುಷ್ಠಾನಗೊಳಿಸಲು ಪ್ರಾರಂಭಿಸಲಾಗಿದೆ. ಪ್ರಸ್ತುತ ಅಸಂಘಟಿತ ವಲಯದ** 43 ವರ್ಗಗಳ ಕಾರ್ಮಿಕರಿಗೆ ಅನುಷ್ಠಾನ ಮಾಡಲಾಗುತ್ತಿದೆ. ವಾರ್ಷಿಕ ಕನಿಷ್ಠ ₹ 1,200/– ವಂತಿಕೆ ಪಾವತಿ ಮಾಡುವ ವಂತಿಕೆದಾರರಿಗೆ ರಾಜ್ಯ ಸರ್ಕಾರವು ವಾರ್ಷಿಕ ಗರಿಷ್ಠ ₹ 1,200/– ಸಮಾನಾಂತರ ವಂತಿಕೆಯನ್ನು (Matching Contribution) ಪಾವತಿಸುತ್ತದೆ. ಅದೇ ರೀತಿ ಪ್ರತಿ ವರ್ಷ ಕನಿಷ್ಠ ₹ 1,000/– ಗಳನ್ನು ಪಾವತಿಸುವ ವಂತಿಕೆದಾರರು ಕೇಂದ್ರದ ಸ್ವಾವಲಂಭನ್ ಯೋಜನೆಯಿಂದ ಪ್ರತಿ ವರ್ಷ ಗರಿಷ್ಠ ₹ 1,000/–

ವಂತಿಕೆ ಪಡೆಯಲು ಅರ್ಹರಾಗಿರುತ್ತಾರೆ. ಫಲಾನುಭವಿಯು 60 ವರ್ಷ ಪೂರೈಸಿದಾಗ ಯೋಜನೆಯಡಿ ಸಂಗ್ರಹವಾದ ಒಟ್ಟು ವಂತಿಕೆಯ ಶೇ.60 ರಷ್ಟನ್ನು ನಗದು ರೂಪದಲ್ಲಿ ಪಡೆಯಬಹುದಾಗಿದ್ದು, ಉಳಿದ ಶೇ. 40ರ ಮೊತ್ತಕ್ಕೆ ಮಾಸಿಕ ಪಿಂಚಣಿ ಪಡೆಯಲು ಅವಕಾಶವಿರುತ್ತದೆ.

**2. ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆ**

**ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆಯಡಿ** ರಾಜ್ಯದಲ್ಲಿ ಚಾಲನಾ ಪರವಾನಗಿಯನ್ನು ಪಡೆದಿರುವ ಖಾಸಗಿ ವಾಣಿಜ್ಯ ವಾಹನಗಳಾದ **ಆಟೋ, ಟ್ಯಾಕ್ಸಿ, ಮ್ಯಾಕ್ಸಿ ಕ್ಯಾಬ್, ಲಾರಿ ಮತ್ತು ಬಸ್** ಚಾಲಕರು ಒಂದು ಬಾರಿ ಮಾತ್ರ ₹ 25/– ನೊಂದಣಿ ಶುಲ್ಕವನ್ನು ಪಾವತಿಸಿ ನೋಂದಣಿ ಮಾಡಿಸಬೇಕಾಗುತ್ತದೆ. ಈ ಚಾಲಕರು ಕರ್ತವ್ಯದಲ್ಲಿರುವಾಗ ಅಥವಾ ಕರ್ತವ್ಯದಲ್ಲಿಲ್ಲದಿರುವಾಗ ಅಪಘಾತಕ್ಕೀಡಾಗಿ ಮರಣ ಹೊಂದಿದಲ್ಲಿ ಅಥವಾ ಶಾಶ್ವತ/ತಾತ್ಕಾಲಿಕ ದುರ್ಬಲತೆ ಹೊಂದಿದಲ್ಲಿ ಗರಿಷ್ಠ ₹ 2.00 ಲಕ್ಷದವರೆಗೆ ವಿಮಾ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ. ಯೋಜನೆಯಡಿ ಮೃತ ಕಾರ್ಮಿಕರಿಗೆ ಬಿಡುಗಡೆಯಾದ ಪರಿಹಾರದ ವಿವರಗಳುಳ್ಳ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ–1** ದಲ್ಲಿ ಒದಗಿಸಿದೆ.

2. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ಕಾರ್ಮಿಕರ ಕಲ್ಯಾಣಕ್ಕಾಗಿ 12 ಯೋಜನೆಗಳನ್ನು ರೂಪಿಸಿದ್ದು, ವಿವರಗಳು ಈ ಕೆಳಕಂಡಂತಿರುತ್ತದೆ:

1. **₹ 400/– ರಿಂದ ₹ 6,000/–** ಒಳರೋಗಿ ಧನಸಹಾಯ ಸರ್ಕಾರಿ ಮತ್ತು ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದುದಕ್ಕೆ.

2. **₹ 2,00,000/– ಅಪಘಾತ ಪರಿಹಾರ:** ಫಲಾನುಭವಿ ಕೆಲಸ ಮಾಡುತ್ತಿದ್ದಾಗ ಮತ್ತು ಕೆಲಸದ ಸ್ಥಳದಿಂದ ಮನೆಗೆ ಹೋಗುವಾಗ ಅಥವಾ ಮನೆಯಿಂದ ಕೆಲಸಕ್ಕೆ ಹೋಗುವ ಮಾರ್ಗದ ಮಧ್ಯದಲ್ಲಿ **ಅಪಘಾತ ಉಂಟಾಗಿ ತೀರಿಕೊಂಡಲ್ಲಿ** ಆತನ ಅವಲಂಬಿತರಿಗೆ **ಅಥವಾ** ಫಲಾನುಭವಿ ಕೆಲಸ **ಎಸ್.ಎಸ್.ಎಲ್.**ಸಿ. ಓದುತಿರುವವರಿಗೆ **₹ 5,000/–, ಪಿ.ಯು.ಸಿ. ಪ್ರಥಮ ಮತ್ತು ದ್ವಿತೀಯ** ಉತ್ತೀರ್ಣರಾದವರಿಗೆ ಪ್ರತಿ ವರ್ಷಕ್ಕೆ **₹ 5,000/–, ಐಟಿಐ/ಡಿಪ್ಲೋಮಾ** ಓದುತ್ತಿರುವವರಿಗೆ **₹ 5,000/–, ಪದವಿ** ಓದುತ್ತಿರುವವರಿಗೆ ಪ್ರತಿ ವರ್ಷಕ್ಕೆ **₹ 5,000/–, ಸ್ನಾತಕೋತ್ತರ ಪದವಿ** ಓದುತ್ತಿರುವವರಿಗೆ ಪ್ರತಿ ವರ್ಷಕ್ಕೆ **₹ 15,000/–,** ವೈದ್ಯಕೀಯ/ಇಂಜಿನಿಯರಿಂಗ್ ಪದವಿ ಓದುತ್ತಿರುವವರಿಗೆ ಸರ್ಕಾರವು ಅರ್ಹತೆಯ ಸ್ಥಾನಕ್ಕೆ ನಿಗಧಿ ಪಡಿಸಿದ ಶುಲ್ಕ ಪಾವತಿ ಮತ್ತು ಪ್ರತಿ ತಿಂಗಳಿಗೆ ₹ 1,000/– ಗಳ ಹಾಜರಾತಿ ಭತ್ಯೆ.

9. ಮದುವೆಗೆ **₹ 50,000/–** ಧನಸಹಾಯ ಫಲಾನುಭವಿಗೆ ಅಥವಾ ಅವರ ಇಬ್ಬರು ಮಕ್ಕಳಿಗೆ.

**ಎರಡು ವರ್ಷ ಸದಸ್ಯತ್ವ ಪೂರ್ಣಗೊಂಡ ಫಲಾನುಭವಿಗೆ ದೊರಕುವ ಸೌಲಭ್ಯಗಳು**

10. **₹ 5,000/– ಉಪಕರಣಗಳ ಖರೀದಿಗೆ** ಧನಸಹಾಯ.

**ಐದು ವರ್ಷ ಸದಸ್ಯತ್ವ ಪೂರ್ಣಗೊಂಡ ಫಲಾನುಭವಿಗೆ ದೊರಕುವ ಸೌಲಭ್ಯಗಳು**

11. ಮಾಹೆಯಾನ **₹ 500/–** ಪಿಂಚಣಿ ಯೋಜನೆ.

12.ಫಲಾನುಭವಿಗೆ ಮನೆ **ಕಟ್ಟುವುದಕ್ಕೆ/ಖರೀದಿಸುವುದಕ್ಕೆ** ಸಹಾಯಧನ **₹ 50,000/–** ಗಳ ಸಬ್ಸಿಡಿ.

ಯೋಜನೆಯಡಿ ಮೃತ ಕಾರ್ಮಿಕರಿಗೆ ಬಿಡುಗಡೆಯಾದ ಪರಿಹಾರದ ವಿವರಗಳುಳ್ಳ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ–2** ರಲ್ಲಿ ಒದಗಿಸಿದೆ.

ಇ) ದಿನಾಂಕ: 01–04–2007 ರಿಂದ 25–11–2013ರವರೆಗೆ ಬಿಬಿಎಂಪಿಯಿಂದ ₹ 479,93,65,955–00, ಬಿಡಿಎದಿಂದ ₹ 95,12,77,003–00ಗಳ ಮತ್ತು ಬಿಎಂಆರ್‌ಸಿಎಲ್‌ನಿಂದ ₹ 36,80,94,024/– ಸುಂಕವನ್ನು ಸಂಗ್ರಹಿಸಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಜಮೆ ಮಾಡಲಾಗಿದೆ.

## ಮೈಸೂರು ನಗರ ವ್ಯಾಪ್ತಿಯ ಕೆರೆಗಳು

### 834, ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್)

**ಅ)** ಮೈಸೂರು ನಗರ ವ್ಯಾಪ್ತಿಯಲ್ಲಿರುವ ಕೆರೆಗಳ ಸಂಖ್ಯೆ ಎಷ್ಟು; ಈ ಕೆರೆಗಳ ವಿಸ್ತೀರ್ಣವೆಷ್ಟು; (ಪ್ರತಿಯೊಂದು ಕೆರೆಯ ವಿವರ ನೀಡುವುದು)

**ಆ)** ಎಷ್ಟು ಕೆರೆಗಳನ್ನು ಭೂಗಳ್ಳರು ಒತ್ತುವರಿ ಮಾಡಿಕೊಂಡಿದ್ದಾರೆ; (ಸ್ಪಷ್ಟವಾದ ವಿವರ ನೀಡುವುದು)

**ಇ)** ಕೆರೆಗಳ ಒತ್ತುವರಿ ಮಾಡಿಕೊಂಡವರನ್ನು ತೆರವುಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು; (ವಿವರ ನೀಡುವುದು)

**ಈ)** ಹಸರೀಕರಣ ಯೋಜನೆ/ಗಿಡ ನೆಡುವ ಕಾರ್ಯಕ್ರಮಗಳು ಕೆರೆ ಅಭಿವೃದ್ಧಿ ಕಾರ್ಯಗಳು ಆಯಾ ಕೆರೆ ವ್ಯಾಪ್ತಿಯಲ್ಲಿ ನಡೆದಿವೆಯೇ ತಿಳಿಸುವುದು?

**ಶ್ರೀ ಶಿವರಾಜ್ ಎಸ್.ತಂಗಡಗಿ (ಸಣ್ಣ ನೀರಾವರಿ ಸಚಿವರು)**

**ಅ)** ಮೈಸೂರು ನಗರ ಸಣ್ಣ ನೀರಾವರಿ ಇಲಾಖಾ ವ್ಯಾಪ್ತಿಯಲ್ಲಿ ಒಟ್ಟು 2 ಕೆರೆಗಳಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರ. ಸಂ. | ಕೆರೆಯ ಹೆಸರು | ಕೆರೆ ಅಂಗಳದ ವಿಸ್ತೀರ್ಣ |
|---|---|---|
| 1 | ಲಿಂಗಾಂಬುದಿ ಕೆರೆ | 52.40 ಹೆಕ್ಟೇರ್ |
| 2 | ಬೋಗಾದಿ ಮರಿಯಪ್ಪನ ಕೆರೆ | 5.00 ಹೆಕ್ಟೇರ್ |

ಮುಂದುವರೆದು ಲಿಂಗಾಂಬುದಿ ಕೆರೆಯು ಅರಣ್ಯ ಇಲಾಖೆ, ಮತ್ತು ಬೋಗಾದಿ ಮರಿಯಪ್ಪನ ಕೆರೆಯು ಮೈಸೂರು ಮಹಾನಗರ ಪಾಲಿಕೆಯ ಉಸ್ತುವಾರಿಯಲ್ಲಿರುತ್ತವೆ.

ಮೈಸೂರು ನಗರದ ವ್ಯಾಪ್ತಿಯಲ್ಲಿ 10 ಕೆರೆಗಳು ಇರುತ್ತವೆ. ಅದರ ವಿವರ ಮತ್ತು ವಿಸ್ತೀರ್ಣ ಕೆಳಕಂಡಂತಿದೆ.

| ಕ್ರ.ಸಂ. | ಕೆರೆಗಳ ಹೆಸರು | ವಿಸ್ತೀರ್ಣ |
|---|---|---|
| 1 | ದೇವನೂರು ಕೆರೆ | 12 ಎಕರೆ 37 ಗುಂಟೆ |
| 2 | ಹೆಬ್ಬಾಳ್ ಕೆರೆ | 43 ಎಕರೆ 10.50 ಗುಂಟೆ |
| 3 | ಹಿನ್‌ಕಲ್ ಕೆರೆ | 6 ಎಕರೆ 19 ಗುಂಟೆ |
| 4 | ಬೋಮ್ಮನಹಳ್ಳಿ ಕೆರೆ | 9 ಎಕರೆ 16 ಗುಂಟೆ |
| 5 | ದಳವಾಯಿ ಕೆರೆ | 111 ಎಕರೆ 20 ಗುಂಟೆ |
| 6 | ಬೋಗಾದಿ ಕೆರೆ | 20 ಎಕರೆ 05 ಗುಂಟೆ |
| 7 | ರಾಯರ ಕೆರೆ | 5 ಎಕರೆ 09 ಗುಂಟೆ |
| 8 | ಕ್ಯಾತಮಾರನಹಳ್ಳಿ ಕೆರೆ | 7 ಎಕರೆ 35 ಗುಂಟೆ |

| | | |
|---|---|---|
| 9 | ಕುಕ್ಕರಹಳ್ಳಿ ಕೆರೆ | 252 ಎಕರೆ 0.40 ಗುಂಟೆ |
| 10 | ಕಾರಂಜಿ ಕೆರೆ | 67.00 ಎಕರೆ |

ಈ ಮೇಲ್ಕಂಡ ಕೆರೆಗಳು ಮೈಸೂರು ನಗರ ಪಾಲಿಕೆಯ ಅಧೀನದಲ್ಲಿರುವುದಿಲ್ಲ.

ಆ) 1) ಲಿಂಗಾಂಬುದಿ ಕೆರೆ ಅಂಗಳವು ಒತ್ತುವರಿಯಾಗಿದ್ದು, ಈ ಇಲಾಖೆಯಿಂದ ಸರ್ವೆ ಮಾಡಿಸಿ 2.27 ಹೆಕ್ಟೇರ್ ಒತ್ತುವರಿಯಾಗಿರುವುದು ಕಂಡು ಬಂದಿದ್ದು, ಗಡಿ ಕಂದಕದ ಮೂಲಕ ಒತ್ತುವರಿ ತೆರವುಗೊಳಿಸಲಾಗಿರುತ್ತದೆ.

2) ಬೋಗಾದಿ ಮರಿಯಪ್ಪನ ಕೆರೆಯ ಅಂಗಳವು ಒತ್ತುವರಿಯಾಗಿರುವುದು ಕಂಡು ಬರುತ್ತಿಲ್ಲ. ಈ ಕೆರೆಯು ಮೈಸೂರು ಮಹಾನಗರ ಪಾಲಿಕೆಯ ಉಸ್ತುವಾರಿಯಲ್ಲಿರುವುದರಿಂದ ಸರ್ವೆ ಮಾಡಿಸಿ ಒತ್ತುವರಿಯ ಬಗ್ಗೆ ಖಾತ್ರಿ ಪಡಿಸಿಕೊಳ್ಳಲು ಕ್ರಮ ವಹಿಸಲಾಗುವುದು.

ಮೈಸೂರು ನಗರವ್ಯಾಪ್ತಿಯಲ್ಲಿನ ಐದು ಕೆರೆಗಳ ಒತ್ತುವರಿ ವಿವರ ಕೆಳಗಿನಂತಿವೆ.

| ಕ್ರ.ಸಂ. | ಕೆರೆಗಳ ಹೆಸರು | ವಿಸ್ತೀರ್ಣ |
|---|---|---|
| 1 | ದೇವನೂರು ಕೆರೆ | 20 ಗುಂಟೆ |
| 2 | ಹೆಬ್ಬಾಳ್ ಕೆರೆ | 1 ಎಕರೆ 20 ಗುಂಟೆ |
| 3 | ಬೋಮ್ಮನಹಳ್ಳಿ ಕೆರೆ | 20 ಗುಂಟೆ |
| 4 | ದಳವಾಯಿ ಕೆರೆ | 6 ಎಕರೆ 50 ಗುಂಟೆ |
| 5 | ಕ್ಯಾತಮಾರನಹಳ್ಳಿ ಕೆರೆ | 1 ಎಕರೆ 17 ಗುಂಟೆ |

ಇ) ಸರ್ಕಾರದ ಆದೇಶದಂತೆ ಕೆರೆ ಅಂಗಳದ ಗಡಿಯನ್ನು ಸರ್ವೆ ಮಾಡಿಸಿ ಗಡಿಯಲ್ಲಿ ಕಂದಕ ನಿರ್ಮಾಣ ಮಾಡುವುದು, ಚೈನ್‌ಲಿಂಕ್ ತಂತಿ ಬೇಲಿ ಹಾಕುವುದು ಹಾಗೂ ಸಸಿಗಳನ್ನು ನೆಡುವ ಕ್ರಮ ಕೈಗೊಳ್ಳಲಾಗುತ್ತಿದೆ.

ಮೈಸೂರು ನಗರ ವ್ಯಾಪ್ತಿಯಲ್ಲಿ ಬರುವ ಐದು ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಲು ಅಗತ್ಯ ಕ್ರಮ ವಹಿಸಲಾಗಿರುತ್ತದೆ, ಅದರ ವಿವರ ಕೆಳಕಂಡಂತಿದೆ.

| **ಕ್ರ.ಸಂ.** | **ಕೆರೆಗಳ ಹೆಸರು** | **ತೆರವುಗೊಳಿಸಲು ಕೈಗೊಂಡಿರುವ ಕ್ರಮಗಳು** |
|---|---|---|
| 1 | ದೇವನೂರು ಕೆರೆ | ತೆರವುಗೊಳಿಸಲು ಕ್ರಮಕೈಗೊಳ್ಳಲಾಗಿದೆ. |
| 2 | ಹೆಬ್ಬಾಳ್ ಕೆರೆ | ತೆರವುಗೊಳಿಸಲು ಕ್ರಮಕೈಗೊಳ್ಳಲಾಗಿದೆ. |
| 3 | ಬೋಮ್ಮನಹಳ್ಳಿ ಕೆರೆ | ತೆರವುಗೊಳಿಸಲು ಕ್ರಮಕೈಗೊಳ್ಳಲಾಗಿದೆ. |
| 4 | ದಳವಾಯಿ ಕೆರೆ | ತೆರವುಗೊಳಿಸಲು ಕ್ರಮಕೈಗೊಳ್ಳಲಾಗಿದೆ. |
| 5 | ಕ್ಯಾತಮಾರನಹಳ್ಳಿ ಕೆರೆ | ತೆರವುಗೊಳಿಸಲು ಕ್ರಮಕೈಗೊಳ್ಳಲಾಗಿದೆ. |

**ಈ)** ಲಿಂಗಾಂಬುದಿ ಕೆರೆ ಗಡಿಯಲ್ಲಿ ಅರಣ್ಯ ಇಲಾಖೆಯ ವತಿಯಿಂದ ಚೈನ್‌ಲಿಂಕ್ ತಂತಿ ಬೇಲಿ ನಿರ್ಮಿಸಲಾಗಿದ್ದು, ನಿರ್ಭಂಧಿತ ನಗರ ಪ್ರದೇಶದ ಅರಣ್ಯವೆಂದು ಘೋಷಣೆಯಾಗಿರುತ್ತದೆ.

ಬೋಗಾದಿ ಮರಿಯಪ್ಪನ ಕೆರೆಯ ಅಂಗಳವು ಒತ್ತುವರಿಯಾಗಿರುವುದು ಕಂಡು ಬಂದಿರುವುದಿಲ್ಲ. ಹಾಲಿ ಕೆರೆಯನ್ನು ಮೈಸೂರು ಮಹಾನಗರ ಪಾಲಿಕೆಯ ಉಸ್ತುವಾರಿಯಲ್ಲಿರುವುದರಿಂದ ಅಭಿವೃದ್ಧಿ ಪಡಿಸಲು ಮೈಸೂರು ಮಹಾನಗರ ಪಾಲಿಕೆಯನ್ನು ಕೋರಲಾಗುವುದು.

ಮೈಸೂರು ನಗರ ವ್ಯಾಪ್ತಿಯ ಕೆರೆಗಳಲ್ಲಿ ಹಸಿರೀಕರಣ ಯೋಜನೆ/ಗಿಡ ನೆಡುವ ಕಾರ್ಯಕ್ರಮಗಳನ್ನು ಈ ಕೆಳಗಿನಂತೆ ಕೈಗೊಳ್ಳಲಾಗಿರುತ್ತದೆ.

| ಕ್ರ.ಸಂ. | ಕೆರೆಗಳ ಹೆಸರು | ವಿಸ್ತೀರ್ಣ |
|---|---|---|
| 1 | ದೇವನೂರು ಕೆರೆ | ಹಸಿರೀಕರಣ ಯೋಜನೆ/ಗಿಡ ನೆಡುವ ಕಾರ್ಯಕ್ರಮವನ್ನು ಅಳವಡಿಸಿಕೊಳ್ಳಲಾಗಿದೆ. |
| 2 | ಹೆಬ್ಬಾಳ್ ಕೆರೆ | ಅಭಿವೃದ್ಧಿಪಡಿಸಲಾಗಿದೆ. |
| 3 | ಹಿನ್‌ಕಲ್ ಕೆರೆ | ಅಭಿವೃದ್ಧಿಪಡಿಸಲಾಗಿದೆ. |
| 4 | ಬೋಮ್ಮನಹಳ್ಳಿ ಕೆರೆ | ಅಭಿವೃದ್ಧಿಪಡಿಸಲಾಗಿದೆ. |
| 5 | ದಳವಾಯಿ ಕೆರೆ | ಅಭಿವೃದ್ಧಿಪಡಿಸಲಾಗಿದೆ. |
| 6 | ಬೋಗಾದಿ ಕೆರೆ | ಅಭಿವೃದ್ಧಿಪಡಿಸಲಾಗಿದೆ. |
| 7 | ರಾಯರ ಕೆರೆ | ಅಭಿವೃದ್ಧಿಪಡಿಸಿರುವುದಿಲ್ಲ. |
| 8 | ಕ್ಯಾತಮಾರನಹಳ್ಳಿ ಕೆರೆ | ಅಭಿವೃದ್ಧಿಪಡಿಸಿರುವುದಿಲ್ಲ. |
| 9 | ಕುಕ್ಕರಹಳ್ಳಿ ಕೆರೆ | ಮೈಸೂರು ವಿಶ್ವವಿದ್ಯಾನಿಲಯದವರು ಅಭಿವೃದ್ಧಿಪಡಿಸುತ್ತಿರುತ್ತಾರೆ. |
| 10 | ಕಾರಂಜಿ ಕೆರೆ | ಮೈಸೂರು ಮೃಗಾಲಯದ ಪ್ರಾಧಿಕಾರದವರು ಅಭಿವೃದ್ಧಿಪಡಿಸುತ್ತಿರುತ್ತಾರೆ. |

## ಗ್ರಾಮಗಳ ಅಭಿವೃದ್ಧಿಗೆ ಭೂಮಿ ಕಾಯ್ದಿರಿಸುವಿಕೆ

**161, ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್)**

ಅ) ಗ್ರಾಮಗಳ ಅಭಿವೃದ್ಧಿಗೆ ಆಯಾ ಹಳ್ಳಿಗಳ 1 ಕಿ.ಮೀ. ಸುತ್ತಳತೆಯಲ್ಲಿ ಭೂಮಿಯನ್ನು ಕಾಯ್ದಿರಿಸುವಂತೆ ಸರ್ಕಾರ ಆದೇಶ ಹೊರಡಿಸಿದೆಯೇ (ಹೊರಡಿಸಿದ್ದಲ್ಲಿ ಆದೇಶದ ಪ್ರತಿ ಒದಗಿಸುವುದು)

ಆ) ಸರ್ಕಾರದ ಭೂ ಜಮೀನಿನ ಜೊತೆಗೆ ಖಾಸಗೀಯವರ ಜಮೀನನ್ನು ಗ್ರಾಮಗಳ ಅಭಿವೃದ್ಧಿಗೆ ಕಾಯ್ದಿರಿಸಲಾಗುವುದೇ; ಈ ಯೋಜನೆಯ ರೂಪರೇಷೆಗಳೇನು; (ಸಂಪೂರ್ಣ ವಿವರಣೆ ನೀಡುವುದು)

ಇ) ಭೂಮಿ ಕಳೆದುಕೊಂಡ ರೈತರಿಗೆ ಯಾವ ಮಾನದಂಡ ಅನುಸರಿಸಿ ಪರಿಹಾರ ಒದಗಿಸಲಾಗುತ್ತಿದೆ; ಅಥವಾ ಬದಲಿ ಭೂಮಿಯನ್ನು ನೀಡುವುದೇ? (ವಿವರ ತಿಳಿಸುವುದು).

**ಶ್ರೀ ವಿ.ಶ್ರೀನಿವಾಸ ಪ್ರಸಾದ್(ಕಂದಾಯ ಸಚಿವರು)**

ಅ) ಕಂದಾಯ ಇಲಾಖೆಯಿಂದ ಗ್ರಾಮಗಳ ಅಭಿವೃದ್ಧಿಗೆ ಹಳ್ಳಿಯ 1 ಕಿ.ಮೀ. ಸುತ್ತಳತೆಯಲ್ಲಿ ಭೂಮಿಯನ್ನು ಕಾಯ್ದಿರಿಸುವಂತೆ ಯಾವುದೇ ಆದೇಶ ಹೊರಡಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

## ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಪ್ರದೇಶ

**82, ಶ್ರೀಮತಿ ತಾರಾ ಅನುರಾಧ(ನಾಮ ನಿರ್ದೇಶನ ಹೊಂದಿದವರು)**

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯೇ ಸರ್ವೆ ಮಾಡಿ ನಿಗದಿಪಡಿಸಿರುವ ಅರಣ್ಯ ಪ್ರದೇಶವು ಎಷ್ಟಿದೆ. (ತಾಲ್ಲೂಕುವಾರು ವಿವರ ಒದಗಿಸುವುದು).

ಆ) ಒತ್ತುವರಿ ಆಗಿರುವ ಅರಣ್ಯ ಪ್ರದೇಶಗಳೆಷ್ಟು (ತಾಲ್ಲೂಕುವಾರು ವಿವರ ಒದಗಿಸುವುದು).

ಇ) ಒತ್ತುವರಿಯಿಂದಾಗಿ ದನಕರುಗಳಿಗೆ ಮೇವಿನ ಕೊರತೆ, ಕುಡಿಯುವ ನೀರಿಗೆ ತೊಂದರೆಯಾಗುತ್ತಿರುವುದಕ್ಕೆ ಸರ್ಕಾರವು ಏನಾದರೂ ಪರಿಹಾರವನ್ನು ಕಂಡುಹಿಡಿದಿದೆಯೇ?

**ಶ್ರೀ ಬಿ.ರಮಾನಾಥ ರೈ(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)**

ಅ)

| **ತಾಲ್ಲೂಕು** | **ಅರಣ್ಯ ವಿಸ್ತೀರ್ಣ (ಹೆ.)** |
|---|---|
| ಕಾರವಾರ | 66635.21 |
| ಅಂಕೋಲಾ | 76014.56 |
| ಜೊಯಿಡಾ | 159790.14 |
| ಹಳಿಯಾಳ | 63885.43 |
| ಯಲ್ಲಾಪುರ | 118791.72 |
| ಮುಂಡಗೋಡ | 50194.94 |
| ಶಿರಸಿ | 108859.58 |
| ಹೊನ್ನಾವರ | 57525.07 |
| ಭಟ್ಕಳ | 25472.78 |
| ಕುಮಟಾ | 39437.66 |
| ಸಿದ್ದಾಪುರ | 63038.60 |
| **ಒಟ್ಟು** | **829645.69** |

ಆ)

| ತಾಲ್ಲೂಕು | 1978ರ ಪೂರ್ವದ ಹೆ. | 1978ರ ನಂತರದ ಹೆ. |
|---|---|---|
| ಕಾರವಾರ | 155.550 | 139.585 |
| ಅಂಕೋಲಾ | 57.543 | 171.427 |
| ಜೊಯಿಡಾ | 15.812 | 323.818 |
| ಹಳಿಯಾಳ | 90.370 | 540.235 |
| ಯಲ್ಲಾಪುರ | 327.206 | 2201.226 |
| ಮುಂಡಗೋಡ | 457.354 | 2190.450 |
| ಶಿರಸಿ | 265.500 | 2425.03 |
| ಹೊನ್ನಾವರ | 51.260 | 1644.92 |
| ಭಟ್ಕಳ | 14.100 | 765.00 |
| ಕುಮಟಾ | 16.000 | 732.19 |
| ಸಿದ್ದಾಪುರ | 157.000 | 1805.40 |
| **ಒಟ್ಟು** | **1607.695** | **12939.281** |

ಇ) ಅಂತಹ ಯಾವುದೇ ತೊಂದರೆ ಇರುವುದಿಲ್ಲ.

**ತಿರುಪತಿಯಲ್ಲಿ ರಾಜ್ಯದ ಯಾತ್ರಾರ್ಥಿಗಳಿಗೆ ವಸತಿ ಸೌಲಭ್ಯ**

**579, ಶ್ರೀ ಎಂ.ಶ್ರೀನಿವಾಸ (ವಿಧಾನ ಸಭೆಯಿಂದ ಚುನಾಯಿತರಾದವರು)**

**ಅ)** ತಿರುಪತಿಯಲ್ಲಿ ಇರುವ ಕರ್ನಾಟಕದ ಜಮೀನು ಎಷ್ಟು;

ಯಾವ ಯಾವ ಉದ್ದೇಶಗಳಿಗಾಗಿ ಈ ಜಮೀನನ್ನು ಬಳಕೆ ಮಾಡಲಾಗುತ್ತಿದೆ;

**ಆ)** ರಾಜ್ಯದಿಂದ ತಿರುಪತಿಗೆ ತೆರಳುವ ಯಾತ್ರಾರ್ಥಿಗಳ ಸಂಖ್ಯೆಯ ಅಂದಾಜು ಸರ್ಕಾರಕ್ಕೆ ಇದೆಯೇ; ರಾಜ್ಯದ ಯಾತ್ರಾರ್ಥಿಗಳು ತಂಗಲು ಇರುವ ವಸತಿ ನಿಲಯಗಳು ಎಷ್ಟು; (ವಿವರ ನೀಡುವುದು)

**ಇ)** ಇಲ್ಲಿನ ಯಾತ್ರಾರ್ಥಿಗಳು ತಂಗಲು ಅನುಕೂಲವಾಗುವ ನಿಟ್ಟಿನಲ್ಲಿ ಕರ್ನಾಟಕ ಭವನದಲ್ಲಿನ ಕೊಠಡಿಗಳ ಸಂಖ್ಯೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳು ಏನು; (ಮಾಹಿತಿ ನೀಡುವುದು)

**ಈ)** ತಿರುಪತಿಯಲ್ಲಿ ರಾಜ್ಯ ಸರ್ಕಾರಕ್ಕೆ ಸೇರಿದ ಆಸ್ತಿಯಲ್ಲಿ ಸೇರಿದ ಆಸ್ತಿಯನ್ನು ಒತ್ತುವರಿ/ಕಬಳಿಕೆ ಆಗಿರುವುದು ನಿಜವೇ; ರಾಜ್ಯದ ಆಸ್ತಿಯನ್ನು ರಕ್ಷಿಸಲು ಸರ್ಕಾರ ಕೈಗೊಂಡ ಕ್ರಮಗಳು ಏನು? (ಮಾಹಿತಿ ಒದಗಿಸುವುದು)

**ಶ್ರೀ ಪ್ರಕಾಶ್ ಬಾ. ಹುಕ್ಕೇರಿ (ಮಾನ್ಯ ಸಣ್ಣ ಕೈಗಾರಿಕೆಗಳು, ಮುಜರಾಯಿ ಹಾಗೂ ಸಕ್ಕರೆ ಸಚಿವರು)**

**ಅ)** 1)
- ತಿರುಪತಿಯಲ್ಲಿ $46^1/_2$ ಸೆಂಟ್ಸ್ ಸ್ಥಳವಿರುತ್ತದೆ.
- ತಿರುಮಲದಲ್ಲಿ 7 ಎಕರೆ 5 ಸೆಂಟ್ಸ್
- ತಿರುಚಾನೂರಿನಲ್ಲಿ 14 ಸೆಂಟ್ಸ್ ಸ್ಥಳ ಜಮೀನು ಕರ್ನಾಟಕದ ಜಮೀನು ಇರುತ್ತದೆ.

2) ➢ ತಿರುಮಲದಲ್ಲಿ 88 ಕೊಠಡಿಗಳ ಪ್ರವಾಸಿಸೌಧ ಕಟ್ಟಡವಿರುತ್ತದೆ.

➢ ತಿರುಚಾನೂರಿನಲ್ಲಿ ಕರ್ನಾಟಕ ರಾಜ್ಯಛತ್ರಕ್ಕೆ ಸೇರಿದ ಜಾಗದಲ್ಲಿ ಎರಡು ಕಲ್ಯಾಣ ಮಂಟಪಗಳನ್ನು ನಿರ್ಮಿಸಲಾಗಿರುತ್ತದೆ.

➢ ಆಂಧ್ರಪ್ರದೇಶದ ತಿರುಪತಿಯಲ್ಲಿನ ಗಾಂಧಿ ರಸ್ತೆಯಲ್ಲಿನ 46.50 ಸೆಂಟ್ಸ್ ಸ್ಥಳದಲ್ಲಿ 1901 ರಲ್ಲಿ ನಿರ್ಮಿಸಿದ್ದ, ಶಿಥಿಲಾವಸ್ಥೆಯಲ್ಲಿರುವ ಕಟ್ಟಡವನ್ನು ಕೆಡವಿ ₹ 498.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಯಾತ್ರಿ ನಿವಾಸವನ್ನು ನಿರ್ಮಿಸುವ ಕಾಮಗಾರಿಗೆ ಸರ್ಕಾರಿ ಆದೇಶ ಸಂಖ್ಯೆ ಕಂಇ 31/ಮುಅಕಾ/2012, ದಿನಾಂಕ:21–01–2013 ರಲ್ಲಿ ಮಂಜೂರಾತಿ ನೀಡಿದ್ದು, ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ರಾಜ್ಯದಿಂದ ತಿರುಪತಿಗೆ ತೆರಳುವ ಯಾತ್ರಾರ್ಥಿಗಳ ಸಂಖ್ಯೆಯ ಅಂದಾಜಿನ ಮಾಹಿತಿ ಲಭ್ಯವಿರುವುದಿಲ್ಲ.

ತಿರುಮಲದಲ್ಲಿ ಕರ್ನಾಟಕ ಪ್ರವಾಸಿಸೌಧ, ಕರ್ನಾಟಕ ಕಲ್ಯಾಣ ಮಂಟಪ, ಕುಠೀರ ಸಂಖ್ಯೆ:7, 14, ಕೆ–1 ಮತ್ತು ಕೆ–2, ಐ.ಬಿ. ವಸತಿಗೃಹ, ವಸತಿ ಗೃಹಗಳು ಇರುತ್ತವೆ.

ತಿರುಚಾನೂರಿನಲ್ಲಿ ಕಲ್ಯಾಣ ಮಂಟಪ ಮತ್ತು 20 ಕೊಠಡಿಗಳನ್ನು ನಿರ್ಮಿಸಲಾಗಿರುತ್ತದೆ.

ಇ) ತಿರುಮಲದಲ್ಲಿ ರಾಜ್ಯ ಛತ್ರದ ಸ್ವಾಧೀನದಲ್ಲಿರುವ 7 ಎಕರೆ 5 ಸೆಂಟ್ಸ್ ಸ್ಥಳದಲ್ಲಿ ₹ 20.00 ಕೋಟಿಗಳ ಅಂದಾಜು ವೆಚ್ಚದಲ್ಲಿ 128 ಸಾಮಾನ್ಯ ಕೊಠಡಿಗಳನ್ನು ಒಳಗೊಂಡ ಅತಿಥಿ ಗೃಹ ನಿರ್ಮಾಣ ಮಾಡಲು ಮಂಜೂರಾತಿ ನೀಡಿದ್ದು, ಕಾಮಗಾರಿಯನ್ನು ಪ್ರಾರಂಭಿಸುವ ಹಂತದಲ್ಲಿ ಶ್ರೀ ಟಿ.ನರಸಿಂಹನ್ ಎಂಬುವರು ಆಂಧ್ರಪ್ರದೇಶದ ಹೈದರಾಬಾದ್‌ನ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಂಖ್ಯೆ: 23801/2010 ನ್ನು ದಾಖಲಿಸಿದ್ದು,

ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:16-11-2010ರಂದು ಯಥಾಸ್ಥಿತಿ ಕಾಪಾಡಲು ಆದೇಶಿಸಿರುವ ಹಿನ್ನಲೆಯಲ್ಲಿ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ.

ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ಯಥಾಸ್ಥಿತಿ ಆದೇಶವನ್ನು ತೆರವುಗೊಳಿಸುವ ಬಗ್ಗೆ ಕ್ರಮ ಜರುಗಿಸಲಾಗುತ್ತಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ಯಥಾಸ್ಥಿತಿಯನ್ನು ತೆರವುಗೊಳಿಸಿದ ನಂತರ ಉದ್ದೇಶಿತ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

**ಈ)** ತಿರುಮಲದಲ್ಲಿ ಕರ್ನಾಟಕ ರಾಜ್ಯ ಛತ್ರಕ್ಕೆ ಸೇರಿದ ಯಾವುದೇ ಆಸ್ತಿಯು ಕಬಳಿಕೆಯಾಗಿರುವುದಿಲ್ಲ. ಕರ್ನಾಟಕ ರಾಜ್ಯ ಛತ್ರಕ್ಕೆ ಸೇರಿದ 7 ಎಕರೆ 60 ಸೆಂಟ್ಸ್ ಜಾಗದಲ್ಲಿ 55 ಸೆಂಟ್ಸ್‌ನ್ನು ಮಾತ್ರ ತಿರುಮಲ ತಿರುಪತಿ ದೇವಸ್ಥಾನದವರಿಗೆ ವೆಸ್ಟ್ ಮಾದ ರಸ್ತೆ/ರಿಂಗ್ ರಸ್ತೆ ವಿಸ್ತರಣೆಗಾಗಿ ಹಾಗೂ ವೀಕ್ಷಣಾ ಗ್ಯಾಲರಿಗಾಗಿ ಹಸ್ತಾಂತರಿಸಲಾಗಿರುತ್ತದೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಸಭಾಪತಿಯವರು:-** ಈಗ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವ ವಿಷಯಗಳು. ಮಾನ್ಯ ಪುಟ್ಟಣ್ಣನವರು ಮತ್ತು ಮಾನ್ಯ ಮರಿತಿಬ್ಬೇಗೌಡರವರು ಒಂದೆ ವಿಷಯವಾಗಿ ನೋಟೀಸ್ ಕೊಟ್ಟಿರುತ್ತಾರೆ. ಮಾನ್ಯ ಮರಿತಿಬ್ಬೇಗೌಡರು ಓದುವುದಾದರೆ ಓದಬಹುದು. ಆದರೆ ಉದ್ವೇಗದಿಂದ ಅವರು ಮಾತನಾಡಿದ್ದೇ ಆದರೆ ನಾನು ಕಟ್ ಮಾಡುತ್ತೇನೆ. ಅವರು ಅವರ ಆರೋಗ್ಯದ ಹಿತ ದೃಷ್ಟಿಯಿಂದ ಇಲ್ಲಿಗೆ ಬಂದಿರುವುದೇ ಹೆಚ್ಚು. ಅವರು ಉದ್ವೇಗಕ್ಕೆ ಒಳಗಾಗಬಾರದೆಂದು ಹೇಳಬಯಸುತ್ತೇನೆ.

## 2. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು.

### (ಅ) ಬಿ.ಎಡ್. ವ್ಯಾಸಂಗವನ್ನು ಆಯಾಯ ಜಿಲ್ಲೆಯಲ್ಲಿ ಮಾಡಬೇಕೆನ್ನುವ ಬಗ್ಗೆ–

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ 2008–09ನೇ ಸಾಲಿನಲ್ಲಿ ಉಪನ್ಯಾಸಕರಾಗಿ ನೇಮಕಗೊಂಡಿರುವ ಬಿ.ಇ.ಡಿ. ಪದವಿ ರಹಿತ ಸುಮಾರು 1390 ಮಂದಿ ಉಪನ್ಯಾಸಕರಿಗೆ ಬಿ.ಇಡಿ ಪದವಿ ಮಾಡಿಕೊಳ್ಳಲು ವೇತನ ಹಾಗೂ ರಜೆ ಸಹಿತವಾಗಿ ಸರ್ಕಾರ ಅವಕಾಶ ಮಾಡಿಕೊಟ್ಟಿರುವುದಕ್ಕಾಗಿ ಧನ್ಯವಾದಗಳು. ಆದರೆ ನೇಮಕಗೊಂಡಿರುವ ಜಿಲ್ಲೆಯಲ್ಲಿಯೇ ಬಿ.ಇಡಿ ಪದವಿಗೆ ಪ್ರವೇಶ ಪಡೆಯಬೇಕೆಂಬ ಷರತ್ತನ್ನು ಪದವಿ ಪೂರ್ವ ಶಿಕ್ಷಣ ಇಲಾಖೆ ಪ್ರಕಟಣೆ ಮೂಲಕ ತಿಳಿಸಿರುವುದರಿಂದ ಹಲವು ಮಂದಿ ಉಪನ್ಯಾಸಕರಿಗೆ ಇದರಿಂದ ತುಂಬಾ ತೊಂದರೆ ಉಂಟಾಗುತ್ತಿದೆ. ಆದ ಕಾರಣ ಸದರಿ ಉಪನ್ಯಾಸಕರಿಗೆ ನೇಮಕಾತಿಗೊಂಡಿರುವ ಜಿಲ್ಲೆಯಲ್ಲಿಯೇ ಬಿ.ಇಡಿ ಪದವಿಗೆ ಪ್ರವೇಶ ಪಡೆಯಬೇಕೆಂಬ ಷರತ್ತಿಗೆ ವಿನಾಯತಿ ನೀಡಿ ಉಪನ್ಯಾಸಕರಿಗೆ ಅನುಕೂಲವಾಗುವ ಜಿಲ್ಲೆಗಳಲ್ಲಿ ಬಿ.ಇಡಿ ಪದವಿಗೆ ಪ್ರವೇಶ ಪಡೆಯಲು ಅವಕಾಶ ಮಾಡಿಕೊಡಬೇಕೆಂದು ಸದನದ ಶೂನ್ಯವೇಳೆಯಲ್ಲಿ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೆ, ಸದನದಲ್ಲಿ ಶೂನ್ಯವೇಳೆಯಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಚಾರವನ್ನು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನಕ್ಕೆ ತಂದು ಅವರಿಂದ ಉತ್ತರವನ್ನು ಕೊಡಿಸುತ್ತೇನೆ.

### (ಆ) ಕಾವೇರಿ ನಿರ್ವಹಣಾ ಮಂಡಳಿ ರಚಿಸಬೇಕೆಂಬ ತಮಿಳುನಾಡು ರಾಜ್ಯದ ಬೇಡಿಕೆಯನ್ನು ಸರ್ವೋಚ್ಛ ನ್ಯಾಯಾಲಯ ತಳ್ಳಿ ಹಾಕಿದ ಕುರಿತು–

**ಶ್ರೀ ಅಶ್ವಥ್ ನಾರಾಯಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ತಮಿಳುನಾಡು ಸರ್ಕಾರವು ನಿರಂತರವಾಗಿ ಕರ್ನಾಟಕದ

ಕಾವೇರಿ ನದಿ ನೀರಿನ ವಿಚಾರವಾಗಿ ತಕರಾರು ಮಾಡುವುದೇ ಒಂದು ಅಭ್ಯಾಸವಾಗಿ ರೂಢಿಸಿಕೊಂಡಿದೆ. ಕಾವೇರಿ ನದಿ ವಿಚಾರವಾಗಿ ಐ-ತೀರ್ಪು ನೀಡಿ ತದನಂತರ ಎರಡು ರಾಜ್ಯಗಳಿಗೆ "ಕಾವೇರಿ ನಿರ್ವಹಣಾ ಮಂಡಳಿ" ರಚಿಸಬೇಕೆಂಬ ಆದೇಶವನ್ನು ನೀಡಿತ್ತು. ಈ ಮಧ್ಯದಲ್ಲಿ ಕರ್ನಾಟಕವು ರೈತರ ಹಾಗೂ ಜನತೆಯ ಅವಶ್ಯಕತೆಗೆ ತಕ್ಕಂತೆ ಮೇಕೆದಾಟು ಬಳಿ ಸ್ಥಾಪಿಸಲು ಉದ್ದೇಶಿಸಿರುವ "ಜಲ ವಿದ್ಯುತ್ ಯೋಜನೆ" ಗೆ ಅಡ್ಡಿಪಡಿಸಲು ನಿರ್ವಹಣಾ ಮಂಡಳಿಯ ಹೆಸರಿನಲ್ಲಿ ತಕರಾರು ಅರ್ಜಿ ಸಲ್ಲಿಸಿತ್ತು. ಇದನ್ನು ಮನಗಂಡ ಸುಪ್ರೀಂ ಕೋರ್ಟು ತ್ರಿಸದಸ್ಯ ಪೀಠವು ಮೇಕೆದಾಟು ಬಳಿ ವಿದ್ಯುತ್ ಯೋಜನೆಯ ಅನುಷ್ಠಾನ ಮಾಡಿದರೆ ನೀರು ಹಂಚಿಕೆ ಮೇಲೆ ಪರಿಣಾಮ ಬೀರುತ್ತದೆ ಎಂಬ ನಿಮ್ಮ ಕಲ್ಪನೆ ತಪ್ಪು. ಅನಗತ್ಯ ಆತಂಕ ಬೇಡವೆಂದು ನ್ಯಾಯ ಪೀಠ ಹೇಳಿದೆ. ಇದರಿಂದ ತಮಿಳುನಾಡು ಅರ್ಜಿಗೆ ಪುರಸ್ಕಾರ ಸಿಕ್ಕಿರುವುದಿಲ್ಲ ಮತ್ತು ಕರ್ನಾಟಕ (ಕರ್ನಾಟಕದ ವ್ಯಾಪ್ತಿಯಲ್ಲಿ) ಅವರ ವ್ಯಾಪ್ತಿಯಲ್ಲಿ ಏನೇ ಯೋಜನೆ ಕೈಗೊಂಡರೆ ನೀವು ವಿನಾ ಕಾರಣ ಆತಂಕಗೊಳ್ಳುತ್ತೀರಿ, ಅರ್ಜಿ ಹಿಡಿದು ಬರುತ್ತೀರಿ ಎಂದು ಸುಪ್ರೀಂ ಕೋರ್ಟು ಹೇಳಿದೆ. ಆದ್ದರಿಂದ ರಾಜ್ಯ ಸರ್ಕಾರವು ತಕ್ಷಣವೇ ಈ ಹಿಂದೆ ತೀರ್ಮಾನಿಸಿದಂತೆ ಮೇಕೆದಾಟು ಬಳಿ ಸ್ಥಾಪಿಸಬೇಕೆಂದಿರುವ ಜಲ ವಿದ್ಯುತ್ ಯೋಜನೆಯನ್ನು ಸಮರೋಪಾದಿಯಲ್ಲಿ ಕೈಗೆತ್ತಿಕೊಂಡು ಕಾರ್ಯ ನಿರ್ವಹಿಸಲು ಸರ್ಕಾರ ತೆಗೆದುಕೊಂಡಿರುವ ಯೋಜನೆಗಳ ಬಗ್ಗೆ ಈ ಸದನದಲ್ಲಿ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ತಮ್ಮ ಅನುಮತಿಯನ್ನು ಕೋರುತ್ತಿದ್ದೇನೆ.

**ಶ್ರೀ ಎಂ.ಬಿ.ಪಾಟೀಲ್(ಜಲ ಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೆ, ತಮಿಳುನಾಡು ಸಿವಿಲ್ ಅಪೀಲು ಸಂಖ್ಯೆ:2456/07 ಕ್ಕೆ ಸಂಬಂಧಿಸಿದಂತೆ I.A. No. 7 ಅನ್ನು ಸರ್ವೋಚ್ಛ ನ್ಯಾಯಾಲಯ ದಾಖಲಿಸಿದ್ದು ದಿನಾಂಕ 03-09-2012ರಂದು hearing ಬಂದಿರುತ್ತದೆ. I.A. No. 7 ರಲ್ಲಿ ತಮಿಳುನಾಡಿನ ಬೇಡಿಕೆ ಈ ರೀತಿ ಇರುತ್ತದೆ. ಕಾವೇರಿ ಮ್ಯಾನೇಜ್‌ಮೆಂಟ್ ಬೋರ್ಡ್ ಅನ್ನು ಕೂಡಲೇ ರಚಿಸಲು ಕೇಂದ್ರ

ಸರ್ಕಾರಕ್ಕೆ ನಿರ್ದೇಶನ ನೀಡುವುದು. ಕರ್ನಾಟಕ ಸರ್ಕಾರವು ಕಾವೇರಿ ಕಣಿವೆಯಲ್ಲಿ ಜಲ ವಿದ್ಯುತ್ ಯೋಜನೆಗಳು, ಹೇಮಾವತಿ ಕಾಲುವೆಗಳ ಆಧುನೀಕರಣ, ಅರ್ಕಾವತಿ ನದಿಯ ಪುನಃಶ್ಚೇತನ ಇತ್ಯಾದಿ ಹೊಸ ಕಾಮಗಾರಿಗಳನ್ನು ಕೈಗೊಳ್ಳುತ್ತಿದೆ. ಈ ಹೊಸ ಯೋಜನೆಗಳು ಹೆಚ್ಚುವರಿ ನೀರು ಸಂಗ್ರಹ ಮಾಡಬಲ್ಲವುಗಳಾಗಿದ್ದು, ಇದರಿಂದ ಬಿಳಿಗುಂಡ್ಲುವಿನಲ್ಲಿ ನೀರಿನ ಒಳ ಹರಿವು ವ್ಯತ್ಯಯವಾಗುತ್ತದೆ ಮತ್ತು ಕರ್ನಾಟಕವು ತನ್ನ ಹಂಚಿಕೆಗೆ ಮೀರಿದ ನೀರನ್ನು ಬಳಸಿಕೊಳ್ಳುತ್ತಿದ್ದು ಉತ್ತಮ ಮಳೆಯಾದ ವರ್ಷಗಳ ಹೆಚ್ಚುವರಿ ನೀರನ್ನು carryover ಮಾಡುತ್ತಿಲ್ಲ.

**ಮಾನ್ಯ ನ್ಯಾಯಾಲಯವು ಕೆಳಕಂಡ ಅಂಶಗಳನ್ನು ಗಮನಿಸಿದೆ.**

**1) ಬಿಳಿ ಗುಂಡ್ಲುವಿನಲ್ಲಿ 192 ಟಿ.ಎಂ.ಸಿ. ನೀರನ್ನು ಕರ್ನಾಟಕವು ಖಚಿತಗೊಳಿಸಿದ ನಂತರ ಆ ರಾಜ್ಯವು ಏನು ಮಾಡುತ್ತದೆ ಎಂಬುದು ತಮಿಳುನಾಡಿಗೆ ಸಂಬಂಧಿಸಿದ್ದಲ್ಲ.**

**2) ಕರ್ನಾಟಕವು ಇನ್ನೂ ಯಾವ ಯೋಜನೆಗಳನ್ನು ಕೈಗೊಂಡಿಲ್ಲ. ದೊಡ್ಡ ನೀರಾವರಿ ಯೋಜನೆಗಳನ್ನು ಕೈಗೊಂಡರೂ ಅವುಗಳು ಒಂದೆರಡು ದಿನಗಳಲ್ಲಿ ಪೂರ್ಣಗೊಳ್ಳುವುದಿಲ್ಲ.**

**3) ಅಂತಹ ಯೋಜನೆಗಳನ್ನು ಕೈಗೊಂಡಾಗ, ತಮಿಳುನಾಡು ಸರ್ವೋಚ್ಚ ನ್ಯಾಯಾಲಯವನ್ನು ಸಂಪರ್ಕಿಸಬಹುದು.**

**4) ಈವರೆವಿಗೆ ತಮಿಳುನಾಡಿಗೆ ಹಾನಿಯಾಗುವ ಯಾವುದೆ ಪ್ರಕರಣವಿಲ್ಲ ಮತ್ತು ಈ ಅರ್ಜಿಯಲ್ಲಿ ವಾದಿಸಿರುವ ಕುಂದುಕೊರತೆಗಳು ತಪ್ಪು ಕಲ್ಪನೆಯಿಂದ ಕೂಡಿವೆ.**

ಸರ್ವೋಚ್ಚ ನ್ಯಾಯಾಲಯವು ಮೇಲಿನಂತೆ ಅಭಿಪ್ರಾಯ ಪಡುತ್ತಾ ಕಾವೇರಿ ಮಾನಿಟರಿಂಗ್ ಬೋರ್ಡ್ ರಚನೆ ಬಗ್ಗೆ ಯಾವುದೇ ಆದೇಶ ಹೊರಡಿಸುವ ಅಗ್ಯವಿಲ್ಲವೆಂದು, ಈ Interim Application (I.A.) ಅನ್ನು ಬಾಕಿ ಇಡಲಾಗಿದೆಯೆಂದು ತಿಳಿಸಿ ಮುಖ್ಯ ಅಪೀಲು ಅರ್ಜಿಯೊಂದಿಗೆ hearing ಗಾಗಿ ದಿನಾಂಕ 15-01-2014 ಕ್ಕೆ ಮುಂದೂಡಿದೆ.

## (ಇ) ಯುವತಿಯರನ್ನು ಉದ್ಯೋಗ ಆಮಿಷ ತೋರಿಸಿ ವೇಶ್ಯಾವಾಟಿಕೆಗೆ ತಳ್ಳುತ್ತಿರುವ ಬಗ್ಗೆ–

**ಪ್ರೊ:ಪಿ.ವಿ.ಕೃಷ್ಣಭಟ್ಟ (ನಾಮನಿರ್ದೇಶಿತರು):–** ಸನ್ಮಾನ್ಯ ಸಭಾಪತಿಯವರೇ, ಉದ್ಯೋಗದ ಆಮಿಷವನ್ನು ಮುಂದೊಡ್ಡಿ, ಯುವತಿಯರನ್ನು ಆಕರ್ಷಿಸಿ ಅವರನ್ನು ವೇಶ್ಯಾವೃತ್ತಿಯ ಕೂಪಕ್ಕೆ ತಳ್ಳುವ ವ್ಯವಸ್ಥಿತ ಜಾಲಗಳು ಕೆಲಸ ಮಾಡುತ್ತಿವೆ ಎನ್ನುವ ಸಂಗತಿ ಇತ್ತೀಚೆಗೆ ಚಿಕ್ಕಬಳ್ಳಾಪುರದ ಪೊಲೀಸ್ ತಂಡವೊಂದು ದೆಹಲಿಯಲ್ಲಿ ವೇಶ್ಯಾಕೂಪಕ್ಕೆ ತಳ್ಳಲಾಗಿದ್ದ ಯುವತಿಯರನ್ನು ರಕ್ಷಿಸಿದ ಸಂದರ್ಭದಲ್ಲಿ ಬೆಳಕಿಗೆ ಬಂದಿದೆ. ಚಿಕ್ಕಬಳ್ಳಾಪುರದ ಎಸ್.ಪಿ. ಶ್ರೀ ಎನ್.ಶಿವಪ್ರಸಾದ್ ಅವರು ಕಾರ್ಯಾಚರಣೆ ನಡೆಸಿ ಒಂಭತ್ತು ಯುವತಿಯರನ್ನು ರಕ್ಷಿಸಿರುವುದು ತಿಳಿದು ಬಂದಿದೆ. ತಮ್ಮ ಪ್ರಾಣವನ್ನೇ ಪಣವಾಗಿಟ್ಟು ರಕ್ಷಣಾ ಕಾರ್ಯಕ್ಕೆ ಇಳಿಯಬೇಕಾಯಿತು ಎಂದು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ಮಹಿಳಾ ಪೊಲೀಸರು ಹೇಳಿದ್ದಾರೆ.

ರಾಜ್ಯದ ಅನೇಕ ಯುವತಿಯರು ಕಳ್ಳ ಸಾಗಾಣೆ ಮೂಲಕ ದಿಲ್ಲಿಯ ಕೆಂಪು ಕೂಪದಲ್ಲಿ ಸಿಕ್ಕಿ ಹಾಕಿಕೊಂಡಿದ್ದು ವೇಶ್ಯಾವಾಟಿಕೆಯಿಂದ ಹೊರಬರಲಾಗದೆ ನರಕಯಾತನೆ ಅನುಭವಿಸುತ್ತಿದ್ದಾರೆಂದು ರಕ್ಷಣೆಗೆ ತೆರಳಿದ್ದ ತಂಡ ಹೇಳಿದೆ, ವಂಚನೆಗೆ ಒಳಗಾಗಿ ಹೀಗೆ ಕ್ರೂರ ಧಂದೆಗೆ ಒಳಗಾಗಿರುವ ಯುವತಿಯರನ್ನು ರಕ್ಷಿಸುವ ನಿಟ್ಟಿನಲ್ಲಿ ಮತ್ತು ಯುವತಿಯರನ್ನು ಮೋಸ, ವಂಚನೆ, ಆಮಿಷಗಳ ಮೂಲಕ ಆಕರ್ಷಿಸಿ ಇಂತಹ ಅನೈತಿಕ ಚಟುವಟಿಕೆಗಳ ಕೂಪಕ್ಕೆ ತಳ್ಳುವ ದುಷ್ಟಕೂಟಗಳ ವಿರುದ್ಧ ದೃಢವಾದ ಕ್ರಮಗಳನ್ನು ಕೈಗೊಳ್ಳಬೇಕೆಂದು ಮಾನ್ಯ ಗೃಹ ಸಚಿವರನ್ನು ಈ ಮೂಲಕ ಒತ್ತಾಯಿಸುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್(ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರ ಮೂಲಕ ಉತ್ತರವನ್ನು ಕೊಡಿಸಲಾಗುತ್ತದೆ.

## (ಈ) ಮುಷ್ಕರ ನಿರತ ಆಯುಷ್ ವೈದ್ಯರು ಆತ್ಮಹತ್ಯೆಗೆ ಪ್ರಯತ್ನಿಸಿರುವ ಬಗ್ಗೆ–

**ಡಾ:ಎ.ಹೆಚ್.ಶಿವಯೋಗಿಸ್ವಾಮಿ(ಪದವೀಧರರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಇಂದಿನ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವಂತೆ ನೋಂದಾಯಿತ ವೃತ್ತಿ ನಿರತ ಆಯುಷ್ ವೈದ್ಯರಿಗೆ ತುರ್ತು ಸಂದರ್ಭಗಳಲ್ಲಿ ಆಲೋಪತಿ ಔಷಧಿಗಳನ್ನು ಬಳಸಲು ಸರ್ಕಾರದಿಂದ ಅನುಮತಿ ನೀಡಬೇಕೆಂದು ಒತ್ತಾಯಿಸಿ ಭಾರತೀಯ ಆಯುಷ್ ವೈದ್ಯರ ಒಕ್ಕೂಟದ ರಾಜ್ಯ ಘಟಕದ ಸದಸ್ಯರು ಸುವರ್ಣಸೌಧದ ಸಮೀಪ ಕೈಗೊಂಡಿರುವ ಮುಷ್ಕರದಲ್ಲಿ ಭಾಗವಹಿಸಿದ ವೈದ್ಯರೊಬ್ಬರು ಬೇಡಿಕೆ ಈಡೇರಿಕೆಗಾಗಿ ಆತ್ಮಹತ್ಯೆಗೆ ಪ್ರಯತ್ನಿಸಿದ ಘಟನೆ ನಿನ್ನೆ ನಡೆದಿರುತ್ತದೆ. ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಮಾತೂರಿನಲ್ಲಿ ವೈದ್ಯ ವೃತ್ತಿ ನಡೆಸುತ್ತಿರುವ ಕೇರಳ ಮೂಲದ ಬಾಬು ಮೆನನ್ ಎಂಬುವವರು ಆತ್ಮಹತ್ಯೆಗೆ ಪ್ರಯತ್ನಿಸಿರುತ್ತಾರೆ.

ಸನ್ಮಾನ್ಯ ಸಭಾಪತಿಯವರೇ, ಎರಡು ದಿನದಿಂದ ಮುಷ್ಕರ ನಡೆದಿದ್ದರೂ ಸರ್ಕಾರ ಬೇಡಿಕೆ ಈಡೇರಿಸಲು ಮುಂದಾಗಿಲ್ಲ. ಸರ್ವೋಚ್ಚ ನ್ಯಾಯಾಲಯದ ಸೂಚನೆಯನ್ವಯ ದೇಶದ 12 ರಾಜ್ಯಗಳಲ್ಲಿ ಆಯುಷ್ ವೈದ್ಯರಿಗೆ ಆಲೋಪತಿ ಚಿಕಿತ್ಸೆ ನೀಡಲು ಅವಕಾಶ ನೀಡಿದ್ದರೂ ನಮ್ಮ ರಾಜ್ಯದಲ್ಲಿ ಸರ್ಕಾರ ಅಲಕ್ಷ್ಯ ಮಾಡಿರುವುದು ಈ ಘಟನೆಗೆ ಕಾರಣವಾಗಿರುತ್ತದೆ ಎಂದು ಹತಾಶೆಗೊಳಗಾಗಿ ಆತ್ಮಹತ್ಯೆಯ ಪ್ರಯತ್ನ ಮಾಡಿರುತ್ತಾರೆ. ಅವರಿಂದ ವಿಷದ ಬಾಟಲಿಯನ್ನು ಪ್ರತಿಭಟನೆಯಲ್ಲಿ ಇದ್ದವರು ಕಸಿದುಕೊಂಡು ಅವರಿಗೆ ಸಮಾಧಾನ ಮಾಡಲು ಪ್ರಯತ್ನಿಸಿರುತ್ತಾರೆ. ಮೇಲ್ಕಂಡ ವಿಷಯದ ಗಂಭೀರತೆಯನ್ನು ಅರಿತು ಆಯುಷ್ ವೈದ್ಯರ ಬೇಡಿಕೆಯನ್ನು ಈಡೇರಿಸಲು ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಆರೋಗ್ಯ ಸಚಿವರ ಗಮನಕ್ಕೆ ತರಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಉಪಸ್ಥಿತರಿದ್ದಾರೆ. ಇದು ಬಹಳ ಪ್ರಮುಖವಾಗಿರುವಂತಹ

ವಿಚಾರವಾಗಿದೆ. ಅವರೇ ಉತ್ತರ ಕೊಟ್ಟರೆ ಉತ್ತಮ ಎನ್ನುವುದು ನನ್ನ ಭಾವನೆಯಾಗಿದೆ.

**ಶ್ರೀ ಎಸ್.ಆರ್.ಪಾಟೀಲ್(ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಉತ್ತರವನ್ನು ಬೇಗನೆ ಕೊಡಿಸಲಾಗುವುದು.

**ಡಾ:ಎ.ಹೆಚ್.ಶಿವಯೋಗಿಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ನಾಳೆಯೇ ಉತ್ತರವನ್ನು ಕೊಟ್ಟರೆ ಒಳ್ಳೆಯದಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್(ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ನಿಯಮದ ಪ್ರಕಾರ ಉತ್ತರ ಕೊಡಿಸಲು ಮೂರು ದಿನಗಳ ಅವಕಾಶವಿರುತ್ತದೆ. ಈಗ ಇನ್ನೂ ಎರಡು ದಿನಗಳ ಅವಕಾಶವಿದೆ.

**ಡಾ:ಎ.ಹೆಚ್.ಶಿವಯೋಗಿಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ನಾಳೆಯೇ ಉತ್ತರವನ್ನು ಕೊಡಿಸಬೇಕು.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಮಂತ್ರಿಗಳು ಅವರ ಜೊತೆಗೆ ಚರ್ಚೆ ಮಾಡುವುದಕ್ಕೆ ಬೆಳಗ್ಗಿನಿಂದ ವೈದ್ಯರ ಜೊತೆಗೆ ಇದ್ದಾರೆ. ಅವರು ಸೂಕ್ತವಾಗಿರುವಂತಹ ಕ್ರಮವನ್ನು ಕೈಗೊಳ್ಳುತ್ತಾರೆ. ಸದನ ಮುಗಿಯುವುದರೊಳಗಾಗಿ ಉತ್ತರವನ್ನು ಕೊಡಿಸಲಾಗುತ್ತದೆ.

**ಶ್ರೀ ಕೆ.ಬಿ.ಶಾಣಪ್ಪ:–** ಸನ್ಮಾನ್ಯ ಸಭಾಪತಿಯವರೇ, immediately, we have to call them. ಒಪ್ಪಿದರೆ ಸರಿ ಒಪ್ಪಲಿಲ್ಲವೆಂದರೆ, adjudication, arbitration, there are many ways. Why do we allow tem to die?

**ಸಭಾಪತಿಯವರು:–** ಮಂತ್ರಿಗಳು ಬಂದು ಆ ಬಗ್ಗೆ ಹೇಳುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಭಾರತೀಯ ದಂಡ ಸಂಹಿತೆಯ ಪ್ರಕಾರ ಯಾರಿಗೇ ಆದರೂ ತಮ್ಮ ಜೀವವನ್ನು ಕಳೆದುಕೊಳ್ಳುವುದಕ್ಕೆ ಅವಕಾಶವಿಲ್ಲ. ಆತ್ಮಹತ್ಯೆಗೆ ಪ್ರಯತ್ನಪಟ್ಟು ಒಂದು

ಜೀವಂತವಾಗಿ ಉಳಿದರೆ, he will punishable under Section 309 of the Indian Penal Code. ಸರ್ಕಾರ ಇದರ ಬಗ್ಗೆ ಕಾಳಜಿಯನ್ನು ವಹಿಸಿದೆ. ಶೀಘ್ರವಾಗಿ ಕ್ರಮ ಕೈಗೊಳ್ಳುವುದಕ್ಕೆ ಸಂಬಂಧಪಟ್ಟ ಸಚಿವರು ಈಗಾಗಲೇ ಅವರ ಜೊತೆಗೆ ಚರ್ಚೆ ಮಾಡುತ್ತಿದ್ದಾರೆ. ಆದಷ್ಟು ಬೇಗನೆ ಎಂದರೆ ಸದನ ಮುಗಿಯುವುದಕ್ಕೂ ಪೂರ್ವದಲ್ಲಿಯೇ ಉತ್ತರವನ್ನು ಕೊಡಿಸುತ್ತೇನೆಂದು ಹೇಳಿದ್ದೇನೆ. ಹಾಗಿದ್ದರೂ ಸಹ ಶೂನ್ಯವೇಳೆಯಲ್ಲಿ ಅದರ ಬಗ್ಗೆ ಯಾಕೆ ಚರ್ಚೆ ಮಾಡುತ್ತಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರು ಬಂದು ಉತ್ತರವನ್ನು ಕೊಟ್ಟ ನಂತರ ಚರ್ಚೆ ಮಾಡೋಣ. ಈಗ ಮುಂದಿನ ಶೂನ್ಯವೇಳೆಯ ಪ್ರಸ್ತಾಪ. ಮಾನ್ಯ ರಾಮಚಂದ್ರಗೌಡರು, ಸಂದೇಶ್ ನಾಗರಾಜ್‌ರವರು ಮತ್ತು ಸಿದ್ಧರಾಜುರವರು ಹುಲಿಯಿಂದಾಗಿರುವ ಅನಾಹುತದ ಬಗ್ಗೆ ಪ್ರಸ್ತಾಪ ಮಾಡಲು ಬಯಸಿದ್ದಾರೆ. ಯಾರಾದರೂ ಒಬ್ಬರು ತಮ್ಮ ನೋಟೀಸ್‌ನ್ನು ಓದಿ.

**(ಉ) ಹೆಚ್.ಡಿ.ಕೋಟೆ ಚಿಕ್ಕಬರಗಿ ಗ್ರಾಮದಲ್ಲಿ ಹುಲಿಯೊಂದು ಮೂರು ವ್ಯಕ್ತಿಗಳನ್ನು ಕೊಂದಿರುವ ಬಗ್ಗೆ-**

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಇಡೀ ದೇಶದಲ್ಲಿ ಹುಲಿ ಸಂರಕ್ಷಣಾ ಕೇಂದ್ರ ಎಂದರೆ ಬಂಡೀಪುರ ಒಂದೇ ಆಗಿದೆ.

**ಸಭಾಪತಿಯವರು:-** ತಾವು ಬರೆದಿರುವ ನೋಟೀಸ್‌ನ್ನು ಓದಿಬಿಡಿ.

**ಶ್ರೀ ರಾಮಚಂದ್ರಗೌಡ:-** ಸನ್ಮಾನ್ಯ ಸಭಾಪತಿಯವರೇ, ಓದಿದರೂ ಅಷ್ಟೇ ವಿಚಾರ. ನಾನು ಹೇಳಿ ಬಿಡುವೆ.

**ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್):-** ಸನ್ಮಾನ್ಯ ಸಭಾಪತಿಯವರೇ, . . . .

**ಸಭಾಪತಿಯವರು:–** ತಮಗೂ ಆಮೇಲೆ ಅವಕಾಶವನ್ನು ಕೊಡುತ್ತೇನೆ.

**ಶ್ರೀ ರಾಮಚಂದ್ರಗೌಡ:–** ಸನ್ಮಾನ್ಯ ಸಭಾಪತಿಯವರೇ, ತಾವು ನನ್ನ ಹೆಸರನ್ನು ಮೊದಲು ಕರೆದಿರುವಿರಿ.

**ಸಭಾಪತಿಯವರು:–** ಮಾನ್ಯ ರಾಮಚಂದ್ರಗೌಡರೇ, ನೀವು ಓದಿ. ಆಮೇಲೆ ಅವರು ತಮ್ಮ ನೋಟೀಸ್‌ನ್ನು ಓದಲು ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ರಾಮಚಂದ್ರಗೌಡ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಉಪಸ್ಥಿತರಾಗಿರುವುದು ಬಹಳ ಒಳ್ಳೆಯ ಸಂಗತಿಯಾಗಿದೆ. ಇಡೀ ದೇಶದಲ್ಲಿ ಹುಲಿ ಸಂರಕ್ಷಣಾ ಕೇಂದ್ರ ಇರುವುದು ಬಂಡೀಪುರದಲ್ಲಿ ಮಾತ್ರ. ಇಲ್ಲಿ ಹುಲಿ ಸಂರಕ್ಷಣೆ ಮಾಡಿರುವುದು ನರಬಲಿ ತೆಗೆದುಕೊಳ್ಳುವದಕ್ಕಾಗಿಯೇ ಅಥವಾ ಹುಲಿಗಳನ್ನು ರಕ್ಷಣೆ ಮಾಡುವುದಕ್ಕಾಗಿಯೇ ಎನ್ನುವುದನ್ನು ಹೇಳಬೇಕಾಗಿದೆ.

**ಸಭಾಪತಿಯವರು:–** ತಮ್ಮ ನೋಟೀಸ್‌ನ್ನು ಓದಿ ಬಿಡಿ. ಸ್ವಯಂ ವೇದ್ಯ ಅದು.

**ಶ್ರೀ ರಾಮಚಂದ್ರಗೌಡ:–** ಸನ್ಮಾನ್ಯ ಸಭಾಪತಿಯವರೇ, ನಮ್ಮ ವಿಧಾನ ಮಂಡಲ ಪ್ರಾರಂಭ ಆದ ನಂತರ 27ನೇ ತಾರೀಖಿಗೆ ಒಬ್ಬರು, 29ನೇ ತಾರೀಖಿಗೆ ಒಬ್ಬರು ಮತ್ತು 30ನೇ ತಾರೀಖಿಗೆ ಒಬ್ಬರು ನಿನ್ನೆ 3ನೇ ತಾರೀಖಿಗೆ ಒಬ್ಬರು ಹೀಗೆ ಸತತವಾಗಿ ನಾಲ್ಕು ಜನರನ್ನು ಹುಲಿ ಭಕ್ಷಣೆ ಮಾಡಿದೆ ಎಂದರೆ, ನಾವು ಹುಲಿಯನ್ನು ರಕ್ಷಣೆ ಮಾಡಿರುವುದು ಇದಕ್ಕೋಸ್ಕರವೇ ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಯಾವ ಹುಲಿಗಳನ್ನು ರಕ್ಷಣೆ ಮಾಡಬೇಕು, ಯಾವ ಹುಲಿಗಳನ್ನು ರಕ್ಷಣೆ ಮಾಡಬಾರದು ಎನ್ನುವ ಒಂದು ವಿವೇಚನೆ ಈ ಸರ್ಕಾರಕ್ಕೆ ಇಲ್ಲವೇ? ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿ ಇರುವುದರಿಂದ ನಾನು ಈ ಮಾತನ್ನು ಕೇಳುತ್ತಿದ್ದೇನೆ. ಯಾವ

ಹುಲಿಗಳನ್ನು ರಕ್ಷಣೆ ಮಾಡಬೇಕು ಮತ್ತು ಯಾವ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ ಎನ್ನುವುದನ್ನು ತಿಳಿಸಬೇಕಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ರಾಮಚಂದ್ರಗೌಡರು ಅತ್ಯಂತ ಹಿರಿಯ ಸದಸ್ಯರು, ಸಂಪ್ರದಾಯಗಳು ಅವರಿಗೆ ಗೊತ್ತಿದೆ ನೋಟಿಸ್‌ನ್ನು ಓದಬೇಕಾಗಿದೆ.

**ಶ್ರೀ ರಾಮಚಂದ್ರಗೌಡ:-** ಸನ್ಮಾನ್ಯ ಸಭಾಪತಿಯವರೇ, ಈಗ ಏನಾಗಿದೆ? ಅವರಿಗೆ ಏನು ಕಷ್ಟವಾಗಿದೆ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ವಾಸ್ತವಿಕ ಸಂಗತಿಯನ್ನು ಹೇಳುತ್ತಿದ್ದೇನೆ.

**ಸಭಾಪತಿಯವರು:-** ನಿಯಮದ ಪ್ರಕಾರ ತಾವು ನೋಟೀಸ್‌ನ್ನು ಓದಬೇಕು.

**ಶ್ರೀ ರಾಮಚಂದ್ರಗೌಡ:-** ಸನ್ಮಾನ್ಯ ಸಭಾಪತಿಯವರೇ, ಹಾಗಾದರೆ ನೋಟೀಸ್ ಓದಿ ಬಿಡುವೆ,

"ದಿನಾಂಕ:03.12.2013ರಂದು ಬಂಡೀಪುರ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿರುವ ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆಯ ಚಿಕ್ಕ ಬರಕಿ ಗ್ರಾಮದಲ್ಲಿ ಈಗಾಗಲೇ ಮೂರು ವ್ಯಕ್ತಿಗಳನ್ನು ಕೊಂದಿರುವ ನರಭಕ್ಷಕ ಹುಲಿಯು ನಾಲ್ಕನೇ ವ್ಯಕ್ತಿಯನ್ನು ಬಲಿ ತೆಗೆದುಕೊಂಡು ಭಕ್ಷಿಸಿದೆ.

ಮನುಷ್ಯನ ರಕ್ತದ ರುಚಿ ಹತ್ತಿರುವ ಈ ಹುಲಿಯ ಮೇಲೆ ಸುತ್ತಮುತ್ತಲಿನ ಎಲ್ಲ ಗ್ರಾಮಗಳ ಗ್ರಾಮಸ್ಥರಿಗೆ ಪ್ರಾಣಭಯದ ವಾತಾವರಣ ಉಂಟಾಗಿದೆ. ಅಲ್ಲಿನ ಗ್ರಾಮಸ್ಥರು ರೊಚ್ಚಿಗೆದ್ದು ಅಲ್ಲಿನ ಅರಣ್ಯ ಕಛೇರಿಯ ಮೇಲೆ ದಾಳಿ ನಡೆಸಿದ್ದಾರೆ. ಕಛೇರಿಯನ್ನು ಧ್ವಂಸಗೊಳಿಸಿದ್ದಾರೆ. ಅರಣ್ಯ ಅಧಿಕಾರಿಗಳ ಹಾಗೂ ಸಿಬ್ಬಂದಿಗಳ ಜೀಪು ಮತ್ತು ಬೈಕುಗಳಿಗೆ ಬೆಂಕಿ ಇಟ್ಟಿದ್ದಾರೆ. ಸುಮಾರು 15ಕ್ಕೂ ಹೆಚ್ಚು ಅರಣ್ಯ ಇಲಾಖೆಯ ಸಿಬ್ಬಂದಿಗಳು ಗ್ರಾಮಸ್ಥರ ದಾಳಿಗೆ ಹೆದರಿ ಓಡಿ ಹೋಗಿರುತ್ತಾರೆ. ಯಾವುದೆ ಉನ್ನತ ಅಧಿಕಾರಿಗಳು ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿಲ್ಲ. ಪತ್ರಿಕೆಯವರು ಮತ್ತು ಟಿ.ವಿ.ಯವರು ಸುದ್ದಿ ಗೊತ್ತಾದ ಮೇಲೆ ಹೋಗುತ್ತಾರೆ ಎಂದರೆ

ಸರ್ಕಾರದವರು ಯಾಕೆ ಹೋಗಲಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಇದೊಂದು ಅತ್ಯಂತ ತುರ್ತು ವಿಚಾರವಾಗಿದ್ದು ಸದರಿ ವಿಚಾರವನ್ನು ಅರಣ್ಯ ಸಚಿವರ ಗಮನಕ್ಕೆ ತರಲು ಬಯಸುತ್ತಿದ್ದೇನೆ."

ಸನ್ಮಾನ್ಯ ಸಭಾಪತಿಯವರೇ, ಹುಲಿ ರಕ್ಷಣೆ ಕೇಂದ್ರದಲ್ಲಿ ಹುಲಿ ಭಕ್ಷಣೆ ಮಾಡುವುದಕ್ಕೆ ಪ್ರಾರಂಭ ಮಾಡಿದರೆ, ನಮ್ಮ ಅರಣ್ಯ ಇಲಾಖೆ ಇದೆಯೇ ಎನ್ನುವ ಸಂಶಯ ಉಂಟಾಗಿದೆ.

**ಶ್ರೀ ರಮಾನಾಥ ರೈ(ಅರಣ್ಯ ಸಚಿವರು):–** ಸನ್ಮಾನ್ಯ ಸಭಾಪತಿಯವರೆ,...

**ಸಭಾಪತಿಯವರು:–** ಒಂದು ನಿಮಿಷ ಸಚಿವರೇ, ಸಂದೇಶ ನಾಗರಾಜು ಅವರು ತಮ್ಮ ನೋಟೀಸ್‌ನ್ನು ಓದುತ್ತಾರೆ. ಎಲ್ಲರಿಗೂ ಓದುವುದಕ್ಕೆ ಬಿಡುತ್ತೇನೆ. ಇನ್ನೂ ನಾಲ್ಕು ಜನರು ಇದ್ದರೆ ಅಷ್ಟೂ ಜನರನ್ನು ಓದುವುದಕ್ಕೆ ಬಿಡುತ್ತೇನೆ. ಎಲ್ಲರೂ ಅದೇ ವಿಷಯವನ್ನು ಹೇಳಬೇಕು ಅಂದರೆ ಹೇಳಿ. ನಾನು ಹೆಸರುಗಳನ್ನು ಹೇಳಿದ್ದೇನೆ. ಆದರೆ, ತಾವುಗಳು ನೋಟೀಸ್‌ನ್ನು ಓದಲೇಬೇಕು ಅಂದರೆ ಓದಿ.

**ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿ ಸಂಚರಿಸುತ್ತಿರುವ ನರಭಕ್ಷಕ ಹುಲಿಯು ಈಗಾಗಲೇ ಮೂರು ಜನರನ್ನು ಬಲಿ ತೆಗೆದುಕೊಂಡಿದ್ದು ಮತ್ತೆ ದಿನಾಂಕ:03.12.2013ರಂದು ಚಿಕ್ಕಬರಗಿ ಗ್ರಾಮದ 70 ವರ್ಷದ ಬಸಪ್ಪ ಎನ್ನುವವರನ್ನು ಬಲಿ ತೆಗೆದುಕೊಂಡಿದೆ. ದನ ಮೇಯಿಸಲು ಹೋಗಿದ್ದ ಇವರು ಹುಲಿ ದಾಳಿಗೆ ಸಿಲುಕಿ ಮೃತಪಟ್ಟಿದ್ದಾರೆ. ಇದರಿಂದ ರೊಚ್ಚಿಗೆದ್ದ ಜನರು ಮಲಿಯೂರು ವಿಭಾಗದ ಅರಣ್ಯ ಇಲಾಖೆ ಕಚೇರಿ ಮೇಲೆ ದಾಳಿ ನಡೆಸಿ ಜೀಪನ್ನು ಸುಟ್ಟು ಹಾಕಿದ್ದಾರೆ ಎಂದು ತಿಳಿದು ಬಂದಿದೆ. ಇಲ್ಲಿಗೆ ಸಮೀಪದ ಬೇಲದಕುಪ್ಪೆ ಜಾತ್ರೆಗೆ ಬಂದಿದ್ದ ಜನ ವಿಷಯ ತಿಳಿದು ಚೆಲ್ಲಾಪಿಲ್ಲಿಯಾಗಿ ಓಡಿದ್ದಾರೆ. ಜನರು ಹೊರಗೆ ಬರಲು, ಕೃಷಿ ಚಟುವಟಿಕೆ ನಡೆಸಲು ದನಗಳನ್ನು ಮೇಯಿಸಲು ಹೆದರುವ ಪರಿಸ್ಥಿತಿ

ಉಂಟಾಗಿದೆ. ಕೂಡಲೇ ಸರ್ಕಾರ ವಿಶೇಷ ಪಡೆಯನ್ನು ಕಳುಹಿಸಿ ಈ ನರಭಕ್ಷಕ ಹುಲಿಯನ್ನು ಹಿಡಿಯಬೇಕು.

ಮೈಸೂರು ನಗರಕ್ಕೆ ಸುಮಾರು ಎಂಟು ಕಾಡಾನೆಗಳು ಪ್ರವೇಶಿಸಿ ಜನರಲ್ಲಿ ಆತಂಕ ಮೂಡಿಸಿವೆ. ನಗರದ ಹೊರ ವಲಯದಲ್ಲಿರುವ ಎ.ಪಿ.ಎಂ.ಸಿ. ಮಾರುಕಟ್ಟೆ ಪರಸಯ್ಯನ ಹುಂಡಿ, ರಮಾಬಾಯಿ ನಗರಗಳಲ್ಲಿ ಈ ಆನೆಗಳ ಹಿಂಡು ಸಂಚರಿಸುತ್ತಿವೆ. ಮೊದಲು ಚಿತ್ರವನ ರೆಸಾರ್ಟ್‌ನ ಬಳಿ ಬೀಡು ಬಿಟ್ಟಿದ್ದ ಆನೆಗಳು ಅರಣ್ಯ ಸಿಬ್ಬಂದಿ ಸರಿಯಾಗಿ ಕಾರ್ಯಾಚರಣೆ ಮಾಡದ ಕಾರಣ ನಂಜನಗೂಡು ರೈಲ್ವೆ ಹಳಿಗಳ ಕಡೆಗೆ ಹೋಗಿ ರೈಲು ಬಂದ ಕಾರಣ ಹೆದರಿ ಮತ್ತೆ ನಗರದ ಕಡೆಗೆ ಬಂದಿವೆ ಕಳೆದ ವರ್ಷ ನಗರದೊಳಕ್ಕೆ ನುಗ್ಗಿದ್ದ ಆನೆಗಳು ಒಬ್ಬನನ್ನು ಬಲಿ ತೆಗೆದುಕೊಂಡಿದ್ದ ಘಟನೆ ನಡೆದಿತ್ತು. ಕೂಡಲೇ ಆ ಆನೆಗಳನ್ನು ಸರಿಯಾದ ಕಾರ್ಯಾಚರಣೆ ಮೂಲಕ ಕಾಡಿಗೆ ಓಡಿಸುವ ಕೆಲಸವನ್ನು ಮಾಡಬೇಕಾಗಿದೆ. ಈ ಬಗ್ಗೆ ಅರಣ್ಯ ಸಚಿವರ ಗಮನ ಸೆಳಯಲು ಇಚ್ಛಿಸುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಸಿದ್ದರಾಜುವರೆ ತಾವು ಸಹಾ ನೋಟಿಸ್‌ನ್ನು ಓದಬೇಕೆಂದರೆ ಓದಿ ಬಿಡಿ.

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೆ, ಒಂದೇ ವಿಷಯಕ್ಕೆ ಇಬ್ಬರು ಮೂರು ಜನ ಸದಸ್ಯರುಗಳು ನೋಟೀಸ್‌ಗೆ ಸಹಿ ಮಾಡಿದ್ದಾರೆ. ಒಬ್ಬರು ಓದಿದರೆ ಸಾಕು. ಮೂರು ಜನ ಸದಸ್ಯರುಗಳು ನೋಟೀಸ್ ಓದುವಂತಹ ಹೊಸ ಸಂಪ್ರದಾಯವನ್ನು ದಯಮಾಡಿ ಮಾಡಬೇಡಿ.

**ಸಭಾಪತಿಯವರು:–** ನಾನು ಏನು ಮಾಡಲಿ?

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೆ, ಇದು ಹೊಸ ಸಂಪ್ರದಾಯ. ಒಂದೇ ಒಂದು ವಿಷಯ ಮೂರು ಜನ ಸದಸ್ಯರುಗಳು ಸಹಿ ಮಾಡಿರುತ್ತಾರೆ. ಮೂರು ಜನ ಸದಸ್ಯರು ಓದಬೇಕೆಂದರೆ ಯಾವ ರೀತಿಯಾಗುತ್ತದೆಂದು ಹೇಳಿ. ಇದನ್ನು ಕಂಟ್ರೋಲ್ ಮಾಡುವುದಕ್ಕೆ ನಿಮಗೆ ಅಧಿಕಾರ ಇದೆ. ಒಬ್ಬರು ನೋಟೀಸ್‌ನ್ನು ಓದುವುದಕ್ಕೆ ಅವಕಾಶವನ್ನು ಕೊಡಿ.

ಸರ್ಕಾರದಿಂದ ಉತ್ತರ ಬಂದ ಮೇಲೆ ಇನ್ನು ಇಬ್ಬರು ಸದಸ್ಯರುಗಳು ಬೇಕಾದರೆ clarification ಕೇಳಬೇಕೆಂದು ಇದ್ದರೆ ಕೇಳುವುದಕ್ಕ ಅವಕಾಶಗಳನ್ನು ಕೊಡಿ. ಒಂದೇ ನೋಟೀಸ್‌ನ್ನು ಮೂರು ಜನರು ಓದಬೇಕೆಂದರೆ ಹೇಗೆ? ಸದನದಲ್ಲಿ ಸಮಯದ ಅಭಾವ ಇದೆ.

**ಸಭಾಪತಿಯವರು:–** ನಾನು ಅದನ್ನೇ ಹೇಳಿದೆ. ಸದಸ್ಯರು ಸದನದಲ್ಲಿ ಎದ್ದು ನಿಂತುಕೊಂಡು ನಾನು ನನ್ನ ನೋಟೀಸ್‌ನ್ನು ಓದಲೇಬೇಕೆಂದರೆ ಏನು ಮಾಡಲಿ?

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೆ, ನಿಮ್ಮ ಅಧಿಕಾರವನ್ನು ನೀವು ಚಲಾವಣೆ ಮಾಡಿ. ಒಂದೇ ನೋಟೀಸ್ ಮೂರು ಜನ ಸದಸ್ಯರುಗಳು ಸಹಿ ಮಾಡಿದ್ದಾರೆ.

**ಸಭಾಪತಿಯವರು:–** ಒಂದೇ ನೋಟೀಸ್‌ಗೆ ಸಹಿ ಮಾಡಿಲ್ಲ. ಬೇರೆ ಬೇರೆ ನೋಟೀಸ್‌ಗಳನ್ನು ಕೊಟ್ಟಿದ್ದಾರೆ.

**ಶ್ರೀ ಯಂ.ಸಿ.ನಾಣಯ್ಯ:–** ವಿಷಯ ಒಂದೇ ಇದೆ.

**ಶ್ರೀ ಸಿದ್ದರಾಜು:–** ಮಾನ್ಯ ಸಭಾಪತಿಯವರೆ, ನಾನು ಇಷ್ಟು ಟೈಮ್‌ನಲ್ಲಿ ಆ ನೋಟೀಸ್‌ನ್ನು ಓದಿಯೇ ಮುಗಿಸಿಬಿಡುತ್ತಿದ್ದೆ.

**ಶ್ರೀ ಎಸ್.ಆರ್.ಪಾಟೀಲ್(ಸಭಾ ನಾಯಕರು):–** ತಾವು ತಮ್ಮ ಪೀಠದಿಂದ ಹೆಸರನ್ನು mention ಮಾಡಿ.

**ಸಭಾಪತಿಯವರು:–** ಮಾನ್ಯ ಸದಸ್ಯರಿಗೆ ಓದಬೇಕೆಂದು ಅನಿಸಿದರೆ ಸಭೆಯ ಅಭಿಪ್ರಾಯವನ್ನು ಪಡೆದುಕೊಂಡು, ತಿಳಿದುಕೊಂಡು ಸ್ಪಂದಿಸಬೇಕಾಗುತ್ತದೆ. ಅದನ್ನು ಹೇಳಿದ್ದೇನೆ. ಅದು record ಗೆ ಹೋಗಿದೆ. ಸಚಿವರು ಅದಕ್ಕೆ ಉತ್ತರವನ್ನು ಹೇಳುತ್ತಾರೆ.

**ಶ್ರೀ ರಮಾನಾಥ ರೈ(ಅರಣ್ಯ ಸಚಿವರು):–** ಮಾನ್ಯ ಸಭಾಪತಿಯವರೆ, ಮಾನ್ಯ ರಾಮಚಂದ್ರಗೌಡರು ಮತ್ತು ಇನ್ನಿತರ ಅನೇಕ ಸದಸ್ಯರುಗಳು ನರಭಕ್ಷಕ ಹುಲಿಯ ಬಗ್ಗೆ ಮತ್ತು ಕಾಡಾನೆ ಹಾವಳಿಯ ಬಗ್ಗೆ ಪ್ರಸ್ತಾಪ

ಮಾಡಿದ್ದಾರೆ. ಬಂಡೀಪುರ ಮತ್ತು ಸುತ್ತಮುತ್ತಲಿನಲ್ಲಿ ನಡೆದಿರತಕ್ಕಂತಹ ಘಟನೆಯು ಬಹಳ ಗಂಭೀರವಾದಂತಹ ವಿಚಾರವಾಗಿದೆ. ಜೊತೆಗೆ ನೋವು ತರತಕ್ಕಂತಹ ವಿಚಾರವು ಹೌದು. ಶ್ರೀ ರಾಮಚಂದ್ರಗೌಡರು ಮಾತನಾಡುತ್ತಾ ಸ್ಥಳಕ್ಕೆ ಜವಾಬ್ದಾರಿಯುತವಾದಂತಹ ಅಧಿಕಾರಿಗಳ್ಯಾರು ಹೋಗಿಲ್ಲವೆಂದು ಹೇಳಿದರು. ನೆನ್ನೆ ರಾತ್ರಿಯೇ ವನ್ಯ ಜೀವಿ ವಿಭಾಗದ PCCF (Principal Chief Conservator of Forests) ಅವರು ಸ್ಥಳಕ್ಕೆ ಹೋಗಿದ್ದಾರೆ. ಹಾಗೂ ನಮ್ಮ ಇಲಾಖೆಯ ಕಾರ್ಯದರ್ಶಿಯವರು ಕೂಡ ಸ್ಥಳಕ್ಕೆ ಭೇಟಿಯನ್ನು ನೀಡಿದ್ದಾರೆ. ಈಗಾಗಲೇ ಆ ಹುಲಿಯು ನರ ಭಕ್ಷಕ ಎಂದು ನಮ್ಮ ಗಮನಕ್ಕೆ ಬಂದ ಮೇಲೆ ವನ್ಯ ಜೀವಿ ಸಂರಕ್ಷಣೆಯ ದೃಷ್ಟಿಯಿಂದ ಅದನ್ನು ಹಿಡಿದು ಬೋನಿನಲ್ಲಿ ಹಾಕಬೇಕೆಂದು ಸಾಕಷ್ಟು ಎಲ್ಲಾ ರೀತಿಯ ಪ್ರಯತ್ನವನ್ನು ಕೂಡ ಮಾಡಲಾಯಿತು. ಅದು ಆಗದಿದ್ದ ಪಕ್ಷದಲ್ಲಿ ಈಗ ಅರಣ್ಯ ಇಲಾಖೆಯ ಸಿಬ್ಬಂದಿಗಳು ಮತ್ತು ಪೊಲೀಸ್ ಇಲಾಖೆ ಜಂಟಿಯಾಗಿ ಕಾರ್ಯಾಚರಣೆಯನ್ನು ಮಾಡಲಾಗುತ್ತಿದೆ. Site ಆದಂತಹ ಸಂದರ್ಭದಲ್ಲಿ 70 ಸುತ್ತು ಗುಂಡುಗಳನ್ನು ಕೂಡ ಹಾರಿಸಲಾಗಿದೆ. ಸಿಬ್ಬಂದಿ ಅಲ್ಲಿಗೆ ಹೋದಾಗ ಅವರಿಗೂ ಕೂಡ ಪಾಪ ಸ್ವಲ್ಪ ಆತಂಕ ಇರುತ್ತದೆ. ಅಲ್ಲಿ ಮನುಷ್ಯನ ಮೇಲೆ ಹುಲಿ ದಾಳಿ ಮಾಡಿ ಮನುಷ್ಯನನ್ನು ಸಾಯಿಸಿರುವಾಗ ಅಲ್ಲಿ ಸ್ಥಳೀಯರು ಸ್ವಲ್ಪ emotional ಆಗುತ್ತಾರೆ. ಸ್ಥಳೀಯರು ಸಿಬ್ಬಂದಿಗಳನ್ನು ಓಡಿಸಿದ್ದಾರೆ. ಈ ರೀತಿಯಾದ್ದರಿಂದ ಕಾರ್ಯಾಚರಣೆಯನ್ನು ಮಾಡುವುದಕ್ಕೆ ಸ್ವಲ್ಪ ತೊಂದರೆಯಾಯಿತು. ಪೊಲೀಸ್ ಸಹಾಯವನ್ನು ಪಡೆಯಬೇಕಾದಂತಹ ಅನಿವಾರ್ಯತೆ ಕೂಡ ಬಂದಿದೆ ಎನ್ನುವಂಥದ್ದನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರುಗಳ ಗಮನಕ್ಕೆ ತರುತ್ತಿದ್ದೇನೆ. ಮೊನ್ನೆಯ ದಿವಸ ಮಾನ್ಯ ಸಂದೇಶ್ ನಾಗರಾಜುರವರು ವಿಷಯವನ್ನು ಪ್ರಸ್ತಾಪ ಮಾಡಿದ್ದರು. ಆದರೆ ಘಟನೆಗಳು ಮುಂದುವರೆದುಕೊಂಡು ಹೋಯಿತು. ಇವತ್ತು ನಾಗರಹೊಳೆಯಲ್ಲಿ ಒಂದು ಹುಲಿ watcher ಅನ್ನು ಸಾಯಿಸಿದೆ. ಅವನು ರಾತ್ರಿಯ ವೇಳೆ ಒಬ್ಬನೇ ಕಾಡಿಗೆ ಹೋಗಿದ್ದಾನೆ. ಆಗ ಅವನನ್ನು ಹುಲಿ ಸಾಯಿಸಿದೆ. ಅದು ಪ್ರಕೃತವಾಗಿ ಆಗಿರುವಂತಹ ಘಟನೆ. ಅಲ್ಲಿ ನಡೆದಿರುವುದಕ್ಕೂ ಇದೂ ಎರಡು ಕೂಡ ಒಂದೇ ಎಂದು

ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಎರಡು ಘಟನೆಗಳ ನಂತರ ಸುಮಾರು 60 ಕಿಲೋ ಮೀಟರ್ ಬಂಡೀಪುರಕ್ಕೂ ಮತ್ತು ನಾಗರಹೊಳೆಗೂ ಅಂತರ ದೆ. ಒಂದು ಸಂಶಯ ಏನೆಂದರೆ, ಒಂದೇ ಹುಲಿ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಇಲ್ಲಿರತಕ್ಕಂತಹ ಹುಲಿಯೂ ಮೂರು ಜನರ ಮೇಲೆ ದಾಳಿಯನ್ನು ಮಾಡಿ ಸಾಯಿಸಿರುವುದು. ಇಲ್ಲಿರುವ ಹುಲಿ ಮೂರು ಜನರ ಮೇಲೆ ದಾಳಿ ಮಾಡಿ ಸಾಯಿಸಿದೆ. ನಾಗರಹೊಳೆಯಲ್ಲಿರುವಂತಹ ಹುಲಿ ಒಬ್ಬನ ಮೇಲೆ ದಾಳಿ ಮಾಡಿ ಸಾಯಿಸಿದೆ. ಒಟ್ಟು 4 ಜನರು ಮೃತಪಟ್ಟಿದ್ದಾರೆ. ಹೆಚ್.ಡಿ.ಕೋಟೆ ತಾಲ್ಲೂಕು ನೇಡಾಡಿ ಗ್ರಾಮದಲ್ಲಿ ಶ್ರೀ ಬಸವರಾಜು 50 ವರ್ಷಗಳಾಗಿವೆ. ಇವರು ತಮ್ಮ ಜಮೀನಿನಿಂದ 300 ಮೀಟರ್ ದೂರದಲ್ಲಿರುವ ಮೊಳಿಯೂರು ಅರಣ್ಯ ವಲಯದಲ್ಲೀ ಅವರ ಜಾನುವಾರುಗಳನ್ನು ಮೇಯಿಸುವ ವೇಳೆ ಹುಲಿಯೊಂದು ದಾಳಿ ಮಾಡಿ ಅವರನ್ನು ಕೊಂದು ಮೃತದೇಹವನ್ನು ತಿಂದು ಹಾಕಿರುತ್ತದೆ.

ದಿನಾಂಕ 29.11.2013ರಂದು ಇದೇ ಹುಲಿಯು ಇದೇ ಜಾಗದಲ್ಲಿ ಹೆಚ್.ಡಿ.ಕೋಟೆ ತಾಲ್ಲೂಕು ಸೀಗೋಡು ಹಾಡಿಯ ವಾಸಿ ಶ್ರೀ ಚೆಲುವ 40 ವರ್ಷಗಳು ಇವರು ಜಾನುವಾರುಗಳನ್ನು ಮೇಯಿಸುವ ವೇಳೆ ಅವರ ಮೇಲೆ ದಾಳಿ ನಡೆಸಿ ಕೊಂದು ಹಾಕಿದ್ದು, ಶ್ರೀ ಚಿಕ್ಕ ಎನ್ನುವ ಮತ್ತೊಬ್ಬ ಗ್ರಾಮಸ್ಥನನ್ನು ಗಾಯಗೊಳಿಸಿರುತ್ತದೆ. ಸದರಿ ಪ್ರದೇಶವು ಮೊಲಿಯೂರು ಅರಣ್ಯ ವಲಯದ ಗಡಿಯಿಂದ ಸುಮಾರು 100 ಮೀಟರ್ ದೂರದಲ್ಲಿದ್ದು, ಶ್ರೀ ಬಸವರಾಜು ಇವರನ್ನು ಕೊಂದು ಹಾಕಿದ ಜಾಗದಿಂದ ಸುಮಾರು 4 ಕಿಲೋ ಮೀಟರ್ ಅಂತರದಲ್ಲಿರುತ್ತದೆ.

ಅರಣ್ಯ ಇಲಾಖೆಯು ಕೂಡಲೇ ಹುಲಿಯನ್ನು ಹಿಡಿಯಲು ಕ್ಷಿಪ್ರ ಕಾರ್ಯಾಚರಣೆ ಕೈಗೊಂಡಿದ್ದು, ಕುಣ್ಕಿ ಆನೆಗಳಾದ ರೋಹಿತ್, ಕಾಂತಿ, ಲಕ್ಷ್ಮೀ ಹಾಗೂ ಜಯಪ್ರಕಾಶ್‌ಗಳನ್ನು ಬಂಡೀಪುರದಿಂದ ಹಾಗೂ ಅಭಿಮನ್ಯು ಆನೆಯನ್ನು ತಿತಿಮಥಿ ಆನೆ ಶಿಬಿರದಿಂದ ಕರೆತಂದು ಕಾರ್ಯಾಚರಣೆಯಲ್ಲಿ ತೊಡಗಿಸಿರುತ್ತದೆ.

ಪಶುವೈದ್ಯರಾದ ಶ್ರೀ ನಾಗರಾಜ್ ಮತ್ತು ತಂಡ, ಅರವಳಿಕೆ ಶೂಟರ್ ಅಂದರೆ Tranquilizer shooter ಶ್ರೀ ಅಕ್ರಮ್, ಅರಣ್ಯ ಸಂರಕ್ಷಣಾಧಿಕಾರಿ, ಬಂಡೀಪುರ, ಸಹಾಯಕ ಅರಣ್ಯ ಸರಂಕ್ಷಣಾಧಿಕಾರಿ, ಹೆಡಿಯಾಲ, ವಲಯ ಅರಣ್ಯಾಧಿಕಾರಿ, ಮೊಲಿಯೂರು ಇವರು 25 ಜನ ಸಿಬ್ಬಂದಿ ಹಾಗೂ 50 ಜನ ವಿಶೇಷ ಹುಲಿ ಸಂರಕ್ಷಣಾ ಪಡೆ ಸಿಬ್ಬಂದಿ ಹಾಗೂ ತಜ್ಞ ಹುಲಿ ಶೋಧಕರ ಜೊತೆ ಕಾರ್ಯಾಚರಣೆಯನ್ನು ದಿನಾಂಕ 30.11.2013ರ ಬೆಳಿಗ್ಗೆ 6.00 ಘಂಟೆಯಿಂದ ಪ್ರಾರಂಭಿಸಿದ್ದಾರೆ.

ದಿನಾಂಕ 30.11.2013ರಂದು ಸದರಿ ಹುಲಿಯನ್ನು ಪತ್ತೆ ಹಚ್ಚಿ 3 ಬಾರಿ tranquilizer ಪ್ರಯೋಗಿಸಲಾಗಿದೆ. ಆದರೆ ಅದು ದಟ್ಟ ಪೊದೆಗಳಿಂದ ಕೂಡಿದ ಪ್ರದೇಶವಾದ್ದರಿಂದ ಹಿಡಿಯಲು ಅಸಾಧ್ಯವಾದ್ದರಿಂದ ರಾತ್ರಿ ಇಡೀ ಕಾಯಲಾಯಿತು. ಮರುದಿನ ಬೆಳಿಗ್ಗೆ 2 ಬೋನುಗಳನ್ನು ಇಡಲಾಗಿದ್ದರೂ ಹುಲಿಯನ್ನು ಹಿಡಿಯಲು ಸಾಧ್ಯವಾಗಲಿಲ್ಲ.

ದಿನಾಂಕ 01.12.2013ರಂದು ಹೆಚ್ಚುವರಿಯಾಗಿ ಬನ್ನೇರುಘಟ್ಟದಿಂದ ಡಾ: ಸನತ್ ಇವರನ್ನು ಕರೆಸಿಕೊಳ್ಳಲಾಗಿದ್ದು, ಸದರಿ ಶೋಧನಾ ತಂಡದ ಬಲವನ್ನು ಮತ್ತಷ್ಟು ಹೆಚ್ಚಿಸಲಾಗಿದೆ. ಹುಲಿಯು ದಾಳಿ ಮಾಡಿದ ಸ್ಥಳದಿಂದ ಈಗ 10 ಕಿಲೋ ಮೀಟರ್ ದೂರ ಕ್ರಮಿಸಿದ್ದು, ತಂಡವು ನಿರಂತರವಾಗಿ ಅದರ ಮೇಲೆ ನಿಗಾ ಇಟ್ಟಿರುತ್ತದೆ.

ಮೃತಪಟ್ಟ ಕುಟುಂಬದವರಿಗೆ ಐದು ಲಕ್ಷ ರೂಪಾಯಿಗಳನ್ನು ಕೊಡಲಗುವುದು. ಆದರೆ ಪ್ರಾಥಮಿಕ ಹಂತದಲ್ಲಿ ಒಂದು ಲಕ್ಷ ರೂಪಾಯಿಗಳ ಪರಿಹಾರವನ್ನು ದಿನಾಂಕ 27.11.2013 ರಂದು ಹಾಗೂ ದಿನಾಂಕ 29.11.2013 ರಂದು ಮೃತರ ವಾರಸುದಾರರಿಗೆ ವಿತರಿಸಲಾಗಿದ್ದು, ಇನ್ನು ಉಳಿದ ಪರಿಹಾರದ ಮೊತ್ತವಾದ ನಾಲ್ಕು ಲಕ್ಷ ರೂಪಾಯಿಗಳನ್ನು ಶವ ಪರೀಕ್ಷಾ ವರದಿ ಹಾಗೂ ಪೊಲೀಸ್ ವರದಿ ಬಂದ ತಕ್ಷಣವೇ ವಿತರಿಸಲಾಗುವುದು.

ಇನ್ನು ಗಾಯಗೊಂಡ ಶ್ರೀ ಚಿಕ್ಕ ರವರಿಗೆ 5000 ರೂಪಾಯಿಗಳ ಪರಿಹಾರ ಧನವನ್ನು ನೀಡಲಾಗಿದೆ. ಶಾಶ್ವತ ಅಂಗವಿಕಲರಾದಲ್ಲಿ ಅವರಿಗೆ 50,000 ರೂಪಾಯಿಗಳ ಪರಿಹಾರವನ್ನು ಕೊಡುವುದಕ್ಕೆ ಸಾಧ್ಯವಿದೆ. ಅದನ್ನು ಕೂಡ ಮಾಡಿಕೊಡಲಾಗುವುದು. ಹಾಗೂ ವೈದ್ಯಕೀಯ ವೆಚ್ಚವನ್ನು ಕೂಡ ಭರಿಸುವಂತಹ ಕೆಲಸವನ್ನು ಮಾಡುತ್ತೇವೆ. ಆ ಭಾಗದ ಶಾಸಕರಾದ ಶ್ರೀ ಚಿಕ್ಕಮಾಧುರವರು ಸ್ಥಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಘಟನೆಯ ಬಗ್ಗೆ ಹಾಗೂ ಹುಲಿಯನ್ನು ಹಿಡಿಯಲು ಇಲಾಖೆಯು ಮಾಡಿಕೊಂಡಿರುವ ವ್ಯವಸ್ಥೆ ಬಗ್ಗೆ ಅಧಿಕಾರಿಗಳು ವಿವರಿಸಿರುತ್ತಾರೆ.

ಇನ್ನೊಂದು ದಿನಾಂಕ 03.12.2013ರಂದು ಸಾಯಂಕಾಲ 4.30 ಸುಮಾರಿಗೆ ಶ್ರೀ ಬಸವಪ್ಪ (64 ವರ್ಷಗಳು) ಎನ್ನುವ ವ್ಯಕ್ತಿ ಅರಣ್ಯದ ಒಳಗೆ ಹೆಚ್.ಡಿ.ಕೋಟೆ ತಾಲ್ಲೂಕಿನ ಚಿಕ್ಕಬರಗಿ ಅರಣ್ಯ ಬೀಟ್‌ಗೆ ಸೇರಿದ ಪ್ರದೇಶದಲ್ಲಿ ಪ್ರವೇಶ ಮಾಡಿರುತ್ತಾರೆ. ವ್ಯಕ್ತಿಯು ಹಿಂದಿರುಗದೆ ಇದ್ದುದರಿಂದ ಗ್ರಾಮಸ್ಥರು ಅರಣ್ಯ ಸಿಬ್ಬಂದಿಗೆ ಸುಮಾರು 6.30ರ ಸಮಯದಲ್ಲಿ ಮಾಹಿತಿ ನೀಡಿರುತ್ತಾರೆ. ಸಿಬ್ಬಂದಿಯು ಸ್ಥಳೀಯರೊಡನೆ ಅರಣ್ಯ ಪ್ರದೇಶದೊಳಗೆ ವ್ಯಕ್ತಿಯನ್ನು ಹುಡುಕಲು ತೆರಳಿದಾಗ ಸುಮಾರು 200 ಮೀಟರ್ ಕ್ರಮಿಸಿದ ನಂತರ ರಕ್ತದ ಕಲೆಗಳು ಕಾಣಿಸಿರುತ್ತವೆ. ಉದ್ರಿಕ್ತಗೊಂಡ ಗ್ರಾಮಸ್ಥರು ಅರಣ್ಯ ಸಿಬ್ಬಂದಿ ಮೇಲೆ ದಾಳಿ ನಡೆಸಿ ಅವರನ್ನು ಥಳಿಸಿರುತ್ತಾರೆ. ಸ್ವಾಭಾವಿಕವಾಗಿ ಅವರು emotional ಆಗಿ ಮಾಡಿದ್ದಾರೆ. ಮತ್ತು ಅಲ್ಲಿ ಒಂದು ಜಾತ್ರೆ ಕೂಡ ನಡೆಯುತ್ತಿತ್ತು. ಅರೆವಳಿಕೆಯನ್ನು ಕೊಟ್ಟಾಗ ಅದು ಜಾತ್ರೆಯ ಮೇಲೆ ದಾಳಿಯನ್ನು ನಡೆಸುವಂತಹ ಭಯ ಕೂಡ ಇದೆ. ಇದು ಬಹಳ ಸೂಕ್ಷ್ಮವಾಗಿರುವಂತಹ ವಿಚಾರವಾಗಿದೆ. ಗುಂಡು ಹೊಡೆದು ಅರೆಪ್ರಜ್ಞಾವಸ್ಥೆಯಾದರೆ ಜಾತ್ರೆಯ ಮೇಲೆ ಪ್ರವೇಶ ಮಾಡುವಂತಹ ಭಯ ಕೂಡ ಇದೆ. ಇದು ಬಹಳ ಸೂಕ್ಷ್ಮವಾದ ವಿಚಾರವಾಗಿರುವುದರಿಂದ ನಾವು ಬಹಳ ಜಾಗ್ರತೆಯಾಗಿ ಮಾಡಬೇಕಾಗಿದೆ. ಸ್ವಾಭಾವಿಕವಾಗಿ ಸ್ಥಳೀಯರು emotional ಆದಾಗ ತೊಂದರೆಯಾಗುತ್ತದೆಂದು ಅರಣ್ಯ ಸಿಬ್ಬಂದಿಗಳು ಸ್ಥಳದಿಂದ ಓಡಿ ಹೋಗಿದ್ದಾರೆ. ಏಕೆಂದರೆ, ಚಿಕ್ಕಬರಗಿಯಲ್ಲಿರುವ ಅರಣ್ಯ

ಇಲಾಖೆಗೆ ಸೇರಿದ ನಿರೀಕ್ಷಣಾ ಮಂದಿರ, ಜೀಪು, ಬೈಕು ಹಾಗೂ ಸ್ಥಳಕ್ಕೆ ಕೆಲಸಕ್ಕಾಗಿ ಬಂದ ಟಿಪ್ಪರ್ ಒಂದಕ್ಕೆ ಬೆಂಕಿ ಹಚ್ಚಿ ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದರಿಂದ ಸ್ಥಳದಲ್ಲಿ ಉದ್ರಿಕ್ತ ಪರಿಸ್ಥಿತಿ ತಲೆದೋರಿದ್ದರಿಂದ ಕೂಡಲೆ ಪೊಲೀಸರಿಗೆ ಮಾಹಿತಿ ನೀಡಲಾಗಿ, ಪೊಲೀಸರು ಸ್ಥಳಕ್ಕೆ ಆಗಮಿಸಿರುತ್ತಾರೆ. ಇಂದು ಬೆಳಗಿನ ಜಾವ ಕಾಡಿನಲ್ಲಿ ಹುಡುಕಾಟದ ವೇಳೆ ವ್ಯಕ್ತಿಯ ಶವ ದೊರೆತಿದ್ದು ವ್ಯಕ್ತಿಯ ಬಲಗಾಲು ತಿನ್ನಲ್ಪಟ್ಟಿರುತ್ತದೆ. ಹುಲಿಯನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದು ಪೊಲೀಸ್ ಹಾಗೂ ಅರಣ್ಯ ಸಿಬ್ಬಂದಿಯು ಸುಮಾರು 70 ಸುತ್ತು ಗುಂಡನ್ನು ಹಾರಿಸಿರುತ್ತಾರೆ. ವ್ಯಕ್ತಿಯ ಮರಣೋತ್ತರ ಶವ ಪರೀಕ್ಷೆ ಮಾಡುವವರೆಗೆ ಕಂದಾಯ ಹಾಗೂ ಪೊಲೀಸ್ ಅಧಿಕಾರಿಗಳ ಮನವಿಯಂತೆ ಅರಣ್ಯ ಸಿಬ್ಬಂದಿಯು ಶವ ಪರೀಕ್ಷೆ ಸ್ಥಳದಿಂದ ಸ್ವಲ್ಪ ದೂರದಲ್ಲಿ ಇರುತ್ತಾರೆ. ಸ್ಥಳಕ್ಕೆ ಅರಣ್ಯ ಇಲಾಖೆಯ ಕಾರ್ಯದರ್ಶಿ ಹಾಗೂ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಇವರನ್ನು ತೆರಳುವಂತೆ ನೆನ್ನೆ ರಾತ್ರಿಯೇ ಸೂಚನೆ ನೀಡಲಾಗಿದೆ. ವನ್ಯಜೀವಿ ಸಂರಕ್ಷಣಾ ಕಾಯಿದೆ 1972ರಲ್ಲಿ ಲಭ್ಯವಿರುವ ಎಲ್ಲಾ ಅವಕಾಶಗಳನ್ನು ಬಳಸಿ ಮಾನವ ಜಾನುವಾರು ಹಾಗೂ ಆಸ್ತಿಪಾಸ್ತಿ ರಕ್ಷಣೆಗೆ ಅಗತ್ಯವಿರುವ ಕ್ರಮಗಳನ್ನು ಕಟ್ಟುನಿಟ್ಟಾಗಿ ತೆಗೆದುಕೊಳ್ಳುವಂತೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ) ಹಾಗೂ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಇವರಿಗೆ ಆದೇಶ ನೀಡಲಾಗಿದೆ. ವರದಿ ಬಂದ ಕೂಡಲೇ ಪರಿಹಾರ ನೀಡುವ ಬಗ್ಗೆ ಅಗತ್ಯ ಜರೂರು ಕ್ರಮ ವಹಿಸಲಾಗುತ್ತದೆ. ಅದು ನರಭಕ್ಷಕ ಹುಲಿ ಎಂಬುದಾಗಿ ಮಾಹಿತಿ ಬಂದಿದ್ದು, ಇಲ್ಲಿಯವರೆಗ ನಾವು ವನ್ಯಜೀವೀ ಸಂರಕ್ಷಣೆ ದೃಷ್ಟಿಯಿಂದ ಅದನ್ನು tranquilize ಮಾಡಿ ಹಿಡಿಯಬೇಕೆಂದು ಸರ್ವ ಪ್ರಯತ್ನಗಳನ್ನೂ ಮಾಡುತ್ತಿದ್ದೇವೆ. ಇವೊತ್ತು ಬೆಳಿಗ್ಗೆ ಕೂಡ ಆ ಪ್ರಯತ್ನ ಮಾಡಿ, ಇಲ್ಲವಾದರೆ ಆ ನರಭಕ್ಷಕ ಹುಲಿಯನ್ನು ಕಾನೂನಿನ ವ್ಯಾಪ್ತಿಯಲ್ಲಿಯೇ ಸಾಯಿಸುವಂಥದ್ದಕ್ಕೆ ಆದೇಶ ಮಾಡಲು ಈಗಾಗಲೇ ಅಲ್ಲಿಯ ಸ್ಥಳೀಯ ಆಡಳಿತವನ್ನು ಕೂಡ ಸೇರಿಸಿಕೊಂಡು ನಾವು ಕೆಲಸ ಮಾಡುತ್ತಿದ್ದೇವೆ.

ನಾಗರಹೊಳೆಯಲ್ಲಿ ಒಂದು ಘಟನೆ ನಡೆಯಿತು, ಒಬ್ಬ ಅರಣ್ಯ ವೀಕ್ಷಕ, ಇದೇ ದಿನಾಂಕ:29.11.2013 ರಂದು ನಾಗರಹೊಳೆ ವಲಯದ ಬಳ್ಳೆ ಮೂರ್ಕಲ್ ಕ್ಯಾಂಪ್ ಕಲ್ಲಬೇಟೆ ಶಿಬಿರದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಶ್ರೀ ಸುರೇಶ್, ಅರಣ್ಯ ವೀಕ್ಷಕ ಇವರು ಸಾಯಂಕಾಲ 5.00 ಗಂಟೆ ಸಮಯದಲ್ಲಿ ಬಹಿರ್ದೆಸೆಗೆ ಹೋದಾಗ ಸದರಿಯವರನ್ನು ಹುಲಿಯು ಕೊಂದು ಹಾಕಿ ಅವರ ಶರೀರದ ಅರ್ಧ ಭಾಗವನ್ನು ತಿಂದು ಹಾಕಿರುವುದು ಕಂಡುಬಂದಿರುತ್ತದೆ. ಸದರಿಯವರ ಶವವನ್ನು ವಾರಸುದಾರರಿಗೆ ಒಪ್ಪಿಸಿ ಸರ್ಕಾರದಿಂದ ಶವ ಸಂಸ್ಕಾರಕ್ಕೆ 5,000/– ರೂಪಾಯಿಗಳನ್ನು ಮತ್ತು 5.00/– ಲಕ್ಷ ರೂಪಾಯಿಗಳ ಪರಿಹಾರವನ್ನು ನೀಡಲಾಗಿದೆ. ಸದರಿ ನೌಕರರು ಇಲಾಖೆಯಲ್ಲಿ ಈಗ ಒಂದೂವರೆ ವರ್ಷಗಳ ಕಾಲ ಸೇವೆ ಸಲ್ಲಿಸಿರುವುದರಿಂದ ಅವರಿಗೆ ನಿಯಮಾನುಸಾರ ಲಭ್ಯವಾಗುವ ಗಳಿಕೆ ರಜಾ ನಗದೀಕರಣ, ಓರಿಯಂಟಲ್ ವಿಮಾ ಮೊತ್ತ ಹಾಗೂ ಗ್ರಾಚ್ಯುಟಿಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು. ಅಂದರೆ ಅವರಿಗೆ ಸರ್ಕಾರದಿಂದ ಸಿಗಬೇಕಾದ ಸವಲತ್ತುಗಳನ್ನೆಲ್ಲಾ ನೀಡಲು ಈಗಾಗಲೇ ಸರ್ಕಾರದಿಂದ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಅಲ್ಲದೇ, ಮುಂಜಾಗ್ರತಾ ಕ್ರಮವಾಗಿ ಸಾರ್ವಜನಿಕರು ಏಕಾಂಗಿಯಾಗಿ ಅರಣ್ಯ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಓಡಾಡದಂತೆ ಮಾಧ್ಯಮಗಳ ಮೂಲಕ ವಿನಂತಿಸಲಾಗಿದ್ದು, ಈ ಬಗ್ಗೆ ಪ್ರಚಾರವನ್ನು ಕೂಡ ಮಾಡಿದ್ದೇವೆ.

ಮಾನ್ಯ ಸಭಾಪತಿಯವರೇ, ಇಂತಹ ಒಂದು ಪರಿಸ್ಥಿತಿ ಇರುವಾಗ ಮತ್ತೆ ಜನರು ಕಾಡಿಗೆ ಹೋಗಬಾರದು ಮತ್ತು ಜಾಗ್ರತೆಯಿಂದ ಕೂಡ ಇರಬೇಕೆಂಬುದಾಗಿ ನಾನು ಈ ಸದನದ ಮೂಲಕ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಹುಲಿ ಹಿಡಿಯುವ ಕಾರ್ಯಾಚರಣೆಯು ಸರ್ವ ಪ್ರಯತ್ನಗಳೊಡನೆ ಮುಂದುವರೆದಿದ್ದು, ಮೇಲ್ಕಂಡ ಪ್ರದೇಶಗಳಲ್ಲಿ ಈಗಾಗಲೇ ಕ್ಯಾಮೆರಾಗಳನ್ನು ಕೂಡ ಅಳವಡಿಸಲಾಗಿದೆ. ಮೊದಲು ಆ ಹುಲಿ ಎಲ್ಲಿದೆ ಎಂಬುದು ಕಂಡುಬಂದ ತಕ್ಷಣ ನಾವು ಮುಂದಿನ ಕ್ರಮವನ್ನು ಕೈಗೊಳ್ಳುತ್ತೇವೆ.

ಈ ದೇಶದಲ್ಲಿ ಅತ್ಯಂತ ಹೆಚ್ಚು ಹುಲಿಗಳು ಮತ್ತು ಆನೆಗಳಿರುವಂತಹ ರಾಜ್ಯವೆಂದರೆ ಕರ್ನಾಟಕ ಎಂದು ಹೇಳಬಹುದು. ಆನೆಗಳ ಸಂಖ್ಯೆ ಹಿಂದೆ 3000 ಇದ್ದದ್ದು ಈಗ 6000 ಆಗಿದೆ. ವನ್ಯಜೀವಿ ಸಂರಕ್ಷಣೆ ಕಾಯಿದೆ ಕೂಡ ಬಲವಾಗಿದೆ. ಮತ್ತೊಂದು ವಿಚಾರವೆಂದರೆ, ಜನರಿಗೂ ಸಹ ವನ್ಯಜೀವಿಗಳನ್ನು ಸಾಯಿಸಬಾರದು ಎನ್ನುವಂತಹ ತಿಳುವಳಿಕೆ ಇದೆ. ಮೊದಲು ಜನರು ಕಾಡುಗಳಿಗೆ ಶಿಕಾರಿಗಾಗಿ ಹೋಗುತ್ತಿದ್ದುದು ನಮಗೆಲ್ಲಾ ಗೊತ್ತಿದೆ, ಆದರೆ ಈಗ ಅದೆಲ್ಲಾ ಶೇಕಡ 80 ರಿಂದ 90 ಭಾಗದಷ್ಟು ನಿಂತು ಹೋಗಿದೆ, ಅಲ್ಲಿ-ಇಲ್ಲಿ ಕೆಲವು ಕಡೆ ನಡೆಯುತ್ತಿರಬಹುದು.

**ಶ್ರೀ ಗೋ.ಮಧುಸೂದನ್ (ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಒಂದು ಹುಲಿ ನರಭಕ್ಷಕ ಆಗಬೇಕಾದರೆ ಬಹುಶಃ ಅದು ಕುಂಟುತ್ತಿರಬೇಕು ಅಥವಾ ಗಾಯಗೊಂಡಿರಬೇಕು, ಇಡೀ ದೇಶಾದ್ಯಂತ ಇರುವಂತಹ ಒಂದು ದೊಡ್ಡ ಜಾಲ ಬಂಡೀಪುರ ಮತ್ತು ನಾಗರಹೊಳೆ ಪ್ರದೇಶದಲ್ಲಿ jaw trap ಗಳನ್ನು ಹಾಕಿ ಹುಲಿಗಳನ್ನು ಹಿಡಿಯುವಂತಹ ಪ್ರಯತ್ನ ಮಾಡುತ್ತಿದ್ದಾರೆ. ಅದರಿಂದಾಗಿ ಹುಲಿಗಳು ಗಾಯಗೊಳ್ಳುತ್ತವೆ, ಕುಂಟಾಗುತ್ತವೆ, ನಡೆಯುವದಕ್ಕಾಗದಿರುವಂತಹ ಸ್ಥಿತಿ ನಿರ್ಮಾಣವಾಗುತ್ತದೆ. ಆ ಕಾರಣಕ್ಕೋಸ್ಕರವಾಗಿ they become man eaters. ಇಲ್ಲದಿದ್ದರೆ ಈ ಹುಲಿಗಳು ಮನುಷ್ಯನನ್ನು ತಿಂದು ಸಂತೋಷ ಪಡುವಂತಹ ಪ್ರಾಣಿಗಳಲ್ಲವೇ ಅಲ್ಲ. ಹುಲಿಗಳು ಕಡವೆ, ಜಿಂಕೆ, ಕಾಡುಕೋಣ ಇಂತಹವುಗಳನ್ನೇ ಹೆಚ್ಚಾಗಿ ತಿನ್ನುತ್ತವೆಯೇ ಹೊರತು ಅವುಗಳಿಗೆ ಮನುಷ್ಯನನ್ನು ತಿನ್ನಬೇಕೆನ್ನುವಂತಹ ಆಸೆ ಇರುವುದಿಲ್ಲ. ಅದಕ್ಕಾಗಿ ಈ jaw trap ಗಳನ್ನು ಹಾಕುವುದರಿಂದ ಹುಲಿಗಳ ಅಂಗವೇನು ಊನ ಆಗುತ್ತದೆ, ಆ ಕಾರಣಕ್ಕೋಸ್ಕರವಾಗಿ they become man eaters. ಅಲ್ಲಿ ಅಂಥದ್ದೊಂದು ದೊಡ್ಡ ವರ್ಗ ಕೆಲಸ ಮಾಡುತ್ತಿದ್ದು, ಹುಲಿಗಳನ್ನು ಕೊಂದು ಅದರ ಚರ್ಮವನ್ನು ತೆಗೆದು ನೇಪಾಳಕ್ಕೆ ಸಾಗಿಸುವಂತಹ ಕೆಲಸಗಳನ್ನೆಲ್ಲಾ ಅವರು ಮಾಡುತ್ತಿದ್ದಾರೆ. ಅದನ್ನು ತಡೆಯುವುದಕ್ಕೆ ಸರ್ಕಾರದ ಅರಣ್ಯ ಇಲಾಖೆ ವಿಫಲವಾಗಿರುವ

ಕಾರಣಕ್ಕಾಗಿಯೇ ಗಾಯಗೊಂಡಿರುವ ಹುಲಿಗಳು ನರಭಕ್ಷಕ ಹುಲಿಗಳಾಗಿ ಮಾರ್ಪಡುತ್ತಿವೆ ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ.

**ಶ್ರೀ ರಮಾನಾಥ ರೈ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮಧುಸೂದನ್‌ರವರು ತಿಳಿಸಿರುವಂತಹ ವಿಚಾರದಲ್ಲಿ ಸತ್ಯಾಂಶ ಇರಬಹುದು, ಅದರ ಬಗ್ಗೆ ನನಗೆ ಗೊತ್ತಿಲ್ಲ. ಆ ಮಾಹಿತಿಯನ್ನು ತೆಗೆದುಕೊಂಡು ಅಂತಹ ಚಟುವಟಿಕೆಗಳೇನಾದರೂ ಆ ಭಾಗದಲ್ಲಿ ನಡೆಯುತ್ತಿದ್ದರೆ ಅದರ ಬಗ್ಗೆ ಇಲಾಖೆ ಸೂಕ್ತವಾದ ಕ್ರಮವನ್ನು ಕೈಗೊಳ್ಳುತ್ತದೆ. ಮಾನ್ಯ ಸದಸ್ಯರು ಅದರ ವಿಶೇಷ ಮಾಹಿತಿಯನ್ನು ನನಗೆ ಒದಗಿಸಿದಲ್ಲಿ ನಾವು ಅದರ ಬಗ್ಗೆ ನಿರ್ದಿಷ್ಟವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಾಗುತ್ತದೆಯೇ ಹೊರತು ಸಾರಾಸಗಟಾಗಿ ಆ ರೀತಿ ಆಗಿರಬಹುದು, ಈ ರೀತಿ ಆಗಿರಬಹುದು ಎಂದು ಹೇಳಿದರೆ ಅದರ ಬಗ್ಗೆ ನಾವು ಕ್ರಮವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಆ ಬಗ್ಗೆ ನಿರ್ದಿಷ್ಟವಾದ ಮಾಹಿತಿಯನ್ನು ಒದಗಿಸಿದಲ್ಲಿ ಆ ವಿಚಾರದಲ್ಲಿ ನಮ್ಮ ಇಲಾಖೆ ಸೂಕ್ತವಾದ ಕ್ರಮವನ್ನು ಕೈಗೊಳ್ಳುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ತಿಳಿಸಬಯಸುತ್ತೇನೆ.

**ಶ್ರೀ ಸಿದ್ದರಾಜು(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಹುಲಿಯ ದಾಳಿಯಿಂದ ಹತ್ಯೆಗೀಡಾದ ವ್ಯಕ್ತಿಯ ಕುಟುಂಬದವರಿಗೆ ₹ 5.00/- ಲಕ್ಷಗಳ ಪರಿಹಾರವನ್ನೇನು ಘೋಷಣೆ ಮಾಡಲಾಗಿದೆ, ಇದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಪರಿಹಾರವನ್ನು ಕನಿಷ್ಟ ಪಕ್ಷ ₹ 10.00/- ಲಕ್ಷಗಳಿಗೆ ಹೆಚ್ಚಿಸಬೇಕೆಂದು ವಿನಂತಿಸುತ್ತೇನೆ. ಏಕೆಂದರೆ ಅಲ್ಲಿ ಸತ್ತಂತಹ ವ್ಯಕ್ತಿಗಳು ಪರಿಶಿಷ್ಟ ಪಂಗಡಕ್ಕೆ ಸೇರಿದಂತಹ ಅರಣ್ಯ ವೀಕ್ಷಕರೆನ್ನುವಂತಹ ವಿಚಾರ ತಮಗೂ ಸಹ ಗೊತ್ತಿದೆ. ಆದ್ದರಿಂದ ದಯಮಾಡಿ ಇದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿದ ಪರಿಹಾರದ ಮೊತ್ತವನ್ನು ₹ 10.00/- ಲಕ್ಷಗಳಿಗೆ ಹೆಚ್ಚಿಸಬೇಕೆಂದು ನಾನು ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೂಡ ವಿನಂತಿಸುತ್ತೇನೆ.

**ಶ್ರೀ ಬಿ.ರಮಾನಾಥ ರೈ:–** ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ಏನು ಘೋಷಣೆ ಮಾಡಲಾಗಿದೆ ಅದರಂತೆ ನಾವು ಮೃತಪಟ್ಟಿರುವ ವ್ಯಕ್ತಿಯ ಕುಟುಂಬಕ್ಕೆ ₹ 5.00/– ಲಕ್ಷಗಳ ಪರಿಹಾರವನ್ನು ಕೊಡುತ್ತೇವೆ. ಇದು ವಿಶೇಷ ಪ್ರಕರಣವೆಂದು ಪರಿಗಣಿಸಬೇಕೆನ್ನುವಂತಹ ಒಂದು ವಿಚಾರವನ್ನು ಮಾನ್ಯ ಸದಸ್ಯರೇನು ಈಗ ನಮ್ಮ ಗಮನಕ್ಕೆ ತಂದಿದ್ದಾರೆ ಅದನ್ನು ಪರಿಶೀಲಿಸುತ್ತೇವೆ. ಈ ಪರಿಹಾರವನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕೊಡುವುದಕ್ಕೆ ಸಾಧ್ಯವಿದೆಯೇ ಎಂಬ ಬಗ್ಗೆ ನಾವು ಪರಿಶೀಲನೆ ಮಾಡುತ್ತೇವೆ. ಇನ್ನು ಗಾಯಗೊಂಡಿರುವವರಿಗೆ ವೈದ್ಯಕೀಯ ಸೌಲಭ್ಯಗಳನ್ನು ಉಚಿತವಾಗಿ ಕೊಡುವುದಕ್ಕೆ ಕೂಡ ನಾವು ಪ್ರಯತ್ನಗಳನ್ನು ಮಾಡುತ್ತೇವೆ.

ಒಂದು ಹುಲಿ ನರಭಕ್ಷಕ ಆಗುವಂಥದ್ದೇನಿದೆ ಅದು ಆಕಸ್ಮಿಕವಾಗಿ ಆಗುವಂತಹ ಒಂದು ವಿಚಾರವಾದ್ದರಿಂದ ಅದರ ಪೂರ್ವಾಪರ ವಿಚಾರಗಳೆಲ್ಲಾ ನಮಗೆ ಗೊತ್ತಾಗುವುದಿಲ್ಲ. ಬಹುಶಃ ನಾಗರಹೊಳೆ ಮತ್ತು ಹೆಚ್.ಡಿ.ಕೋಟೆ ಅರಣ್ಯ ಪ್ರದೇಶಗಳ ನಡುವೆ ಸುಮಾರು 60 ಕಿಲೋ ಮೀಟರ್ ಅಂತರವಿದೆ. ಹಾಗಾಗಿ ಎರಡೂ ಕಡೆ ನಡೆದಿರುವ ದಾಳಿಗಳು ಕೂಡ ಒಂದೇ ಎಂದು ಹೇಳುವುದಕ್ಕಾಗುವುದಿಲ್ಲ. ಅಲ್ಲಿ ಆಕಸ್ಮಿಕವಾಗಿ ಘಟನೆ ಆಗಿರಬಹುದು, ಏಕೆಂದರೆ ಅರಣ್ಯ ವೀಕ್ಷಕ ಕಾಡಿನೊಳಗೆ ಒಬ್ಬನೇ ಹೋಗಿದ್ದಾನೆ, ಸಾಮಾನ್ಯವಾಗಿ ರಾಷ್ಟ್ರೀಯ ಅರಣ್ಯಗಳಿಗೆ ಸಿಬ್ಬಂದಿಗಳು ಗುಂಪಾಗಿ ಹೋಗುತ್ತಾರೆ, ಆದರೆ ಬಹಿರ್ದೆಸೆಗಾಗಿ ಆ ಅರಣ್ಯ ವೀಕ್ಷಕ ಗುಂಪಿನಿಂದ ಸ್ವಲ್ಪ ದೂರ ಕಾಡಿನೊಳಗೆ ಹೋಗಿರಬಹುದು, ಇದು ಆಕಸ್ಮಿಕ. ಇವೊತ್ತು ಇಲ್ಲಿ ಆಗಿರುವಂತಹ ಘಟನೆ ಏನಿದೆ ಇದು ಬಹುಶಃ ನರಭಕ್ಷಕ ಹುಲಿಯ ದಾಳಿಯಿಂದಾಗಿ ಆಗಿರಬಹುದಾಗಿದ್ದು, ಆ ನರಭಕ್ಷಕ ಹುಲಿ ಕಂಡ ತಕ್ಷಣ ಗುಂಡು ಹಾರಿಸುವುದಕ್ಕೆ ಹೋದರೆ, ಅಲ್ಲಿ ಒಂದು ಜಾತ್ರೆ ಏನು ನಡೆಯುತ್ತಿದೆ ಆ ಜಾತ್ರೆಗೆ ನುಗ್ಗಬಹುದು ಎನ್ನುವಂತಹ ಭಯ ಇದೆ. ಅದಕ್ಕಾಗಿ ಕಾರ್ಯಾಚರಣೆ ಮಾಡುವಾಗ ಸ್ವಲ್ಪ ಜಾಗ್ರತೆಯಿಂದ ಮಾಡಬೇಕಾಗಿದೆ. ಇಷ್ಟೆಲ್ಲಾ ಘಟನೆಗಳಿಂದಾಗಿ ಅಲ್ಲಿನ ಜನರು ಸಿಬ್ಬಂದಿಯವರು ಕಾರ್ಯಾಚರಣೆಗೆ ಹೋದಂತಹ ಸಂದರ್ಭದಲ್ಲಿ ಅವರನ್ನು

ತಡೆಗಟ್ಟುವಂತಹ ಕೆಲಸ ನೆನ್ನೆಯ ದಿವಸ ನಡೆದಿದೆ. ಮತ್ತೆ ಇಂತಹ ಪ್ರಕರಣಗಳಾಗದಂತೆ ಜನರು ಜಾಗ್ರತೆಯಿಂದ ಇರಬೇಕೆಂದು ನಾವು ಅವರಲ್ಲಿ ಮನವಿಯನ್ನು ಮಾಡುತ್ತಿದ್ದೇವೆ.

**ಶ್ರೀ ಯಂ.ಸಿ.ನಾಣಯ್ಯ(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ನಾಗರಹೊಳೆಯಲ್ಲಿರುವಂತಹ ಹುಲಿ ಏನಿದೆ ಅದು ಗಾಯಗೊಂಡಿರುವ ಹುಲಿ ಎಂಬುದು ನಿಮ್ಮ ಇಲಾಖೆಯ ಅಧಿಕಾರಿಗಳಿಗೆ ಕೂಡ ಗೊತ್ತಿದೆ. ಮೊನ್ನೆ ಸುರೇಶ್ ಎನುವಂತಹ ಅರಣ್ಯ ವೀಕ್ಷಕರೊಬ್ಬರು ಬಹಿರ್ದೆಸೆಗೆ ಹೋದಂತಹ ಸಂದರ್ಭದಲ್ಲಿ ಅವನ ಕೈ ಮತ್ತು ತೊಡೆಯ ಭಾಗವನ್ನು ತಿಂದು ಅವನನ್ನು ಕೊಂದುಹಾಕಿತು. ಆ ನರಭಕ್ಷಕ ಹುಲಿಯನ್ನು ಬೋನಿನಲ್ಲಿ ಹಿಡಿದು ತಂದ ನಂತರ ಮತ್ತೆ ಅದನ್ನು ಎಲ್ಲಿಗೆ ಬಿಡಬೇಕೆನ್ನುವ ಬಗ್ಗೆ ಅರಣ್ಯ ಇಲಾಖೆಯ ಅಧಿಕಾರಿಗಳು ಕೂಡ ವಿಚಾರ ಮಾಡಬೇಕಾಗುತ್ತದೆ. ಏಕೆಂದರೆ ಆ ನರಭಕ್ಷಕ ಹುಲಿಯನ್ನು ಬೋನಿನಲ್ಲಿ ಹಿಡಿದು ತಂದು ಮತ್ತೆ ಕಾಡಿಗೆ ಬಿಡುವುದಕ್ಕಾಗಲಿ, ಪ್ರಾಣಿ ಸಂಗ್ರಹಾಲಯಕ್ಕೆ ಕೊಡುವುದಕ್ಕಾಗಲಿ ಆಗುವುದಿಲ್ಲ. ಏಕೆಂದರೆ, ಒಂದು ಸಲ ಯಾವುದಾದರೂ ಹುಲಿ ಒಮ್ಮೆ ಮನುಷ್ಯನನ್ನು ಕೊಂದು ತಿಂದ ನಂತರ ಅದು ನರಭಕ್ಷಕ ಹುಲಿ ಎನಿಸಿಕೊಳ್ಳುತ್ತದೆ. ಆದ್ದರಿಂದ ಆ ಹುಲಿಯನ್ನು ಹಿಡಿದ ಮೇಲೆ ಮತ್ತೆ ಅದನ್ನು ಕಾಡಿಗೆ ಬಿಡುವುದಕ್ಕಾಗಲಿ, ಪ್ರಾಣಿ ಸಂಗ್ರಹಾಲಯಕ್ಕೆ ಕೊಡುವುದಕ್ಕಾಗಲೀ ಆಗುವುದಿಲ್ಲವಾದ್ದರಿಂದ ಈ ಹಿನ್ನೆಲೆಯಲ್ಲಿ...

**ಶ್ರೀ ಬಿ.ರಮಾನಾಥ ರೈ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ನಾಣಯ್ಯನವರು ತಿಳಿಸಿರುವಂತೆ ಈ ಸಮಸ್ಯೆ ಉದ್ಭವವಾಗುತ್ತದೆ, ಆದ್ದರಿಂದ ನಾವು ಆ ಹುಲಿಯನ್ನು ಸಾಯಿಸುವುದಕ್ಕೆ ಆದೇಶ ಕೊಟ್ಟಿದ್ದೇವೆ. ಆದ್ದರಿಂದ ಅವರು ಆ ವಿಚಾರದಲ್ಲಿ ಆತಂಕ ಪಡುವ ಅಗತ್ಯವಿಲ್ಲ.

**ಶ್ರೀ ಯಂ.ಸಿ.ನಾಣಯ್ಯ:-** ನಾಗರಹೊಳೆ ಮತ್ತು ಬಂಡೀಪುರ ಈ ಎರಡೂ ಅರಣ್ಯ ಪ್ರದೇಶಗಳಲ್ಲಿರುವ ನರಭಕ್ಷಕ ಹುಲಿಗಳನ್ನು ಕೂಡ ಗುಂಡು ಹಾರಿಸಿ ಸಾಯಿಸುವುದಕ್ಕೆ ತಾವು ಆದೇಶ ನೀಡಬೇಕೆಂದು ನಾನು ವಿನಂತಿಸುತ್ತೇನೆ.

**ಶ್ರೀ ಬಿ.ರಮಾನಾಥ ರೈ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತಿಳಿಸಿರುವಂತಹ ವಿಚಾರದಲ್ಲಿನ ಗಂಭೀರತೆಯನ್ನು ಅರ್ಥ ಮಾಡಿಕೊಂಡು ಇಲಾಖೆ ಆ ಬಗ್ಗೆ ಅಗತ್ಯವಿರುವ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತದೆ. ಆ ಹುಲಿಗಳು ನರಭಕ್ಷಕ ಹುಲಿಗಳೆಂದು ಮಾನ್ಯ ನಾಣಯ್ಯನವರು ಅಭಿಪ್ರಾಯ ಪಟ್ಟಿದ್ದಾರೆ. ನಮಗಿರುವಂತಹ ಸಂಶಯವೆಂದರೆ,...

**ಶ್ರೀ ಯಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೇ, ಅದೊಂದೇ ಹುಲಿ ನರಭಕ್ಷಕ ಹುಲಿಯಾಗಿದ್ದರೆ ಒಳ್ಳೆಯದೇ ಆಯಿತು, ಬೇರೆ ಹುಲಿಗಳು ನರಭಕ್ಷಕ ಹುಲಿಗಳಲ್ಲದೆ ಇರಬಹುದು. ಆದರೆ ಬಂಡೀಪುರದಲ್ಲಿರುವಂತಹ ನರಭಕ್ಷಕ ಹುಲಿ ಈಗಾಗಲೇ 4 ಜನರನ್ನು ಕೊಂದಿರುವುದರಿಂದ ಅದು ನರಭಕ್ಷಕ ಹುಲಿ ಎಂಬುದು ಸಾಬೀತಾಯಿತು. ನಾಗರಹೊಳೆ ಅರಣ್ಯ ಪ್ರದೇಶ ಅಲ್ಲಿಂದ ಸುಮಾರು 60 ಕಿಲೋಮೀಟರ್ ದೂರದಲ್ಲಿರುವುದರಿಂದ ಅದೇ ನರಭಕ್ಷಕ ಹುಲಿ ನಾಗರಹೊಳೆ ಅರಣ್ಯ ಪ್ರದೇಶಕ್ಕೆ ಬಂದು ಮನುಷ್ಯರ ಮೇಲೆ ದಾಳಿ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದ ಅದು ಮತ್ತೊಂದು ಬೇರೆ ನರಭಕ್ಷಕ ಹುಲಿ. ಆದ್ದರಿಂದ ನಿಮ್ಮ ಇಲಾಖೆಯ ಅಧಿಕಾರಿಗಳಿಗೆ ಅವುಗಳ ಮೇಲೆ ಗುಂಡು ಹಾರಿಸಲು ಆದೇಶ ಕೊಡದಿದ್ದರೆ ಈಗಲಾದರೂ ಅವರಿಗೆ ಆದೇಶ ಕೊಡಿ, ಆ ಎರಡು ಹುಲಿಗಳನ್ನು ಕೂಡ you must shoot them dead. ಈ ಕೆಲಸವನ್ನು ಮಾನ್ಯ ಸಚಿವರು ಮಾಡಬೇಕಾಗುತ್ತದೆ.

**ಶ್ರೀ ಬಿ.ರಮಾನಾಥ ರೈ:-** ಸನ್ಮಾನ್ಯ ಸಭಾಪತಿಯವರೇ, ನಾವು ಆ ಕೆಲಸವನ್ನು ಮಾಡುತ್ತೇವೆ.

**ಸಭಾಪತಿಯವರು:-** ನರಭಕ್ಷಕ ಹುಲಿಯನ್ನು ಸಾಯಿಸಲು shoot at sight ಆದೇಶ ತಾವು ಮಾಡಿದ್ದೀರಿ. We will stop at this.

**ಶ್ರೀ ಯಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೇ, ನಾವು ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ಈ ಇಲಾಖೆಯನ್ನು ನಾನು ಸಹ ಸ್ವಲ್ಪ ದಿವಸ ನಿರ್ವಹಿಸಿದ್ದೇನೆ. ಆದರೆ ಈ ರೀತಿಯ ಪರಿಸ್ಥಿತಿ ಬಂದಿರಲಿಲ್ಲ,

ಬಂದಿದ್ದರೆ ತಕ್ಷಣವೇ ಆ ನರಭಕ್ಷಕ ಹುಲಿಯನ್ನು ಕಂಡಲ್ಲಿ ಗುಂಡು ಹಾರಿಸಿ ಸಾಯಿಸುವಂತೆ ನಾನು ಆದೇಶ ಮಾಡುತ್ತಿದ್ದೆ.

**ಶ್ರೀ ಬಿ.ರಮಾನಾಥ ರೈ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ನಾಣಯ್ಯನವರು ಅರಣ್ಯ ಸಚಿವರಾಗಿದ್ದಂತಹ ಸಂದರ್ಭದಲ್ಲಿ ಇದ್ದಂತಹ ಪ್ರಾಣಿಗಳ ಸಂಖ್ಯೆ, ಆ ಸಂದರ್ಭದಲ್ಲಿದ್ದಂತಹ ಅರಣ್ಯ ಸಂರಕ್ಷಣಾ ಕಾಯಿದೆ ಇಷ್ಟೊಂದು ಕಠಿಣವಾಗಿರಲಿಲ್ಲ. ಈಗ ಇರುವಂಥದ್ದು ವನ್ಯಜೀವಿ ಸಂರಕ್ಷಣೆ. ಇದರ ಬಗ್ಗೆಯು ಸಹ ನಾವು ಟೀಕೆಗಳನ್ನು ಎದುರಿಸಬೇಕಾಗಿದೆ. ಸುಮ್ಮನೆ ಇರಲಾರದೆ ಇವರು ಹೊಡೆದು ಹಾಕಿದರು, ಸಾಯಿಸಿದರು ಪ್ರಾಣಿಗಳ ಮೇಲೆ ಇವರಿಗೆ ಕರುಣೆ, ಕನಿಕರ ಇಲ್ಲ, ಇವರು ರಕ್ಕಸರು ಎಂದು ಪುನಃ ಸರ್ಕಾರದ ಮೇಲೆ ಆರೋಪ ಮಾಡುತ್ತಾರೆ.

**ಶ್ರೀ ಯಂ.ಸಿ.ನಾಣಯ್ಯ:–** ಆ ರೀತಿ ಯಾರು ಹೇಳುವುದು? ಈ ಸದನಕ್ಕಿಂತ ದೊಡ್ಡವರು ನಿಮ್ಮ activists ಅಲ್ಲ, ನಿಮ್ಮ ಹೈಕೋರ್ಟ್ ಅಲ್ಲ, ಸುಪ್ರೀಂ ಕೋರ್ಟ್ ಅಲ್ಲ, ಈ ಸದನ ತೀರ್ಮಾನ ತೆಗೆದುಕೊಂಡಾಗ ಅದನ್ನು ಮಾಡಿ.

**ಶ್ರೀ ಬಿ.ರಮಾನಾಥ ರೈ:–** ಒಂದು ವೇಳೆ ನಾವು ಪ್ರಾಣಿಗಳನ್ನು tranquilize ಮಾಡಿ ಹಿಡಿದರೂ ಸಹ ಅದನ್ನು ನಾವು ಹಿಡಿದು Zoo ನಲ್ಲಿ ಹಾಕುತ್ತೇವೆ, ರಕ್ಷಣೆಯ ಜಾಗದಲ್ಲಿ ಇಡುತ್ತೇವೆ ಅದು ಬೇರೆ ವಿಚಾರ. ತಾವು ಹಿರಿಯರಿದ್ದೀರಿ, ತಮ್ಮ ಸಲಹೆಗಳನ್ನು ಮಾರ್ಗದರ್ಶನವೆಂದು ತಿಳಿದುಕೊಂಡು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

## (ಊ) ಬೆಂಗಳೂರು ಅರಮನೆಯ ಆವರಣದಲ್ಲಿ ಪುಸ್ತಕೋತ್ಸವಕ್ಕೆ ಅವಕಾಶ ನೀಡದಿರುವ ಬಗ್ಗೆ.

**ಕ್ಯಾ॥ಗಣೇಶ್ ಕಾರ್ಣಿಕ್:(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಪುಸ್ತಕಗಳ ಪ್ರದರ್ಶನ, ಮಾರಾಟ ಎಂಬುದು ಅಕ್ಷರ ಸಂಸ್ಕೃತಿಯ ಒಂದು ಭಾಗ. ಆದರೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖಾ ಅಧಿಕಾರಿಗಳಿಗೆ ಇದು ಕೇವಲ ವ್ಯಾವಹಾರಿಕ ಚಟುವಟಿಕೆ ಎಂದು

ಭಾವಿಸಿರುವುದು ವಿಷಾದನೀಯ. ಪುಸ್ತಕ ಸಂಸ್ಕೃತಿಎಗೆ ಪ್ರೋತ್ಸಾಹ ನೀಡದೆ, ಬೆಂಗಳೂರು ಪುಸ್ತಕೋತ್ಸವಕ್ಕೆ ಈ ವರ್ಷ ಬೆಂಗಳೂರಿನ ಅರಮನೆ ಮೈದಾನದಲ್ಲಿ ಅವಕಾಶ ನೀಡದಿರುವುದು ಒಂದು ರೀತಿಯ ಸಾಂಸ್ಕೃತಿಕ ಮೌಢ್ಯವಾಗಿದ್ದು, ಸಾಂಸ್ಕೃತಿಕ ವಲಯದಲ್ಲಿ ತುಂಬಾ ನೋವನ್ನುಂಟು ಮಾಡಿರುತ್ತದೆ. ದೆಹಲಿಯ ಪ್ರಗತಿ ಮೈದಾನದಲ್ಲಿಯೇ 2 ವರ್ಷಕ್ಕೊಮ್ಮೆ ನಡೆಯುವ ರಾಷ್ಟ್ರೀಯ ಪುಸ್ತಕೋತ್ಸವವನ್ನು ನಂತರ ರಾಷ್ಟ್ರದ ಪ್ರಮುಖ ನಗರಗಳಲ್ಲಿ ಆಯೋಜಿಸಲಾಗುತ್ತಿದ್ದು ಲಕ್ಷಾಂತರ ಪುಸ್ತಕ ಪ್ರಿಯರಿಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಲೇಖಕರ ಪುಸ್ತಕಗಳನ್ನು ಒಂದೇ ಸ್ಥಳದಲ್ಲಿ ಖರೀದಿಸಲು ಅವಕಾಶ ಒದಗಿಸುತ್ತದೆ. ನವೆಂಬರ್ 29 ರಿಂದ ಬೆಂಗಳೂರಿನ ಅರಮನೆ ಮೈದಾನದಲ್ಲಿ 10 ದಿನಗಳ ಕಾಲ ನಡೆಯಬೇಕಾಗಿದ್ದ ಬೆಂಗಳೂರು ಪುಸ್ತಕೋತ್ಸವಕ್ಕೆ ಅವಕಾಶ ನೀಡಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ತಕರಾರು ಮಾಡಿದ್ದು, ಬದಲಿ ವ್ಯವಸ್ಥೆಗೂ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ. ಪುಸ್ತಕೋತ್ಸವವನ್ನು ಇತರೆ ವ್ಯಾಪಾರ ಚಟುವಟಿಕೆಗಳೊಂದಿಗೆ ಹೋಲಿಸದೆ ಪುಸ್ತಕಗಳ ಮಾರಾಟ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಬೆಳೆಸುವ ಪ್ರಮುಖವಾದ ಅಂಗವಾಗಿರುವುದರಿಂದ ಹಾಗೂ ಬೆಂಗಳೂರಿನ ಅರಮನೆ ಮೈದಾನದಲ್ಲಿ ಈಗಾಗಲೇ ಅನೇಕ ರೀತಿಯ ಚಟುವಟಿಕೆಗಳಿಗೆ ಅವಕಾಶ ನೀಡುತ್ತಿರುವ ಹಿನ್ನಲೆಯಲ್ಲಿ ಬೆಂಗಳೂರು ಅರಮನೆ ಮೈದಾನದಲ್ಲಿ ಬೆಂಗಳೂರು ಪುಸ್ತಕೋತ್ಸವಕ್ಕೆ ಅವಕಾಶ ನೀಡುವಂತೆ ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಬೆಂಗಳೂರು ಅರಮನೆಯ ಆವರಣದಲ್ಲಿ ಪುಸ್ತಕೋತ್ಸವಕ್ಕೆ ಅವಕಾಶ ಕೊಡುವುದಕ್ಕೆ ನಿಯಮಾವಳಿಯ ಪ್ರಕಾರ ಅವಕಾಶವಿಲ್ಲ. ಆದರೂ ಕೂಡ ಇದು ಒಂದು ವಿಶೇಷ ಪ್ರಕರಣ ಎಂದು ಹೇಳಿ 3 ದಿವಸಗಳ ಕಾಲ ಪುಸ್ತಕೋತ್ಸವ ನಡೆಸುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಅವರು 10 ದಿವಸಗಳ

ಕಾಲ ಕೇಳಿದ್ದರು, ಇದರಲ್ಲಿ 3 ದಿವಸ ಅವಕಾಶ ಮಾಡಿಕೊಟ್ಟಿದ್ದೇನೆ. ಆದುದರಿಂದ 3 ದಿವಸ ಪುಸ್ತಕೋತ್ಸವವನ್ನು ಮಾಡಬಹುದು.

**ಕ್ಯಾ||ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ಕೊಟ್ಟಿರುವಂತಹ ಮೂರು ದಿವಸಗಳ ಕಾಲಾವಕಾಶ ಸಾಕಾಗುವುದಿಲ್ಲ.

**ಶ್ರೀ ಸಿದ್ದರಾಮಯ್ಯ:–** ನೀವು ಗಮನ ಸೆಳೆದಿರುವಂಥದ್ದು ಬೆಂಗಳೂರು ಅರಮನೆಯ ಆವರಣದಲ್ಲಿ ಪುಸ್ತಕೋತ್ಸವಕ್ಕೆ ಅವಕಾಶ ಕೊಟ್ಟೇ ಇಲ್ಲ ಎನ್ನುವ ರೀತಿಯಲ್ಲಿ ಸರ್ಕಾರಕ್ಕೆ ಹೇಳಿದ್ದೀರಿ. ಮೂರು ದಿವಸಗಳ ಕಾಲ ವಿಶೇಷ ಪ್ರಕರಣ ಎಂದು ಅವಕಾಶ ಕೊಡಲಾಗಿದೆ. ಆದರೆ ನಿಯಮಾವಳಿಯ ಪ್ರಕಾರ ಕೊಡುವುದಕ್ಕೆ ಆಗುವುದಿಲ್ಲ. ಈ ವಿಷಯದ ಬಗ್ಗೆ ಸುಪ್ರೀಂ ಕೋರ್ಟಿನವರು monitor ಮಾಡುತ್ತಿದ್ದಾರೆ. ನಾವು ಮೂರು ದಿವಸಗಳ ಕಾಲ ಏನೇನು ಮಾಡುತ್ತೇವೆ ಎಂಬುದರ ಬಗ್ಗೆ ತಿಳಿಸಿದ್ದೇವೆ. ಆದುದರಿಂದ ನಾನೇ ಇದೊಂದು ವಿಶೇಷ ಪ್ರಕರಣ ಎಂದು ಹೇಳಿ ಮೂರು ದಿವಸಗಳ ಕಾಲ ಪುಸ್ತಕೋತ್ಸವವನ್ನು ಮಾಡಲಿ ಆದೇಶ ಮಾಡಿದ್ದೇನೆ.

## (ಋ) ಉಡುಪಿ ತಾಲ್ಲೂಕಿನ ಕಡೆಕಾರ್ ಗ್ರಾಮದಲ್ಲಿ ದಲಿತ ವಿದ್ಯಾರ್ಥಿ ಕುಮಾರಿ ರಂಜಿತಾಳನ್ನು ವಿಕೃತಕಾಮಿ ಕೊಲೆ ಮಾಡಿರುವ ಬಗ್ಗೆ.

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದೊಂದು ನಾಗರೀಕ ಸಮಾಜಕ್ಕೆ ನೋವುಂಟು ಮಾಡುವ ಸುದ್ದಿ. ದಿನಾಂಕ:27/11/2013ರಂದು ಉಡುಪಿ ಜಿಲ್ಲೆಯ ಉಡುಪಿ ತಾಲ್ಲೂಕಿನ ಕಡೆಕಾರ್ ಎಂಬ ಗ್ರಾಮದಲ್ಲಿ ದಲಿತ ಕುಟುಂಬದ ವಿದ್ಯಾರ್ಥಿನಿಯಾದ ಕುಮಾರಿ ರಂಜಿತಾಳನ್ನು ವಿಕೃತಕಾಮಿಯೊಬ್ಬ ಹಾಡುಹಗಲಲ್ಲೇ ಚೂರಿಯಿಂದ ಇರಿದು ಕೊಲೆ ಮಾಡಿದ ಹೃದಯ ವಿದ್ರಾಹಕ ಘಟನೆ ನಡೆದಿದೆ. ಪರಿಶಿಷ್ಟ ಜನಾಂಗದ ಕಡು ಬಡವರಾದ ಶ್ರೀಮತಿ ಮತ್ತು ಶ್ರೀ ಶೇಖರ ದಂಪತಿಗಳ ಮಗಳಾದ ಸುಮಾರು 19 ವರ್ಷ ಪ್ರಾಯದ ಕುಮಾರಿ ರಂಜಿತ ಉಡುಪಿಯ ಅಜ್ಜರಕಾಡಿನ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ದ್ವಿತೀಯ ವರ್ಷದ ಬಿ.ಎ. ಓದುತ್ತಿದ್ದಳು.

ವಿದ್ಯಾರ್ಥಿಯ ಕೊಲೆ ಆರೋಪಿ ಯೋಗೀಶನನ್ನು ಬಂಧಿಸುವಂತೆ ಜಿಲ್ಲೆಯಾದ್ಯಂತ ನಾನಾ ಸಂಘಟನೆಗಳು ಸರ್ಕಾರವನ್ನು ಒತ್ತಾಯಿಸಿ ಪ್ರತಿಭಟನೆ ಮಾಡುತ್ತಿದ್ದಾರೆ. ನಾಪತ್ತೆಯಾಗಿರುವ ಕ್ರೂರಿ ಆರೋಪಿ ಈ ಹಿಂದೆಯೂ ಕುಮಾರಿ ರಂಜಿತಳಿಗೆ ಕಿರುಕುಳ ನೀಡಿ ಸನಿಹದ ಮಲ್ಪೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಆ ಸಮಯದಲ್ಲಿ ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದರೆ ಪ್ರಾಣಹಾನಿ ತಪ್ಪಿಸಬಹುದಾಗಿತ್ತು ಎಂದು ಸಾರ್ವಜನಿಕರ ಆರೋಪವಿದೆ. ವಿದ್ಯಾರ್ಥಿ ಕುಮಾರಿ ರಂಜಿತಾಳ ಕೊಲೆಯಿಂದಾಗಿ ಮತ್ತೊಮ್ಮೆ ಕರಾವಳಿ ಜಿಲ್ಲೆಯು ತಲ್ಲಣಗೊಂಡಿದ್ದು ಕಡು ಬಡವರಾದ ಕುಮಾರಿ ರಂಜಿತಾಳ ಹೆತ್ತವರು ಕಂಗಾಲಾಗಿದ್ದಾರೆ. ಸದ್ಯದ ಸ್ಥಿತಿಯಲ್ಲಿ ಅವರು ಕೂಲಿನಾಲಿ ಮಾಡಿ ಬದುಕುವುದು ಕಷ್ಟಕರ ಪರಿಸ್ಥಿತಿಯಾಗಿದೆ. ದಲಿತ ಸಮುದಾಯದ ಕುಮಾರಿ ರಂಜಿತಾಳ ಕುಟುಂಬಕ್ಕೆ ಸರ್ಕಾರ ಕೂಡಲೆ ಗರಿಷ್ಠ ಆರ್ಥಿಕ ನೆರವು ನೀಡಿ, ಸದರಿ ಕುಟುಂಬಕ್ಕೆ ಅಗತ್ಯ ಪೊಲೀಸ್ ರಕ್ಷಣೆಯನ್ನು ನೀಡಬೇಕೆಂದು ಈ ಮೂಲಕ ಸರ್ಕಾರವನ್ನು ಆಗ್ರಹಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರಿಂದ ಇದಕ್ಕೆ ಉತ್ತರ ಕೊಡಿಸಲಾಗುವುದು.

## 3. ಪ್ರಕಟಣೆ

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ (104)ರ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ:03/12/2013ರಂದು ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯಗಳ ತಿದ್ದುಪಡಿ ವಿಧೇಯಕ 2013ನ್ನು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

## 4. ಸಭೆಯ ಮುಂದಿಡಾಗುವ ಕಾಗದ ಪತ್ರಗಳು

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ 2012–13ನೇ ಸಾಲಿನ ಧನವಿನಿಯೋಗ ಲೆಕ್ಕಗಳು ಮತ್ತು ಹಣಕಾಸು ಲೆಕ್ಕಗಳನ್ನು (ಭಾಗ–1 ಮತ್ತು 2) ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್(ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವಂತಹ ಎರಡು ವಿಷಯಗಳಿಗೆ ಉತ್ತರ ಬಂದಿದೆ, ಅದನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:–** ಹಾಗಾದರೆ ವಿಷಯ ಹೇಳಿ lay ಮಾಡಿ.

## 5. ಸಚಿವರ ಹೇಳಿಕೆ

### (ಅ) ಮಂಗಳೂರಿನ ರಾಮಕೃಷ್ಣ ಮಠದ ವಸತಿ ನಿಲಯದಲ್ಲಿದ್ದ ಬಾಲಕ ಚಿರಾಗ್ ನಾಪತ್ತೆಯಾಗಿರುವ ಕುರಿತು–

**ಶ್ರೀ ಎಸ್.ಆರ್.ಪಾಟೀಲ್(ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವಂತಹ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ರಾಮಕೃಷ್ಣ ಮಠದ ವಸತಿ ನಿಲಯದಲ್ಲಿ ವಾಸಿಸುತ್ತಿದ್ದ ಶಿವಮೊಗ್ಗ ಜಿಲ್ಲೆಯ 13 ವರ್ಷದ ಬಾಲಕ ಚಿರಾಗ್ ಕಳೆದ 6 ದಿನಗಳಿಂದ ನಾಪತ್ತೆ ಆಗಿರುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ಆ ವಿಷಯಕ್ಕೆ ಸಂಬಂಧಪಟ್ಟಂತೆ ಗೃಹ ಸಚಿವರು ನೀಡಿರುವ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ದಿನಾಂಕ:19–11–2013ರಂದು ಶ್ರೀಮತಿ ಇಂದಿರಾ ಕೋಂ. ದಿ॥ ರಾಜೇಶ್, ಶಿವಮೊಗ್ಗ ಜಿಲ್ಲೆ ಇವರು ತಮ್ಮ ಮಗ ಚಿರಾಗ್ 13 ವರ್ಷ ಕಾಣೆಯಾದ ಬಗ್ಗೆ ಮಂಗಳೂರು ದಕ್ಷಿಣ ಪೊಲೀಸ್ ಠಾಣೆಗೆ ಬಂದು ನೀಡಿರುವ ದೂರಿನ ಸಂಬಂಧ ಮೊಕದ್ದಮೆ ಸಂ:254/2013 ಕಲಂನಡಿ

ಹುಡುಗ ಕಾಣೆಯಾದ ಬಗ್ಗೆ ಪ್ರಕರಣ ದಾಖಲಾಗಿರುತ್ತದೆ. ಶ್ರೀಮತಿ ಇಂದಿರಾರವರ ಮಗ ಚಿರಾಗ್ ಮಂಗಳೂರಿನ ರಾಮಕೃಷ್ಣ ಆಶ್ರಮದ ವಸತಿ ನಿಲಯದಲ್ಲಿದ್ದು, ಕಾಸ್ಸಿಯಾ ಪ್ರೌಢಶಾಲೆಯಲ್ಲಿ 8ನೇ ತರಗತಿಯಲ್ಲಿ ಓದುತ್ತಿದ್ದನು. ತನಿಖಾಧಿಕಾರಿ ಸದರಿ ಪ್ರಕರಣ ದಾಖಲಾದ ಬಗ್ಗೆ ರಾಜ್ಯದ ಎಲ್ಲ ಪೊಲೀಸ್ ಠಾಣೆಗಳಿಗೆ ರೇಡಿಯೋ ಸಂದೇಶ ಪೊಲೀಸ್ ಬ್ಲಾಗ್, ಪೊಲೀಸ್ ಐಟಿಯಲ್ಲಿ ಲುಕ್‌ಔಟ್ (Lookout) ನೋಟೀಸ್ ಮಾಡಿ ದಿನ ಪತ್ರಿಕೆಗಳು, ಟಿ.ವಿ. ಚಾನೆಲ್‌ಗಳು, ಬಸ್ ನಿಲ್ದಾಣ ಮುಂತಾದ ಕಡೆಗಳಲ್ಲಿ ಕಾಣೆಯಾದ ಹುಡುಗನ ಭಾವಚಿತ್ರಗಳನ್ನು ಅಂಟಿಸಿ ಇರುವಿಕೆ ಬಗ್ಗೆ ಸಾರ್ವಜನಿಕರಿಂದ ಮಾಹಿತಿ ಕೋರಲಾಗಿದೆ. ಮುಂದುವರೆದು ತನಿಖಾಧಿಕಾರಿ ಆಶ್ರಮದ ವಾರ್ಡನ್ ಬ್ರಹ್ಮಚಾರಿ ಅಪ್ಪುಸ್ವಾಮಿ ಹಾಗೂ ರಾಮಕೃಷ್ಣ ಆಶ್ರಮಕ್ಕೆ ಭೇಟಿ ನೀಡಿ ಚಿರಾಗ್‌ನ ಕೆಲವು ಸ್ನೇಹಿತರನ್ನು ವಿಚಾರಿಸಲಾಗಿ ಇವರ ಚಿರಾಗ್ ಆಶ್ರಮದಲ್ಲಿ ಮಾಡಿದ ತಪ್ಪಿನಿಂದ ಬೇಸರಗೊಂಡು ಅಥವ ತಾಯಿಯ ನೆನಪಾಗಿಯೋ ಆಶ್ರಮ ಬಿಟ್ಟು ತೆರಳಿರಬಹುದು ಎಂಬುದಾಗಿ ತಿಳಿಸಿರುತ್ತಾರೆ. ಹಾಗೂ ಚಿರಾಗ್ ಕುಮಾರ್‌ನ ಪತ್ತೆ ಬಗ್ಗೆ ಸಿಬ್ಬಂದಿಯವರನ್ನು ವಿಶೇಷ ಕರ್ತವ್ಯಕ್ಕೆ ನೇಮಿಸಿ, ಸಾರ್ವಜನಿಕರಲ್ಲಿ ಭಾವಚಿತ್ರ ತೋರಿಸಿ ಪತ್ತೆಯ ಬಗ್ಗೆ ಮಾಹಿತಿ ಸಂಗ್ರಹಿಸಿದ್ದು ಮತ್ತು ಮಂಗಳೂರು ನಗರ ನಿಯಂತ್ರಣ ಕೊಠಡಿಯಲ್ಲಿರುವ ಸಿಸಿ ಕ್ಯಾಮೆರಾದಲ್ಲಿನ ಫೂಟೇಜ್‌ನ್ನು (Footage) ಕೂಡಾ ಪರಿಶೀಲಿಸಿದ್ದು ಕಾಣೆಯಾದ ಹುಡುಗನ ಬಗ್ಗೆ ಯಾವುದೇ ಮಾಹಿತಿ ದೊರೆತಿರುವುದಿಲ್ಲ.

ತನಿಖಾದಿಕಾರಿಯವರು ಮಂಗಳೂರು ನಗರದ ಕಾಶಿಯಾ ಪ್ರೌಢ ಶಾಲೆಗೆ ತೆರಳಿ, ಮುಖ್ಯಸ್ಥರಾದ ಶ್ರೀಮತಿ ಗ್ರೇಸಿ ಮರಿಯಾ ಡಿ'ಸೋಜಾ ಹಾಗೂ ತರಗತಿಯ ಅಧ್ಯಾಪಕರಾದ ಶ್ರೀ ಎವರೆಸ್ಟ್ ಕ್ರಾಸ್ತಾರವರನ್ನು ಭೇಟಿಯಾಗಿ ಚಿರಾಗ್ ಕುಮಾರ್ ಬಗ್ಗೆ ವಿಚಾರಿಸಲಾಗಿ ಇವರು ಈತ 8ನೇ ತರಗತಿಯಲ್ಲಿ ಕಲಿಯುತ್ತಿದ್ದು, ರಾಮಕೃಷ್ಣ ಆಶ್ರಮದಿಂದ ಬರುತ್ತಿದ್ದು, ದಿನಾಂಕ:16–11–2013 ರಂದು ಶಾಲೆಗೆ ಬಂದಿದ್ದು, ದಿನಾಂಕ:18–11–2013 ರಂದು ಈತನು ಶಾಲೆಗೆ ಬರಲಿಲ್ಲ ಮತ್ತು ಅದೇ ದಿನ ನಾಪತ್ತೆಯಾಗಿರುತ್ತಾನೆ

ಎಂಬ ವಿಚಾರವನ್ನು ತಿಳಿದುಕೊಂಡಿರುವುದಾಗಿ ತಿಳಿಸಿರುತ್ತಾರೆ. ಕಾಣೆಯಾದ ಹುಡುಗನ ಪತ್ತೆಯ ಸಲುವಾಗಿ ಪೊಲೀಸ್ ಸಿಬ್ಬಂದಿಗಳ ವಿಶೇಷ ತಂಡವನ್ನು ಕಳುಹಿಸಿಕೊಟ್ಟಿದ್ದು, ತನಿಖಾಧಿಕಾರಿಗಳು ಮತ್ತೊಮ್ಮೆ ರಾಮಕೃಷ್ಣ ಆಶ್ರಮಕ್ಕೆ ಭೇಟಿ ನೀಡಿ, ಅಲ್ಲಿನ ಅಧ್ಯಕ್ಷರಾದ ಸ್ವಾಮಿ ಜಿತಕಾಮಾನಂದಜೀ ರವರನ್ನು ಭೇಟಿ ಮಾಡಿ ಇವರ ಹೇಳಿಕೆ ಪಡೆದಿದ್ದು ಮತ್ತು ಇವರ ಸಮಕ್ಷಮ ಶ್ರೀಶ ಭಾರ್ಗವ ಎಂಬ ವಿದ್ಯಾರ್ಥಿಯನ್ನು ಚಿರಾಗ್ ಕುಮಾರ್‌ನ ಕಾಣೆಯ ಬಗ್ಗೆ ವಿಚಾರಿಸಲಾಯಿತು. ಅಲ್ಲದೇ ಎಲ್ಲಾ ವಿದ್ಯುನ್ಮಾನ ಚಾನಲ್‌ಗಳಿಗೆ ಮಾಹಿತಿ ನೀಡಿ, ಪೊಲೀಸ್ ಪ್ರಕಟಣೆಯನ್ನು ನೀಡಿ ಬಾಲಕನ ಪತ್ತೆಗೆ ಪ್ರಯತ್ನಿಸಲಾಗಿದೆ. ಆದರೆ ಇದುವರೆಗಿನ ಪತ್ತೆಕಾರ್ಯದಲ್ಲಿ ಕಾಣೆಯಾಗಿರುವ ಬಾಲಕನ ಪತ್ತೆಯ ಬಗ್ಗೆ ಯಾವುದೇ ಸುಳಿವು ದೊರೆತಿರುವುದಿಲ್ಲ. ಬಾಲಕನ ಪತ್ತೆ ಕಾರ್ಯವು ಪ್ರಗತಿಯಲ್ಲಿದೆ.

**ಸಭಾಪತಿಯವರು:–** ಮಂಡಿಸಲಾಯಿತು.

**(ಆ) ಬಂಡೀಪುರ ಹಾಗೂ ನಾಗರಹೊಳೆ ಅಭಯಾರಣ್ಯದಲ್ಲಿ ನರಭಕ್ಷಕ ಹುಲಿ ದಾಳಿ ಮಾಡಿ ಜನರನ್ನು ಕೊಂದಿರುವ ಬಗ್ಗೆ–**

**ಶ್ರೀ ಎಸ್.ಆರ್.ಪಾಟೀಲ್(ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಂದೇಶ್ ನಾಗರಾಜ್ ರವರು ಬಂಡೀಪುರ ಹಾಗೂ ನಾಗರಹೊಳೆ ಹುಲಿ ಮೀಸಲು ಪ್ರದೇಶದಲ್ಲಿ ನರಭಕ್ಷಕ ಹುಲಿಯು ದಾಳಿ ಮಾಡಿ ಜನರನ್ನು ಕೊಂದು ಹಾಕಿರುವ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವಂತಹ ವಿಷಯಕ್ಕೆ ಸಂಬಂಧಪಟ್ಟಂತೆ ಅರಣ್ಯ ಸಚಿವರು ನೀಡಿರುವ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಬಂಡೀಪುರದ ಘಟನೆ**

ದಿನಾಂಕ 27/11/2013ರಂದು ಹೆಚ್.ಡಿ.ಕೋಟೆ ತಾಲೂಕು ನೇಡಾಡಿ ಗ್ರಾಮದಲ್ಲಿ ಶ್ರೀ ಬಸವರಾಜು (50ವರ್ಷ) ಇವರು ತಮ್ಮ ಜಮೀನಿನಿಂದ 300 ಮೀಟರ್ ದೂರದಲ್ಲಿರುವ ಮೊಲಿಯೂರು ಅರಣ್ಯ ವಲಯದಲ್ಲಿ

ಅವರ ಜಾನುವಾರುಗಳನ್ನು ಮೇಯಿಸುವ ವೇಳೆ ಹುಲಿಯೊಂದು ದಾಳಿ ಮಾಡಿ ಅವರನ್ನು ಕೊಂದು ಮೃತದೇಹವನ್ನು ತಿಂದು ಹಾಕಿರುತ್ತದೆ.

ದಿನಾಂಕ 29/11/2013ರಂದು ಇದೇ ಹುಲಿಯು ಇದೇ ಜಾಗದಲ್ಲಿ ಹೆಚ್.ಡಿ. ಕೋಟೆ ತಾಲ್ಲೂಕು ಸೀಗೋಡು ಹಾಡಿಯ ವಾಸಿ ಶ್ರೀ ಚೆಲುವ (40ವರ್ಷ) ಇವರು ಜಾನುವಾರು ಮೇಯಿಸುವ ವೇಳೆ ಅವರ ಮೇಲೆ ದಾಳಿ ನಡೆಸಿ ಕೊಂದು ಹಾಕಿದ್ದು ಶ್ರೀ ಚಿಕ್ಕ ಎನ್ನುವ ಮತ್ತೊಬ್ಬ ಗ್ರಾಮಸ್ಥರನ್ನು ಗಾಯಗೊಳಿಸಿರುತ್ತದೆ. ಸದರಿ ಪ್ರದೇಶವು ಮೊಲಿಯೂರು ಅರಣ್ಯ ವಲಯದ ಗಡಿಯಿಂದ ಸುಮಾರು 100 ಮೀಟರ್ ದೂರದಲ್ಲಿದ್ದು, ಶ್ರೀ ಬಸವರಾಜು ಇವರನ್ನು ಕೊಂದು ಹಾಕಿದ ಜಾಗದಿಂದ ಸುಮಾರು 4 ಕಿ.ಮೀ. ಅಂತರದಲ್ಲಿರುತ್ತದೆ.

ಅರಣ್ಯ ಇಲಾಖೆಯು ಕೂಡಲೇ ಹುಲಿಯನ್ನು ಹಿಡಿಯಲು ಕ್ಷಿಪ್ರ ಕಾರ್ಯಾಚರಣೆ ಕೈಗೊಂಡಿದ್ದು, ಕುಣ್‌ಕಿ ಆನೆಗಳಾದ ರೋಹಿತ್, ಕಾಂತಿ, ಲಕ್ಷ್ಮೀ ಹಾಗೂ ಜಯಪ್ರಕಾಶ್‌ಗಳನ್ನು ಬಂಡೀಪುರದಿಂದ ಹಾಗೂ ಅಭಿಮನ್ಯು ಆನೆಯನ್ನು ತಿತಿಮಥಿ ಆನೆ ಶಿಬಿರದಿಂದ ಕರೆತಂದು ಕಾರ್ಯಾಚರಣೆಯಲ್ಲಿ ತೊಡಗಿಸಿರುತ್ತದೆ.

ಪಶುವೈದ್ಯರಾದ ಶ್ರೀ ನಾಗರಾಜ್ ಮತ್ತು ತಂಡ, ಅರವಳಿಕೆ ಶೂಟರ್, ಶ್ರೀ ಅಕ್ರಮ್, ಅರಣ್ಯ ಸಂರಕ್ಷಣಾಧಿಕಾರಿ, ಬಂಡೀಪುರ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹೆಡಿಯಾಲ, ವಲಯ ಅರಣ್ಯಾಧಿಕಾರಿ, ಮೊಲಿಯೂರು ಇವರು 25 ಜನ ಸಿಬ್ಬಂದಿ, ಹಾಗೂ 50 ಜನ ವಿಶೇಷ ಹುಲಿ ಸಂರಕ್ಷಣಾ ಪಡೆ ಸಿಬ್ಬಂದಿ ಹಾಗೂ ತಜ್ಞ ಹುಲಿ ಶೋಧಕರ ಜೊತೆ ಕಾರ್ಯಾಚರಣೆಯನ್ನು ದಿನಾಂಕ 30/11/2013ರ ಬೆಳಿಗ್ಗೆ 6-00 ಘಂಟೆಯಿಂದ ಪ್ರಾರಂಭಿಸಿರುತ್ತಾರೆ.

ದಿನಾಂಕ 30/11/2013ರಂದು ಸದರಿ ಹುಲಿಯನ್ನು ಪತ್ತೆ ಹಚ್ಚಿ 3 ಬಾರಿ ಅರವಳಿಕೆ ಪ್ರಯೋಗಿಸಲಾಗಿದೆ. ಆದರೆ ಲಾಂಟಾನಾ ದಟ್ಟ ಪೊದೆಗಳಿಂದ ಕೂಡಿದ ಪ್ರದೇಶವಾದ್ದರಿಂದ ಹಿಡಿಯಲು ಅಸಾಧ್ಯವಾದ್ದರಿಂದ

ರಾತ್ರಿಯಿಡೀ ಕಾಯಲಾಯಿತು. ಮರುದಿನ ಬೆಳಿಗ್ಗೆ 2 ಬೋನುಗಳನ್ನು ಇಡಲಾಗಿದ್ದರೂ ಹುಲಿಯು ಬೋನಿನ ಒಳಗೆ ಬಂದಿರುವುದಿಲ್ಲ.

ದಿನಾಂಕ 01/12/2013ರಂದು ಹೆಚ್ಚುವರಿಯಾಗಿ ಬನ್ನೇರುಘಟ್ಟದಿಂದ ಡಾ: ಸನತ್ ಇವರನ್ನು ಕರೆಸಿಕೊಳ್ಳಲಾಗಿದ್ದು, ಸದರಿ ಶೋಧನಾ ತಂಡದ ಬಲವನ್ನು ಮತ್ತಷ್ಟು ಹೆಚ್ಚಿಸಲಾಗಿದೆ. ಹುಲಿಯು ದಾಳಿ ಮಾಡಿದ ಸ್ಥಳದಿಂದ ಈಗ 10 ಕಿ.ಮೀ. ದೂರ ಕ್ರಮಿಸಿದ್ದು, ತಂಡವು ನಿರಂತರವಾಗಿ ಅದರ ಮೇಲೆ ನಿಗಾ ಇಟ್ಟಿರುತ್ತದೆ.

ಪ್ರಾಥಮಿಕ ಹಂತದಲ್ಲಿ ₹ 1.00 ಲಕ್ಷ ರೂಪಾಯಿಗಳ ಪರಿಹಾರವನ್ನು ಕ್ರಮವಾಗಿ ದಿನಾಂಕ 27/11/2013ರಂದು ಹಾಗೂ 29/11/2013ರಂದು ಮೃತರ ವಾರಸುದಾರರಿಗೆ ವಿತರಿಸಲಾಗಿದ್ದು, ಉಳಿದ ಪರಿಹಾರ ಮೊತ್ತ ₹ 4.00/– ಲಕ್ಷಗಳನ್ನು ಶವ ಪರೀಕ್ಷಾ ವರದಿ ಹಾಗೂ ಪೊಲೀಸ್ ವರದಿ ಬಂದ ತಕ್ಷಣವೇ ವಿತರಿಸಲಾಗುವುದು.

ಇನ್ನು ಗಾಯಗೊಂಡ ಶ್ರೀ ಚಿಕ್ಕ ಇವರಿಗೆ ತಕ್ಷಣವೇ ₹ 5000/–ಗಳ ಪರಿಹಾರ ನೀಡಿದ್ದು ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆಗೆ ಏರ್ಪಾಡು ಮಾಡಲಾಗಿದೆ. ಸದರಿಯವರ ಗಾಯದ ತೀವ್ರತೆಯನ್ನು ಪರಿಗಣಿಸಿ ಶಾಶ್ವತ ಅಂಗವಿಕಲರಾದಲ್ಲಿ ₹ 50,000/–ಗಳ ಪರಿಹಾರ ಹಾಗೂ ವೈದ್ಯಕೀಯ ವೆಚ್ಚದ ಖರ್ಚನ್ನು ಪಾವತಿಸಲಾಗುವುದು ಅಥವಾ ಕೇವಲ ಗಾಯವಾಗಿದ್ದಲ್ಲಿ ₹ 20,000/–ಗಳವರೆಗೆ ಗರಿಷ್ಟ ಪರಿಹಾರ ನೀಡಲಾಗುವುದು. ದಿನಾಂಕ 30/11/2013ರಂದು ಸ್ಥಳೀಯ ಶಾಸಕರಾದ ಶ್ರೀ ಚಿಕ್ಕಮಾಧು ಇವರು ಸ್ಥಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಘಟನೆಯ ಬಗ್ಗೆ ಹಾಗೂ ಹುಲಿಯನ್ನು ಹಿಡಿಯಲು ಇಲಾಖೆಯು ಮಾಡಿಕೊಂಡಿರುವ ವ್ಯವಸ್ಥೆ ಬಗ್ಗೆ ಅಧಿಕಾರಿಗಳು ವಿವರಿಸಿರುತ್ತಾರೆ.

**ನಾಗರಹೊಳೆ ಘಟನೆ:**

ಇದೇ ರೀತಿ ದಿನಾಂಕ: 29–11–2013ರಂದು ನಾಗರಹೊಳೆ ವಲಯದ ಬಳ್ಳೆ ಮೂರ್ಕಲ್ ಕ್ಯಾಂಪ್ ಕಲ್ಲಬೇಟೆ ಶಿಬಿರದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಶ್ರೀ ಸುರೇಶ್, ಅರಣ್ಯ ವೀಕ್ಷಕ ಇವರು ಸಾಯಂಕಾಲ 5.00 ಗಂಟೆಗೆ ಬಹಿರ್ದೆಸೆಗೆ ಹೋದಾಗ ಸದರಿಯವರನ್ನು ಹುಲಿಯು ಕೊಂದು

ಹಾಕಿ ಅವರ ಶರೀರದ ಅರ್ಧ ಭಾಗವನ್ನು ತಿಂದು ಹಾಕಿರುವುದು ಕಂಡುಬಬಂದಿರುತ್ತದೆ. ಸದರಿಯವರ ಶವವನ್ನು ವಾರಸುದಾರರಿಗೆ ಒಪ್ಪಿಸಿ ಸರ್ಕಾರದಿಂದ ಶವ ಸಂಸ್ಕಾರಕ್ಕೆ ₹ 5,000/- ಗಳನ್ನು, ₹ 5.00/- ಲಕ್ಷಗಳ ಪರಿಹಾರವನ್ನು ನೀಡಲಾಗಿದೆ. ಸದರಿ ನೌಕರರು ಇಲಾಖೆಯಲ್ಲಿ ಈಗ ಒಂದೂವರೆ ವರ್ಷಗಳ ಸೇವೆ ಸಲ್ಲಿಸಿರುವುದರಿಂದ ಸದರಿಯವರಿಗೆ ನಿಯಮಾನುಸಾರ ಲಭ್ಯವಾಗುವ ಗಳಿಕೆ ರಜೆ ನಗಧೀಕರಣ, ಓರಿಯಂಟಲ್ ವಿಮಾ ಮೊತ್ತ ಹಾಗೂ ಗ್ರಾಚ್ಯೂಟಿಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು.

ಅಲ್ಲದೇ, ಮುಂಜಾಗ್ರತ ಕ್ರಮವಾಗಿ ಸಾರ್ವಜನಿಕರು ಏಕಾಂಗಿಯಾಗಿ ಅರಣ್ಯ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಓಡಾಡದಂತೆ ಮಾಧ್ಯಮಗಳ ಮೂಲಕ ವಿನಂತಿಸಲಾಗಿದೆ. ಹುಲಿ ಹಿಡಿಯುವ ಕಾರ್ಯಾಚರಣೆಯು ಸರ್ವ ಪ್ರಯತ್ನಗಳೊಡನೆ ಮುಂದುವರೆದಿದ್ದು, ಮೇಲ್ಕಂಡ ಪ್ರದೇಶಗಳಲ್ಲಿ ಈಗಾಗಲೇ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ.

**ಸಭಾಪತಿಯವರು:-** ಮಂಡಿಸಲಾಯಿತು.

## 6. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಕಾರ್ಯದರ್ಶಿ:-** ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಇಡುತ್ತಿದ್ದೇನೆ.

01. ಕರ್ನಾಟಕ ಧನವಿನಿಯೋಗ (ಸಂಖ್ಯೆ 4) ವಿಧೇಯಕ, 2013
02. ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ವಿಧೇಯಕ, 2013
03. ಕರ್ನಾಟಕ ರಾಜ್ಯ ಮಹಿಳಾ ಆಯೋಗ (ತಿದ್ದುಪಡಿ) ವಿಧೇಯಕ, 2013
04. ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) (ತಿದ್ದುಪಡಿ) ವಿಧೇಯಕ, 2013

05. ಕರ್ನಾಟಕ ಸಿವಿಲ್ ಸೇವೆಗಳು (ಜಲ ಸಂಪನ್ಮೂಲ ಸೇವೆ) (ಸಹಾಯ ಇಂಜಿನಿಯರುಗಳ ಮತ್ತು ಕಿರಿಯ ಇಂಜಿನಿಯರುಗಳ ವಿಶೇಷ ನೇಮಕಾತಿ) ವಿಧೇಯಕ, 2013

06. ಕರ್ನಾಟಕ ಭೂ ಕಂದಾಯ (ತಿದ್ದುಪಡಿ), ವಿಧೇಯಕ, 2013

07. ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2012.

## 7. ಹಕ್ಕುಚ್ಯುತಿ ಪ್ರಸ್ತಾವ

### ಸದನದಲ್ಲಿ ಅನುಮೋದಿಸಲ್ಪಟ್ಟ ಮೀಸಲಾತಿಗೆ ತದ್ವಿರುದ್ಧವಾಗಿ ರಾಜ್ಯಪತ್ರದಲ್ಲಿ ಪ್ರಕಟಿಸಿ ಸದನ ಹಾಗೂ ಸದಸ್ಯರ ಹಕ್ಕಿಗೆ ಚ್ಯುತಿ ತಂದಿರುವ ಕುರಿತು–

**ಸಭಾಪತಿಯವರು:–** ಮಾನ್ಯ ಶ್ರೀ ಬಿ.ಜೆ.ಪುಟ್ಟಸ್ವಾಮಿಯವರು ಒಂದು privilege ಸಂಗತಿಯನ್ನು ಕೊಟ್ಟಿದ್ದಾರೆ, ಅದನ್ನು ಎರಡು ಮೂರು ನಿಮಿಷಗಳಲ್ಲಿ ಹೇಳಿ ಮುಗಿಸಬೇಕು. ನಂತರ ನಾನು ತೀರ್ಮಾನಕ್ಕೆ ಬರುತ್ತೇನೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಮಗೆ ಧನ್ಯವಾದಗಳು ಸರ್ಕಾರಿ ಸಂಸ್ಥೆಗಳಲ್ಲಿ ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಯಾರು ಪ್ರಾತಿನಿಧ್ಯದಿಂದ ವಂಚಿತರಾಗಿರುತ್ತಾರೋ ಅಂಥವರೆಲ್ಲರಿಗೂ ಅವಕಾಶವನ್ನು ಕೊಡಬೇಕು. ಸುಮಾರು 60 ವರ್ಷಗಳಿಂದ ಸಹಕಾರ ಇಲಾಖೆಯಲ್ಲಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇದುವರೆವಿಗೂ ಮೀಸಲಾತಿ ಇರಲಿಲ್ಲ. 1997ರಲ್ಲಿ ಕೇಂದ್ರ ಸರ್ಕಾರದಲ್ಲಿ ಒಂದು ಅಮೆಂಡ್‌ಮೆಂಟ್ ಬಂದಮೇಲೆ ಪ್ರಥಮ ಬಾರಿಗೆ ಎಸ್‌ಸಿ/ಎಸ್‌ಟಿಗೆ ಮತ್ತು ಮಹಿಳೆಯರಿಗೆ ಮೀಸಲಾತಿಯನ್ನು ಕೊಟ್ಟರು. ಆದರೆ ಹಿಂದುಳಿದ ವರ್ಗದವರಿಗೆ ಬಿಟ್ಟು ಹೋಗಿತ್ತು. ಅದನ್ನು ನಾನು ಸಹಕಾರ ಸಚಿವನಾಗಿದ್ದಾಗ ಎಲ್ಲಾ ಹಿಂದಿನ ಸಚಿವರುಗಳನ್ನು ಹಾಗೂ ಅಧಿಕಾರಿಗಳನ್ನು ಕರೆದು ಮೀಟಿಂಗ್ ಮಾಡಿ ಹಿಂದುಳಿದ ವರ್ಗಗಳ unrepresented communites ಗೆ reservation ಮಾಡಬೇಕೆಂದು ಪ್ರಯತ್ನ

ಪಟ್ಟೆ. ಆಗ elected representation ಕಡಿಮೆ ಆಗುತ್ತದೆ ಎನ್ನುವ ಸಂದರ್ಭ ಬಂದಾಗ ಪ್ರಥಮದಲ್ಲಿ 9 ಇದ್ದ ಸಂಖ್ಯೆಯನ್ನು 11ಕ್ಕೆ ಹೆಚ್ಚಿಸಿ, 11 ಇದ್ದ ಸಂಖ್ಯೆಯನ್ನು 13ಕ್ಕೆ ಹೆಚ್ಚಿಸಿ, 2ನ್ನು ಹಿಂದುಳಿದ ವರ್ಗಗಳಿಗೆ ಕೊಡಬೇಕೆಂದು ತೀರ್ಮಾನ ಮಾಡಲಾಯಿತು. ಅಂದರೆ ನಾನು ಸಚಿವನಾಗಿದ್ದಾಗ ಎರಡೂ ಸ್ಥಾನಗಳನ್ನು ಹಿಂದುಳಿದ ವರ್ಗಗಳಿಗೆ ಸೇರಿದಂತಹ ವ್ಯಕ್ತಿಗಳ ಪರವಾಗಿ ಚುನಾವಣೆ ಮೂಲಕ ಭರ್ತಿ ಮಾಡುವುದಕ್ಕಾಗಿ ಎಂದು ಬಿಲ್ಲನ್ನು ಪ್ರೆಸೆಂಟ್ ಮಾಡಲಾಯಿತು. ಆ ಬಿಲ್ಲನ್ನು ಪ್ರೆಸೆಂಟ್ ಮಾಡಿದ ದಿವಸವೇ ನಾನು ನನ್ನ ಮಂತ್ರಿ ಸ್ಥಾನವನ್ನು ಕಳೆದುಕೊಂಡಿದ್ದೆ. ಪುನಃ ಇದರಲ್ಲಿ 1 ಎಂದು ತಿದ್ದುಪಡಿ ಮಾಡಿ white paper ನಲ್ಲಿ print ಮಾಡಿದ್ದಾರೆ. ಈಗ ನನ್ನ ಬಳಿ ಇರುವಂಥದ್ದು original print. ಮಾನ್ಯ ಮುಖ್ಯಮಂತ್ರಿಗಳೇ ಇದರ ಬಗ್ಗೆ ಮಾತನಾಡಿದ್ದಾರೆ. ಸ್ಥಳೀಯ ಸಂಸ್ಥೆಗಳ ರೀತಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ, ಹಿಂದುಳಿದವರಿಗೆ ಮತ್ತು ಅಲ್ಪಸಂಖ್ಯಾತರಿಗೆ 33% ಮೀಸಲಾತಿಯನ್ನು ನೀಡಬೇಕೆನ್ನುವುದರ ಬಗ್ಗೆ ಅವರು ಕೂಡ ಅಂದು ವಾದವನ್ನು ಮಾಡಿದ್ದಾರೆ. ಅದಾದ ಮೇಲೆ ನಾನು ಮಂಡಿಸಿದಂತಹ original Bill ಅದೇ ರೀತಿ ವಿಧಾನಸಭೆಯಲ್ಲಿ ಪಾಸ್ ಆಗಿದೆ. ಅಲ್ಲಿ ಪಾಸ್ ಆದಂತಹ ಬಿಲ್ ಅನ್ನು "Corrigendum to the Karnataka Co-operative Societies (Amendment) Bill, 2012, .. as passed by the Legislative Assembly" ಎಂದು ಅಂದಿನ ಮುಖ್ಯಮಂತ್ರಿಗಳು ವಿಧಾನ ಪರಿಷತ್ತಿನಲ್ಲಿ ಮಂಡನೆಯನ್ನು ಮಾಡಿದ್ದಾರೆ. ಇದರಲ್ಲಿ correction ಏನಾಗಿದೆ ಎಂದರೆ in the said Bill, in the clause 18, item No.2 in sub-clause (c), for one seat, two seats ಎಂದು ಆಗಿದೆ. ಅದನ್ನು ತಮ್ಮ ಅಧ್ಯಕ್ಷತೆಯಲ್ಲಿ ಯಾವುದೇ ತಿದ್ದುಪಡಿಗಳಿಲ್ಲದೇ ಪಾಸ್ ಮಾಡಲಾಗಿದೆ. ಈ ಬಿಲ್ ಪಾಸ್ ಆಗಿ Gazette Nottification ಗೆ ಹೋದಾಗ Gazette Notification ನಲ್ಲಿ 'one seat to be filled by election' ಎಂದು ಮಾಡಿದ್ದಾರೆ. ಇದು ಆಗಿರುವುದು ಎಲ್ಲಿ ಎಂದರೆ ನಮ್ಮ 'Secretary to the Government, Department of Parliamentary Affairs and Legislation.' ಇದಕ್ಕೆ ಜಿ.ಕೆ.ಬೋರೇಗೌಡರವರು ಸಹಿ ಮಾಡಿದ್ದಾರೆ. ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಅನುಮತಿಯನ್ನು

ಪಡೆದು ಪಾಸ್ ಆದಂತಹ ಶಾಸನಕ್ಕೆ ಅಧಿಕಾರಿಗಳು ತಮಗೆ ಇಷ್ಟ ಬಂದ ಹಾಗೆ ತಿದ್ದುಪಡಿ ಮಾಡಿದ್ದು, ಅದರ ಪ್ರಕಾರವೇ ಇವತ್ತು Co-operatives ನಲ್ಲಿ ಒಂದೇ ಸೀಟಿಗೆ ಚುನಾವಣೆ ನಡೆದಿದೆ. ಈ ರೀತಿ ಆಗುವುದಾದರೆ ಈ ಸದನಕ್ಕೆ ಮತ್ತು ಸದನದಲ್ಲಿ ಈ ಬಿಲ್ ಅನ್ನು ಪಾಸ್ ಮಾಡಿದಂತಹ ಸದಸ್ಯರುಗಳಿಗೆ ಮಾಡಿದಂತಹ ಅವಮಾನ. It's a contempt of the House. ಈ ಸದನಕ್ಕೆ ಅಪಚಾರವನ್ನು ಮಾಡಿದ್ದಾರೆ. ಹಾಗಾಗಿ ನಾನು ಸಿ.ಕೆ.ಬೊರೇಗೌಡ, ಕಾರ್ಯದರ್ಶಿ, ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ, ಇವರು ಶಾಸಕಾಂಗ ಸಭೆಗಳಲ್ಲಿ ಅನುಮೋದಿಸಿದ ವಿಚಾರಗಳ ವಿರುದ್ಧವಾಗಿ ರಾಜ್ಯಪತ್ರದಲ್ಲಿ ಅಧಿಕೃತವಾಗಿ ಪ್ರಕಟಿಸಿ ಸದನದ ಅನುಮೋದನೆಗೆ ಮತ್ತು ಸದಸ್ಯರ ಹಕ್ಕಿಗೆ ಚ್ಯುತಿಯನ್ನು ತಂದಿದ್ದಾರೆ. ಈ ವಿಷಯದ ಬಗ್ಗೆ ಸತ್ಯ ಸಂಗತಿಯನ್ನು ವಿಮರ್ಶೆ ಮಾಡಲು ಮತ್ತು ತಪ್ಪನ್ನು ಸರಿಪಡಿಸಲು ಸದನ ಮತ್ತು ಸದಸ್ಯರ ಗೌರವವನ್ನು ಎತ್ತಿ ಹಿಡಿಯುವ ದೃಷ್ಟಿಯಿಂದ ಈ ವಿಚಾರವನ್ನು ಹಕ್ಕುಚ್ಯುತಿ ಸಮಿತಿಗೆ ಕಳುಹಿಸುವಂತೆ ಸದನದ ಅನುಮತಿ ಕೋರಿ ತಮ್ಮಲ್ಲಿ ನಾನು ವಿನಂತಿಸಿಕೊಳ್ಳುತ್ತಿದ್ದೇನೆ. ಇದು ಅತ್ಯಂತ ಗಂಭೀರವಾದ ವಿಚಾರ. ಇದರ ಸತ್ಯ ಸಂಗತಿ ಏನೆಂಬುದು ತಿಳಿಯಬೇಕು. ಬಹುಶಃ ಅಧಿಕಾರಿಗಳು ಸದನದಲ್ಲಿ ಪಾಸ್ ಆದಂತಹ ಶಾಸನಕ್ಕೆ ಎಷ್ಟರಮಟ್ಟಿಗೆ ತಿರುಚುತ್ತಾರೆ ಎನ್ನುವುದಕ್ಕೆ ಸಾಕ್ಷಿ ಇದಾಗಿದೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುವುದೇನೆಂದರೆ, ತಾವು ಕೂಡ ಸಹಕಾರ ಕ್ಷೇತ್ರದಲ್ಲಿ ಮೀಸಲಾತಿಯ ಬಗ್ಗೆ ಬಿಲ್ ತಂದಾಗ ವಿಧಾನಸಭೆಯಲ್ಲಿ 33% ಮೀಸಲಾತಿಯನ್ನು ನೀಡಬೇಕೆಂದು ಮಾತನಾಡಿದ್ದೆವು. ಪ್ರಥಮವಾಗಿ ಕರ್ನಾಟಕದ 60 ವರ್ಷಗಳ ಇತಿಹಾಸದಲ್ಲಿ 2 ಸೀಟುಗಳಿಗೆ ಹಿಂದುಳಿದ ವರ್ಗಕ್ಕೆ ಮೀಸಲಾತಿಯನ್ನು ತರಲಾಗಿತ್ತು. ಆ ತಿದ್ದುಪಡಿ ಈ ಸದನಗಳಲ್ಲಿ ಪಾಸ್ ಆದ ಮೇಲೆ Gazette Notification ನಲ್ಲಿ 2 ಇದ್ದುದ್ದನ್ನು 1 ಎಂದು ಮಾಡಿದ್ದಾರೆ. In the descriptional meaning of 'Backward Classes' ನಲ್ಲೂ ಸಹ ತಪ್ಪನ್ನು ಮಾಡಿದ್ದಾರೆ. ಅದನ್ನು unrepresented communities, Category-A and Category B ಗೆ ಬರಬೇಕಾದ್ದನ್ನು economic conditions

ಎಂದು ಮಾಡಿದ್ದಾರೆ. What is the social status of unrepresented communities? For a caste, status acquired in the society is the social status. ಇದು ಬಹಳ ಗಂಭೀರವಾದ ವಿಚಾರವಾದ್ದರಿಂದ ಇದನ್ನು ಹಕ್ಕುಚ್ಯುತಿ ಸಮಿತಿಗೆ ಕಳುಹಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಪುಟ್ಟಸ್ವಾಮಿಯವರು ಪ್ರಸ್ತಾಪಿಸಿರತಕ್ಕ ಸಂಗತಿ ಬಹಳ ಸ್ಪಷ್ಟವಾಗಿದೆ. ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಅಂಗೀಕೃತವಾದ ನಿರ್ಣಯ ಅಥವಾ ಶಾಸನವನ್ನು ತಿದ್ದುಪಡಿ ಮಾಡಿ, Gazette Notification ಹೊರಡಿಸಿರುವ ವಿಚಾರದ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಿದ್ದಾರೆ. ಇದರ ಬಗ್ಗೆ ಮೂರು ದಿವಸಗಳ ಹಿಂದೆಯೇ ನನಗೆ ತಿಳಿಸಿದ್ದರು, ನಾನು ಕೂಡ ಇದನ್ನು ಗಮನಿಸಿದ್ದೇನೆ. ಇದು ಬಹಳ ಗಂಭೀರವಾದ ವಿಚಾರ ಆಗಿರುವುದರಿಂದ ಈ ವಿಚಾರವನ್ನು ಸದನದ ಹಕ್ಕುಚ್ಯುತಿ ಸಮಿತಿಎ ರೆಫರ್ ಮಾಡುತ್ತೇನೆ. ಸಮಿತಿ ಇದರ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ತೀರ್ಮಾನ ಮಾಡಿ ವರದಿಯನ್ನು ಸದನಕ್ಕೆ ನೀಡಬೇಕು. ಇದನ್ನು ಹಕ್ಕುಚ್ಯುತಿ ಸಮಿತಿಗೆ ರೆಫರ್ ಮಾಡುತ್ತೇನೆ.

## 8. ಶಾಸನ ರಚನೆ

### ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

### (ಅ) ಕರ್ನಾಟಕ ಧನವಿನಿಯೋಗ (ಸಂಖ್ಯೆ 4) ವಿಧೇಯಕ, 2013

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಗಳೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ನೇ ಕರ್ನಾಟಕ ಧನವಿನಿಯೋಗ (ಸಂಖ್ಯೆ 4) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಗಳೇ, 2013ನೇ ಆರ್ಥಿಕ ವರ್ಷದಲ್ಲಿ ಪೂರಕ ಅಂದಾಜುಗಳ ಮೊದಲನೇ ಕಂತನ್ನು ನಾನು ಮಂಡಿಸಿದ್ದೇನೆ. ನಿಮಗೆಲ್ಲರಿಗೂ ಗೊತ್ತಿರುವ ರೀತಿಯಲ್ಲಿ ಸಂವಿಧಾನದಲ್ಲಿ ಇದಕ್ಕೆ ಅವಕಾಶವಿದೆ. ಸಂವಿಧಾನದ 205(1ಎ) ಅನುಚ್ಛೇದದಲ್ಲಿ ಪೂರಕ ಅಂದಾಜುಗಳನ್ನು ಮಂಡಿಸಲು ಅವಕಾಶವಿದೆ. ಇದು ಮೊದಲನೇ ಕಂತು, ಈ ವರ್ಷ ಮುಗಿಯುವದರೊಳಗೆ ಮತ್ತೊಂದು ಕಂತು ಬರಬಹುದು. ಕಳೆದ ಸಾಲಿನಲ್ಲಿ 3 ಕಂತುಗಳಾಗಿದ್ದವು. ನಮ್ಮದು 2ಕ್ಕೆ ಸೀಮಿತ, ಒಟ್ಟು ಪೂರಕ ಅಂದಾಜುಗಳ ಮೊದಲನೇ ಕಂತಿನಲ್ಲಿ 7743 ಕೋಟಿ 64 ಲಕ್ಷ ರೂಪಾಯಿಗಳು, ಇದು ಈ ವರ್ಷದ ಆಯವ್ಯಯದ ಒಟ್ಟು ಮೊತ್ತ 1,21,611 ಕೋಟಿ ರೂಪಾಯಿಗಳಿವೆ. ಈ ಕಂತು ಅದರ ಶೇಕಡ 6ರಷ್ಟು ಇದೆ. ಈ ಪೂರಕ ಅಂದಾಜುಗಳನ್ನು ಏಕೆ ಮಂಡಿಸುತ್ತೇವೆ ಎಂದರೆ ಆಯವ್ಯಯದಲ್ಲಿ ನಿರ್ದಿಷ್ಟ ಸೇವೆಗಳಿಗೆ ಸರ್ಕಾರ ಒದಗಿಸಿರುವ ಹಣ ಸಾಲದೇ ಹೋದಲ್ಲಿ ಅದಕ್ಕೆ ಹೆಚ್ಚುವರಿ ಅನುದಾನವನ್ನು ಕೊಡತಕ್ಕ ಸಂದರ್ಭಗಳು ಬರುತ್ತವೆ.

ಹಾಗಾಗಿ ಅಗತ್ಯವಾಗಿ ಮತ್ತು ಅವಶ್ಯವಾಗಿ ಬೇಕಾದಂತಹ ಅನುದಾನವನ್ನು ಪೂರಕ ಅಂದಾಜುಗಳಲ್ಲಿ ಒದಗಿಸಬೇಕಾಗುತ್ತದೆ. 7743 ಕೋಟಿ 64 ಲಕ್ಷ ರೂಪಾಯಿಗಳ ಪೂರಕ ಅಂದಾಜಿನಲ್ಲಿ ನಿವ್ವಳವಾಗಿ cash outgo ಆಗುವಂತಹದ್ದು 2357 ಕೋಟಿ ರೂಪಾಯಿಗಳಾಗಿವೆ. ಉಳಿದಂತೆ 2728 ಕೋಟಿ ರೂಪಾಯಿಗಳು ಪಂಚಾಯತ್ ರಾಜ್ ಸಂಸ್ಥೆಯಲ್ಲಿರುವ ಠೇವಣಿಗಳು, ಅದಕ್ಕೆ ಸಂಬಂಧಪಟ್ಟಂತೆ ಮಂಡಿಸಲಾದ ಠೇವಣಿ. ಇದು ಮೀಸಲು ನಿಧಿ. ಅದರಿಂದ ಮತ್ತು ಠೇವಣಿಗಳಿಂದ ಭರಿಸತಕ್ಕ ಮೊತ್ತ ಸುಮಾರು 2728 ಕೋಟಿ ರೂಪಾಯಿಗಳು.

(1–30 ಗಂಟೆ)

ಕೇಂದ್ರ ಸಹಾಯಧನ 8ಕೋಟಿ ರೂ.ಗಳ ಲೆಕ್ಕ ಹೊಂದಾಣಿಕೆ ಮಾಡುವುದು ಅದೂ 1848 ಕೋಟಿ. ಇದು 2659 ಕೋಟಿ ಆಗುತ್ತದೆ. ಇದೆಲ್ಲವನ್ನೂ ಕಳೆದರೆ net outgo is ₹ 2357 ಕೋಟಿ ಆಗುತ್ತದೆ. ಇದನ್ನು

ನಾವು ಈ ವರ್ಷದಲ್ಲಿ ಹೇಗೆ ಭರಿಸುವುದು ಎಂದು ನೋಡಬೇಕಾಗುತ್ತದೆ. ಈಗಾಗಲೇ ನಾವು ಆಯವ್ಯಯದಲ್ಲಿ ಏನು provision ಮಾಡಿದ್ದೇವೆ ಅದರ ಜೊತೆಯಲ್ಲಿ ಇದನ್ನೂ ಕೂಡ ಭರಿಸಬೇಕಾಗುತ್ತದೆ. ಮುಖ್ಯವಾಗಿ ತೆರಿಗೆ ಹೆಚ್ಚಳದಿಂದ 295 ಕೋಟಿ ರೂಪಾಯಿ. ಮತ್ತು 2061 ಕೋಟಿ ರೂಪಾಯಿಯ ಉಳಿತಾಯದಿಂದ ಮಾಡುತ್ತಿದ್ದೇವೆ. ಈ ರೀತಿಯಾಗಿ ಇದನ್ನು ಭರಿಸುವಂತಹ ಕೆಲಸವನ್ನು ಈ ವರ್ಷ ಮಾಡಬೇಕಾಗಿದೆ. ಬಹಳ ಮುಖ್ಯವಾಗಿ ಒಟ್ಟು 7744 ರೂಪಾಯಿಗಳ ಪೈಕಿ ನಾವು ಯೋಜನೆಗಳಿಗೆ ಹೆಚ್ಚಾಗಿ ಖರ್ಚು ಮಾಡುತ್ತಿದ್ದೇವೆ. ಇದರಲ್ಲಿ ಯೋಜನಾ ವೆಚ್ಚ 6222 ರೂಪಾಯಿಗಳು. 1522 ಕೋಟಿ ರೂಪಾಯಿಗಳನ್ನು ಯೋಜನೇತರ ವೆಚ್ಚಗಳಿಗಾಗಿ ಖರ್ಚು ಮಾಡುತ್ತಿದ್ದೇವೆ. ಒಟ್ಟು 7744 ಕೋಟಿ ಆಗುತ್ತದೆ. ನಾವು ಅಭಿವೃದ್ಧಿಗೆ ಸಂಬಂಧಪಟ್ಟಂತೆ ಹೆಚ್ಚು ಹಣವನ್ನು ಈ ಪೂರಕ ಅಂದಾಜುಗಳಲ್ಲಿ ಒದಗಿಸುತ್ತಿದ್ದೇವೆ. ಬಹಳ ಪ್ರಮುಖವಾಗಿ ನಾವು ಈ ಹಣವನ್ನು ಲೋಕೋಪಯೋಗಿ ಇಲಾಖೆಯ ರಸ್ತೆಗಳಿಗೆ ಕೊಡುತ್ತಿದ್ದೇವೆ. ರಸ್ತೆಗಳಿಗೆಂದು 954 ಕೋಟಿ ರೂಪಾಯಿಯನ್ನು ಕೊಡುತ್ತಿದ್ದೇವೆ. ಬಡ್ಜೆಟ್ ಅಂದಾಜಿನಲ್ಲಿ 3161 ಕೋಟಿ ಇತ್ತು. ಈಗ ಹೆಚ್ಚುವರಿಯಾಗಿ ಪೂರಕ ಅಂದಾಜಿನಲ್ಲಿ 954 ಕೋಟಿ ರೂಪಾಯಿಯನ್ನು ಒದಗಿಸುತ್ತಿದ್ದೇವೆ. ಗ್ರಾಮೀಣ ವಿದ್ಯುದ್ದೀಕರಣ ಯೋಜನೆ, ರೈತರ ಪಂಪ್‌ಸೆಟ್‌ಗಳಿಗೆ ಸಬ್ಸಿಡಿ ಕೊಡತಕ್ಕಂಥಾದ್ದಕ್ಕೆಂದು 4750 ಕೋಟಿ ರೂಪಾಯಿಯನ್ನು ನಮ್ಮ ಆಯವ್ಯಯದಲ್ಲಿ ಇಟ್ಟಿದ್ದರು. ಅದು ಸಾಲುವುದಿಲ್ಲವೆಂದು ಈ ಪೂರಕ ಅಂದಾಜಿನಲ್ಲಿ ಇನ್ನೂ 710 ಕೋಟಿ ರೂಪಾಯಿಯನ್ನು ಒದಗಿಸುತ್ತಿದ್ದೇವೆ. ಹಿಂದಿನ ಸರ್ಕಾರದವರು ಅಂದರೆ ಬಿಜೆಪಿ ಪಕ್ಷದ ಮಾನ್ಯ ಜಗದೀಶ್ ಶೆಟ್ಟರ್ ಅವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಬೆಳೆ ಸಾಲ ಮನ್ನಾ ಯೋಜನೆಯನ್ನು ಜಾರಿಗ ತಂದಿದ್ದರು. ಅವರು ಸುಮಾರು ಮೂರೂವರೆ ಸಾವಿರ ಕೋಟಿ ರೂಪಾಯಿಯ ಬೆಲೆ ಸಾಲ ಮನ್ನಾವನ್ನು ಘೋಷಣೆ ಮಾಡಿದ್ದರು. ಆದರೆ ಅದಕ್ಕೆ ಬರೀ 940 ಕೋಟಿ ರೂಪಾಯಿಯನ್ನು ಆಯವ್ಯಯದಲ್ಲಿ ಇಟ್ಟಿದ್ದರು. ಉಳಿದ ಹಣಕ್ಕೆ ಅವಕಾಶ ಮಾಡಿಕೊಟ್ಟಿರಲಿಲ್ಲ. ನಾವು ಅದನ್ನು provide ಮಾಡಿದ್ದೇವೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾರ್ಚ್‌ವರೆಗೆ ಎಷ್ಟು ಇತ್ತೋ ಅಷ್ಟಕ್ಕೆ ಮಾತ್ರ ಹಿಂದಿನ ಸರ್ಕಾರ ಆಯವ್ಯಯದಲ್ಲಿ ಹಣವನ್ನು ಒದಗಿಸಿದ್ದಾರೆ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಗಳೇ, ನಾನು ಅದನ್ನೇ ಹೇಳುತ್ತಿರುವುದು. ಅವರು ಹೇಳಿದ್ದನ್ನೇ ನಾನು ಹೇಳುತ್ತಿದ್ದೇನೆ. ನಾನು ಬೇರೆ ಭಾಷೆಯಲ್ಲಿ ಹೇಳಿದೆನೇ? ಅದನ್ನೂ ನಾನು ಹೇಳಲೇ, ಮಾರ್ಚ್‌ವರೆಗೆ ಹಿಂದಿನ ಸರ್ಕಾರ ಇನ್ನು ಯಾವ ತರಹ ಹೇಳಬೇಕು ಮಾನ್ಯ ಅಶ್ವಥ್‌ನಾರಾಯಣ ಅವರೇ? ಯಾವ ರೀತಿ ಹೇಳಬೇಕೋ ಅದನ್ನು ಹೇಳಿಕೊಡಿ. ಅದನ್ನೇ ಹೇಳಿ ಬಿಡುತ್ತೇನೆ.

**ಶ್ರೀ ಅಶ್ವಥ್‌ನಾರಾಯಣ:–** ಮೂರೂವರೆ ಸಾವಿರ ಕೋಟಿ ರೂಪಾಯಿಯ ಬಗ್ಗೆ ಹೇಳಿದಿರಿ, ಆದರೆ ಎಲ್ಲಿಯವರೆಗೆ ಎಂದು slab ಹೇಳಲಿಲ್ಲ.

**ಶ್ರೀ ಸಿದ್ದರಾಮಯ್ಯ:–** ಏನು ಹೇಳಬೇಕೋ ಅದನ್ನು ಹೇಳಿಕೊಡಿ. ನಾನು ಹಾಗೇ ಹೇಳಿಬಿಡುತ್ತೇನೆ. A fact is a fact ಅಲ್ಲವೇ? ಅದನ್ನೂ ಹೇಳುತ್ತೀರಿ ಇದನ್ನೂ ಹೇಳುತ್ತೀರಿ. ಹಿಂದಿನ ಸರ್ಕಾರವೆಂದು ಹೇಳುವುದಕ್ಕೇ ಬಿಡುವುದಿಲ್ಲವಲ್ಲ ಏಕೆ? ಹಿಂದಿನ ಸರ್ಕಾರದಲ್ಲಿ ತಾವು ಇದ್ದರೋ ಇಲ್ಲವೋ ಹೇಳಿ. ಹಿಂದಿನ ಸರ್ಕಾರದಲ್ಲಿ ಮಾನ್ಯ ಪುಟ್ಟಸ್ವಾಮಿಯವರು ಸಹಕಾರ ಸಚಿವರಾಗಿದ್ದರು.

**ಶ್ರೀ ಎಂ.ಸಿ.ನಾಣಯ್ಯ:–** ಅವರು ಸಹಕಾರ ಸಚಿವರಾಗಿದ್ದರು. ಅಧಿವೇಶನ ನಡೆಯುತ್ತಿದ್ದಾಗಲೇ ಅವರನ್ನು ಸಚಿವ ಸ್ಥಾನದಿಂದ ತೆಗೆದು ಬಿಟ್ಟರು. ನಾನು ಬಹಳ ಬೇಸರ ಪಟ್ಟೆ. ಈ ಸದನದಲ್ಲಿ ಅದನ್ನೂ protest ಮಾಡೋಣವೆಂದು ಹೇಳಿದೆ. ಅವರೇ ಬೇಡವೆಂದು ಹೇಳಿದರು.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಅವರಿಗೆ ಬಹಳ ಫೀಲ್ ಆಗಿತ್ತು.

**ಶ್ರೀ ಸಿದ್ದರಾಮಯ್ಯ:–** ಫೀಲ್ ಎಂದು ಮಾತ್ರವಲ್ಲ. ಒಬ್ಬ ಹಿಂದುಳಿದ ವರ್ಗದವರಿಗೆ ಈ ರೀತಿ ಆಯಿತಲ್ಲ ಎಂದು ಬೇಸರ ಅಷ್ಟೆ.

**ಸಭಾಪತಿಯವರು:–** ಮಾನ್ಯ ಶಾಣಪ್ಪನವರಿಗೂ ಕೂಡ ಹಾಗೇ ಆಗಿತ್ತು.

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):–** ಅದಕ್ಕೆ ಅವರು 940 ಕೋಟಿ ಇಟ್ಟಿದ್ದರು. ಇನ್ನೂ 2600–2650 ಕೋಟಿ ಕೊಡಬೇಕಾಗಿತ್ತು. ಅದಕ್ಕೋಸ್ಕರ ಆಯವ್ಯಯದಲ್ಲಿ 1485 ಕೋಟಿ ರೂಪಾಯಿಯನ್ನು ಒದಗಿಸಿದ್ದೆವು. ಅದಕ್ಕೆ ಇನ್ನೂ ಹೆಚ್ಚು ಹಣ ಬೇಕಾಗುತ್ತದೆ. ಈಗ ಈ ಉದ್ದೇಶಕ್ಕೆಂದೇ ಈ ಬಾರಿಯ ಪೂರಕ ಅಂದಾಜಿನಲ್ಲಿ 515 ಕೋಟಿ ರೂಪಾಯಿಯನ್ನು provide ಮಾಡಿದ್ದೇವೆ. 1485 ರೂಪಾಯಿಯ ಜೊತೆಗೆ ಹೆಚ್ಚುವರಿಯಾಗಿ 515 ಕೋಟಿ ರೂಪಾಯಿಯನ್ನು provide ಮಾಡಿದ್ದೇವೆ. ಆದರೂ ಇನ್ನೂ ಕೂಡ ಸ್ವಲ್ಪ ಉಳಿದುಕೊಳ್ಳುತ್ತದೆ. ಅದನ್ನು ಕೂಡ ಈ ಪೂರಕ ಅಂದಾಜಿನಲ್ಲಿ ಕೊಡಬೇಕಾಗಿ ಬರಬಹುದೆಂದು ಅನ್ನಿಸುತ್ತದೆ. ಜಿಲ್ಲಾ ಮುಖ್ಯ ರಸ್ತೆಗಳು ಮತ್ತು ಇತರ ರಸ್ತೆಗಳು ಏನು ಇವೆ ಇವುಗಳು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಈ M.D.R., ರಸ್ತೆಗಳಿಗೆ 504 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಗ್ರಾಮೀಣ ಮತ್ತು ಪಂಚಾಯತ್ ರಾಜ್ ಇಲಾಖೆಯ ಗ್ರಾಮೀಣ ರಸ್ತೆಗಳಿಗೆ ಈ ಮೊದಲು 193 ಕೋಟಿ ಕೊಟ್ಟಿದ್ದೆವು. ಇದಕ್ಕೆ ಈಗ ಅದರ ಜೊತೆಗೆ 500 ಕೋಟಿ ರೂಪಾಯಿಯನ್ನು ಹೆಚ್ಚುವರಿಯಾಗಿ ಕೊಡುತ್ತಿದ್ದೇವೆ. ಶಾಲಾ ಮಕ್ಕಳಿಗೆ ಕುಡಿಯುವುದಕ್ಕೆ ಹಾಲನ್ನು ಕೊಡುವುದಕ್ಕೆ 1000 ಕೋಟಿ ರೂಪಾಯಿಯ ಸಹಾಯಧನ ಇತ್ತು. ಈಗ ಮತ್ತೆ 314 ಕೋಟಿ ರೂಪಾಯಿಯನ್ನು ಇಡುತ್ತಿದ್ದೇವೆ. ಮತ್ತು ನಾನು ಆಯವ್ಯಯದ ಬಗ್ಗೆ ಉತ್ತರವನ್ನು ಕೊಡುವಾಗ 1 ಕೋಟಿ ರೂಪಾಯಿ ಇದ್ದ ಶಾಸಕರ ಅಭಿವೃದ್ಧಿ ನಿಧಿಯನ್ನು 2 ಕೋಟಿಗೆ ಹೆಚ್ಚಿಸಲಾಗಿದೆ ಎಂದು ಹೇಳಿದ್ದೆ. ಆಗ ಇದಕ್ಕೆಂದು 300 ಕೋಟಿ ರೂಪಾಯಿಯನ್ನು ಆಯವ್ಯಯದಲ್ಲಿ ಒದಗಿಸಲಾಗಿತ್ತು. ಅದಕ್ಕೆ ಈ ಪೂರಕ ಅಂದಾಜಿನಲ್ಲಿ ಇನ್ನು 300 ಕೋಟಿಯನ್ನು ಹೆಚ್ಚುವರಿಯಾಗಿ ಕೊಡುತ್ತಿದ್ದೇವೆ. ಇನ್ನು ರೈತರಿಗೆ ಕೊಡತಕ್ಕಂತಹ ಬೆಳೆ ಸಾಲ ಬಡ್ಡಿಗೆ ನೀಡುವ ಸಬ್ಸಿಡಿ ಏನು ಇತ್ತು ಅದಕ್ಕೆ 2 ಲಕ್ಷದವರೆಗೆ ಬಡ್ಡಿ ಇಲ್ಲ. 2 ಲಕ್ಷದಿಂದ 3 ಲಕ್ಷ

ರೂಪಾಯಿಯವರೆಗೆ 1% ಬಡ್ಡಿ. 3 ಲಕ್ಷದಿಂದ 10 ಲಕ್ಷದವರೆಗೆ 3% ಬಡ್ಡಿಯನ್ನು ವಿಧಿಸಲಾಗುತ್ತಿದೆ. ಇದಕ್ಕೆಂದು ಆಯವ್ಯಯದಲ್ಲಿ 300 ಕೋಟಿ ರೂಪಾಯಿ ಇಟ್ಟಿದ್ದೆವು. ಅದು ಸಾಲುವುದಿಲ್ಲವೆಂದು ಇನ್ನೂ 550 ಕೋಟಿ ರೂಪಾಯಿಯನ್ನು ಪೂರಕ ಅಂದಾಜಿನಲ್ಲಿ ಒದಗಿಸಿದ್ದೇವೆ. ಮತ್ತು 6 ಹೊಸ ಮೆಡಿಕಲ್ ಕಾಲೇಜುಗಳನ್ನು ಸ್ಥಾಪನೆ ಮಾಡುತ್ತಿದ್ದೇವೆ. ಈ 6 ಮೆಡಿಕಲ್ ಕಾಲೇಜುಗಳಿಗೆ ಆಯವ್ಯಯದಲ್ಲಿ ಹಣವನ್ನು ಒದಗಿಸಿ ಇರಲಿಲ್ಲ. ಅದಕ್ಕಾಗಿ ಈಗ 174 ಕೋಟಿ ರೂಪಾಯಿಗಳನ್ನು ಈ ಪೂರಕ ಅಂದಾಜಿನಲ್ಲಿ ಒದಗಿಸಿದ್ದೇವೆ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿಯ ಬಗ್ಗೆ ಸಂವಿಧಾನದ ಅನುಚ್ಛೇದ 371 ಜೆ ತಿದ್ದುಪಡಿಗೆ ಸಂಬಂಧಿಸಿದಂತೆ 154 ಕೋಟಿ ರೂಪಾಯಿಯನ್ನು ಮೀಸಲಿಡುತ್ತಿದ್ದೇವೆ. 'ಸುವರ್ಣ ಗ್ರಾಮ' ಯೋಜನೆಗೆ ಸಂಬಂಧಿಸಿದ ಪೆಂಡಿಂಗ್ ಬಿಲ್ಸ್ ಎಲ್ಲವೂ ಇತ್ತು. ಅದಕ್ಕೆ 110 ಕೋಟಿ ಇಡಲಾಗಿತ್ತು. ಅದು ಸಾಲುವುದಿಲ್ಲವೆಂದು ಮತ್ತೆ 100 ಕೋಟಿ ರೂಪಾಯಿಯನ್ನು ಇಡುತ್ತಿದ್ದೇವೆ. ರೈಲ್ವೆ ಯೋಜನೆಗಳಿಗೆ ಸಂಬಂಧಿಸಿದಂತೆ cost sharing ಅನ್ನು ನಾವು ಒಪ್ಪಿಕೊಂಡಿದ್ದೇವೆ. ಕರ್ನಾಟಕ ಸರ್ಕಾರ ಅವರಿಗೆ ಜಮೀನನ್ನು ಕೊಡುವುದು ಮತ್ತು ಈ ರೈಲ್ವೆ ಯೋಜನೆಯ ವೆಚ್ಚದಲ್ಲಿ ಶೇಕಡ 50 ಹಣವನ್ನು ಕೊಡುವುದು ಏನು ಇದೆ ಇದನ್ನು ನಾವು ಒಪ್ಪಿಕೊಂಡಿದ್ದೇವೆ.

(ಈ ಹಂತದಲ್ಲಿ ಸದನದಲ್ಲಿ ಮೊಬೈಲಿನ ರಿಂಗ್‌ಟೋನ್ ಕೇಳಿಬಂದಿತು)

**ಸಭಾಪತಿಯವರು:-** ಯಾರದೋ ಮೊಬೈಲ್ ರಿಂಗ್ ಆಗುತ್ತಿರುವುದು ನನಗೆ ಕೇಳಿಸುತ್ತಿದೆ. ಸದಸ್ಯರು ಒಳಗೆ ಬರುವಾಗ ಮೊಬೈಲ್ ಅನ್ನು ಇಟ್ಟುಕೊಳ್ಳಬಾರದು. ಒಂದುವೇಳೆ ಇಟ್ಟುಕೊಂಡಿದ್ದರೆ switch off ಮಾಡಿಕೊಂಡು ಬರಬೇಕೆಂದು ನಾನು ಹೇಳುತ್ತಲೇ ಬರುತ್ತಿದ್ದೇನೆ. ಮೊಬೈಲ್ ರಿಂಗ್ ಆದರೆ, ಅದು ಯಾರ ಹತ್ತಿರ ಇದೆಯೋ ಅವರು ಅದನ್ನು switch off ಮಾಡಿಕೊಳ್ಳದೇ ಹೋದರೆ ಆ ಮೊಬೈಲ್ ಯಾರದ್ದೆಂದು ನಾನು ಪತ್ತೆ ಮಾಡಿ ಅವರಿಂದ ಆ ಮೊಬೈಲ್ ಅನ್ನು ಕಿತ್ತುಕೊಳ್ಳುತ್ತೇನೆ.

**ಶ್ರೀ ಸಿದ್ದರಾಮಯ್ಯ:-** ರೈಲ್ವೆ ಯೋಜನೆಗೆ ಸುಮಾರು 10-12 ಸಾವಿರ ಕೋಟಿ ರೂಪಾಯಿಗಳ ಅಗತ್ಯತೆ ಇದ್ದು, ಈ ವರ್ಷದ ಬಜೆಟ್‌ನಲ್ಲಿ ₹ 373

ಕೋಟಿಗಳನ್ನು ಇಟ್ಟಿದ್ದು, ಇದು ಸಾಲುವುದಿಲ್ಲ ಎಂದು ಮತ್ತೆ ₹ 100 ಕೋಟಿಗಳನ್ನು ಇಡುತ್ತಿದ್ದೇವೆ. ಇನ್ನೂ ಹೆಚ್ಚು ಬೇಕಾದರೂ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಕರ್ನಾಟಕದಲ್ಲಿ ಸುಮಾರು ₹ 10–12 ಸಾವಿರ ಕೋಟಿ ರೂಪಾಯಿಗಳನ್ನು ರೈಲ್ವೆ ಯೋಜನೆಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ನಮ್ಮವರೇ ಆದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ರೈಲ್ವೆ ಮಂತ್ರಿಗಳಾಗಿದ್ದು, ಅವರು ಇನ್ನೂ ಹೆಚ್ಚು ಬೇಕೆಂದು ಹೇಳುತ್ತಿದ್ದು, ಅದನ್ನು ಕೊಡಲು ಸರ್ಕಾರ ತಯಾರಿದೆ. ನಮ್ಮ share ಎಷ್ಟು ಕೊಡಬೇಕೋ, ಅದನ್ನು ಕೊಡಲು ತಯಾರಿದ್ದೇವೆ.

**ಶ್ರೀ ಕೆ.ಬಿ.ಶಾಣಪ್ಪ:–** ಶೇಕಡ 50ರ contribution ಬೇರೆ ರಾಜ್ಯಗಳಲ್ಲಿ ಇದೆಯೇ ಅಥವಾ ಕರ್ನಾಟಕದಲ್ಲಿ ಮಾತ್ರ ಇದೆಯೇ?

**ಶ್ರೀ ಸಿದ್ದರಾಮಯ್ಯ:–** ಎಲ್ಲಾ ರಾಜ್ಯಗಳಲ್ಲಿ ಇಲ್ಲ, ನಮ್ಮ ರಾಜ್ಯದಲ್ಲಿ ಇದೆ. ಇದು ಮೊದಲಿನಿಂದಲೂ ಬಂದು ಬಿಟ್ಟಿದೆ. ಇದನ್ನು ನಾವು ರೈಲ್ವೆ ಯೋಜನೆಗಳು ಆಗಲಿ ಎನ್ನುವ ಕಾರಣದಿಂದ ಒಪ್ಪಿಕೊಂಡಿದ್ದೇವೆ. ಇಲ್ಲದಿದ್ದರೆ ಇಷ್ಟೊಂದು ಯೋಜನೆಗಳು ಕರ್ನಾಟಕಕ್ಕೆ ಬರಲು ಸಾಧ್ಯವಾಗುತ್ತರಲಿಲ್ಲ. ನಾವು 50% cost, land ಕೊಡುವ ಬಗ್ಗೆ ಸರ್ಕಾರದಿಂದ ಒಪ್ಪಿಕೊಂಡಿರುವುದರಿಂದ ಅನೇಕ ರೈಲ್ವೆ ಯೋಜನೆಗಳು ಕರ್ನಾಟಕಕ್ಕೆ ಬರುತ್ತಿವೆ. ಆ ಕಾರಣದಿಂದ ಒಪ್ಪಿಕೊಂಡಿದ್ದು, ಇದು ಈಗಿನಿಂದ ಮಾತ್ರವಲ್ಲದೇ ಅನೇಕ ವರ್ಷಗಳಿಂದ ನಡೆದುಕೊಂಡು ಬರುತ್ತಿದೆ.

ಇನ್ನು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿಗೆ infrastructure ಮಾಡಿಕೊಡಲು ₹ 62 ಕೋಟಿ, KSFC ಗೆ equity ಕೊಡಲು ₹ 52 ಕೋಟಿ, ಬೈಸಿಕಲ್ ಯೋಜನೆಗೆ ₹ 122 ಕೋಟಿ ಇದ್ದು, ಈಗ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಬೆಲೆ ಸ್ವಲ್ಪ ಜಾಸ್ತಿಯಾಗಿರುವುದರಿಂದ ₹ 52 ಕೋಟಿ ಇಟ್ಟಿದ್ದೇವೆ. Plantation ಗೆ ₹ 50 ಕೋಟಿ ಇಟ್ಟಿದ್ದೇವೆ. ಹೀಗೆ ₹ 7744 ಕೋಟಿ ರೂಪಾಯಿಗಳನ್ನು ಇಟ್ಟಿದ್ದು, ಇವುಗಳೆಲ್ಲವೂ ಅತ್ಯಂತ ಅವಶ್ಯಕವಾಗಿ ಬೇಕಾಗಿದ್ದು, ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಪೂರಕ ಅಂದಾಜನ್ನು ಇಟ್ಟಿದ್ದೇವೆ. ಇದಕ್ಕೆ ಚರ್ಚೆಯಿಲ್ಲದೇ ಎಲ್ಲರೂ ಒಪ್ಪಿಕೊಳ್ಳುತ್ತಾರೆ ಎಂದು

ಅಂದುಕೊಂಡಿದ್ದೇನೆ. ಪೂರಕ ಅಂದಾಜಿನಲ್ಲಿ ಬಹಳ ಮುಖ್ಯವಾಗಿ ಯೋಜನಾ ವೆಚ್ಚಕ್ಕೆ ಸಂಬಂಧಪಟ್ಟಿದ್ದು, Plan Schemes ಗೆ ಸಂಬಂಧಪಟ್ಟಿದ್ದು ಮತ್ತು ಅಭಿವೃದ್ಧಿಗೆ ಸಂಬಂಧಪಟ್ಟಿರುವುದಾಗಿದೆ. ಆದ್ದರಿಂದ ಸದನ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಮನವಿಯನ್ನು ಮಾಡುತ್ತೇನೆ.

**ಶ್ರೀ ಡಿ.ವಿ.ಸದಾನಂದಗೌಡ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಪೂರಕ ಅಂದಾಜನ್ನು ಸದನದ ಮುಂದೆ ಮಂಡಿಸಿದ್ದಾರೆ. ಜೊತೆಯಲ್ಲಿ ರಾಜ್ಯ ಹಣಕಾಸಿನ Mid-Year Review ಅನ್ನು ಸದನದ ಮುಂದೆ ಇಟ್ಟಿದ್ದಾರೆ. ನನಗೆ ಏಕೋ, ಏನೋ ಮಾನ್ಯ ಸಿದ್ದರಾಮಯ್ಯನವರ ಈ ಒಂದು ಆರ್ಥಿಕ ನಿರ್ವಹಣೆಯ ಬಗ್ಗೆ ಕೆಲವು ಸಂಶಯಗಳು ಮೂಡುವುದಕ್ಕೆ ಪ್ರಾರಂಭವಾಗಿದೆ. ಅದನ್ನು ಹೇಳಿಬಿಡುತ್ತೇನೆ. ಇದನ್ನು ಸ್ವಲ್ಪ ನೋಟ್ ಮಾಡಿಕೊಂಡರೆ ಒಳ್ಳೆಯದಾಗಬಹುದು, ಏಕೆಂದರೆ ಇಡೀ ರಾಜ್ಯದ ಜನತೆಗೆ ಸಂಶಯ ಬಂದಿದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಇಲ್ಲ.

**ಶ್ರೀ ಡಿ.ವಿ.ಸದಾನಂದಗೌಡ:–** ಶ್ರೀ ವೀರಣ್ಣ ಮತ್ತಿಕಟ್ಟಿಯವರು ಕೂಡಲೇ ಇಲ್ಲ, ಇಲ್ಲ ಎಂದು ಹೇಳಿದರು. ಹಾಗಾದರೆ ಇದೆ ಎಂದು ಲೆಕ್ಕ. ಸಾಧಾರಣವಾಗಿ ಅವರು ರಾಜ್ಯ ಹಣಕಾಸಿನ ಪೂರಕ ಅಂದಾಜನ್ನು ಪರಿಶೀಲನೆಯಲ್ಲಿ ಇಟ್ಟಿದ್ದು, ಬಜೆಟ್ ಮಂಡನೆ ಮಾಡುವಾಗ ಭಾರಿ–ಭಾರಿ ಸಂಗತಿಗಳನ್ನು ಉಲ್ಲೇಖ ಮಾಡಿದ್ದಾರೆ. "ಹಿಂದಿನ ಸರ್ಕಾರದಿಂದ ಆರ್ಥಿಕ ಸಂಕಷ್ಟದ ಬಳುವಳಿ ಬಂದಿದೆ, ಆದಾಯದ ಸ್ವೀಕೃತಿ ಕಡಿಮೆ ಇತ್ತು, ರಾಜಸ್ವ ಬಹಳ ಕಡಿಮೆಯಾಗಿತ್ತು, ಸಾಲ ಎತ್ತುವಳಿ ಜಾಸ್ತಿಯಾಗಿದೆ, ಬಾಕಿ ದಿನಗಳ ಪಾವತಿ ಹೆಚ್ಚು ಇತ್ತು, ರಾಜ್ಯದ ಅಭಿವೃದ್ಧಿ ನಿರಾಶಾದಾಯಕ" ಎಂದು ಪ್ರಾಸಬದ್ಧವಾಗಿ ಚೆನ್ನಾಗಿ present ಮಾಡಿರುವುದನ್ನು ಆ ಸಂದರ್ಭದಲ್ಲಿ ಮಾಡಿದ್ದಾರೆ. ನಾನು ಒಂದು ಅಂಶವನ್ನು ಕೇಳುವುದಕ್ಕೆ ಬಯಸುವುದೇನೆಂದರೆ, ಈ ವರ್ಷ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಪೂರಕ ಅಂದಾಜಿನಲ್ಲಿ ಇಟ್ಟಿದ್ದಾರೆ. ಪೂರಕ ಅಂದಾಜಿನಲ್ಲಿ ಹಣ ಜೋಡಣೆಯ

ವ್ಯತ್ಯಾಸಗಳ ಬಗ್ಗೆ ಹೇಗೆ ಮಾಡುವುದು ಎನ್ನುವ ಬಗ್ಗೆ ಅವರಿಗೆ ಪೂರ್ತಿಯಾದ ಧೈರ್ಯ ಇಲ್ಲದ ರೀತಿ ಎಲ್ಲ ಮಾತುಗಳನ್ನು ಹೇಳಿದ್ದಾರೆ. ರಾಜ್ಯದ ಪ್ರಮುಖ 4 ಇಲಾಖೆಗಳಿಂದ ವರಮಾನ ಬರುತ್ತಿದ್ದು, ಕಳೆದ ವರ್ಷ ಇದೇ ಅವಧಿಗೆ ಎಷ್ಟು resource mobilization ಆಗಿತ್ತು ಎನ್ನುವುದನ್ನು ನೋಡಿಕೊಂಡರೆ ಈ ವರ್ಷಕ್ಕೂ ಹೋದ ವರ್ಷಕ್ಕೂ ಏನು ತೊಂದರೆಗಳಿವೆ ಎನ್ನುವುದು ಗೊತ್ತಾಗುತ್ತದೆ. ಕಳೆದ ವರ್ಷ ಮತ್ತು ಅದರ ಹಿಂದಿನ ವರ್ಷ ಭೀಕರವಾದ ಬರಗಾಲ ಇದ್ದು, ಸುಮಾರು 156 ತಾಲ್ಲೂಕುಗಳಲ್ಲಿ ಬರ, ಕುಡಿಯುವುದಕ್ಕೆ ನೀರು ಇಲ್ಲದೇ ಹಾಹಾಕಾರ ಎಲ್ಲವೂ ಇದ್ದು ಹೆಚ್ಚಿನ ಹಣವನ್ನು ಆ ಕಡೆ divert ಮಾಡಬೇಕಾಗಿತ್ತು. ರಾಜ್ಯದಲ್ಲಿ ಉತ್ಪಾದನೆ ಸಹ ಕಡಿಮೆಯಾಗಿತ್ತು. ಇದೆಲ್ಲವನ್ನು ಅವರು ನೋಡಿದ್ದಾರೆ. ಕಳೆದೆರಡು ವರ್ಷಗಳ ಬರ ಎಷ್ಟು ಗಂಭೀರವಾಗಿತ್ತೆಂದರೆ 1974ರ ನಂತರ ಅಷ್ಟು ಭೀಕರ ಬರ ಯಾವತ್ತೂ ಬಂದಿರಲಿಲ್ಲ ಎಂದು ಹೇಳಿದ್ದಾರೆ. ಆ ಸಂದರ್ಭದಲ್ಲಿ resource mobilization ಹೇಗಿತ್ತು ಎನ್ನುವುದು ಗೊತ್ತು. ಆದರೆ ಇವತ್ತು ಇಡೀ ರಾಜ್ಯದಲ್ಲಿ ಮಳೆ ಬಂದಿದೆ. ನಮ್ಮ ಎಲ್ಲಾ ಕೆರೆಕಟ್ಟೆಗಳು ಮತ್ತು ಅಣೆಕಟ್ಟುಗಳು ತುಂಬಿವೆ. ಎಲ್ಲಿಯೂ ಯಾವ ತೊಂದರೆಗಳು ಇಲ್ಲ. ವಿದ್ಯುತ್ ಖರೀದಿ ಮಾಡಬೇಕಾದ ಅವಶ್ಯಕತೆಗಳು ಇಲ್ಲ. ಇಂತಹವುಗಳ ಮಧ್ಯೆ ಅವರ resource ಎಷ್ಟು ಕುಂಠಿತವಾಗಿದೆ ಎನ್ನುವುದನ್ನು ನೋಡಬೇಕು. ಮಾನ್ಯ ಸಿದ್ದರಾಮಯ್ಯನವರ ಬಗ್ಗೆ ನನಗೆ ಅಪಾರವಾದ ಗೌರವ ಇದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಧನ್ಯವಾದಗಳು.

**ಶ್ರೀ ಡಿ.ವಿ. ಸದಾನಂದಗೌಡ:-** ಧನ್ಯವಾದಗಳನ್ನು ನನಗೆ ಏಕೆ ಕೊಡುತ್ತಾರೆ, ಅವರಿಗೆ ಕೊಡಬೇಕು. ಏಕೋ, ಮಾನ್ಯ ವೀರಣ್ಣ ಮತ್ತಿಕಟ್ಟಿಯವರ ಆಕ್ರೋಶಗಳು, ಭಾವನೆಗಳನ್ನು ಮಾನ್ಯ ಮುಖ್ಯಮಂತ್ರಿಗಳು ಅರ್ಥಮಾಡಿಕೊಳ್ಳುತ್ತಿಲ್ಲ. ಸ್ವಲ್ಪ ಅರ್ಥಮಾಡಿಕೊಳ್ಳಬೇಕು. ಅದರಿಂದ ಅವರಿಗೆ ತೊಂದರೆಯಾಗುವುದಿಲ್ಲ, ಈ ಸದನದಲ್ಲಿ ನಮಗೆ ಮಾತನಾಡಲು ತೊಂದರೆಯಾಗುತ್ತದೆ. ಬೇರೆ ಯಾರು ಏಳುವುದಿಲ್ಲ, ಅವರು ಮಧ್ಯೆ ಮಧ್ಯೆ ಏಳುತ್ತಿರುತ್ತಾರೆ. ನಿನ್ನೆ ಅವರ ಬಿ.ಪಿ. ಏರಿದ್ದು ನೋಡಿ ನನಗೆ

ಹೆದರಿಕೆಯಾಗಿಬಿಟ್ಟಿದೆ. ನೋಡಿ, ಅವರು ಈಗ ಎದ್ದು ಮಾತನಾಡುತ್ತಾರೆ. ಇದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಬೇಕು. ಎರಡು ವರ್ಷಗಳಲ್ಲಿ ಇದ್ದ ಪರಿಸ್ಥಿತಿ, ರಾಜ್ಯದಲ್ಲಿ ಇವತ್ತು ಇರುವ ಪರಿಸ್ಥಿತಿ, ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಕೊಡಬೇಕಾದ ಆದ್ಯತೆ ಮತ್ತು ಸಂಪನ್ಮೂಲಗಳ ಬಗ್ಗೆ ಇರುವ ಪರಿಸ್ಥಿತಿಯಿಂದ ಇದನ್ನೆಲ್ಲ ಹೇಳುವುದಕ್ಕೆ ಸಾಧ್ಯವೇ ಹೊರತು ಇಲ್ಲದಿದ್ದರೆ ಸಾಧ್ಯವಿಲ್ಲ. ಪೂರಕ ಬಜೆಟ್‌ನಲ್ಲಿ ಬೇಕಾದಷ್ಟು ಅಂಕಿ ಅಂಶಗಳನ್ನು ಕೊಡಬಹುದು. ಅದರಲ್ಲಿ ಕೂಡ ಅಂಕಿ ಅಂಶಗಳನ್ನು ಹೇಗೆ ಕೊಟ್ಟಿದ್ದಾರೆ ಎಂದು ಸ್ವಲ್ಪ ಹೇಳುವುದಕ್ಕೆ ಬಯಸುತ್ತೇನೆ, ಆದರೆ ಸುದೀರ್ಘವಾಗಿ ಮಾತನಾಡುವುದಿಲ್ಲ. ಆದರೆ ನಮ್ಮ ರಾಜ್ಯದ ಹಿತಾಸಕ್ತಿಯಿಂದ ಒಂದಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಮೊದಲ ವರ್ಷದಲ್ಲಿ ₹ 38,940 ಕೋಟಿ ತೆರಿಗೆ ಸಂಗ್ರಹವಾಗಿದೆ. 2011–12ರಲ್ಲಿ ಇದೇ quarter ಗೆ ಮತ್ತು ಇದೇ ಸಂದರ್ಭದಲ್ಲಿ ಎಷ್ಟಾಗಿದೆ ಎಂಬುದನ್ನು ಪರಿಶೀಲನೆ ಮಾಡಲಿ. ನಾನು percentage ಕೊಡುತ್ತೇನೆ. ಏಕೆಂದರೆ ಅಂಕಿ ಅಂಶಗಳಲ್ಲಿ ಬಜೆಟ್ ಗಾತ್ರ ದೊಡ್ಡದಾದ ಕಾರಣ automatically ಅಂಕಿ ಅಂಶಗಳು ದೊಡ್ಡದಾಗುತ್ತದೆ. ನನಗೆ ತಿಳಿದ ಮಟ್ಟಿಗೆ ಕಳೆದ ತಿಂಗಳ ಕೊನೆಯವರೆಗೆ ಶೇಕಡ 39.7ರಷ್ಟು ಅಂದರೆ ₹ 38,940 ಕೋಟಿ ತೆರಿಗೆ ಸಂಗ್ರಹವಾಗಿದೆ. 2011ರ ಎರಡನೇ quarter ನಲ್ಲಿ ಸುಮಾರು ₹ 30,209 ಕೋಟಿ ಸಂಗ್ರಹವಾಗಿತ್ತು. ಅದರ ಶೇಕಡಾವಾರು 45.6 ಆಗಿದೆ. ಇವತ್ತು ಶೇಕಡ 39.7 ಆಗಿದೆ. 2012ರಲ್ಲಿ ಅದಕ್ಕಿಂತಲು ಭೀಕರವಾದ ಬರ ಇದ್ದಾಗ ₹ 36,520 ಕೋಟಿ ತೆರಿಗೆ ಸಂಗ್ರಹವಾಗಿದ್ದು, ಶೇಕಡ 45ರಷ್ಟು ಆಗಿತ್ತು. ಆರ್ಥಿಕ ನಿರ್ವಹಣೆ ಹೇಗಿದೆ ಎಂಬುದಕ್ಕೆ ಇದಕ್ಕಿಂತ ಕೈಗನ್ನಡಿ ಬೇಕಾಗಿಲ್ಲ ಎಂದು ನಾನು ತಿಳಿದುಕೊಳ್ಳುತ್ತಿದ್ದೇನೆ. ಇವತ್ತು ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲಿ ಮಳೆ, ಕುಡಿಯುವ ನೀರು, ವಿದ್ಯುತ್ ಯಾವುದಕ್ಕೂ ತೊಂದರೆಯಿಲ್ಲ. ಆದರೆ ತೆರಿಗೆ ಸಂಗ್ರಹಣೆಯಲ್ಲಿ ಐದಾರು ಪರ್ಸೆಂಟ್ ಹಿನ್ನಡೆ ಎಂದು ಹೇಳಿದರೆ, ಪ್ರಾಯಶಃ ಇಷ್ಟು ಬಜೆಟ್ ಮಂಡನೆ ಮಾಡಿ, ಈ ರಾಜ್ಯದ ಮುಖ್ಯಮಂತ್ರಿಗಳಾದ ಮೇಲೆ ಎಲ್ಲೆಲ್ಲಿ ಸೋರಿಕೆಗಳನ್ನು ತಡೆಗಟ್ಟಲು ಹಾಗೂ ಸಂಗ್ರಹಕ್ಕೆ ಪ್ರಾಮುಖ್ಯತೆ

ನೀಡಬೇಕಾಗಿದ್ದ ಕಡೆ ಖಂಡಿತವಾಗಿ ಗಮನ ಕೊಟ್ಟಿಲ್ಲ. ನಾನು ಕೇವಲ ಈ ಅಂಕಿ ಅಂಶಗಳ ಆಧಾರದ ಮೇಲೆ ಹೇಳುವುದಿಲ್ಲ. ಮೊದಲ 6 ತಿಂಗಳ ಸಾಧನೆ ಖಂಡಿತವಾಗಿ ರಾಜ್ಯದ ಜನರಿಗೆ ಯಾವುದೇ ತೃಪ್ತಿಕೊಡುವಂತಹ ಸಾಧನೆ ಅಲ್ಲ. Financial Management ಆರ್ಥಿಕವಾಗಿ ಭಾರಿ ಹಿಂದುಳಿದಿದೆ. ಪೂರಕ ಅಂದಾಜಿನಲ್ಲಿ ಇನ್ನಷ್ಟು ಕೊಟ್ಟರು. ಅದರಲ್ಲಿ ಸುಮಾರು ₹ 2,000 ಕೋಟಿಗಳಷ್ಟು ಏನು ಮಾಡಬೇಕು, ಹೇಗೆ ಮಾಡಬೇಕು, ಎನ್ನುವ ಆಲೋಚನೆಯಿಂದ ಪೂರಕ ಅಂದಾಜಿನಲ್ಲಿ ಹೇಳುವಂತಹ ಪ್ರಯತ್ನ ಮಾಡಿದ್ದಾರೆ. ಈ ರೀತಿ ತೆರಿಗೆ ಮೂಲಗಳಿಂದ ಆದರೆ ತೆರಿಗೆಯೇತರ ಮೂಲಗಳಿಂದಲೂ ಅಷ್ಟೇ ಹಿನ್ನೆಡೆಯಲ್ಲಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ತೆರಿಗೆಯೇತರ ಮೂಲಗಳ ರೂಪದಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ವಿಧಿಸುವಂತಹ ಶುಲ್ಕಗಳು ಮತ್ತು ದಂಡಗಳ ಸಂಗ್ರಹದಲ್ಲಿ ಸಹ ಇವತ್ತು ಹಿನ್ನಡೆಯನ್ನು ಸಾಧಿಸಲಾಗಿದೆ. ಕಳೆದ ವರ್ಷ ಮೊದಲ ಆರು ತಿಂಗಳಲ್ಲಿ ತೆರಿಗೆಯೇತರ ಮೂಲಗಳ ರೂಪದಲ್ಲಿ ಸುಮಾರು 1645 ಕೋಟಿ ರೂಪಾಯಿಗಳು ಸಂಗ್ರಹವಾಗಿದೆ. ಈ ವರ್ಷ ಸುಮಾರು 1603 ಕೋಟಿ ರೂಪಾಯಿಗಳಷ್ಟು ಸಂಗ್ರಹವಾಗಿದೆ ಎಂದು ಹೇಳುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ವಾಹನಗಳ ಸಂಖ್ಯೆ ಹೆಚ್ಚಾಗುತ್ತಿದೆ ಅದೇ ಪ್ರಮಾಣದಲ್ಲಿ ತೆರಿಗೆ ಸಂಗ್ರಹ ಸಹ ಹೆಚ್ಚಾಗಬೇಕಾಗಿತ್ತು. ಆದರೆ ತೆರಿಗೆ ಸಂಗ್ರಹದ ಬಗ್ಗೆ ಯಾಕೆ ಸರ್ಕಾರ ಗಮನ ಕೊಡುತ್ತಿಲ್ಲ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಇಡೀ ರಾಜ್ಯಕ್ಕೆ ಬಂಗಾರ ಹಂಚುತ್ತೇವೆಂದು ನಾವು ಘೋಷಣೆ ಮಾಡಬಹುದು. ಆದರೆ, ಬಂಗಾರ ಖರೀದಿ ಮಾಡುವುದಕ್ಕೆ ನಮ್ಮ ಖಜಾನೆಯಲ್ಲಿ ದುಡ್ಡು ಇಲ್ಲದೇ ಹೋದರೆ ಏನು ಮಾಡುವುದಕ್ಕೂ ಆಗುವುದಿಲ್ಲ. ಸರ್ಕಾರದ ಖಜಾನೆಯನ್ನು ತುಂಬಿಸಿದರೆ ಮಾತ್ರ ಎಲ್ಲ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆರ್ಥಿಕ ನಿರ್ವಹಣೆಯನ್ನು ಸರಿದೂಗಿಸುವಂತಹ ವಿಚಾರದಲ್ಲಿ ನಾವು ಯಶಸ್ವಿಯಾದರೆ, ಬಾಕಿ ಎಲ್ಲ ವಿಚಾರಗಳಲ್ಲಿ

ಯಶಸ್ವಿಯಾಗುತ್ತೇವೆ. But this Government has miserably failed in mobilizing the resources. ಇದನ್ನು ನಾನು ಅಂಕಿಅಂಶಗಳ ಮೂಲಕ ನೀಡುತ್ತಿದ್ದೇನೆಯೇ ಹೊರತು ಬರಿ ಬಾಯಿ ಮಾತಿನಲ್ಲಿ ಈ ಸರ್ಕಾರ ಸರಿಯಿಲ್ಲವೆಂದು ಹೇಳುತ್ತಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಸಾಲದ ಬಗ್ಗೆ ನಾನು ಉಲ್ಲೇಖ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಕಳೆದ ಆರು ತಿಂಗಳಿನಲ್ಲಿ ಎಷ್ಟು ಸಾಲವನ್ನು ಕಡಿಮೆ ಮಾಡುವುದಕ್ಕೆ ಇವರು ಪ್ರಯತ್ನಪಟ್ಟಿದ್ದಾರೆ ಎನ್ನುವುದನ್ನು ತಿಳಿಸಬೇಕಾಗಿದೆ. ಲೋಕೋಯೋಗಿ ಇಲಾಖೆಯ ಬಿಲ್‌ಗಳು ಎಷ್ಟು ಪೆಂಡಿಂಗ್ ಇವೆ ಮತ್ತು ಬೇರೆ ಬೇರೆ ಇಲಾಖೆಗಳಲ್ಲಿ ಎಷ್ಟು ಬಿಲ್‌ಗಳು ಪೆಂಡಿಂಗ್‌ನಲ್ಲಿವೆ ಎನ್ನುವುದನ್ನು ತಿಳಿಸಬೇಕಾಗಿದೆ. ಏಕೆಂದರೆ, ಲೋಕೋಪಯೋಗಿ ಇಲಾಖೆಗೆ 1000 ಕೋಟಿ ರೂಪಾಯಿ ಪೂರಕ ಅಂದಾಜಿನಲ್ಲಿ ಬಂದಿದೆ.

**ಶ್ರೀ ಬಿ.ರಮಾನಾಥ ರೈ:-** ಸನ್ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದಿಂದ ಅನುದಾನ ಬಂದಿದೆ.

**ಶ್ರೀ ಡಿ.ವಿ.ಸದಾನಂದಗೌಡ:-** ಸನ್ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದ ಹಣವನ್ನು ವಿನಿಯೋಗ ಮಾಡುವುದಕ್ಕಾಗದೇ ಇರುವಂತಹ ವಿಚಾರವನ್ನು ಸಹ ನಾನು ನಂತರ ಪ್ರಸ್ತಾಪ ಮಾಡುತ್ತೇನೆ. ಇವರ ಸರ್ಕಾರ ಅಧಿಕಾರಕ್ಕೆ ಬಂದು ಜನ ಹುಲಿ ಹಿಡಿಯುವ ಪರಿಸ್ಥಿತಿ ನಿರ್ಮಾಣವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಒಂದು ಕಡೆ ಆದಾಯ ಸಂಗ್ರಹದಲ್ಲಿ ಕುಸಿತವುಂಟಾಗಿದ್ದರೆ ಮತ್ತೊಂದು ಕಡೆ ವೆಚ್ಚದ ಪ್ರಮಾಣ ಹೆಚ್ಚಾಗುತ್ತಿದೆ. ಅನ್ನ ಭಾಗ್ಯ, ಕ್ಷೀರ ಭಾಗ್ಯ, ಹಿಂದುಳಿದ ವರ್ಗ ಮತ್ತು ಪರಿಶಿಷ್ಟ ಜಾತಿ ವರ್ಗಗಳ ಸಾಲ ಮನ್ನಾ ಮುಂತಾದ ಯೋಜನೆಗಳಿಂದಾಗಿ ಸಹಾಯಧನ ನೀಡುವ ಪ್ರಮಾಣದಲ್ಲಿ ಭಾರೀ ಏರಿಕೆಯಾಗಿದೆ. It is quite evident on the fact of it. Anybody can say it. ಏನಾಗಿದೆ ಎನ್ನುವುದನ್ನು ಅವರೆ ಹೇಳಬೇಕಾಗಿದೆ. ಅದರ ಅಂಕಿಅಂಶಗಳನ್ನು ಕೊಡುವುದಕ್ಕೆ ನಾನು ಹೋಗುವುದಿಲ್ಲ. ಕಳೆದ

ವರ್ಷ 10,400 ಕೋಟಿಗಳಷ್ಟು ಬಾಕಿ ಇದ್ದ ಹಣವನ್ನು ವಿತರಣೆ ಮಾಡಲಾಗಿತ್ತು. ಈ ವರ್ಷ ಅದರ ಪ್ರಮಾಣ 14,500 ಕೋಟಿಗಳನ್ನು ಮುಟ್ಟಿದೆ. ಅಂದರೆ ಸುಮಾರು 4000 ಕೋಟಿ ರೂಪಾಯಿಗಳಷ್ಟು ನಮ್ಮ ವೆಚ್ಚ ಹೆಚ್ಚಾಗುತ್ತಿದೆ. ಇದನ್ನು ಹೇಗೆ ಸರಿದೂಗಿಸುತ್ತಾರೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಒಂದು ಕಡೆ ವೆಚ್ಚದ ಪ್ರಮಾಣ ಹೆಚ್ಚಾಗುವುದು ಮತ್ತೊಂದು ಕಡೆ ಸಂಪನ್ಮೂಲಗಳ ಕ್ರೋಢೀಕರಣ ಕುಸಿತ ಕಾಣುವುದು ಇದು ಸರಿಯಾದಂತಹ ಆರ್ಥಿಕ ನಿರ್ವಹಣೆಯಲ್ಲ. ಆರ್ಥಿಕ ನಿರ್ವಹಣೆಗೆ, ಆರ್ಥಿಕ ಜವಾಬ್ದಾರಿಗಳ ಕಾಯಿದೆ (Fiscal Responsibility Act) ಇದೆ, ಉಳಿದಂತೆ ಬೇರೆ ಮಾರ್ಗಸೂಚಿಗಳು ಇವೆ, ಅದರೊಳಗೆ ಇದ್ದೇವೆ ಎಂದು ಹೇಳುವುದು ಸುಲಭ. Account tally ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಬಾರದು. ಆದರೆ, ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಸಂತೋಷಕರವಾಗಿಲ್ಲ.

ಸನ್ಮಾನ್ಯ ಸಭಾಪತಿಯವರೇ, 'ಅನುತ್ಪಾದಕ ವೆಚ್ಚಗಳನ್ನು ಮಿತಗೊಳಿಸುವಂತಹ ಆರ್ಥಿಕ ಮಿತವ್ಯಯವನ್ನು ಕೈಗೊಳ್ಳುತ್ತೇವೆ' ಎಂದು ಪದೇ ಪದೇ ಮಾನ್ಯ ಮುಖ್ಯಮಂತ್ರಿಗಳು ಕೇಳಿದ್ದಾರೆ. Let him show. ಅನುತ್ಪಾದಕ ವೆಚ್ಚವನ್ನು ಕಡಿತಗೊಳಿಸುವುದಕ್ಕೆ ನಾವು ಇಂತಹ ಕ್ರಮವನ್ನು ಕೈಗೊಂಡಿದ್ದೇವೆ ಎಂದು ಆ ನಿಟ್ಟಿನಲ್ಲಿ ಒಂದು ನಾಲ್ಕು ಉದಾಹರಣೆಗಳನ್ನು ಅವರು ತೋರಿಸಲಿ ಸಾಕು. ಎಲ್ಲಿಯೂ ಅಂತಹ ಒಂದು ಉದಾಹರಣೆ ಕಾಣುತ್ತಿಲ್ಲ. ಆರ್ಥಿಕ ಮಿತವ್ಯಯದ ಬದಲಿಗೆ ಆರ್ಥಿಕ ಅಪವ್ಯಯ ಹೆಚ್ಚಾಗಿದೆ. ನಾನು ಅದಕ್ಕೆ ಉದಾಹರಣೆಯನ್ನ ಕೊಡಬಲ್ಲೆ. ಆದರೆ ವಿವರಗಳಿಗೆ ಹೋಗುವುದಿಲ್ಲ. ಆರ್ಥಿಕ ನಿರ್ವಹಣೆಯ ಬಗ್ಗೆ ಏನೇನು ಮುತುವರ್ಜಿಗಳನ್ನು ವಹಿಸಬೇಕು, ಆ ನಿಟ್ಟಿನಲ್ಲಿ ಏನು ಮಾಡಬಹುದು ಎನ್ನುವುದರ ಬಗ್ಗೆ ನನ್ನ ಇತಿಮಿತಿಯೊಳಗೆ ಒಂದಷ್ಟು ಸಲಹೆಗಳನ್ನು ಕೊಡುವುದಕ್ಕೆ ಮಾತ್ರ ಇಚ್ಛೆಪಡುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಇಡೀ ರಾಜ್ಯದಲ್ಲಿ ಆರ್ಥಿಕ ಕುಸಿತ ಉಂಟಾದರೆ ಬಹಳಷ್ಟು ತೊಂದರೆಗಳನ್ನು ನಾವು ಎದುರಿಸಬೇಕಾಗುತ್ತದೆ. ಈ ವರ್ಷದಲ್ಲಿ 37,740 ಕೋಟಿ ರೂಪಾಯಿಗಳಷ್ಟು ವಾಣಿಜ್ಯ ತೆರಿಗೆ ಸಂಗ್ರಹ

ಮಾಡಬೇಕಾಗಿತ್ತು. ಆದರೆ, ಇಲ್ಲಿಯವರೆಗೆ 17,314 ಕೋಟಿ ರೂಪಾಯಿಗಳಷ್ಟು ಮಾತ್ರ ತೆರಿಗೆ ಸಂಗ್ರಹವಾಗಿದೆ. ಅಂದಾಜು ಶೇಕಡಾ 45.05ರಷ್ಟು ಆಗಿದೆ. ಹಿಂದಿನ ವರ್ಷ 2012 ಸೆಪ್ಟೆಂಬರ್ ಕೊನೆಯಲ್ಲಿ 31,100 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಬೇಕಾಗಿತ್ತು. ನಮ್ಮ ಸರ್ಕಾರ ಅಧಿಕಾರದಲ್ಲಿ ಇದ್ದಾಗ, ಬರದ ಪರಿಸ್ಥಿತಿಯಲ್ಲೂ ಸಹ 15445 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಿದ್ದೇವೆ. ಅಂದರೆ, ಶೇಕಡವಾರು 49.66ರಷ್ಟು ತೆರಿಗೆಯನ್ನು ಸಂಗ್ರಹ ಮಾಡಿದ್ದೆವು. ಇವರಿಗಿಂತ ಹೆಚ್ಚು ಸಂಗ್ರಹ ಮಾಡಿದ್ದೆವು. 2011ರಲ್ಲಿ ಸುಮಾರು 26700 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಬೇಕಾದ ಗುರಿಯಿತ್ತು. ಆ ವರ್ಷದ ಸೆಪ್ಟೆಂಬರ್ ಕೊನೆಯಲ್ಲಿ ಸುಮಾರು 13,890 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಿದ್ದೆವು. ಅಂದರೆ, ಸಂಗ್ರಹದ ಪ್ರಮಾಣ ಶೇಕಡಾ 49.23ರಷ್ಟು ಎಂದು ಹೇಳಬಹುದು. ವಾಣಿಜ್ಯ ತೆರಿಗೆ ಇಲಾಖೆ ಎನ್ನುವುದು ಅತ್ಯಂತ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡಿರುವಂತಹ ಇಲಾಖೆಯಾಗಿದೆ. ಆದರೂ ಸಹ ತೆರಿಗೆಯ ಸಂಗ್ರಹದ ಪ್ರಮಾಣ ಇಳಿಕೆಯಾಗಿದೆ. ಇದಕ್ಕೆ ಕಾರಣವೇನೆಂದರೆ, ಜನಸಂಖ್ಯೆ ಹೆಚ್ಚಾದಂತೆ ವ್ಯವಹಾರಗಳು ತನ್ನಿಂದ ತಾನೇ ಹೆಚ್ಚಾಗುತ್ತದೆ. ಆದರೆ, ಪ್ರಸ್ತುತ ಪರಿಸ್ಥಿತಿಯಲ್ಲಿ ವ್ಯವಹಾರಗಳು ಜಾಸ್ತಿಯಾಗಿವೆ, ಹಣದ ಸಂಗ್ರಹ ಮಾತ್ರ ಕಡಿಮೆಯಾಗಿದೆ. ಇದರ ಬಗ್ಗೆ ಸರ್ಕಾರ ಆಲೋಚನೆ ಮಾಡಬೇಕಾಗುತ್ತದೆ. ಈ ಹೋಲಿಕೆಯನ್ನು ನೋಡಿದರೆ, ಈ ವರ್ಷದ ಸೆಪ್ಟೆಂಬರ್ ಕೊನೆಯಲ್ಲಿ ವಾಣಿಜ್ಯ ಇಲಾಖೆಯಿಂದ ಬರಬೇಕಾದ ಆದಾಯದಲ್ಲಿ ಸುಮಾರು 1426 ಕೋಟಿಗಳಷ್ಟು ಹಿನ್ನಡೆಯಾಗಿದೆ. ಈ ಸರ್ಕಾರ Review Meeting ಗಳನ್ನು ನಡೆಸಬೇಕಾಗುತ್ತದೆ ಮತ್ತು ಈ ಹಿನ್ನಡೆಗೆ ಕಾರಣವಾದ ಅಂಶಗಳ ಬಗ್ಗೆ ಅಧಿಕಾರಿಗಳನ್ನು ವಿಚಾರಿಸಬೇಕಾಗುತ್ತದೆ. ಅಧಿಕಾರಿಗಳು ಜಡ್ಡು ಹಿಡಿದು ಹೋಗಿದ್ದಾರೆ ಮತ್ತು ಬೇರೆ ವಿಷಯಗಳಲ್ಲಿ ಕಾಲಹರಣ ಮಾಡುತ್ತಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಅಬಕಾರಿ ಇಲಾಖೆಯ ಬಗ್ಗೆ ಹೇಳಬೇಕಾದರೆ, ಈ ಸರ್ಕಾರ ಜನರಿಗೆ ಅಗ್ಗದ ಮದ್ಯವನ್ನು ಕೊಡುವುದಕ್ಕೆ ಹೋಗಿದ್ದರು. ಆದರೆ ಅರ್ಧದಲ್ಲಿಯೇ ಆ ಯೋಜನೆಗೆ ತೆರೆ ಬಿತ್ತು. ಇವರಿಗೆ

ದೇವರು ಒಳ್ಳೆ ಬುದ್ದಿಯನ್ನು ಕೊಟ್ಟಿದ್ದಾನೆ. ಅದೇ ಬುದ್ದಿಯನ್ನು ಮುಂದೆಯೂ ಕೊಡಲಿ ಎಂದು ಪ್ರಾರ್ಥನೆ ಮಾಡುತ್ತೇನೆ. ಅಬಕಾರಿ ಇಲಾಖೆಗೆ ಸಂಬಂಧಪಟ್ಟಂತೆ 2013–14ನೇ ಸಾಲಿನಲ್ಲಿ 16,600 ಕೋಟಿ ರೂಪಾಯಿಗಳು ಸಂಗ್ರಹವಾಗಬೇಕಾಗಿತ್ತು. ಇಲ್ಲಿಯವರೆಗೆ ಸುಮಾರು 6168 ಕೋಟಿ ರೂಪಾಯಿಗಳು ಮಾತ್ರ ಸಂಗ್ರಹವಾಗಿದೆ. ಅಂದರೆ, ಸುಮಾರು ಶೇಕಡಾ 49ರಷ್ಟು ಸಂಗ್ರಹವಾಗಿದೆ. 2012ನೇ ಸೆಪ್ಟೆಂಬರ್ ಕೊನೆಯಲ್ಲಿ 10776 ಕೋಟಿ ರೂಪಾಯಿಗಳು ಸಂಗ್ರಹವಾಗಬೇಕಾಗಿತ್ತು. ಆದರೆ, ಸುಮಾರು 5558 ಕೋಟಿ ರೂಪಾಯಿಗಳಷ್ಟು ತೆರಿಗೆ ಸಂಗ್ರಹವಾಗಿದೆ. ಅಂದರೆ, ಶೇಕಡಾ 51.6ರಷ್ಟು ಸಂಗ್ರಹವಾಗಿತ್ತು. ಹಿಂದಿನ ವರ್ಷಗಳಿಗೆ ಹೋಲಿಸಿದರೆ ಸುಮಾರು 327 ಕೋಟಿ ರೂಪಾಯಿಗಳಷ್ಟು ಅಂದರೆ, ಶೇಕಡಾ 2.6ರಷ್ಟು ಹಿನ್ನಡೆಯಾಗಿದೆ. ಈಗ ಅಲ್ಲೊಂದು ಇಲ್ಲೊಂದು shopಗಳನ್ನು ಕೊಡುತ್ತಾರೆ ಎನ್ನುವಂತಹ ಸುದ್ದಿ ಹರಡಿದೆ. ಈ ಕುಸಿತವನ್ನು ಸಮತೂಗಿಸಬೇಕೆನ್ನುವ ಕಾರಣದಿಂದ ಆ ರೀತಿ ಮಾಡುತ್ತಿರಬಹುದು. ಅದು ಸರ್ಕಾರಕ್ಕೆ ಬಿಟ್ಟ ವಿಚಾರ, ನಾನೇನು ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಮೋಟಾರು ವಾಹನ ತೆರಿಗೆ ಇಲಾಖೆ ಮತ್ತೊಂದು ಪ್ರಮುಖವಾದಂತಹ ಇಲಾಖೆಯಾಗಿದೆ. 2013–14ರಲ್ಲಿ 4120 ಕೋಟಿ ರೂಪಾಯಿಗಳಷ್ಟು ತೆರಿಗೆಯನ್ನು ಸಂಗ್ರಹ ಮಾಡಬೇಕಾಗಿತ್ತು. ಆದರೆ ಈ ವರ್ಷ ಸೆಪ್ಟೆಂಬರ್ ಕೊನೆಯವರೆಗೆ 1790 ಕೋಟಿ ರೂಪಾಯಿಗಳಷ್ಟು ತೆರಿಗೆ ಸಂಗ್ರಹವಾಗಿದೆ. ಅಂದರೆ, ಶೇಕಡಾ 43.5 ರಷ್ಟು ಮಾತ್ರ ಗುರಿ ಮುಟ್ಟಲಾಗಿದೆ. ಯಾವುದೋ ಒಂದು ಇಲಾಖೆಯಲ್ಲಿ ಸಂಪನ್ಮೂಲ ಸಂಗ್ರಹ ಹೆಚ್ಚು ಕಡಿಮೆಯಾಗಿದ್ದರೆ ಅದನ್ನು ಹೇಗೋ ನಿರ್ವಹಿಸುತ್ತಾರೆಂದು ಹೇಳಬಹುದಾಗಿತ್ತು. ಆದರೆ, ಒಟ್ಟಾರೆಯಾಗಿ ಸರ್ಕಾರಿ ಯಂತ್ರ ಯಾವ ರೀತಿಯಲ್ಲಿ ಹಿಂದಕ್ಕೆ ಹೋಗಿದೆ ಎನ್ನುವುದಕ್ಕೆ ಈ ಉದಾಹರಣೆಗಳನ್ನು ನೀಡುತ್ತಿದ್ದೇನೆ. ಕಳೆದ ವರ್ಷ ಅಂದೆ, ಸೆಪ್ಟೆಂಬರ್ 2012ರಲ್ಲಿ ಸುಮಾರು 3350 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಬೇಕಾದ ಗುರಿಯನ್ನು ಹೊಂದಲಾಗಿತ್ತು. ಆದರೆ, ಸಂಗ್ರಹ ಮಾಡಿದ ಮೊತ್ತ 1739 ಕೋಟಿ

ರೂಪಾಯಿಗಳಾಗಿತ್ತು. ಅಂದರೆ, ಶೇಕಡಾ 51.98ರಷ್ಟು ಸಂಗ್ರಹವಾಗಿತ್ತು. ಹಿಂದಿನ ವರ್ಷಗಳಿಗೆ ಹೋಲಿಸಿದರೆ ಈ ವರ್ಷ ಸುಮಾರು 342 ಕೋಟಿ ರೂಪಾಯಿಗಳಷ್ಟು ಹಿನ್ನಡೆ ಸಾಧಿಸಲಾಗಿದೆ. ಅಂದರೆ, ಶೇಕಡಾ 8.6ರಷ್ಟು ಕುಸಿತ ಕಂಡಿದೆ. ಈ ಆರ್ಥಿಕ ಕುಸಿತವನ್ನು ಭರ್ತಿ ಮಾಡುವುದಕ್ಕೆ ಯಾವ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಪ್ರಸ್ತುತ ಇಷ್ಟು ಕಡಿಮೆ ಪ್ರಮಾಣದಲ್ಲಿ ತೆರಿಗೆ ಸಂಗ್ರಹವಾಗಿದ್ದರೆ ಇನ್ನು ಮಾರ್ಚ್ ವೇಳೆಗೆ ಇವರು ಗುರಿ ಸಾಧಿಸುವುದಕ್ಕೆ ಸಾಧ್ಯವಿದೆಯೇ? ಎನ್ನುವುದು ನನ್ನ ಪ್ರಶ್ನೆಯಾಗಿದೆ. ಏಕೆಂದರೆ, ಮುಂದಿನ ದಿನಗಳಲ್ಲಿ ಚುನಾವಣೆಗಳು ಬರುತ್ತವೆ. ಅದರಲ್ಲಿ ಮಗ್ನರಾಗುತ್ತಾರೆಯೇ ಹೊರತು ಸಂಪನ್ಮೂಲಗಳ ಕ್ರೋಢೀಕರಣದ ಕಡೆಗೆ ಇವರ ಗಮನ ಇರುವುದಿಲ್ಲ. ಲೋಕಸಭೆಯ ಚುನಾವಣೆಗಳು ಬಂದರೆ, ರಾಜ್ಯವನ್ನು ಮರೆತು ಹೊಸದಾಗಿ ಬೇರೆ ಬೇರೆ ಯೋಜನೆಗಳನ್ನು ಘೋಷಣೆ ಮಾಡಿ ಚುನಾವಣೆಯ ಕಡೆಗೆ ಗಮನವನ್ನು ಕೊಡುತ್ತಾರೆಯೇ ಹೊರತು ಇದಕ್ಕೆ ಪ್ರಾಮುಖ್ಯತೆಯನ್ನು ಕೊಡುವುದಿಲ್ಲ.

ಸನ್ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ, ಮುಂದಿನ ಮೂರು ತಿಂಗಳಲ್ಲಿ ಯಾವ ಗುರಿ ಮುಟ್ಟಬೇಕೆಂದು ಇದ್ದೇವೆ ಅದನ್ನು ಒಂದು ಒಂದೂವರೆ ತಿಂಗಳಿನಲ್ಲಿ ಮುಟ್ಟುವಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಉತ್ತರ ಕರ್ನಾಟಕದಲ್ಲಿ ನೀರಾವರಿಗೆ 50,000 ಕೋಟಿ ರೂಪಾಯಿಗಳಷ್ಟು ಆದ್ಯತೆಯನ್ನು ಕೊಡುತ್ತೇವೆಂದು ಹೇಳಿದ್ದಾರೆ. ಇದೇ ರೀತಿಯಲ್ಲಿ ಸಂಪನ್ಮೂಲಗಳ ಕ್ರೋಢೀಕರಣ ಮಾಡಿದರೆ 50,000 ಕೋಟಿ ರೂಪಾಯಿಗಳಲ್ಲ, 5000 ಕೋಟಿ ರೂಪಾಯಿಗಳನ್ನು ಸಹ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ಯಾಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಪ್ರಗತಿಗೆ ಮಾರಕವಾಗುವಂತಹ ರೀತಿಯಲ್ಲಿ ವ್ಯವಸ್ಥೆಗಳು ನಡೆಯುತ್ತಿವೆ. ಎಲ್ಲಿ ಏನು ಎಂದು ಹೇಳುವುದಕ್ಕೆ ಸಾಧ್ಯವಾಗುತ್ತಿಲ್ಲ. ನೋಂದಣಿ ಮತ್ತು ಮುದ್ರಾಂಕ ಇಲಾಖೆಯನ್ನು ತೆಗೆದುಕೊಂಡರೂ ಇದೇ ರೀತಿ ಇದೆ. ಪ್ರತಿಯೊಂದು ಇಲಾಖೆಯಲ್ಲಿಯೂ ಇದೇ ರೀತಿ ಆಗಿದೆ. ನಾನು ಪ್ರಮುಖವಾಗಿರುವಂತಹ

ಮೂರ್ನಾಲ್ಕು ಇಲಾಖೆಗಳ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಉಳಿದವುಗಳ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಉಳಿದವುಗಳ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ.

(2–00 ಗಂಟೆ)

ನೋಂದಣಿ ಮತ್ತು ಮುದ್ರಾಂಕ 2013–14ನೇ ಸಾಲಿಗೆ ಇವರು 6,500 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಬೇಕಾಗಿತ್ತು. ಈ ವರ್ಷ ಇಷ್ಟರವರೆವಿಗೂ 3,064 ಕೋಟಿ ರೂಪಾಯಿಗಳು ಅಂದರೆ ಶೇಕಡ 47.1ರಷ್ಟು ಮಾಡಿದ್ದಾರೆ. 12ನೇ ಸೆಪ್ಟೆಂಬರ್ 2012ಕ್ಕೆ 5,200 ಕೋಟಿ ರೂಪಾಯಿಗಳು ಒಟ್ಟು ನಮ್ಮ ಗುರಿ ಇತ್ತು. ಅದರಲ್ಲಿ ಸೆಪ್ಟೆಂಬರ್‌ಗೆ 2,544 ಕೋಟಿ ರೂಪಾಯಿಗಳನ್ನು ಮಾಡಿ ನಾವು ಶೇಕಡ 48.09 ರಷ್ಟು ಸಂಗ್ರಹ ಮಾಡಿದ್ದೇವೆ. ಅಲ್ಲಿಯೂ ಕೂಡ ನಮಗೆ 1,117 ಕೋಟಿ ರೂಪಾಯಿಗಳು ಸಂಗ್ರಹವಾಗಲಿಲ್ಲ. ಇದನ್ನೆಲ್ಲಾ ನೋಡಿದರೆ ಇವತ್ತು ರಾಜ್ಯದ ಆರ್ಥಿಕ ಪರಿಸ್ಥಿತಿ ಹೇಗಿದೆ ಎನ್ನುವ ಬಗ್ಗೆ ನಾವು ಆಲೋಚನೆ ಮಾಡಬೇಕು. ನನ್ನ ಬಳಿ ಎಲ್ಲಾ ಅಂಕಿ–ಸಂಖ್ಯೆಗಳಿವೆ. ನಾನು ಬೇರೆ ಬೇರೆ ಇಲಾಖೆಗಳಿಗೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಇಂತಹ ಒಂದು ಸಂದರ್ಭದಲ್ಲಿ ಇವರು supplementary estimateನ್ನು ಮಂಡನೆ ಮಾಡಿದ್ದಾರೆ. ನಾನು ಒಂದು ಅಂಶವನ್ನು ಕೇಳಲಿಕ್ಕೆ ಇಷ್ಟಪಡುತ್ತಿದ್ದೇನೆ. ಪ್ರತಿಬಾರಿ ಮಾತನಾಡಿದಾಗ, ಮೊನ್ನೆಯು ಕೂಡ ಎಲ್ಲೋ ಮಾತನಾಡಿದಾಗ ಹೇಳಿದರು. ಇಷ್ಟೆಲ್ಲಾ ಹೇಳುವಂಥಾದ್ದನ್ನು ಕೂಡ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಹಲವಾರು ಸಂಗತಿಗಳನ್ನು ಬಿಟ್ಟಿದ್ದಾರೆ. ಅವರು ಅಭಿವೃದ್ಧಿಗಾಗಿ ಬಹಳಷ್ಟು ಕೊಟ್ಟಿದ್ದೇವೆಂದು ಭಾರಿ ಸಂಗತಿಗಳನ್ನು ಹೇಳಿದರು. ನಾವು ಯೋಜನೆಗಾಗಿ 6,020 ಕೋಟಿ ರೂಪಾಯಿಗಳನ್ನು ಮತ್ತು ಯೋಜನೇತರ ವೆಚ್ಚಕ್ಕಾಗಿ 1,520 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದರು. 1,520 ಕೋಟಿ ರೂಪಾಯಿ ಎಂದರೆ ಅದು ಕಡಿಮೆ ಹಣವೇ ಎಂದು ಕೇಳುತ್ತೇನೆ. ಎಲ್ಲೋ ಒಂದು ಯೋಜನೇತರ ವೆಚ್ಚಕ್ಕಾಗಿ ಬಹಳ ಕಡಿಮೆ ಹಣವನ್ನು ನೀಡಿದ್ದೇವೆಂದು ಹೇಳಿದ್ದಾರೆ. ಇವತ್ತು ವಿತ್ತೀಯ ಕೊರತೆ ಬಗ್ಗೆ

ಹೇಳುವುದಾದರೆ, Fiscal Responsibility Actನ ಒಳಗಡೆ ಇದೆ ಎಂದು ಅವರು ಹೇಳಬಹುದು. 2.9 ಪರ್ಸೆಂಟ್, 3 ಪರ್ಸೆಂಟ್ ನಮಗೆ ಗೈಡ್‌ಲೈನ್ಸ್‌ನಲ್ಲಿದೆ, ಆ ವ್ಯಾಪ್ತಿಯ ಒಳಗಡೆ ಇದ್ದೇವೆ ಎಂದು ಅವರು ಹೇಳಬಹುದು. ಸಾಲದ ಹೊರೆಯನ್ನು ಕಡಿಮೆ ಮಾಡುತ್ತೇವೆಂದು ಹೇಳಿದರು. ಸಾಲದ ಹೊರೆಯನ್ನು ಎಷ್ಟು ಕಡಿಮೆ ಮಾಡುತ್ತಾರೆಂದು ಅವರು ಈಗ ನಮಗೆ ಹೇಳಬೇಕಲ್ಲಾ. ಈ ರಾಜ್ಯವನ್ನು ಸಾಲದಲ್ಲಿ ಮುಳುಗಿಸಿದರು ಎಂದು ಹೇಳಿ, ಜವಾಬ್ದಾರಿ ಬಂದ ತಕ್ಷಣ ಅದನ್ನೆಲ್ಲಾ ಮರೆತು ಬಿಡುವುದೇ? ಅದು ಸರಿಯಲ್ಲ, ಅದರ ಬಗ್ಗೆ ಅವರು ಹೇಳಬೇಕು. Mining activities ಈ ವರ್ಷ ನಿಂತಿರುವುದಿಲ್ಲ. ಹಿಂದಿನ ಎರಡು-ಮೂರು ವರ್ಷಗಳಿಂದಲೂ ಕರ್ನಾಟಕದ mining activities ನಲ್ಲಿ ಯಾವುದೇ ಸಂಪನ್ಮೂಲಗಳು ನಮಗೆ ಬರುತ್ತಿರಲಿಲ್ಲ. ನಾವು ಎಲ್ಲವನ್ನು ನೋಡಿದ್ದೇವೆ. ಹಿಂದಿನ ಸಂದರ್ಭದಲ್ಲಿ ಸುಮಾರು 4,000 ಕೋಟಿ ರೂಪಾಯಿ ಬರುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ನಮ್ಮ mining ಕೂಡ ಕಡಿಮೆಯಾಗಿದೆ. ಇವತ್ತು plan expenditure ಎಷ್ಟು ಪರ್ಸೆಂಟ್ ಆಗಿದೆ? Plan expenditure ಈಗಾಗಲೇ 52 ಪರ್ಸೆಂಟ್ reach ಆಗಿದೆ ಎಂಬುದನ್ನು ನಾನು ಕೇಳಿದ್ದೇನೆ. ನನಗೆ ಇದರ ಬಗ್ಗೆ ಗೊತ್ತಿಲ್ಲ. ಅವರದನ್ನು ಸ್ಪಷ್ಟೀಕರಿಸಬೇಕು. ಇದೆಲ್ಲವೂ financial discipline maintain ಮಾಡಲಿಕ್ಕೆ ಬೇಕಾದಂಥ parameters. ಇದರ ವ್ಯಾಪ್ತಿಯಲ್ಲಿ ಇವತ್ತು ಸರ್ಕಾರ ಇಲ್ಲ. ಆದಕಾರಣ ಯಾವುದೇ ಸಂದರ್ಭದಲ್ಲಿಯೂ ಕೂಡ ಇದೇ ಆಮೆ ನಡಿಗೆಯನ್ನು ಮಾಡಿದರೆ ಈ ರಾಜ್ಯ ಮತ್ತೆ ಅತ್ಯಂತ ದೊಡ್ಡ ಆರ್ಥಿಕ ಸಂಕಟಕ್ಕೆ ಈಡಾಗುತ್ತದೆ ಎಂದು ಹೇಳುವಂಥಾದ್ದು ನನ್ನ ಒಂದು ವೈಯಕ್ತಿಕವಾದ ಅಭಿಪ್ರಾಯವಾಗಿದೆ. ನಮ್ಮ ಪೂರಕ ಅಂದಾಜುಗಳನ್ನು ನಾನು ನೋಡಿದೆ. ಅದರಲ್ಲಿ ನಾನು ಒಂದಷ್ಟು ವಿಚಾರಗಳನ್ನು ಮಾತ್ರ ಹೇಳುತ್ತೇನೆ, ಎಲ್ಲವನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ.

ಕಾಲುಬಾಯಿ ಜ್ವರಕ್ಕೆ 5 ಕೋಟಿ ರೂಪಾಯಿಗಳನ್ನಿಟ್ಟಿದ್ದಾರೆ. ಇಷ್ಟು ಹಣ ಸಾಕಾಗುತ್ತದೆಯೇ? ಕಾಲುಬಾಯಿ ಜ್ವರ ಇಡಿ ರಾಜ್ಯದಲ್ಲಿ ಎಷ್ಟಾಗಿದೆ,

ಏನಾಗಿದೆ ಎನ್ನುವಂಥಾದ್ದನ್ನು ನಾವು ಕೇಳಿದ್ದೇವೆ. ಕಾಲುಬಾಯಿ ಜ್ವರಕ್ಕೆ 5 ಕೋಟಿ ರೂಪಾಯಿಗಳನ್ನಿಟ್ಟಿರುವುದು ಖಂಡಿತವಾಗಿ ಸಾಕಾಗುವುದಿಲ್ಲ. ಇದನ್ನು ಹೆಚ್ಚು ಮಾಡುವಂಥ ಪ್ರಯತ್ನಗಳನ್ನು ಮಾಡಬೇಕು. ನಾನು ಬೇರೆ ಏನನ್ನು ಹೇಳುತ್ತಿಲ್ಲ. ಹಲವಾರು ಕಡೆಗಳಲ್ಲಿ, ಬೇರೆ ಬೇರೆ ಇಲಾಖೆಗಳಲ್ಲಿ ನಾವು ಕಂಡುಕೊಂಡಿದ್ದು, ಇವತ್ತು 'ಸುವರ್ಣ ಗ್ರಾಮ ಯೋಜನೆ'ಯ ಕಾಮಗಾರಿಗಳಿಗೆ ಹೆಚ್ಚುವರಿಯಾಗಿ 100 ಕೋಟಿ ರೂಪಾಯಿಗಳನ್ನಿಟ್ಟಿದ್ದಾರೆ. ಅದರ ಬಗ್ಗೆ ಬಹಳ ನಿರ್ದಿಷ್ಟವಾಗಿ ಹೇಳಿದ್ದಾರೆ. 'ಸುವರ್ಣ ಗ್ರಾಮ ಯೋಜನೆಯ ಕಾಮಗಾರಿಯ ಬಾಕಿ ಬಿಲ್‌ನ್ನು ಪಾವತಿಸಲು...' ಎಂದು ಹೇಳಿದ್ದಾರೆ. ಹಾಗಾದರೆ ಹೊಸದಾಗಿ ಸುವರ್ಣ ಗ್ರಾಮ ಯೋಜನೆಯ ಕಾಮಗಾರಿಗಳನ್ನು ತೆಗೆದುಕೊಳ್ಳುವುದಿಲ್ಲವೇ ಎಂಬುದರ ಬಗ್ಗೆ ಆರ್ಥಿಕ ಸಚಿವರು ತಿಳಿಸಬೇಕು. ಆದಕಾರಣ ಅವರು ಹಳೆಯ ಕಾಮಗಾರಿಗಳ ಬಿಲ್‌ಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಇವತ್ತು 'ಸುವರ್ಣ ಗ್ರಾಮ ಯೋಜನೆ' ಅತ್ಯಂತ ಅಭೂತಪೂರ್ವವಾದ ಒಂದು ಯೋಜನೆಯಾಗಿದೆ. ಯಾವುದೋ ಒಂದು ಗ್ರಾಮದಲ್ಲಿರುವ ಜನ ಅದರ ಅಭಿವೃದ್ಧಿಗೆ ಬೇಕಾದಂಥ ಪ್ಲಾನ್‌ಗಳನ್ನು ಮಾಡಿ ಆ ಗ್ರಾಮದ ಸರ್ವಾಂಗೀಣ ಅಭಿವೃದ್ಧಿಗೆ ಮೂಲ ವ್ಯವಸ್ಥೆಗಳನ್ನು ಕೊಡುವಂಥಾದ್ದೆ 'ಸುವರ್ಣ ಗ್ರಾಮ ಯೋಜನೆ'. ಇದರ ಅರ್ಥವೇನು? ಅಭಿವೃದ್ಧಿಯಾಗುತ್ತದೆಯೇ? ಇದನ್ನು ಅಭಿವೃದ್ಧಿ ಎಂದು ಹೇಳುವುದಕ್ಕಾಗುತ್ತದೆಯೇ? ಎಲ್ಲೋ ಪೇಟೆ, ಪಟ್ಟಣಗಳಲ್ಲಿ ಲೋಕೋಪಯೋಗಿ ಇಲಾಖೆಯ ರಸ್ತೆಗಳು ಅಭಿವೃದ್ಧಿಯಾದರೆ ಆಯಿತೇ? ನಾನು ಇವತ್ತು ಸಹ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಸುವರ್ಣ ಗ್ರಾಮವನ್ನು ಮತ್ತೆ identify ಮಾಡುವಂಥ ಕೆಲಸವನ್ನು ಮಾಡಲಿ. ಹಿಂದಿನ ದಿನಗಳಲ್ಲಿ ಇದ್ದ ರೀತಿಯಲ್ಲಿ ಶಾಸಕರು ಮಾಡಲಿ, ಕಂದಾಯ ಇಲಾಖೆಯವರು ಮಾಡಲಿ, ಯಾರೇ ಮಾಡಲಿ 'ಸುವರ್ಣ ಗ್ರಾಮ'ದ ಪರಿಕಲ್ಪನೆಯನ್ನು ಮುಂದುವರಸಿಕೊಂಡು ಹೋಗಬೇಕೆಂಬುದು ನನ್ನ ಒಂದು ಆಗ್ರಹವಾಗಿದೆ. ಹಾಗಾಗಿ ಇದಕ್ಕೆ ಸರ್ಕಾರ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ನನ್ನ ಒಂದು ವಿನಂತಿಯಾಗಿದೆ. ಇನ್ನು ಸಹಕಾರ ಇಲಾಖೆಯ ಬಗ್ಗೆ ಹೇಳುವಾಗ ಸರ್ಕಾರ "ನಿಮ್ಮ ಪಾಪದ

ಕೂಸು, ನಮ್ಮ ತಲೆಯ ಮೇಲೆ ಬಂದು ಕುಳಿತುಕೊಂಡು ಬಿಟ್ಟಿದೆ" ಎಂದು ಹೇಳಿದರು. ಅದಕ್ಕಿಂತ ಖಾರವಾದ ಪದಗಳ ಬಳಕೆ ಮಾಡಿದರು, ನಾನದನ್ನು ಹೇಳುತ್ತಿಲ್ಲ. ನಾನು ಸ್ವಲ್ಪ mild, ಅವರಷ್ಟು ಖಾರ ಅಲ್ಲ.

**ಶ್ರೀ ರಮಾನಾಥ ರೈ(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):–** ನೀವು ಮುಖದಲ್ಲಿ ಖಾ ಇಲ್ಲ, ಆದರೆ ಒಳಗಡೆ ಖಾರವೇ ಮಾಡನಾಡುವುದು.

**ಶ್ರೀ ಡಿ.ವಿ.ಸದಾನಂದಗೌಡ:–** ಮಾನ್ಯ ಸಭಾಪತಿಯವರೆ, ರಮಾನಾಥ ರೈ ರವರಿಗೆ ನನ್ನ ಬಗ್ಗೆ ಅರ್ಥವಾಗಿದೆ. ಬೇರೆ ಯಾರಿಗೂ ಅರ್ಥವಾಗಿಲ್ಲವಲ್ಲ ಎಂದು ಬೇಜಾರಾಗಿದೆ.

ಸಹಕಾರ ಇಲಾಖೆಗೆ ಸಂಬಂಧಿಸಿದಂತೆ ಹೇಳುವುದಾದರೆ, ನಾನು ಸರ್ಕಾರದಲ್ಲಿ ವಿನಂತಿ ಮಾಡುವುದೇನೆಂದರೆ, ಈ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಎಷ್ಟು ಕೊಡಬೇಕೋ ಅಷ್ಟನ್ನು ಕೊಡಲಿ. ಹಲವಾರು ಜಿಲ್ಲೆಗಳಲ್ಲಿ ಸಾಲ ಮನ್ನಾದ ದುಡ್ಡನ್ನು ಪಾವತಿ ಮಾಡಲಿಲ್ಲವೆಂದು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು ಇನ್ನು ಕೂಡ ರೈತರಿಗೆ ಸಾಲವನ್ನು ಕೊಡುತ್ತಿಲ್ಲ. ಆದಕಾರಣ ನವೆಂಬರ್ ತಿಂಗಳು ಕಳೆದು ಈಗ ಮಳೆ ಎಲ್ಲಾ ಹೋಗಿದೆ. ನೀವೆಲ್ಲರೂ ಚಿಕ್ಕಮಗಳೂರು, ತೀರ್ಥಹಳ್ಳಿ ಬೇರೆ ಬೇರೆ ಕಡೆಗೆ ಪ್ರವಾಸ ಮಾಡಿರುತ್ತೀರಿ. ಅತಿವೃಷ್ಟಿಯಿಂದಾಗಿ ಆ ಭಾಗದ ರೈತ ಕಂಗಾಲಾಗಿ ಹೋಗಿದ್ದಾನೆ. ಕೊಡಗಿನಿಂದ ಹಿಡಿದು ನಾನು ಇನ್ನು ಸ್ವಲ್ಪ ಮಾತನಾಡಿದರೆ ಮಾನ್ಯ ನಾಣಯ್ಯನವರು ಎದ್ದು ನಿಂತು ನಮ್ಮ ಕಾಫಿ, ಮೆಣಸು ಎಲ್ಲಾ ಏನಾಗಿದೆ ಎಂಬುದನ್ನು ಹೇಳುತ್ತಾರೆ. ಆ ರೀತಿಯಲ್ಲಿ ಆ ಭಾಗದ ಅಡಿಕೆ ಬೆಳೆಗಾರರು ಇರಬಹುದು, ಉತ್ತರ ಕನ್ನಡ, ಚಿಕ್ಕಮಗಳೂರು, ದಕ್ಷಿಣ ಕನ್ನ, ಶಿವಮೊಗ್ಗ ಮತ್ತು ಉಡುಪಿ ಜಿಲ್ಲೆಗಳಲ್ಲಿ ವಿಪರೀತವಾಗಿ ಬದುಕಲಿಕ್ಕೆ ಸಾಧ್ಯವಿಲ್ಲದಂಥ ದಯನೀಯ ಪರಿಸ್ಥಿತಿಯಲ್ಲಿ ಇವತ್ತಿನ ದಿವಸ ರೈತ ಇದ್ದಾನೆ. ಕನಿಷ್ಟ ಸಾಲವನ್ನಾದರೂ ಮತ್ತೊಮ್ಮೆ ತೆಗೆದುಕೊಂಡು ಬದುಕಲಿಕ್ಕೆ ಏನಾದರೂ ವ್ಯವಸ್ಥೆಯಾಗಬೇಕಲ್ಲಾ. ಇದರಿಂದ ಸರ್ಕಾರದಲ್ಲಿ ನಾನು ಕಳಕಳಿಯಿಂದ ವಿನಂತಿ ಮಾಡುವುದೇನೆಂದರೆ, ನಾನು ನಿನ್ನೆ ದಿವಸ ಮಾನ್ಯ ಸಹಕಾರ

ಸಚಿವರಲ್ಲಿಯೂ ಸಹ ವಿನಂತಿ ಮಾಡಿದ್ದೆ. ಎಲ್ಲೋ ಕೆಲವು ಭಾಗದಲ್ಲಿ 25,000 ಬಿಟ್ಟು ಬಾಕಿಯದನ್ನು ಕೊಟ್ಟಿದ್ದಾರೆ ಎಂದು ಯಾರೋ ಹೇಳಿದರು. ಆದರೆ ನಮ್ಮ ಜಿಲ್ಲೆಗಳಲ್ಲಿ ಆ ರೀತಿ ಆಗಲಿಲ್ಲ. ಸರ್ಕಾರದಿಂದ ಬರಲಿಲ್ಲವೆಂದು ಪೆಂಡಿಂಗ್ ಇದೆ. ಮಾನ್ಯ ಮಹದೇವ್ ಪ್ರಸಾದ್‌ರವರು ನಮ್ಮ ಮಂಗಳೂರಿಗೆ ಬಂದು ಉಡುಪಿ, ದಕ್ಷಿಣ ಕನ್ನಡಕ್ಕೆ ಸಂಬಂಧಿಸಿದಂತೆ ಮಂಗಳೂರು ಡಿಸಿಸಿ ಬ್ಯಾಂಕಿನಲ್ಲಿ ಮಾಡಿದರು. ಅಲ್ಲಿಂದ ಬಿಲ್‌ಗಳನ್ನೆಲ್ಲಾ ಕಳುಹಿಸಿ ಕೊಟ್ಟಿದ್ದನ್ನು ಬೆಳಗಾವಿಯ ರಿಜಿಸ್ಟ್ರಾರ್‌ರಿಂದ verification ಮಾಡಿ ಮತ್ತೆ ತರುವಂಥ ಎಲ್ಲಾ ಕೆಲಸ-ಕಾರ್ಯಗಳನ್ನು ಮಾಡಿದರೂ ಕೂಡ ಇನ್ನು ಕೂಡ ಹಣ ಬಿಡುಗಡೆ ಮಾಡಿಲ್ಲ. ನಿನ್ನೆಯ ದಿವಸ ಸಹ ಅವರು ಸದನದಲ್ಲಿ ಮುಂದೆ ಇದನ್ನು ಮಾಡುತ್ತೇವೆಂದು ಹೇಳಿದರು. ನಾನು ಇಷ್ಟನ್ನು ಮಾತ್ರ ವಿನಂತಿ ಮಾಡುತ್ತೇನೆ. ನಿಜ ಬಾಕಿಯದನ್ನು ಎಲ್ಲಾದರೂ ಮಾಡಿದ್ದಾದರೂ ಸಹ ಸಹಕಾರ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ಬಿಲ್‌ಗಳನ್ನು payment ಮಾಡುವಾಗ... ಇನ್ನು ಬಾರಿ ಬೇಕಾಗಿಲ್ಲ. ನಾನು ತಿಳಿದುಕೊಂಡಿರುವುದು ಸರಿ ಇದ್ದರೆ ಒಟ್ಟು 800 ಕೋಟಿ ರೂಪಾಯಿ ಬಾಕಿ ಇರುವಂಥಾದ್ದು. ಈಗ 500 ಕೋಟ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದರಂತೆ. ಅದನ್ನು ಮಾಡುವಂಥ ಕೆಲಸ-ಕಾರ್ಯಗಳನ್ನು ಮಾಡಿದರೆ ರೈತರಿಗೆ ಒಳ್ಳೆಯದಾಗುತ್ತದೆ. ಸರ್ಕಾರ ಅದನ್ನು ಮಾಡಿದರೆ ರಾಜ್ಯದ ಜನತೆಯ ಪರವಾಗಿ ವಿಶೇಷವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಇನ್ನು ಧಾರ್ಮಿಕ ದತ್ತಿ ಇಲಾಖೆಗೆ ಸರ್ಕಾರ 15 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಸರ್ಕಾರ ಇನ್ನು ಹೆಚ್ಚು ಮನಸ್ಸು ಮಾಡಲಿ. ದೇವರು ಸರ್ಕಾರದವರಿಗೆ ಇನ್ನು ಹೆಚ್ಚು ಶಕ್ತಿಯನ್ನು ಕೊಡಲಿ, ಆಂತರಿಕವಾಗಿ ಅವರ ವಿರುದ್ಧ ಕಾರ್ಯಾಚರಣೆ ಮಾಡುವವರ ಶಕ್ತಿ ಕುಂದಲಿ, ಅವರ ಶಕ್ತಿ ಹೆಚ್ಚಾಗಲಿ. ಇದಕ್ಕೆ ಬೇಕಾಗಿಯೇ ಸರ್ಕಾರ ಧಾರ್ಮಿಕ ದತ್ತಿ ಇಲಾಖೆಗೆ ಕೇವಲ 15 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಸರ್ಕಾರ ಒಂದಷ್ಟು ಹೆಚ್ಚಿನ ಹಣವನ್ನು ನೀಡಿದರೆ ಅನುಕೂಲವಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ನಿಮ್ಮ ಊಹೆ ಸರಿ.

**ಶ್ರೀ ಡಿ.ವಿ.ಸದಾನಂದಗೌಡ:-** ನನ್ನ ಊಹೆ ಯಾವತ್ತು ತಪ್ಪಾಗಿಲ್ಲ. "ಸದಾನಂದಗೌಡರೆ ನೀವೇ ಕೆಲವು ಸಂಗತಿಗಳನ್ನು ಸರಿಯಾಗಿ ಹೇಳುತ್ತೀರಿ" ಎಂದು ಮೊನ್ನೆಯ ದಿವಸ ನೀವೇ ಹೇಳಿದಿರಿ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೆ, 20 ವರ್ಷಗಳ ಕಾಲ ಅಧಿಕಾರದಲ್ಲಿರುತ್ತೇವೆ ಎಂದು ಹೇಳಿದ್ದು ಇವರ ಊಹೆಯಾಗಿತ್ತು. ಮಾನ್ಯ ಸದಾನಂದಗೌಡರು, ಮಾನ್ಯ ಜಗದೀಶ್ ಶೆಟ್ಟರು, ಮಾನ್ಯ ಈಶ್ವರಪ್ಪನವರು, ಮಾನ್ಯ ಯಡಿಯೂರಪ್ಪನವರು ಇವರೆಲ್ಲರೂ 20 ವರ್ಷಗಳ ಕಾಲ ನೀವು ಅಲ್ಲೇ (ವಿರೋಧ ಪಕ್ಷದಲ್ಲಿ), ನಾವು ಇಲ್ಲೇ (ಆಡಳಿತ ಪಕ್ಷದಲ್ಲಿ) ಎಂದು ಹೇಳುತ್ತಿದ್ದರು. ಇದು ಅವರ ಊಹೆಯಾಗಿತ್ತು.

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೆ, ಆ ಮಾತನ್ನು ಅವರು ಹೇಳುತ್ತಿದ್ದಾಗ ನಮ್ಮ ಜೊತೆಯಲ್ಲಿ ಇನ್ನೊಬ್ಬರು ಇದ್ದರು.

**ಶ್ರೀ ಸಿದ್ದರಾಮಯ್ಯ:-** ಯಾರಿದ್ದರು, ಯಾರು ಅವರು?

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೆ, ಅವರು ಜೊತೆಗಿದ್ದಾಗ 20 ವರ್ಷಗಳ ಕಾಲ ಇರುತ್ತೇವೆಂದು ಹೇಳಿದ್ದು. ಆದರೆ ಏಕೋ ಇದ್ದಕ್ಕಿದ್ದ ಹಾಗೆ ಅವರು ನಮಗೆ ಕೈ ಕೊಟ್ಟು ಹೋಗಿಬಿಟ್ಟರು.

**ಶ್ರೀ ಡಿ.ವಿ.ಸದಾನಂದಗೌಡ:-** ಮಾನ್ಯ ಸಭಾಪತಿಯವರೆ, ರೆಕಾರ್ಡ್ set-right ಆಗಬೇಕು. ಸದಾನಂದಗೌಡರು ಅಧಿಕಾರಕ್ಕೆ ಬಂದ ನಂತರ ಶಾಶ್ವತವಾಗಿ ನಾವು ಇಲ್ಲಿರುತ್ತೇವೆಂದು ನಾನು ಯಾವತ್ತು ಹೇಳಲಿಲ್ಲ. ಈ ಹಿಂದೆಯೂ ನಾನು ಹೇಳಿಲ್ಲ, ಮುಂದೆಯೂ ಸಹ ಹೇಳುವುದಿಲ್ಲ. ನಾನು 20 ವರ್ಷಗಳ ಕಾಲ, 5 ವರ್ಷಗಳ ಕಾಲ ಎಂದು ಹೇಳಿಲ್ಲ. ನಾನು ಬಹಳ ನಿರ್ದಿಷ್ಟವಾಗಿ ಎರಡು ಸದನಗಳಲ್ಲಿ ಹೇಳಿದ್ದೇನೆ. ಎಷ್ಟು ದಿವಸ ನನಗೆ ಈ ಅವಕಾಶವನ್ನು ಕೊಟ್ಟಿದ್ದಾನೋ ಅಷ್ಟು ದಿವಸ ಇದನ್ನು ದುರ್ವಿನಿಯೋಗ ಮಾಡುವುದಿಲ್ಲ, ಸದ್ವಿನಿಯೋಗ ಮಾಡುತ್ತೇನೆ ಎಂಬ ಮಾತನ್ನು ಹೇಳಿದ್ದೆ. ನಮ್ಮ ಪಕ್ಷ ಹೆಚ್ಚು ವರ್ಷ ಆಡಳಿತ ಮಾಡಬಹುದು ಎಂದು ಹೇಳಿದ್ದೆ. ಅದರಲ್ಲಿ ತಪ್ಪಿಲ್ಲ. ಆದರೆ ಸದಾನಂದಗೌಡರೇ ಕುರ್ಚಿಯಲ್ಲಿ ಭದ್ರವಾಗಿ

ಕುಳಿತುಕೊಳ್ಳುತ್ತಾರೆ ಎಂದು ಹೇಳಿಲ್ಲ. ನಾನು ಮುಖ್ಯಮಂತ್ರಿ ಪದವಿಯನ್ನು ಏರಿದಾಗ ಅಹಂಕಾರದಿಂದ ಏರಲಿಲ್ಲ ಮತ್ತು ಇಳಿಯುವಾಗಲೂ ಬೇಸರದಿಂದ ಇಳಿಯಲಿಲ್ಲ. ಸಿಕ್ಕ ಅವಕಾಶದಲ್ಲಿ ನನ್ನ ಶಕ್ತಿ ಮೀರಿ, ನನ್ನ ಇತಿಮಿತಿಗಳೊಳಗೆ ಮಾಡಬೇಕಾದಂತಹ ಕೆಲಸ-ಕಾರ್ಯಗಳನ್ನು ಮಾಡಿದ್ದೇನೆ ಎಂದು ನನ್ನ conscous ನನಗೆ ಪ್ರಮಾಣ ಪತ್ರ ಕೊಟ್ಟಿದೆ. ಬಾಕಿಯವರದ್ದು ನನಗೆ ಗೊತ್ತಿಲ್ಲ.

ನನ್ನದೊಂದು ವಿಶೇಷ ಬೇಡಿಕೆ ಇದೆ. ನಗರಾಭಿವೃದ್ಧಿಗೆ ಸಂಬಂಧಪಟ್ಟಂತೆ, 13ನೇ ಆರ್ಥಿಕ ಆಯೋಗದ ಶಿಫಾರಸ್ಸಿನಂತೆ ಭಾರತ ಸರ್ಕಾರ 2012-13ನೇ ಸಾಲಿಗೆ ಸಂಬಂಧಪಟ್ಟಂತೆ ಸಾಮಾನ್ಯ ಕಾರ್ಯಕ್ಷಮತೆ ಅನುದಾನ ಒಂದನೆ ಮತ್ತು ಎರಡನೆ ಕಂತು, ಒಟ್ಟು ₹ 24,623 ಲಕ್ಷ ಬಿಡುಗಡೆ ಮಾಡುವ ಕೆಲಸ ಮಾಡಿದ್ದೀರಿ. ಹಿಂದೆ ನಗರೋತ್ಥಾನ ಎನ್ನುವ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿತ್ತು. ಈ ಯೋಜನೆಯಿಂದಾಗಿ ರಾಜ್ಯದ ಎಲ್ಲ ನಗರಗಳ ಅಭಿವೃದ್ಧಿಯಾಗಿದೆ. ಎಲ್ಲೇ ಹೋದರೂ ಕಾಂಕ್ರೀಟ್ ರಸ್ತೆ, ಮತ್ತೊಂದು ಎಲ್ಲವೂ ಆಗಿರುವುದನ್ನು ಕಂಡಿದ್ದೇವೆ. ಹಾಗಾಗಿ ನಗರೋತ್ಥಾನ ಯೋಜನೆಯನ್ನು ಮುಂದುವರೆಸಬೇಕು ಮತ್ತು ತಕ್ಷಣ ಹಣ ಬಿಡುಗಡೆಯ ಕೆಲಸ ಮಾಡಿದರೆ ಖಂಡಿತವಾಗಿ ಇದರಿಂದ ಒಳ್ಳೆಯದಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಇದಕ್ಕೆ ಬೇಕಾದ ಮಾಹಿತಿಗಳನ್ನು ತರಿಸಿಕೊಳ್ಳಿ. ನಗರೋತ್ಥಾನ ಯೋಜನೆ ಗುಲ್ಬರ್ಗಾದಿಂದ ಹಿಡಿದು ಮಂಗಳೂರಿನವರೆಗೆ ಇರಬಹುದು, ಪಟ್ಟಣ ಪಂಚಾಯಿತಿಗಳವರೆಗೆ ಇರಬಹುದು ಈ ಎಲ್ಲಾ ಕಡೆ ಸಮಗ್ರ ಕೆಲಸ ಆಗುವಂಥದ್ದಾಗಿದೆ. ಇದಕ್ಕೆ ಇನ್ನಷ್ಟು ಒತ್ತು ಕೊಡಬೇಕು, ಈ ಕುರಿತು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಲೋಕೋಪಯೋಗಿ ಇಲಾಖೆಯಲ್ಲಿ ಎಷ್ಟು ಬಿಲ್ಲುಗಳು ಪೆಂಡಿಂಗ್ ಇದೆ? ಭಾರೀ ಬಿಲ್ಲುಗಳು ಪೆಂಡಿಂಗ್ ಇದೆ ಎಂದು ರಾಜ್ಯಾದ್ಯಂತ ಕಂಟ್ರ್ಯಾಕ್ಟರ್‌ಗಳು ಮಾತನಾಡುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ಅದೆಲ್ಲ ನೀವು ಬಿಟ್ಟು ಹೋಗಿರುವಂತಹ ಬಾಕಿ.

**ಶ್ರೀ ಡಿ.ವಿ.ಸದಾನಂದಗೌಡ:–** ಇರಬಹುದು. ಅದಕ್ಕೆ ರಾಜ್ಯದ ಜನ 5 ವರ್ಷ ವಿರೋಧ ಪಕ್ಷದಲ್ಲಿರಿ ಎಂದು ಈಕಡೆ ಕಳುಹಿಸಿ ಕೊಟ್ಟಿದ್ದಾರೆ. ಆದರೆ ನೀವೀಗ ಇದನ್ನು ಮಾಡದೇ ಇದ್ದರೆ 5 ವರ್ಷವೂ ಇರುವುದಕ್ಕಾಗುವುದಿಲ್ಲ, ಅದಕ್ಕೂ ಮುಂಚೆ ನಿಮ್ಮನ್ನು ಕಳುಹಿಸಿ ಕೊಟ್ಟುಬಿಡುತ್ತಾರೆ. ನೀವು ಮುಖ್ಯಮಂತ್ರಿಯಾಗಿ 5 ವರ್ಷಗಳು ಇರಬೇಕು ಎನ್ನುವುದು ನನ್ನ ಆಶಯವಾಗಿದೆ. ನಿಮ್ಮವರೇ ನಿಮ್ಮ ಕೈ–ಕಾಲು ಎಳೆದರೂ ನಾವು ಎಳೆಯುವುದಕ್ಕೆ ಹೋಗುವುದಿಲ್ಲ. ಪಿಡಬ್ಲ್ಯೂಡಿಯಲ್ಲಿ additional amount of thirty thousand lakhs is being provided to take up the road woks and hence it is included in the demand. ಇನ್ನೊಂದು, ಕನಕಪುರ ತಾಲ್ಲೂಕಿನ ಸಾತನೂರು ಗ್ರಾಮದ ಅಡಿ ಬರುವ ಚೆನ್ನಪಟ್ಟಣ–ಸಾತನೂರು ರಸ್ತೆ ಅಭಿವೃದ್ಧಿಗೆ ₹ 405 ಲಕ್ಷಗಳನ್ನು ಮತ್ತು Appendix-C ಯಲ್ಲಿ ಮುಂದುವರೆದ ಹೊಸ ಕಾಮಗಾರಿಗಳನ್ನು ಪೂರ್ಣಗೊಳಿಸಲು ₹ 50 ಸಾವಿರ ಲಕ್ಷಗಳನ್ನು, ಒಟ್ಟು ₹ 50,405 ಲಕ್ಷಗಳನ್ನು ಹೆಚ್ಚುವರಿಯಾಗಿ ಒದಗಿಸಲು ಸೇರಿಸಿದೆ ಎಂದು ಹೇಳಿದ್ದೀರಿ. ಒಂದು ಕಡೆ, ಅನೇಕ ಲಕ್ಷ ರೂಪಾಯಿಗಳು ಹೆಚ್ಚಿ ಹೋಗಿವೆ. ಏನು, ಏತಕ್ಕೆ ಎಂದು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಆದರೆ ಅದೇರೀತಿ ಬಾಕಿ ಕಡೆ ಕೂಡ ಗಮನ ಕೊಡಬೇಕು ಎನ್ನುವುದು ನನ್ನ ಅಪೇಕ್ಷೆಯಾಗಿದೆ. ಆ ಭಾಗದವರು ಸಂತುಷ್ಟರಾದರೆ ನಿಮಗೆ ಹೆಚ್ಚು ಬಲ ಬರುತ್ತದೆ ಎಂದು ನನಗೆ ಗೊತ್ತಿದೆ. ಬೇರೆ ಭಾಗದವರೂ ಕೂಡ ನಿಮಗೆ ಬಲ ಕೊಡುವಂತಹ ಕೆಲಸ ಆಗಬೇಕು. ವಿಶೇಷವಾಗಿ planning, statistics ಇವುಗಳಿಗೆ ಹೆಚ್ಚು ಸಿಗುವಂಥದ್ದು ಒಳ್ಳೆಯದು. ಒಟ್ಟಾರೆ, ಇದರಲ್ಲಿ ನೀವು ಬರೆದಿದ್ದನ್ನು ಕೊಡಲಿಕ್ಕೆ ಆಗದ ಸ್ಥಿತಿ ಅಥವಾ ಕಲೆಕ್ಷನ್ ಮಾಡದಂತಹ ಪರಿಸ್ಥಿತಿಯಲ್ಲಿದ್ದೇವೆ. ಹಾಗಾಗಿ resource mobilization ಗೆ ಒತ್ತು ಕೊಡಬೇಕು ಎನ್ನುವುದು ನಮ್ಮ ಆಗ್ರಹವಾಗಿದೆ.

**ಶ್ರೀ ಎಂ.ಸಿ.ನಾಣಯ್ಯ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಒಬ್ಬರು ಮಾಜಿ ಮುಖ್ಯಮಂತ್ರಿ, ಒಬ್ಬರು ಹಾಲಿ ಮುಖ್ಯಮಂತ್ರಿ, ಇವರು ಯಾವ ರೀತಿ resource mobilization ಮಾಡಬೇಕು ಎಂಬ ಬಗ್ಗೆ ಚರ್ಚೆ

ಮಾಡುತ್ತಿದ್ದಾರೆ. ನಾನು ಇದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಮುಖ್ಯಮಂತ್ರಿಗಳನ್ನು ಒಂದು ಮಾತು ಕೇಳುತ್ತೇನೆ. Supplementary estimates ಎಂದು ಮಾಡುವುದು ನಮ್ಮ ರಾಜ್ಯಾಂಗದ 205ರ ಅಡಿಯಲ್ಲಿ ಸ್ವಾಭಾವಿಕವಾಗಿ ಬರುವಂಥದ್ದು. ಇದಕ್ಕೆ ಹೆಚ್ಚುವರಿಯಾಗಿ ವ್ಯಾಖ್ಯಾನ ಮಾಡುವ ಅವಶ್ಯಕತೆ ಇಲ್ಲ. ಮಾನ್ಯ ಸದಾನಂದಗೌಡರು ವ್ಯಾಖ್ಯಾನ ಮಾಡುವ ಸಂದರ್ಭದಲ್ಲಿ ಬಜೆಟ್ ಮತ್ತು ಬಜೆಟ್‌ನಲ್ಲಿರುವ ವಿಚಾರಗಳ ಬಗ್ಗೆಯೂ ಮಾತನಾಡಿದರು. ಬಹುಶಃ ಆ ಸಂದರ್ಭ ಮಾರ್ಚ್ 31ರ ಒಳಗೆ, ಇನ್ನೊಂದು ಬಜೆಟ್ ಮಂಡನೆ ಮಾಡುವ ಸಂದರ್ಭ ಬಂದಾಗ, ನೀವು ಮಾಡಿರುವಂತಹ ಬಜೆಟ್ ಮತ್ತು ಮುಂದೆ ಮಾಡುವಂತಹ ಬಜೆಟ್ಟನ್ನು ನಾವು evaluation ಮಾಡುವಾಗ ನಿಮ್ಮ ಹಣಕಾಸಿನ ಪರಿಸ್ಥಿತಿ, ನಿಮ್ಮ ಸಂಗ್ರಹಣೆ, ನಿಮ್ಮ ಖರ್ಚು, ನಿಮ್ಮ non-planning expenditure ನಿಮ್ಮ non-productive expenditure ಎಷ್ಟು ಎನ್ನುವುದನ್ನು ಆ ಸಂದರ್ಭದಲ್ಲಿ ಚರ್ಚೆ ಮಾಡೋಣ. ಆದರೆ ಈಗ ನೀವು ಕೊಟ್ಟಿರುವ ₹ 7700 ಕೋಟಿಗಳಲ್ಲಿ ₹ 4500 ಕೋಟಿಗಳನ್ನು plan expenditureಗೆ ಕೊಟ್ಟಿದ್ದೀರಿ. ಅದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಮುಖ್ಯವಾಗಿ ನಾನು ನಿಮಗೆ ಏನು ಹೇಳುತ್ತೇನೆ ಎಂದರೆ, ಇದರಲ್ಲಿ ಯಾವುದೇ new services ಇಲ್ಲ. ನೀವು ಇವತ್ತು ₹ 7700 ಕೋಟಿಗಳನ್ನೇನು ಕೊಟ್ಟಿದ್ದೀರೋ ಇದರಲ್ಲಿ ಹೊಸದಾಗಿರುವ new services ಎನ್ನುವಂಥದ್ದು ಯಾವುದೂ ಇಲ್ಲ. ಇದೆಲ್ಲವೂ ಕೂಡ ನಮ್ಮ ವ್ಯವಹಾರದಲ್ಲಿ, ನಮ್ಮ ಸರ್ಕಾರದಲ್ಲಿ ಇರತಕ್ಕಂತಹ ಎಲ್ಲಾ ಸರ್ವಿಸ್‌ಗಳಿಗೆ ಸಂಬಂಧಪಟ್ಟಿರುವಂಥದ್ದಕ್ಕೆ ಹಣವನ್ನು ಬಿಡುಗಡೆ ಮಾಡಬೇಕು ಎಂಬ ಉದ್ದೇಶವಾಗಿದ್ದು, ತಾವು ಆ ಹಣವನ್ನು ಬಿಡುಗಡೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಿ. ನೀವು ಅಧಿಕಾರ ಸ್ವೀಕಾರ ಮಾಡಿ ಬಜೆಟ್ ಮಂಡನೆ ಮಾಡುವ ಸಂದರ್ಭದಲ್ಲಿ ಒಂದು ಮಾತನ್ನೂ ಹೇಳಿದಿರಿ. ಆ ಮಾತನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರೋ ಇಲ್ಲವೋ ಹೇಳಿ. ಹಳೆಯ ಸರ್ಕಾರದಲ್ಲಿ ಶ್ರೀಮಾನ್ ಜಗದೀಶ್‌ಶೆಟ್ಟರ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ₹ 1 ಲಕ್ಷ 17 ಸಾವಿರ ಕೋಟಿ ಸಾಲ ಇತ್ತು. ನೀವು ಬಜೆಟ್ ಮಂಡನೆ

ಮಾಡುವ ಸಂದರ್ಭದಲ್ಲಿ ನಿಮ್ಮನ್ನು ನಾನು, ನಿಮ್ಮ ಕಾಲದಲ್ಲಿ ನೀವು ಹೊಸದಾಗಿ ಇದಕ್ಕಿಂತ ಹೆಚ್ಚು ಸಾಲವನ್ನು ಮಾಡುವ ನಿಟ್ಟಿನಲ್ಲಿ ನಿಮ್ಮ ಚಿಂತನೆ ಇದೆಯೇ ಎಂದು ಕೇಳಿದೆ. ಆದರೆ ಮಾಡಲೇಬೇಕಾದ ಅನಿವಾರ್ಯತೆ ಬಂತು. ಕಾರಣವೇನೆಂದರೆ, ಮಾನ್ಯ ಜಗದೀಶ್‌ಶೆಟ್ಟರ್‌ರವರು ಒಂದು ಬಜೆಟ್ ಮಂಡನೆ ಮಾಡಿಬಿಟ್ಟಿದ್ದರು. ನೀವು ಮುಖ್ಯಮಂತ್ರಿ ಆದಮೇಲೆ ಇನ್ನೊಂದು ಬಜೆಟ್ ಮಾಡಿದಿರಿ. ಹಳೆ ಬಜೆಟ್‌ಗೂ ಮತ್ತು ಈ ಬಜೆಟ್‌ಗೂ . . . ಸರ್ಕಾರದ ಒಟ್ಟು tax revenue ಏನಿದೆ, ಅದರಲ್ಲಿ ಪ್ರತಿವರ್ಷ ಅಷ್ಟು ದೊಡ್ಡ ಪ್ರಮಾಣದಲ್ಲಿ ವ್ಯತ್ಯಾಸ ಕಾಣುವುದಿಲ್ಲ. ನೀವು 7 ಸಲ ಬಜೆಟ್ ಮಂಡನೆ ಮಾಡಿದ್ದೀರಿ. ಪ್ರತಿ ವರ್ಷ ನಮ್ಮ ರಾಜಸ್ವ ತೆರಿಗೆ ಏನಿದೆ ಅದು ಎಷ್ಟರಮಟ್ಟಿಗೆ ಏರಿಕೆಯಾಗಿದೆ? ತೆರಿಗೆ ಎನ್ನುವಂಥದ್ದು saturation pointಗೆ ಬಂದಮೇಲೆ ಬಹುಶಃ ಅದನ್ನು ಹೆಚ್ಚು ಮಾಡುವುದಕ್ಕೆ ಯಾವ ಸಂದರ್ಭವೂ ಇರುವುದಿಲ್ಲ. ಮಾನ್ಯ ಸದಾನಂದಗೌಡರು ಒಂದು ಬಜೆಟ್ ಮಂಡನೆ ಮಾಡಿದರು, ಮಾನ್ಯ ಜಗದೀಶ್‌ಶೆಟ್ಟರ್‌ರವರು ಬಜೆಟ್ ಮಂಡನೆ ಮಾಡಿದರು. ಕಡೆಗೆ ಇದು ಕೇವಲ estimate ಆಗುತ್ತದೆ. ಮಾರ್ಚ್ ಕೊನೆಗೆ ಬರುವಾಗ revised estimates ಎಂದು ತೆಗೆದುಕೊಳ್ಳುತ್ತೇವೆ. ಅದರಲ್ಲಿ ಎಷ್ಟು ಬಂದಿದೆ ಎನ್ನುವುದು ಬಹಳ ಮುಖ್ಯವಾಗುತ್ತದೆ. ಇದರಲ್ಲಿ ಕೇವಲ ₹ 1 ಅಥವಾ 2 ಸಾವಿರ ಕೋಟಿ ಹೆಚ್ಚು ಬಂದಿರುತ್ತದೆ. ಇದಕ್ಕಿಂತ ಜಾಸ್ತಿ ಹೆಚ್ಚುವರಿ ಆಗಲೇ ಇಲ್ಲ. ಈ ವರ್ಷ ಕೂಡ ಹೆಚ್ಚುವರಿಯಾಗಿರುವಂತಹ ನಿಮ್ಮ revenue receipts ಅನ್ನು recovery ಮಾಡುತ್ತೇನೆ ಎಂದು ನೀವು ಹೇಳಲೂ ಇಲ್ಲ, ಅದು ಸಾಧ್ಯವೂ ಇಲ್ಲ. ಕಾರಣವೇನೆಂದರೆ, ಬಜೆಟ್ ಮಾಡುವಾಗ ಹಳೆ ಸರ್ಕಾರದಲ್ಲಿ ಅವರ revenue estimate 51,820 ಕೋಟಿ. ಆದರೆ revised estimate ಮಾಡುವಾಗ ಸಿಕ್ಕಿದ್ದು ₹ 53,492 ಕೋಟಿ. ಅಂದರೆ ₹ 1500 ಕೋಟಿ ಜಾಸ್ತಿ. ಪ್ರತಿವರ್ಷ ನಮ್ಮ revised estiamte ಯಾವ ಸಂದರ್ಭದಲ್ಲೂ ₹ 1500ರಿಂದ ₹ 2000 ಕೋಟಿ ಮೇಲೆ ಏರುವುದೇ ಇಲ್ಲ. ಇದಕ್ಕಿಂತ ಜಾಸ್ತಿ ಹೋಗುವುದಕ್ಕೆ ಸಾಧ್ಯವೇ ಇಲ್ಲ. ಈ ಹಿನ್ನೆಲೆಯಲ್ಲಿ ನಾನು ನಿಮ್ಮನ್ನು ಇಷ್ಟು ಕೇಳುತ್ತೇನೆ. ನೀವು ₹ 1 ಲಕ್ಷ 34 ಸಾವಿರ ಕೋಟಿ ಸಾಲದ ಹೊರೆಯನ್ನು ಇಡಬೇಕು ಎಂದು ಬಜೆಟ್‌ನಲ್ಲೇ

ಹೇಳಿಬಿಟ್ಟಿದ್ದೀರಿ. ಪುನಃ ಇದು ಹೆಚ್ಚುವರಿ ಆಗುತ್ತದೆಯೇ ಎನ್ನುವುದನ್ನು ಹೇಳಿಬಿಡಿ. ಮಾನ್ಯ ಜಗದೀಶ್ ಶೆಟ್ಟರ್‌ರವರು ಮತ್ತೆ ಮುಖ್ಯಮಂತ್ರಿಯಾಗಿ ಮುಂದುವರೆದಿದ್ದರೆ ಅದು ₹ 1 ಲಕ್ಷ 34 ಸಾವಿರ ಕೋಟಿಯೇ ಉಳಿದುಕೊಳ್ಳುತ್ತಿತ್ತು. ಅದಕ್ಕಿಂತ ಕಡಿಮೆ ಮಾಡುವುದಕ್ಕೆ ಅವರಿಂದಲೂ ಸಾಧ್ಯವಾಗುತ್ತಿರಲಿಲ್ಲ. ಮಾನ್ಯ ಸದಾನಂದಗೌಡರು ಅಲ್ಲಿದ್ದಿದ್ದರೂ ಕೂಡ ಆ ಮೊತ್ತ ಅಷ್ಟೇ ಇರುತ್ತಿತ್ತು. ಕಾರಣ ಅಷ್ಟು commitment ಅನ್ನು ಹಿಂದೆ ಮಾಡಿದ್ದರು. What is more important let me tell you, there are only three parameters; good governance in respect of finances, Non-produtive expenditure ಕಡಿಮೆ ಆಗಬೇಕು. That is the first priority. Non-productive expenditure, ಕಡಿಮೆ ಆದಮೇಲೆ non-development expenditure ಕಡಿಮೆ ಆಗಬೇಕು. ಮೂರನೆಯದು, Non-Plan expenditure ಕಡಿಮೆಯಾಗಬೇಕು. ಈ ಮೂರನ್ನು ಗಮನದಲ್ಲಿಟ್ಟುಕೊಂಡು ತಾನೇ ನಮ್ಮ financesಗಳನ್ನು ಮಾಡುತ್ತಿರುವಂಥದ್ದು. ಈ ಬಜೆಟ್ ಬಗ್ಗೆ ಬಹಳ ವ್ಯಾಖ್ಯಾನ ಮಾಡಿಕೊಂಡು ಹೋದರೆ ನಾವು ಪ್ರತಿ ವರ್ಷ ನೋಡುತ್ತಿರುವಂಥದ್ದೆ. This is nothing but a jugglery of figures within the total revenue. ಅದಾದ ಮೇಲೆ ಮತ್ತೆ ಏನೂ ಇಲ್ಲ. ಆದ್ದರಿಂದ ಯಾರೋ ಒಬ್ಬರು ಮುಖ್ಯಮಂತ್ರಿಯಾದ ಮೇಲೆ ನಾನು ಸಂಪೂರ್ಣ ಸಾಲವನ್ನು complete ಆಗಿ ತೆಗೆದುಬಿಡುತ್ತೇನೆ, revenue surplusನ್ನು, ನನ್ನ revenue incomeನ್ನು ಒಂದು ಲಕ್ಷ ಜಾಸ್ತಿ ಏರಿಸಿಬಿಡುತ್ತೇನೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. It is impossible. ಕೇಂದ್ರ ಸರ್ಕಾರದವರು ಮಾಡುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದವರಿಗೆ ಇರತಕ್ಕಂಥ revenue deficit ಎಷ್ಟು? ಅವರ total debt component ಎಷ್ಟು? ಕೇಂದ್ರ ಸರ್ಕಾರ ನಮಗೇನೂ Fiscal Transparency Act ಎಂದು ಮಾಡಿಬಿಟ್ಟರು and we should be within 25 per cent of the GDP (Gross Domestic Product). ಕೇಂದ್ರ ಸರ್ಕಾರದವರದ್ದು within 25 per cent ಇದೆಯಾ? What is the debt component of the Government of India? It is as high as about 56 per cent. ಆದ್ದರಿಂದ ನಾವು ಇದನ್ನು ಮಾಡಲೇಬೇಕಾಗುತ್ತದೆ. ಇದನ್ನು

ಮಾಡದಿರುವಂತಹ ಅವಕಾಶವೇ ಇಲ್ಲ. ಇದನ್ನು ಮಾಡಲೇಬೇಕಾಗುತ್ತದೆ. For example, what is the debt component of America? ಮೊನ್ನೆ ಅವರು ಮಾಡಿರತಕ್ಕಂಥ debt component of America ದಲ್ಲಿ ಆ Obama Health Care ಗೆ ಮಾಡತಕ್ಕಂಥದ್ದರಲ್ಲಿ they wanted to raise the debt ratio to the extent of 17.26 Trillion Dollars. It is suppose to be the biggest country in the world. ನಾವು ನೀವು ಮಾಡಿಕೊಳ್ಳುತ್ತಿರುವಂಥದ್ದು ಬಹಳ common ಆಗಿದೆ. ಆದರೆ ಸರ್ಕಾರದ ಹಣ ಬಂದಾದ ಮೇಲೆ ಎಲ್ಲರಿಗೂ ಉಚಿತವಾಗಿ ಬಟವಾಡೆ ಮಾಡುತ್ತೇವೆ ಎಂದು ಹೇಳುವಂತಹ ಪರಿಸ್ಥಿತಿಯನ್ನು ಮಾತ್ರ ನಿರ್ಮಾಣ ಮಾಡಬೇಡಿ. This is not a charitable institution at all. ನೀವು ಎಲ್ಲಿಯವರೆಗೆ ಅದಕ್ಕೆ ಕಡಿವಾಣ ಹಾಕುವುದಿಲ್ಲವೋ ಅಲ್ಲಿಯವರೆಗೆ ನಮ್ಮಲ್ಲಿರತಕ್ಕಂಥ ಈ debt componentನ ಮೇಲೆ ಏರಿಸಿಕೊಂಡು ಹೋಗಬೇಕಾದ ಅನಿವಾರ್ಯ ಪರಿಸ್ಥಿತಿ ಬಂದಿರತಕ್ಕಂಥದ್ದು. ಈ ಹಿನ್ನೆಲೆಯಲ್ಲಿ ನಾನು ಹೆಚ್ಚು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಪ್ರತಿ ವರ್ಷ Supplementary Estimates ಬಗ್ಗೆ ಬಹಳ ದೊಡ್ಡದಾಗಿ ವ್ಯಾಖ್ಯಾನ ಮಾಡಬೇಕಾದ ಅವಶ್ಯಕತೆ ಇಲ್ಲ. ಕಾರಣವೇನೆಂದರೆ, ಕೆಲವು new services ಎಂದು ಹೇಳುವಂಥದ್ದು ಬಂದಾಗ, ಎಲ್ಲಾ ಹಳೆಯ new services, ಅದರಲ್ಲಿ ಬಹಳ new services ಎಂದು ನೀವು ಯಾವುದಾದರೂ ಹೇಳಿದರೆ ಶಾಸಕರಿಗೆ ಒಂದು ಕೋಟಿ ರೂಪಾಯಿ ಕೊಡುತ್ತೇವೆಂದು ಹೇಳಿದ್ದೀರಿ, ಅದನ್ನು ನೀವು ಎರಡು ಕೋಟಿ ರೂಪಾಯಿಗಳಿಗೆ ಏರಿಸಿದ್ದೀರಿ. ಎರಡು ಕೋಟಿ ರೂಪಾಯಿಗಳಿಗೆ ಏರಿಸಿದರೆ 300 ಕೋಟಿ ರೂಪಾಯಿಗಳನ್ನು ಜಾಸ್ತಿ ಕೊಡಬೇಕಾ? ಏಕೆಂದರೆ, ಮುಂಚೆ ಇದ್ದಂತಹ 300 ಕೋಟಿ ರೂಪಾಯಿಗೆ ನೀವು 300 ಕೋಟಿ ರೂಪಾಯಿ ಜಾಸ್ತಿ ಕೊಡಬೇಕು. ನೀವು ಬಜೆಟ್ ಮಂಡನೆ ಮಾಡುವುದಕ್ಕಿಂತ ಮೊದಲು ಮುಖ್ಯಮಂತ್ರಿಯಾದ ಕೂಡಲೇ ನಾಲ್ಕು ಘೋಷಣೆಯನ್ನು ಮಾಡಿದ್ದೀರಿ. ಆ ನಾಲ್ಕು ಘೋಷಣೆಯಲ್ಲಿ ಒಟ್ಟಾರೆ ಸುಮಾರು 8000 ಕೋಟಿ ರೂಪಾಯಿ ಬರಲೇಬೇಕು. 8000 ಕೋಟಿ ರೂಪಾಯಿಗೆ ಬರಬೇಕಲ್ಲವೇ? ಅಲ್ಪಸಂಖ್ಯಾತರ ಸಾಲವನ್ನು ಮನ್ನಾ ಮಾಡಿರತಕ್ಕಂಥದ್ದು, ಪರಿಶಿಷ್ಟ ಜಾತಿ

ಪರಿಶಿಷ್ಟ ಪಂಗಡದವರ ಸಾಲ ಮನ್ನಾ ಮಾಡಿರತಕ್ಕಂಥದ್ದು, ಮೈನಾರಿಟಿಯವರಿಗೆ ಸಾಲ ಮನ್ನಾ ಮಾಡಿರತಕ್ಕಂಥದ್ದು Automatically ನಾನು ಹೇಳುತ್ತೇನೆ it has to go up. ಸಾಮಾಜಿಕ ನ್ಯಾಯ ಎಂದು ಹೇಳತಕ್ಕಂಥ ಹಿನ್ನೆಲೆಯಲ್ಲಿ ತಾವು ಮಾಡಿಕೊಂಡು ಹೋಗಿದ್ದೀರಿ. But ultimately let me tell you, ಬರಬೇಕಾಗಿರುವ ಹಣ ಬರುವುದಿಲ್ಲ ಎಂದು ಹೇಳತಕ್ಕಂಥ ವಾದ. ಆದರೆ, ಎಲ್ಲೋ ಒಂದು ಕಡೆ creativity ಯನ್ನ don't destroy. Creativity ಇದೆಯಲ್ಲಾ ಅದನ್ನು ನೀವು destroy ಮಾಡಬೇಡಿ. ಅದಕ್ಕಿಂತ ಹೆಚ್ಚಾಗಿ ಈ ಕೆಲಸ ಕೊಡಬೇಕಾಗಿರತಕ್ಕಂಥ ಕೈಗಳನ್ನು don't make it immobility. ಈಗ immobility ಶುರು ಆಗಿಬಿಟ್ಟಿದೆ. ಕೆಲಸ ಮಾಡುತ್ತಿರತಕ್ಕಂಥವರಿಗೆ ಕೆಲಸ ಮಾಡುವುದೇ ಇಲ್ಲ ಎಂದು ಹೇಳತಕ್ಕಂಥದ್ದು. ನಾನು ಇವತ್ತು ಅದನ್ನು criticize ಮಾಡುವುದಿಲ್ಲ. ಏಕೆಂದರೆ, ನಾನು ಹಿಂದೆ ಅದನ್ನು ಹೇಳಿದ್ದೇನೆ. ನಾವು ಬಹಳ ದೊಡ್ಡ ಪ್ರಮಾಣದಲ್ಲಿ ಸುಮಾರು ನಾಲ್ಕು ಸಾವಿರ ಕೋಟಿ ರೂಪಾಯಿಗಳಷ್ಟು ಹೆಚ್ಚುವರಿ ಹಣವನ್ನು ಅಕ್ಕಿ ಬಾಕಿಗೆ ಕೊಡಬೇಕಾದ ಪರಿಸ್ಥಿತಿ ಬಂದಿದೆ. ನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು ನೀವು ಹೆಚ್ಚಿಗೆ ಕೊಡಲೇಬೇಕಾಗುತ್ತದೆ. ಕೇಂದ್ರ ಸರ್ಕಾರದಿಂದ ಬಂದಾದ ಮೇಲೆ ಅದು ಬಹಳ ಕಡಿಮೆ ಆಗಬಹುದು. ನಾನು ಇಲ್ಲ ಎಂದು ಹೇಳುವುದಕ್ಕೆ ತಯಾರಿಲ್ಲ. ಈ ಹಿನ್ನೆಲೆಯಲ್ಲಿ ನಾನು ನಿಮ್ಮನ್ನು ಇಷ್ಟೇ ಕೇಳುತ್ತೇನೆ, ನಾವು ಇದನ್ನೆಲ್ಲಾ ಅನಿವಾರ್ಯವಾಗಿ ಒಪ್ಪಲೇಬೇಕಾಗುತ್ತದೆ. ಇದು ರಾಜ್ಯಾಂಗದಲ್ಲಿ ಇಟ್ಟಿರತಕ್ಕಂಥ ಒಂದು ವಿಚಾರ ಆಗುತ್ತದೆ. ನಾವು ಇದನ್ನು ಒಪ್ಪಬೇಕಾಗುತ್ತದೆ. ಆದರೆ, ಇದನ್ನು ಒಪ್ಪಿದ ಮೇಲೆ ನಾನು ನಿಮ್ಮನ್ನು ಒಂದು ವಿಚಾರ ಕೇಳಬೇಕು. ನಿನ್ನೆ ಸರ್ವೋಚ್ಛ ನ್ಯಾಯಾಲಯದವರು ಕಾವೇರಿಗೆ ಸಂಬಂಧಪಟ್ಟ ಹಾಗೆ ತೀರ್ಪನ್ನು, ಅಂದರೆ ಕೋರ್ಟ್‌ನಲ್ಲಿ ಅವರು ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ಎತ್ತಿರತಕ್ಕಂಥ ವಿಚಾರ ಮತ್ತು ಮೇಕೆದಾಟುವಿನಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡತಕ್ಕಂಥದ್ದರ ಬಗ್ಗೆ ಸುಪ್ರೀಮ್ ಕೋರ್ಟ್‌ನವರು ಏನು ಹೇಳಿದರು? ನೆರಮನೆಯವರಾಗಿ ಏಕ್ರೀ ನೀವು ಜಗಳ ತೆಗೆಯುತ್ತೀರಿ, ಇದು ಒಂದನೆಯದು, ಎರಡನೆಯದು, ಈ

ಸಲ ಬೇಕಾದಷ್ಟು ನೀರು ಹರಿದು ಬಂದಿದೆ, ನಿಮಗೂ ನೀರಿನ ತೊಂದರೆ ಇಲ್ಲ, ಅವರಿಗೂ ನೀರಿನ ತೊಂದರೆ ಇಲ್ಲ, ಎರಡು ರಾಜ್ಯಗಳು ಸೇರಿ ನೀವು ಒಟ್ಟಾರೆ ಪ್ರಯತ್ನ ಏಕೆ ಮಾಡುವುದಿಲ್ಲ ಎಂದು ಅವರವರ ಭಾವನೆಯನ್ನು ವ್ಯಕ್ತ ಮಾಡಿದರು. ನೀರಿಗೆ crisis ಇದ್ದಿದ್ದರೆ, ಎಲ್ಲಾದರೂ ನೀರಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ತೊಂದರೆ ಇದ್ದಿದ್ದರೆ ನೀವು ನಮ್ಮ ಹತ್ತಿರ ಬರತಕ್ಕಂಥದ್ದು ನ್ಯಾಯ. ನೀರಿಗೆ ತೊಂದರೆ ಇಲ್ಲದಿದ್ದಾಗಲೂ ನೀವು ಬರುತ್ತೀರಲ್ಲಾ ಇದು ಯಾವ ನ್ಯಾಯ ಎನ್ನುವ ಮಾತನ್ನು ಹೇಳಿದ್ದಾರಲ್ಲಾ, ಈ ಮಾತನ್ನು ಸುಪ್ರೀಮ್‌ಕೋರ್ಟ್‌ನವರು ತಮಿಳುನಾಡು ಸರ್ಕಾರಕ್ಕೆ ಹೇಳುವುದಕ್ಕೆ ಕಾರಣಕರ್ತರು ಯಾರು? ಸುಪ್ರೀಮ್ ಕೋರ್ಟ್‌ನವರು ತಮಿಳುನಾಡಿನವರೆಗೆ ಹೇಳಬೇಕಾದ ಪರಿಸ್ಥಿತಿ ಬಂತಲ್ಲಾ, ನಿಮಗೆ ಈಗ ಆ ಪರಿಸ್ಥಿತಿಯೇ ಇಲ್ಲ, ಪುನಃ ಏಕೆ ನಮ್ಮ ಹತ್ತಿರ ಬರುತ್ತೀರಾ ಎಂದು ಹೇಳಿದ್ದಾರಲ್ಲಾ ಅದಕ್ಕೆ ಕಾರಣಕರ್ತರು ಯಾರು ಮಾನ್ಯ ಮುಖ್ಯಮಂತ್ರಿಗಳೇ? ಆ ರೀತಿ ಹೇಳಿಕೆಯನ್ನು ಕೊಡತಕ್ಕಂಥ ಪ್ರಚೋದನೆ ಕೊಟ್ಟವರು ಯಾರು? ನೇರವಾಗಿ ಹೇಳುತ್ತೇನೆ ಅದು ನನ್ನ ಜಿಲ್ಲೆ ಕೊಡಗು ಜಿಲ್ಲೆ. ಸತ್ಯ ಹೇಳಿ? ಆ ಭಾಗದಲ್ಲಿ ಬಿದ್ದಿರತಕ್ಕಂಥ ಮಳೆ ಇದೆಯಲ್ಲಾ ಮೇ 29 ರಿಂದ ನವೆಂಬರ್ 5ನೇ ತಾರೀಖಿನವರೆಗೆ 180 ರಿಂದ 300 ಇಂಚಿನವರೆಗೆ ಮಳೆ ಸುರಿದಿದೆ. ಕಾಫಿ, ಏಲಕ್ಕಿ, ಮೆಣಸು, ಭತ್ತದ ಗದ್ದೆಗಳಿಗೆ ನೀರಾವರಿಯಾಗಿರತಕ್ಕಂಥದ್ದು ಏನು ಉಳಿದಿಲ್ಲ, ಅದೇ ರೀತಿ ಮಲೆನಾಡು ಪ್ರದೇಶವಾಗಿರತಕ್ಕಂಥ ದಕ್ಷಿಣ ಕನ್ನಡ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ ಇರಬಹುದು, ಇತ್ಯಾದಿ. ಇಷ್ಟು ದೊಡ್ಡ ಪ್ರಮಾಣದಲ್ಲಿ ನೀರನ್ನು ನಮ್ಮ ಜಿಲ್ಲೆಯಿಂದ ಕೊಟ್ಟು ಕೆ.ಆರ್.ಎಸ್.ನ್ನು ತುಂಬಿಸಿ, ಮೆಟೂರು ಅನ್ನು ತುಂಬಿಸಿ, ಸುಪ್ರೀಮ್ ಕೋರ್ಟ್‌ನವರು ಕೂಡ ಅದರ ಬಗ್ಗೆ comment ಮಾಡಿ ಈ ಕಾವೇರಿ ಬಗ್ಗೆ ಇನ್ನು ಮಾತು ಎತ್ತಬೇಡಿ ಎಂದು ಹೇಳಿ Monitoring Committee ಎಂದು ಹೇಳತಕ್ಕಂಥದ್ದು ಅವಶ್ಯಕತೆ ಇಲ್ಲ, ಮುಂದೆ ನೋಡಿಕೊಳ್ಳೋಣ ಎನ್ನುವ ಮಾತನ್ನು ಹೇಳಬೇಕಾದರೆ ನನ್ನ ಜಿಲ್ಲೆಯಿಂದ ಇಷ್ಟು ದೊಡ್ಡ ಪ್ರಮಾಣದ ನೀರು ಬಂದಿರತಕ್ಕಂಥ ಹಿನ್ನೆಲೆಯಲ್ಲಿ 200 ಕೋಟಿ ರೂಪಾಯಿಯನ್ನು ಇಟ್ಟುಬಿಟ್ಟಿದ್ದರೆ ನಿಮಗೇನಾಗುತ್ತಿತ್ತು ಹೇಳಿ? ಏನಾಗುತ್ತಿತ್ತು ಎಂದರೆ ಕೆ.ಆರ್.ಎಸ್. ಮತ್ತು ಮೆಟ್ಟೂರು ತುಂಬಿರತಕ್ಕಂಥ

ನೀರಿನ ಪ್ರಮಾಣ ಇದೆಯಲ್ಲಾ ಅದೆಲ್ಲವೂ ಕೊಡಗು ಜಿಲ್ಲೆಯಲ್ಲಿ ಒಡೆದಿರತಕ್ಕಂಥ ಮಳೆ. ಅದೇನೂ ದಕ್ಷಿಣ ಕನ್ನಡ ಜಿಲ್ಲೆ ನೇತ್ರಾವತಿಯಿಂದ ಬಂದಿದೆಯೇ? ಆದರೆ, ಅದು ಅವರ ಮಾವನ ಜಿಲ್ಲೆ ಎಂದು ಹೇಳುತ್ತಾರೆ, ಅವರ ಮಾವನ ಜಿಲ್ಲೆಯಾದರೂ ಇರತಕ್ಕಂಥದ್ದು ಒಂದು ಭಾಗ. ಆದರೆ, ಪೂರ್ತಿ ನಮ್ಮ ಕಡೆಯಿಂದ ತಾಯಿ ಕಾವೇರಿಯಿಂದ ಬಂದಿರತಕ್ಕಂಥ ನೀರು. ಈ ಸಂದರ್ಭದಲ್ಲಿ ನನ್ನ ಸ್ವಾರ್ಥ ಎಂದು ತಿಳಿದುಕೊಳ್ಳಬೇಡಿ. ಬಹಳಷ್ಟು ಜನರು ನಮ್ಮ ಜಿಲ್ಲೆಯಿಂದ ಬಂದವರೇ, ಆದರೆ, ಕಷ್ಟ ಬಂದಾಗ ಯಾರು ಬರುವುದಿಲ್ಲವಲ್ಲಾ?

**ಶ್ರೀ ಡಿ.ವಿ.ಸದಾನಂದಗೌಡ:-** ನಾನು ಇದ್ದಾಗ ವಿಶೇಷವಾಗಿ 75 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆ.

**ಶ್ರೀ ಎಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೇ, ನಾನು ಎಲ್ಲರನ್ನು ನೆನಪಿಸಿಕೊಂಡು ಬಿಡುತ್ತೇನೆ. ನಾನು ತಪ್ಪು ಎಂದು ಹೇಳುವುದಿಲ್ಲ. ಶ್ರೀಮಾನ್ ಯಡಿಯೂರಪ್ಪನವರು ಪ್ರಥಮ ಬಾರಿಗೆ ಇದೇ ವಿಚಾರವನ್ನು ಇದೇ ಸದನದಲ್ಲಿ ಮಾತನಾಡಿದಾಗ 25 ಕೋಟಿ ರೂಪಾಯಿಗಳನ್ನು ಕೊಟ್ಟರು. ಎರಡನೇ ಬಾರಿ ಪುನಃ ಮತ್ತೊಂದು ಸಲ ಬಂದಾಗ 50 ಕೋಟಿ ರೂಪಾಯಿಗಳನ್ನು ಕೊಟ್ಟರು. ಅದಕ್ಕೆ ನನ್ನ ಒತ್ತಡ ಇದೆ. ಮೂರನೇ ಬಾರಿ ಇವರು ಮುಖ್ಯಮಂತ್ರಿಯಾದ ಮೇಲೆ 75 ಕೋಟಿ ರೂಪಾಯಿಗಳನ್ನು ಕೊಟ್ಟರು, ನಾನು ಇಲ್ಲ ಎಂದು ಹೇಳುವುದಿಲ್ಲ. 25, 75 ಕೋಟಿ, 125 ಕೋಟಿ ರೂಪಾಯಿಗಳಾಯಿತು. ಆದರೆ, ಆ 125 ಕೋಟಿ ರೂಪಾಯಿ ಇದೆಯಲ್ಲಾ ಅದರ ಖರ್ಚು ಮಾಡಿರತಕ್ಕಂಥದ್ದು ನೋಡಿದಾಗ ಮನಸ್ಸಿಗೆ ಇವತ್ತಿಗೂ ಬೇಸರವಾಗುತ್ತದೆ. ಅದು ನನ್ನ ಜಿಲ್ಲೆಗೆ ಮಾತ್ರ ಸೀಮಿತವಾಗಿರುವಂಥದ್ದಲ್ಲ. ಎಲ್ಲಾ ಜಿಲ್ಲೆಗಳಿಗೂ ಸೀಮಿತವಾಗಿರುವಂಥದ್ದು. ಕೋಟ್ಯಾಂತರ ರೂಪಾಯಿ ಹಣ ಖರ್ಚು ಮಾಡಿ ನಾವು ಕೂಡ infrastructure ಅನ್ನು proper ಆಗ ಮಾಡಲಿಲ್ಲ, ಗುಣಮಟ್ಟದ ಕೆಲಸ ನಡೆಯಲಿಲ್ಲವೆಂದು ಒಂದು ಮಳೆಗಾಲದಲ್ಲಿ ಮೂರು ತಿಂಗಳಿನಲ್ಲಿ ರಸ್ತೆ ಮಾಡಿ ಎರಡು ಮಳೆಗೆ ಕಿತ್ತು ಹೋಗಿ ಪುನಃ ಅದೇ ಜಾಗಕ್ಕೆ ಹಣ ಖರ್ಚು

ಮಾಡತಕ್ಕಂಥ ಪರಿಸ್ಥಿತಿ ಬಂದಿರುವುದು ದುರಂತ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳುವುದೇನೆಂದರೆ, ದಯವಿಟ್ಟು ಇಲ್ಲೇ ಘೋಷಣೆ ಮಾಡಿಬಿಡಿ. ಕಾವೇರಿ ತಾಯಿ ನೀವು ಮುಖ್ಯಮಂತ್ರಿಯಾದ ಮೇಲೆ ಬಹಳ ದೊಡ್ಡದಾಗಿ ನಿಮ್ಮ ಬೆಂಬಲಕ್ಕೆ ನಿಂತುಬಿಟ್ಟರು.

**ಶ್ರೀ ರಾಮಚಂದ್ರಗೌಡ:–** ಆಶೀರ್ವಾದ ಮಾಡಿದ್ದಾರೆ.

**ಶ್ರೀ ಎಂ.ಸಿ.ನಾಣಯ್ಯ:–** ಏನು ಆಶೀರ್ವಾದ, ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಕೇವಲ ಮೂವತ್ತು ದಿವಸದಲ್ಲಿ ಕೆ.ಆರ್.ಎಸ್., ಮೆಟ್ಟೂರು ತುಂಬಿ ನೀರು ಹರಿದು ಹೋಗಿರುವಂಥದ್ದು ಯಾವ ಸಂದರ್ಭದಲ್ಲಿಯೂ ಆಗಿಲ್ಲ. ಬಹುಶಃ ನೀವು ಮುಖ್ಯಮಂತ್ರಿಯಾಗಿರುವುದರಿಂದ ಈ ರೀತಿ ಆಗಿದೆ. ಏಕೆಂದರೆ, ನಾವು ನೀವು ಒಟ್ಟಿಗೆ ಇದ್ದವಲ್ಲಾ? ನಾವು ನೀವೆಲ್ಲಾ ಒಟ್ಟಿಗೆ ಇದ್ದಾಗ ನೀವು ಮುಖ್ಯಮಂತ್ರಿ ಆಗಬೇಕೆಂದು ನನಗೆ ಆಸೆ ಇತ್ತು. ಈ ಕಾಲದಲ್ಲಿ ಬರಗಾಲ ಬರಬಾರದು.

**ಶ್ರೀ ಟಿ.ಬಿ.ಜಯಚಂದ್ರ:–** ನೀವು ಇದ್ದುದರಿಂದಲೇ ಈ ರೀತಿ ಆಯಿತು ಎಂದು ಹೇಳುತ್ತಾರೆ.

**ಶ್ರೀ ಎಂ.ಸಿ.ನಾಣಯ್ಯ:–** ಜಯಚಂದ್ರರವರೇ, ಅದೇನೋ ಆಯಿತು ಬಿಡಿ.

**ಶ್ರೀ ಗೋ.ಮಧುಸೂದನ್:–** ಒಟ್ಟಿಗೆ ಇದ್ದವಲ್ಲಾ ಎಂದು ಏಕೆ ಹೇಳುತ್ತೀರಿ, ಒಟ್ಟಿಗೆ ಇದ್ದೇವೆಯಲ್ಲಾ ಎಂದು ಹೇಳಿ.

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೇ, ರಾಜಕಾರಣದಲ್ಲಿ ಈಗ ನಾನು, ಅವರು ಸ್ವಲ್ಪ ಮಟ್ಟಿಗೆ ದೂರ ಇದ್ದೇವೆ. ಆದರೆ, ವೈಯಕ್ತಿಕ ನೆಲೆಗಟ್ಟಿನಲ್ಲಿ ನಾವು ಈಗಲೂ ಒಟ್ಟಿಗೆ ಇದ್ದೇವೆ. ಬಹಳಷ್ಟು ಜನರ ಜೊತೆಯಲ್ಲಿ ಒಟ್ಟಿಗೆ ಇದ್ದೇನೆ. ಅದು ಬಿಜೆಪಿಯವರ ಜೊತೆಯಲ್ಲಿದ್ದೇನೆ, ಕಾಂಗ್ರೆಸ್‌ನವರ ಜೊತೆಯಲ್ಲಿ ಇದ್ದೇನೆ, ನಮ್ಮವರ ಜೊತೆಯಲ್ಲೂ ಇದ್ದೇನೆ, ಅದು ಇರಬೇಕು. ಅದನ್ನು ಬಿಟ್ಟು ಈಗ ಮದುವೆ ಮಾಡಬೇಕಾದರೂ

ಬಿಜೆಪಿಯವರು ಬಿಜೆಪಿ ಹುಡುಗನನ್ನು ಹುಡುಕುವುದು, ಬಿಜೆಪಿ ಹುಡುಗಿಯರನ್ನು ಹುಡುಕುವುದು, ಕಾಂಗ್ರೆಸ್‌ನವರು ಕಾಂಗ್ರೆಸ್ ಹುಡುಕುವುದು, ಇದು ಸುಮಾರು ಜಾಗದಲ್ಲಿ ನಡೆದಿದೆ. ಅದು ಇವರಿಗೆ ಗೊತ್ತಿದೆಯೇ? ಅದು ನಮ್ಮಲ್ಲಿಲ್ಲ. ಆದ್ದರಿಂದ ನಾನು ಕೇಳುವುದೇನೆಂದರೆ, ಈಗ ಮಾನ್ಯ ಮುಖ್ಯಮಂತ್ರಿಗಳು ಐದು ವರ್ಷ ಅಧಿಕಾರದಲ್ಲಿ ಇರಲೇಬೇಕೆಂದು ಅವರು ಹೇಳಿಬಿಟ್ಟರು. ನಾನಂತೂ ಮಾನ್ಯ ಮುಖ್ಯಮಂತ್ರಿಗಳು ಐದು ವರ್ಷ ಅಧಿಕಾರದಲ್ಲಿ ಇರಲೇಬೇಕೆಂದು double ಆಗಿ ಹೇಳುತ್ತೇನೆ. ಯಾರಾದರೂ ವಿರೋಧ ಮಾಡಿದರೂ ಕೂಡ ಅದನ್ನು ನಾವು ವಿರೋಧ ಮಾಡುವವರೆ. ಆದರೆ, ತಿರುಗಿ ನನಗೆ ಏನು ಕೊಡುತ್ತಾರೆ? ಈ Supplementary Estimates ಅವರ ಪ್ರಥಮ ಕಂತು.

(2–30 ಗಂಟೆ)

**ಶ್ರೀ ಡಿ.ವಿ.ಸದಾನಂದಗೌಡ:–** ನೀವು ಕೊಡುವುದನ್ನು ಕೊಡಿ. ಆದರೆ, ಇಂತಹ deal ಗೆಲ್ಲಾ ಒಪ್ಪಿಕೊಳ್ಳಲಿಕ್ಕೆ ಹೋಗಬೇಡಿ. ಹಳೆಯ ಸಂಬಂಧಗಳು, ಈಗಿನ ಮಳೆಗಳು, ಇದೆಲ್ಲಾ ಉಂಟಲ್ಲಾ!

**ಶ್ರೀ ಎಂ.ಸಿ.ನಾಣಯ್ಯ:–** ನಿಮ್ಮ ಬಗ್ಗೆಯೂ ಹೇಳಿದ್ದೇನೆ.

**ಡಾ॥ಎ.ಹೆಚ್.ಶಿವಯೋಗಿಸ್ವಾಮಿ:–** ಶ್ರೀಯುತ ನಾಣಯ್ಯನವರು ಒಳ್ಳೆಯ ಅಡ್ವೋಕೇಟ್ ಇದ್ದಾರೆ. ಅವರು fees ಕೇಳುತ್ತಿದ್ದಾರೆ.

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಶ್ರೀ ಡಿ.ವಿ.ಸದಾನಂದಗೌಡರವರು ಮುಖ್ಯಮಂತ್ರಿಗಳಾಗಿ ನಮ್ಮ ಜಿಲ್ಲೆಗೆ ಬಂದರು. ಅವರಿಗೆ ಒಂದು ಅವಕಾಶ ಸಿಕ್ಕಿದೆ, ಅವರಿಗೆ ಸಿಕ್ಕಿರುವಂತಹ ಅವಕಾಶವನ್ನು ಸಂಪೂರ್ಣವಾಗಿ ಮಾಡಲಿಕ್ಕೆ ಭಾರತೀಯ ಜನತಾ ಪಕ್ಷದವರೆಲ್ಲರೂ ಅವಕಾಶವನ್ನು ಕೊಡಬೇಕು, ಅವರ ಕಾಲನ್ನು ಎಳೆಯಬೇಡಿ, ಅವರು ಮುಖ್ಯಮಂತ್ರಿಯಾಗಿ ಮುಂದುವರಿಯಲಿ ಎಂದು ಅವರ ವಿಚಾರದಲ್ಲಿ ನಾನು ಬಹಿರಂಗ ವೇದಿಕೆಯಲ್ಲಿ ಹೇಳಿದೆ. ನಮ್ಮ ಜಿಲ್ಲೆಗೂ ಅವರಿಗೂ ಇರುವಂತಹ ಸಂಬಂಧ ಏನೆಂದರೆ, ನಾವು ಕರಾವಳಿ ಪ್ರದೇಶದವರು, ಇದನ್ನು ನೀವು ಶಕ್ತಿಯುತವಾಗಿ

ಮಾಡಿ ಎಂದು ನಾನು ಅವರಿಗೆ ಬಹಿರಂಗವಾಗಿ ಹೇಳಿದೆ. ಬಹುಶಃ ಇದೇ ವಿಷಯವನ್ನು ಬಿಜೆಪಿಯವರಾದ ನೀವು ಸಿದ್ದರಾಮಯ್ಯನವರಿಗೆ ಹೇಳುತ್ತೀರಾ? ಸದಾನಂದ ಗೌಡರೊಬ್ಬರು ಹೇಳಬಹುದು, ಬೇರೆ ಯಾರೂ ಹೇಳುವುದಿಲ್ಲ.

ಆದ್ದರಿಂದ, ಈ ವಿಚಾರವಾಗಿ ನಾನು ಹೆಚ್ಚಿಗೆ ಹೇಳಲಿಕ್ಕೆ ಹೋಗುವುದಿಲ್ಲ. ನಿಮ್ಮ Financial Management, ನಿಮ್ಮ Financial Governance, ನೀವು ಸಂಪಾದನೆ ಮಾಡತಕ್ಕಂತಹ ನಿಮ್ಮ ಹಣ, ಖರ್ಚು ಮಾಡುತ್ತಿರುವಂತಹ ಹಣ, ಇದರ ಬಗ್ಗೆ ನಾನು ತಪ್ಪು ಹುಡುಕಲಿಕ್ಕೆ ಹೋಗುವುದಿಲ್ಲ. ಏಕೆಂದರೆ, ಬಹಳ ವರ್ಷಗಳ ಅನುಭವದಿಂದ ನಾವು ಈ ಕೆಲಸವನ್ನು ಮಾಡಿಕೊಂಡು ಬಂದಿದ್ದೇವೆ, ನೀವು ಅದನ್ನು ಮುಂದುವರಿಸಿಕೊಂಡು ಹೋಗಿ. ಆದರೆ, ಅದಕ್ಕೆ ಇತಿ-ಮಿತಿ ಇದೆ ಎಂದು ತಮಗೂ ಗೊತ್ತಿದೆ, ನಿಮಗೂ ಗೊತ್ತಿದೆ. ನಿರೀಕ್ಷಿತ ಮಟ್ಟದಲ್ಲಿ ನಮಗೆ ಹಣ ಸಿಗುವುದಿಲ್ಲ. ಈಗ ಇವರು 62 ಸಾವಿರ ಕೋಟಿ ರೂಪಾಯಿಗಳನ್ನು ಇಟ್ಟುಕೊಂಡಿದ್ದಾರೆ. ಬಹುಶಃ ಈ ಹಣ ಸಾಕಾಗುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. 9 ಸಾವಿರ ಕೋಟಿ ರಾಜಸ್ವದಲ್ಲಿ ಈ ವರ್ಷ ಹೆಚ್ಚುವರಿಯಾಗಿ ಸಿಗುತ್ತದೆಂದು ನಿಮ್ಮ ಬಜೆಟ್‌ನಲ್ಲಿ ಹೇಳಿದ್ದೀರಿ. ಬಹುಶಃ ಅದು ಬರುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. ಸ್ವಲ್ಪಮಟ್ಟಿಗೆ ಅದು ಕಡಿಮೆ ಆದರೂ ಆಗಬಹುದು. ಆದರೆ, 1 ಲಕ್ಷದ 21 ಸಾವಿರ ಕೋಟಿ ರೂಪಾಯಿಗಳು ಏನಿದೆ, 1 ಲಕ್ಷದ ಮೇಲೆ ಬಜೆಟ್ ಮಂಡನೆ ಮಾಡಬೇಕೆನ್ನುವ ಒಂದು ಕಲ್ಪನೆ ಏನು ಬಂದಿದೆಯಲ್ಲಾ, ಆ ಕಲ್ಪನೆಯನ್ನಿಟ್ಟುಕೊಂಡಿದ್ದ ಶ್ರೀಮಾನ್ ಯಡಿಯೂರಪ್ಪನವರಿಗೆ ಆ ಬಜೆಟ್ ಅನ್ನು ಮಂಡನೆ ಮಾಡಲಿಕ್ಕೆ ಆಗಲಿಲ್ಲ. ಆದರೆ, ಶ್ರೀಯುತ ಜಗದೀಶ್ ಶೆಟ್ಟರ್‌ರವರು ಬಂದ ಕೂಡಲೇ ಏನು ಆಯಿತು ಎಂದರೆ ನಾನು ಇದನ್ನು ಮಾಡಿಯೇ ತೀರಬೇಕಾಗಿದೆ ಎಂದು ಹೇಳಿ ಹಠ ತೊಟ್ಟು, ಒಂದು ದಮ್ ಮಾಡಿ ಒಂದು ಲಕ್ಷದ ಮೇಲೆ ಮತ್ತೆ ಬಜೆಟ್ ಮಂಡನೆ ಮಾಡಿಯೇ ಬಿಟ್ಟರು.

(ಗೊಂದಲ)

ಕ್ಷಮಿಸಿ, ಅದನ್ನು ಶ್ರೀಯುತ ಸದಾನಂದಗೌಡರು ಮಾಡಿದರು. 1 ಲಕ್ಷದ 4 ಸಾವಿರ ಕೋಟಿ ರೂಪಾಯಿಗಳ ಬಜೆಟ್ ಅನ್ನು ಮಂಡನೆ ಮಾಡಿದರು. ಆಗ "ಬೇಡ, ಅಷ್ಟು ಮಾಡಿದರೆ ನಮಗೆ ಪ್ರಯೋಜನವಾಗುವುದಿಲ್ಲವೆಂದು ನಾನು ಅವರಿಗೆ ಹೇಳಿದೆ. 1 ಲಕ್ಷದ 4 ಸಾವಿರ ಕೋಟಿ ರೂಪಾಯಿಗಳ ಬಜೆಟ್ ಅನ್ನು ಮಂಡನೆ ಮಾಡಿದ ಮೇಲೆ ತದನಂತರ ಬಂದಂತಹ ಶ್ರೀಯುತ ಜಗದೀಶ್ ಶೆಟ್ಟರ್‌ರವರು 1 ಲಕ್ಷದ 17 ಸಾವಿರ ಕೋಟಿ ರೂಪಾಯಿಗಳ ಬಜೆಟ್ ಅನ್ನು ಮಂಡನೆ ಮಾಡಿದರು. ನೀವು ಕಡೆಗೆ ಅದನ್ನು 1 ಲಕ್ಷದ 21 ಸಾವಿರ ಕೋಟಿ ರೂಪಾಯಿಗಳಿಗೆ ತೆಗೆದುಕೊಂಡು ಹೋಗಿದ್ದೀರಿ. ಯಾಕೆಂದರೆ ಬಜೆಟ್ ಅನ್ನು ಮಂಡನೆ ಮಾಡಿದ್ದಾರೆ. ಅದರಲ್ಲಿ ಎಷ್ಟು ಹಣ ಬರುತ್ತದೆ, ಎಷ್ಟು ಹಣ ಹೋಗುತ್ತದೆ ಎನ್ನುವುದು ಆ ಬಜೆಟ್‌ನಲ್ಲಿ ಯಾವ ರೀತಿಯಲ್ಲಿ ಲೆಕ್ಕಾಚಾರ ಮಾಡಿದ್ದಾರೆಂದು ಗೊತ್ತಿಲ್ಲ. ಈಗ ನೀವು ಅವರು ಮಂಡನೆ ಮಾಡಿರುವ 1 ಲಕ್ಷದ 17 ಸಾವಿರ ಕೋಟಿ ರೂಪಾಯಿಗಳ ಬಜೆಟ್ ಅನ್ನು ನೀವು ಮುಖ್ಯಮಂತ್ರಿಗಳಾಗಿ reverse ಮಾಡಲಿಕ್ಕೆ ಸಾಧ್ಯವಿದೆಯೇ? ಸಾಧ್ಯವಿರಲಿಲ್ಲ. ಆ ಹಿನ್ನೆಲೆಯಲ್ಲಿ ನೀವು ಇದನ್ನು ಮಂಡನೆ ಮಾಡಿದ್ದೀರಿ. ಈ ಹಿನ್ನೆಲೆಯಲ್ಲಿ ನಡೆಸಿಕೊಂಡು ಹೋಗಿ. ಆದರೆ ಒಂದು ವಿಷಯವನ್ನು ನಾನು ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ನೀವು ಉತ್ತರವನ್ನು ಅಂತಿಮವಾಗಿ ಹೇಳಬೇಕಾದಾಗ ಈ ಒಂದು ಪರಿಸ್ಥಿತಿಯಲ್ಲಿ ಈ ಕರ್ನಾಟಕ ರಾಜ್ಯಕ್ಕೆ ಮಳೆ ಮತ್ತು ಅದಕ್ಕೆ ಬೇಕಾಗಿರತಕ್ಕಂತಹ ನೀರು, ತಮಿಳುನಾಡು ಮತ್ತು ನಮಗೆ ಇರತಕ್ಕಂತಹ ಸಂಬಂಧ ಶಮನ ಆಗಿರತಕ್ಕಂತಹ ಪರಿಸ್ಥಿತಿ ಬಂದಾಗ ನೀವು ದಯವಿಟ್ಟು 200 ಕೋಟಿ ರೂಪಾಯಿಗಳನ್ನು ಬಹಳ ದೊಡ್ಡದಾಗಿ ಆಗಿರತಕ್ಕಂತಹ ಒಂದು grant ಅನ್ನು, ಅದು 200 ಕೋಟಿ ರೂಪಾಯಿಗಳು ಬಹಳ ದೊಡ್ಡ grant ಎಂದು ನಾನು ಹೇಳುವುದಿಲ್ಲ. ನಮಗೆ ಕೊಟ್ಟಿರತಕ್ಕಂತಹ ನೀರು ಮತ್ತು ಅದರಿಂದ ಆಗತಕ್ಕಂತಹ ಲಾಭವನ್ನು, if you quantify it in the terms of money, how much it would be? Sir, it would be more than 10,000 Crores. 10 ಸಾವಿರ ಕೋಟಿ

ರೂಪಾಯಿಗಳನ್ನು ಕೊಟ್ಟಿರತಕ್ಕ ನೀರಿಗೆ ನಾವು ಕೇಳುತ್ತಿರುವುದು 200 ಕೋಟಿ ರೂಪಾಯಿಗಳು.

ಮಾನ್ಯ ಸಿದ್ದರಾಮಯ್ಯನವರೆ, ಕಾವೇರಿ ಬಗ್ಗೆ, ಈ ಇಗುತ್ತಪ್ಪ ಬಗ್ಗೆ ನಾವು ಯೋಜನೆ ಮಾಡೋಣ. 200 ಕೋಟಿ ರೂಪಾಯಿಗಳನ್ನು ನೀವು ಕೊಟ್ಟು ಬಿಡಿ. ಇಂದೇ ಪ್ರಕಟಣೆ ಮಾಡಿ. ಯಾರು ಸಹ ಇಲ್ಲವೆಂದು ಹೇಳುವುದಿಲ್ಲ. I am very certain.

**ಶ್ರೀ ಕೆ.ಬಿ.ಶಾಣಪ್ಪ:–** ಅಷ್ಟು ನೀರನ್ನು ಮಡಿಕೇರಿಯವರಾದ ನೀವೇ ಇಟ್ಟುಕೊಳ್ಳಿ. ಮತ್ತೆ ಯಾರಿಗೂ ಬಿಡಬೇಡಿ.

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಶಾಣಪ್ಪನವರೆ, ಬಹಳ ವರ್ಷಗಳ ಹಿಂದೆ ನಮ್ಮ ಪೂರ್ವಿಕರು ಒಂದು ಕೆಲಸವನ್ನು ಮಾಡಿದರಂತೆ. ಆ ಕಾವೇರಿ ನದಿ ನೀರನ್ನು ಬೇರೆ ಭಾಗಕ್ಕೆ ಬಿಡಲಿಕ್ಕೆ, divert ಮಾಡಲಿಕ್ಕೆ ಸುಮಾರು 100 ವರ್ಷಗಳ ಹಿಂದೆ ಪ್ರಯತ್ನ ಮಾಡಿದರಂತೆ. ಅದು ನನಗೆ ಸರಿಯಾಗಿ ಗೊತ್ತಿಲ್ಲ. ಬಹುಶಃ ಆ ಕೆಲಸ ಆಗಿದ್ದರೆ ಏನು ಆಗುತ್ತಿತ್ತೋ ಗೊತ್ತಿಲ್ಲ. ಪುಣ್ಯಕ್ಕೆ ಅದು ಆಗಲಿಲ್ಲ ಬಿಡಿ. ಏಕೆಂದರೆ, ಅದು west flowing river ಆಗಿದ್ದರೆ ಪರಿಸ್ಥಿತಿ ಏನು ಆಗುತ್ತಿತ್ತು? ಅದು ನಮ್ಮ ಕಡೆ ಬಂದಿದ್ದರಿಂದ ಈ ಪರಿಸ್ಥಿತಿ ನಿರ್ಮಾಣವಾಯಿತು. ಆದ್ದರಿಂದ, ದಯವಿಟ್ಟು ಈ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕು. I don’t say much about this. ಈ ವಿಚಾರವಾಗಿ ನಾನು ಹೇಳುವುದೇನೆಂದರೆ, ಈ ರಾಜಕಾರಣಕ್ಕೋಸ್ಕರ, ಓಟಿಗೋಸ್ಕರ ಮಾಡುವುದಕ್ಕೆ, ಈ doles ಕೊಡುವುದು ಏನಿದೆ, ದಯವಿಟ್ಟು ಅದು ಬೇಡ. ಯಾವುದೇ ಸಂದರ್ಭದಲ್ಲಿಯೂ ಕೂಡ doles ಕೊಡುವುದನ್ನು ನಿಲ್ಲಿಸಿಬಿಡಿ. ಬಹಳ ವರ್ಷಗಳಿಂದ ನಾವು ಈ doles ಕೊಟ್ಟುಕೊಂಡು ಬಂದಿದ್ದೇವೆ. ಈ ಸಂದರ್ಭದಲ್ಲಿ ನಾವು appeasement policy ಎಂದು ಮಾಡಿ, ನಾವು ಈ ಓಟಿಗೋಸ್ಕರ ಹಣವನ್ನು ಕೊಟ್ಟು, ಕೊಟ್ಟು ಇವತ್ತು ಕೆಲಸ ಮಾಡಲಿಕ್ಕೆ ಯಾರು ಸಹ ಮುಂದೆ ಬಾರದೇ ಇರತಕ್ಕಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈಗ ಯಾರು ಕೆಲಸ ಮಾಡಲಿಕ್ಕೆ ಬರುವುದಿಲ್ಲ. ಕೈಗಳಿಂದ ಕೆಲಸ ಮಾಡಬೇಕಾಗಿಲ್ಲವೆನ್ನುವಂತಹ ಪರಿಸ್ಥಿತಿಯನ್ನು ನಾವೇ

ನಿರ್ಮಾಣ ಮಾಡಿದ್ದೇವೆ. ಕೆಲಸ ಮಾಡಬೇಕಾಗಿಲ್ಲ, ಸರ್ಕಾರದಿಂದ ಪುಕ್ಕಸಟ್ಟೆಯಾಗಿ ಹಣ ಸಿಗುತ್ತದೆ, ಎಲ್ಲವೂ ಪುಕ್ಕಸಟ್ಟೆಯಾಗಿ ಸಿಗುತ್ತದೆ. ಅಕ್ಕಿ ವಿಚಾರವಾಗಿ ಹೇಳುವುದಾದರೆ ನಾನು ಇದರ ಬಗ್ಗೆ ಸತ್ಯವಾಗಿ ಹೇಳುತ್ತೇನೆ. ನಮಗೆ 30–40 ಕೆ.ಜಿ. ಅಕ್ಕಿ ಸಿಕ್ಕುತ್ತದೆ, ಎನ್ನುವುದು ಎಷ್ಟರಮಟ್ಟಿಗೆ ದುರುಪಯೋಗವಾಗುತ್ತಿದೆ ಎನ್ನುವದರ ಬಗ್ಗೆ ನಾವು ನಮ್ಮ ಮನಸ್ಸಿನಲ್ಲಿ ಕಲ್ಪನೆ ಮಾಡಿಕೊಳ್ಳೋಣ. ಇದು ದೊಡ್ಡ ಪ್ರಮಾಣದಲ್ಲಿ ದುರುಪಯೋಗವಾಗುತ್ತಿದೆ. ಈಗಾಗಲೇ ಕೆಲವು ಜಾಗದಲ್ಲಿ 1000 ಕ್ವಿಂಟಾಲ್, 1500 ಕ್ವಿಂಟಾಲ್ ಅಕ್ಕಿಯನ್ನು ಮಾರಾಟ ಮಾಡುತ್ತಿದ್ದಾಗ ಸಿಕ್ಕಿ ಬಿದ್ದು, ಈ ಸಂಬಂಧವಾಗಿ 4–5 ಕೇಸ್‌ಗಳನ್ನು ಈಗಾಗಲೇ ಹಾಕಿದ್ದೀರಿ. ಎಷ್ಟು ದೊಡ್ಡ ಪ್ರಮಾಣದಲ್ಲಿ ದುರುಪಯೋಗವಾಗುತ್ತಿದೆ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಇದನ್ನು ಮಾಡಿಕೊಂಡು ಹೋಗುವುದು ಎಷ್ಟರಮಟ್ಟಿಗೆ ಸರಿ ಎನ್ನುವುದರ ಬಗ್ಗೆ ಗಮನಿಸೋಣ. Because, financial management doesnot necessarily mean. I think give it by way of charity to everybody they like it. No, ಕಾರಣ, ಏಕೆಂದರೆ, ಇದು ಯಾರ ಹಣ? ಕೊಡುತ್ತಿರುವ ಹಣ ಪೂರ್ಣವಾಗಿ ನಮ್ಮ ಹಣ. ರಾಜ್ಯದ ಜನತೆಯ ಹಣವನ್ನು ಕೇವಲ ಒಂದು ವರ್ಗದ ಜನರಿಗೆ ಕೊಡುವದರ ಬಗ್ಗೆ ನಾನು ಏನು ಹೇಳುತ್ತಿದ್ದೇನೆಂದರೆ, this is not a Charitable Institution. ನೀವು ಹಿಂದಕ್ಕೆ ಕೊಡಬಾರದು. ಈ ಹಿಂದೆ ಕೆಲವು ತೀರ್ಮಾನ ತೆಗೆದುಕೊಂಡಿದ್ದೀರಿ. ಇನ್ನು ಮುಂದಕ್ಕೆ ಈ ರೀತಿಯ ತೀರ್ಮಾನಗಳನ್ನು ಖಂಡಿತವಾಗಿಯೂ ತೆಗೆದುಕೊಳ್ಳಬೇಡಿ. Financial Discipline ಎನ್ನುವುದನ್ನು ನೀವು maintain ಮಾಡಿ. ಮುಂದಿನ ವರ್ಷಗಳಲ್ಲಿ ನಿಮ್ಮ ಈ debt component ಅನ್ನು ಕಡಿಮೆ ಮಾಡಲಿಕ್ಕೆ ಇರತಕ್ಕಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಲಿಕ್ಕೆ ನಿಮಗೆ ಶಕ್ತಿಯಿದ್ದು, ಆ ಕೆಲಸವನ್ನು ನೀವು ಮಾಡಿ.

ಕೊನೆಯದಾಗಿ, ನಾನು ಕುಳಿತುಕೊಳ್ಳುವುದಕ್ಕೆ ಮೊದಲು ತಮ್ಮಲ್ಲಿ ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ನೀವು ಈ ಸದನವನ್ನು ಬಿಡುವುದಕ್ಕೆ ಮೊದಲು, ಆ 200 ಕೋಟಿ ರೂಪಾಯಿಗಳ ಬಗ್ಗೆ ಹೇಳಿ.

ಕಾವೇರಿ ಮತ್ತು Igguthappa ನಿಮಗೆ ಆಶೀರ್ವಾದ ಮಾಡಿ, ನಿಮ್ಮ ಚೇರ್ ಏನು ಇದೆ, ಆ ನಿಮ್ಮ ಅಧಿಕಾರ ಹಾಗೆಯೇ ಮುಂದುವರಿಯಲಿ ಎಂದು ಹೇಳಿ ನಾನು ಆಶೀರ್ವಾದ ಮಾಡುತ್ತೇನೆ.

**ಸಭಾಪತಿಯವರು:–** ಈ ಧನ ವಿನಿಯೋಗ ಮಸೂದೆ ಬಗ್ಗೆ ಚರ್ಚೆ ಮಾಡಲಿಕ್ಕೆ ಮೂರು ಜನ ಗೌರವಾನ್ವಿತ ಸದಸ್ಯರು ಪಟ್ಟಿಯನ್ನು ಕಳುಹಿಸಿದ್ದಾರೆ. ಈಗಾಗಲೇ ಈ ಬಗ್ಗೆ ವಿರೋಧ ಪಕ್ಷದ ನಾಯಕರು ಮತ್ತು ಶ್ರೀಯುತ ಎಂ.ಸಿ.ನಾಣಯ್ಯನವರು ಮಾತನಾಡಿದ್ದಾರೆ. ಮೂರು ಜನ ಸದಸ್ಯರು ಅವಕಾಶವನ್ನು ಕೇಳಿದ್ದಾರೆ. ಅವರಿಗೆ ನಾನು ಅವಕಾಶ ಕೊಡುತ್ತೇನೆ. ದಯವಿಟ್ಟು ಬೇಗ ಬೇಗ ತಮ್ಮ ಭಾಷಣವನ್ನು ಮುಗಿಸಬೇಕು.

**ಶ್ರೀ ಅಶ್ವತ್‌ನಾರಾಯಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟದ್ದಕ್ಕೆ ಮೊದಲಿಗೆ ಧನ್ಯವಾದಗಳು. ಈಗಾಗಲೇ ನಮ್ಮ ವಿರೋಧ ಪಕ್ಷದ ನಾಯಕರಾದ ಶ್ರೀ ಡಿ.ವಿ.ಸದಾನಂದಗೌಡರು ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ಶ್ರೀ ಎಂ.ಸಿ.ನಾಣಯ್ಯನವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಮಾನ್ಯ ಎಂ.ಸಿ.ನಾಣಯ್ಯನವರು ಶ್ರೀ ಸದಾನಂದಗೌಡರಿಗಿಂತ ಜಾಸ್ತಿ ಸಮಯ ಮಾತನಾಡುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೆ. ಆದರೆ, ಅವರು ಬಹಳ ಕಡಿಮೆ ಮಾತನಾಡಿದ್ದಾರೆ.

**ಸಭಾಪತಿಯವರು:–** ಆ ವಿಷಯ ಇರಲಿ, ನಿಮ್ಮ ವಿಷಯ ಮಾತನಾಡಿ.

**ಶ್ರೀ ಅಶ್ವತ್‌ನಾರಾಯಣ(ವಿಧಾನಸಭಾ ಕ್ಷೇತ್ರ):–** ಈ ಪೂರಕ ಬಜೆಟ್‌ನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಕೆಲವು ಅಭಿವೃದ್ಧಿ ವಿಚಾರದ ಬಗ್ಗೆ ಹೆಚ್ಚುವರಿ ಫಂಡ್‌ಗಳನ್ನು ನಾವು ಅಭಿವೃದ್ಧಿ ದೃಷ್ಟಿಯಿಂದ ಬಿಡುಗಡೆ ಮಾಡಿದ್ದೇವೆ, ಪೂರಕವಾಗಿ ಕೆಲವು ಫಂಡ್‌ಗಳನ್ನು ಕೊಟ್ಟಿದ್ದೇವೆಂದು ಹೇಳಿ PWD, RDPR ಆಗಬಹುದು, ರಸ್ತೆಗಳಿಗೆ ಹಾಗೂ ಬೇರೆ ಬೇರೆ ವಿಷಯಕ್ಕೆಲ್ಲಾ PWD ಗೆ ಸುಮಾರು 3161 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದಕ್ಕೆ

ಹೆಚ್ಚುವರಿಯಾಗಿ 954 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಈಗಾಗಲೇ ಹೆಚ್ಚುವರಿ ಬಾಕಿ ಬಿಲ್ ಬಗ್ಗೆ ಸಾಕಷ್ಟು ವಿಚಾರಗಳನ್ನು ಸನ್ಮಾನ್ಯ ಸದಾನಂದಗೌಡರು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಅಷ್ಟು ಬಾಕಿ ಬಿಲ್‌ಗಳನ್ನು ಕೊಡಬೇಕಾಗಿದೆ ಎಂದು ಹೇಳಿದ್ದಾರೆ.

ಇನ್ನು ಒಂದು ವಿಷಯ ಏನೆಂದರೆ, ಎಲ್ಲಿಯೂ ಸಹ ಯಾವುದೇ ಜಿಲ್ಲೆಯಲ್ಲಿಯೂ PWD ರಸ್ತೆಗಳ ಕಾಮಗಾರಿಗಳು ಯಥೇಚ್ಛವಾಗಿ ಆಗುತ್ತಿರುವುದು ಕಣ್ಣಿಗೆ ಕಂಡುಬರುತ್ತಿಲ್ಲ. ಆಡಳಿತ ಪಕ್ಷದ ಶಾಸಕರುಗಳಿಂದ, ಸಚಿವರುಗಳಿಂದ ಹಿಡಿದು, ಅವರ ಜಿಲ್ಲೆಗಳಲ್ಲಿ, ತಾಲ್ಲೂಕುಗಳಲ್ಲಿ ಎಲ್ಲಿಯೂ ಸಹ ಹೊಸ project ಗಳನ್ನು ಕೈಗೆತ್ತಿಕೊಂಡಿರುವುದು ಇವತ್ತು ಕಂಡು ಬರುತ್ತಿಲ್ಲ. ಚಾಮರಾಜನಗರ, ಮೈಸೂರು ಭಾಗದಲ್ಲಿ PWD ವತಿಯಿಂದ ಸಾಕಷ್ಟು ಕೆಲಸಗಳು ಆಗುತ್ತಿವೆಂದು ತಿಳಿದು ಬಂದಿದೆ. ಉಳಿದ ಜಿಲ್ಲೆಗಳಲ್ಲಿ ಬಹಳ ಕಡಿಮೆ ಹಣ ಬಿಡುಗಡೆಯಾಗುತ್ತಿದೆ. ಈಗಾಗಲೇ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಮಾಡಿರತಕ್ಕಂತಹ ಕೆಲಸಗಳ ಬಿಲ್‌ಗಳು ಬಾಕಿ ಇರುವುದರಿಂದ ಯಾವ ಗುತ್ತಿಗೆದಾರರು ಸಹ ಮುಂದೆ ಬಂದು ಕೆಲಸ ಮಾಡುತ್ತಿರುವುದು ಕಂಡು ಬರುತ್ತಿಲ್ಲ.

ಮತ್ತೆ ಗ್ರಾಮೀಣಾಭಿವೃದ್ಧಿ ಮತ್ತು ರಸ್ತೆಗಳ ಅಭಿವೃದ್ಧಿಗೋಸ್ಕರ ಮತ್ತೆ RDPR ನಲ್ಲಿ ವಿದ್ಯುತ್ ಬಿಲ್‌ಗೋಸ್ಕರ ಮತ್ತು ಪಂಪ್‌ಸೆಟ್ ಬಿಲ್‌ಗೋಸ್ಕರ 900 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ನಮ್ಮ ಸರ್ಕಾರ ಇದ್ದಂತಹ ಸಂದರ್ಭದಲ್ಲಿ "ನಮ್ಮ ಗ್ರಾಮ, ನಮ್ಮ ರಸ್ತೆ" ಎನ್ನುವಂತಹ ಯೋಜನೆಗಳ ಮೂಲಕ 50 ಕಿ.ಮೀ., 20 ಕಿ.ಮೀ. ರಸ್ತೆಗಳನ್ನು ನಿರ್ಮಾಣ ಮಾಡತಕ್ಕಂತಹ ಕೆಲಸವನ್ನು ನಮ್ಮ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಮಾಡಿದೆ. ಈಗ ಅದಕ್ಕೆ ಹಣವನ್ನು ಬಿಡುಗಡೆ ಮಾಡಿಲ್ಲ. ಅದಕ್ಕೆ ಹೊಸ ವ್ಯಾಖ್ಯಾನ ಕೊಟ್ಟು "ನಮ್ಮ ಹೊಲ, ನಮ್ಮ ರಸ್ತೆ" ಎಂದು ಮಾಡಿದ್ದಾರೆ. ಅದು ಈ NREGA (National Rural Employment Guarantee Act) scheme ನಲ್ಲಿ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಇವತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಹಳ್ಳಿಗಳಲ್ಲಿ, ತಾಲ್ಲೂಕುಗಳಲ್ಲಿ ಹೊಸ

ರಸ್ತೆಗಳನ್ನು ಮಾಡತಕ್ಕದ್ದು, ಹೊಸ ಯೋಜನೆಗಳನ್ನು ಮಾಡತಕ್ಕದ್ದು ಎಲ್ಲೂ ಕಂಡು ಬರುತ್ತಿಲ್ಲ. ಈ ಬಗ್ಗೆ ಈಗಾಗಲೇ ಮಾನ್ಯ ಶ್ರೀ ಸದಾನಂದಗೌಡರು ಸದನದ ಗಮನವನ್ನು ಸೆಳೆದಿದ್ದಾರೆ. ಸುವರ್ಣ ಗ್ರಾಮ ಯೋಜನೆಗಳನ್ನು ಕೈಬಿಟ್ಟಿದ್ದೀರಿ, ಹಿಂದೆ ಮಾಡಿರತಕ್ಕಂತಹ ಸುವರ್ಣ ಗ್ರಾಮ ಯೋಜನೆಗಳಲ್ಲಿ ಮಾಡಿರತಕ್ಕಂತಹ ಕೆಲಸಗಳ pending ಬಿಲ್‌ಗಳನ್ನು ಕೊಡಲಿಕ್ಕೆ ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ, ಈ ಸುರ್ವಣ ಗ್ರಾಮ ಎನ್ನುವ ಒಂದು ಯೋಜನೆ ಏನು ಇದೆ, ಇದನ್ನು ಯಾವುದೇ ಗ್ರಾಮ ಪಂಚಾಯಿತಿಗೆ ಹೋದರೂ ಸಹ ಆ ಪಂಚಾಯಿತಿಯ ಪ್ರತಿಯೊಬ್ಬ ಸದಸ್ಯರು ಪಕ್ಷಾತೀತವಾಗಿ ಒಪ್ಪಿಕೊಳ್ಳುವಂತಹ ಯೋಜನೆ ಇದಾಗಿದೆ. ದಯಮಾಡಿ ಅಂತಹ ಯೋಜನೆಗಳನ್ನು ಹೊಸದಾಗಿ ಜಾರಿಗೆ ತರಬೇಕೆಂದು ಈ ಸದನದ ಮುಖಾಂತರ ತಮ್ಮಲ್ಲಿ ಒತ್ತಾಯ ಮಾಡುತ್ತೇನೆ. ಮಾನ್ಯ ನಾಣಯ್ಯನವರು ಹೇಳಿದ ಹಾಗೆ ಈಗ ಎಲ್ಲಾ ಜಲಾಶಯಗಳಲ್ಲೂ ಕೂಡ ನೀರು ತುಂಬಿದೆ. ಆದರೆ ಫೆಬ್ರವರಿ, ಮಾರ್ಚ್ ತಿಂಗಳು ಕಳೆಯುತ್ತಿದ್ದ ಹಾಗೆ ಎಲ್ಲಾ ಜಲಾಶಯಗಳಲ್ಲೂ ನೀರು ಖಾಲಿಯಾಗುತ್ತದೆ. ಇದರಿಂದಾಗಿ ಮತ್ತೆ ಖಂಡಿವಾಗಿ ಮೇ ತಿಂಗಳಲ್ಲಿ ವಿದ್ಯುತ್ತಿನ ತೊಂದರೆ ಹೆಚ್ಚಾಗುತ್ತದೆ. ಪವರ್ ಪ್ರಾಜೆಕ್ಟ್‌ಗಳಿಗಾಗಲೀ, ಈ ವಿದ್ಯುತ್ತಿಗಾಗಲೀ ಎಲ್ಲೂ ಕೂಡ ಇದರಲ್ಲಿ ಹಣವನ್ನು ಮೀಸಲಿಟ್ಟಿರುವ ಅಂಶ ನಮಗೆ ಕಾಣುತ್ತಿಲ್ಲ. ದಯಮಾಡಿ ಇದಕ್ಕೆ ಹಣವನ್ನು ಮೀಸಲಿರಿಸಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳವರಲ್ಲಿ ಮನವಿ ಮಾಡುತ್ತೇನೆ. ಈ ವಿದ್ಯುತ್ ಸಮಸ್ಯೆ ನಮ್ಮ ರಾಜ್ಯದಲ್ಲಿ ಮುಂದಿನ ದಿನಗಳಲ್ಲಿ ಕಾಡುತ್ತದೆ. ಸರ್ಕಾರ ಈ ದಿಸೆಯಲ್ಲಿ ಈಗಲೇ ಎಚ್ಚೆತ್ತುಕೊಳ್ಳಬೇಕೆಂದು ಮನವಿ ಮಾಡುತ್ತೇನೆ. ಕೇಂದ್ರ ಸರ್ಕಾರದ ಅಸಹಕಾರ ಧೋರಣೆಯ ಮನೋಭಾವದ ಮಧ್ಯದಲ್ಲೂ ಕೂಡ ನಮ್ಮ ಸರ್ಕಾರದವರು ವಿದ್ಯುತ್ ಸಮಸ್ಯೆಗೆ ಹೆಚ್ಚಿನ ಆದ್ಯತೆಯನ್ನೂ ಕೊಟ್ಟಿದ್ದರು. ಇಲ್ಲಿ ಎಲೆಕ್ಟ್ರಿಫಿಕೇಷನ್ನಿಗೋಸ್ಕರ ಇಲ್ಲವೇ ಹೊಸ ವಿದ್ಯುತ್ ಯೋಜನೆಗಳಿಗಾಗಿ ಯಾವುದೇ ಹಣವನ್ನು ಮೀಸಲಾಗಿಟ್ಟಿರುವುದು ಕಂಡು ಬರುತ್ತಿಲ್ಲ. ರೈಲ್ವೆಗೆ ಈಗಾಗಲೇ ಆಯವ್ಯಯದಲ್ಲಿ 373 ಕೋಟಿಯನ್ನು ಈ ವರ್ಷ ಹೆಚ್ಚುವರಿಯಾಗಿ ಕೊಟ್ಟಿದ್ದೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು.

10–12,000 ಕೋಟಿ ಯೋಜನೆ ಒಂದು ಕಡೆ ಇದೆ. ಒಟ್ಟು 22 ಸಾವಿರ ಕೋಟಿ ಯೋಜನೆ ಒಂದು ಕಡೆ ಇದೆ. ಆಯವ್ಯಯದಲ್ಲಿ ಇಟ್ಟಿರುವ 373 ಕೋಟಿ ರೂಪಾಯಿಯ ಜೊತೆಯಲ್ಲಿ ಇನ್ನೂ 100 ಕೋಟಿ ರೂಪಾಯಿ ಹಣವನ್ನು ಕೊಟ್ಟಿದ್ದೇವೆಂದು ಹೇಳಿದರು. ಒಟ್ಟು 473 ಕೋಟಿ ರೂಪಾಯಿ ಏನು ಇದೆ ಇದು ಏನೇನೂ ಸಾಕಾಗುವುದಿಲ್ಲ. ಯಾವುದಾದರೂ ಒಂದು ರೈಲ್ವೆ ಲೈನ್ ಡಬ್ಲಿಂಗ್ ಮಾಡುವುದಕ್ಕೆ ಬೇಕಾದ ಜಮೀನಿಗೆ ಪರಿಹಾರವನ್ನು ನೀಡುವುದಕ್ಕೆ ಈ ಹಣ ಸಾಕಾಗುವುದಿಲ್ಲ. ಮೈಸೂರು–ಬೆಂಗಳೂರು ಅಥವಾ ಬೆಂಗಳೂರು–ಹಾಸನಕ್ಕೆ ಅಗತ್ಯವಾಗಿರುವ ಲ್ಯಾಂಡ್ ಅಕ್ವಿಸಿಷನ್‌ಗೆ ಈ 400 ಕೋಟಿ ಸಾಕಾಗುವುದಿಲ್ಲ. ಈ ಲ್ಯಾಂಡ್ ಅಕ್ವಿಸಿಷನ್‌ಗೆ ಹಣವನ್ನು ಕೊಡಬೇಕು ಮತ್ತು ಈ ಲೈನ್ ಅನ್ನು ಡಬ್ಲಿಂಗ್ ಮಾಡುವುದಕ್ಕೆ ಹಣ ಸಾಕಾಗುವುದಿಲ್ಲ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನಿಸಬೇಕು. ಈ ಮ್ಯಾಚಿಂಗ್ ಹಣವನ್ನು ಏನು ಘೋಷಣೆ ಮಾಡಿದ್ದೀರಿ ಇದು ಏನೇನೂ ಸಾಕಾಗುವುದಿಲ್ಲ. ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎಂಬಂತಾಗಿದೆ. 22 ಸಾವಿರ ಕೋಟಿಯ ಯೋಜನೆಗೆ ಈ 373 ಕೋಟಿ ಏನೇನೂ ಸಾಕಾಗುವುದಿಲ್ಲ. ದಯಮಾಡಿ ಈ ಮೊತ್ತವನ್ನು ಹೆಚ್ಚು ಮಾಡಬೇಕು. ರೈಲ್ವೆ ಯೋಜನೆಯನ್ನು ಕೈಗೆತ್ತಿಕೊಂಡಿದ್ದೇ ಆದರೆ ಅದು ನಮ್ಮ ರಾಜ್ಯದ ಅಭಿವೃದ್ಧಿಯನ್ನು ಜನತೆಗೆ ತೋರಿಸುವಲ್ಲಿ ಸಹಾಯವಾಗುತ್ತದೆ. ಕೇಂದ್ರದಲ್ಲಿ ನಮ್ಮ ರಾಜ್ಯದವರೇ ರೈಲ್ವೆ ಮಂತ್ರಿಗಳಿದ್ದಾರೆ. ಈ ಸಂದರ್ಭದಲ್ಲಿ ಕೆಲವೊಂದು ಮ್ಯಾಚಿಂಗ್ ಗ್ರ್ಯಾಂಟ್ ಅನ್ನು ಕೊಟ್ಟು ಮಾಡುವ ಯೋಜನೆಗಳೂ ಕೂಡ ಇವೆ. ಮತ್ತೆ ಕೆಲವು ಯೋಜನೆಗಳನ್ನು ಕೇಂದ್ರ ಸರ್ಕಾರವೇ ನೇರವಾಗಿ ಹಣವನ್ನು ಖರ್ಚು ಮಾಡುವ ಯೋಜನೆಗಳೂ ಕೂಡ ಇವೆ. ನಮ್ಮಲ್ಲಿ ಹಣದ ಕೊರತೆ ಇರುವುದರಿಂದ, ಕೇಂದ್ರ ಸರ್ಕಾರ ಮಾಡುವ ಯೋಜನೆಯನ್ನಾದರೂ ಕೈಗೆತ್ತಿಕೊಂಡು ಮುಗಿಸುವಂತೆ ನೀವು ಮಾನ್ಯ ಕೇಂದ್ರ ರೈಲ್ವೆ ಸಚಿವರಲ್ಲಿ ಒತ್ತಾಯವನ್ನು ಮಾಡಬೇಕಾಗುತ್ತದೆ. ಇನ್ನು ಇವರು ಹೊಸದಾಗಿ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಹೊಸ ಮೆಡಿಕಲ್ ಕಾಲೇಜುಗಳನ್ನು ಪ್ರತಿ ಜಿಲ್ಲೆಗೊಂದರಂತೆ ಮಾಡುತ್ತೇವೆಂದು ಘೋಷಣೆ ಮಾಡಿದರ. ಅದು ಸ್ವಾಗತಾರ್ಹ. ಆದರೆ ಈಗ ಇರತಕ್ಕಂತಹ ಮೆಡಿಕಲ್

ಕಾಲೇಜುಗಳ ಮತ್ತು ಈಗ ಸರ್ಕಾರಿ ಆಸ್ಪತ್ರೆಗಳಲ್ಲಿನ ವ್ಯವಸ್ಥೆಯನ್ನು ದಯಮಾಡಿ ನೋಡಿದರೆ ಗೊತ್ತಾಗುತ್ತದೆ. ಇಲ್ಲಿ ಬೆಳಗಾಂನಲ್ಲಿ ಅಧಿವೇಶನ ನಡೆಯುತ್ತಿದೆ. ನಮ್ಮ ಯಾದಗಿರಿ ಜಿಲ್ಲೆಯಲ್ಲಿನ ಕೆಲವರು ಮಹಾರಾಷ್ಟ್ರಕ್ಕೆ ಗುಳೆ ಹೊರಟರು. ಆ ಸಂದರ್ಭದಲ್ಲಿ ಸವದತ್ತಿಯ ಬಳಿ 32 ಜನರು ಅಪಘಾತಕ್ಕೆ ಒಳಗಾಗಿ ಅದರಲ್ಲಿ 22 ಜನ ಸತ್ತರು. ಇನ್ನು ಉಳಿದವರಿಗೆ ಸಣ್ಣ ಪುಟ್ಟ ಗಾಯಗಳಾದವು. ಕೈ ಕಾಲು ಮುರಿದಿದೆ. ಅವರಿಗೆ ಹಾಕಿಕೊಳ್ಳುವುದಕ್ಕೆ ಅಲ್ಲಿ ಬೆಲ್ಟ್ ಇಲ್ಲ. ನೀವು ಅದನ್ನು ಹೊರಗಡೆಯಿಂದ ತಂದು ಹಾಕಿಕೊಳ್ಳಿ ಎಂದು ಚೀಟಿಯನ್ನು ಬರೆದು ಕೊಡುತ್ತಾರೆ. ಅಂತಹ ಪರಿಸ್ಥಿತಿ ಇದೆ. ದಯಮಾಡಿ ನೀವು ಹೊಸ ಮೆಡಿಕಲ್ ಕಾಲೇಜುಗಳನ್ನು ಮಾಡುವುದರ ಜೊತೆಗೆ ಈಗ ಇರತಕ್ಕಂತಹ ಎಲ್ಲಾ ಜಿಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿನ ಅವ್ಯವಸ್ಥೆಯನ್ನು ನೀವು ಮೊದಲು ಸರಿ ಮಾಡಬೇಕು. ಈಗ ಸರ್ಕಾರಿ ಆಸ್ಪತ್ರೆಗಳಿಗೆ ಎಷ್ಟು ಅನುದಾನವನ್ನು ಮೀಸಲಾಗಿಟ್ಟಿದ್ದೀರಿ ಎಂಬುದರ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕು. ಸವದತ್ತಿಯ ಬಳಿ 32 ಜನರು ಅಪಘಾತಕ್ಕೆ ಒಳಗಾಗಿ ಅದರಲ್ಲಿ 22 ಜನ ಸತ್ತರು. ಇನ್ನು ಉಳಿದವರಿಗೆ ಸಣ್ಣ ಪುಟ್ಟ ಗಾಯಗಳಾದವು. ಕೈ ಕಾಲು ಮುರಿದಿದೆ. ಅವರಿಗೆ ಹಾಕಿಕೊಳ್ಳುವುದಕ್ಕೆ ಅಲ್ಲಿ ಬೆಲ್ಟ್ ಇಲ್ಲ. ದಯಮಾಡಿ ನೀವು ಹೋಗಿ ನೋಡಿ. ಹಾಗೆಂದ ಕೂಡಲೇ ಹೊಸ ಮೆಡಿಕಲ್ ಕಾಲೇಜುಗಳನ್ನು ಮಾಡಬಾರದೆಂದು ನಾನು ಹೇಳುತ್ತಿಲ್ಲ. ಇದಕ್ಕಾಗಿ 174 ಕೋಟಿ ರೂಪಾಯಿ ಏನು ಇಟ್ಟಿದ್ದೀರಿ ಇದರಿಂದ ಹೊಸ ಮೆಡಿಕಲ್ ಕಾಲೇಜುಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಆದರೆ ನೀವು ಇಟ್ಟಿರುವ ಹಣ ಏನೇನೂ ಸಾಕಾಗುವುದಿಲ್ಲ. ಲ್ಯಾಂಡ್ ಅಕ್ವಿಸಿಷನ್ ಮಾಡಿಕೊಳ್ಳುವುದಕ್ಕೆ ಈ ಹಣ ಸಾಕಾಗುವುದಿಲ್ಲ. ಒಂದು ಮೆಡಿಕಲ್ ಕಾಲೇಜಿಗೆ ಸುಮಾರು 50–60 ಎಕರೆ ಜಾಗ ಬೇಕಾಗುತ್ತದೆ. ಇದು ಯಾವ ಮೂಲೆಗೆ ಸಾಕಾಗುತ್ತದೆ. ಕೇವಲ ತೋರಿಕೆಗೋಸ್ಕರ ಈ ಮೆಡಿಕಲ್ ಕಾಲೇಜುಗಳನ್ನು ಮಾಡುವುದು ಬೇಡ. ಜಿಲ್ಲೆಗೊಂದು ಮೆಡಿಕಲ್ ಕಾಲೇಜನ್ನು ಮಾಡುವುದಕ್ಕೆ ಸಾಧ್ಯವಾಗದಿದ್ದರೂ ಕೂಡ ಮೂರು ಜಿಲ್ಲೆಗೆ ಒಂದು ಮೆಡಿಕಲ್ ಕಾಲೇಜನ್ನು ಮಾಡಿ ಅದಕ್ಕೆ ಅಗತ್ಯವಾದ ಹಣವನ್ನು ಇದಕ್ಕೆ ನೀಡಬೇಕೆಂದು ವಿನಂತಿ. ರಾಜಕೀಯವಾದ ಹೇಳಿಕೆಗಳನ್ನು

ಕೊಡುವುದಕ್ಕೋಸ್ಕರ ಇದನ್ನು ಮಾಡತಕ್ಕಂಥಾದ್ದು ಸೂಕ್ತವಲ್ಲ ಎಂಬ ವಿಚಾರ ನನ್ನ ಮನಸ್ಸಿಗೆ ಬಂದಿದೆ.

**ಸಭಾಪತಿಯವರು:–** ನಿಮಗೆ ಕೊಟ್ಟ ಸಮಯ ಆಯಿತು ಬೇಗ ಮುಗಿಸಿ.

**ಶ್ರೀ ಅಶ್ವಥ್‌ನಾರಾಯಣ:–** ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ಈ ಕೋ ಆಪರೇಟಿವ್ ಸೊಸೈಟಿಗಳಿಗೆ ನೀಡಬೇಕಾದ 800 ಕೋಟಿ ರೂಪಾಯಿ ಏನು ಬಾಕಿ ಇದೆ ಆ ಎಲ್ಲಾ ಹಣವನ್ನು ಬಿಡುಗಡೆ ಮಾಡಿದ್ದೇ ಆದರೆ ಖಂಡಿತ ಎಲ್ಲೋ ಒಂದು ಕಡೆಯಲ್ಲಿ ಆ ರೈತರಿಗೆ ಸಾಲ ಸಿಗುವುದಕ್ಕೆ ಸಹಾಯ ಮಾಡಿದಂತಾಗುತ್ತದೆ. ಯಾವುದೇ ಕೋ ಆಪರೇಟಿವ್ ಸಂಸ್ಥೆಗಳು ಸರ್ಕಾರವನ್ನು ನಂಬಿ ರೈತರಿಗೆ ಸಾಲವನ್ನು ಕೊಡುವ ಪರಿಸ್ಥಿತಿಯಲ್ಲಿ ಇಲ್ಲ ಎಂದು ಹೇಳಬಯಸುತ್ತೇನೆ. ಇಷ್ಟು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಈಗ ಭೋಜನ ವಿರಾಮದ ನಂತರ ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ನೀಡುತ್ತಾರೆ. ಈಗ ಭೋಜನ ವಿರಾಮಕ್ಕಾಗಿ 3 ಗಂಟೆ 45 ನಿಮಿಷದವರೆಗೆ ಸದನವನ್ನು ಮುಂದೂಡಲಾಗಿದೆ.

(02 ಗಂಟೆ 45 ನಿಮಿಷಗಳಲ್ಲಿ ಮೇಲೆದ್ದ ಸದನವು ಪುನಃ 03 ಗಂಟೆ 52 ನಿಮಿಷಗಳಿಗೆ ಸಮಾವೇಶಗೊಂಡಿತು. ಮಾನ್ಯ ಸಭಾಪತಿಯವರು ಸಭಾಪೀಠವನ್ನಲಂಕರಿಸಿದ್ದರು)

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೆ, ತಾವು ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುತ್ತೀರೆಂದು ಅಂದುಕೊಂಡಿದ್ದೇನೆ. ತಾವು ನನಗೆ ಐದು ನಿಮಿಷ ಮಾತನಾಡಲು ಅವಕಾಶವನ್ನು ಕಲ್ಪಿಸಬೇಕು. ಒಬ್ಬ ದಲಿತನ ಕೊಲೆಯಾಗಿ ನಾಲ್ಕು ತಿಂಗಳಾಗಿದೆ. ಅವನ ಬಗ್ಗೆ ಮಾತನಾಡುವ ಸೌಜನ್ಯತೆ ಈ ಡೆಮಾಕ್ರೆಟಿಕ್ ಇನ್‌ಸ್ಟಿಟ್ಯೂಶನ್‌ನಲ್ಲಿ ಪರ್ಮಿಶನ್ ಸಿಗಲಿಲ್ಲವೆಂದರೆ ಹೇಗೆ?

**ಸಭಾಪತಿಯವರು:–** ಅವಕಾಶ ಕಲ್ಪಿಸಿಕೊಡೋಣ. ಈಗ ಈ ಧನವಿನಿಯೋಗ ಮಸೂದೆ ಮುಗಿದ ಮೇಲೆ ಬೇರೆ ವಿಷಯದ ಬಗ್ಗೆ ಚರ್ಚೆ ಮಾಡೋಣ. ಧನ ವಿನಿಯೋಗ ವಿಧೇಯಕದ ಚರ್ಚೆಯಲ್ಲಿ ಅಶ್ವತ್ಥ್‌ನಾರಾಯಣರವರು ಮಾತನಾಡಿದ್ದರೆ. ಪುಟ್ಟಸ್ವಾಮಿಯವರು ಮಾತನಾಡುತ್ತೇನೆಂದು ಹೇಳಿದ್ದಾರೆ. ಮಾತನಾಡುತ್ತೀರಾ? ಇಲ್ಲ ಅಂದರೆ ಇಲ್ಲ. ಮಾತನಾಡುವುದಿಲ್ಲವೇ? ಆಯಿತು. ಶ್ರೀ ಅರುಣ್ ಶಹಾಪೂರ್‌ರವರು ಮಾತನಾಡಿ.

**ಶ್ರೀ ಅರುಣ್ ಶಹಾಪೂರ್ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಸರ್ಕಾರ ಈಗ 7743.6428 ಕೋಟಿ ರೂಪಾಯಿಗಳ ಧನವಿನಿಯೋಗವನ್ನು ಮಂಡನೆ ಮಾಡಿದೆ. ನಾನು ಎರಡು ಸಂಗತಿಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಸರ್ಕಾರ ಈಗ 7743.6428 ಕೋಟಿ ರೂಪಾಯಿಗಳ ಧನವಿನಿಯೋಗವನ್ನು ಮಂಡನೆ ಮಾಡಿದರೂ ಕೂಡ ಸಂವಿಧಾನದ 371 (ಜೆ) ತಿದ್ದುಪಡಿ ಕಲಂ ಈಗ ಏನು ಆಗಿದೆ ಅದಕ್ಕೆ ವಿಶೇಷವಾದಂಥ ಹಣವನ್ನು ಸರ್ಕಾರ ನೀಡುತ್ತದೆಂದು ಆ ಭಾಗದ ಜನ ನಿರೀಕ್ಷೆಯನ್ನಿಟ್ಟುಕೊಂಡಿದ್ದರು. ಆದರೆ ಸರ್ಕಾರ ಇಲ್ಲಿ ಒದಗಿಸಿರುವ ಹಣದ ಪ್ರಮಾಣ ನೋಡಿದರೆ ಸರ್ಕಾರ ಅದು ಯಾವುದಕ್ಕೂ ಸಾಲುವುದಿಲ್ಲ ಎನ್ನುವಂಥ ಸ್ಥಿತಿ ಇದೆ. ಅಧಿಕಾರಿಗಳ ವೇತನ, ಸಿಬ್ಬಂದಿ ವೇತನ, ತುಟ್ಟಿಭತ್ಯೆ, ಇತರ ಭತ್ಯೆ, ಪೂರಕ ವೆಚ್ಚಗಳು, ವೈದ್ಯಕೀಯ ಭತ್ಯೆಗಳು ಎಂದು 51–52 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಅದರ ಜೊತೆಗೆ ಸಂವಿಧಾನದ ಅನುಚ್ಛೇದದ 371 (ಜೆ) ಕಲಂ ತಿದ್ದುಪಡಿಯಿಂದ ಈ ಸಂಬಂಧ ರಾಜ್ಯ ಸರ್ಕಾರದಿಂದ ಅಗತ್ಯ ಆದೇಶಗಳನ್ನು ಹೊರಡಿಸಿರುವುದರಿಂದ ಈ ಸಂಬಂಧ ರಚಿಸಲಾಗುವ ಮಂಡಳಿಯಿಂದ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸುಮಾರು ನೂರು ಕೋಟಿ ರೂಪಾಯಿಗಳನ್ನು ಒದಗಿಸುವಂಥ ಕಾರ್ಯವನ್ನು ಮಾಡಿದೆ. ಆ ಭಾಗದ ಜನರ ನಿರೀಕ್ಷೆ ಎಷ್ಟಿದೆ ಎಂದು ಹೇಳಿದರೆ ಸುಮಾರು ಹತ್ತು ಸಾವಿರ ಕೋಟಿ ರೂಪಾಯಿಗಳನ್ನು

ಒದಗಿಸುತ್ತೀರೆಂದು ನಮ್ಮ ಸದಸ್ಯರಾಗಿರುವಂಥ ಶ್ರೀ ಅಮರನಾಥ್ ಪಾಟೀಲ್‌ರವರು ಪ್ರಶ್ನೆಯನ್ನು ಕೇಳಿದ್ದರು. ಅದು ಆ ಭಾಗದ ನಿರೀಕ್ಷೆಗೆ ಹಿಡಿದಿರುವಂಥ ಕೈಗನ್ನಡಿ. ಹಿಂದಿನ ಬಿ.ಜೆ.ಪಿ. ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾಗಿದ್ದಂಥ ಶ್ರೀ ಜಗದೀಶ್ ಶೆಟ್ಟರ್‌ರವರು ಈ ಸಂವಿಧಾನದ ಅನುಚ್ಛೇದದ 371 (ಜೆ) ಕಲಂ ತಿದ್ದುಪಡಿ ಆಗುವುದಕ್ಕಿಂತ ಮೊದಲೇ ತಮ್ಮ ಬಜೆಟ್‌ನಲ್ಲಿ ಇದಕ್ಕೆ ಎಷ್ಟು ಹಣ ಒದಗಿಸಿದ್ದರು ಎಂದರೆ, ಪ್ರದೇಶಾಭಿವೃದ್ಧಿ 106ನೇ ಪಾಯಿಂಟ್ ಸಂವಿಧನದ ಅನುಚ್ಛೇದದ 371 (ಜೆ)ರಡಿ ಸಂವಿಧಾನದ 118ರ ತಿದ್ದುಪಡಿಯಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶಗಳಾದ ಗುಲಬರ್ಗಾ, ಬೀದರ್, ಯಾದಗೀರ್, ರಾಯಚೂರ್, ಕೊಪ್ಪಳ, ಬಳ್ಳಾರಿ ಈ ಜಿಲ್ಲೆಗಳಿಗೆ ವಿಶೇಷ ಸ್ಥಾನಮಾನ ನೀಡಿರುವುದು ಸಂತೋಷವಾಗಿದೆ. ಈ ತಿದ್ದುಪಡಿಯಿಂದ ಸ್ಥಳೀಯ ಜನರಿಂದ ಉದ್ಯೋಗಾವಕಾಶಗಳು, ಶಿಕ್ಷಣ, ಉದ್ಯೋಗದಲ್ಲಿ ಮೀಸಲಾತಿ ಅಲ್ಲದೆ ಸದರಿ ಪ್ರದೇಶದ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯಾಗಲು ಸಹಾಯವಾಗುತ್ತದೆ. ಈ ಸಂವಿಧಾನ ತಿದ್ದುಪಡಿಯನ್ನು ಪಾಲಿಸಲು, ಇದರ ಚಟುವಟಿಕೆಗಳ ಮೇಲುಸ್ತುವಾರಿಗಾಗಿ ವಿಶೇಷ ಕೋಶ ಸ್ಥಾಪನೆ ಮಾಡಲಾಗುವುದು. ಈ ಪ್ರದೇಶಗಳ ಆರು ಜಿಲ್ಲೆಗಳ ಪಂಚಾಯತ್ ರಾಜ್ ಸಂಸ್ಥೆಗಳಿಗೆ 3114 ಕೋಟಿ ರೂಪಾಯಿಗಳನ್ನು, ಹಾಗೂ ನಗರ ಸಂಸ್ಥೆಗಳಿಗೆ 583 ಕೋಟಿ ರೂಪಾಯಿಗಳನ್ನು 2013–14ನಲ್ಲಿ ಒದಗಿಸಲಾಗುವುದು ಎಂದು ಹೇಳಿದ್ದಾರೆ. ತಾವು ಕೂಡ ಈ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ 65.30 ಕೋಟಿ ರೂಪಾಯಿ ಹಣವನ್ನು ಕೊಟ್ಟಿದ್ದೀರಿ. ನೀವು ಯಾವ ಪ್ರಮಾಣದಲ್ಲಿ ಆ ಪ್ರದೇಶಕ್ಕೆ ಹಣವನ್ನು ನೀಡಬೇಕಾಗಿತ್ತು ಅಷ್ಟು ಪ್ರಮಾಣದಲ್ಲಿ ಹಣವನ್ನು ಆ ಪ್ರದೇಶಕ್ಕೆ ತಾವು ನೀಡಿಲ್ಲ. ಸಂವಿಧಾನದ ಅನುಚ್ಛೇದದ 371 (ಜೆ)ರಡಿ ಸಂವಿಧಾನದ 118ರ ತಿದ್ದುಪಡಿಯಾದ ನಂತರ ನೂರು ಕೋಟಿ ಯಾವುದೇ ರೀತಿಯಲ್ಲಿ ಸಾಲದು. ಆ ಭಾಗದ ಜನತೆ ಬಹಳ ದೊಡ್ಡ ಪ್ರಮಾಣದಲ್ಲಿ ನಿರೀಕ್ಷೆಯನ್ನಿಟ್ಟಿರುವಂಥ ಸಂದರ್ಭದಲ್ಲಿ ತಾವು ಈ ಹಣವನ್ನು ಆ ಜನರ ಅಗತ್ಯಕ್ಕೆ ಮತ್ತು ಅವರು ಏನು ಅಪೇಕ್ಷೆ ಇಟ್ಟಿದ್ದಾರೆ ಅದಕ್ಕನುಗುಣವಾಗಿ ಕೊಡಬೇಕೆನ್ನುವ ಒಂದು ವಿನಂತಿಯನ್ನು ಮಾಡುತ್ತೇನೆ.

ಈ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಅದಕ್ಕೆ ಹೆಚ್ಚಿನ ಹಣವನ್ನು ಇಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಒಂದು ಬೇಡಿಕೆಯನ್ನು ಇಡುತ್ತೇನೆ. ಅದರ ಜೊತೆಗೆ ನೀವು ಈಗಾಗಲೇ ಅವರ ಸಂಬಳ, ಕಚೇರಿ ಕಟ್ಟಡಕ್ಕೆ ಎಂದು ಏನು ಹಣವನ್ನು ಇಟ್ಟಿದ್ದೀರಿ ಅದು ಯಾವುದಕ್ಕೂ ಸಾಲುವುದಿಲ್ಲ. ಏಕೆಂದರೆ ನೀವು ಈ 371 (ಜೆ) ಅನ್ನು ಇಂಪ್ಲಿಮೆಂಟ್ ಮಾಡಬೇಕಾದರೆ ಪ್ರತಿಯೊಂದು ಜಿಲ್ಲೆಯಲ್ಲಿ ಒಂದಿಷ್ಟು ಕಟ್ಟಡಗಳನ್ನು, ಒಂದಿಷ್ಟು ಕಛೇರಿಗಳನ್ನು ಒದಗಿಸಬೇಕಾಗುತ್ತದೆ. ಏಕೆಂದರೆ ಹೆಚ್.ಕೆ.ಡಿ.ಬಿ. ಯ ಸ್ಥಾಪನೆಯ ನಂತರ ಗುಲಬರ್ಗಾ ಕೇಂದ್ರೀಕೃತವಾಗಿ ಅಭಿವೃದ್ಧಿಯಾಯಿತು. ಬೇರೆ ಕಡೆ ಗುಲಬರ್ಗಾ ನಗರಕ್ಕೆ ಕಂಪೇರ್ ಮಾಡಿದರೆ ಅವರ ಪ್ರದೇಶ ಅಭಿವೃದ್ಧಿಯಾಗಲ್ಲ ಎನ್ನುವಂಥ ಕೊರಗು ಅವರಿಗಿರುವುದರಿಂದ ನೀವು ದಯಮಾಡಿ ಈ ಭಾಗಕ್ಕೆ ವಿಶೇಷವಾದಂಥ ಅನುದಾನವನ್ನು ಕೊಡಬೇಕು. ಅದನ್ನು ಈ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಸೇರಿಸಬೇಕು. ಎನ್ನುವಂಥ ವಿನಂತಿಯನ್ನು ತಮ್ಮ ಮುಖಾಂತರ ನಾನು ಮಾಡಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಬಹಳ ಸಲ ನಾವು ಅಹಿಂದ ಪರವಾಗಿ, ಹಿಂದುಳಿದ ವರ್ಗಗಳ ಪರವಾಗಿ ಕೆಲಸ ಮಾಡುತ್ತೇವೆಂದು ಹೇಳುತ್ತಾರೆ. ಈ ರಾಜ್ಯದಲ್ಲಿ ಹಿಂದುಳಿದ ವರ್ಗದವರ ಪರವಾಗಿ ನಾವು ಒಂದು ಸರ್ವೆ ಕಾರ್ಯವನ್ನು ನೆರವೇರಿಸಬೇಕಾಗುತ್ತದೆ ನ್ನುವಂಥದ್ದನ್ನು ತಾವು ಬಜೆಟ್‌ನಲ್ಲಿ ಹೇಳಿದ್ದೀರಿ. ಈಗ ಅದಕ್ಕೆ ಕೊಟ್ಟಿರುವಂಥ ಹಣ ಯಾವುದಕ್ಕೂ ಸಾಲುವುದಿಲ್ಲ. ಕೇಂದ್ರದಿಂದ ಹಣ ಬಂದಿದೆ ಕಳೆದ ಐದಾರು ವರ್ಷಗಳಿಂದ ಸರ್ವೆ ಕಾರ್ಯ ಆಗಿಲ್ಲ. ರಾಜ್ಯದಲ್ಲಿ ಆ ಸರ್ವೆ ಕಾರ್ಯ ಮಾಡಬೇಕಾದರೆ ನೂರಾರು ಕೋಟಿ ಹಣ ಬೇಕಾಗುತ್ತದೆ. ಆದ್ದರಿಂದ ಹಿಂದುಳಿದ ವರ್ಗಗಳ ಒಂದು ಸರ್ವೆ ಕಾರ್ಯ ಮಾಡಬೇಕಾದರೆ, ಜನಗಣತಿ ಮಾಡಬೇಕಾದರೆ ಈ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಹೆಚ್ಚು ಹಣವನ್ನು ಕೊಡಬೇಕು. ಆ ಮೂಲಕ ಆ ವರ್ಗದವರ ಪರವಾಗಿ ನಿಜವಾದ ಕಳಕಳಿಯನ್ನು ತಾವು ತೋರಬೇಕೆನ್ನುವಂಥ ವಿನಂತಿಯನ್ನು ನಾನು ಮಾಡಿಕೊಳ್ಳುತ್ತೇನೆ. ಅದರ ಜೊತೆಗೆ ಇದೀಗ ಮಾನ್ಯ

ಅಶ್ವತ್ಥ್‌ನಾರಾಯಣರವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ತಾವು ರೈಲ್ವೆ ಯೋಜನೆಗಳಿಗೆ ಈಗಾಗಲೇ ಹಣವನ್ನು ಕೊಟ್ಟಿದ್ದೀರಿ. ತಾವು ನೂರು ಕೋಟಿ ಕೊಡುವಂಥ ಒಂದು ಕಮಿಟ್ಮೆಂಟ್ ಅನ್ನು ಮಾಡಿದ್ದೀರಿ. ನಮ್ಮವರೇ ಆದ ಶ್ರೀಮಾನ್ ಮಲ್ಲಿಕಾರ್ಜುನ್ ಖರ್ಗೆಯವರು ಕೇಂದ್ರದಲ್ಲಿ ರೈಲ್ವೇ ಖಾತೆಯ ಸಚಿವರಾಗಿರುವಂಥ ಸಂದರ್ಭದಲ್ಲಿ, ಅವರ ಅಧಿಕಾರಾವಧಿ ಮುಂದಿನ ಬಜೆಟ್‌ವರೆಗೆ ಇರುತ್ತದೆ, ಅಷ್ಟರಲ್ಲಿ ಈ ರಾಜ್ಯಕ್ಕೆ ಏನಾದರು ಮಾಡಬೇಕೆನ್ನುವಂಥ ಒಂದು ಕಳಕಳಿಯನ್ನು ಅವರು ಇಟ್ಟುಕೊಂಡಾಗ ಅವರ ಅಪೇಕ್ಷೆಗೆ ತಕ್ಕಂತೆ ನೀವು ಹಣ ಕೊಡದೆ ಇದ್ದರೆ ಸರಿ ಹೋಗುವುದಿಲ್ಲ. ಬಹಳ ಹಿಂದೆಯಾಗಿರುವಂಥ ಸರ್ವೆ ಪ್ರಕಾರ ಸುಮಾರು ಇಪ್ಪತ್ತೆರಡು ಸಾವಿರ ಕೋಟಿ ರೂಪಾಯಿಗಳ ಅಗತ್ಯತೆ ಇದೆ. ನೀವು 320 ಈಗ 100 ಕೋಟಿ ಕೊಟ್ಟರೆ ಯಾವುದಕ್ಕೂ ಸಾಲುವುದಿಲ್ಲ. ಆ ಹಿನ್ನೆಲೆಯಲ್ಲಿ ಈ ರೈಲ್ವೆ ಪ್ರಾಜೆಕ್ಟ್ ಅನ್ನು ಪಿಪಿಪಿ ಮಾದರಿಯಲ್ಲಿ ಏನಾದರು ಮಾಡಲು ಆಗುತ್ತದೆಯೇ ಎನ್ನುವುದನ್ನು ಯೋಚನೆ ಮಾಡಿ, ಅದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು. ಮತ್ತು ಮಲ್ಲಿಕಾರ್ಜುನ್ ಖರ್ಗೆಯವರು ಕೇಂದ್ರದಲ್ಲಿ ರೈಲ್ವೇ ಖಾತೆಯ ಸಚಿವರಾಗಿ ಏನು ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದಾರೆ ಅದಕ್ಕೆ ತಕ್ಕಂತೆ ಹಣ ಕೊಡುವಂಥ ಕೆಲಸ ಮಾಡಿ. ನೂರು ಕೋಟಿ ಯಾವುದಕ್ಕೂ ಸಾಲುವುದಿಲ್ಲ, ಇದನ್ನು ಹೆಚ್ಚು ಮಾಡಿ ಎನ್ನುವಂಥ ವಿನಂತಿಯನ್ನು ಮಾಡಿ ನಾನು ಈ ಮೂಲಕ ನನ್ನ ಎರಡು ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಶ್ರೀ ಅಮರನಾಥ್ ಪಾಟೀಲ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ಸಂಬಂಧಿಸಿದ ಕೆಲವು ವಿಷಯಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುವುದಕ್ಕೆ ಪ್ರಯತ್ನಪಡುತ್ತೇನೆ. ಈಗಾಗಲೇ ನನ್ನ ಮಿತ್ರರಾದ ಶ್ರೀ ಅರುಣ್ ಶಹಾಪೂರ್‌ರವರು ಕೆಲವು ವಿಷಯಗಳನ್ನು ಹೇಳಿದ್ದಾರೆ. ನಾನು ಕೂಡ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅಧ್ಯಕ್ಷನಾಗಿ ಸಾಕಷ್ಟು ಆ ಭಾಗದ ಎಲ್ಲಾ ಚುನಾಯಿತ ಪ್ರತಿನಿಧಿಗಳ ಭಾವನೆಗೆ ಸ್ಪಂದಿಸಿ ರಾಜ್ಯ

ಸರ್ಕಾರಕ್ಕೆ ಸಾಕಷ್ಟು ಅನುದಾನವನ್ನು ನೀಡುವ ಬಗ್ಗೆ ಬೇಡಿಕೆಗಳನ್ನು ಸಲ್ಲಿಸುತ್ತ ಬಂದಿದ್ದೇನೆ.

(4–00 ಗಂಟೆ)

ಕರ್ನಾಟಕದ ಆರು ಜಿಲ್ಲೆಗಳು ಸುಮಾರು 42 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಂತಹ ಒಂದು ಪ್ರದೇಶದಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ಒಂದು ವಿಭಾಗಿಯ ಕಾರ್ಯಾಲಯವನ್ನು ಮಾಡಿ, ಅಲ್ಲಿ ಒಬ್ಬ **technical hand** ಅಂದರೆ ಒಬ್ಬೊಬ್ಬ ಇಂಜಿನಿಯರನ್ನು ನೇಮಕ ಮಾಡಿ, ಅಲ್ಲಿ ಆಗಬೇಕಾದಂತಹ ಕಾಮಗಾರಿಗಳ ಬಗ್ಗೆ ಮತ್ತು ಅದರ ಪರಿಶೀಲನೆಯ ಬಗ್ಗೆ ಅಲ್ಲಿ ಏನಾದರು ಸಮಸ್ಯೆಗಳಿದ್ದರೆ ಆಯಾಯ ಜಿಲ್ಲೆಗಳ ಕಾಮಗಾರಿಗಳನ್ನು ತುರ್ತಾಗಿ, ಚುರುಕಾಗಿ ಮುಟ್ಟಿಸುವುದಕ್ಕೆ ವಿಭಾಗೀಯ ಕಾರ್ಯಾಲಯಗಳನ್ನು ಕೊಡಬೇಕೆಂದು ವಿನಂತಿಯನ್ನು ಎರಡು ವರ್ಷಗಳಿಂದಲೂ ಮಾಡಿಕೊಂಡು ಬರುತ್ತಿದ್ದೇವೆ. ಈ ನಿಟ್ಟಿನಲ್ಲಿ ಪ್ರತಿಯೊಂದು **Regional Boards** ಗಳಿಗೆ ಅಂದರೆ ಮಲೆನಾಡು ಅಭಿವೃದ್ಧಿ ಮಂಡಳಿ ಇರಬಹುದು, ಕರಾವಳಿ ಅಭಿವೃದ್ಧಿ ಮಂಡಳಿ ಇರಬಹುದು, ಬಯಲು ಸೀಮೆ ಅಭಿವೃದ್ಧಿ ಮಂಡಳಿ ಇರಬಹುದು ಪ್ರತಿಯೊಂದಕ್ಕೂ ವಿಧಾನಸೌಧದಲ್ಲಿ ಒಂದೊಂದು ಕಾರ್ಯಾಲಯದ ಕಛೇರಿ ಇದೆ. ಆದರೆ ಹೈದರಾಬಾದ್ ಕರ್ನಾಟಕದ ಪ್ರದೇಶಕ್ಕೆ ಆ ಒಂದು **HKDB** ಗೆ ಕಾರ್ಯಾಲಯ ಇಲ್ಲ. ಮೊನ್ನೆಯ ದಿವಸ ನನ್ನ ಒಂದು ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳು ಲಿಖಿತ ಉತ್ತರವನ್ನು ಕೊಟ್ಟಿದ್ದಾರೆ. ಅವರು ತಮ್ಮ ಲಿಖಿತ ಉತ್ತರದಲ್ಲಿ ಅಲ್ಲಿ ಒಬ್ಬ ಜಂಟಿ ಕಾರ್ಯದರ್ಶಿಯ ಹುದ್ದೆ ಎಂದು ಹೇಳಿದ್ದಾರೆ. ಅದು ಬಹುಶಃ **temporary** ಏನೋ ಎಂದು ಅನ್ನಿಸುತ್ತದೆ. ಆದರೆ ಈ ನಿಟ್ಟಿನಲ್ಲಿ ವಿಧಾನಸೌಧದಲ್ಲಿಯೂ ಕೂಡ ಒಂದು ಕಾರ್ಯಾಲಯವನ್ನು ತೆಗೆದು ಈ ಒಂದು ಭಾಗಕ್ಕೆ ಹೆಚ್ಚಿನ ಒಂದು ಮಹತ್ವವನ್ನು ಕೊಟ್ಟು ಚುರುಕು ಮುಟ್ಟಿಸುವಂತಹ ಕೆಲಸ ಮಾಡಲಿ ಎಂದು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಇನ್ನು **HKDB**ಗೆ ಈಗಾಗಲೇ ಪ್ರಸ್ತಾಪವಾದಂತೆ

ಬಹಳ ಕಡಿಮೆ ಅನುದಾನ ಇದೆ. ಚುನಾಯಿತ ಪ್ರತಿನಿಧಿಗಳಿಗೆ ಅನೇಕ ಸಮಸ್ಯೆಗಳು ಬಂದಾಗ ಹೈದರಾಬಾದ್ ಕರ್ನಾಟಕಕ್ಕೆ ಡಾ:ನಂಜುಂಡಪ್ಪ ವರದಿಯಲ್ಲಿ **HKDB**ಯಿಂದ ಸರಿಯಾದ ಬೆಳವಣಿಗೆ ಕಾಣಲಿಲ್ಲ ಎನ್ನುವಂತಹ ಒಂದು ಕೂಗು ಹಲವಾರು ಚುನಾಯಿತ ಪ್ರತಿನಿಧಿಗಳಿಂದ ನಾವು ಮಾಧ್ಯಮಗಳ ಮುಖಾಂತರ ನೋಡುವುದಕ್ಕೆ ಸಿಕ್ಕಿತು. ಈ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಯನ್ನು ಮಾಡಿಕೊಳ್ಳುವುದೇನೆಂದರೆ, ಈಗ ಏನು ನೋಟಿಫಿಕೇಷನ್ ಬಂದಿದೆ ಅದರಲ್ಲಿ ಯಾವುದೇ ಹೆಚ್ಚಿನ ಅನುದಾನವನ್ನು ಅಪೇಕ್ಷೆ ಮಾಡುವ ಹಾಗಿಲ್ಲ. ಉತ್ತರದಲ್ಲಿ ಅವರು 15,000 ಕೋಟಿ ರೂಪಾಯಿಗಳ ಅನುದಾನವನ್ನು ಕೋರಿದ್ದೇವೆ ಎನ್ನುವುದನ್ನು ಹೇಳಿದ್ದಾರೆ. ಆ ಹಣವನ್ನು ಕೊಡುವುದು, ಬಿಡವುದು ಕೇಂದ್ರ ಸರ್ಕಾರದ ವಿವೇಚನೆಯ ಮೇಲೆ ಬಿಟ್ಟಂತಹ ವಿಚಾರವಾಗಿದೆ. ಆ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ತಾವು ಏನು 15,000 ಕೋಟಿ ರೂಪಾಯಿಗಳೆಂದು ಉತ್ತರದಲ್ಲಿ ಕೊಟ್ಟಿದ್ದೀರಿ ಅದನ್ನಾದರೂ ಕೂಡ **commit** ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸುತ್ತಿದ್ದೇನೆ. ಇನ್ನೊಂದು ವಿಷಯ ಏನೆಂದರೆ ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ವಿಶ್ವವಿದ್ಯಾನಿಲಯದ **inauguration**ಗೆ ಗುಲ್ಬರ್ಗಾಕ್ಕೆ ಬಂದಿದ್ದರು. ಅದಕ್ಕಿಂತಲೂ ಮೊದಲು ನಮ್ಮ ಭಾಗದ ಒಂದು ಅತ್ಯಂತ ಪ್ರಮುಖ ಆರ್ಥಿಕ ಬೆಳೆಯಾದ ತೊಗರಿ ಬೆಳೆಗಾರರು ಬಹಳ ಕಂಗಾಲಾಗಿದ್ದಾರೆ. ಈ ಸಾರಿ ಅವರಿಗೆ ತೊಗರಿ ಬೆಳೆಗೆ ಸರಿಯಾದ ಬೆಲೆ ಸಿಗುತ್ತಿಲ್ಲ.

**ಸಭಾಪತಿಯವರು:–** ಇಲ್ಲಿ **Supplementary Budget** ಮಂಡನೆ ಮಾಡಿರುವುದು ಅದರ ಬಗ್ಗೆ ಮಾತ್ರ ಮಾತನಾಡಬೇಕು. ಬಜೆಟ್ ಮೇಲಿನ ಚರ್ಚೆಯಲ್ಲ.

**ಶ್ರೀ ಅಮರನಾಥ್ ಪಾಟೀಲ್:–** ಮಾನ್ಯ ಸಭಾಪತಿಯವರೆ, **Supplementary Budget** ಗೆ ಸಂಬಂಧಪಟ್ಟಂತೆ ಹೇಳುತ್ತಿದ್ದೇನೆ.

**ಸಭಾಪತಿಯವರು:–** ನೀವು ಪ್ರಸ್ತಾಪ ಮಾಡುತ್ತಿರುವುದಕ್ಕೂ, **Supplementary Budget** ಗೂ ಏನು ಸಂಬಂಧ?

**ಶ್ರೀ ಎಸ್.ಆರ್.ಪಾಟೀಲ್ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು **Supplementary Budget** ಮೇಲೆ ಬೆಳಕು ಚೆಲ್ಲಿ, ಸಲಹೆಗಳನ್ನು ಕೊಡಬೇಕು. ಬಜೆಟ್ ಮೇಲಿನ ಚರ್ಚೆ ಇದಲ್ಲ. ತೊಗರಿ ಬೆಳೆ ಬಗ್ಗೆ ಬೇರೆ ಸಂದರ್ಭದಲ್ಲಿ ಚರ್ಚೆ ಮಾಡೋಣ.

**ಶ್ರೀ ಅಮರನಾಥ್ ಪಾಟೀಲ್:–** ಮಾನ್ಯ ಸಭಾತಿಯವರೆ, ರೈತರ ಹಿತರಕ್ಷಣೆ ಮಾಡುವುದಕ್ಕೆ ತೊಗರಿ ಅಭಿವೃದ್ಧಿ ಮಂಡಳಿ ಎನ್ನುವಂತಹ ಸಂಸ್ಥೆಯನ್ನು ಅಲ್ಲಿ ಸ್ಥಾಪನೆ ಮಾಡಿದ್ದಾರೆ. ಅದರ ಧ್ಯೇಯೋದ್ದೇಶಗಳೇನಿದೆ ಎನ್ನುವ ಪ್ರಶ್ನೆಗೂ ಕೂಡ ಒಂದು ದೊಡ್ಡ ಉತ್ತರ ಬಂದಿದೆ. ಅಲ್ಲಿಗೆ ಕೊಟ್ಟಂತಹ ಅನುದಾನದ ಸ್ಟೇಟ್‌ಮೆಂಟ್‌ನ್ನು ಕೂಡ ಕೊಟ್ಟಿದ್ದಾರೆ. ಆ ನಿಟ್ಟಿನಲ್ಲಿ ಈ ಒಂದು ತೊಗರಿ ಅಭಿವೃದ್ಧಿ ಮಂಡಳಿಗೆ ಯಾವುದೇ ರೀತಿಯ ಅನುದಾನವನ್ನು ಇದರಲ್ಲಿ ಇವತ್ತು ಕೊಟ್ಟಿಲ್ಲ. ಆದುದರಿಂದ ನನ್ನದೊಂದು ವಿನಂತಿ ಏನೆಂದರೆ, ಸರ್ಕಾರದ ಅವಧಿಯಲ್ಲಿ 22 ಕೋಟಿ ರೂಪಾಯಿಗಳು, 25 ಕೋಟಿ ರೂಪಾಯಿಗಳ ಅನುದಾನವನ್ನು ಕೊಟ್ಟಿರುವುದನ್ನು ಇದರಲ್ಲಿಯೇ ಕೊಡಲಾಗಿದೆ. ಆ ನಿಟ್ಟಿನಲ್ಲಿ ತೊಗರಿ ಬೆಳೆಯುವಂತಹ ರೈತರ ಒಂದು ಹಿತರಕ್ಷಣೆಗಾಗಿ, ತೊಗರಿ ಅಭಿವೃದ್ಧಿ ಮಂಡಳಿಗೆ ಹೆಚ್ಚಿನ ಅನುದಾನವನ್ನು ಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತಿದ್ದೇನೆ. ಇದರ ಜೊತೆಗೆ ಮೂಲಭೂತ ಅಭಿವೃದ್ಧಿಯ ಕುರಿತು ಈಗಾಗಲೇ ಪ್ರಸ್ತಾಪವಾದಂತೆ **specially railway infrastructure development** ಮಾಡುವುದಕ್ಕೆ **50:50 ratio** ದಲ್ಲಿ ಏನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ, ನಮ್ಮ ರಾಜ್ಯದ ಅದರಲ್ಲಿಯೂ ಗುಲ್ಬರ್ಗಾದ ಸಂಸದರಾದ ಕೇಂದ್ರದ ರೈಲ್ವೆ ಸಚಿವರಾದಂತಹ ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಜೊತೆಯಲ್ಲಿ ನಾನು ಹಲವಾರು ಸಾರಿ ಮಾತನಾಡಿದಾಗ ಅವರು ರಾಜ್ಯ ಸರ್ಕಾರದಿಂದ ಪ್ರಸ್ತಾವನೆ ಬರಲಿ ನಾನು ಹೈದರಾಬಾದ್ ಕರ್ನಾಟಕದ್ದು ಏನೇ ಇದ್ದರೂ ಕೂಡ ವಿಶೇಷವಾದಂತಹ

ಒತ್ತನ್ನು ಕೊಟ್ಟು ಮಾಡುತ್ತೇನೆಂದು ಹೇಳಿದರು. ಈ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ, ಗುಲ್ಬರ್ಗಾದ ಜೊತೆ ಬಳ್ಳಾರಿ ನಗರ ಕೂಡ ಬಹಳ ಅಭಿವೃದ್ಧಿ ಹೊಂದುತ್ತಿರುವಂತಹ ನಗರವಾಗಿದೆ. ಅಲ್ಲಿ ಇವತ್ತು ನಗರದ ಮಧ್ಯ ಭಾಗದಲ್ಲಿ ರೈಲ್ವೆ ಲೈನ್ ಹಾದು ಹೋಗಿದ್ದು, ಅಲ್ಲಿ ಸುಮಾರು ನಾಲ್ಕು ಲೆವಲ್ ಕ್ರಾಸಿಂಗ್‌ಗಳಿವೆ. ಅದಕ್ಕೂ ಕೂಡ ಇದರಲ್ಲಿ ಒಂದು ಹೆಚ್ಚಿನ **budgetary provision** ಮಾಡಿ. **Railway Over Bridge (R.O.B.)** ಇರಬಹುದು **Railway Under Bridge (R.U.B.)** ಇರಬಹುದು ಅದನ್ನು ಮಾಡುವುದಕ್ಕೆ ಪ್ರಸ್ತಾವನೆಯನ್ನು ಕಳುಹಿಸಬೇಕೆಂದು ಕೊಪ್ಪಳಕ್ಕೆ ಈಗಾಗಲೇ ಎರಡಕ್ಕೆ ಸೇತುವೆಯನ್ನು ಮಾಡುವುದಕ್ಕೆ ಮಂಜೂರಾತಿಯಾಗಿದೆ. ಅದನ್ನೂ ಕೂಡ ತಾವು ಗಣನೆಗೆ ತೆಗೆದುಕೊಂಡು ಅದಕ್ಕೂ ಕೂಡ ಹೆಚ್ಚಿನ ಒತ್ತನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈಗಾಗಲೇ ಹಲವಾರು ಬಾರಿ ಈ ಶಾಲಾ ಕಾಲೇಜುಗಳ ಮೂಲಭೂತ ಸೌಕರ್ಯಗಳ ಬಗ್ಗೆ ಕೂಡ ಪ್ರಸ್ತಾವನೆಯಾಗಿದೆ. ಇದರ ಬಗ್ಗೆ ನನ್ನ ಹತ್ತಿರ ಸಾಕಷ್ಟು ವರದಿಗಳಿವೆ. ಈ ನಿಟ್ಟಿನಲ್ಲಿ ಮಹಿಳಾ ಶೌಚಾಲಯಗಳಿರಬಹುದು, ತರಗತಿಯ ಕೊಠಡಿಗಳಿರಬಹುದು ಮತ್ತು ಡೆಸ್ಕ್‌ಗಳಿರಬಹುದು, ಈ ರೀತಿಯ ಸಾಕಷ್ಟು ಕೊರತೆಗಳನ್ನು ಆ ಭಾಗದಲ್ಲಿ ನಾವು ನೋಡಿದ್ದೇವೆ. ಅದಕ್ಕೂ ಕೂಡ ಸರ್ಕಾರ ಹೆಚ್ಚು ಒತ್ತು ಕೊಡುವಂತಹ ಕೆಲಸವಾಗಬೇಕೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ತಾವು ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕೆಂದು ಚೀಟಿಯನ್ನು ಕಳುಹಿಸಿಕೊಟ್ಟಿದ್ದೀರಿ. ಆದರೆ ನಾನೇ ನಿಮಗೆ ಐದು ನಿಮಿಷದಲ್ಲಿ ಮಾತನಾಡಿ ಮುಗಿಸಿ ಎಂದು ಹೇಳುತ್ತಿದ್ದೇನೆ. ಇದಕ್ಕಿಂತಲೂ ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದು ಬೇಡ.

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಪೂರಕ ಧನವಿನಿಯೋಗ

ವಿಧೇಯಕವನ್ನು ಸದನದಲ್ಲಿ ಮಂಡಿಸಿದ್ದಾರೆ. ಅವರು ಮಾತನಾಡುವಂತಹ ಸಮಯದಲ್ಲಿ ಕೆಲವು ಹೆಚ್ಚುವರಿಯಾಗಿ ಅನುದಾನಕ್ಕೆ ಮಂಜೂರಾತಿಯನ್ನು ಪಡೆಯಬೇಕು ಎನ್ನುವಂತಹ ವಿಚಾರದಲ್ಲಿ ಏನು ಬೆಳೆ ಸಾಲ ಮನ್ನಾ, ರೈತರಿಗೆ ಬಡ್ಡಿ ರಿಯಾಯಿತಿಯನ್ನು ಕೊಡತಕ್ಕಂಥದ್ದಕ್ಕೆ ಒಂದು ಹಣವನ್ನು ನಿಗದಿ ಮಾಡಬೇಕು ಎನ್ನುವಂತಹ ಪ್ರಸ್ತಾಪವನ್ನು ಕೂಡ ಇಲ್ಲಿ ಹೇಳಿದರು. ಆದರೆ ಏನಾಗಿದೆ ಎಂದರೆ, ಬೆಳಿಗ್ಗೆ ನಾನು ಸಭಾ ನಾಯಕರ ಜೊತೆಯಲ್ಲಿಯೂ ಕೂಡ ಮಾತನಾಡಿದೆ. ಈ ಸಹಕಾರಿ ಸಂಸ್ಥೆಗಳಿಗೆ ನೀವು ನಿಗದಿತ ಅವಧಿಯಲ್ಲಿ ಹಣವನ್ನು ಕೊಡದೇ ಇದ್ದರೆ, ಅದು ಸಾಲ ಮನ್ನಾದ್ದು, ಬಡ್ಡಿ ರಿಯಾಯಿತಿ ಕೊಟ್ಟಿರುವಂತಹ ಹಣವನ್ನು ನೀವು ಕೊಡದೇ ಹೋದರೆ, ಕಷ್ಟವನ್ನು ಅನುಭವಿಸುತ್ತಿರುವಂಥದ್ದು, ಜಿಲ್ಲಾ ಬ್ಯಾಂಕ್ ಆಗಲಿ, ರಾಜ್ಯ ಅಪೆಕ್ಸ್ ಬ್ಯಾಂಕ್‌ಗಳಲ್ಲ. ಕಷ್ಟವನ್ನು ಅನುಭವಿಸುತ್ತಿರುವಂಥದ್ದು ಏನು ಸಹಕಾರ ಸಂಘಗಳ ಮಧ್ಯೆ ಏನು ಅಂತರ ಬರುತ್ತದೆ ಅದರ ಎಲ್ಲಾ ಹೊರೆಯು ಕೂಡ ಸಹಕಾರ ಸಂಸ್ಥೆಗಳ ಮೇಲೆ ಬೀಳುತ್ತಿದೆ. ಇದರ ಬಗ್ಗೆ ನನ್ನ ಮಿತ್ರರಾದಂತಹ ಶ್ರೀ ಅಶ್ವಥನಾರಾಯಣರವರು ಕೂಡ ಮಾತನಾಡಿದರು. ಆದುದರಿಂದ ದಯಮಾಡಿ ಆ ಹೊರೆಯನ್ನು ಭರಿಸತಕ್ಕಂತಹ ಜವಾಬ್ದಾರಿ ಸ್ವಲ್ಪ ಮಟ್ಟಿಗೆ ಜಿಲ್ಲಾ ಮತ್ತು ರಾಜ್ಯದ ಬ್ಯಾಂಕ್‌ಗಳಿಗೆ ಹಾಗೂ ಸರ್ಕಾರವೂ ಕೂಡ ಕಾಲ ಕಾಲಕ್ಕೆ ಹಣವನ್ನು ಕೊಡತಕ್ಕಂತಹ ಕೆಲಸವನ್ನು ಮಾಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ. ಮಾನ್ಯ ಯಂ.ಸಿ.ನಾಣಯ್ಯನವರು ಸಾಧ್ಯವಾದರೆ ಮುಂದಿನ ಬಜೆಟ್‌ನಲ್ಲಿ ರೈತರ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಿ ರೈತರಿಗೆ ಮುಕ್ತಿಯನ್ನು ಕೊಡಿ ಎಂದು ಹೇಳಿದರು. ಅದು ಮುಂದೆ ಮಾನ್ಯ ಮುಖ್ಯಮಂತ್ರಿಗಳ ವಿವೇಚನೆಗೆ ಬಿಟ್ಟ ವಿಚಾರವಾಗಿದೆ. ಮತ್ತು ಜಿಲ್ಲಾ ರಸ್ತೆಗಳಿಗೆ, ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ರಸ್ತೆಗಳಿಗೂ ಕೂಡ ಇದರಲ್ಲಿ ಹಣವನ್ನು ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡಬೇಕಾಗಿದೆ ಎನ್ನುವಂತಹ ವಿಚಾರವನ್ನು ಪ್ರಸ್ತಾಪ ಮಾಡಿದರು. ನಮ್ಮ ಸದನದಲ್ಲಿ ಸುಮಾರು 25 ಜನ ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾಗಿ ಬಂದಿದ್ದೇವೆ. ಸ್ಥಳೀಯ ಸಂಸ್ಥೆಗಳಿಗೆ ಕೊಡುತ್ತಿರುವಂತಹ ಹಣಕಾಸಿನ ಲಭ್ಯತೆ ಬಹಳ ಕಡಿಮೆ

ಇರುವುದರಿಂದ ಅವರು ಅಭಿವೃದ್ಧಿ ಮಾಡತಕ್ಕಂಥದ್ದು ಬಹಳ ಕಷ್ಟವಾಗಿದೆ. ಸ್ವಲ್ಪಮಟ್ಟಿಗೆ ಇಲ್ಲಿ ಏನು ಕೊಡುತ್ತೇವೆಂದು ಹೇಳಿದ್ದಾರೆ. ಮುಂದೆ ಇದಕ್ಕೆ ಹೆಚ್ಚು ಒತ್ತನ್ನು ಕೊಡತಕ್ಕಂತಹ ಕೆಲಸವನ್ನು ಮಾಡಬೇಕು ಎನ್ನುವಂತಹ ವಿಚಾರವನ್ನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತಾ, ಶಾಸಕರ ಅಭಿವೃದ್ಧಿ ನಿಧಿಯನ್ನು 2 ಕೋಟಿ ರೂಪಾಯಿ ಮಾಡಿದ್ದೇವೆಂದು ಹೇಳಿದ್ದಾರೆ. ಬಹುಶಃ ನಮ್ಮ ಈ ಸದನದ ಸದಸ್ಯರಿಗೆ ಬರತಕ್ಕಂಥದ್ದು ನೀವು ಕೊಡುವಂತಹ ಹಣ ಮಾತ್ರ. ಬೇರೆ ಯೋಜನೆಗಳೇನು ಇದೆಯೋ ಇದ್ಯಾವುದೂ ಕೂಡ ನಮ್ಮ ಶಾಸಕರ ವ್ಯಾಪ್ತಿಗೆ ಬಂದು ಅವರು ಕೆಲಸವನ್ನು ಮಾಡತಕ್ಕಂಥದ್ದು. ಆದ್ದರಿಂದ ಆ ಒಂದು ವಿಚಾರವನ್ನು ಕೂಡ ಇನ್ನು ಬೇರೆ ಬೇರೆ ಕಾರ್ಯಕ್ರಮಗಳಿವೆ ಅದನ್ನು ಕೂಡ ಈ ಸದನದ ಸದಸ್ಯರುಗಳಿಗೂ ಕೂಡ ಕೊಡಬೇಕು ಎನ್ನುವುದನ್ನು ಈ ಸದನದ ಎಲ್ಲಾ ಸದಸ್ಯರ ಪರವಾಗಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅದರ ಜೊತೆಗೆ ರೈಲ್ವೆ ಯೋಜನೆಗಳಿಗೆ ನಮ್ಮ ರಾಜ್ಯದ ಪಾಲಿನ ಹಣವನ್ನು ಕೊಡಬೇಕೆಂದು ಹೇಳಲಾಗಿದೆ. ನಿಮಗೆ ಗೊತ್ತಿರುವಂತೆ 1976–77ರಲ್ಲಿ ಹಾಸನ–ಬೆಂಗಳೂರು ರೈಲ್ವೆ ಯೋಜನೆಯು ಪ್ರಾರಂಭವಾಯಿತು. ಆದರೆ ಇನ್ನೂ ಕೂಡ ಅನೇಕ ಸಮಸ್ಯೆಗಳಿಂದ ಅದು ಇನ್ನು ಪೂರ್ತಿಯಾಗಿಲ್ಲ. ಅದು ಜಮೀನನ್ನು ವಶಪಡಿಸಿಕೊಳ್ಳುವಂಥದ್ದು ಇರಬಹುದು, ಅದಕ್ಕೆ ಕೊಡುವಂತಹ ಸಹಾಯ ಧನ ಇರಬಹುದು, ಈ ಮೂಲಕ ರಾಜ್ಯ ಸರ್ಕಾರದ ಪಾಲನ್ನು ಯಾವ ಸರ್ಕಾರ ಕೊಟ್ಟಿತ್ತು, ಕೊಟ್ಟಿಲ್ಲ ಎನ್ನುವುದನ್ನು ನೀವು ಕೇಳುತ್ತಿದ್ದೀರಿ ಎನ್ನುವುದು ಮುಖ್ಯವಲ್ಲ. ಇದು ಪೂರ್ಣಗೊಳ್ಳುವುದಕ್ಕೆ ಅನೇಕ ಸಂದರ್ಭಗಳಲ್ಲಿ ರೈಲ್ವೆ ಇಲಾಖೆಯ ಅಧಿಕಾರಿಗಳು ಶ್ರೀ ಹೆಚ್.ಡಿ.ದೇವೇಗೌಡರು ಪ್ರಧಾನ ಮಂತ್ರಿಗಳಾಗಿದ್ದಾಗ ಮಂಜೂರಾದಂತಹ ಯೋಜನೆಯಾಗಿದೆ. ದಯವಿಟ್ಟು ಇದನ್ನು ಪೂರ್ಣಗೊಳಿಸುವುದಕ್ಕೆ ಏನು ಸರ್ಕಾರದ ವಿವೇಚನಾ **quota** ವನ್ನು ಕೊಡಬೇಕು ಅದನ್ನು ಕೊಡಬೇಕು ಎನ್ನುವಂತಹ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಇನ್ನು ಹಾಸನ ವೈದ್ಯಕೀಯ ಕಾಲೇಜು ಪ್ರಾರಂಭವಾಗಿದೆ. ಆದರೆ ಅದಕ್ಕೆ ಮೂಲಭೂತ ಸೌಕರ್ಯಗಳಿಲ್ಲದಂತಾಗಿದೆ. ಪ್ರತಿ ವರ್ಷ ರಾಷ್ಟ್ರೀಯ ವೈದ್ಯಕೀಯ ಮಂಡಳಿಯವರು ಬಂದು ಕೆಲವು

ಸಮಸ್ಯೆಗಳನ್ನಿಟ್ಟು, ಒಂದೊಂದು ಸಲ ಸೀಟ್‌ಗಳನ್ನು ಆಯ್ಕೆ ಮಾಡುವುದಕ್ಕೆ ಅವಕಾಶವಿಲ್ಲ ಎನ್ನುವಂತಹ ಸಂದರ್ಭಗಳಿವೆ. 30 ಕೋಟಿ ರೂಪಾಯಿ ಪ್ರಸ್ತಾವನೆಯನ್ನು ಸರ್ಕಾರದ ಮುಂದೆ ಏನು ಕಳುಹಿಸಿಕೊಟ್ಟಿದ್ದಾರೆ, ದಯಮಾಡಿ ಅದನ್ನು ಮಾಡಿಕೊಡಬೇಕೆಂದು ಮನವಿ ಮಾಡುತ್ತೇನೆ.

ಶಿವಮೊಗ್ಗ ಮತ್ತು ಹಾಸನದ ಪಶುಸಂಗೋಪನಾ ಕಾಲೇಜುಗಳ ಸಮಸ್ಯೆಗಳು ಇನ್ನೂ ಕೂಡ ಬಗೆಹರಿದಿಲ್ಲ. ಆದುದರಿಂದ ಇದಕ್ಕೆ ಪೂರಕ ಬಜೆಟ್‌ನಲ್ಲಿ ಅನುಕೂಲ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ. ಇನ್ನೂ ಬಹಳಷ್ಟು ವಿಚಾರಗಳ ಬಗ್ಗೆ ನಾನು ಪ್ರಸ್ತಾಪ ಮಾಡುವುದಿತ್ತು, ಆದರೆ ಸಮಯದ ಅಭಾವದಿಂದಾಗಿ ಅವೆಲ್ಲವನ್ನೂ ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಕ್ಕಾಗುತ್ತಿಲ್ಲ. ಆದ್ದರಿಂದ ಕೆಲವು ವಿಚಾರಗಳ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ನಾವು ಮನವಿಯನ್ನು ಕಳುಹಿಸಿಕೊಡುತ್ತೇವೆ. ಅವುಗಳನ್ನು ಪರಿಶೀಲನೆ ಮಾಡಿ ಸೂಕ್ತ ರೀತಿಯಲ್ಲಿ ಪರಿಹಾರ ಮಾಡಬೇಕೆಂದು ವಿನಂತಿಸುತ್ತೇನೆ. ಪಶುವೈದ್ಯ ಕಾಲೇಜುಗಳಲ್ಲಿನ ಸಮಸ್ಯೆ ಬಹಳವಾಗಿದೆ. ಆ ಕಾಲೇಜ್‌ಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪದವಿಗಳನ್ನು ನೀಡುವ ವಿಚಾರದಲ್ಲಿ ಕೂಡ ಸಮಸ್ಯೆಗಳು ಉದ್ಭವವಾಗುತ್ತಿವೆ. ಇನ್ನೂ ಅನೇಕ ವಿಚಾರಗಳ ಬಗ್ಗೆ ನಾನು ಪ್ರಶ್ನೋತ್ತರ ಮತ್ತು ಇನ್ನೂ ಬೇರೆ ಬೇರೆ ನಿಯಮಗಳ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋರಿ ತಮಗೆ ಮನವಿಗಳನ್ನು ಕಳುಹಿಸಿಕೊಟ್ಟಿದ್ದೆ. ಆದರೆ ಅದಕ್ಕೆ ಅವಕಾಶ ಸಿಕ್ಕಿರುವುದಿಲ್ಲ. ಆದಕಾರಣ ಈ ಸಂದರ್ಭದಲ್ಲಿ ಪೂರಕ ಅಂದಾಜಿನ ಬಗ್ಗೆ ಕೆಲವು ವಿಚಾರಗಳನ್ನು ಪ್ರಸ್ತಾಪಿಸಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ಅವಕಾಶ ಕಲ್ಪಿಸಿಕೊಟ್ಟ ತಮಗೆ ಮೊದಲು ವಂದಿಸುತ್ತೇನೆ. ಪೂರಕ ಅಂದಾಜಿನ ಬಗ್ಗೆ ಹೆಚ್ಚಿನ ಚರ್ಚೆಗೆ ಹೋಗದೆ, ಮೂರು ಸಣ್ಣ ವಿನಂತಿಗಳನ್ನಷ್ಟೇ ನಾನು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತಿದ್ದೇನೆ. ಈ ಸಾಲಿನ ಆಯವ್ಯಯದ

ಮೇಲಿನ ಚರ್ಚೆಯ ಕೊನೆಯ ಸಂದರ್ಭದಲ್ಲಿ ಈ ವಿಚಾರಗಳ ಬಗ್ಗೆ ನಾನು ಉಲ್ಲೇಖಿಸಿದಂತಹ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಅದನ್ನು ಪರಿಶೀಲಿಸುವುದಾಗಿ ತಿಳಿಸಿದ್ದರು. 1987 ರಿಂದ 1995ರವರೆಗೆ ಪ್ರಾರಂಭವಾದ ಅರ್ಹ ಶಾಲೆಗಳಿಗೆ ಅನುದಾನವನ್ನು ನೀಡುವುದಾಗಿ ಹಿಂದಿನ ಸರ್ಕಾರ ನಿರ್ಣಯ ಮಾಡಿತ್ತು. ಆ ಅವಧಿಯಲ್ಲಿ ಪ್ರಾರಂಭವಾದಂತಹ ಎಲ್ಲ ರೀತಿಯ ಅರ್ಹತೆಗಳನ್ನು ಪಡೆದಿರುವಂತಹ 274 ಶಾಲೆಗಳ ಕಡತ ಚುನಾವಣೆ ಘೋಷಣೆಯಾದಾಗಿನಿಂದಲೂ ಪೆಂಡಿಂಗ್ ಉಳಿದುಕೊಂಡಿದೆ. ಕಳೆದ ಐದಾರು ತಿಂಗಳುಗಳಿಂದ ಆ ಶಾಲೆಗಳವರು ಇದಕ್ಕಾಗಿ ಹೋರಾಟ ಮಾಡುತ್ತಿದ್ದಾರೆ. ಆದ್ದರಿಂದ ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ನನ್ನದೊಂದು ಸಣ್ಣ ವಿನಂತಿ ಏನೆಂದರೆ, ದಯವಿಟ್ಟು ಈ ಹಿಂದೆ ಬಜೆಟ್ ಘೋಷಣೆ ಸಂದರ್ಭದಲ್ಲಿ ಏನು ನಿರ್ಣಯಗಳಾಗಿವೆ ಅದರ ಆಧಾರದ ಮೇಲೆ ಯಾವ ಶಾಲೆಗಳಿಗೆ ಆ ಎಲ್ಲ ಅರ್ಹತೆಗಳಿವೆ ಅವುಗಳನ್ನು ಈ ಸಾಲಿನಲ್ಲಿ ದಯಮಾಡಿ ಅನುದಾನದ ವ್ಯಾಪ್ತಿಗೆ ಒಳಪಡಿಸಬೇಕೆಂದು ನಾನು ವಿನಂತಿಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಕರಾವಳಿ ಕರ್ನಾಟಕದ ಮೂರು ಜಿಲ್ಲೆಗಳ ಅಭಿವೃದ್ಧಿಗಾಗಿ ಕರಾವಳಿ ಅಭಿವೃದ್ಧಿ ಪ್ರಾಧಿಕಾರ ಎನ್ನುವಂತಹ ಒಂದು ಪ್ರಾಧಿಕಾರ ರಚನೆಯಾಗಿ, ಅದರಿಂದ ಒಂದಷ್ಟು ಒಳ್ಳೆಯ ಕೆಲಸಗಳಾಗಿದ್ದವು. ಆದರೆ ಇವೊತ್ತು ಆ ಕೆಲಸಗಳನ್ನು ಮುಂದುವರೆಸುವುದಕ್ಕೆ ಅವಕಾಶವಿಲ್ಲದಂತಾಗಿದೆ. ಏಕೆಂದರೆ ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಪೂರಕ ಅಂದಾಜಿನಲ್ಲಿ ಯಾವುದೇ ಅನುದಾನವನ್ನು ಘೋಷಣೆ ಮಾಡಿರುವುದಿಲ್ಲ. ಹಾಗಾಗಿ ಆ ಪ್ರಾಧಿಕಾರ ತನ್ನ ಕೆಲಸವನ್ನು ಮುಂದುವರೆಸಬೇಕಾದರೆ ದಯವಿಟ್ಟು ಅದಕ್ಕೆ ಸ್ವಲ್ಪಮಟ್ಟಿನ ಅನುದಾನವನ್ನು ಘೋಷಣೆ ಮಾಡಬೇಕೆಂದು ತಮ್ಮ ಮೂಲಕ ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ವಿನಂತಿಸುತ್ತೇನೆ.

ಕೊನೆಯ ಅಂಶವೆಂದರೆ, ಕರಾವಳಿ ಕರ್ನಾಟಕದ ಮೂಡಬಿದ್ರೆಯಲ್ಲಿ ಬಹುಶಃ ಇಡೀ ರಾಜ್ಯ ಹೆಮ್ಮೆ ಪಡುವಂತಹ ಒಂದು ದೊಡ್ಡ ಕಾರ್ಯಕ್ರಮ **'ವಿಶ್ವ ನುಡಿಸಿರಿ ವಿಲಾಸಗಳು'** ಎನ್ನುವಂತಹ ಹೆಸರಿನಲ್ಲಿ ನಡೆಯುತ್ತಿದೆ. ಕನ್ನಡ

ನಾಡು–ನುಡಿ, ನೆಲ–ಜಲ ಇವುಗಳ ಬಗ್ಗೆ ನಾವೆಲ್ಲಾ ಹೆಮ್ಮೆ ಪಡುವಂತಹ ಬಹಳ ದೊಡ್ಡ ಕೆಲಸವನ್ನು ಕಳೆದ 20 ವರ್ಷಗಳಿಂದ ಒಬ್ಬ ವ್ಯಕ್ತಿ ಮಾಡುತ್ತಿದ್ದಾರೆ. ಇದಕ್ಕೆ ಸರ್ಕಾರ ಖಂಡಿತವಾಗಿಯೂ ಸ್ವಲ್ಪಮಟ್ಟಿನ ಸಹಾಯವನ್ನು ನೀಡುವ ಮೂಲಕ ಆ ಕಾರ್ಯಕ್ರಮದ ಯಶಸ್ಸಿಗೆ ನೆರವಾಗಬೇಕಾಗಿದೆ. ಡಾ॥ಮೋಹನ್ ಆಳ್ವಾ ಅವರು ಕನ್ನಡ ನಾಡು–ನುಡಿಗೆ, ಸಾಂಸ್ಕೃತಿಕ ಜಗತ್ತಿಗೆ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಎಂತಹ ಸೇವೆಯನ್ನು ಸಲ್ಲಿಸಿದ್ದಾರೆ ಎಂಬುದು ನಮಗೆಲ್ಲರಿಗೂ ಗೊತ್ತಿರುವಂತಹ ವಿಷಯವಾಗಿದೆ. ಅವರು ಇಷ್ಟು ದೊಡ್ಡ ಕೆಲಸವನ್ನೇನು ಮಾಡುತ್ತಿದ್ದಾರೆ ಅದನ್ನು ಅವರು ತಮ್ಮ ಸ್ವಂತಕ್ಕಾಗಿ ಮಾಡುತ್ತಿಲ್ಲ, ಕಳೆದ 20 ವರ್ಷಗಳಿಂದ ಅವರು ಸರ್ಕಾರದಿಂದ ಯಾವುದೇ ಸಹಾಯದ ಅಪೇಕ್ಷೆ ಇಲ್ಲದೆ ಈ ಮಟ್ಟದ ಒಂದು ಕಾರ್ಯಕ್ರಮವನ್ನು ಮಾಡಿಕೊಂಡು ಬಂದಿದ್ದಾರೆ. ಅದು ಇವೊತ್ತು ಒಂದು ಹಂತದವರೆಗೆ ಮೇಲೇರಿದ್ದು, **'ವಿಶ್ವ ನುಡಿಸಿರಿ ವಿಲಾಸಗಳು'** ಎನ್ನುವಂತಹ ದೊಡ್ಡ, ಅಂತರರಾಷ್ಟ್ರೀಯವಾಗಿರುವಂತಹ ಎಲ್ಲ ಕನ್ನಡಿಗರನ್ನು ಮತ್ತು ಕನ್ನಡದ ಸಂಗತಿಗಳನ್ನು ಜೋಡಿಸಿ ಅವರೆಲ್ಲರನ್ನೂ ಸಹ ಸೇರಿಸಿಕೊಂಡು ಈ ಕಾರ್ಯಕ್ರಮವನ್ನು ಮಾಡುತ್ತಿದ್ದಾರೆ. ಆದ್ದರಿಂದ ಸನ್ಮಾನ್ಯ ಮುಖ್ಯಮಂತ್ರಿಯವರು ದೊಡ್ಡ ಮನಸ್ಸು ಮಾಡಿ ಈ ಕಾರ್ಯಕ್ರಮಕ್ಕೆ ಸಹಾಯಧನವನ್ನು ನೀಡಬೇಕೆಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ. ಪ್ರಮುಖವಾದ ಈ ಮೂರು ಅಂಶಗಳ ಬಗ್ಗೆ ಪ್ರಸ್ತಾಪ ಮಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀಮತಿ ಭಾರತಿಶೆಟ್ಟಿ (ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, 7744 ಕೋಟಿ ರೂಪಾಯಿಗಳ ಒಂದು ಪೂರಕ ಅಂದಾಜುಗಳ ಮಂಜೂರಾತಿಗಾಗಿ ಸನ್ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿದ್ದಾರೆ. ಇದರಲ್ಲಿ ರಸ್ತೆಗಳಿಗೆ, ಶಾಲಾ ಮಕ್ಕಳಿಗೆ, ಶಾಸಕರ ಅಭಿವೃದ್ಧಿ ನಿಧಿಗೆ, ಬೆಳೆ ಸಾಲಕ್ಕೆ, ಮೆಡಿಕಲ್ ಕಾಲೇಜ್‌ಗಳಿಗೆ, ಹೈದ್ರಾಬಾದ್ ಕರ್ನಾಟಕಕ್ಕೆ, ರೈಲ್ವೆಗೆ, ಸರ್ಕಾರಿ ಕಾಲೇಜ್‌ಗಳು, ಕೆ.ಎಫ್.ಸಿ., ಈ ರೀತಿ ಅನೇಕ ವಿಷಯಗಳಿಗಾಗಿ ಹಣವನ್ನು ಒದಗಿಸಿದೆ. ನಾನು ತಮ್ಮಲ್ಲಿ ಕೈಮುಗಿದು

ವಿನಂತಿಸುವುದೇನೆಂದರೆ, ಈ ಸಾಲಿನ ಆಯವ್ಯಯದ ಮೇಲಿನ ಚರ್ಚೆಯ ಸಂದರ್ಭದಲ್ಲಿ ನಾನು ತಮ್ಮಲ್ಲಿ ಒಂದು ವಿನಂತಿಯನ್ನು ಮಾಡಿದ್ದೆ. ಆ ಸಂದರ್ಭದಲ್ಲಿ ಅಲ್ಪಸಂಖ್ಯಾತರ ಕುಟುಂಬದ ಹೆಣ್ಣು ಮಕ್ಕಳಿಗೆ ಮದುವೆಯ packageನ್ನು ಸರ್ಕಾರ ಘೋಷಣೆ ಮಾಡಿತ್ತು, ದಯಮಾಡಿ ಈ ಕಾರ್ಯಕ್ರಮವನ್ನು ಎಲ್ಲಾ ವರ್ಗದ ಹೆಣ್ಣುಮಕ್ಕಳಿಗೆ ಅನ್ವಯವಾಗುವಂತೆ ವಿಸ್ತರಣೆ ಮಾಡಬೇಕೆಂದು ನಾನು ಆ ಸಂದರ್ಭದಲ್ಲಿಯೇ ತಮ್ಮಲ್ಲಿ ವಿನಂತಿ ಮಾಡಿದ್ದೆ, ಸನ್ಮಾನ್ಯ ಸಿದ್ದರಾಮಯ್ಯನವರು ಇಡೀ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿರುವುದರಿಂದ ರಾಜ್ಯದ ಎಲ್ಲ ಹೆಣ್ಣು ಮಕ್ಕಳು ಕೂಡ ಈ ಸೌಲಭ್ಯಕ್ಕಾಗಿ ಕಾಯುತ್ತಿದ್ದಾರೆ. ಆ ವಿಚಾರವಾಗಿ ಈ ಸದನದಲ್ಲಿ ಧರಣಿ ನಡಯಿತು, ರಾಜ್ಯದ ಎಲ್ಲ ಕಡೆಗಳಲ್ಲಿಯೂ ಧರಣಿ ಮತ್ತು ಚರ್ಚೆಗಳು ನಡೆದವು. ಬೇರೆ ಎಲ್ಲ ವಿಚಾರಗಳಿಗೂ ಆಯವ್ಯಯದಲ್ಲಿ ಹಣವನ್ನು ನೀಡಲಾಗಿದೆ, ಆದರೆ ಹೆಣ್ಣು ಮಕ್ಕಳು ಏನು ಅನ್ಯಾಯ ಮಾಡಿದ್ದಾರೆ ಎನ್ನುವುದು ನನ್ನ ಪ್ರಶ್ನೆ. ದಯಮಾಡಿ ಸನ್ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರಕ್ಕೆ ಈ ಸಂದರ್ಭದಲ್ಲಾದರೂ ಸ್ಪಂದಿಸಬೇಕೆಂಬುದು ನನ್ನ ವಿನಂತಿಯಾಗಿದೆ.

ಮಾನ್ಯ ಸಭಾಪತಿಯವರೇ, ನಾನು ಬೇರೇ ಏನು ಮಾಡುವುದಕ್ಕೆ ಸಾಧ್ಯವಿದೆ ಹೇಳಿ, ಧರಣಿ ಮಾಡೋಣ, ಗಲಾಟೆ ಮಾಡೋಣ ಎಂದರೆ ಈ ಸದನದಲ್ಲಿ ಮಹಿಳಾ ಸದಸ್ಯರ ಸಂಖ್ಯೆ ಕೂಡ ಹೆಚ್ಚಾಗಿಲ್ಲ, ಇಂತಹ ಪರಿಸ್ಥಿತಿಯಲ್ಲಿ ನಾನು ತಮ್ಮಲ್ಲಿ ಯಾವ ರೀತಿ ಬೇಡಿಕೊಳ್ಳಲಿ? ಬಹಳಷ್ಟು ಜನರು ನನಗೆ ದೂರವಾಣಿ ಮಾಡಿ ಈ ವಿಚಾರವಾಗಿ ಮನವಿ ಮಾಡಿಕೊಳುತ್ತಿದ್ದಾರೆ. ಆಯವ್ಯಯದಲ್ಲಿ ಮಂಡನೆ ಮಾಡುವಂತಹ ಸಂದರ್ಭದಲ್ಲಿ ಈ ವಿಚಾರವನ್ನು ತಿಳಿಸಬೇಕಾಗಿತ್ತು ಎನ್ನುವಂತಹ ಒಂದು ಮಾತನ್ನು ಸನ್ಮಾನ್ಯ ಮುಖ್ಯಮಂತ್ರಿಯವರು ತಿಳಿಸಿದ್ದಾರೆ. ನಾನು ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಒಂದು ಪತ್ರವನ್ನು ಕೂಡ ಕಳುಹಿಸಿಕೊಟ್ಟಿದ್ದೇನೆ, ಆಯವ್ಯಯದ ಮೇಲಿನ ಚರ್ಚೆಯ ಸಂದರ್ಭದಲ್ಲಿ ಈ ವಿಚಾರವಾಗಿ ನಾನು ಸದನದಲ್ಲಿ ಒಂದು ಉಲ್ಲೇಖವನ್ನು ಸಹ ಮಾಡಿದ್ದೇನೆ. ಮದುವೆಯ

packageನ್ನು ಎಲ್ಲಾ ವರ್ಗದ ಹೆಣ್ಣು ಮಕ್ಕಳಿಗೂ ಕೊಡಬೇಕು, ಈಗ ನೂರು, ಇನ್ನೂರು, ಮುನ್ನೂರು ಕೋಟಿಗಳಷ್ಟು ಹಣವನ್ನು ನಿಗದಿಪಡಿಸಲಾಗಿದೆ, ಮಹಿಳೆಯರಿಗಾಗಿ ಸುಮಾರು 50 ಕೋಟಿ ರೂಪಾಯಿಗಳನ್ನು ಈ ಪೂರಕ ಅಂದಾಜಿನಲ್ಲಿ ಒದಗಿಸಬೇಕೆಂದು ನಾನು ರಾಜ್ಯದ ಎಲ್ಲ ಮಹಿಳೆಯರ ಪರವಾಗಿ ಕೈಜೋಡಿಸಿ ಬೇಡಿಕೊಳ್ಳುತ್ತಿದ್ದೇನೆ. ನಾವು ಮಹಿಳಾ ಶಾಸಕಿಯರಾಗಿ ಈ ಸದನಕ್ಕೆ ಆಯ್ಕೆಯಾಗಿ ಬಂದು ಏನು ಪ್ರಯೋಜನ? ದಯಮಾಡಿ ಸನ್ಮಾನ್ಯ ಮುಖ್ಯಮಂತ್ರಿಯವರು 'ಒಂದು ಕಣ್ಣಿಗೆ ಬೆಣ್ಣೆ, ಇನ್ನೊಂದು ಕಣ್ಣಿಗೆ ಸುಣ್ಣ' ಎನ್ನುವಂತಹ ನೀತಿಯನ್ನು ಅನುಸರಿಸುವುದು ಬೇಡ. ಹಿಂದುಳಿದ ವರ್ಗ ಎಂದರೆ ಯಾವುದು? ಪರಿಶಿಷ್ಟ ಜಾತಿಯಲ್ಲಿ ಹಿಂದುಳಿದವರಿದ್ದಾರೆ, ಇವೊತ್ತು ಆ ಹೆಣ್ಣು ಮಕ್ಕಳು ಕಣ್ಣೀರಿಡುತ್ತಿದ್ದಾರೆ, ಜೋಪಡಿಪಟ್ಟಿ, ಚರಂಡಿಗಳ ಪಕ್ಕದಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ವಾಸಿಸುತ್ತಿರುವಂತಹ ಕುಟುಂಬಗಳಲ್ಲಿಯೂ ಹೆಣ್ಣು ಮಕ್ಕಳಿದ್ದಾರೆ. ಅಂತಹ ಕುಟುಂಬಗಳ ಹೆಣ್ಣು ಮಕ್ಕಳ ಮದುವೆಗೆ ಸಹ 50 ಸಾವಿರ ರೂಪಾಯಿಗಳನ್ನು ಸರ್ಕಾರದಿಂದ ಕೊಟ್ಟರೆ ಅವರು ಬಹಳ ಸಂತೋಷದಿಂದ ತಮಗೆ ಆಶೀರ್ವಾದ ಮಾಡುತ್ತಾರೆ. ಆದುದರಿಂದ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ದಯಮಾಡಿ ಸನ್ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವಂತಹ 744 ಕೋಟಿ ರೂಪಾಯಿಗಳ ಪೂರಕ ಅಂದಾಜಿಗೆ ಇನ್ನು ಸುಮಾರು 50 ಕೋಟಿ ರೂಪಾಯಿಗಳನ್ನು ಸೇರಿಸಿ ಮಹಿಳಾ ಶಾದಿಭಾಗ್ಯ ವಿದಾಯಿ ಯೋಜನೆಗೆ ಒಂದು ವಿದಾಯ ಕೊಟ್ಟು, ಸರ್ವರಿಗೂ ಸಮಪಾಲು-ಸಮಬಾಳನ್ನು ನೀಡಬೇಕೆಂದು ಮತ್ತೊಮ್ಮೆ ವಿನಂತಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

**ಶ್ರೀ ಡಿ.ವಿ.ಸದಾನಂದಗೌಡ (ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದಿಂದ ಬರುವಂತಹ ತೆರಿಗೆ ಹಂಚಿಕೆ ಮತ್ತು ಕೇಂದ್ರ ಸರ್ಕಾರದ ಸಹಾಯಧನದ ವಿಚಾರದಲ್ಲಿ quarterly ಅಂದರೆ ಹಣಕಾಸು ವರ್ಷದ ಪ್ರತಿ 3 ತಿಂಗಳಿಗೊಮ್ಮೆ ಇಷ್ಟರವರೆಗೆ ಏನು ಹಣ ಬರಬೇಕಾಗಿತ್ತು ಅದನ್ನು ಸಕಾಲದಲ್ಲಿ ಪಡೆದುಕೊಳ್ಳುವಲ್ಲಿ ನಮ್ಮ ರಾಜ್ಯ ಸರ್ಕಾರ ವಿಫಲವಾಗಿದೆ. Accountant General ರವರು ನೀಡಿರುವ

ಅಂಕಿಅಂಶಗಳ ಪ್ರಕಾರ ಕೂಡ 'Receipts & Expenditures at a Glance for the Second Quarter ending September 2013' ಇದನ್ನು ನಾನು ಪರಿಶೀಲಿಸಿದ್ದೇನೆ. ಇದರಲ್ಲಿ ಕೇಂದ್ರ ಸರ್ಕಾರದ ತೆರಿಗೆಯ ಹಂಚಿಕೆ, devolution from the Government of India-2012ರ ಏಪ್ರೀಲ್‌ನಿಂದ ಸೆಪ್ಟೆಂಬರ್‌ವರೆಗೆ ಅದು 5612 ಕೋಟಿ ರೂಪಾಯಿಗಳು, 2013–14ನೇ ಸಾಲಿನ ಆಯವ್ಯಯದಲ್ಲಿ ಅದು 15,056 ಕೋಟಿ ರೂಪಾಯಿಗಳಾಗಿದೆ. 2013ರ ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ ಈ ಸರ್ಕಾರದವರು ಪಡೆದುಕೊಂಡಿರುವಂಥದ್ದು, ಕೇವಲ 5377 ಕೋಟಿ ರೂಪಾಯಿಗಳು. ಆಯವ್ಯಯದ ಶೇಕಡಾವಾರು ಪ್ರಮಾಣದ ಪ್ರಕಾರ ಇದು 35.7% ಮಾತ್ರ. ಹಿಂದಿನ ವರ್ಷದ ಬೆಳವಣಿಗೆಯ ಪ್ರಮಾಣಕ್ಕೆ ಹೋಲಿಕೆ ಮಾಡಿದರೆ ಅಂದರೆ, 'quarterly growth over previous year' – minus(-)4.2% ಇದು ಹೇಗಾಯಿತು ಎಂಬುದನ್ನು ಸನ್ಮಾನ್ಯ ಮುಖ್ಯಮಂತ್ರಿಯವರು ವಿವರಿಸಿ ಹೇಳಬೇಕು. ಇದು ಇಡೀ ರಾಜ್ಯಕ್ಕೆ ಗೊತ್ತಾಗಬೇಕು, ಕೇಂದ್ರದಿಂದ ಬರುವಂತಹ devolution of fundsನ್ನು ಸಕಾಲದಲ್ಲಿ ಪಡೆದುಕೊಳ್ಳುವಲ್ಲಿ ಈ ಸರ್ಕಾರ ವಿಫಲವಾಗಿದೆ ಎನ್ನುವಂಥದ್ದಕ್ಕೆ ಈ ಅಂಕಿ ಅಂಶಗಳು ಸಾಕ್ಷಿಯಾಗಿವೆ.

ಸನ್ಮಾನ್ಯ ಸಭಾಪತಿಯವರೇ, ಮತ್ತೊಂದು ವಿಚಾರವೆಂದರೆ, ಕೇಂದ್ರ ಸರ್ಕಾರದಿಂದ ಬರುವಂತಹ ಸಹಾಯಧನ, GIA & contributions 2012 ಏಪ್ರಿಲ್‌ನಿಂದ್ ಸೆಪ್ಟೆಂಬರ್‌ವರೆಗೆ 3681 ಕೋಟಿ ರೂಪಾಯಿಗಳು, 2013–14ನೇ ಸಾಲಿನ ಆಯವ್ಯಯದಲ್ಲಿ ಅದು 16,428 ಕೋಟಿ ರೂಪಾಯಿಗಳಾಗಬೇಕು. 2013ರ ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ 3152 ಕೋಟಿ ರೂಪಾಯಿಗಳು ಮಾತ್ರ, ಇದು ಆಯವ್ಯಯದ ಶೇಕಡಾವಾರು ಪ್ರಮಾಣದ ಕೇವಲ 19.2% ರಷ್ಟಾಗಿದ್ದು, ಹಿಂದಿನ ವರ್ಷದ ಬೆಳವಣಿಗೆಯ ಪ್ರಮಾಣವನ್ನು ಗಣನೆಗೆ ತೆಗೆದುಕೊಂಡರೆ ಇದು (minus) -14.4% ಆಗುತ್ತದೆ, ಇದೇ ಏನು financial management, ಈ ರೀತಿಯ ಪರಿಸ್ಥಿತಿ ಏತಕ್ಕಾಯಿತು,

ಏನಾಯಿತು ಎಂಬುದನ್ನು ಸನ್ಮಾನ್ಯ ಮುಖ್ಯಮಂತ್ರಿಯವರು ತಿಳಿಸಬೇಕಾಗುತ್ತದೆ.

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):–** ಸನ್ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರಾದಂತಹ ಸನ್ಮಾನ್ಯ ಸದಾನಂದಗೌಡರು, ಸನ್ಮಾನ್ಯ ನಾಣಯ್ಯನವರು ಮತ್ತು ಇನ್ನಿತರ ಮಾನ್ಯ ಸದಸ್ಯರೆಲ್ಲರು ಕೂಡ ನಾವು ಒಪ್ಪಿಗೆಗಾಗಿ ಮಂಡಿಸಿರುವಂತಹ ಪೂರಕ ಅಂದಾಜುಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸಭಾಪತಿಯವರೇ, ಮಾನ್ಯ ಸದಾನಂದಗೌಡರು ಸಹ ಮುಖ್ಯಮಂತ್ರಿಯಾಗಿದ್ದಂತವರು. ಈಗ ಈ ಮನೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದಾರೆ. ಅವರು ಈ ಸರ್ಕಾರ ಹಣಕಾಸಿನ ನಿರ್ವಹಣೆ ಮಾಡುವಲ್ಲಿ ವಿಫಲವಾಗಿದೆ, ಸರಿಯಾಗಿ ಮಾಡಿಲ್ಲ, ನಮ್ಮ ಕಾಲದಲ್ಲಿ ಬಹಳ ಚೆನ್ನಾಗಿತ್ತು, ಈಗ ಹಣಕಾಸಿನ ಪರಿಸ್ಥಿತಿ ಕೆಟ್ಟು ಹೋಗಿದೆ, ಅಭಿವೃದ್ಧಿ ಕೆಲಸಗಳು ಕುಂಠಿತವಾಗಿದೆ, ಏನು ಅಭಿವೃದ್ಧಿ ನಡೆಯುತ್ತಿಲ್ಲ ಎನ್ನುವ ರೀತಿಯಲ್ಲಿ ಮಾತನಾಡಿದ್ದಾರೆ. ಜೊತೆಗೆ ಸಂಪನ್ಮೂಲ ಕ್ರೋಢೀಕರಣ ಮಾಡುವಲ್ಲಿ ನಮ್ಮ ಸರ್ಕಾರ ವಿಫಲವಾಗಿದೆ, ಅದಕ್ಕೆ ಎಷ್ಟು ಪ್ರಯತ್ನಗಳು ಮಾಡಬೇಕಾಗಿತ್ತು, ಅಷ್ಟು ಪ್ರಯತ್ನಗಳನ್ನು ಮಾಡಿಲ್ಲ, ಸೋರಿ ಹೋಗುವುದನ್ನು ತಪ್ಪಿಸಬಹುದಾಗಿತ್ತು, ಅದು ತಪ್ಪಿಸುವಂತಹಹ ಪ್ರಯತ್ನ ಮಾಡಿಲ್ಲ, non-developmental expenditure ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಿಲ್ಲ, ಈ ರೀತಿಯಾದಂತಹ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ತೆರಿಗೆ ಸಂಗ್ರಹಣೆ ಮಾಡುವಲ್ಲಿ ನಾವು ಎಲ್ಲಾ ಪ್ರಯತ್ನಗಳನ್ನು ಮಾಡಿದ್ದೇವೆ ಮತ್ತು ಇದರಲ್ಲಿ ಹಿಂದೆ ಬಿದ್ದಿಲ್ಲ ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. Comparatively ಈ ವರ್ಷ ಸ್ವಲ್ಪ ಆರ್ಥಿಕ ಹಿಂಜರಿತವಿದೆ. ಮಾನ್ಯ ವಿರೋಧ ಪಕ್ಷದ ನಾಯಕರಾದಂತಹ ಶ್ರೀ ಡಿ.ವಿ.ಸದಾನಂದಗೌಡರು ಏನು ಹೇಳುತ್ತಾರೆಂದರೆ, ನಮ್ಮ ಕಾಲದಲ್ಲಿ ಬರಗಾಲದ ಪರಿಸ್ಥಿತಿ ಇದ್ದರೂ ಸಹ ನಾವು ಆಡಳಿತವನ್ನು ಚೆನ್ನಾಗಿ ನಡೆಸಿದ್ದೆವು. ಆದರೆ, ನಿಮಗೆ ಸಮೃದ್ಧವಾಗಿ ಮಳೆಯಾಗಿದೆ, ಕೆರೆಗಳು

ತುಂಬಿವೆ, ಚೆನ್ನಾಗಿ ಬೆಳೆಗಳು ಬೆಳೆಯುತ್ತಿವೆ ಎಂದು ಹೇಳಿದರು. ಇದೆಲ್ಲಾ ಯವಾಗ ಗೊತ್ತಾಗುತ್ತದೆ ಎಂದರೆ, ಕೊನೆಯಲ್ಲಿ G.D.P. growth ಯಾವ ರೀತಿ ಬೆಳವಣಿಗೆ ಆಗಿದೆ, ನಿಮ್ಮಲ್ಲಿ ಯಾವ ರೀತಿ ಬೆಳವಣಿಗೆ ಆಗಿತ್ತು ಎಂದು ಅದನ್ನು ಹೋಲಿಕೆ ಮಾಡಿ ನೋಡಿದಾಗ ಸ್ಪಷ್ಟವಾಗಿ ಕಾಣುತ್ತದೆ. ಇವರು ಬಂದ ಮೇಲೆ G.D.P. growth ಇಷ್ಟಿತ್ತು, ಅವರು ಬಂದ ಮೇಲೆ G.D.P. growth ಕಡಿಮೆಯಾಗಿದೆ. ರಾಜ್ಯ ಸಮೃದ್ಧಿ ಆಗಿತ್ತು ಎಂದು ಏನು claim ಮಾಡುತ್ತಾರೆ, ಇದರಲ್ಲಿ ಯಾವುದೇ ರೀತಿಯಾದಂತಹ ಸತ್ವ ಇಲ್ಲದಿಲ್ಲವೆಂದು ಹೇಳಬಯಸುತ್ತೇನೆ.

ಇನ್ನು ತೆರಿಗೆ ಸಂಗ್ರಹಣೆ ಬಗ್ಗೆ ಕೆಲವು ಅಂಕಿ-ಅಂಶಗಳನ್ನು ಹೇಳಿದರು. ಸೆಪ್ಟೆಂಬರ್ ತಿಂಗಳಿನವರೆಗೆ ಮಾತ್ರ ನಮ್ಮ Mid-Year Review ನಲ್ಲಿ ಕೊಟ್ಟಿರುವುದು. ನನ್ನ ಬಳಿ ಅಕ್ಟೋಬರ್ ತಿಂಗಳಿನವರೆಗೆ ಮಾಹಿತಿ ಇದೆ. ನಿಮ್ಮ ಕಾಲದಲ್ಲಿ ಅಕ್ಟೋಬರ್ ತಿಂಗಳಿನವರೆಗೆ ಮಾಹಿತಿ ಇದೆ. ನಮ್ಮ ಕಾಲದಲ್ಲಿ ಅಕ್ಟೋಬರ್ ತಿಂಗಳಿನಲ್ಲಿವರೆಗೆ ಮಾಹಿತಿ ಇದೆ. ಆದುದರಿಂದ ನಿಮಗೂ ನಮಗೂ ಹೋಲಿಕೆ ಮಾಡಿದಾಗ ತೆರಿಗೆ ಸಂಗ್ರಹ ಮಾಡುವಲ್ಲಿ ನಾವು ಹಿಂದೆ ಬಿದ್ದಿದ್ದೇವೆ, ಸರಿಯಾಗಿ ತೆರಿಗೆ ವಸೂಲಿ ಆಗುತ್ತಿಲ್ಲ ಎಂದು ಹೇಳುವುದು ಸರಿಯಲ್ಲ.

ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದ ಸಾಲ ಹೊರತುಪಡಿಸಿ, ಒಟ್ಟು ಈ ವರ್ಷಕ್ಕೆ 98,371 ಕೋಟಿ ರೂಪಾಯಿ target ಇತ್ತು. 2012-13ನೇ ಸಾಲಿನಲ್ಲಿ ಆಯವ್ಯಯ ಅಂದಾಜಿನ target ಎಷ್ಟಿತ್ತು ಎಂದರೆ 81,761 ಕೋಟಿ ರೂಪಾಯಿ ಇತ್ತು. ಕಳೆದ ವರ್ಷ 2012-13ನೇ ಸಾಲಿನಲ್ಲಿ ಅಕ್ಟೋಬರ್ ತಿಂಗಳಿನವರೆಗೆ 41,913 ಕೋಟಿ ರೂಪಾಯಿ ತೆರಿಗೆ ಸಂಗ್ರಹಣೆ ಆಗಿತ್ತು. ಈ ವರ್ಷ ಅಂದರೆ 2013-14ನೇ ಸಾಲಿನಲ್ಲಿ ಅಕ್ಟೋಬರ್ ಅಂತ್ಯದವೇಳೆಗೆ 46,724 ಕೋಟಿ ರೂಪಾಯಿ ತೆರಿಗೆ ವಸೂಲಾಗಿದೆ. ಅಕ್ಟೋಬರ್ ತಿಂಗಳಿನಲ್ಲಿ ಜಾಸ್ತಿ ಚೇತರಿಕೆ ಆಗಿದೆ. ಅಂದರೆ ತೆರಿಗೆ ವಸೂಲಿ ಜಾಸ್ತಿ ಆಗಿದೆ. ನಾವು ಬಂದು ಕೇವಲ 6 ತಿಂಗಳು ಮಾತ್ರ ಆಗಿದೆ. ಅಂದರೆ ತೆರಿಗೆ ವಸೂಲಿ ಜಾಸ್ತಿ ಆಗಿದೆ. ನಾವು ಬಂದು ಕೇವಲ 6

ತಿಂಗಳು ಮಾತ್ರ ಆಗಿದೆ. ಈ ವರ್ಷ ಆರ್ಥಿಕ ವರ್ಷದಲ್ಲಿ 2 ತಿಂಗಳು ನಾವು ಇರಲಿಲ್ಲ, ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಚುನಾವಣೆ ಇತ್ತು, ಜುಲೈ ತಿಂಗಳಿನಲ್ಲಿ ಬಜೆಟ್ ಮಂಡಿಸಿದ್ದು, ಹಾಗಾಗಿ ಈ ವರ್ಷ ಚುನಾವಣೆ ಸಹ ನಡೆದಿತ್ತು, ಹಿಂದಿನ ವರ್ಷ ಯಾವ ಚುನಾವಣೆ ಇರಲಿಲ್ಲ, ಈಗ ನಮ್ಮ target ಅಕ್ಟೋಬರ್ ತಿಂಗಳಿನವರೆಗೆ 48% ಆಗಿದೆ. Growth ಹಿಂದಿನ ವರ್ಷಕ್ಕೆ compare ಮಾಡಿದರೆ ಶೇಕಡ 11.5ರಷ್ಟು growth ಆಗಿದೆ. 2012-13ನೇ ಸಾಲಿಗೆ ತೆರಿಗೆ ವಸೂಲಿ ಆಗಿರುವುದು. ಈ ವರ್ಷ ತೆರಿಗೆ ವಸೂಲಿ ಆಗಿರುವಂಥದ್ದು ಕಳೆದ ವರ್ಷಕ್ಕೆ ಹೋಲಿಕೆ ಮಾಡಿದರೆ the growth is 11.50%. ನಾವು ತೆರಿಗೆ ವಸೂಲಿಯಲ್ಲಿ ಹಿಂದೆ ಬಿದ್ದಿದ್ದೇವೆ ಎಂದು ಹೇಳುವುದರಲ್ಲಿ ಯಾವುದೇ ಸತ್ಯಾಂಶ ಇಲ್ಲ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ನಂತರ ಇದು ರಾಜ್ಯದ ಸ್ವಂತ ತೆರಿಗೆ, ಮತ್ತು ಕೇಂದ್ರದಿಂದ ಬಂದಂಥದ್ದು ಎರಡೂ ಸೇರಿ ರಾಜ್ಯದ ಸ್ವಂತ ತೆರಿಗೆಗಳು 2013-14ನೇ ಸಾಲಿಗೆ 62,464 ಕೋಟಿ ರೂಪಾಯಿ. 2012-13ನೇ ಸಾಲಿಗೆ 51,821 ಕೋಟಿ ರೂಪಾಯಿ. ಕಳೆದ ವರ್ಷ ತೆರಿಗೆ ವಸೂಲಿ ಆಗಿರುವುದು 29,509 ಕೋಟಿ ರೂಪಾಯಿ. ಈ ವರ್ಷ ಅಕ್ಟೋಬರ್ ಅಂತ್ಯದವೇಳೆಗೆ ಆಗಿರುವುದು 33,537 ಕೋಟಿ ರೂಪಾಯಿ, the growth is 14% ಮತ್ತು total target ಗೆ 54%. ಇನ್ನೂ ನಮಗೆ ಐದು ತಿಂಗಳು ಬಾಕಿ ಇದೆ. ಅಂದರೆ ನವೆಂಬರ್, ಡಿಸೆಂಬರ್, ಜನವರಿ, ಫೆಬ್ರವರಿ ಮತ್ತು ಮಾರ್ಚ್. ಈ 5 ತಿಂಗಳಿನಲ್ಲಿ ನಾವು ಏನು 62,464 ಕೋಟಿ ರೂಪಾಯಿ target ಇಟ್ಟುಕೊಂಡಿದ್ದೇವೆ ಅದನ್ನು ನಾವು ತಲುಪುತ್ತೇವೆಂದು ಅತ್ಯಂತ ವಿಶ್ವಾಸದಿಂದ ನಿಮಗೆ ತಿಳಿಸಲಿಚ್ಛಿಸುತ್ತೇನೆ.

ನಂತರ ನಮ್ಮಲ್ಲಿ ವಾಣಿಜ್ಯ ತೆರಿಗೆಗಳ ಬಗ್ಗೆ ಹೇಳಬೇಕೆಂದರೆ, ಅದರಲ್ಲಿ ಕಳೆದ ವರ್ಷ ಬಜೆಟ್‌ನಲ್ಲಿ 31,100 ಕೋಟಿ ರೂಪಾಯಿಗಳಷ್ಟು target ಇಟ್ಟುಕೊಳ್ಳಲಾಗಿತ್ತು, ನಾವು ಬಜೆಟ್‌ನಲ್ಲಿ target ಇಟ್ಟುಕೊಂಡಿರುವಂಥದ್ದು 37,740 ಕೋಟಿ ರೂಪಾಯಿಗಳು, ಅಂದರೆ ಕಳೆದ ವರ್ಷಕ್ಕೂ ಈ ವರ್ಷಕ್ಕೂ ಸುಮಾರು 6,640 ಕೋಟಿ ರೂಪಾಯಿಗಳು ಹೆಚ್ಚಿಗೆ

ವಸೂಲಾಗಬಹುದು ಎಂಬ estimates ಅನ್ನು commercial tax ನಲ್ಲಿ ಸ್ವಲ್ಪ ಹೆಚ್ಚಾಗಿ ಇಟ್ಟುಕೊಂಡಿದೇವೆ. ಅಕ್ಟೋಬರ್‌ವರೆಗೆ, ಈ ವರ್ಷ ವಸೂಲಿ ಆಗಿರುವುದು 20,334 ಕೋಟಿ ರೂಪಾಯಿಗಳು.

**Sri D.V. SADANANDAGOWDA:-** To set right the record, ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವಂತಹ ಅಂಕಿ–ಅಂಶಗಳು ಏನಿವೆ ಅವೆಲ್ಲಾ ಸೆಪ್ಟೆಂಬರ್ ತಿಂಗಳಿನವರೆಗೆ.

**ಶ್ರೀ ಸಿದ್ದರಾಮಯ್ಯ:–** ನಮ್ಮ ಹತ್ತಿರ ಅಕ್ಟೋಬರ್ ತಿಂಗಳಿನವರೆಗೆ ಇದೆ, ಸೆಪ್ಟೆಂಬರ್ ತಿಂಗಳಿನದು ಈಗಾಗಲೇ ಹೊರಡಿಸಿದ್ದೇವೆ. ಅದಕ್ಕೆ ನಾನು ಹೇಳಿದ್ದು, ಅಕ್ಟೋಬರ್ ತಿಂಗಳಿನಲ್ಲಿ improvement ಆಗಿದೆ, ನಿಮ್ಮ ಕಾಲದಲ್ಲಿಯೂ ಸಹ ಅಕ್ಟೋಬರ್ ತಿಂಗಳಿನಲ್ಲಿ ಏನಾಗಿದೆ ಎಂದು ಹೇಳುತ್ತಿದ್ದೇನೆ.

**ಶ್ರೀ ಡಿ.ವಿ. ಸದಾನಂದಗೌಡ:–** ನಾನು ಸೆಪ್ಟೆಂಬರ್ ತಿಂಗಳಿನದು ಹೇಳಿದ್ದು, ತಾವು ಹೇಳಿದ್ದು ಅಕ್ಟೋಬರ್ ತಿಂಗಳಿನದು. Record ಗೆ ಹೋಗುತ್ತಿದೆ.

(4–30 ಗಂಟೆ)

**ಶ್ರೀ ಸಿದ್ದರಾಮಯ್ಯ:–** ನಮ್ಮದು ಅಕ್ಟೋಬರ್ ತಿಂಗಳದ್ದು ನಿಮ್ಮ ಸರ್ಕಾರದ್ದು ಕೂಡ ಅಕ್ಟೋಬರ್ ತಿಂಗಳಿನ ವಿವರಗಳನ್ನು ಹೇಳುತ್ತಿದ್ದೇನೆ. ಸೆಪ್ಟೆಂಬರ್‌ನಲ್ಲಿ ಕೊಟ್ಟಿರುವುದನ್ನು Mid-Year Review ನಲ್ಲಿ ಸೆಪ್ಟೆಂಬರ್‌ನಲ್ಲಿ ಕೊಟ್ಟಿರುವುದನ್ನು ಕೂಡ ಸದನದ ಮುಂದಿಟ್ಟಿದ್ದೇನೆ. There is no confusion at all.

**ಶ್ರೀ ಕೆ.ಬಿ.ಶಾಣಪ್ಪ:–** ಸೆಪ್ಟೆಂಬರ್ ತನಕ ತಾವು ಮಾಡಿದ ವಾದ ಸರಿಯಿದೆ.

**Sir SIDDARAMAIAH:-** I am not disputing it. ಅದನ್ನು ನಾನು dispute ಮಾಡುತ್ತಿಲ್ಲ. ನಾವೇ ಕೊಟ್ಟಿದ್ದೇವೆ. ನಾವು ಈಗ ಯಾವ

ತಿಂಗಳಿನಲ್ಲಿದ್ದೇವೆ, ಇನ್ನೂ ಸೆಪ್ಟೆಂಬರ್ ತಿಂಗಳಿನದೇ ಹೇಳುತ್ತಾ ಇರಲೇ? ನಾವೀಗ ಡಿಸೆಂಬರ್ ತಿಂಗಳಿನಲ್ಲಿ ಇರುವುದರಿಂದ ನವೆಂಬರ್ ತಿಂಗಳಿನದ್ದೂ ಕೂಡ ಹೇಳಬೇಕಾಗಿತ್ತು. ಮಾನ್ಯ ಸಭಾಪತಿಗಳೇ, 20334 ಕೋಟಿ ರೂಪಾಯಿ ಆಗಿದೆ. ಇದೇ ಅಕ್ಟೋಬರ್ ಕೊನೆಗೆ ಕಳೆದ ವರ್ಷ 17960 ಕೋಟಿ ರೂಪಾಯಿ ಆಗಿತ್ತು. So the growth is 13%. ಕಳೆದ ವರ್ಷಕ್ಕೆ ಹೋಲಿಕೆ ಮಾಡಿದರೆ, the growth is 13%. ಎಲ್ಲಿ ತೆರಿಗೆ ಕಡಿಮೆ ಆಗಿದೆ ಎಂದು ಹೇಳುತ್ತೀರಿ, growth 13% - 14% ಇದ್ದರೆ ಕಡಿಮೆ ಆಗಿದೆ ಎಂದೇ? ಆದ್ದರಿಂದ ತೆರಿಗೆ ಕಡಿಮೆ ಆಗಿದೆ, ಸಂಗ್ರಹ ಆಗಿಲ್ಲ ಎನ್ನುವುದು ಕೂಡ ಸರಿಯಾದುದಲ್ಲ. ಅಬಕಾರಿ ಬಗ್ಗೆ ಕೂಡ ಪ್ರಸ್ತಾಪವನ್ನು ಮಾಡಿದರು. ಈ ಅಬಕಾರಿಯಲ್ಲಿ ಈ ವರ್ಷಕ್ಕೆ 12,600 ಕೋಟಿ ರೂಪಾಯಿಗಳ target ಇದೆ. ಕಳೆದ ವರ್ಷ ಇದ್ದ target 10775 ಕೋಟಿ, ಈ ವರ್ಷ ಅಬಕಾರಿ ಇಲಾಖೆಯಲ್ಲಿ ಈಗಾಗಲೇ ಅಕ್ಟೋಬರ್‌ವರೆಗೆ ಸಂಗ್ರಹ ಆಗಿರುವ ತೆರಿಗೆ 7240 ಕೋಟಿ ರೂಪಾಯಿಗಳು, ಕಳೆದ ವರ್ಷ ಇದೇ ಅವಧಿಗೆ 6251 ಕೋಟಿ ರೂಪಾಯಿ ಸಂಗ್ರಹ ಆಗಿತ್ತು. The growth is 16%. ಕಳೆದ ವರ್ಷಕ್ಕೂ ಈ ವರ್ಷಕ್ಕೂ 16% growth ಇದೆ. ಇವತ್ತು ಅಬಕಾರಿಯಲ್ಲಿ ನಾವೇನು 12600 ಕೋಟಿ target ಇಟ್ಟುಕೊಂಡಿದ್ದೇವೆ, we are confident of reaching the target.

ಮೋಟಾರ್ ವಾಹನಗಳ ತೆರಿಗೆಯಲ್ಲಿ ಈ ವರ್ಷ ನಮ್ಮ ನಿರೀಕ್ಷೆಯ ರೀತಿಯಲ್ಲಿ ತೆರಿಗೆಯ ಸಂಗ್ರಹ ಆಗಿಲ್ಲ. ತಮಗೆಲ್ಲರಿಗೂ ಗೊತ್ತಿರುವ ಹೆಚ್ಚು ಮೋಟಾರ್ ವಾಹನಗಳ registration ಆದಲ್ಲಿ ಮಾತ್ರ ನಮಗೆ ಹೆಚ್ಚಿನ ತೆರಿಗೆ ಬರುತ್ತದೆ. ಅದರಲ್ಲಿ ಸೋರಿಕೆಯ ಪ್ರಶ್ನೆ ಇಲ್ಲ. ವಾಹನಗಳನ್ನು ಬೇರೆ ಕಡೆ registration ಮಾಡಿಸುವುದನ್ನು ಬಿಟ್ಟರೆ ಇಲ್ಲಿ ಸೋರಿಕೆ ಆಗುವುದಿಲ್ಲ. ವಾಹನಗಳ register ಆದ ಕೂಡಲೇ Lifetime Tax ನೀಡಬೇಕಾಗುತ್ತದೆ. ಈ ಸಲ ವಾಹನಗಳ registration ಕಡಿಮೆ ಆಗಿರುವುದು ತಮಗೂ ಸಹ ತಿಳಿದಿದೆ. ಆ ಕಾರಣದಿಂದ ನಮಗೆ ಈ ವರ್ಷ ಸುಮಾರು 320 ಕೋಟಿ ರೂಪಾಯಿಗಳಷ್ಟು ನಮ್ಮ target ನಲ್ಲಿ ಕಡಿಮೆ ಆಗಬಹುದೆನ್ನುವುದು ನಮ್ಮ

ನಿರೀಕ್ಷೆಯಾಗಿದೆ. ಇದನ್ನು ನಾನು Mid-Year Review ನಲ್ಲಿಯೂ ಸಹ ಹೇಳಿದ್ದೇನೆ. ಉಳಿದಂತೆ ತೆರಿಗೆ ವಸೂಲಿ ಮಾಡುವುದು ಆಗುತ್ತದೆ.

ನಂತರ, Stamps and Registration ನಲ್ಲಿ, we will reach the target. ಇದರಲ್ಲಿ 6500 ಕೋಟಿ ರೂಪಾಯಿ target ಇದ್ದು, ಇಲ್ಲಿತನಕ 3428 ಕೋಟಿ ರೂಪಾಯಿಗಳು ವಸೂಲಾಗಿದೆ. ಇನ್ನು ಮುಂದಕ್ಕೆ Stamps and Registration Duty ಹೆಚ್ಚಾಗಿ ಬರುತ್ತದೆ. ಅಕ್ಟೋಬರ್ ನವೆಂಬರ್ ಮತ್ತು ಡಿಸೆಂಬರ್ ತಿಂಗಳಿನಲ್ಲಿ ಹೆಚ್ಚಾಗಿ ಬರುತ್ತದೆ. ಖರೀದಿ ಮಾರಾಟಕ್ಕೆ ಒಳ್ಳೆಯ ದಿವಸಗಳು ಬರಬೇಕಲ್ಲ, ಹಾಗಾಗಿ ಇದರಲ್ಲಿ ಏನೂ ತೊಂದರೆ ಆಗುವುದಿಲ್ಲ. ಕಳೆದ ವರ್ಷ 5200 ಕೋಟಿ ರೂಪಾಯಿಗಳನ್ನು ಇಡಲಾಗಿತ್ತು. ಈ ವರ್ಷ ನಾವು 1300 ಕೋಟಿ ಹೆಚ್ಚಿಗೆ ಇಟ್ಟುಕೊಂಡಿದ್ದೇವೆ. ಕಳೆದ ವರ್ಷ ಇದೇ ಅಕ್ಟೋಬರ್ ತಿಂಗಳಿಗೆ collect ಆಗಿದ್ದು, 2912 ಕೋಟಿ ರೂಪಾಯಗಳು, ಈ ವರ್ಷ ಅಕ್ಟೋಬರ್‌ವರೆಗೆ 2013–14ನೇ ಸಾಲಿಗೆ 3428 ಕೋಟಿ ರೂಪಾಯಿಗಳು collect ಆಗಿದೆ. The growth is 18% compared to last year's collection. ಹೋದ ವರ್ಷ collect ಆದ revenue ಗಿಂತ ಈ ವರ್ಷ 18% growth ಹೆಚ್ಚಾಗಿದೆ. ಇದರಲ್ಲಿ ನಮ್ಮ target ಅನ್ನು reach ಆಗುತ್ತೇವೆ ಎನ್ನುವುದನ್ನು ತಿಳಿಸಬಯಸುತ್ತೇನೆ.

ತಾವು ಆಗಲೇ ಪ್ರಸ್ತಾಪಿಸಿದಹಾಗೆ ತೆರಿಗೆಯೇತರ ರಾಜಸ್ವ ಇದರಲ್ಲಿ ತೆರಿಗೆ ಕಡಿಮೆ ಆಗುತ್ತದೆ ಎಂದು ಹೇಳಿದಿರಿ, I also admit it. Non-Tax Revenue ಇದರಲ್ಲಿ ಸುಮಾರು 350 ಕೋಟಿ ಕಡಿಮೆ ಆಗಬಹುದು ಎಂದು ನಾವು ಕೂಡ ಅಂದಾಜು ಮಾಡಿದ್ದೇವೆ. ಇದು ಏಕೆ ಆಗುತ್ತಿದೆ ಎಂದರೆ ಅನೇಕ ಗಣಿಗಾರಿಕೆ ಸಂಸ್ಥೆಗಳು ನಿಂತು ಹೋಗಿವೆ. ಕಬ್ಬಿಣದ ಅದಿರು ಹೆಚ್ಚಿಗೆ ಉತ್ಪಾದನೆ ಆಗುತ್ತಿಲ್ಲ. ಕೆಲವು 'C' category ಗಣಿಗಾರಿಕೆಯ ಲೈಸೆನ್ಸ್‌ಗಳನ್ನು ರದ್ದು ಮಾಡಿದ್ದೇವೆ. Mining activities ಕಡಿಮೆ ಆಗಿದೆ. ಹಾಗಾಗಿ royalty ಕಡಿಮೆ ಆಗಿದೆ. ಬಹುಶಃ ಅದು ಮುಂದಿನ ದಿವಸಗಳಲ್ಲಿ improve ಆಗಬಹುದು. ಹಾಗಾಗಿ mining ನ roylaty ನಲ್ಲಿ ಈ ವರ್ಷ 350 ಕೋಟಿ ರೂಪಾಯಿಗಳು ನಮ್ಮ ಅಂದಾಜಿನಲ್ಲಿ ಕಡಿಮೆ ಆಗಬಹುದು. ಅದು ಬಿಟ್ಟರೆ

Excise ನಲ್ಲಿ, Stamps and Registration ನಲ್ಲಿ, Commercial Tax ನಲ್ಲಿ, ಯಾವ ಕಾರಣಕ್ಕೂ ಸಹ tax ಕಡಿಮೆ ಆಗಲು ಸಾಧ್ಯವಿಲ್ಲ. ನಾವು ಅದರಲ್ಲಿ ನಮ್ಮ target reach ಆಗಿಯೇ ಆಗುತ್ತೇವೆ. ಬಜೆಟ್‌ನಲ್ಲಿ ಈ ವರ್ಷ ನಾವೇನು ಹಂಚಿಕೆ ಮಾಡಿದ್ದೇವೆ, ಅವೆಲ್ಲವುದಕ್ಕೂ ಸಹ ಹಣವನ್ನು ಒದಗಿಸುತ್ತೇವೆ ಎನ್ನುವುದನ್ನು ಬಹಳ ಸ್ಪಷ್ಟವಾಗಿ ತಿಳಿಸುವುದಕ್ಕೆ ಬಯಸುತ್ತೇನೆ. ಆದ್ದರಿಂದ ಅದರ ಬಗ್ಗೆ ಯಾವುದೇ ಸಂಶಯವನ್ನು ಇಟ್ಟುಕೊಳ್ಳಬೇಕಾದ ಅವಶ್ಯಕತೆ ಇಲ್ಲ. ಎಲ್ಲಾದಕ್ಕೂ ಸಹ ನಾವು ಹಣ ನೀಡುತ್ತೇವೆ.

ಮಾನ್ಯ ಸಭಾಪತಿಗಳೇ, ಮಾನ್ಯ ವಿರೋಧ ಪಕ್ಷದ ನಾಯಕರು pending bills ಉಳಿದುಕೊಂಡಿದೆ ಎನ್ನುವ ಮಾತನ್ನು ಹೇಳಿದರು. ಬಾಕಿ ಇನ್ನೂ ಎಷ್ಟಿದೆ ಎನ್ನುವುದನ್ನು ಹೇಳಬೇಕೆಂದು ಹೇಳಿದರು.

ಕಳೆದ ಸರ್ಕಾರದಲ್ಲಿ ಮೇ ತಿಂಗಳಿನಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ 1271 ಕೋಟಿ ಬಾಕಿ ಉಳಿದಿತ್ತು. ಈಗ ಅಕ್ಟೋಬರ್ 2013ರಲ್ಲಿ 1221 ಕೋಟಿ ಇನ್ನೂ ಬಾಕಿಯಿದೆ. ಈಗಾಗಲೇ ನಾವು ಸ್ವಲ್ಪ ತೀರಿಸಿದ್ದು, ಪುನಃ ಸ್ವಲ್ಪ ಸೇರಿ ಇಷ್ಟು ಬಾಕಿಯಿದೆ. ನೀರಾವರಿ ಇಲಾಖೆಯಲ್ಲಿ 1020 ಕೋಟಿ ಬಿಲ್‌ಗಳು ಬಾಕಿಯಿತ್ತು, ಅದರಲ್ಲಿ ಕೆಲವನ್ನು ನಾವು ತೀರಿಸಿದ್ದೇವೆ, ಇನ್ನೂ ಕೆಲವು 339 ಕೋಟಿ ರೂಪಾಯಿಗಳು ಮಾತ್ರ ಬಾಕಿಯಿದೆ. ಸಣ್ಣ ನೀರಾವರಿ ಇಲಾಖೆಯಲ್ಲಿ 294 ಕೋಟಿ ರೂಪಾಯಿ ಬಾಕಿಯಿತ್ತು, ಈಗ 214 ಕೋಟಿ ರೂಪಾಯಿ ಬಾಕಿಯಿದೆ. ಒಟ್ಟಾಗಿ ಲೋಕೋಪಯೋಗಿ, Major, Medium and Minor Irrigation Department ಗಳಿಂದ ಮೇ ತಿಂಗಳಿನಲ್ಲಿ 2587 ಕೋಟಿ ರೂಪಾಯಿ ಬಾಕಿಯಿತ್ತು, now it has come down to Rs. 1774 crores. ಬಾಕಿಯನ್ನು ಪೂರ್ತಿ ಚುಕ್ತಾ ಮಾಡಲು ಸಾಧ್ಯವಿಲ್ಲ. ಅದು ನಿರಂತರವಾಗಿ ಇರುವಂತದ್ದು, ಬಾಕಿ ಮುಂದುವರೆದುಕೊಂಡು ಹೋಗುತ್ತದೆ. ಸಾಕಷ್ಟು ಬಾಕಿಯನ್ನು ಕೂಡ ತೀರಿಸುವ ಕೆಲಸವನ್ನು ನಾವು ಮಾಡಿದ್ದೇವೆ. ಜೊತೆಗೆ ಈಗ ಯಾವುದೇ ಅಭಿವೃದ್ಧಿ ಆಗುತ್ತಿಲ್ಲ ಎನ್ನುವ ಮಾತುಗಳನ್ನು ಕೂಡ ಹೇಳಿದ್ದಾರೆ. ನಾವು ಇಲ್ಲಿಯವರೆಗೆ ಬಜೆಟ್‌ನಲ್ಲಿ ಏನೇನು ಕಾರ್ಯಕ್ರಮಗಳನ್ನು ಘೋಷಣೆ

ಮಾಡಿದ್ದೇವೆ ಅವೆಲ್ಲವುಗಳಿಗೂ ಹಣ ಬಿಡುಗಡೆ ಮಾಡತಕ್ಕಂಥ ಕೆಲಸವನ್ನು ಮಾಡಿದ್ದೇವೆ. ಜೊತೆಗೆ ಸೆಕ್ರೆಟರಿಗಳಿಗೆ ಹಣ ಬಿಡುಗಡೆ ಮಾಡಲಿಕ್ಕೆ ಅಧಿಕಾರ ಇದೆ. ಅದು ಹಣಕಾಸು ಇಲಾಖೆಗೆ ಬರುವ ಅಗತ್ಯತೆ ಇಲ್ಲ. ಅವರಿಗೆ ಅಲೋಕೇಶನ್ ಏನಿದೆ, ಅವರಿಗೆ ಗ್ರ್ಯಾಂಟ್ಸ್ ಏನಿದೆ ಅದಕ್ಕನುಗುಣವಾಗಿ ಅವರು ಹಣವನ್ನು ಬಿಡುಗಡೆ ಮಾಡುತ್ತಾರೆ. ಕೆಲವಕ್ಕೆ ಪೂರ್ಣ ಸ್ವಾತಂತ್ರ್ಯ ಇರುತ್ತದೆ, ಕೆಲವಕ್ಕೆ ಬೇರೆ ರೀತಿಯಲ್ಲಿರುತ್ತದೆ. ಈಗ ಪಂಚಾಯತ್ ರಾಜ್ ಸಂಸ್ಥೆಗಳಿಗೆ 2013–14ರಲ್ಲಿ ಅನುದಾನ 2,629 ಕೋಟಿ ಇದ್ದರೆ ಈಗಾಗಲೇ ಇಲ್ಲಿಯವರೆಗೆ 16,296 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅಂದರೆ ಶೇಕಡ 72ರಷ್ಟು ಬಿಡುಗಡೆಯಾಗಿದೆ. ನೀರಾವರಿಗೆ 2013–14ರಲ್ಲಿ ಅನುದಾನ 7802 ಕೋಟಿ ಇದ್ದರೆ ಈಗಾಗಲೇ ಇಲ್ಲಿಯವರೆಗೆ 4115 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅಂದರೆ ಶೇಕಡ 53ರಷ್ಟು ಬಿಡುಗಡೆಯಾಗಿದೆ. ನಾವು ಏನು ಬಜೆಟ್‌ನಲ್ಲಿ 9813 ಕೋಟಿ ಎಂದು ನೀರಾವರಿಗೆ ಹೇಳಿದ್ದೇವೆ. ಅಷ್ಟು ಹಣ ಖರ್ಚು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. We are in a position to release the amount which is required and which is allocated in the budget. ಇಂಧನ ಇಲಾಖೆಗೆ 2013–14ರಲ್ಲಿ ಅನುದಾನ 5550 ಕೋಟಿ ಇದ್ದರೆ ಈಗಾಗಲೇ ಇಲ್ಲಿಯವರೆಗೆ 3450 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅಂದರೆ ಶೇಕಡ 62ರಷ್ಟು ಬಿಡುಗಡೆಯಾಗಿದೆ. Equity ಕೊಡತಕ್ಕಂಥದ್ದು 800 ಕೋಟಿ ರೂಪಾಯಿನಲ್ಲಿ 450 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ. ಅಂದರೆ ಶೇಕಡ 56ರಷ್ಟು ಬಿಡುಗಡೆಯಾಗಿದೆ. ರಸ್ತೆಗಳಿಗೆ 5024 ಕೋಟಿ ರೂಪಾಯಿ allocation ಇದ್ದರೆ ಇಲ್ಲಿಯವರೆಗೆ 2013 ಕೋಟಿ ರೂಪಾಯಿ ಬಿಡುಗಡೆಯಾಗಿದೆ. ಅಂದರೆ ಶೇಕಡ 42 ರಷ್ಟು ಬಿಡುಗಡೆಯಾಗಿದೆ. ಇಲ್ಲಿಂದೀಚೆಗೆ ರಸ್ತೆಗಳ ಕೆಲಸ ಹೆಚ್ಚು ಆಗುತ್ತದೆ. ಟೆಂಡರ್ ಕರೆಯುವುದು, ಕೆಲಸ ಮಾಡುವುದು ಇಲ್ಲಿಂದೀಚೆಗೆ ಡಿಸೆಂಬರ್, ಜನವರಿ, ಫೆಬ್ರವರಿ, ಮಾರ್ಚ್‌ನಲ್ಲಿ ಹೆಚ್ಚು ಕೆಲಸಗಳು ಆಗುತ್ತವೆ. ಆಗ ಹೆಚ್ಚು ಹಣ ಬಿಡುಗಡೆ ಮಾಡಬೇಕಾಗುತ್ತದೆ. ಅದಕ್ಕಾಗಿ ಅದಕ್ಕೂ ಕೂಡ ಬಜೆಟ್ allocation ಜೊತೆಗೆ 1400 ಕೋಟಿ ಹೆಚ್ಚುವರಿಯಾಗಿ supplementary estimate ನಲ್ಲಿ

ಕೊಟ್ಟಿದ್ದೇವೆ. ಅದನ್ನು ಕೊಡುತ್ತೇವೆ, ಇದನ್ನು ಕೂಡ ಬಿಡುಗಡೆ ಮಾಡತಕ್ಕಂಥದ್ದನ್ನು ಮಾಡುತ್ತೇವೆ. ಗ್ರಾಮೀಣಾಭಿವೃದ್ಧಿಗೆ 976 ಕೋಟಿಗಳಲ್ಲಿ ಈಗಾಗಲೇ 400 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅನ್ನಭಾಗ್ಯ 3400 ಕೋಟಿ ಬಜೆಟ್‌ನಲ್ಲಿ allocation ಇದೆ. ಇಲ್ಲಿಯವರೆಗೆ 1916 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅಂದರೆ ಶೇಕಡ 56 ರಷ್ಟು ಬಿಡುಗಡೆಯಾಗಿದೆ. ಸ್ಥಳೀಯ ಸಂಸ್ಥೆಗಳಿಗೆ 3190 ಕೋಟಿ ಬಜೆಟ್‌ನಲ್ಲಿ allocation ಇದೆ. ಇಲ್ಲಿಯವರೆಗೆ 1413 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ನೀವು ನಗರೋತ್ಥಾನ ಕಾರ್ಯಕ್ರಮಗಳ ಬಗ್ಗೆ ಎಲ್ಲಾ ಹೇಳಿದ್ದೀರಲ್ಲ ಅಲ್ಲಿ ಟೆಂಡರ್ ಕರೆಯುವ process ಎಲ್ಲಾ ನಿಧಾನವಾಗಿತ್ತು. ಈಗ ಶೇಕಡ 44 ರಷ್ಟು ಬಿಡುಗಡೆಯಾಗಿದೆ. ಈಗ ಟೆಂಡರ್ final ಆಗಿದೆ, ಕೆಲಸಗಳೆಲ್ಲಾ ಪ್ರಾರಂಭವಾಗಿವೆ. ಅವುಗಳಿಗೂ ಕೂಡ ಬಿಡುಗಡೆ ಮಾಡತಕ್ಕಂಥ ಕೆಲಸವನ್ನು ಮಾಡುತ್ತೇವೆ. ಆಮೇಲೆ ಈ ಸಾಮಾಜಿಕ ಭದ್ರತಾ ಪಿಂಚಣಿಗಳು ಇದಕ್ಕೆ 1984 ಕೋಟಿ ಇದೆ. ಅದಕ್ಕೆ ಇಲ್ಲಿಯವರೆಗೆ 1257 ಕೋಟಿ ಬಿಡುಗಡೆ ಮಾಡಿದ್ದೇವೆ. ಅಂದರೆ ಶೇಕಡ 54 ರಷ್ಟು ಬಿಡುಗಡೆಯಾಗಿದೆ. ಗ್ರಾಮೀಣ ನೀರು ಸರಬರಾಜು ಇಲಾಖೆಗೆ 1984 ಕೋಟಿ ರೂಪಾಯಿಗಳ ಅನುದಾನ ಇದೆ. ಅದರಲ್ಲಿ ಈಗಾಗಲೇ 960 ಕೋಟಿ ರೂಪಾಯಿಗಳು ಬಿಡುಗಡೆಯಾಗಿವೆ. ಶೇಕಡ 48 ರಷ್ಟು ಬಿಡುಗಡೆಯಾಗಿದೆ. ಬೆಳೆ ಸಾಲಮನ್ನಾಗೆ 1485 ಕೋಟಿ ರೂಪಾಯಿಗಳ ಅನುದಾನ ಇದೆ ಅದರಲ್ಲಿ ಈಗಾಗಲೆ 1137 ಕೋಟಿ ರೂಪಾಯಿಗಳು ಬಿಡುಗಡೆಯಾಗಿವೆ. ಇನ್ನು ಸುಮಾರು 300 ಕೋಟಿ ಬಿಡುಗಡೆ ಮಾಡುವುದು ಬಾಕಿ ಇದೆ. ಈಗ supplementary estimates ನಲ್ಲಿ 500 ಕೋಟಿ ರೂಪಾಯಿ ಇಟ್ಟುಕೊಂಡಿದ್ದೇವೆ. ತಾವು ಹೇಳಿದ ಹಾಗೆ 800 ಕೋಟಿ ರೂಪಾಯಿ ಬಾಕಿ ಇದೆ. ಆ 800 ಕೋಟಿ ರೂಪಾಯಿ ಕೂಡ ಕೊಡುತ್ತೇವೆ. ಇನ್ನುಳಿದಿದ್ದು ಯಾವುದು ಇದೆ ಅದನ್ನು ಕೂಡ ಈ ವರ್ಷ ಕೊಟ್ಟುಬಿಡುತ್ತೇವೆ. ಆದ್ದರಿಂದ ಬಾಕಿ ಉಳಿದುಕೊಳ್ಳುವ ಪ್ರಶ್ನೆಯೇ ಇರುವುದಿಲ್ಲ. ಇನ್ನು ರೈತರಿಗೆ ಸಾಲ ಕೊಡುವುದು ಇದೆಯಲ್ಲ, ಕಳೆದ ವರ್ಷ ಇದೇ ಅವಧಿಗೆ ಎಂಟು ಲಕ್ಷ

ಜನರಿಗೆ ಸಾಲ ಕೊಟ್ಟಿದ್ದರು. ಈ ವರ್ಷ ಇದೇ ಅವಧಿ ಹತ್ತುವರೆ ಲಕ್ಷ ಜನರಿಗೆ ಸಾಲ ಕೊಟ್ಟಿದ್ದೇವೆ. ಇನ್ನು ಮಧ್ಯಾಹ್ನದ ಊಟಕ್ಕೆ ಒಂದು ಸಾವಿರ ಕೋಟಿ ಬಜೆಟ್‌ನಲ್ಲಿಟ್ಟುಕೊಂಡಿತ್ತು. 740 ಕೋಟಿ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಶೇಕಡ 74ರಷ್ಟು ಬಿಡುಗಡೆಯಾಗಿದೆ. ಬೃಹತ್ ಬೆಂಗಳೂರು ನಗರಕ್ಕೆ ವಿಶೇಷ ಅನುದಾನ 864 ಕೋಟಿ ಇತ್ತು. ಅದರಲ್ಲಿ 633 ಕೋಟಿ ಬಿಡುಗಡೆ ಮಾಡಿದ್ದೇವೆ. ಅಂದರೆ ಶೇಕಡ 75ರಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ. ಹಾಲು ಸಹಾಯಧನಕ್ಕೆ ನಾಲ್ಕು ರೂಪಾಯಿ ಸಬ್ಸಿಡಿ ಏನು ಕೊಡುತ್ತೇವೆ ಅದಕ್ಕೆ ಬಜೆಟ್‌ನಲ್ಲಿ 818 ಕೋಟಿ ರೂಪಾಯಿ ಇರಿಸಲಾಗಿದೆ. ಇಲ್ಲಿಯವರೆಗೆ 375 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ. ಶೇಕಡ 46ರಷ್ಟು ಬಿಡುಗಡೆ ಮಾಡಿದ್ದೇವೆ. ಇನ್ನುಳಿದಿದ್ದನ್ನು ಕೂಡ ಬಿಡುಗಡೆ ಮಾಡುತ್ತೇವೆ. ಇನ್ನು Karnataka Milk Federation (KMF) ದಿಂದ ಬರಬೇಕಾಗಿದೆ. ಇನ್ನು ಆಶ್ರಯ ಮನೆಗಳಿಗೆ allocation 671 ಕೋಟಿ ಇತ್ತು. ಅಷ್ಟನ್ನು ಬಿಡುಗಡೆ ಮಾಡಿದ್ದೇವೆ. ನೂರಕ್ಕೆ ನೂರರಷ್ಟು ಬಿಡುಗಡೆ ಮಾಡಿದ್ದೇವೆ. ಆಮೇಲೆ ಬೆಂಗಳೂರು ಮೆಟ್ರೋಗೆ 531 ಕೋಟಿ ರೂಪಾಯಿಗಳಲ್ಲಿ 175 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಭಾಗ್ಯಲಕ್ಷ್ಮಿಗೆ 396 ಕೋಟಿಗೆ 198 ಕೋಟಿ ಬಿಡುಗಡೆ ಮಾಡಿದ್ದೇವೆ. ಇನ್ನು ಬಹಳಷ್ಟು ಸದಸ್ಯರಾದ ಶ್ರೀ ಅರುಣ್ ಶಹಾಪೂರ್, ಶ್ರೀ ಅಮರನಾಥ್ ಪಾಟೀಲ್, ಶ್ರೀ ಅಶ್ವತ್ಥ್‌ನಾರಾಯಣರವರು ರೈಲ್ವೇ ಯೋಜನೆಗಳ ಬಗ್ಗೆ ಮಾತನಾಡಿದ್ದಾರೆ. ಈ ಯೋಜನೆಯಲ್ಲಿ ನಾವು ಜಮೀನು ಕೊಡುತ್ತೇವೆ, project costನಲ್ಲಿ ಅರ್ಧ ಕೊಡುತ್ತೇವೆ. ಶೇಕಡ ಐವತ್ತರಷ್ಟು ನಮ್ಮ share. ಅವರು ಎಷ್ಟು ಕೊಡುತ್ತಾರೆ ಅಷ್ಟು ನಾವು ಕೊಡುವುದಕ್ಕೆ ತಯಾರಾಗಿದ್ದೇವೆ. ಕೇಂದ್ರ ಸರ್ಕಾರ ಈ ವರ್ಷ ಎಷ್ಟು ಖರ್ಚು ಮಾಡುತ್ತೇವೆಂದು ಹೇಳುತ್ತದೆ ಅಷ್ಟು ನಾವು ಕೂಡ matching grant ಕೊಡಲಿಕ್ಕೆ ತಯಾರಾಗಿದ್ದೇವೆ. ನಾವು ಮಲ್ಲಿಕಾರ್ಜುನ ಖರ್ಗೆಯವರೆಲ್ಲಾ ಸೇರಿ ಈಗಾಗಲೇ ಎರಡು ಮೀಟಿಂಗ್ ಮಾಡಿದ್ದೇವೆ. ಅಧಿಕಾರಿಗಳ ಜೊತೆ ಕೂಡ ಮೀಟಿಂಗ್ ಮಾಡಿದ್ದೇವೆ. ನಾವು ಇಲ್ಲಿಯವರೆಗೆ ಬಜೆಟ್‌ನಲ್ಲಿ 373 ಕೋಟಿ ರೂಪಾಯಿಗಳನ್ನು ಇಟ್ಟುಕೊಂಡಿದ್ದೇವೆ, ಈಗ

ನೂರು ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಇಟ್ಟುಕೊಂಡಿರತಕ್ಕಂಥದ್ದು. ಸಾಮಾನ್ಯವಾಗಿ ಪ್ರತಿ ವರ್ಷ ಎಷ್ಟು ಖರ್ಚಾಗುತ್ತಿತ್ತೆಂದರೆ 350–400 ಕೋಟಿ ಖರ್ಚಾಗುತ್ತಿತ್ತು. ಅದಕ್ಕಿಂತ ಹೆಚ್ಚು ರೈಲ್ವೇ ಯೋಜನೆಯಡಿಯಲ್ಲಿ ಖರ್ಚಾಗಲಿಲ್ಲ. ಅದಕ್ಕೋಸ್ಕರ ಅಷ್ಟು ಇಟ್ಟಿದ್ದೆವು. ಈ ಬಾರಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ನಾವು ಬಾರಿ ಹೆಚ್ಚು ಖರ್ಚು ಮಾಡುತ್ತೇವೆಂದು ಹೇಳಿದ್ದಾರೆ. ಅವರು ಹೆಚ್ಚು ಖರ್ಚು ಮಾಡಿದರೆ ನಾವು ಕೂಡ ಹೆಚ್ಚು ಖರ್ಚು ಮಾಡುತ್ತೇವೆ. ನಾವು ಹಣವನ್ನು ಒದಗಿಸಿಕೊಡಲಿಕ್ಕೆ ಬದ್ಧವಾಗಿದ್ದೇವೆ.

**ಶ್ರೀ ಡಿ.ವಿ.ಸದಾನಂದಗೌಡ:–** ಮಾನ್ಯ ಸಭಾಪತಿಯವರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಒಮ್ಮೆ ಮಾಧ್ಯಮದಲ್ಲಿ ಇನ್ನು ರಾಜ್ಯ ಸರ್ಕಾರ ಹಣ ಬಿಡುಗಡೆ ಮಾಡಿಲ್ಲ ಎಂದು ಹೇಳಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ರಾಜ್ಯ ಸರ್ಕಾರ ಹಣ ಬಿಡುಗಡೆ ಮಾಡಿಲ್ಲ ಎಂದು ಹೇಳಿದ್ದಾರೆ. ಅದಾದ ಮೇಲೆ ಹಣ ಬಿಡುಗಡೆ ಮಾಡಿದ್ದೇವೆ. It is a fact. ಅದರಲ್ಲಿ ಬೇರೇನೂ ಇಲ್ಲ. ನಾನು ಎಲ್ಲವನ್ನು ಅವರ ರೀತಿ ವಿವಾದ ಮಾಡುವುದಕ್ಕೆ ಹೋಗುವುದಿಲ್ಲ. ಅಂದರೆ ಅವರ ರೀತಿ ಎಂದರೆ ಬಿಜೆಪಿ ತರಹ ಎಂದು. ಶಾಸಕರ ಪ್ರದೇಶಾಭಿವೃದ್ಧಿಗೆ ₹ 300 ಕೋಟಿಗಳನ್ನು ಬಜೆಟ್‌ನಲ್ಲಿ ಇಟ್ಟುಕೊಂಡಿದ್ದು, ₹ 300 ಕೋಟಿಗಳನ್ನು ಬಿಡುಗಡೆ ಮಾಡಿದ್ದೇನೆ. ನಾನು ಬಜೆಟ್‌ಗೆ ಉತ್ತರ ಕೊಡುವಾಗ ಇನ್ನೂ ₹ 1 ಕೋಟಿ ಹೆಚ್ಚು ಮಾಡುತ್ತೇನೆ ಎಂದು ಹೇಳಿದ್ದು, ಅದಕ್ಕಾಗಿ ಪೂರಕ ಅಂದಾಜಿನಲ್ಲಿ ₹ 300 ಕೋಟಿಗಳನ್ನು ಇಟ್ಟುಕೊಂಡಿದ್ದೇನೆ. ಅದನ್ನು ಬಿಡುಗಡೆ ಮಾಡುತ್ತೇನೆ. ಈಗಾಗಲೇ ಎಂಎಲ್‌ಎ ಮತ್ತು ಎಂಎಲ್‌ಸಿಗಳಿಗೆ ಒಂದೊಂದು ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. ₹ 2 ಕೋಟಿಗಳನ್ನು ಒಟ್ಟಿಗೆ Action Plan ಮಾಡಿ, ಅಪ್ರೂವ್ ಮಾಡಿಕೊಡುವ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಮಾನ್ಯ ಸದಸ್ಯರು ₹ 2 ಕೋಟಿಗೆ ಮಾಡಿಕೊಟ್ಟರೆ, ₹ 1 ಕೋಟಿ ಬಿಡುಗಡೆಯಾಗಿದ್ದು ಮಾರ್ಚ್ ಒಳಗೆ ಇನ್ನೊಂದು ಕೋಟಿ ಬಿಡುಗಡೆ ಮಾಡುತ್ತೇನೆ. ಅದರಿಂದ ಹಣ ಬಿಡುಗಡೆಯಾಗಿಲ್ಲ ಎನ್ನುವುದು ಬೇಡ.

ಇನ್ನು ಬೇಕಾದಷ್ಟು ಇವೆ, ನಾನು ಅವೆಲ್ಲವನ್ನು ಓದಿ ಹೇಳುವುದಕ್ಕೆ ಹೋಗುವುದಿಲ್ಲ, ಇಷ್ಟು ಸಾಕು.

**ಶ್ರೀ ಪಟೇಲ್ ಶಿವರಾಂ:–** ಹಾಸನದ ಬಗ್ಗೆ ಹೇಳಿದರೆ.....

**ಶ್ರೀ ಸಿದ್ದರಾಮಯ್ಯ:–** ಹಾಸನ ರೈಲ್ವೆಗೆ ನಾನು ಒತ್ತಾಯ ಮಾಡುತ್ತಿದ್ದೇನೆ, ಅವರ ಲೀಡರ್ ಕೂಡ ಒತ್ತಾಯ ಮಾಡುತ್ತಿದಾರೆ.

**ಶ್ರೀ ಪಟೇಲ್ ಶಿವರಾಂ:–** ಆದರೆ ಆಗುತ್ತಿಲ್ಲ.

**ಶ್ರೀ ಸಿದ್ದರಾಮಯ್ಯ:–** ನಾನು ರೈಲ್ವೆ ಮಂತ್ರಿಗಳ ಜೊತೆ ಮಾತನಾಡುತ್ತೇನೆ, ಅವರೂ ಒತ್ತಾಯ ಮಾಡುತ್ತಿದ್ದಾರೆ. As far as Railway Projects are concerned, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಕೇಳುವ ಬೆಂಬಲವೆಲ್ಲವನ್ನು ಮಾಡಿಕೊಡುವುದಕ್ಕೆ ತಯಾರಿದ್ದೇವೆ. ಹಾಸನಕ್ಕೆ ಸಂಬಂಧಪಟ್ಟಂತಿರಬಹುದು, ಬೇರೆ ಯಾವುದೇ ಇರಬಹುದು, ಯಾವುದೇ ಯೋಜನೆಗೆ ನಮ್ಮ ಪಾಲಿನ ಹಣ ಕೊಡಲು ತಯಾರಾಗಿದ್ದೇವೆ. ಹಾಸನದ್ದು ಕೂಡ ಕೊಡುತ್ತೇವೆ. Grant-in-aid ವಿಚಾರಕ್ಕೆ ಸಂಬಂಧಪಟ್ಟಂತೆ ಹೇಳಿದ್ದೀರಿ, ಅದನ್ನು ಪರಿಶೀಲನೆ ಮಾಡೋಣ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ದಯವಿಟ್ಟು ಪರಿಶೀಲನೆ ಬೇಡ. ಈ ಅನುದಾನ 4 ಬಜೆಟ್‌ನಲ್ಲಿಯೂ ಘೋಷಣೆಯಾಗಿದೆ. ಇದು regular process. ತಾವು ಕೊಡುತ್ತೇನೆ ಎಂದು ಹೇಳಿದ್ದೀರಿ.

**ಶ್ರೀ ಸಿದ್ದರಾಮಯ್ಯ:–** ನಾವು ಬಂದು 6 ತಿಂಗಳಾಯಿತು.

**ಶ್ರೀ ಪುಟ್ಟಣ್ಣ:–** ಇದು regular process. ತಮಗೆ ಫೈಲ್ ಬಂದಿದೆ, ದಯವಿಟ್ಟು ಮಾಡಿಕೊಡಿ. ಅವರೆಲ್ಲರೂ ವಿಷದ ಬಾಟಲ್ ಹಿಡಿದುಕೊಂಡು ಕುಳಿತಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ನಾನು ಖಾಸಗಿಯಾಗಿಯೂ ಮಾತನಾಡಿದ್ದೇನೆ. ನಾವು ಅದರ ಪರವಾಗಿದ್ದೇವೆ ಎಂದಷ್ಟೇ ಹೇಳುತ್ತೇನೆ. ಅದನ್ನು ತರಿಸಿ ತೀರ್ಮಾನ ಮಾಡುತ್ತೇನೆ. ಆಯಿತಲ್ಲ, ಅದನ್ನೇ ಪದೇ ಪದೇ ಹೇಳಿದರೆ

ಪ್ರಯೋಜನವಾಗುವುದಿಲ್ಲ. ಅದನ್ನು ಪರಿಶೀಲನೆ ಮಾಡಿ ಒಳ್ಳೆಯ ತೀರ್ಮಾನ ಮಾಡಿಸುವ ಕೆಲಸ ಮಾಡುತ್ತೇನೆ.

**ಶ್ರೀಮತಿ ಭಾರತಿಶೆಟ್ಟಿ(ವಿಧಾನಸಭಾ ಕ್ಷೇತ್ರ):–** ಶಾದಿಭಾಗ್ಯ ಯೋಜನೆ.

**ಶ್ರೀ ಸಿದ್ದರಾಮಯ್ಯ:–** ಯಾವುದು ತಾಳಿಭಾಗ್ಯ.

**ಶ್ರೀಮತಿ ಭಾರತಿಶೆಟ್ಟಿ:–** ತಾಳಿಭಾಗ್ಯ ಅಲ್ಲ, ಶಾದಿಭಾಗ್ಯ ಯೋಜನೆ.

**ಶ್ರೀ ಸಿದ್ದರಾಮಯ್ಯ:–** ಬಿದಾಯಿ ಯೋಜನೆ ಇದೆ. ಕುಳಿತುಕೊಳ್ಳಿ.

**ಶ್ರೀಮತಿ ಭಾರತಿಶೆಟ್ಟಿ:–** ಬೆಳಗಾಂನಲ್ಲಿ ಒಂದು ಒಳ್ಳೆಯ ವಿಷಯವನ್ನು ಘೋಷಣೆ ಮಾಡಲಿ.

**ಶ್ರೀ ಸಿದ್ದರಾಮಯ್ಯ:–** ಅದು ಬಜೆಟ್‌ನಲ್ಲಿ ಘೋಷಣೆಯಾದ ಕಾರ್ಯಕ್ರಮ.

**ಶ್ರೀಮತಿ ಭಾರತಿಶೆಟ್ಟಿ:–** ಎಲ್ಲವೂ ಬಜೆಟ್‌ನಲ್ಲಿ ಆದದ್ದು, ಪೂರಕ ಅಂದಾಜಿನಲ್ಲಿ ಘೋಷಣೆ ಮಾಡಿ.

**ಶ್ರೀ ಸಿದ್ದರಾಮಯ್ಯ:–** ದಯಮಾಡಿ ಕುಳಿತುಕೊಳ್ಳಿ, ಎಲ್ಲವನ್ನು ಪೂರಕ ಅಂದಾಜಿನಲ್ಲಿ ಹೇಳುವುದಕ್ಕೆ ಬರುವುದಿಲ್ಲ.

**ಶ್ರೀಮತಿ ಭಾರತಿಶೆಟ್ಟಿ:–** ಅವರು ಮನಸ್ಸು ಮಾಡಿದರೆ ಆಗುತ್ತದೆ, ದಯಮಾಡಿ ಮಾಡಿ, ಇಷ್ಟು ದೊಡ್ಡ ಬಜೆಟ್ ಕೊಟ್ಟವರಿಗೆ ₹ 50 ಕೋಟಿ ಜಾಸ್ತಿಯಾಗುತ್ತದೆಯೇ? ನಾವು ಕಿತ್ತೂರು ಚೆನ್ನಮ್ಮನ ರೀತಿ ಕತ್ತಿ ಹಿಡಿಯಲು ನಮ್ಮ ಹತ್ತಿರ ಕತ್ತಿ ಇಲ್ಲ. ಗಲಾಟೆ ಮಾಡಿದರೂ ಯಾರೂ ಕೇಳುವವರು ಇಲ್ಲ, percentage ಜಾಸ್ತಿ ಇಲ್ಲ. ಸ್ಟ್ರೈಕ್ ಮಾಡಲು ಯಾರೂ ಇಲ್ಲ, ಕೈಜೋಡಿಸಿ ಬೇಡಿಕೊಳ್ಳುತ್ತೇನೆ, ₹ 50 ಕೋಟಿಗಳನ್ನು ಶಾದಿ ಭಾಗ್ಯಕ್ಕೆ ಇಟ್ಟುಬಿಡಲಿ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಮಾನ್ಯ ಯಡಿಯೂರಪ್ಪನವರು ಬೆಂಗಳೂರಿನಲ್ಲಿ ಬಹಳ ಹೋರಾಟ ಮಾಡಿದರು,

ಇಲ್ಲಿಯೂ ಕೂಡ ಹೋರಾಟ ಮಾಡಿದರು. ಈಗ ಅವರೇ ಸುಮ್ಮನಾಗಿಬಿಟ್ಟಿದ್ದಾರೆ, ಇವರು ಬಿಡುತ್ತಿಲ್ಲ.

**ಶ್ರೀಮತಿ ಭಾರತಿಶೆಟ್ಟಿ:–** ನಮ್ಮನ್ನು ಕೇಳುವವರು ಯಾರು? ನಾವು ಏನು ಮಾಡುವುದು? ಮಹಿಳೆಯರು ನಾವು, ಸುಮ್ಮನೆ ಇರುವುದು ಅಷ್ಟೇ.

**ಶ್ರೀ ಸಿದ್ದರಾಮಯ್ಯ:–** ಅವರ ಹೋರಾಟವನ್ನು ಮೆಚ್ಚತಕ್ಕದ್ದೇ ಆಗಿದೆ.

**ಶ್ರೀ ಪುಟ್ಟಣ್ಣ:–** ಚನ್ನಪಟ್ಟಣದ ಶತಮಾನೋತ್ಸವ ಜ್ಯೂನಿಯರ್ ಕಾಲೇಜಿಗೆ ₹ 1 ಕೋಟಿಯನ್ನು ಘೋಷಣೆ ಮಾಡಿದ್ದರು. ಶ್ರೀ ಎಸ್. ಕರಿಯಪ್ಪನವರು, ಸಾಹುಕಾರ್ ಚೆನ್ನಯ್ಯನವರೆಲ್ಲರೂ ಓದಿದಂತಹ ಕಾಲೇಜಾಗಿದೆ. ಹಣ ಬಿಡುಗಡೆ ಆಗಿಲ್ಲ.

**ಶ್ರೀ ಸಿದ್ದರಾಮಯ್ಯ:–** ಆಯಿತು, consider ಮಾಡೋಣ. ಅವರು Centenary Celebration ವಿಚಾರವನ್ನು ಹೇಳುತ್ತಿದ್ದಾರೆ.

**ಶ್ರೀ ಪುಟ್ಟಣ್ಣ:–** ಹೌದು ಸಾರ್, ಶತಮಾನೋತ್ಸವ ಭವನ.

**ಶ್ರೀ ಸಿದ್ದರಾಮಯ್ಯ:–** ಆಯಿತು.

**ಶ್ರೀ ಅಮರನಾಥ ಪಾಟೀಲ್:–** ತೊಗರಿ ಮಂಡಳಿಯನ್ನು strengthen ಮಾಡುವ ಬಗ್ಗೆ ಕೃಷಿ ಸಚಿವರು ಉತ್ತರ ಕೊಟ್ಟಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಇದು ಜನರಲ್ ಬಜೆಟ್ ಅಲ್ಲ, ಕುಳಿತುಕೊಳ್ಳಿ, ನಾನು ತೊಗರಿ ಬೆಳೆ ಬಗ್ಗೆ ಹೇಳಿದ್ದೇನೆ. ಈಗಾಗಲೇ ₹ 4,300 ಅನ್ನು ಕೇಂದ್ರ ಸರ್ಕಾರ MSP (Minimum Support Price) ನಿಗದಿ ಮಾಡಿದೆ. ಮಾನ್ಯ ಜಯಚಂದ್ರರವರ ಅಧ್ಯಕ್ಷತೆಯಲ್ಲಿ ಉಪ ಸಮಿತಿ ಇದೆ. ಅವರಿಗೆ ಚರ್ಚೆ ಮಾಡಿ ತೀರ್ಮಾನ ಮಾಡಲು ಹೇಳಿದ್ದೇನೆ. ಅವರು ಮಾಡುವ ತೀರ್ಮಾನವನ್ನು ಸರ್ಕಾರ ಪರಿಗಣಿಸುತ್ತದೆ ಎನ್ನುವ ಮಾತನ್ನು ಸದನದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಶಾದಿಭಾಗ್ಯದ ಬಗ್ಗೆ ಮುಂದೆ ಪರಿಶೀಲನೆ ಮಾಡುತ್ತೇನೆ.

**ಶ್ರೀಮತಿ ಭಾರತಿಶೆಟ್ಟಿ:–** ಮುಂದೆ ಬೇಡ ಸಾರ್, ಈಗಲೇ ಮಾಡಿ.

**ಸಭಾಪತಿಯವರು:–** ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಈಗಲೇ ಮಾಡಬೇಕೆಂದರೆ ಹಾಗೆ ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀಮತಿ ಭಾರತಿಶೆಟ್ಟಿ:–** ಇಷ್ಟೆಲ್ಲಾ ಮಾಡಿರುವವರಿಗೆ ಅದೊಂದು ಮಾಡುವುದಕ್ಕೆ ಆಗುವುದಿಲ್ಲವೇ?

**ಶ್ರೀ ಸಿದ್ದರಾಮಯ್ಯ:–** ಅವರ ಸಲಹೆಯನ್ನು ಗಂಭೀರವಾಗಿ ಪರಿಶೀಲನೆ ಮಾಡಲಾಗುವುದು.

**ಶ್ರೀಮತಿ ಭಾರತಿಶೆಟ್ಟಿ:–** ಯಾವಾಗ ಎಂದು ಗೊತ್ತಿಲ್ಲ. ನಾನು ಬಜೆಟ್‌ನಲ್ಲಿ ಮಾತನಾಡಿದ್ದೇನೆ ಮತ್ತು ಕಾಗದ ಬರೆದಿದ್ದೇನೆ ಹಾಗೂ ಇವತ್ತು ವಿನಂತಿ ಮಾಡುತ್ತೇನೆ. ಇಲ್ಲದಿದ್ದರೆ ನಾನು ಸಭಾತ್ಯಾಗ ಮಾಡುತ್ತೇನೆ. ಅವರು ಎಲ್ಲರಿಗೂ ಮುಖ್ಯಮಂತ್ರಿಯೇ ಹೊರತು ಒಂದು ಸಮುದಾಯದ ಮುಖ್ಯಮಂತ್ರಿ ಅಲ್ಲ. ಕರ್ನಾಟಕದ ಎಲ್ಲಾ ನಾಗರಿಕರಿಗೆ ಮುಖ್ಯಮಂತ್ರಿ, ಎಲ್ಲರಿಗೂ ಅವಕಾಶ ಮಾಡಿಕೊಡಬೇಕು.

**ಸಭಾಪತಿಯವರು:–** ಅವರು consider ಮಾಡುತ್ತೇನೆ ಎಂದು ಹೇಳಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದರೂ ಗಲಾಟೆ ಮಾಡಿದರೆ ಹೇಗೆ?

**ಶ್ರೀಮತಿ ಭಾರತಿಶೆಟ್ಟಿ:–** ಯಾವಾಗ ಪರಿಶೀಲನೆ ಮಾಡುವುದು? ಯೋಚನೆ ಮಾಡುವುದು? ಅದಲ್ಲ, ಪೂರಕ ಅಂದಾಜಿನಲ್ಲಿ ಇಷ್ಟು ಘೋಷಣೆ ಮಾಡಿದ್ದಾರೆ, ಇಷ್ಟು ಜನರಿಗೆ ನ್ಯಾಯ ದೊರಕಿಸಿಕೊಟ್ಟಿದ್ದಾರೆ. ಮಹಿಳೆಯರಾದ ನಾವೇನು ಅನ್ಯಾಯ ಮಾಡಿದ್ದೇವೆ?

**ಶ್ರೀ ಸಿದ್ದರಾಮಯ್ಯ:–** ಒಂದು ಕಾರ್ಯಕ್ರಮವನ್ನು ಈಗಲೇ ಮತ್ತು ಹೀಗೆ ಮಾಡಬೇಕು ಎಂದು ಒತ್ತಾಯ ಮಾಡುವುದು ಸರಿಯಲ್ಲ.

**ಶ್ರೀಮತಿ ಭಾರತಿಶೆಟ್ಟಿ:-** ಮಾನ್ಯ ಮುಖ್ಯಮಂತ್ರಿಯವರನ್ನು ಕೇಳದೇ ಯಾರನ್ನು ಕೇಳುವುದು? ನಮ್ಮ ಮುಖ್ಯಮಂತ್ರಿ ಹತ್ತಿರ ನಾವು ಕೇಳುತ್ತೇವೆ.

**ಶ್ರೀ ಸಿದ್ದರಾಮಯ್ಯ:-** ನಾವು ಬಡವರ ಪರವಾಗಿದ್ದೇವೆ, ಮಹಿಳೆಯರ ಪರವಾಗಿದ್ದೇವೆ, ಸಾಮಾಜಿಕ ನ್ಯಾಯದ ಪರವಾಗಿದ್ದೇವೆ. ಅದರ ಬಗ್ಗೆ ಯಾವುದೇ ರಾಜಿ ಇಲ್ಲ. ಹೆಣ್ಣುಮಕ್ಕಳ ಮತ್ತು ಅವಕಾಶದಿಂದ ವಂಚಿತರಾದವರ ಪರವಾಗಿದ್ದೇವೆ ಹಾಗೂ ಅಭಿವೃದ್ಧಿ ಪರವಾಗಿದ್ದೇವೆ.

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೇ,

**ಶ್ರೀ ಸಿದ್ದರಾಮಯ್ಯ:-** ಆದರೆ ನಾನು ಮಧುಸೂದನ್ ಪರ ಇಲ್ಲ.

**ಶ್ರೀ ಗೋ.ಮಧುಸೂದನ್:-** ಆದರೆ ನಾನು ಮಾನ್ಯ ಮುಖ್ಯಮಂತ್ರಿಯವರ ಪರವಾಗಿದ್ದೇನೆ. ಬಜೆಟ್‌ನಲ್ಲಿ 'ಅಲ್ಪಸಂಖ್ಯಾತರಿಗೆ' ಎಂದು ಇದ್ದು, ಆದೇಶ ಮಾಡಬೇಕಾದರೆ 'ಅಲ್ಪಸಂಖ್ಯಾತ ಮುಸ್ಲೀಂ ಸಮುದಾಯಕ್ಕೆ ಸೇರಿರುವವರಿಗೆ' ಎಂದು ಇದೆ. ಬಜೆಟ್ ಪುಸ್ತಕವನ್ನು ತೆಗೆದು ನೋಡಲಿ, ಆದರೆ ಆದೇಶದಲ್ಲಿ ಈ ರೀತಿ ಇದೆ.

**ಶ್ರೀ ಸಿದ್ದರಾಮಯ್ಯ:-** ಬಜೆಟ್ ಭಾಷಣದಲ್ಲಿ ಅಲ್ಪಸಂಖ್ಯಾತ ಹೆಣ್ಣುಮಕ್ಕಳ ಮದುವೆಗೆ ಆರ್ಥಿಕ ಸಹಾಯ ಮಾಡುವುದಾಗಿ ಇತ್ತು. ಅದರ ಆದೇಶ ಮಾಡುವಾಗ by oversight ಮುಸ್ಲೀಂ ಜನಾಂಗಕ್ಕೆ ಎಂದು ಆಗಿಬಿಟ್ಟಿತ್ತು.

**ಶ್ರೀ ಗೋ.ಮಧುಸೂದನ್:-** ಸರ್ಕಾರದ ವಿಜ್ಞಾಪನೆಗಳಿದ್ದಾವೆ. ಜೈನ, ಭೌದ್ಧ ಎಂದೆಲ್ಲಾ ಇಲ್ಲ, ಮುಸ್ಲೀಂಮರಿಗೆ ಮಾತ್ರ ಇದೆ.

**ಶ್ರೀ ಸಿದ್ದರಾಮಯ್ಯ:-** ತಾವು ಕುಳಿತುಕೊಳ್ಳಿ, ನಾನು ಹೇಳುತ್ತೇನೆ.

**SRI SIDDARAMAIAH:-** Corrigendum has been issued.

**ಶ್ರೀ ಡಿ.ವಿ.ಸದಾನಂದಗೌಡ:-** ಆ ಹೆಣ್ಣುಮಗಳು ತುಂಬಾ ಕಾಳಜಿಯಿಂದ ಇಡೀ ಹೆಣ್ಣು ಮಕ್ಕಳ ಪರವಾಗಿ ಮಾತನಾಡಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ನಾವೇ ಹೆಣ್ಣು ಮಕ್ಕಳ ಪರವಾಗಿ ಬಹಳ ಇದ್ದೇವೆ.

**ಶ್ರೀ ಡಿ.ವಿ.ಸದಾನಂದಗೌಡ:–** ಇದರಿಂದಾಗಿ ಸರ್ಕಾರದ ಮೇಲಿರುವ ದೊಡ್ಡ ಅಪವಾದ ಕೂಡ ಹೋಗುತ್ತದೆ. ಇವತ್ತೇ ಘೋಷಣೆಯನ್ನು ಮಾಡಿದರೆ ಅದೊಂದು ಅದ್ಭುತವಾಗಿರುವಂತಹ ಘೋಷಣೆಯಾಗಿ ಉಳಿಯುತ್ತದೆ ಎನ್ನುವುದು ನಮ್ಮ ಅಭಿಪ್ರಾಯವಾಗಿದೆ. ಎಲ್ಲರಿಗೂ ಆ ಯೋಜನೆಯನ್ನು ಅನ್ವಯಿಸುತ್ತೇವೆ ಎಂದು ಹೇಳಿದರೆ ಇವತ್ತೆ ಶಾಪ ವಿಮೋಚನೆ ಆಗುತ್ತದೆ.

**ಶ್ರೀ ಸಿದ್ದರಾಮಯ್ಯ:–** ಸನ್ಮಾನ್ಯ ಸಭಾಪತಿಯವರೇ, ನಾನು yield ಆಗಿಯೇ ಇಲ್ಲ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ ಎನ್ನುವುದನ್ನು ಕೇಳೋಣ.

**ಶ್ರೀ ಗೋ.ಮಧುಸೂದನ್:–** ಸನ್ಮಾನ್ಯ ಸಭಾಪತಿಯವರೇ, ಶಾದಿ ಭಾಗ್ಯ ಯೋಜನೆಯನ್ನು ಒಬ್ಬರಿಗೆ ಮಾತ್ರ ಸೀಮಿತಗೊಳಿಸುವುದಿಲ್ಲ, ಎಲ್ಲರಿಗೂ ಅದನ್ನು ಅನ್ವಯಿಸಬೇಕು.

**(ಗೊಂದಲ)**

**ಶ್ರೀ ಬಿ.ರಮಾನಾಥ ರೈ (ಅರಣ್ಯ ಮತ್ತು ಜೈವಿಕ ಪರಿಸರ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಶಾದಿ ಭಾಗ್ಯ ಯೋಜನೆಯ ಬಗ್ಗೆ ನಿನ್ನೆ ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ಸದನಕ್ಕೆ ಬಂದಾಗ ಕೇಳಬೇಕಾಗಿತ್ತು.

**(ಗೊಂದಲ)**

**ಶ್ರೀ ನಸೀರ್ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಹಿಂದೆ ದೇವಸ್ಥಾನಗಳಿಗೆ ಕೊಟ್ಟಾಗ ಇವರು ಯಾಕೆ ಪ್ರಶ್ನೆ ಮಾಡಲಿಲ್ಲ?

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ (ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ನಾವು ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡುತ್ತಿದ್ದೇವೆ. ಅವರು ಯಾಕೆ ಮಧ್ಯೆ ಪ್ರವೇಶ ಮಾಡಬೇಕು. ಮಾನ್ಯ ಸಿದ್ದರಾಮಯ್ಯನವರು ಅವರಿಗೆ ಮಾತ್ರ ಮುಖ್ಯಮಂತ್ರಿಗಳಲ್ಲ. ಎಲ್ಲರಿಗೂ ಮುಖ್ಯಮಂತ್ರಿಗಳಾಗಿದ್ದಾರೆ.

**(ಗೊಂದಲ)**

**ಶ್ರೀ ನಸೀರ್ ಅಹಮದ್:–** ಸನ್ಮಾನ್ಯ ಸಭಾಪತಿಯವರೇ, ಆಗ ಅವರು ಮಾತನಾಡಲಿಲ್ಲ. ಈಗ ಮಾತನಾಡುತ್ತಿದ್ದಾರೆ.

**ಶ್ರೀಮತಿ ಭಾರತಿ ಶೆಟ್ಟಿ:–** ಯಾಕೆ ಮಾತನಾಡಲಿಲ್ಲ. ಆಗಲೂ ಮಾತನಾಡಿದ್ದೆ.

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾರೆ.

**ಶ್ರೀ ಸಿದ್ದರಾಮಯ್ಯ:–** ಸನ್ಮಾನ್ಯ ಸಭಾಪತಿಯವರೇ, ನಾನು ಆಗಿಯೇ yield ಆಗಿಯೇ ಇಲ್ಲ.

**ಶ್ರೀ ಎಸ್.ಆರ್.ಪಾಟೀಲ್ (ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಪೀಠದ ಆದೇಶವನ್ನಾದರೂ ಅವರು ಪಾಲಿಸಬೇಕಾಗುತ್ತದೆ.

**(ಗೊಂದಲ)**

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾರೆ. ಅವರು yield ಆಗುವುದಕ್ಕೆ ಮುಂಚೆ ನೀವುಗಳು ಮಾತನಾಡಿದರೆ ನಾನು ಹೇಗೆ ಸದನವನ್ನು ನಡೆಸಬೇಕು? ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಸಿದ್ದರಾಮಯ್ಯ:–** ಸನ್ಮಾನ್ಯ ಸಭಾಪತಿಯವರೇ, ಸಂವಿಧಾನದಲ್ಲಿ ಅವಕಾಶ ವಂಚಿತರಾಗಿರುವ ಜನರಿಗೆ, ಆರ್ಥಿಕವಾಗಿ ದುರ್ಬಲವಾಗಿರುವ

ಜನರಿಗೆ, ಅಶಕ್ತ ವರ್ಗದ ಜನರಿಗೆ ನಾವು ವಿಶೇಷ ಸವಲತ್ತುಗಳನ್ನು ಕೊಡುವ ಮೂಲಕ ವಿಶೇಷವಾಗಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಶೋಷಣೆಗೆ ಒಳಪಟ್ಟಿದ್ದಾರೆ, ಯಾರು ತಳ ಮುಟ್ಟದ ಜನರಿದ್ದಾರೆ ಆ ವರ್ಗದ ಜನರಿಗೆ ವಿಶೇಷವಾಗಿರುವಂತಹ ಕಾರ್ಯಕ್ರಮಗಳನ್ನು ಮಾಡಬೇಕಾಗುತ್ತದೆ.

**(ಗೊಂದಲ)**

**ಶ್ರೀ ಗೋ.ಮಧುಸೂದನ್:–** ಸನ್ಮಾನ್ಯ ಸಭಾಪತಿಯವರೇ, ಜಾತಿ ಆಧಾರಿತವಾಗಿರಬಾರದು.

**ಶ್ರೀ ಸಿದ್ದರಾಮಯ್ಯ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮಧುಸೂದನ್‌ರವರು ಕುಳಿತುಕೊಳ್ಳಬೇಕು. ಜಾತಿನೂ ಇಲ್ಲ ಯಾವುದೂ ಇಲ್ಲ. ಮಾತನಾಡುವಾಗ ಮಧ್ಯೆ ಬಾಯಿ ಹಾಕುತ್ತಾರೆ.

**(ಗೊಂದಲ)**

**ಶ್ರೀ ಪಿ.ಟಿ.ಪರಮೇಶ್ವರ ನಾಯಕ್ (ಕಾರ್ಮಿಕ ಕಲ್ಯಾಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಜಾತಿ ಭೂತ ಅವರನ್ನು ಕಾಡುತ್ತಿದೆ. ಒಳ್ಳೆ ಜಾತಿ....ಜಾತಿ ಎನ್ನುತ್ತಾರೆ.

**ಸಭಾಪತಿಯವರು:–** ಮಾನ್ಯ ಮಧುಸೂದನ್‌ರವರೇ, ಮಧ್ಯೆ ಬಾಯಿ ಹಾಕಬೇಡಿ. ಕುಳಿತುಕೊಳ್ಳಿ ಮಾನ್ಯ ಮುಖ್ಯಮಂತ್ರಿಗಳು ನಿಂತಿದ್ದಾರೆ.

**(ಗೊಂದಲ)**

**ಶ್ರೀ ಸಯದ್ ಮುಧೀರ್ ಆಗಾ (ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಮತ್ತೊಂದು ಜಾತಿಗೆ ಕೊಟ್ಟಿರುವಂತಹ ಸೌಲಭ್ಯಗಳ ಬಗ್ಗೆ ಪ್ರಶ್ನೆ ಮಾಡುವ ಅಧಿಕಾರ ಅವರಿಗೆ ಇಲ್ಲ.

**(ಗೊಂದಲ)**

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . . . .

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಶ್ರೀನಿವಾಸ ಪೂಜಾರಿಯವರು ಕುಳಿತುಕೊಳ್ಳಬೇಕು ನಾನು ಮಾತನಾಡಿದ ನಂತರ ಅವರು ಮಾತನಾಡಲಿ.

**ಸಭಾಪತಿಯವರು:-** ಮಾನ್ಯ ಶ್ರೀನಿವಾಸ ಪೂಜಾರಿಯವರೇ, ಮಾನ್ಯ ಮುಖ್ಯಮಂತ್ರಿಗಳು ಯೀಲ್ಡ್ ಆಗಿಲ್ಲ ಕುಳಿತುಕೊಳ್ಳಿ.

**ಶ್ರೀ ಸಿದ್ದರಾಮಯ್ಯ:-** ಸನ್ಮಾನ್ಯ ಸಭಾಪತಿಯವರೇ, ನಾನು ಜುಲೈನಲ್ಲಿ ಮಂಡಿಸಿದಂತಹ ಆಯವ್ಯಯದಲ್ಲಿಯೇ ಇದನ್ನು ಹೇಳಿದ್ದೇನೆ. ಸಂವಿಧಾನದಲ್ಲಿ ಇದಕ್ಕೆ ಅವಕಾಶವಿದೆ. ಹಾಗಾದರೆ, ದಲಿತರಿಗೆ, ಹಿಂದುಳಿದವರಿಗೆ ಮತ್ತು ಮಹಿಳೆಯರಿಗೆ ವಿಶೇಷ ಸೌಲಭ್ಯಗಳನ್ನು ಮತ್ತು ಸ್ಕಾಲರ್‌ಶಿಪ್‌ಗಳನ್ನು ಕೊಡುತ್ತೇವೆ. ಹಾಸ್ಟೆಲ್‌ಗಳನ್ನು ಕಟ್ಟಿಕೊಡುತ್ತೇವೆ. ಇದು ಜಾತಿ ಮಾಡಿದ ಹಾಗೆ ಆಗುತ್ತದೆಯೇ? Those who are denied opportunities. . . . .

**ಡಾ:ಎ.ಹೆಚ್.ಶಿವಯೋಗಿಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಕುಳಿತುಕೊಳ್ಳಿ, ಅವರು ಪೂರ್ತಿ ಹೇಳುವುದಕ್ಕೆ ಬಿಡುವುದೇ ಇಲ್ಲ. ಅವರು ತಮ್ಮ ಮಾತುಗಳನ್ನು ಪೂರ್ತಿ ಮಾಡಿದ ಮೇಲೆ ನಿಮಗೆ ಅವಕಾಶವನ್ನು ಕೊಡುತ್ತೇನೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಸನ್ಮಾನ್ಯ ಸಭಾಪತಿಯವರೇ, ನಾನು ಆಯವ್ಯಯದಲ್ಲಿ ಅಲ್ಪ ಸಂಖ್ಯಾತರ ಹೆಣ್ಣು ಮಕ್ಕಳ ಮದುವೆಗಳಿಗೆ ಆರ್ಥಿಕ ಸಹಾಯವನ್ನು ಕೊಡುತ್ತೇವೆಂದು ಹೇಳಿದ್ದೆವು. ಈಗ ಎಲ್ಲ ಅಲ್ಪ ಸಂಖ್ಯಾತ ಹೆಣ್ಣು ಮಕ್ಕಳಿಗೂ ಈ ಯೋಜನೆ ಅನ್ವಯವಾಗುತ್ತದೆ. ಮುಸ್ಲಿಂ ಹೆಣ್ಣು ಮಕ್ಕಳಿಗೆ, ಕ್ರಿಶ್ಚಿಯನ್, ಸಿಖ್, ಬೌದ್ಧ ಮತ್ತು ಜೈನ ಧರ್ಮಗಳಿಗೆ ಸೇರಿದ ಎಲ್ಲ ಹೆಣ್ಣು ಮಕ್ಕಳಿಗೂ ಈ ಸೌಲಭ್ಯ ಸಿಗುತ್ತದೆ.

**ಸಭಾಪತಿಯವರು:-** ಆಮೇಲೆ ತಪ್ಪಾಗಿದೆ ಎಂದು ಅವರು ಹೇಳುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ಸನ್ಮಾನ್ಯ ಸಭಾಪತಿಯವರೇ, ತಿದ್ದೋಲೆಯನ್ನು ಹೊರಡಿಸಲಾಗಿದೆ. ಅದನ್ನು ಅವರುಗಳು ಮತ್ತೊಂದು ಸಾರಿ ನೋಡಿಕೊಳ್ಳಬೇಕಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ತಿದ್ದೋಲೆಯನ್ನು ಹೊರಡಿಸಲಾಗಿದೆ.

**ಶ್ರೀ ಸಿದ್ದರಾಮಯ್ಯ:-** ಸನ್ಮಾನ್ಯ ಸಭಾಪತಿಯವರೇ, ತಿದ್ದೋಲೆಯನ್ನು ಹೊರಡಿಸಲಾಗಿದೆ. ನನ್ನ ಹತ್ತಿರ ಈಗ ಆ ಆದೇಶವಿಲ್ಲ. ಬೇಕಾದರೆ ನಾನು ಅದನ್ನು ಕೊಡುತ್ತೇನೆ.

**(ಗೊಂದಲ)**

**ಡಾ:ಎ.ಹೆಚ್.ಶಿವಯೋಗಿಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಮೊದಲನೆಯ ಬಾರಿ order ಹೊರಡಿಸುವಂತಹ ಸಂದರ್ಭದಲ್ಲಿ 'ಮುಸ್ಲಿಂ ಜನಾಂಗದ ಹೆಣ್ಣು ಮಕ್ಕಳ ವಿವಾಹಕ್ಕೆ' ಎಂದು ನಿರ್ದಿಷ್ಟವಾಗಿ ಯಾಕೆ ಹೇಳಲಾಗಿತ್ತು ಎನ್ನುವುದು ನಮ್ಮ ಪ್ರಶ್ನೆಯಾಗಿದೆ.

**(ಗೊಂದಲ)**

**ಶ್ರೀ ಗೋ.ಮಧುಸೂದನ್:-** ಸನ್ಮಾನ್ಯ ಸಭಾಪತಿಯವರೇ, ಹಾಗಾದರೆ ಅವರು ತಪ್ಪಾಯಿತು ಎಂದು ಕ್ಷಮೆ ಕೇಳಬೇಕಾಗುತ್ತದೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಸನ್ಮಾನ್ಯ ಸಭಾಪತಿಯವರೇ, ಯಾಕೆ ಕ್ಷಮೆ ಕೇಳಬೇಕು? ಈ ರೀತಿ ಮಾತನಾಡುತ್ತಿರುವುದಕ್ಕಾಗಿ ಅವರು ಕ್ಷಮೆ ಕೇಳಬೇಕಾಗುತ್ತದೆ.

**(ಗೊಂದಲ)**

**ಡಾ:ಎ.ಹೆಚ್.ಶಿವಯೋಗಿಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಮುಸ್ಲಿಂ ಹೆಣ್ಣು ಮಕ್ಕಳಿಗೆ ಎಂದು ಯಾಕೆ ಮಾಡಬೇಕಾಗಿತ್ತು? Appease

ಮಾಡುವುದಕ್ಕೆ ನೀವು ಮಾಡಿದ್ದು. Appease ಮಾಡುವ ಹಂತಕ್ಕೆ ಹೋಗಿದ್ದರು. ನಾವು ಪ್ರತಿಭಟನೆ ಮಾಡಿದ ಮೇಲೆ ತಿದ್ದೋಲೆಯನ್ನು ಹೊರಡಿಸಿದ್ದಾರೆ.

**(ಗೊಂದಲ)**

**ಶ್ರೀ ಸಯದ್ ಮುಧೀರ್ ಆಗಾ:-** ಸನ್ಮಾನ್ಯ ಸಭಾಪತಿಯವರೇ, ಈ ದೇಶದಲ್ಲಿ ಮುಸ್ಲಿಂರಿಗೆ ಹಕ್ಕಿಲ್ಲವೇ?

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಈ ದೇಶದಲ್ಲಿ ಎಲ್ಲ ಜಾತಿ, ಮತ ಮತ್ತು ಧರ್ಮದವರಿಗೂ ಹಕ್ಕಿದೆ.

**ಶ್ರೀ ಡಿ.ವಿ.ಸದಾನಂದಗೌಡ:-** ಸನ್ಮಾನ್ಯ ಸಭಾಪತಿಯವರೇ, ಒಂದು ನಿಮಿಷ yield ಆಗಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಸಿದ್ದರಾಮಯ್ಯ:-** ಸನ್ಮಾನ್ಯ ಸಭಾಪತಿಯವರೇ, ಅವರು ಆಮೇಲೆ ಮಾತನಾಡಲಿ.

**ಶ್ರೀ ಡಿ.ವಿ.ಸದಾನಂದಗೌಡ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಸಂವಿಧಾನದಲ್ಲಿ ಒಂದು ಅಂಶವನ್ನು ಉಲ್ಲೇಖ ಮಾಡಿದ್ದಾರೆ. ಆ ಹಿನ್ನೆಲೆಯಲ್ಲಿ ಈ ಒಂದು ವಿಚಾರವನ್ನು ತಾತ್ವಿಕವಾಗಿ ಅಂತಿಮಗೊಳಿಸಬೇಕೆಂದು ನಾನು ಈ ಮಾತನ್ನು ಹೇಳುತ್ತಿದ್ದೇನೆ. ಸಂವಿಧಾನದ ಅನುಚ್ಛೇದ 14 ಮತ್ತು 15 ಏನು ಹೇಳುತ್ತದೆ ಎನ್ನುವುದು ಅವರಿಗೂ ಗೊತ್ತಿದೆ. ಅನುಚ್ಛೇದ 14ರಲ್ಲಿ 'ಕಾನೂನಿನ ಮುಂದೆ ಸಮಾನತೆ' ಎನ್ನುವುದರ ಅಡಿಯಲ್ಲಿ 'ಭಾರತದ ರಾಜ್ಯ ಕ್ಷೇತ್ರದಲ್ಲಿ ಯಾವುದೇ ವ್ಯಕ್ತಿಗೆ ಕಾನೂನಿನಲ್ಲಿ ಸಮಾನತೆ ರಕ್ಷಣೆ ಮಾಡುವುದನ್ನು ನಿರಾಕರಿಸುವುದಲ್ಲ' ಎಂದು ಇದೆ. ಅದೇ ರೀತಿಯಲ್ಲಿ ಅನುಚ್ಛೇದ 15ರಲ್ಲಿ 'ಧರ್ಮ, ಮೂಲವಂಶ, ಜಾತಿ, ಲಿಂಗ ಅಥವಾ ಜನ್ಮಸ್ಥಳದ ಆಧಾರದ ಮೇಲೆ ತಾರತಮ್ಯದ ನಿಷೇಧ' ಎಂದು ಇದೆ.

**ಶ್ರೀ ಖಮರುಲ್ ಇಸ್ಲಾಂ:-** ಸನ್ಮಾನ್ಯ ಸಭಾಪತಿಯವರೇ, ಅವರು ಸೆಕ್ಷನ್ (3)ನ್ನು ನೋಡಬೇಕಾಗುತ್ತದೆ.

**Sri D.V. SADANANDA GOWDA:-** Wait wait. . I know very well. Don't teach me everything. Please sit down.

**(ಗೊಂದಲ)**

**ಸಭಾಪತಿಯವರು:-** ಸಚಿವರು ದಯಮಾಡಿ ಕುಳಿತುಕೊಳ್ಳಬೇಕು.

**(ಗೊಂದಲ)**

**ಶ್ರೀ ಸಯದ್ ಮುಧೀರ್ ಆಗಾ:-** ಸನ್ಮಾನ್ಯ ಸಭಾಪತಿಯವರೇ, ಆ ಅನುಚ್ಛೇದವನ್ನು ಅವರು ಮೊದಲು ಅರ್ಥ ಮಾಡಿಕೊಳ್ಳಬೇಕಾಗಿದೆ.

**ಶ್ರೀ ಡಿ.ವಿ.ಸದಾನಂದಗೌಡ:-** ಸನ್ಮಾನ್ಯ ಸಭಾಪತಿಯವರೇ, the Article 15 of the Constitution of India. . . . .

**(ಗೊಂದಲ)**

**Mr. CHAIRMAN:-** Nothing will go on record. ಒಬ್ಬರಿಗಿಂತ ಹೆಚ್ಚು ಜನರು ಮಾತನಾಡಿದರೆ ಅದು recordಗೆ ಹೋಗತಕ್ಕದ್ದಲ್ಲ. ಅವರು ಸಂವಿಧಾನವನ್ನು ಓದಿದ್ದೆ ತಪ್ಪಾಯಿತೇ?

**(ಗೊಂದಲ)**

**ಶ್ರೀ ಡಿ.ವಿ.ಸದಾನಂದಗೌಡ:-** ಸನ್ಮಾನ್ಯ ಸಭಾಪತಿಯವರೇ, ನಾನು ಕಾನೂನಿನಲ್ಲಿ ಉಲ್ಲೇಖ ಮಾಡಿರುವುದನ್ನು ಓದುತ್ತಿರುವೆ. ನನ್ನ ಸ್ವಂತದ್ದನ್ನು ಓದುತ್ತಿಲ್ಲ.

**(ಗೊಂದಲ)**

**ಶ್ರೀ ನಸೀರ್ ಅಹಮದ್:-** ಸನ್ಮಾನ್ಯ ಸಭಾಪತಿಯವರೇ, ಮಠಗಳಿಗೆ 200 ಕೋಟಿ ರೂಪಾಯಿಗಳನ್ನು ಕೊಡಲಿಲ್ಲವೇ?

(ಗೊಂದಲ)

**ಶ್ರೀ ಡಿ.ವಿ.ಸದಾನಂದಗೌಡ:-** ಸನ್ಮಾನ್ಯ ಸಭಾಪತಿಯವರೇ, ನಾವು ಎಲ್ಲರಿಗೂ ಸಮಾನವಾಗಿ ಕೊಟ್ಟಿದ್ದೇವೆ. ಇವರ ಹಾಗೆ ತಾರತಮ್ಯ ಮಾಡಲಿಲ್ಲ.

(ಗೊಂದಲ)

**ಡಾ:ಎ.ಹೆಚ್.ಶಿವಯೋಗಿಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ವಕ್ಫ್ ಬೋರ್ಡ್‌ಗೆ ಎಷ್ಟು ಕೊಟ್ಟಿದ್ದಾರೆ ಎನ್ನುವುದನ್ನು ನೋಡಬೇಕಾಗಿದೆ. ಅದೆಲ್ಲವನ್ನೂ ಇವರೇ ತಿಂದಿದ್ದಾರೆ.

(ಗೊಂದಲ)

**ಶ್ರೀ ಡಿ.ವಿ.ಸದಾನಂದಗೌಡ:-** ಸನ್ಮಾನ್ಯ ಸಭಾಪತಿಯವರೇ, ವಕ್ಫ್ ಬೋರ್ಡಿಗೆ ಕೊಟ್ಟಿದ್ದ ಅನುದಾನ ಬಡ ಮುಸ್ಲಿಂರಿಗೆ ಸಿಗಲಿಲ್ಲ. ಎಲ್ಲವನ್ನೂ ಇವರಂಥ ರಾಜಕಾರಣಿಗಳು ತಿಂದು ನೀರು ಕುಡಿದಿದ್ದಾರೆ.

(ಗೊಂದಲ)

**ಡಾ:ಎ.ಹೆಚ್.ಶಿವಯೋಗಿಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ವಕ್ಫ್ ಬೋರ್ಡ್‌ಗೆ ಕೊಟ್ಟಿರುವುದನ್ನು ಯಾರಿಗೆ ಕೊಟ್ಟಿದ್ದಾರೆ? ಎಲ್ಲವನ್ನೂ ಅವರೇ ತಿಂದಿದ್ದಾರೆ.

(ಗೊಂದಲ)

**ಶ್ರೀ ಬಿ.ರಮಾನಾಥ್ ರೈ:-** ಸನ್ಮಾನ್ಯ ಸಭಾಪತಿಯವರೇ, ಬಡವರಿಗೆ ಸಹಾಯ ಮಾಡುವ ಕೆಲಸಕ್ಕೆ ಕಾನೂನನ್ನು ಅಡ್ಡ ಹಿಡಿಯುವುದು ಸರಿಯಲ್ಲ. ಇವರು ಎಂತಹ ಜನ ಎನ್ನುವುದು ನನ್ನ ಪ್ರಶ್ನೆಯಾಗಿದೆ.

(ಗೊಂದಲ)

**ಸಭಾಪತಿಯವರು:-** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಅವರು ಏನು ಹೇಳುತ್ತಾರೆ ಎನ್ನುವುದನ್ನು ಕೇಳೋಣ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಅನುಚ್ಛೇದ 14 ಅನ್ನು ಓದಿದ್ದಾರೆ. ಆದರೆ (exceptional) ಅವರು ಓದಲಿಲ್ಲ.

**(ಗೊಂದಲ)**

**ಶ್ರೀ ಡಿ.ವಿ.ಸದಾನಂದಗೌಡ:-** ಸನ್ಮಾನ್ಯ ಸಭಾಪತಿಯವರೇ, ನಾನು ಓದಿದ ಮೇಲೆ ಅವರು ಮಾತನಾಡಲಿ.

**ಸಭಾಪತಿಯವರು:-** ಅದನ್ನು ಸಹ ಓದುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಅವರು ಮಾತನಾಡಲಿ ಎಂದರೆ ನಾನು ಮಾತನಾಡುವೆ.

**(ಗೊಂದಲ)**

**ಶ್ರೀ ಡಿ.ವಿ.ಸದಾನಂದಗೌಡ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಕುಳಿತುಕೊಂಡಿದ್ದಾರೆ. ತಾವು ನನಗೆ ಮಾತನನಾಡಲು ಅವಕಾಶವನ್ನು ನೀಡಿದ್ದೀರಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ ಬಿಡಿ. ಆಮೇಲೆ ನಿಮಗೂ ಅವಕಾಶವನ್ನು ನೀಡುತ್ತೇನೆ.

**ಶ್ರೀ ಡಿ.ವಿ.ಸದಾನಂದಗೌಡ:-** ಸನ್ಮಾನ್ಯ ಸಭಾಪತಿಯವರೇ, ಸಂವಿಧಾನದ ಅನುಚ್ಛೇದ 15ರಲ್ಲಿ 'ಧರ್ಮ, ಮೂಲವಂಶ, ಜಾತಿ, ಲಿಂಗ ಅಥವಾ ಜನ್ಮಸ್ಥಳದ ಆಧಾರದ ಮೇಲೆ ತಾರತಮ್ಯದ ನಿಷೇಧ' ಎಂದು ಇದೆ. ಸಂವಿಧಾನದ ಅನುಚ್ಛೇದ 15ರಲ್ಲಿ

> "ರಾಜ್ಯದ ಯಾವುದೇ ನಾಗರೀಕನ ವಿರುದ್ಧ ಧರ್ಮ, ಮೂಲವಂಶ, ಜಾತಿ, ಲಿಂಗ, ಜನ್ಮಸ್ಥಳ ಅಥವಾ ಅವುಗಳಲ್ಲಿ ಯಾವುದಾದರೂ ಒಂದರ ಆಧಾರದ ಮೇಲೆ ಮಾತ್ರವೇ ಯಾವುದೇ ತಾರತಮ್ಯವನ್ನು ಮಾಡತಕ್ಕದ್ದಲ್ಲ."

ಎಂದಿದೆ. ಧರ್ಮ, ಮೂಲವಂಶ, ಜಾತಿ, ಲಿಂಗ, ಜನ್ಮಸ್ಥಳ ಇತರ ಯಾವುದೇ ಒಂದರ ಆಧಾರದ ಮೇಲೆ ಮಾತ್ರವೇ ಯಾವುದೇ ನಾಗರೀಕನು ಏನೆಲ್ಲಾ ಮಾಡಬಾರದು ಎನ್ನತಕ್ಕಂಥಾದ್ದನ್ನು ಇದರಲ್ಲಿ ಬಹಳ ಸ್ಪಷ್ಟವಾಗಿ ಉಲ್ಲೇಖ ಮಾಡಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು, ನಾವು ತಾರತಮ್ಯ ಮಾಡಲಿಲ್ಲ. ಸಂವಿಧಾನದ ಪ್ರಕಾರ ಇದನ್ನು ಮಾಡಿದ್ದೇವೆ ಎಂದು ಹೇಳಿದರು. Educational ಅಥವಾ employment ಗೆ ಸಂಬಂಧಪಟ್ಟಿದ್ದರಲ್ಲಿ ಮಾತ್ರ ವಿಶೇಷವಾಗಿ ಆ ರೀತಿಯದನ್ನು ಮಾಡಬಹುದೇ ಹೊರತು ಖಂಡಿತವಾಗಿ ಸಂವಿಧಾನದ ಅನುಚ್ಛೇದ 14, 15ರ ಪ್ರಕಾರ ಈ ರೀತಿ ಮಡುವಂಥಾದ್ದು ಸಂವಿಧಾನ ವಿರೋಧಿಯಾದಂಥ ಒಂದು ಕಾರ್ಯ. ನಿಜವಾಗಿ ಇದು ಯಾವುದೋ ಒಂದು ಸಮುದಾಯವನ್ನು please ಮಾಡಲಿಕ್ಕೆ ಬೇಕಾದಂಥ ಕೆಲಸ–ಕಾರ್ಯಗಳು ಇದರಲ್ಲಿ ಆಗಿದೆ. ಈಗ ಕೂಡ ನಾವು ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇವೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಇಲ್ಲಿದ್ದಾರೆ. Supplimentary Budgetನಲ್ಲಿ ಒಂದಷ್ಟು ಹೆಚ್ಚುವರಿ ಹಣವನ್ನು ಕೊಟ್ಟಿದ್ದಾರೆ. ಇವತ್ತು ಕೂಡ 'ಬಿದಾಯಿ ಯೋಜನೆ' ಯನ್ನು ವಿಸ್ತರಣೆ ಮಾಡಬೇಕು. ಎಲ್ಲಾ ವರ್ಗಗಳಲ್ಲಿಯು, ಎಲ್ಲಾ ಜಾತಿಗಳಲ್ಲಿಯೂ ಮತ್ತು ಎಲ್ಲಾ ಧರ್ಮಗಳಲ್ಲಿಯೂ ಸಹ ಬಡವರು ಇದ್ದೇ ಇದ್ದಾರೆ. ಎಲ್ಲಾ ವರ್ಗಗಳಲ್ಲಿಯೂ ಬಡವರಿದ್ದಾರೆ. ಯಾವುದೋ ಒಂದು ವರ್ಗದಲ್ಲಿ ಬಡವರಿದ್ದಾರೆಂದು ಮಾಡಿಕೊಂಡು ಅದರ ಹಿಂದೆ ಹೋಗುವಂಥಾದ್ದು ಸರಿಯಲ್ಲ. ಕೇವಲ ಅಲ್ಪಸಂಖ್ಯಾತರಲ್ಲಿ ಮಾತ್ರ ಬಡವರಿದ್ದಾರೆಂದು ಮಾಡಿಕೊಂಡು ಹೋಗುವಂಥಾದ್ದು ಸರಿಯಲ್ಲ. ಕರ್ನಾಟಕ ರಾಜ್ಯದಲ್ಲಿರುವಂಥ ಎಲ್ಲಾ ಬಡ ಹೆಣ್ಣು ಮಕ್ಕಳಿಗೆ ಕೊಡುವಂಥಾದ್ದು ನಿಜವಾದಂಥ ಸರ್ಕಾರದ ಒಂದು ಜವಾಬ್ದಾರಿಯಾಗಿದೆ ಮತ್ತು ಒಬ್ಬ ಮುಖ್ಯಮಂತ್ರಿಯ ಜವಾಬ್ದಾರಿಯಾದ ಕಾರಣ ಇದನ್ನು ಅವರು ಎಲ್ಲರಿಗೂ extension ಮಾಡಬೇಕೆಂದು ನಮ್ಮ ಒಂದು ಆಗ್ರಹವಾಗಿದೆ. ಇವತ್ತು ಸಪ್ಲಿಮೆಂಟರಿ ಬಜೆಟ್‌ನಲ್ಲಿ 50 ಕೋಟಿ ರೂಪಾಯಿಗಳ ಒಂದು ಟೋಕನ್ ಅನ್ನು ಇಡಲಿ ಮತ್ತು ಎಲ್ಲರಿಗೂ ಈ ಯೋಜನೆಯನ್ನು extension ಮಾಡಿದ್ದೇವೆ ಎನ್ನುವ ಮಾತನ್ನು ಹೇಳಲಿ. ಆ ಮೂಲಕ ಸರ್ವ ಜನರನ್ನು

ಸಮಭಾವದಿಂದ ನೋಡಿದ್ದೇವೆ ಎಂದು ಹೇಳುವಂಥ ಭಾವನೆಗಳನ್ನು ಮುಖ್ಯಮಂತ್ರಿಗಳು ಗೌರವಯುತವಾಗಿ ಮಾಡಬೇಕು ಎನ್ನುವಂಥ ಆಗ್ರಹವನ್ನು ನಾನು ಮಾಡುತ್ತೇನೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ನಾನು ಈಗಾಗಲೇ ಹೇಳಿದ್ದೇನೆ. ನಾವು ಬೇರೆ ವರ್ಗದ ಬಡವರ ಬಗ್ಗೆ ವಿರುದ್ಧವಾಗಿದ್ದೇವೆ ಎಂದು ಅಲ್ಲ ಅಥವಾ ಇನ್ನೊಂದು ಧರ್ಮದ ಜನರ ವಿರುದ್ಧವಾಗಿದ್ದೇವೆ ಎಂದು ಅಲ್ಲ. ಈಗ ಬಜೆಟ್‌ನಲ್ಲಿ ನಾನು ಈ ಕಾಯಕ್ರಮವನ್ನು ಘೋಷಣೆ ಮಾಡಿದ್ದೇನೆ ಮತ್ತು ಹಾಗೆ ಘೋಷಣೆ ಮಾಡಲಿಕ್ಕೆ ಆದೇಶವನ್ನು ಹೊರಡಿಸಿದ್ದೇನೆ. ಆದೇಶವನ್ನು ಹೊರಡಿಸಿದ ಮೇಲೆ ಅದು ತಪ್ಪಾಗಿತ್ತು. ಕಾರ್ಯ ಜಾರಿಗೆ ಬಂದ ಮೇಲೆ ಈಗ ಎಲ್ಲಾ ಅಲ್ಪಸಂಖ್ಯಾತರಿಗೂ ಎಂದು extend ಮಾಡಿ ಆದೇಶವನ್ನು ಹೊರಡಿಸತಕ್ಕಂಥಾದ್ದು ಆಗಿದೆ. ಇವರು ಸಂವಿಧಾನದ ಅನುಚ್ಛೇದ 15ನ್ನು ಓದಿದರು. ಸಂವಿಧಾನದ ಅನುಚ್ಛೇದ 15(4)ನ್ನು ಓದಲಿಲ್ಲ.

> "15 (3) Nothing in this article shall prevent the state from making any special provision for women and children.
>
> 15 (4) Nothing in this article or in clause 2 of article 29 shall prvent the state from making any special provision for the advancement of any socially and educationally backward classes of citizens or for the Scheduled Castes and Scheduled Tribes."

ಎಂದು ಇದೆ. Special Provision ಮಾಡಬಾರದು ಎಂದು ಎಲ್ಲಿದೆ?

**ಶ್ರೀ ಡಿ.ವಿ.ಸದಾನಂದಗೌಡ:-** ಮಾನ್ಯ ಸಭಾಪತಿಯವರೆ, ಎಸ್‌ಸಿ-ಎಸ್‌ಟಿಗೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಮಾತ್ರ ಇರುವುದು, ಬೇರೆ ಯಾರಿಗೂ ಇಲ್ಲ.

**Sri SIDDARAMAIAH:-** Backward Classes ಎಂದು ಇದೆ.

**Sri B.J.PUTTASWAMY:-** Backward Classes not for class. Reservation for Classes.

**ಸಭಾಪತಿಯವರು:-** ಮಾನ್ಯ ಪುಟ್ಟಸ್ವಾಮಿಯವರೆ, ನಿಮ್ಮ ನಾಯಕರು ಮಾತನಾಡುತ್ತಿದ್ದಾರೆ, ಕುಳಿತುಕೊಳ್ಳಿ.

**ಶ್ರೀ ಸಿದ್ದರಾಮಯ್ಯ:-** ಮಂಡಲ್ ಕಮಿಶನ್ ವರದಿಯನ್ನು ಓದಿ.

**Sri D.V.SADANANDA GOWDA:-** Constitution is supreme, not Mandal Commission. ಇದರ ಆಧಾರದ ಮೇಲೆ ರಾಜ್ಯಭಾರವನ್ನು ಮಾಡಬೇಕು.

**ಶ್ರೀ ಸಿದ್ದರಾಮಯ್ಯ:-** ಮಂಡಲ್ ಕಮಿಶನ್ ವರದಿಯಲ್ಲಿ ಜಾತಿ ಆಧಾರದ ಮೇಲೆ ಮೀಸಲಾತಿಯನ್ನು ಕೊಟ್ಟಿರುವಂಥಾದ್ದು.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಜಾತಿಗಳಿಗೆ, ವರ್ಗಗಳಿಗೆ ಎಂದು ಇದೆ.

**Sri SIDDARAMAIAH:-** Sir, I am not yielding.

**Mr. CHAIRMAN:-** He is not yielding. ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಡಿ.ವಿ.ಸದಾನಂದಗೌಡ:-** ಮಾನ್ಯ ಸಭಾಪತಿಯವರೆ, ಸಂವಿಧಾನವನ್ನು ಈ ರೀತಿ ತಿರುಚಿ ಮಾತನಾಡುವಾಗ I am not yielding ಎಂದರೆ ಹೇಗೆ? ಅವರು ಸಂವಿಧಾನವನ್ನೇ ತಿರುಚಿ ಹೇಳುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ನೀವು ಆಮೇಲೆ ಹೇಳಿ.

**ಡಾ|| ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು):–** ಮಾನ್ಯ ಸಭಾಪತಿಯವರೆ, ಜಸ್ಟೀಸ್ ರಾಜೇಂದ್ರ ಸಚಾರ್‌ರವರು ದೇಶದ ಅಲ್ಪಸಂಖ್ಯಾತರ ಸ್ಥಿತಿಗತಿ ಬಗ್ಗೆ ಅಧ್ಯಯನ ಮಾಡಿ ಒಂದು ವರದಿಯನ್ನು ಕೊಟ್ಟಿದ್ದಾರೆ. ಶೇಕಡ 98ರಷ್ಟು ಅಲ್ಪಸಂಖ್ಯಾತರ ಮಕ್ಕಳು ಎಸ್.ಎಸ್.ಎಲ್.ಸಿ. ಯಲ್ಲಿ ಪಾಸಾಗಿಲ್ಲ. ಔದ್ಯೋಗಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ... ಜಸ್ಟೀಸ್ ರಾಜೇಂದ್ರ ಸಚಾರ್‌ರವರು ಕೇಂದ್ರ ಸರ್ಕಾರಕ್ಕೆ ಒಂದು ವರದಿಯನ್ನು ಕೊಟ್ಟಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಚಿವರೆ, ಮಾನ್ಯ ಮುಖ್ಯಮಂತ್ರಿಗಳಿಗೆ ಮಾತನಾಡುವುದಕ್ಕೆ ಬಿಡಿ. ದಯಮಾಡಿ ಕುಳಿತುಕೊಳ್ಳಿ.

**ಡಾ|| ಹೆಚ್.ಸಿ.ಮಹದೇವಪ್ಪ:–** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದವರನ್ನು ಕೂರಿಸಿ. ಮಾನ್ಯ ಮುಖ್ಯಮಂತ್ರಿಗಳು ಮಧ್ಯದಲ್ಲಿ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿಲ್ಲ. ಮುಖ್ಯಮಂತ್ರಿಗಳು ಮಾತನಾಡುವಾಗ ಅವರು ಏಕೆ ಮಧ್ಯದಲ್ಲಿ ಎದ್ದು ನಿಂತು ಮಾತನಾಡಬೇಕು.

**ಶ್ರೀ ಡಿ.ವಿ.ಸದಾನಂದಗೌಡ:–** ಮಾನ್ಯ ಸಭಾಪತಿಯವರೆ, ಅವರಿಗೆ ಶೈಕ್ಷಣಿಕ ಸಂಸ್ಥೆ ಮತ್ತೊಂದು ಸ್ಥಾಪನೆ ಮಾಡವುದಕ್ಕೆ, ಕೊಡುವುದಕ್ಕೆ ಬೇಡವೆಂದು ಹೇಳುವುದಿಲ್ಲ. ಸಂವಿಧಾನದ ಅನುಚ್ಛೇದ 29ರಲ್ಲಿ ಭಾರತದ ರಾಜ್ಯ ಕ್ಷೇತ್ರದ ಅಥವಾ ಯಾವುದೇ ಭಾಗದಲ್ಲಿ ವಾಸವಾಗಿರುವ ಯಾವುದೇ ವಿಭಾಗ ತನ್ನದೇ ಆದಂಥ ವಿಭಿನ್ನ ಭಾಷೆ, ಲಿಪಿ ಅಥವಾ ಸಂಸ್ಕೃತಿಯನ್ನು ಹೊಂದಿದ್ದರೆ, ಆ ವಿಭಾಗವನ್ನು ರಕ್ಷಿಸುವಂಥ ಹಕ್ಕನ್ನು ಹೊಂದಿರತಕ್ಕಂತಾದ್ದು. ರಾಜ್ಯವು ನಿರ್ವಹಿಸುವ ಅಥವಾ ರಾಜ್ಯ ನಿಧಿಯಿಂದ ನೆರವನ್ನು ಪಡೆಯುವ ಯಾವುದೇ ಶೈಕ್ಷಣಿಕ ಸಂಸ್ಥೆಗಳಿಗೆ ಇದು ಹೊರತು ಬೇರೆಯದಕ್ಕಲ್ಲ. ಧರ್ಮ, ಮೂಲ ವಂಶ ಈ ತರಹ ಯಾವುದಾದರೂ ಒಂದರ ಆಧಾರದ ಮೇಲೆ ಮಾತ್ರವೇ... ಎಂದು ಹೇಳುತ್ತಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಸಂವಿಧಾನ ತಿದ್ದುಪಡಿಯಾಗಿ ಸಂವಿಧಾನ ಅನುಚ್ಛೇದ 15(4) ಮತ್ತು 16(4) insert ಆಯಿತು. ಅದನ್ನೇ ನಾನು ಓದಿ ಹೇಳಿದ್ದು. Article 15(4) Says that

> "Nothing in this article or in clause 2 of article 29 shall prevent the state from making any special provision for the advancement of any socially and educationally backward classes of citizens or for the Scheduld Castes and Scheduled Tribes"

ಎಂದು ಇದೆ. ನಾವು ಅದನ್ನೇ ಮಾಡಿರುವುದು.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಅದರಲ್ಲಿ classes ಎಂದು ಹೇಳಿದ್ದಾರೆ.

**Sri SIDDARAMAIAH:-** Interpretation is or for the Scheduled Caste and Scheduled Tribes". Backward classes ಅಂದರೆ ಯಾರು socially and educationally backward ಇರುತ್ತಾರೆ, ಅವರೆಲ್ಲರೂ Backward Classes. ಆದ್ದರಿಂದ ನಾವು ಸಂವಿಧಾನದ ಬಗ್ಗೆ ಚರ್ಚೆ ಮಾಡೋಣವೆಂದರೆ ಒಂದು ಪ್ರತ್ಯೇಕವಾದ ಚರ್ಚೆಯನ್ನು ಮಾಡೋಣ.

**ಶ್ರೀ ಗೋ.ಮಧೂಸೂದನ್:-** ಪ್ರತ್ಯೇಕವಾದ ಚರ್ಚೆಯಲ್ಲ, ಮೂಗಿನ ತುದಿಗೆ ಬೆಣ್ಣೆಯನ್ನು ಹಚ್ಚುವುದಲ್ಲ.

**ಶ್ರೀ ಸಿದ್ದರಾಮಯ್ಯ:-** ದಯಮಾಡಿ ಕುಳಿತುಕೊಳ್ಳಿ. ನಾನು ಮಾತನಾಡವಾಗ ಮಧ್ಯದಲ್ಲಿ ಏಕೆ ಎದ್ದು ನಿಂತು ಮಾತನಾಡುತ್ತೀರಿ.

ಮಾನ್ಯ ಸಭಾಪತಿಯವರೆ, ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಇದನ್ನು ನಾವು ಸಂವಿಧಾನದ ರೀತಿ ಮಾಡಿದ್ದೇವೆ. ಸಂವಿಧಾನದ ರೀತಿ ಇದಕ್ಕೆ ಅವಕಾಶವಿದೆ. ಹಾಗಾದರೆ ನಾವು ಹಿಂದುಳಿದ ವರ್ಗದವರಿಗೆ,

ಅಲ್ಪಸಂಖ್ಯಾತರಿಗೆ ಹಾಸ್ಟೆಲ್‌ಗಳನ್ನು ಕೊಡುತ್ತೇವೆ. You mean to say that it is against the provisions of the Constitution.

(ಗೊಂದಲ)

Economically ಕೊಡಬಾರದು ಎಂದು ಎಲ್ಲಿದೆ? ನಾವು scholarship ಕೊಡುತ್ತೇವೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಎಸ್‌ಸಿ-ಎಸ್‌ಟಿಗೆ ಇದೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಅಲ್ಪಸಂಖ್ಯಾತರಿಗೆ, ಹಿಂದುಳಿದವರಿಗೆ ಮತ್ತು ಮಹಿಳೆಯರಿಗೂ ಸಹ ಕೊಡುತ್ತೇವೆ.

**ಸಭಾಪತಿಯವರು:-** ಎಲ್ಲರಿಗೂ ಕೊಡುತ್ತೇವೆಂದು ಹೇಳಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಆದ್ದರಿಂದ Article 15, 16 will not come in the way. ಆದ್ದರಿಂದ ನಾವು ಕೊಟ್ಟಿರತಕ್ಕಂಥಾದ್ದು ಸಂವಿಧಾನದ ವಿರುದ್ಧವಾಗಿದೆ ಎಂದರೆ let them go to the court. Let them challenge it. If it is against the provisions of the… ನಾವು ಸಂವಿಧಾನಕ್ಕೆ ಬದ್ಧವಾಗಿ ಕೊಟ್ಟಿದ್ದೇವೆ. Article 14, 15, 16, 29 ಎಲ್ಲದಕ್ಕೂ ಇದೆ. Directive Principles' of the Constitution ಗೆ ಅನುಗುಣವಾಗಿ ಕೊಟ್ಟಿದ್ದೇವೆ. ಎಲ್ಲರೂ ಎದ್ದು ನಿಂತರೆ ಹೇಗೆ ಮಾತನಾಡುವುದು?

(ಗೊಂದಲ)

**(ಈ ಹಂತದಲ್ಲಿ ವಿರೋಧ ಪಕ್ಷ ಮತ್ತು ಆಡಳಿತ ಪಕ್ಷದ ಸದಸ್ಯರು ಎದ್ದು ನಿಂತು ಒಟ್ಟಿಗೆ ಮಾತನಾಡುತ್ತಿದ್ದರು)**

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಸಮಾಜವನ್ನು ಒಡೆಯತಕ್ಕಂಥವರು ಇವರು. ಜಾತಿಯ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ ಜಾತಿಯನ್ನು ಒಡೆಯುವವರು ಇವರು. ನಾವು ಸಮಾಜವನ್ನು

ಒಗ್ಗೂಡಿಸತಕ್ಕಂಥವರು. ಎಲ್ಲರನ್ನು ಒಟ್ಟಿಗೆ ತೆಗೆದುಕೊಂಡು ಹೋಗಬೇಕೆನ್ನುವವರು ನಾವು.

**(ಗೊಂದಲ)**

**ಡಾ॥ಎ.ಹೆಚ್.ಶಿವಯೋಗಿಸ್ವಾಮಿ:-** ಮುಸ್ಲಿಂ ಪುಷ್ಟೀಕರಣ ಮಾಡುವಂಥಾದ್ದು, ಅಲ್ಪಸಂಖ್ಯಾತರನ್ನು ಓಲೈಸುವಂಥಾದ್ದು. ಒಂದು ಜಾತಿಯನ್ನು ಓಲೈಸುವಂಥಾದ್ದು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ತಮ್ಮ ಸ್ಥಾನದಿಂದ ಎದ್ದು ನಿಂತರು)**

**ಶ್ರೀ ಸಿದ್ದರಾಮಯ್ಯ:-** ನೀವು ಸಮಾಜವನ್ನು ಒಡೆಯುವವರು. ಜಾತಿವಾದಿಗಳು, ಕೋಮುವಾದಿಗಳು. ಸಮಾಜದಲ್ಲಿ ಇವರು ಅದನ್ನು ಮಾಡತಕ್ಕಂಥವರು.

**ಡಾ॥ ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೆ, vote bank politics ಮಾಡತಕ್ಕಂಥಾದ್ದು ಇವರು.

**ಶ್ರೀ ಸಿದ್ದರಾಮಯ್ಯ:-** ಜಾತಿ ಜಾತಿಗಳನ್ನು ಎತ್ತಿ ಕಟ್ಟತಕ್ಕಂಥವರು.

**(ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದರು)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, walk out ಮಾಡುವುದಕ್ಕೆ ಅವರಿಗೆ ಒಂದು ನೆಪ ಬೇಕು. (ಬಿಜೆಪಿ ಸದಸ್ಯರನ್ನು ಕುರಿತು) ಯಾವ ಧರ್ಮದವರು ಇರಬಾರದು, ಯಾರು ಬಡವರು ಇರಬಾರದು. ಬಡವರ ವಿರೋಧಿಗಳು ನೀವು. ಹಿಂದುಳಿದ ವರ್ಗದವರ ವಿರೋಧಿ ನೀವು. ಅಲ್ಪಸಂಖ್ಯಾತರ ವಿರೋಧಿಗಳು ನೀವು.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ:-** ಸಂವಿಧಾನದ ವಿರೋಧಿಗಳು ನೀವು. ಎಲ್ಲಾ ವರ್ಗದವರು, ಜಾತಿಯವರು ಇಲ್ಲಿದ್ದಾರೆ.

**(ಗೊಂದಲ)**

ಈ ದೇಶದಲ್ಲಿ ಎಲ್ಲರಿಗೂ ಇರುವುದಕ್ಕೆ ಅವಕಾಶ ಇದೆ. . . .

**(ಗೊಂದಲ)**

**ಸಭಾಪತಿಗಳು:–** ಎಲ್ಲರೂ ಕುಳಿತುಕೊಳ್ಳಿ. ವಿರೋಧ ಪಕ್ಷದ ನಾಯಕರು ಮತ್ತು ಇತರ ಸದಸ್ಯರು ಸಭಾತ್ಯಾಗ ಮಾಡಿ ಹೊರಗೆ ಹೋಗಿದ್ದಾರೆ. ಅವರಿಗೆ ಕೇಳಿಸುತ್ತದೆಯೋ ಇಲ್ಲವೋ ಗೊತ್ತಿಲ್ಲ, ನಾನು ಸರ್ಕಾರದ ಪರವಾಗಿ ಮತ್ತು ಕುರ್ಚಿಯ ಪರವಾಗಿ, ಸದನಕ್ಕೆ ವಾಪಸ್ಸು ಬಂದು ಧನವಿನಿಯೋಗ ವಿಧೇಯಕಕ್ಕೆ ಒಪ್ಪಿಗೆ ಕೊಟ್ಟು ಒಂದು ಸಂಪ್ರದಾಯವನ್ನು ನಿರ್ಮಾಣ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟರ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಾರೋ ಅದರಂತೆ ನಾನು ಮಾಡುತ್ತೇನೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಗಳೆ, ನಾನಿದನ್ನು ಮುಗಿಸಿಬಿಡುತ್ತೇನೆ. ಸಾಮಾನ್ಯವಾಗಿ ಈ ಫೈನಾನ್ಸ್ ಬಿಲ್‌ಗೆ . . .

**ಶ್ರೀ ಎಂ.ಸಿ.ನಾಣಯ್ಯ:–** ಒಂದು ನಿಮಿಷ. ಇವತ್ತು ಪೂರಕ ಅಂದಾಜಿಗೆ ಸಂಬಂಧಪಟ್ಟಿರತಕ್ಕ ಒಂದು ಮಸೂದೆಯನ್ನು ತಂದು ಚರ್ಚೆ ಮಾಡುತ್ತಿದ್ದೇವೆ. ನಾನೀಗ ಸರ್ಕಾರದ ಪರವಾಗಿ ಮಾತನಾಡುತ್ತಿದ್ದೇನೆ ಎಂದು ಯಾರೂ ಭಾವಿಸುವುದು ಬೇಡ. ಮಾನ್ಯ ಮುಖ್ಯಮಂತ್ರಿಗಳು ಮುಂಗಡ ಪತ್ರದಲ್ಲಿ ಒಂದು ಹೇಳಿಕೆಯನ್ನು ಮಾಡುವಾಗ... ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆದಮೇಲೆ ಮಾತ್ರವಲ್ಲ, ಅಲ್ಪಸಂಖ್ಯಾತರು, ಹಿಂದುಳಿದ ವರ್ಗದವರು, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದವರು ಎನ್ನುವುದನ್ನು ಹಿಂದಿನ ಬಜೆಟ್‌ನಲ್ಲೂ ಮೂರು ಪ್ರತ್ಯೇಕ ಕಂಡಿಕೆಗಳಲ್ಲಿ ಬೇರೆ ಬೇರೆಯಾಗಿ ತಂದಿದ್ದರು. ಮಾನ್ಯ ಸದಾನಂದಗೌಡರು, ಮಾನ್ಯ ಜಗದೀಶ್‌ಶೆಟ್ಟರು ಮತ್ತು ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ತಮ್ಮ ಮುಂಗಡ ಪತ್ರದಲ್ಲಿ ಈ ಮೂರು ವರ್ಗಗಳಿಗೆ ಸಹಕಾರ–ಸೌಲಭ್ಯಗಳನ್ನು, ಯೋಜನೆಗಳನ್ನು ಮಾಡಬೇಕು ಎಂಬುದನ್ನು ತಂದಿದ್ದರು. ಅದಾದ ಮೇಲೆ ಮಾನ್ಯ ಸಿದ್ದರಾಮಯ್ಯನವರು

ಅದನ್ನು ಮುಂದುವರೆಸಿಕೊಂಡೇ ಬಂದರು. ಅವರು ಬಜೆಟ್‌ನಲ್ಲಿ, ಅಲ್ಪಸಂಖ್ಯಾತರ ನಿಗಮದಲ್ಲಿ ಪಡೆದುಕೊಂಡಿರುವ ಎಲ್ಲಾ ಸಾಲವನ್ನು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ನಿಗಮದಿಂದ ಪಡೆದುಕೊಂಡಿರುವ ಸಾಲವನ್ನು ಹಿಂದುಳಿದ ವರ್ಗದವರು ಅವರ ನಿಗಮದಿಂದ ಪಡೆದುಕೊಂಡಿರುವ ಎಲ್ಲಾ ಸಾಲವನ್ನು ಮನ್ನಾ ಮಾಡುವ ನಿರ್ಣಯ ಕೈಗೊಂಡರು. ಹಿಂದಿನ ಮಾನ್ಯ ಯಡಿಯೂರಪ್ಪನವರ ಸರ್ಕಾರ ಈ ಕೆಲಸವನ್ನು ಮಾಡಲಿಲ್ಲವೇ? ಶಾದಿ ಮಹಲ್ ಕಟ್ಟುವುದಕ್ಕೆ, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಪ್ರತಿಯೊಂದು ಜನಾಂಗಕ್ಕೆ ಸೌಲಭ್ಯ ಕೊಡುವ ವಿಚಾರವನ್ನು ತಮ್ಮ ಬಜೆಟ್‌ನಲ್ಲಿ ಹಾಕಿದ್ದರು. ಈ ರಾಜ್ಯದಲ್ಲಿರುವ ಎಲ್ಲಾ ಜಾತಿಗಳವರನ್ನು ಹುಡುಕಿ ಹುಡುಕಿ ಎಲ್ಲವನ್ನೂ ಕೊಡುವ ಪದ್ಧತಿ ನಿರ್ಮಾಣ ಮಾಡಿದವರು ಮಾನ್ಯ ಯಡಿಯೂರಪ್ಪನವರು. ಆಗ ಯಾರೂ ಮಾತನಾಡುವುದಕ್ಕೆ ಹೋಗಲಿಲ್ಲ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಆ ಮೂರು ವರ್ಗಗಳಿಗೆ ಕೊಟ್ಟಿರುವ ಸಂದರ್ಭದಲ್ಲಿ, ಅಲ್ಪಸಂಖ್ಯಾತ ಮುಸಲ್ಮಾನ ಜನಾಂಗ ಎಂದು ಹೇಳಿಲ್ಲ ಎಂಬ ಒಂದು ಮಾತನ್ನು ಹೇಳಿದರು. ಅಲ್ಪಸಂಖ್ಯಾತ ಜನಾಂಗಲ್ಲಿರುವಂತಹ ಹಿಂದುಳಿದ ಹೆಣ್ಣು ಮಕ್ಕಳಿಗೆ ಮದುವೆ ಮಾಡುವ ಸಂದರ್ಭದಲ್ಲಿ ಸರ್ಕಾರ ಧನ ಸಹಾಯ ಮಾಡುವಂಥದ್ದು ಒಂದು ಯೋಜನೆಯಾಗಿದೆ. ಇಲ್ಲಿ, ಜಾತಿ ಬೇಡ, ಲಿಂಗ ಬೇಡ, ಮತ ಬೇಡ, ಅದು ಬೇಡ ಇದು ಬೇಡ ಎಂದು ರಾಜ್ಯಾಂಗದ ಬಗ್ಗೆ ಇಷ್ಟೆಲ್ಲ ಮಾತನಾಡಿದರು. ಈಗೇನು ಮಾತುಕತೆ ಆಯಿತೋ ಅದರಲ್ಲಿ ಜಾತಿಗಳನ್ನು, ಧರ್ಮಗಳನ್ನು ಒಡೆಯುವಂತಹ ಕೆಲಸವನ್ನು ಮಾತಿನ ಮೂಲಕ ಮಾಡಿದವರು ಯಾರು? ನಾನು ಎಲ್ಲಾ ಮಾತುಗಳನ್ನು ಕೇಳಿಕೊಂಡು ಸುಮ್ಮನೆ ಕುಳಿತುಕೊಂಡಿದ್ದೆ. ಹೀಗೆ ಮಾತನಾಡಿದ್ದರ ಉದ್ದೇಶವೇನು? ಇದರ ಉದ್ದೇಶ ಮುಂದೆ ಬರುತ್ತಿರುವ ಹಾಳು ಚುನಾವಣೆ, ಹಾಳು ಅಧಿಕಾರ, ಹಾಳು ರಾಜಕಾರಣ, ಈ ಕಾರಣದಿಂದಲೇ ಅಲ್ಲವೇ ಹೀಗೆಲ್ಲಾ ಮಾತನಾಡುತ್ತಿರುವುದು? ಇಂಥದ್ದು ನಿಲ್ಲುವಂತಹದ್ದಲ್ಲ, ನಿರಂತರವಾಗಿ ನಡೆಯುತ್ತಿರುತ್ತದೆ. ಕೇಂದ್ರ ಸರ್ಕಾರದವರು ಅಲ್ಪಸಂಖ್ಯಾತ ಮುಸಲ್ಮಾನ ಜನಾಂಗಕ್ಕೆ ಸಂಬಂಧಪಟ್ಟಂತೆ

ಸಾಚಾರ್ ಕಮಿಷನ್ ಎಂಬುದನ್ನು ಮಾಡಲಿಲ್ಲವೇ? ಏಕೆ ಮಾಡಿದರು? ಇವರು ಕೊಟ್ಟ ವರದಿಯನ್ನು ಪಾರ್ಲಿಮೆಂಟ್‌ನಲ್ಲಿ ಚರ್ಚೆ ಮಾಡಿದರು. ಅಲ್ಲಿ ಚರ್ಚೆ ನಡೆಯುವಾಗ ಈ ರೀತಿ ಚರ್ಚೆ ನಡೆಯಿತೇ? ಈ ರೀತಿ ಎಂದೂ ಕೂಡ ಚರ್ಚೆ ನಡೆದಿಲ್ಲ. ರಾಜ್ಯಾಂಗವನ್ನು ನಾವೆಲ್ಲರೂ ಓದಿದ್ದೇವೆ. ರಾಜ್ಯಾಂಗದಲ್ಲಿರುವುದನ್ನು ಎಳೆಎಳೆಯಾಗಿ ಬಿಡಿಸಿಕೊಂಡರೆ ರಾಜ್ಯಾಂಗ ಯಾವುದನ್ನೂ ಹೇಳುವುದಿಲ್ಲ, ಎಲ್ಲರೂ ಒಂದೇ ಎಂದು ಹೇಳುತ್ತದೆ. ಮಾನ್ಯ ಸಭಾಪತಿಗಳೆ, ಕಡೆಗೆ ಮುಖ್ಯಮಂತ್ರಿಗಳು, ಇದನ್ನು ಇತರ ವರ್ಗಗಳಿಗೆ ವಿಸ್ತರಣೆ ಮಾಡಲು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದರು. ಹಿಂದಿನ ಸರ್ಕಾರ ಮಾಡಿರುವ ಯೋಜನೆಗಳು ಎಲ್ಲಾ ವರ್ಗಕ್ಕೂ, ಎಲ್ಲಾ ಜನರಿಗೂ ಕಾರ್ಯಕ್ರಮ ಕೊಡುವುದಕ್ಕೆ ಆಗುತ್ತದೆಯೇ? ಸಮಾಜವನ್ನು ಜಾತಿಯ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ ರಾಜಕಾರಣಕ್ಕೋಸ್ಕರ ಒಡೆಯುವಂತಹ ಇಂತಹ ಕಾರ್ಯಕ್ರಮಗಳನ್ನು ಮಾಡಿದರೆ ಅದು ಸದನಕ್ಕೆ ಗೌರವ ತರುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಕೆಲವು ಕಾರ್ಯಕ್ರಮಗಳನ್ನು ಘೋಷಣೆ ಮಾಡಿದರು. ಮೈನಾರಿಟೀಸ್ ಎಂದು ಬಂದಾಗ ಇದೇ ಬಜೆಟ್‌ನ್ನು ನಾವು ಚರ್ಚೆ ಮಾಡಲಿಲ್ಲವೇನು? General Discusson on Budget ಮೇಲೆ ಚರ್ಚೆ ಮಾಡಿಯಾಯಿತು. ನಂತರ Appropriation Bill ಮಾಡುವಾಗ ಚರ್ಚೆ ಮಾಡಿಯಾಯಿತು. ಆ ಚರ್ಚೆಗಳನ್ನು ಮಾಡುವಾಗ ಇದರ ಬಗ್ಗೆ ಯಾರೂ ಮಾತನಾಡಲಿಲ್ಲ. ಇಂತಹ ವಿಚಾರಗಳನ್ನು ಎತ್ತಿಕೊಂಡರೆ ಬಹುಶಃ ನಮಗೆ ಲಾಭವಾಗಬಹುದು ಎಂದು ಭಾವಿಸಿರಬಹುದು. ಈ ಮಾತನ್ನು ನಾನು ಅಲ್ಪಸಂಖ್ಯಾತ ಮಿತ್ರರಿಗೂ ಹೇಳುತ್ತಿದ್ದೇನೆ. ನೀವೂ ಕೂಡ ಯಾವುದೋ ಒಂದು ವಿಚಾರ ಬಂದಾಗ ಅದನ್ನೇ ದೊಡ್ಡದಾಗಿ ತೆಗೆದುಕೊಂಡು ಹೋಗುವುದು ಸಮಾಜಕ್ಕಾಗಲಿ, ಧರ್ಮಕ್ಕಾಗಲಿ ಅಥವಾ ನಮಗಾಗಲಿ ಸಹಾಯವಾಗುವುದಿಲ್ಲ. ಒಬ್ಬೊಬ್ಬರಿಗೆ ಯಾವುದೋ ಒಂದು ಅಜೆಂಡಾ ಇರುತ್ತದೆ. ಆ ಅಜೆಂಡಾಕ್ಕೆ ಇರುವಂತಹ ಕಾರಣಗಳೇನು ಎನ್ನುವುದು ನಮಗೆ ಗೊತ್ತಿರುತ್ತದೆ. ಮಾನ್ಯ ಮುಖ್ಯಮಂತ್ರಿಗಳು, ಇದನ್ನು ವಿಸ್ತರಣೆ ಮಾಡುವಂತಹ ಸಂದರ್ಭದಲ್ಲಿ ಅಥವಾ ಚಿಂತನೆ ಮಾಡುವಂತಹ ಸಂದರ್ಭದಲ್ಲಿ ನಿಮ್ಮ ಹಣಕಾಸಿನ ಲಭ್ಯತೆ

ನೋಡಿಕೊಂಡು ಎಲ್ಲಾ ವರ್ಗಗಳಿಗೆ ಕೊಡಲು ಸಾಧ್ಯವೇ ಎನ್ನುವುದರ ಬಗ್ಗೆ ತೀರ್ಮಾನ ಮಾಡಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಸಾಧ್ಯತೆಗಳಿರುವುದಿಲ್ಲ. ಮಾಡುವುದಕ್ಕೆ ಆಗದೇ ಇರುವಂತಹ ಪರಿಸ್ಥಿತಿ ನಿರ್ಮಾಣ ಆಗಬಹುದು. ನಮ್ಮ ಸರ್ಕಾರ ಇದ್ದಾಗ ಮಾನ್ಯ ರಾಮಕೃಷ್ಣ ಹೆಗ್ಗಡೆಯವರ ಕಾಲದಲ್ಲಿ ತಾಳಿಭಾಗ್ಯ ಎನ್ನುವ ಯೋಜನೆ ಮಾಡಿದೆವು. ನಂತರ ಎಲ್ಲರಿಗೂ ತಾಳಿಭಾಗ್ಯ ಯೋಜನೆ ವಿಸ್ತರಿಸುವಂಥ ಸ್ಥಿತಿ ನಿರ್ಮಾಣವಾಯಿತು. ಇದರ ಬಗ್ಗೆ ಬಹಳ ದೊಡ್ಡ ಪ್ರಮಾಣದಲ್ಲಿ ಚರ್ಚೆಯಾಯಿತು. ತಾಳಿಭಾಗ್ಯ ಯೋಜನೆಯನ್ನು ಸರ್ಕಾರ ಮಾಡಬೇಕೆ? ತಾಳಿಭಾಗ್ಯ ಎನ್ನುವುದು ಅವರವರ ಪದ್ಧತಿ, ಪರಂಪರೆಗೆ ಅನುಗುಣವಾಗಿ ಮಾಡಿಕೊಂಡು ಹೋಗುತ್ತಾರೆ. ಸರ್ಕಾರ ಇಂಥದ್ದಕ್ಕೆ ಕೈ ಹಾಕಿದಾಗ ಭಾರೀ ದೊಡ್ಡ ಹೋರಾಟ ನಡೆಯಿತು. ಕಡೆಗೆ ನಾವು ಮೂರು ವರ್ಷದ ನಂತರ ಆ ಯೋಜನೆಯನ್ನು ರದ್ದು ಮಾಡಿದೆವು. ಇದು ನಮ್ಮ ಮನಸ್ಸಿನಲ್ಲಿದೆ. ಸರ್ಕಾರಕ್ಕೆ ಹೇಳಬೇಕಾದ್ದನ್ನು ನಾವು ಹೇಳಲೇ ಬೇಕಾಗುತ್ತದೆ. ಆದರೆ ಚರ್ಚೆ ಮಾಡಿ, ವೈಯಕ್ತಿಕ ನೆಲೆಗಟ್ಟಿನ ಮೇಲೆ, ಧರ್ಮದ ನೆಲೆಗಟ್ಟಿನ ಮೇಲೆ ಮಾಡಬೇಕು ಎಂದಾದರೆ ಅದು ಅಸಾಧ್ಯವಾಗುತ್ತದೆ. ಜನರನ್ನು ಒಡೆಯುವುದಕ್ಕೆ ಈ ರೀತಿ ಮಾಡುತ್ತಿದ್ದಾರೆ ಎಂಬ ಮಾತುಗಳು ಕೇಳಿ ಬಂತು. ಈ ರೀತಿ ಪ್ರಯತ್ನ ಮಾಡುವವರು ಯಾರು? ಬೆಂಕಿ ಕಡ್ಡಿ ಮತ್ತು ಸೀಮೆಯೆಣ್ಣೆಯನ್ನು ಒಟ್ಟೊಟ್ಟಿಗೆ ತೆಗೆದುಕೊಂಡು ಹೋಗುತ್ತಿರುವ ಜನ ಇಂತಹ ಕೆಲಸ ಮಾಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಈಗ ಈ ಯೋಜನೆಯನ್ನು ತಂದಿದ್ದಾರೆ. ಅದು ಮೈನಾರಿಟೀಸ್‌ಗೆ ಎಂದು ಸರ್ಕಾರಿ ಆದೇಶ ಹೊರಡಿಸಿದ್ದೀರಿ. ಮುಂದೆ ಇದನ್ನು ವಿಸ್ತಾರ ಮಾಡುವಂತಹ ಪರಿಸ್ಥಿತಿ ಬಂದಾಗ ಹಣಕಾಸಿನ ಲಭ್ಯತೆ ನೋಡಿಕೊಂಡು, ಯಾವ ವರ್ಗದವರಿಗೆ ಕೊಡಬೇಕು ಎನ್ನುವ ಆಧಾರದ ಮೇಲೆ ಮುಂದುವರೆಯಬೇಕಾಗುತ್ತದೆ. ಸಭಾತ್ಯಾಗ ಮಾಡುವುದು, ಕೂಗಿಕೊಂಡು ಹೋಗುವುದು ಖಂಡಿತ ಸರಿಯಾದ ಕ್ರಮವಲ್ಲ. ಈಗೇನು ಮಾಡಬೇಕು? ಏನೂ ಮಾಡುವುದಕ್ಕೆ ಆಗುವುದಿಲ್ಲ. ಎಲ್ಲರಿಗೂ ಯಾವುದೋ ಒಂದು ದೃಷ್ಟಿಕೋನ ಇರುತ್ತದೆ. ಆ ಹಿನ್ನೆಲೆಯಲ್ಲಿ ಇಂತಹ ಕೆಲಸವನ್ನು ಮಾಡುತ್ತಾರೆ.

ಕಾಂಗ್ರೆಸ್‌ನವರೂ ಕೂಡ ಕೆಲವು ಸಂದರ್ಭಗಳಲ್ಲಿ ಇಂತಹ ಕೆಲಸವನ್ನು ಮಾಡಿಬಿಡುತ್ತಾರೆ. ದಯವಿಟ್ಟು ಹಾಗೆ ಮಾಡಬೇಡಿ. ನಾವು ಯಾರೂ ಮಾಡುವುದಕ್ಕೆ ಹೋಗಬಾರದು. ನಾವೆಲ್ಲ ಯೋಚನೆ ಮಾಡಿ, ಯಾವ ವರ್ಗದವರಿಗೆ ಸರ್ಕಾರದ ಸಹಾಯ ಹೆಚ್ಚುವರಿಯಾಗಿ ಸಿಗಬೇಕು ಎಂಬ ಬಗ್ಗೆ ಗಮನಹರಿಸಬೇಕು. ಇದು ಒಂದು ಸರ್ಕಾರದ ಧನ ವಿನಿಯೋಗ ವಿಧೇಯಕ. ಈಗ ಬಿಜೆಪಿ ಮಿತ್ರರು ಸದನದಿಂದ ಹೊರಗೆ ಹೋಗಿರಬಹುದು. ಹಲವಾರು ಕಾರಣಗಳಿಂದ ಹೊರಗೆ ಹೋಗುತ್ತಾರೆ. ಅವರಿಗೆ ಒಂದು ಅಜೆಂಡಾ ಇರುತ್ತದೆ, ಅವರು ಮೀಟಿಂಗ್ ಮಾಡಿ ಒಳಗೆ ಬಂದು ಹೊರಗೆ ಹೋಗುತ್ತಾರೆ. ಅವರೂ ಸದನದ ಒಳಗೆ ಬರಲಿ. ಧನ ವಿನಿಯೋಗ ವಿಧೇಯಕವನ್ನು ಒಳಗಿರುವಂತಹ ನಾವು ಮಾತ್ರ ಸೇರಿ ಪಾಸ್ ಮಾಡುವಂಥದ್ದು ಸರಿಯಾದ ಕ್ರಮವಲ್ಲ. ಅವರು ಒಳಗೆ ಬರಲಿ. ಈ ವಿಧೇಯಕವನ್ನು ಪಾಸ್ ಮಾಡೋಣ. ಮುಂದೆ ಬರುವಂಥದ್ದಕ್ಕೆ ಏನು ಮಾಡಬೇಕು ಎಂಬುದನ್ನು ಸರ್ಕಾರ ಮಾಡಲಿ.

(5–30 ಗಂಟೆ)

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಮಾನ್ಯ ನಾಣಯ್ಯನವರು ಸಮಂಜಸವಾಗಿ ಹೇಳಿದ್ದಾರೆ. ನಾನು ಅದನ್ನು ಮತ್ತೆ ಎಳೆದು ವಿಸ್ತಾರ ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ದೇಶದಲ್ಲಿ ತಮ್ಮ ಐತಿಹಾಸಿಕ ಕಾರಣಗಳಿಗೋಸ್ಕರ ನಮ್ಮ ಸಾಮಾಜಿಕ ಹಿನ್ನೆಲೆಯಿಂದ ಸಾಮಾಜಿಕವಾಗಿ, ಆರ್ಥಿಕವಾಗಿ ಅಸಮಾನತೆಗಳು ಬಂದಿವೆ. ಸಾಮಾಜಿಕ ಅಸಮಾನತೆ ಇರತಕ್ಕಂಥ ಕಂದರ ಇದೆಯಲ್ಲಾ ಈ ಕಂದರವನ್ನು ತೆಗೆದು ಹಾಕುವುದಕ್ಕೆ ಎಲ್ಲರಿಗೂ ಸಮಾನತೆಯನ್ನು ಕೊಡುವುಕ್ಕೋಸ್ಕರವಾಗಿ ಸಮಾನ ಸಮಾಜವನ್ನು ನಿರ್ಮಾಣ ಮಾಡುವುದಕ್ಕೋಸ್ಕರವಾಗಿ ಯಾರು ದುರ್ಬಲ ವರ್ಗದ ಜನರಿದ್ದಾರೆ ಅವರು ಯಾವುದೇ ಧರ್ಮಕ್ಕೆ ಸೇರಿರಲಿ, ಜಾತಿಗೆ ಸೇರಿರಲಿ, ಅವರಿಗೆ ನಾವು ವಿಶೇಷ ಸವಲತ್ತುಗಳ್ನು ಕೊಡುವುದರ ಮೂಲಕ ವಿಶೇಷ ಕಾನೂನುಗಳನ್ನು ಮಾಡುವುದರ ಮೂಲಕ ಅವರನ್ನು ಕೂಡ ಮುಖ್ಯವಾಹಿನಿಗೆ ತರಬೇಕೆನ್ನುವುದು ಸಂವಿಧಾನದ ಉದ್ದೇಶ. ಯಾರು ನಮ್ಮ

ಸಂವಿಧಾನದ ಕರ್ತೃ ಇದ್ದಾರೆ ಅವರ ಉದ್ದೇಶ ಅದು. ಅದಕ್ಕೋಸ್ಕರವೇ ಸರ್ಕಾರ ಇವೆಲ್ಲಾ ಮಾಡಬೇಕಾಗುತ್ತದೆ. ಈಗ ಹಾವನೂರು ಆಯೋಗ ಆಯಿತು, ಅಲ್ಲಿ ಹಿಂದುಳಿದ ಜಾತಿಗಳಿಗೆ ಮೀಸಲಾತಿ ಕೊಡಬೇಕೆಂದು ತೀರ್ಮಾನ ಆಯಿತು. Has it not been upheld by the Supreme Court? ಮಂಡಲ ಆಯೋಗ ಆಯಿತು. ಹಿಂದುಳಿದ ಜಾತಿಗಳಿಗೆ ಮೀಸಲಾತಿ ಕೊಡಬೇಕೆಂದು ತೀರ್ಮಾನ ಆಯಿತು. Has it not been upheld by the Supreme Court? ಅದನ್ನು ಸುಪ್ರೀಮ್‌ಕೋರ್ಟ್‌ನಲ್ಲಿ Constitutional Bench upheld ಮಾಡಿದೆ. ಸಂವಿಧಾನದಲ್ಲಿ ವಿಶೇಷ ಸವಲತ್ತುಗಳನ್ನು ಮಾಡುವುದಕ್ಕೆ, even in a country like America, ಅಲ್ಲಿ preferential treatment ಎಂದು ಕರೆಯುತ್ತಾರೆ, ಅಲ್ಲಿ affirmative action ಎಂದು ಇದೆ. ಅಲ್ಲಿ ಬಿಳಿಯರು, ಕರಿಯರು ಎಂದು ವರ್ಣಭೇದ ಇದೆ. Black and White ಎಂದು ಇದೆ. ಅಲ್ಲಿ ಮೀಸಲಾತಿ ಎಂದು ಕರೆಯದಿದ್ದರೂ ಕೂಡ affirmative action ಎಂದು ಇದೆ. Preferential treatment ಕೊಡಬೇಕಾಗುತ್ತದೆ. Otherwise we cannot bring equality in the society. ಅನ್ಯಾಯಕ್ಕೆ ಒಳಗಾಗಿರುವವರನ್ನು ಮುಖ್ಯವಾಹಿನಿಗೆ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಾವು ಕೆಲವು ಯೋಜನೆಗಳನ್ನು, ಕಾರ್ಯಕ್ರಮಗಳನ್ನು ದುರ್ಬಲ ವರ್ಗದ ಜನರಿಗೆ ಮಾಡುತ್ತೇವೆ. ಅಲ್ಪಸಂಖ್ಯಾತರ ಬಗ್ಗೆ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದೇವೆ. ಬಜೆಟ್‌ನಲ್ಲಿ ಎರಡು ಕಡೆ ಬಹಳ ದೀರ್ಘವಾಗಿ ಚರ್ಚೆಯಾಯಿತು. ಆಗ ಇದನ್ನು ಯಾರು ಪ್ರಸ್ತಾಪ ಮಾಡುವುದಕ್ಕೆ ಹೋಗಲಿಲ್ಲ. ಈಗ ಚುನಾವಣೆ ಹತ್ತಿರ ಬರುತ್ತಿದೆ. ರಾಜಕೀಯಕ್ಕೋಸ್ಕರವಾಗಿ ಇದನ್ನೆಲ್ಲಾ ಪ್ರಸ್ತಾಪ ಮಾಡುತ್ತಿದ್ದಾರೆ. ರಾಜಕೀಯಕ್ಕೋಸ್ಕರ, ಬೇರೆ ಯಾವುದೇ ಕಾರಣ ಇಲ್ಲ. ಮಾನ್ಯ ಯಡಿಯೂರಪ್ಪನವರು ಉಪವಾಸ ಕುಳಿತಿದ್ದಾಗ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ನಾನು ಬೇರೆಯವರಿಗೆ ವಿರುದ್ಧ ಇಲ್ಲ, ಬೇರೆ ಬಡವರಿಗೆ ವಿರುದ್ಧ ಇಲ್ಲ, ಬೇರೆ ಹೆಣ್ಣುಮಕ್ಕಳಿಗೆ ವಿರುದ್ಧ ಇಲ್ಲ. ಮುಂದೆ ನಾವು ಸಾಧಕ ಬಾಧಕಗಳನ್ನು ನೋಡಿಕೊಂಡು ಹಣಕಾಸು ಲಭ್ಯತೆಯನ್ನು ನೋಡಿಕೊಂಡು ಬೇರೆಯವರಿಗು ಕೂಡ ಅದನ್ನು ಕೊಡುವುದರ ಬಗ್ಗೆ ಪರಿಶೀಲನೆ

ಮಾಡುತ್ತೇವೆಂದು ಹೇಳಿದ್ದೇನೆ. ಇಲ್ಲಿ ನಾವು ಪೂರಕ ಅಂದಾಜುಗಳ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಪೂರಕ ಅಂದಾಜುಗಳ ಬಗ್ಗೆ ಚರ್ಚೆ ಮಾಡುತ್ತಿರುವಾಗ ಈ ವಿಷಯವನ್ನು ಪ್ರಸ್ತಾಪ ಮಾಡಿಕೊಂಡು walk out ಮಾಡುವುದು, sloganಗಳನ್ನು ಹಾಕುವುದು, it is not fair on their part. ಯಾವಾಗಲೂ ಕೂಡ ಇದು ಆಗಬಾರದು. ಪೂರಕ ಅಂದಾಜುಗಳ ಬಗ್ಗೆ ಚೆನ್ನಾಗಿ ಚರ್ಚೆ ನಡೆಯುತ್ತಿತ್ತು. ನಾನು ಅವರು ಹೇಳಿದ್ದಕ್ಕೆಲ್ಲಾ ಉತ್ತರ ಕೊಟ್ಟಿದ್ದೇನೆ. ಅವರು ಹಾಗೆ ಮಾಡಬಾರದಾಗಿತ್ತು. ಈ ಜಾತಿ ಒಡೆಯುತ್ತಾರೆ, ಜಾತಿ ಮಾಡುತ್ತಾರೆ ಎಂದು ಅವರು ಹೇಳುತ್ತಿದ್ದಾರೆ. ಇದು ಜಾತಿ ಮಾಡುವುದಲ್ಲ. ಜಾತಿಯನ್ನು ನಾವು ಹುಟ್ಟು ಹಾಕಿರುವುದಲ್ಲ. ಈಗ ನಾನು ಯಾವುದೋ ಒಂದು ಜಾತಿಯಲ್ಲಿ ಹುಟ್ಟಿದ್ದೇನೆ, ನಾನು ಏನಾದರೂ ಇಂಥ ಜಾತಿಯಲ್ಲಿ ಹುಟ್ಟಬೇಕೆಂದು ಅರ್ಜಿಯನ್ನು ಹಾಕಿಕೊಂಡಿದ್ದೇನೆಯೇ? ನೀವು ಅರ್ಜಿ ಹಾಕಿಕೊಂಡಿದ್ದೀರಾ? ಜಾತಿ ಇತ್ತು ಹುಟ್ಟುಬಿಟ್ಟಿದ್ದೇವೆ. ಅವರು ಯಾರು ಜಾತಿ ಕಾರಣಕ್ಕೋಸ್ಕರವಾಗಿ ಅನ್ಯಾಯಕ್ಕೆ ಶೋಷಣೆಗೆ ಒಳಗಾಗಿದ್ದಾರೆ, ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿದ್ದಾರೆ. ಶತಶತಮಾನಗಳಿಂದ ಶೋಷಣೆಗೆ ಒಳಪಟ್ಟಿದ್ದಾರೆ, ಆ ಜನರಿಗೆ preferential treatment ಬೇಕೋ ಬೇಡವೋ? ಅವರಿಗೆ ವಿಶೇಷವಾದಂತಹ ಕಾನೂನುಗಳನ್ನು ಮಾಡಬೇಕೋ ಬೇಡವೋ? ಇದನ್ನು ಮಾಡತಕ್ಕಂಥದ್ದು. ಎಲ್ಲರಿಗೂ ನ್ಯಾಯ ಸಿಗಬೇಕು, ಎಲ್ಲರಿಗೂ ಸಾಮಾಜಿಕ ನ್ಯಾಯ ಸಿಗಬೇಕು, ಎಲ್ಲರಿಗೂ ಸಮಾನ ಅವಕಾಶಗಳು ಸಿಗಬೇಕು, ಇದರ ಬಗ್ಗೆ ಎರಡನೇ ಮಾತಿಲ್ಲ. ನಾವು ಯಾವತ್ತೂ ಕೂಡ ಧರ್ಮದ ಹೆಸರಿನಲ್ಲಿ, ದೇವರ ಹೆಸರಿನಲ್ಲಿ, ಸಮಾಜವನ್ನು ಒಡೆಯತಕ್ಕಂಥದ್ದಾಗಲಿ, ಬೆಂಕಿ ಹಚ್ಚತಕ್ಕಂಥದ್ದಾಗಲಿ ಮಾಡುವುದಿಲ್ಲ. ಸಮಾಜವನ್ನು ಒಗ್ಗೂಡಿಸುವಂತ ಕೆಲಸ ಮಾಡುತ್ತೇವೆ. ಎಲ್ಲಾ ಜನರನ್ನು ಒಟ್ಟಿಗೆ ತೆಗೆದುಕೊಂಡು ಹೋಗುವಂತಹ ಕೆಲಸವನ್ನು ಮಾಡುತ್ತೇವೆ. ಅದರಲ್ಲಿ ಯಾವುದೇ ತಾರತಮ್ಯವನ್ನು ಮಾಡತಕ್ಕಂಥ ಪ್ರಶ್ನೆಯೇ ಇಲ್ಲ. ಇದನ್ನು ಸ್ಪಷ್ಟಪಡಿಸುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಬಹಳ ಸ್ಪಷ್ಟವಾಗಿ ಈ ಮಾತುಗಳನ್ನು ಹೇಳುತ್ತಿದ್ದೇನೆ. ಅವರು ಇರಬೇಕಾಗಿತ್ತು. ಇದು Supplementary Estimates, Finance Bill. ಈ

Finance Bill ಗೆ walk out ಮಾಡುವುದು, ಬೇರೆ ಯಾವುದೋ ಒಂದು ಕ್ಷುಲ್ಲಕವಾದ ಕಾರಣವನ್ನು ತೆಗೆದುಕೊಂಡು ಅದಕ್ಕೆ ನೆಪ ಒಡ್ಡಿಕೊಂಡು walk out ಮಾಡುವುದು ಅದು ಸರಿಯಾದ ಸಂಸದೀಯ ಸಂಪ್ರದಾಯವಲ್ಲ. ಇಷ್ಟು ಮಾತ್ರ ಹೇಳಿ, ನಾನು ಚರ್ಚೆಗೆ ಸಮರ್ಥವಾಗಿ ಉತ್ತರವನ್ನು ಕೊಟ್ಟಿದ್ದೇನೆ. ನಮ್ಮ ಸರ್ಕಾರ ಅಭಿವೃದ್ಧಿ ಪರವಾಗಿ ಇದೆ, ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿದೆ. ಮಾನ್ಯ ನಾಣಯ್ಯನವರು ಒಂದು ಮಾತನ್ನು ಹೇಳಿದ್ದಾರೆ. ಕೊಡಗಿಗೆ ಹೆಚ್ಚು ಹಣ ಕೊಡಬೇಕೆನ್ನುವ ಮಾತನ್ನು ಹೇಳಿದ್ದಾರೆ. ಈಗ ನಾವು 50 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ನಾವು ಇನ್ನೂ ಹೆಚ್ಚಿನ ಹಣ ಕೊಡಗಿಗೆ ಕೊಡುತ್ತೇವೆ. ಏಕೆಂದರೆ, ಕಾವೇರಿ ನದಿಯಿಂದ ನೀರು ಬರುತ್ತದೆ ಎನ್ನುವ ಒಂದೇ ಕಾರಣಕ್ಕಾಗಿ ಅಲ್ಲ, ಈ ಸಲ ಅಲ್ಲಿ ಮಳೆ ಜಾಸ್ತಿಯಾಗಿದೆ, ಮಂಗಳೂರು, ಶಿವಮೊಗ್ಗದಲ್ಲೂ ಜಾಸ್ತಿ ಮಳೆ ಆಗಿದೆ, ಅಲ್ಲೆಲ್ಲಾ ಬಹಳ ಹಾನಿ ಆಗಿದೆ, ಕೊಡಗಿನಲ್ಲೂ ಬಹಳ ಹಾನಿ ಆಗಿದೆ. ಈ ಸಲ ರಸ್ತೆಗಳಿಗೆ ಹೆಚ್ಚು ಹಣ ಕೊಡತಕ್ಕಂಥದ್ದನ್ನು, ವಿಶೇಷವಾಗಿ ಕೊಡಗಿಗೆ ಹೆಚ್ಚು ಹಣ ಕೊಡುವಂಥದ್ದನ್ನು ಮಾಡುತ್ತೇವೆ ಎನ್ನುವ ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಈಗಾಗಲೇ ನಾನು Supplementary Estimateನಲ್ಲಿ ಲೋಕೋಪಯೋಗಿ ಇಲಾಖೆಗೆ ಹೆಚ್ಚು ಹಣ ಕೊಟ್ಟಿದ್ದೇನೆ. ಇನ್ನೂ ಸ್ವಲ್ಪ ಹಣವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ಮಾತನ್ನು ಹೇಳಿ ಈ Supplementary Estimateಗೆ ಸದನ ಒಪ್ಪಿಗೆ ಕೊಡಬೇಕೆಂದು ತಮ್ಮ ಮೂಲಕ ಮನವಿ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2013ರ ಕರ್ನಾಟಕ ಧನವಿನಿಯೋಗ (ಸಂಖ್ಯೆ: 4) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ಮತ್ತು 3:**

**ಸಭಾಪತಿಯವರು:–** "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 3 ನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಆಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೆಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಧನವಿನಿಯೋಗ (ಸಂಖ್ಯೆ: 4) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಧನವಿನಿಯೋಗ (ಸಂಖ್ಯೆ: 4) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**(ಆ) ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ವಿಧೇಯಕ, 2013**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೆ, 2013ರ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ವಿಧೇಯಕವನನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯರು:–** ಪ್ರಸ್ತಾವ ಏನೆಂದರೆ;

"2013ರ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೆ, ಇದು ಬಹಳ ಸಿಂಪಲ್ ತಿದ್ದುಪಡಿಯಾಗಿದೆ. 2002ರಲ್ಲಿ ಈ **ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ವಿಧೇಯಕ** ಎಂದು ಮಾಡಿದ್ದಾರೆ. ಈ ವಿಧೇಯಕದಲ್ಲಿ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು State Level Empowered Committee ಯನ್ನು ರಚನೆ ಮಾಡುವಂತಹದ್ದು ಇದೆ. ಅದು ಇಲ್ಲಿಯವರೆಗೆ ಇರಲಿಲ್ಲ. ಅದನ್ನು ಮಾಡಿ, ನಾವು ಏನು ಪ್ರಾಜೆಕ್ಟ್‌ಗಳನ್ನು ಜಾರಿಗೆ ತರುತ್ತೇವೆ, ಆ ಪ್ರಾಜೆಕ್ಟ್‌ಗಳ implementation ಉಸ್ತುವಾರಿಯನ್ನು ನೋಡಿಕೊಳ್ಳುವಂತಹದ್ದು, ಮೇಲ್ವಿಚಾರಣೆಯನ್ನು ಮಾಡುವುದಕ್ಕೆ ಈ State Level Empowered Committeeಯನ್ನು ರಚನೆ ಮಾಡುವಂತಹದ್ದಾಗಿದೆ. ಇನ್ನೊಂದು, Section 3ರಲ್ಲಿ State Level Empowered Committee ಗೆ "50 ಕೋಟಿಗಿಂತ ಹೆಚ್ಚು" ಎಂದು ಇತ್ತು.

ಪ್ರಾಜೆಕ್ಟ್‌ಗಳನ್ನು ಕ್ಲಿಯರ್ ಮಾಡಲಿಕ್ಕೆ Commerce and Industries Department ನಲ್ಲಿ State Level Empowered Committee ಮತ್ತು Clearance Committee ಇದೆ. ಅದರಲ್ಲಿ 50 ಕೋಟಿಗಿಂತ ಹೆಚ್ಚು ಎಂದು ಇತ್ತು. ಅದು 15 ಕೋಟಿಯಿಂದ 50 ಕೋಟಿ ಎಂದು ಇತ್ತು. ಅದನ್ನು ಈಗ 50 ಕೋಟಿಗಿಂತ 100 ಕೋಟಿಗಿಂತ ಹೆಚ್ಚು ಎಂದು ಮಾಡಿದ್ದೇವೆ. ಏಕೆಂದರೆ, ಈಗ ಪ್ರಾಜೆಕ್ಟ್ ಬೆಲೆಗಳೆಲ್ಲಾ ಜಾಸ್ತಿಯಾಗಿವೆ. Escalation ಎಲ್ಲಾ ಆಗಿದೆ. ಅದಕ್ಕೋಸ್ಕರ ಮಾಡಲಾಗಿದೆ. ರಾಜ್ಯ ಮಟ್ಟದಲ್ಲಿ ಮುಖ್ಯ ಕಾರ್ಯದರ್ಶಿಗಳ ಹಂತದಲ್ಲಿ ಒಂದು State High Level Single Window Clearance Committee ಇದೆ. ಅದಕ್ಕೆ ಈಗ 100 ಕೋಟಿ ವರೆಗೆಂದು ಮಾಡಿದ್ದೇವೆ. ಮತ್ತೆ ಜಿಲ್ಲಾ ಹಂತದಲ್ಲಿ 15 ಕೋಟಿವರೆಗೆ ಮಾಡಿದ್ದೇವೆ. Changes ಇರುವಂತಹದ್ದು ಇಷ್ಟೇ ಆಗಿದೆ. ಇನ್ನೊಂದು, Section 16 ಎಂದು ಇರುವುದನ್ನು ಡ್ರಾಪ್ ಮಾಡಿದ್ದೇವೆ. ಮೊದಲು ಜಂಟಿಯಾಗಿ inspection ಮಾಡುವಂತಹದ್ದು ಇತ್ತು. ಅದನ್ನು ಇಲ್ಲಿಯವರೆಗೆ ಯಾವತ್ತು ಸಹ ಜಂಟಿಯಾಗಿ inspection ನ್ನು ಮಾಡಿಯೇ ಇಲ್ಲ. ಅದನ್ನು ಡ್ರಾಪ್ ಮಾಡಿದ್ದೇವೆ. ಮತ್ತೆ ಸಂಯೋಜಿತ ಅರ್ಜಿ ನಮೂನೆಗಳು – Combine Application Forms (CAF) ಎಂದು Section 14ಗೆ ತಿದ್ದುಪಡಿಯನ್ನು ತಂದಿದ್ದೇವೆ. ಹಿಂದೆ ಒಂದೊಂದು ಇಲಾಖೆಗೂ ಒಂದೊಂದು ಅರ್ಜಿ ಇತ್ತು. ಅವುಗಳನ್ನೆಲ್ಲಾ ಸೇರಿಸಿ ಒಟ್ಟಿಗೆ ಒಂದು ಅರ್ಜಿ ಮಾಡಿ ಮಾಡುವಂತಹದ್ದಾಗಿದೆ. ಆಮೇಲೆ, ಸೆಕ್ಷನ್ 18ರಲ್ಲಿ ಸ್ಟೇಟ್ ಲೆವಲ್‌ನಲ್ಲಿ ಇರುವಂತಹ State High Level Clearance Committee ಏನಿದೆ, ಅದು ಕ್ಲಿಯರೆನ್ಸ್ ಮಾಡಿದ ಮೇಲೆ if there are any grievances of entrepreneurs. ಅದನ್ನು ಹೇಳಿಕೊಳ್ಳುವುದಕ್ಕೆ ಒಂದು ಅವಕಾಶ ಇರಬೇಕೆಂದು ಹೇಳಿ, review ಹಾಕಲಿಕ್ಕೆ ಒಂದು ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಹೀಗಾಗಿ, ಇಷ್ಟೇ ತಿದ್ದುಪಡಿಯನ್ನು ನಾವು ತಂದಿದ್ದೇವೆ. ಆದ್ದರಿಂದ, ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಡಿ.ವಿ.ಸದಾನಂದಗೌಡ:-** ಮಾನ್ಯ ಸಭಾಪತಿಯವರೆ, ವಿಶೇಷವಾಗಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು High Level Clearance Committee ಇದೆ. ಅಂದರೆ, ಅದು HLCC ಆಗಿರುತ್ತದೆ. ಇನ್ನೊಂದು, ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಪ್ರಾಧೀಕೃತ ಸಮಿತಿ ಇರುತ್ತದೆ. ಇದರಲ್ಲಿ ಏನಾಗಿದೆ ಎಂದರೆ "ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಯ ತೀರ್ಮಾನದಿಂದ ಬಾಧಿತನಾದ ಯಾವೊಬ್ಬ ಅರ್ಜಿದಾರನು,-

(ಎ) ಅಂಥ ಸಮಿತಿಯು, ಯಾವ ಹೊಸ ಸಂಗತಿಗಳು ಮತ್ತು ಕಾರಣಗಳ ಮೇಲೆ ಅದರ ತೀರ್ಮಾನವನ್ನು ಪುನರ್ ಪರಿಶೀಲಿಸಬೇಕಾಗಿದೆಯೋ ಅಂಥ ಹೊಸ ಸಂಗತಿಗಳನ್ನು ಅಥವಾ ಕಾರಣಗಳನ್ನು ಅರ್ಜಿದಾರನು ಹೊಂದಿದ್ದರೆ,

(ಬಿ) ತೀರ್ಮಾನದಲ್ಲಿ ಹೊರನೋಟಕ್ಕೆ ಕಾಣಬರುವ ಸ್ಪಷ್ಟವಾದ ದೋಷಗಳನ್ನು ತೋರಿಸಿಕೊಟ್ಟರೆ,-

- ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಗೆ, ಅದು ಈ ಹಿಂದೆ ನೀಡಿದ ತೀರ್ಮಾನವನ್ನು ಪುನರವಲೋಕಿಸುವಂತೆ ಅಪೀಲು ಮಾಡಿಕೊಳ್ಳಬಹುದು."

ಅದರಲ್ಲಿ ಯಾರು ಇರುತ್ತಾರೆಂದರೆ ಮೊದಲು ಇದ್ದವರೇ ಇರುತ್ತಾರೆ. ಆದ್ದರಿಂದ, ಆ industrialist ಅನ್ನು ಕರೆದು ಮಾತನಾಡಿಯೇ ಒಂದು ತೀರ್ಮಾನಕ್ಕೆ ಬರಲಾಗುತ್ತದೆ. ಅವನಿಗೆ ಕ್ಲಿಯರೆನ್ಸ್ ಕೊಡಬೇಕೋ ಬೇಡವೋ ಎನ್ನುವುದನ್ನು ತೀರ್ಮಾನ ಮಾಡಲಾಗುತ್ತದೆ. ಹೀಗಾಗಿ, ಅದೇ ಕಮಿಟಿಯ ಮುಂದೆ ಮತ್ತೆ ಪುನರ್ ಪರಿಶೀಲನೆಗೆ ಹಾಕುವುದು ಎಂದರೆ ಅದು ಏನು ಆಗುತ್ತದೆ? ಆದಕಾರಣ, ನನಗೆ ಏನು ಅನಿಸುತ್ತದೆ ಎಂದರೆ ಆ ಕಮೀಟಿಯಲ್ಲಿ ಅವನೇ ಹಾಜರಿರುತ್ತಾನೆ. ಆದಕಾರಣ, ಅವನ ವಿಚಾರಗಳನ್ನೇ ಅಲ್ಲಿ ಮಂಡಿಸುತ್ತಾನೆ. ಆಗ ಎಲ್ಲಾ ವಿಚಾರಗಳನ್ನು ತೆಗೆದುಕೊಂಡು ಆ

ಕಮಿಟಿಯು ಒಂದು ತೀರ್ಮಾನಕ್ಕೆ ಬರುತ್ತದೆ. ಅದೇ ಕಮಿಟಿಯ ಮುಂದೆ ಮತ್ತೆ ಪುನರ್ ಪರಿಶೀಲನೆಗೆ ಹಾಕುವುದು ಎಂದರೆ ಹೇಗೆ ಆಗುತ್ತದೆ?

**ಸಭಾಪತಿಯವರು:–** ಅದೇ ಕಮಿಟಿಯ ಮುಂದೆ ಮತ್ತೆ ಹೇಗೆ Appeal ಮಾಡಿಕೊಳ್ಳುವುದಕ್ಕೆ ಸಾಧ್ಯ, ಅದಕ್ಕೆ ಬೇರೆ ಕಮಿಟಿ ಮಾಡಿದರೆ ಚೆನ್ನಾಗಿರುತ್ತದೆ ಎನ್ನುವುದು ಮಾನ್ಯ ವಿರೋಧ ಪಕ್ಷದ ನಾಯಕರ ಅಭಿಪ್ರಾಯವಾಗಿರುತ್ತದೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಸ್ಟೇಟ್ ಲೆವಲ್‌ನಲ್ಲಿ ಒಂದು High Power Committe ಇದೆ. ಅವರು ಪ್ರಾಜೆಕ್ಟ್ ಕ್ಲಿಯರ್ ಮಾಡುತ್ತಾರೆ. Industrialists ಗಳನ್ನೆಲ್ಲಾ ಅಲ್ಲಿ ಕರೆದೇ ಮಾತನಾಡಬೇಕೆಂದೇನೂ ಇಲ್ಲ. ಅವರ ಜೊತೆ ಚರ್ಚೆ ಮಾಡಿಯೇ ಮಾಡಬೇಕೆಂದೇನೂ ಇಲ್ಲ. We may call them, we may not call the also.

**ಶ್ರೀ ಡಿ.ವಿ.ಸದಾನಂದಗೌಡ:–** ಸಾಮಾನ್ಯವಾಗಿ procedure ಇರುವುದು, ಅವರನ್ನು ಕರೆದು ಚರ್ಚೆ ಮಾಡುತ್ತಾರೆ ಅಲ್ಲವೇ?

**ಶ್ರೀ ಸಿದ್ದರಾಮಯ್ಯ:–** ಆ ರೀತಿಯಲ್ಲಿ ಅಲ್ಲಿ ಇರುವುದಿಲ್ಲ. High Level Clearance Committee ಯಲ್ಲಿ industrialists ಗಳನ್ನು ಕಡ್ಡಾಯವಾಗಿ ಕರೆಯಬೇಕೆಂದೇನೂ ಇಲ್ಲ. ಅದಕ್ಕೆ provision ಇಲ್ಲ.

**ಶ್ರೀ ಡಿ.ವಿ.ಸದಾನಂದಗೌಡ:–** ಅದಕ್ಕೆ provision ಇದೆ.

**ಶ್ರೀ ಸಿದ್ದರಾಮಯ್ಯ:–** ಈ ವಿಷಯವಾಗಿ ನಮಗೆ ರಿವ್ಯೂ ಮಾಡಲಿಕ್ಕೆ ಅವಕಾಶ ಇರಬೇಕೆಂದು ಬಹಳ ಜನರಿಂದ ದೂರುಗಳಿದ್ದವು. ಮತ್ತೆ ಹಿಂದೆ ಏನು provision ಇತ್ತು ಎಂದರೆ Industries Minister ಗೆ Appeal ಹಾಕುವಂತಹ ಅವಕಾಶವಿತ್ತು. High Level Clearance Committee is headed by the Chief Minister. ಅದರ ಮೇಲೆ ಕೈಗಾರಿಕಾ ಮಂತ್ರಿಗಳಿಗೆ Appeal ಹಾಕುವುದಕ್ಕೆ ಇವರಿಗೆ ಅವಕಾಶವಿತ್ತು. ಆದ್ದರಿಂದ, ಅದು ಬೇಡ ಎಂದು ಹೇಳಿ ಈಗ 'review' ಮಾಡಲಿಕ್ಕೆ ಒಂದು ಅವಕಾಶವನ್ನು

ಕೊಟ್ಟಿದ್ದೇವೆ ಅಷ್ಟೇ. 'Review' ಮಾಡಿದ ಮೇಲೆ, High Level Clearance Committee ಒಂದು ತೀರ್ಮಾನಕ್ಕೆ ಬಂದ ಮೇಲೆ it will be a final decision.

**ಶ್ರೀ ಡಿ.ವಿ.ಸದಾನಂದಗೌಡ:–** ನೀವು ಈಗ ಹೇಳುವುದು ಸರಿ ಇದೆ. ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಮಾಡಿದ ತೀರ್ಮಾನದ ಮೇಲೆ Industries Minister ಗೆ ಮತ್ತೆ Appeal ಮಾಡುವುದು ಸರಿಯಲ್ಲ. HLCC ವಿಷಯವಾಗಿ ನಾನು 2–3 ಮೀಟಿಂಗ್‌ಗಳನ್ನು ಮಾಡಿದ್ದೇನೆ. ಆ ಎಲ್ಲಾ ಮೀಟಿಂಗ್‌ಗಳಲ್ಲೂ ಸಹ industrialists are called.

**ಶ್ರೀ ಸಿದ್ದರಾಮಯ್ಯ:–** ಎಲ್ಲಾ ಮೀಟಿಂಗ್‌ಗಳಿಗೂ ಕರೆಯಬೇಕೆಂದೇನೂ ಇಲ್ಲ.

**ಶ್ರೀ ಡಿ.ವಿ.ಸದಾನಂದಗೌಡ:–** ನನಗೆ ತಿಳಿದ ಮಟ್ಟಿಗೆ ಕರೆಯಬೇಕು.

**ಶ್ರೀ ಸಿದ್ದರಾಮಯ್ಯ:–** ಕರೆಯುತ್ತಿದ್ದರು.

**ಶ್ರೀ ಡಿ.ವಿ.ಸದಾನಂದಗೌಡ:–** ಅವನ ವಿಚಾರಗಳನ್ನು ಅವನು ಮಂಡಿಸಬೇಕು.

**ಶ್ರೀ ಸಿದ್ದರಾಮಯ್ಯ:–** ನಾನು ಮೂರು ಮೀಟಿಂಗ್‌ಗಳನ್ನು ಮಾಡಿದ್ದೇನೆ, ನಾವು ಯಾರನ್ನೂ ಕರೆಯುತ್ತಿಲ್ಲ. It is not mandatory.

**ಶ್ರೀ ಡಿ.ವಿ.ಸದಾನಂದಗೌಡ:–** ಅದು ನನಗೆ ಗೊತ್ತಿಲ್ಲ. ಒಂದು ವಿಚಾರವನ್ನು ನಾನು ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಅವರು ಬರದಿದ್ದರೆ, ನೀವು ಇದನ್ನು ಒಂದು revision ಗೆಂದು ಹಾಕುವುದು ಸರಿ ಇದೆ. ಅವರನ್ನು ಕರೆಸಿ ಎಲ್ಲವನ್ನೂ ಮಾಡಿದರೆ ಅದೇ ಕಮಿಟಿಯಲ್ಲಿ ಈ ವಿಷಯವನ್ನು ಹಾಕುವುದಾದರೆ ಅದರಲ್ಲಿ ಅರ್ಥವಿಲ್ಲ.

**ಶ್ರೀ ಸಿದ್ದರಾಮಯ್ಯ:–** ಇಲ್ಲ. There is no mandatory provision that we should invite industrialists for all the High Level Clearance Committee meetings. ಆದ್ದರಿಂದ, ಅವರನ್ನು ಕರೆಯಬೇಕೆಂದೇನೂ ಇಲ್ಲ.

ನಾನು ಬಂದ ಮೇಲೆ ಮೂರು ಮೀಟಿಂಗ್‌ಗಳನ್ನು ಮಾಡಿದ್ದು, ಆ ಮೂರು ಮೀಟಿಂಗ್‌ಗಳಿಗೂ ಅವರುಗಳನ್ನು ಕರೆದಿಲ್ಲ.

**ಶ್ರೀ ಎಂ.ಸಿ.ನಾಣಯ್ಯ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಇದು ಹೇಗಿದೆಯೆಂದರೆ, ಹೈಕೋರ್ಟಿನಲ್ಲಿ Divison Bench ಇದೆ. They will give a judgment. In respect of the said judgment, there is a provision for filing a Review Petition to the same Judges. ಅಲ್ಲಿ ಏನಾದರೂ ಹೊಸ ವಿಚಾರಗಳು ಬಂದರೆ, ಹೊಸ circumstances ಏನಾದರೂ ಬಂದರೆ ಅವುಗಳನ್ನು ಅವರಲ್ಲಿಗೆ ತೆಗೆದುಕೊಂಡು ಹೋಗುವುದು ಇದೆ. ಯಾರನ್ನೂ ಕರೆಯಬೇಕಾದಂತಹ ಅವಶ್ಯಕತೆ ಇರುವುದಿಲ್ಲ. ಅವರು ಕೊಟ್ಟಿರುವಂತಹ ಒಂದು ಅರ್ಜಿ ಏನು ಇದೆ, ಆ ಅರ್ಜಿಯ ಆಧಾರದ ಮೇಲೆ ಹೊಸ ವಿಚಾರಗಳು ಬಂದರೆ they can do that. This is just like Supreme Court's review power or High Court's review power.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, same Judges ಮುಂದೆ ಅವರು Review Petition ಹಾಕಲಿಕ್ಕೆ ಅವಕಾಶ ಇದೆ. ಅದೇ ರೀತಿಯಲ್ಲಿ ಇಲ್ಲಿಯೂ ಸಹ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇವೆ ಅಷ್ಟೆ. ಆದ್ದರಿಂದ, ಇದಕ್ಕೆ ಒಪ್ಪಿಗೆ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೆ, ನಮ್ಮ ರಾಜ್ಯದಲ್ಲಿ ಹೈ ಲೆವೆಲ್ ಕಮೀಟಿ ಇದ್ದು, ಈ ಕಮಿಟಿಯ ಮುಂದೆ ಇಲ್ಲಿಯವರೆಗೆ 50 ಕೋಟಿ ಇದ್ದುದ್ದನ್ನು 100 ಕೋಟಿಗೆ ಹೆಚ್ಚು ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಸ್ವಾಭಾವಿಕವಾಗಿ ಈ infrastructures ಮಾಡಲಿಕ್ಕೆಲ್ಲಾ ಬಂಡವಾಳ ಜಾಸ್ತಿಯಾಗುತ್ತಿದೆ, ಇಂಡಸ್ಟ್ರೀಗಳೆಲ್ಲಾ ಜಾಸ್ತಿ ಬರುತ್ತಿವೆ. ಆ ಕಾರಣಕ್ಕೋಸ್ಕರ 50 ಕೋಟಿ ಇದ್ದುದ್ದನ್ನು 100 ಕೋಟಿಯನ್ನು High Level Clearance Committee ಗೆ ಮಾಡಿಕೊಳ್ಳುತ್ತೀದ್ದೀರಿ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಕೈಗಾರಿಕಾ ಮಂತ್ರಿಗಳಿದ್ದು, ಅವರ ಗಮನಕ್ಕೆ ಒಂದು ವಿಚಾರವನ್ನು ತರಲಿಕ್ಕೆ ಬಯಸುತ್ತೇನೆ. ನಾವು ಇಲ್ಲಿ State High Level Clearance Committee ಮಾಡುತ್ತೇವೆ, State Level

Single Window Clearance Comittee ಮಾಡುತ್ತೆವೆ, ಈ Single Window Clearance Committee ಮಾಡಿದ ನಂತರದಲ್ಲಿ ಅವರಿಗೆ ಪವರ್‌ಗೋಸ್ಕರವಾಗಿ, ವಾಟರ್‌ಗೋಸ್ಕರವಾಗಿ, ಬೇರೆ ಬೇರೆ ಲೈಸೆನ್ಸ್‌ಗೋಸ್ಕರವಾಗಿ, Pollution Control Board ಗೋಸ್ಕರವಾಗಿ ಮತ್ತೆ ಅಲೆಯುವಂತಹ ಕೆಲಸ ಯಾವುದು ಸಹ ತಪ್ಪಿಲ್ಲ. ಅವರು ಎಲ್ಲದಕ್ಕೂ ಅಲಿಯಲೇ ಬೇಕು. ಇಲ್ಲಿ ಕೊಡುವಂತಹ ಕ್ಲಿಯರೆನ್ಸ್ ಕೇವಲ its only a token clearance. ಆದರೆ, ಯಾವುದೂ ಸಹ blanket clearance ಎಲ್ಲಿಯೂ ಸಿಕ್ಕಿಲ್ಲ. ಹಾಗಾಗಿ ನಮ್ಮ ರಾಜ್ಯದಲ್ಲಿ ಬರುವಂತಹ ಈ ಒಂದು industrial atmosphere ಎಂದು ನಾವು ಏನು ಹೇಳುತ್ತೇವೆ, it should be congenial for an investment. ಆ ರೀತಿಯ ಸ್ಥಿತಿ ಬರುತ್ತಿಲ್ಲ. ಈ ಕಾರಣಕ್ಕೋಸ್ಕರ ನಾವು ಮಾಡಿದಂತಹ ಅಂದರೆ ನಮ್ಮ ಸರ್ಕಾರ ಇರಬಹುದು, ನಿಮ್ಮ ಸರ್ಕಾರ ಇರಬಹುದು, ಯಾವುದೇ ಸರ್ಕಾರ ಇರಬಹುದು, ನಾನು ಇದರಲ್ಲಿ ರಾಜಕಾರಣವನ್ನು ಮಾತನಾಡುತ್ತಿಲ್ಲ. ನಮ್ಮ ರಾಜ್ಯದ ಒಟ್ಟಾರೆ, industrial atmosphere ಬಗ್ಗೆ ನಾವು ಮಾತನಾಡುತ್ತಿರಬಹುದು. industrialists ಬೇರೆ ರಾಜ್ಯಗಳಿಗೆ ಹೋಗುತ್ತಿದ್ದಾರೆ, ನಮ್ಮ ರಾಜ್ಯಕ್ಕೆ ಸಾವಿರಾರು ಕೋಟಿ ರೂಪಾಯಿಗಳ ಬಂಡವಾಳ ತರುವಂತಹ industrialists ಏತಕ್ಕೆ ಬರುತ್ತಿಲ್ಲ ಎನ್ನುವ ವಿಚಾರದಲ್ಲಿ ನಾವು ಆತ್ಮ ವಿಮರ್ಶೆ ಮಾಡಿಕೊಳ್ಳುವಂತಹ ಸ್ಥಿತಿ ನಮ್ಮಲ್ಲಿ ಇದೆ. ನಮ್ಮಲ್ಲಿ ಕೊಡುವಂತಹ ಈ ಎಲ್ಲಾ ಕ್ಲಿಯರೆನ್ಸ್‌ಗಳು ಏನಿವೆ, ಈ ಕ್ಲಿಯರೆನ್ಸ್‌ಗಳಾಗಿವೆ. ಈ ಸಮಯದಲ್ಲಿ ಒಂದು ಕಡೆ ನೀರು ಸಿಕ್ಕಿ ಬಿಡುತ್ತದೆ ಎಂದು ಹೇಳಿ, ಆ ನಿರನ್ನು ತೆಗೆದುಕೊಳ್ಳುವದಕ್ಕೋಸ್ಕರ, ಅಲ್ಲಿ ಲ್ಯಾಂಡ್ ತೆಗೆದುಕೊಳ್ಳುವುದಕ್ಕೋಸ್ಕರವಾಗಿ, ಅದಕ್ಕೆ ಬೇಕಾದಂತಹ ಜಾಗವನ್ನು ತೆಗೆದುಕೊಳ್ಳುವದಕ್ಕೋಸ್ಕರವಾಗಿ, ಅಲ್ಲಿ ಒಂದು ಚಿಕ್ಕ ರಸ್ತೆಯನ್ನು ಮಾಡಿಸಿಕೊಳ್ಳಬೇಕೆಂದರೆ, ಆ KIADB ಹಿಂದೆ ಒದ್ದಾಡಿಕೊಂಡು, ಮಾಡಿಕೊಳ್ಳುವಷ್ಟು ಗದ್ದಲಗಳಾಗುತ್ತಿವೆ. ಇಷ್ಟೆಲ್ಲಾ ಮಾಡಿಕೊಂಡು industry ಮಾಡುತ್ತಾರೆಯೇ? ಮಾನ್ಯ ಸಭಾಪತಿಯವರೆ, ನಮ್ಮ ಮುಖ್ಯಮಂತ್ರಿಗಳು ಮೈಸೂರಿನಲ್ಲಿಯೇ ಇರುವಂತಹವರಾಗಿದ್ದಾರೆ. ಹೆಬ್ಬಾಳ ಇಂಡಸ್ಟ್ರಿಯಲ್ ಏರಿಯಾ ಅಥವಾ ಮೈಸೂರಿನಲ್ಲಿರುವಂತಹ ಬೇರೆ ಬೇರೆ ಏರಿಯಾಗಳಲ್ಲಿ

ಇವತ್ತಿಗೂ ಸಹ ನಾವು ಭೂಸ್ವಾಧೀನ ಮಾಡಿಕೊಂಡು, ಲ್ಯಾಂಡ್ ಕೊಟ್ಟಂತಹವರ ಪೈಕಿ 40% industries ಬಂದಿಲ್ಲ. ಬಹಳಷ್ಟು ಕಡೆ ಜಾಗ ಖಾಲಿ ಬಿದ್ದಿದೆ. ನಾವು land acquisition ಮಾಡಿಕೊಂಡು ಅವರಿಗೆ ಲ್ಯಾಂಡ್ ಅನ್ನು ಕೊಡುತ್ತೇವೆ. ಆದರೆ ಆ ಲ್ಯಾಂಡ್ ತೆಗೆದುಕೊಂಡವರ ಪೈಕಿ ಶೇಕಡ 40 ಪರ್ಸೆಂಟ್ ಕೈಗಾರಿಕೆಗಳವರು ಬಂದಿಲ್ಲ. ಬೇಕಾದಷ್ಟು ಖಾಲಿ ಇವೆ. ಮುಂಚೆ ಏನೋ ಒಂದು ಷೆಡ್ ಕಟ್ಟುತ್ತಾರೆ. ಸಾವಿರಾರು ಕೋಟಿ ರೂಪಾಯಿಗಳ ಅಂದರೆ ಸುಮಾರು 10–20 ಕೋಟಿ ರೂಪಾಯಿಗಳ ಪ್ರೊಡಕ್ಷನ್ ಮಾಡುತ್ತಾರೆ. ಇದೆಲ್ಲವನ್ನೂ ಹಿಂದೆ ಮಾಡುತ್ತಿದ್ದರು. ಅದಕ್ಕೆ ಬೇಕಾದ documentation ಅನ್ನು ಮಾಡಿಸಿಕೊಳ್ಳುತ್ತಾರೆ. ಅದಕ್ಕೆ ಬೇಕಾದ Absolute Sale Deed ಅನ್ನು ಮಾಡಿಸಿಕೊಳ್ಳುತ್ತಾರೆ. ಇದರಲ್ಲಿ ರಿಯಲ್ ಎಸ್ಟೇಟ್ ಧಂದೆ ನಡೆಯುತ್ತಿದೆ. ಈ ಕೈಗಾರಿಕಾ ಜಮೀನಿನಲ್ಲಿ ನಡೆಯುತ್ತಿರುವ ರಿಯಲ್ ಎಸ್ಟೇಟ್ ಇನ್ನು ಯಾವುದರಲ್ಲೂ ಕೂಡ ನಡೆಯುತ್ತಿಲ್ಲ. ನೀವು ಇದನ್ನು ಏನು ಇಲ್ಲಿ ತಂದಿದ್ದೀರಿ ಇದರಲ್ಲಿ ಯಾವುದೇ ಹೆಚ್ಚಿನ ದೊಡ್ಡದಾದ ಬದಲಾವಣೆ ಏನೂ ಮಾಡಿಲ್ಲ. ಒಂದು ಕಡೆಯಲ್ಲಿ 3 ಕೋಟಿ ಇದ್ದುದನ್ನು 10 ಕೋಟಿಗೆ ಮಾಡಿದ್ದೀರಿ ಮತ್ತೊಂದು ಕಡೆಯಲ್ಲಿ 50 ಕೋಟಿ ಇದ್ದುದನ್ನು 100 ಕೋಟಿಗೆ ಮಾಡಿದ್ದೀರಿ. ಆದರೆ ನಾವು ಕೊಡುವಂತಹ ನಮ್ಮ Single Window Clearance Committee ಯ sanctity ಎಷ್ಟು ಇದೆ ಎಂಬುದರ ಬಗ್ಗೆ ನೋಡಬೇಕಾಗುತ್ತದೆ. ನಾಳೆ ಇನ್ನೊಬ್ಬರು ಗುಜರಾತಿಗೆ ಇಲ್ಲವೇ ಮಹಾರಾಷ್ಟ್ರಕ್ಕೆ ಹೋಗುತ್ತಾರೆ. ಸಾವಿರಾರು ಕೋಟಿ ರೂಪಾಯಿಯ ಬಂಡವಾಳವನ್ನು ಹಾಕುವ ಜನ ನಮ್ಮಲ್ಲಿ ಏಕೆ ಬರುವುದಿಲ್ಲ ಎಂಬುದನ್ನು ಕೂಡ ನೋಡಬೇಕಾಗುತ್ತದೆ. That means, we don't have a congenial atmosphere for investment in our State. ಇದರ ಬಗ್ಗೆ ಗಂಭೀರವಾದ ಚಿಂತನೆ ಮತ್ತು ಆತ್ಮಾವಲೋಕನವನ್ನು ಮಾಡಿಕೊಳ್ಳಬೇಕಾಗುತ್ತದೆ. ಇದಕ್ಕೆ ಕ್ಲಿಯರೆನ್ಸ್ ತೆಗೆದುಕೊಳ್ಳಬೇಕಾದರೆ ಕಣ್ಣಿನಲ್ಲಿ ನೀರಲ್ಲ ರಕ್ತ ಬರುತ್ತದೆ. ಅಲ್ಲಿ ಇರುವಂತಹ 'red-tapism' ಅಲ್ಲಿರುವಂತಹ ಭ್ರಷ್ಟಾಚಾರ ಏನು ಇದೆ ಇದರ ಬಗ್ಗೆ ಕೇಳುವವರು ಯಾರು? ಮೈಸೂರಿನಲ್ಲಿ ಒಬ್ಬ ಕೈಗಾರಿಕೋದ್ಯಮಿ ನಮ್ಮನ್ನು ಅವರ ಉದ್ಯಮದ ಉದ್ಘಾಟನಾ ಕಾರ್ಯಕ್ರಮಕ್ಕೆ ಕರೆದಿದ್ದ. ಅದು

export oriented unit ಆಗಿತ್ತು. ಅದರ ಹೆಸರು 'Skanray' ಎಂದು ಇತ್ತು. ನಮ್ಮನ್ನು ವಿಧಾನ ಸಭೆ, ವಿಧಾನ ಪರಿಷತ್ತಿನ ಸದಸ್ಯರು ಎಂದು ಪರಿಗಣಿಸಿ ಕರೆದಿದ್ದಾರೆಂದು ನಮಗೆ ಅನ್ನಿಸಿತ್ತು. ನಮ್ಮನ್ನೆಲ್ಲಾ ವೇದಿಕೆಯ ಮೇಲೆ ಕೂರಿಸಿ ದೊಡ್ಡ ದೊಡ್ಡ ಬೊಕ್ಕೆಯನ್ನು ಕೊಟ್ಟು ಕೂರಿಸಿದರು. ನಂತರ ಆ ವ್ಯಕ್ತಿ ತನ್ನ ಕಣ್ಣೀರಿನ ಕಥೆಯನ್ನು ಹೇಳಿದರು. ತಾನು ಇಲ್ಲಿ ಇವತ್ತು ದೊಡ್ಡ ಕೈಗಾರಿಕೋದ್ಯಮವನ್ನು ಸ್ಥಾಪಿಸುವುದಕ್ಕೆ ಕಳೆದ ಆರು ವರ್ಷಗಳಿಂದ ಏನೇನು ಮಾಡಿದೇನೆ ಎಷ್ಟೆಷ್ಟು ಕಷ್ಟ ಪಟ್ಟಿದ್ದೇನೆ ಎಂದು ಹೇಳಿದ. ಯಾರ್‍ಯಾರ ಮನೆ ಬಾಗಿಲಿಗೆ ಅಲೆದಾಡಿದ್ದೇನೆಂದು ಹೇಳಿದ. ನಮಗೆಲ್ಲರಿಗೂ ಆ ವ್ಯಕ್ತಿ ಮಂಗಳಾರತಿಯನ್ನು ಎತ್ತಿಬಿಟ್ಟ.

**ಶ್ರೀ ಪ್ರಕಾಶ್ ಬಾ. ಹುಕ್ಕೇರಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಈ ತಿದ್ದುಪಡಿ ವಿಧೇಯಕದ ಬಗ್ಗೆ ಮಾತನಾಡುವುದು ಬಿಟ್ಟು ಬೇರೆ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ.

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೆ, this is a consequential amendment. ನೀವು ಕೊಡುತ್ತಿರುವಂತಹ ನಿಮ್ಮ Single Window Clearance Committee ಯ sanctity ಏನು ಇದೆ ಮತ್ತು ಆ ನಂತರದಲ್ಲಿ ನಮ್ಮ ರಾಜ್ಯದ ಒಟ್ಟಾರೆ industrial atmosphere how much it is congenial? ನಮಗೆ ಬೇರೆಯವರು ಇಲ್ಲಿ ಬಂದು ಬಂಡವಾಳವನ್ನು ಹೂಡಬೇಕೆಂದರೆ ಅದಕ್ಕೆ ಅಗತ್ಯವಾದ Global Investor's Meet ಗಳನ್ನು ಮಾಡುತ್ತೇವೆ. ನಮ್ಮ ರಾಜ್ಯಕ್ಕೆ ಎಲ್ಲರೂ ಹಣವನ್ನು ಕೊಡಬೇಕೆಂದು ಆಸೆ. ನಮ್ಮ ರಾಜ್ಯದಲ್ಲಿ employment generate ಆಗಬೇಕೆಂದು ಆಸೆ. ಈ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಬಹಳ ಒಳ್ಳೆಯ ಖಾತೆಯನ್ನು ಇಟ್ಟುಕೊಂಡಿದ್ದಾರೆ. ಆದರೆ ಈ ಖಾತೆಗೆ ಸರಿಯಾದ ರೀತಿಯಲ್ಲಿ ನ್ಯಾಯ ಸಿಗಬೇಕೆಂದರೆ ಸರಿಯಾದ ರೀತಿಯಲ್ಲಿ ಒಂದು ವಿಮರ್ಶೆಯನ್ನು ಮಾಡಿ ಸರಿಯಾದಂತಹ ಒಂದು atmosphere ಒಂದು ಉತ್ತಮವಾದ ವಾತಾವರಣವನ್ನು ರಚನೆ ಮಾಡಿಕೊಳ್ಳಬೇಕಾಗುತ್ತದೆ. ಆದರೆ ನೀವು ಉತ್ತಮ ವಾತಾವರಣವನ್ನು ಕ್ರಿಯೇಟ್ ಮಾಡಿಕೊಳ್ಳದೆಯೇ 100 ಕೋಟಿ

ರೂಪಾಯಿಯನ್ನಾಗಲೀ 50 ಕೋಟಿ ರೂಪಾಯಿಯನ್ನಾಗಲೀ 25 ಕೋಟಿ ರೂಪಾಯಿಯನ್ನಾಗಲೀ ಯಾರೂ ಕೂಡ ಈ ಬಂಡವಾಳವನ್ನು ಹಾಕುವುದಕ್ಕ ಬರುವುದಿಲ್ಲ. ಆ ಕಾರಣಕ್ಕೋಸ್ಕರವಾಗಿ ಇದನ್ನು ಮಾಡಲೇಬೇಕಾಗುತ್ತದೆ.

**(ಈ ಹಂತದಲ್ಲಿ ಮಾನ್ಯ ಶಾಣಪ್ಪನವರು ಇದ್ದಕ್ಕಿದ್ದಂತೆ ವೆಲ್‌ನಲ್ಲಿ ಬಂದು ಮಾತನಾಡತೊಡಗಿದರು)**

**ಸಭಾಪತಿಯವರು:–** ಮಾನ್ಯ ಶಾಣಪ್ಪನವರೆ, ನಾನು ಆ ವಿಷಯವನ್ನು ತೆಗೆದುಕೊಳ್ಳುತ್ತೇನೆಂದು ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಬಂದಿದ್ದಾರೆ. ಅವರ ವಿಧೇಯಕಗಳು ಏನು ಇವೆ ಅವುಗಳನ್ನು ಪಾಸ್ ಮಾಡಿದ ನಂತರ ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತಿದ್ದೇನೆ. ತಾವು ದಯವಿಟ್ಟು ತಮ್ಮ ಜಾಗಕ್ಕೆ ಹೋಗಿ ಕುಳಿತುಕೊಳ್ಳಿ. ಈ ವಿಧೇಯಕ ಆದ ನಂತರ ತೆಗೆದುಕೊಳ್ಳುತ್ತೇನೆಂದು ಹೇಳುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):–** ಮಾನ್ಯ ಸಭಾಪತಿಗಳೇ, ಹಿರಿಯ ಸದಸ್ಯರಾದ ಮಾನ್ಯ ಶಾಣಪ್ಪನವರ ಗಮನಕ್ಕೆ ಒಂದು ವಿಚಾರವನ್ನು ತರಬಯಸುತ್ತೇನೆ. ಸದನ ಸಲಹಾ ಸಮಿತಿ ಸಭೆಯಲ್ಲಿ ವಿಧೇಯಕಗಳಿಗೆ ಮೊದಲ ಆದ್ಯತೆಯನ್ನು ಕೊಡಬೇಕು ಎಂದು ನಿರ್ಣಯವಾಗಿದೆ. ಆ ಸಲಹಾ ಸಮಿತಿ ಸಭೆಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಕೂಡ ಅದರಲ್ಲಿ ಇದ್ದರು.

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳ ವಿಧೇಯಕವನ್ನು ತೆಗೆದುಕೊಂಡ ನಂತರ ತೆಗೆದುಕೊಳ್ಳುತ್ತೇನೆಂದು ಹೇಳುತ್ತಿದ್ದೇನೆ. ತಾವು ಸಹಕಾರವನ್ನು ಕೊಡಬೇಕಾಗುತ್ತದೆ.

**(ಇದ್ದಕ್ಕಿದ್ದಂತೆ ಮಾನ್ಯ ಶಾಣಪ್ಪನವರು ವೆಲ್‌ನಲ್ಲಿ ನಿಂತು ಮಾತನಾಡತೊಡಗಿದರು)**

**ಶ್ರೀ ಎಸ್.ಆರ್.ಪಾಟೀಲ್:–** ಪೀಠ ಹೇಳಿದ ಹಾಗೆ ನಾವು ನೀವೂ ಕೇಳಬೇಕಲ್ಲವೇ? ನಿಮ್ಮ ಜೊತೆಯಲ್ಲಿ ನಾವು ಇದ್ದೇವೆ. ತಾವು ತಮ್ಮ ಸ್ಥಳಕ್ಕೆ

ಹೋಗಿ ಕುಳಿತುಕೊಳ್ಳಿ. ನೀವು ಅನ್ಯಥಾ ಭಾವಿಸಬೇಡಿ. ದಯಮಾಡಿ ತಾವು ತಮ್ಮ ಸ್ಥಳಕ್ಕೆ ಹೋಗಿ Kindly occupy your seat. We are with you. ನಿಮ್ಮ ಭಾವನೆಗಳು ಅರ್ಥವಾಗಿವೆ. ನಿಮ್ಮ ಜೊತೆಯಲ್ಲಿ ನಾವು ಇದ್ದೇವೆ. ದಯಮಾಡಿ ತಾವು ತಮ್ಮ ಸೀಟಿಗೆ ಹೋಗಿ.

**ಸಭಾಪತಿಯವರು:-** ಬೇಗನೆ ಮುಗಿಸಿ. Congenial atmosphere ಎಂದು ಹೇಳಿದರಿ. ಎಷ್ಟು ಹೊತ್ತು ಅದನ್ನೇ ಹೇಳುತ್ತೀರಿ ಬೇಗನೆ ಮುಗಿಸಿ ಬಿಡಿ.

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೆ, this is a consequential amendment ….

**(ವೆಲ್‌ನಲ್ಲಿ ನಿಂತು ಮಾನ್ಯ ಶಾಣಪ್ಪನವರು ಮಾತನಾಡತೊಡಗಿದರು)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಶಾಣಪ್ಪನವರ ಭಾವನೆಗಳನ್ನು ತಾವು ಅರ್ಥ ಮಾಡಿಕೊಂಡಿದ್ದೀರೆಂದು ನಾನು ಅಂದುಕೊಂಡಿದ್ದೇನೆ. ಅವರದ್ದು ತೆಗೆದುಕೊಳ್ಳಬೇಕಾಗಿತ್ತು.

**ಸಭಾಪತಿಯವರು:-** ಇದು ಆದ ಮೇಲೆ ತೆಗೆದುಕೊಳ್ಳುತ್ತೇನೆ.

**(ಮಾನ್ಯ ಶಾಣಪ್ಪನವರು ತಮ್ಮ ಸ್ಥಾನದಲ್ಲಿ ಆಸೀನರಾದರು)**

**ಶ್ರೀ ಕೆ.ಬಿ.ಶಾಣಪ್ಪ:-** ಇದಕ್ಕೆ ಪ್ರಾಮುಖ್ಯತೆಯನ್ನು ಕೊಡುತ್ತೀರಾ ಇಲ್ಲವೇ ಕೈಗಾರಿಕಾ ವಿಧೇಯಕಕ್ಕೆ ಪ್ರಾಮುಖ್ಯತೆಯನ್ನು ಕೊಡುತ್ತೀರಾ?

**ಶ್ರೀ ಸಿದ್ದರಾಮಯ್ಯ:-** ಅವರು ಗಮನ ಸೆಳೆಯುವ ಸೂಚನೆಯನ್ನು ಏನು ಕೊಟ್ಟಿದ್ದಾರೆ ಇದು ಆದ ನಂತರ, ಅದನ್ನು ತೆಗೆದುಕೊಳ್ಳಿ. ಆದರೆ ಆಗ ಅವರು ಸಭಾತ್ಯಾಗ ಮಾಡಿದ್ದರು. ನಿಮ್ಮದೇನೂ ತಪ್ಪಿಲ್ಲ ಬಿಡಿ. ಸ್ವಲ್ಪ ಶಾಂತವಾಗಿ ಇರಿ. ಮಾನ್ಯ ಮಧುಸೂದನ್ ಅವರು ಹೇಳಿದಂತಹ ಸಲಹೆ ಏನನು ಇದೆ ಆ ಸಲಹೆ ಸರಿಯಾಗಿದೆ. ನಿಜ. ಅನೇಕ ಸಾರಿ friendly atmosphere ಅನ್ನು ಕ್ರಿಯೇಟ್ ಮಾಡಬೇಕೆಂದು ಅವರು ಹೇಳುತ್ತಿದ್ದಾರೆ. ಅದನ್ನು ಮಾಡುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ.

Single Window Clearance Committee ಬಗ್ಗೆ ಮಾತನಾಡಿ ಎಲ್ಲವೂ ಕೂಡ ಒಟ್ಟಿಗೆ ಆಗಬೇಕೆಂದು ಹೇಳುತ್ತಿದ್ದಾರೆ. ಅದರ ಬಗ್ಗೆ ಕೂಡ ನಿಮ್ಮ ಆ ಸಲಹೆಯನ್ನು ನಾವು ಗಂಭೀರವಾಗಿ ಪರಿಗಣಿಸುತ್ತೇವೆ ಎಂದು ಹೇಳಿ ಈ ವಿಧೇಯಕಕ್ಕೆ ಒಪ್ಪಿಗೆಯನ್ನು ನೀಡಬೇಕೆಂದು ವಿನಂತಿ ಮಾಡುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ರಿಂದ 9**

**ಸಭಾಪತಿಯವರು:–** "ಖಂಡ 2 ರಿಂದ 9 ಎರಡೂ ಸೇರಿದಂತೆ ಈ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

(ಖಂಡ 2 ರಿಂದ 9 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು.)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, ಮೊದಲನೆಯ ಖಂಡ, ದೀಘ್ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

## ಪ್ರಸ್ತಾವದ ಅಂಗೀಕಾರ

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**ಸಭಾಪತಿಯವರು:–** ನಮ್ಮ ಸದನ ಸಲಹಾ ಸಮಿತಿ ಸಭೆಯಲ್ಲಿ ಆದ ತೀರ್ಮಾನದ ಪ್ರಕಾರ ಮತ್ತು ಹಿಂದಿನಿಂದ ನಡೆದುಕೊಂಡು ಬಂದ ಸಂಪ್ರದಾಯ ಕೂಡ ಆಗಿದೆ. ಸರ್ಕಾರದ ವಿಧೇಯಕಗಳು ಎಲ್ಲಾ ಮುಗಿದ ಮೇಲೆ ತೆಗೆದುಕೊಳ್ಳೋಣ. ತಾವು ಹಿರಿಯರು ಮತ್ತು ಮುಖ್ಯಮಂತ್ರಿಗಳು ತಾವೇನಾದರೂ ಇಚ್ಛೆ ಪಟ್ಟರೆ ಮಧ್ಯೆ ಇದನ್ನು ತೆಗೆದುಕೊಳ್ಳೋಣ. ಮಾನ್ಯ ಗೃಹ ಸಚಿವರು ಸದನಕ್ಕೆ ಬರಬೇಕಾಗಿದೆ. ಅವರನ್ನು ಕರೆಸಿ.

**ಶ್ರೀ ಎಂ.ಬಿ.ಪಾಟೀಲ್:–** ನಮ್ಮದು ಒಂದು ಇಂಜಿನಿಯರ್ಸ್‌ಗಳಿಗೆ ಸಂಬಂಧಪಟ್ಟಂತೆ ಒಂದು ಸಣ್ಣ ವಿಧೇಯಕ ಇದೆ. ಅದಕ್ಕೆ time limit ಇದೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಗೃಹ ಮಂತ್ರಿಗಳು ಬರುತ್ತಾರೆ. ಅವರು ಶುರು ಮಾಡಲಿ.

**ಸಭಾಪತಿಯವರು:–** ಅದು ಹೇಗೆ ಶುರು ಮಾಡುವುದಕ್ಕೆ ಆಗುತ್ತದೆ?

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಶಾಣಪ್ಪನವರು ಪ್ರಸ್ತಾಪ ಮಾಡಬೇಕೆಂದು ಇರುವ ವಿಚಾರಕ್ಕೆ ಉತ್ತರವನ್ನು ಕೊಡುವುದಕ್ಕೆ ಮಾನ್ಯ ಗೃಹ ಮಂತ್ರಿಗಳು ಸದನಕ್ಕೆ ಬರಬೇಕಾಗುತ್ತದೆ. ಅವರನ್ನು ಸದನಕ್ಕೆ ಕರೆಸಿ.

ಅವರು ಬಂದ ನಂತರ ನಾವು ಪ್ರಸ್ತಾಪ ಮಾಡಿ ಇವತ್ತು ಅದಕ್ಕೆ ಒಂದು ಪರಿಹಾರವನ್ನು ಹುಡುಕಲೇಬೇಕಾಗುತ್ತದೆ. ಮುಖ್ಯಮಂತ್ರಿಗಳವರಿಗೆ ಗೊತ್ತಿದೆ. ಅವರಿಗೂ ಕೂಡ ಇರಲಿಕ್ಕೆ ಹೇಳಬೇಕು. ನೀವು ಹೇಳಿದರೆ ಅವರು ಇಲ್ಲಿ ಇರದೇ ಇರುತ್ತಾರಾ?

(6–00 ಗಂಟೆ)

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೆ, ಮಾನ್ಯ ಶಾಣಪ್ಪನವರು ಎತ್ತಿರತಕ್ಕಂಥ ವಿಷಯಕ್ಕೆ ಮಾನ್ಯ ಗೃಹ ಮಂತ್ರಿಗಳು ಬರಲಿ. ಮಾನ್ಯ ಗೃಹ ಸಚಿವರು ಇವೊತ್ತು ಬಂದಾದ ಮೇಲೆ ಆ ವಿಚಾರವನ್ನು ಎತ್ತಿಕೊಂಡು ಪರಿಹಾರವನ್ನು ಹುಡುಕಲೇಬೇಕಾಗುತ್ತದೆ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೆ, ನಮಗೇ ಹೀಗಾದರೆ ಈ ದೇಶದಲ್ಲಿ ನಮ್ಮ ಗತಿ ಏನು?

**ಸಭಾಪತಿಯವರು:–** ಮಾನ್ಯ ಶಾಣಪ್ಪನವರೆ, ನಾನು ತಮಗೆ ಗೃಹ ಸಚಿವರು ಬಂದಾಗ ಅವಕಾಶ ಕೊಡುತ್ತೇನೆ. ಅಲ್ಲಿಯವರೆಗೆ ಬೇರೆ ವಿಧೇಯಕಗಳನ್ನು ತೆಗೆದುಕೊಳ್ಳೋಣ.

**(ಇ) ಕರ್ನಾಟಕ ಸಿವಿಲ್ ಸೇವೆಗಳು (ಜಲ ಸಂಪನ್ಮೂಲ ಸೇವೆ) (ಸಹಾಯಕ ಇಂಜಿನಿಯರುಗಳ ಮತ್ತು ಕಿರಿಯ ಇಂಜಿನಿಯರುಗಳ ವಿಶೇಷ ನೇಮಕಾತಿ) ವಿಧೇಯಕ, 2013**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಎಂ.ಬಿ.ಪಾಟೀಲ್(ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೆ ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2013ರ ಕರ್ನಾಟಕ ಸಿವಿಲ್ ಸೇವೆಗಳು (ಜಲ ಸಂಪನ್ಮೂಲ ಸೇವೆ) (ಸಹಾಯಕ ಇಂಜಿನಿಯರುಗಳ ಮತ್ತು ಕಿರಿಯ ಇಂಜಿನಿಯರುಗಳ ವಿಶೇಷ ನೇಮಕಾತಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಶ್ರೀ ಎಂ.ಬಿ.ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೆ, ಕೃಷ್ಣಾ ಮೇಲ್ದಂಡೆ ಯೋಜನೆ ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳುವ ಉದ್ದೇಶದಿಂದ 1993–94ರಲ್ಲಿ ಗುಲಬರ್ಗಾ, ಬಿಜಾಪೂರ್, ರಾಯಚೂರು, ಬೀದರ್ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಸಹಾಯಕ ಮತ್ತು ಕಿರಿಯ ಇಂಜಿನೀಯರ್‌ಗಳನ್ನು ಗುತ್ತಿಗೆ ಆಧಾರದ ಮೇಲೆ ಮತ್ತು ಯೋಜನಾ ಪ್ರದೇಶ ಹೊರತುಪಡಿಸಿ 417 ಇಂಜಿನೀಯರ್‌ಗಳನ್ನು ನೇಮಿಸಿಕೊಳ್ಳಲಾಗಿತ್ತು. ತದನಂತರ ಇವರ ಸೇವೆಯನ್ನು 18–10–2002ರಂದು ಸಕ್ರಮಗೊಳಿಸಲಾಗಿದೆ. ಈ ರೀತಿ ಸಕ್ರಮಾತಿ ಮಾಡಿರುವುದನ್ನು 47 ನಿರುದ್ಯೋಗಿ ಇಂಜಿನಿಯರ್‌ಗಳು ಡಬ್ಲ್ಯುಸಿ 3005/2003 ಮತ್ತು ಇತರೆ ಸಂಬಂಧಿಸಿದ ದಾವೆಗಳ ಮುಖಾಂತರ ಸ್ಪಂದಿಸಿದ್ದರು. ಮಾನ್ಯ ಉಚ್ಚನ್ಯಾಯಾಲಯದ ವಿಭಾಗೀಯ ಪೀಠವು ಸದರಿ ನೇಮಕಾತಿಯ ಪ್ರಕ್ರಿಯೆಯನ್ನು ರದ್ದುಗೊಳಿಸಿ ಮೇಲಿನ 417 ಹುದ್ದೆಗಳಿಗೆ ಹೊಸ ನೇಮಕಾತಿಗಳನ್ನು ಆರು ತಿಂಗಳಿಂದ ಒಂದು ವರ್ಷದೊಳಗೆ ಪೂರ್ಣಗೊಳಿಸಲು ಸೂಚಿಸಿದೆ. ಈ ನೇಮಕಾತಿಗೆ ದಿನಾಂಕ 11–2–1990ರಂದು ಅರ್ಹತೆ ಇರುವ ಎಲ್ಲಾ ಅಭ್ಯರ್ಥಿಗಳಿಗೆ ಅವಕಾಶ ನೀಡಬೇಕೆಂದು ಮಾನ್ಯ ಉಚ್ಚನ್ಯಾಯಾಲಯ ಆದೇಶಿಸಿದೆ. ಈ ಕುರಿತು ಸರ್ಕಾರವು ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲು ಮಾಡಲಾಗಿದ್ದ ಎಸ್‌ಎಲ್‌ಪಿ 38345–38397/2012 ಸಲ್ಲಿಸಿದ್ದು, ಮಾನ್ಯ ಸರ್ವೋಚ್ಚ ನ್ಯಾಯಾಲಯವರು ದಿನಾಂಕ 14–12–2012ರ ಆದೇಶದಲ್ಲಿ ಎಸ್‌ಎಲ್‌ಪಿಯನ್ನು ವಜಾಗೊಳಿಸಿ ಉಚ್ಚ ನ್ಯಾಯಾಲಯದ ಆದೇಶದಂತೆ 417 ಹುದ್ದೆಗಳಿಗೆ ದಿನಾಂಕ 14–12–2012ರಿಂದ ಒಂದು ವರ್ಷದೊಳಗೆ ನೇಮಕಾತಿ ಪ್ರಕ್ರಿಯೆಯನ್ನು ಮುಗಿಸುವಂತೆ ಹಾಗೂ ಅಡ್ಹಾಕ್ ಆಧಾರದ ಮೇಲೆ ಸಕ್ರಮಗೊಂಡಿರುವ ಇಂಜಿನಿಯರ್‌ಗಳ ಸೇವೆಯನ್ನು ದಿನಾಂಕ 13–12–2013ರಂದು ಕೊನೆಗೊಳಿಸುವಂತೆ ಆದೇಶಿಸಿರುತ್ತದೆ. ಈಗಾಗಲೇ ಕಾರ್ಯನಿರ್ವಹಿಸುತ್ತಿರುವ 417 ಸಹಾಯಕ ಕಿರಿಯ ಇಂಜಿನಿಯರ್‌ಗಳ

ಸೇವಾ ಭದ್ರತೆಯನ್ನು ಒದಗಿಸುವ ಬಗ್ಗೆ ಈ ವಿಶೇಷ ಶಾಸನವಿರುತ್ತದೆ. ವಿಧೇಯಕದ ಮುಖ್ಯಾಂಶಗಳು ಅಂದರೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ದಿನಾಂಕ 14–12–2012ರ ಹಿನ್ನಲೆಯಲ್ಲಿ 417 ಸಹಾಯಕ ಕಿರಿಯ ಇಂಜಿನಿಯರ್‌ಗಳ ಸೇವೆ ದಿನಾಂಕ 13–12–2013ರಂದು ಕೊನೆಗೊಳ್ಳುತ್ತದೆ. ಇವರುಗಳ ಸೇವಾ ಭದ್ರತೆ ಒದಗಿಸುವಗೋಸ್ಕರ 10–12–2013ರಿಂದ ಅನ್ವಯವಾಗುವಂತೆ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಇವರುಗಳ ಸೇವೆಯನ್ನು ಮುಂದುವರೆಸುವುದು. ಎರಡನೆಯದಾಗಿ, ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸುವುದು. ಮೂರನೆಯದಾಗಿ, 11–02–1999 ರಂತೆ ಅರ್ಹತೆ ಹೊಂದಿರುವ ಅಭ್ಯರ್ಥಿಗಳು ಮಾತ್ರ ನೇಮಕಾತಿಯಲ್ಲಿ ಪಾಲ್ಗೊಳ್ಳತಕ್ಕದ್ದು. ನಾಲ್ಕನೆಯದಾಗಿ, ನೇಮಕಾತಿಗೆ ಬೇಕಾದ ವಿದ್ಯಾರ್ಹತೆ, ನೇಮಕಾತಿಗೆ ಬೇಕಾದ ವಿಧಾನಗಳು, ಹಾಲಿ ಜಾರಿಯಲ್ಲಿರುವ ನಿಯಮಗಳಂತೆ ಇರುತ್ತದೆ. ಐದನೆಯದಾಗಿ, ನ್ಯಾಯಾಲಯದ ಆದೇಶದಿಂದ ಬಾಧಿತರಾದ 417 ಇಂಜಿನಿಯರ್‌ಗಳಿಗೆ ಶೇಕಡ ಐದರಂತೆ ಪ್ರತಿ ವರ್ಷ ಹಾಗೂ ಗರಿಷ್ಠ ಮೂವತ್ತರಷ್ಟು ವೇಟೇಜ್ ನೀಡುವುದು. ಆರನೆಯದಾಗಿ 2002ರಿಂದ ಅನ್ವಯವಾಗುವಂತೆ 417 ಪುನರ್ ಆಯ್ಕೆಗೊಳ್ಳುವ ಇಂಜಿನಿಯರ್‌ಗಳಿಗೆ ರಜೆ/ವೇತನ/ಜೇಷ್ಠತೆ/ನಿವೃತ್ತಿ ಸೌಲಭ್ಯ ನೀಡುವುದು.

**ಶ್ರೀ ಡಿ.ವಿ.ಸದಾನಂದಗೌಡ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಸರ್ವೋಚ್ಚ ನ್ಯಾಯಾಲಯದವರು ಸ್ಪೆಸಿಫಿಕ್ ಆಗಿ ಈ ರೀತಿ ಮಾಡಿ ಎಂದು ಹೇಳುವಂಥದ್ದನ್ನು ಸರ್ಕಾರ ಮಾಡಿದೆ. ಇದರಲ್ಲಿ 417 ಪುನರ್ ಆಯ್ಕೆಗೊಳ್ಳುವ ಇಂಜಿನಿಯರ್‌ಗಳಿಗೆ ರಜೆ/ವೇತನ/ಜೇಷ್ಠತೆ/ನಿವೃತ್ತಿ ಸೌಲಭ್ಯ ನೀಡುವುದನ್ನು ಇನ್‌ಕಾರ್ಪೊರೇಟ್ ಮಾಡುವಂಥದ್ದನ್ನು ಮಾತ್ರ ಮಾಡಬೇಕಾಗಿದೆ. ನ್ಯಾಯಾಲಯದ ಆದೇಶದಂತೆ ನಾವು ಇದನ್ನು ಮಾಡುತ್ತಿದ್ದೇವೆ. ಇದೇ ವರ್ಷದ ಡಿಸೆಂಬರ್ 13ನೇ ತಾರೀಖಿನೊಳಗೆ ಇದು ಮಾಡಬೇಕಾಗಿರುವುದರಿಂದ ಇದನ್ನು ತುರ್ತಾಗಿ ಮಾಡಲೇಬೇಕಾಗಿದೆ. ಇದಕ್ಕೆ ಎಲ್ಲರ ಸಹಮತ ಇದೆ. ಈ ಇಂಜಿನಿಯರ್‌ಗಳು ಬಹಳ ಒಳ್ಳೆಯ ಕೆಲಸ

ಕಾರ್ಯಗಳನ್ನು ಮಾಡಿ ಈ ಭಾಗಕ್ಕೆ ಒಳ್ಳೆಯ ಸೇವೆಯನ್ನು ಕೊಟ್ಟಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿರುವಂಥ ಸಂಗತಿ.

**ಶ್ರೀ ಸಿ.ಹೆಚ್.ವಿಜಯಶಂಕರ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಇದರಲ್ಲಿ ಮುಖ್ಯವಾಗಿ ಜೆ.ರವಿ ಮತ್ತು ಇನ್ನಿತರ ಮೂರು ಜನ ಘನ ನ್ಯಾಯಾಲಯಕ್ಕೆ ಹೋಗಿದ್ದಾರೆ. ಅವರು ಕೋರ್ಟಿಗೆ ಹೋಗಲು ಮುಖ್ಯವಾದ ಕಾರಣವೇನೆಂದರೆ, ಈ ನೇಮಕಾತಿ ಸಂವಿಧಾನದ ಅನುಚ್ಛೇದ 16(3) 16(4)ಕ್ಕೆ ವಿರೋಧವಾಗಿದೆ ಎಂದು. ತಾವು ಇಲ್ಲಿ 417 ಜನ ಇಂಜಿನಿಯರ್‌ಗಳ ಹಿತಾಸಕ್ತಿಯನ್ನು ಸಂರಕ್ಷಿಸುವುದಕ್ಕಾಗಿ ಎಂದು ಹೇಳುತ್ತಿದ್ದೀರಿ. ಇಲ್ಲಿ ಸಂವಿಧಾನದ 16(4) ಏನು ಹೇಳುತ್ತದೆಂದರೆ "ರಾಜ್ಯದ ಅಧೀನದಲ್ಲಿರುವ ಸೇವೆಗಳ ಅನುಸೂಚಿತ ಜಾತಿಗಳು..." ಈ ರೀತಿಯ ನೇಮಕಾತಿಗಳು ಏನು ಇವೆ, ನೀವು ಸೇವೆಯಲ್ಲಿ ಏನು ಮೀಸಲಾತಿಯನ್ನು ಪಾಲಿಸಬೇಕಾಗಿದೆ ಆ ಮೀಸಲಾತಿಯನ್ನು ಪಾಲಿಸದೆ ಇರುವಂಥದ್ದು ಕೇವಲ ಒಂದು ಇಲಾಖೆಗೆ ಅಲ್ಲ. ಇದು ಒಂದರಲ್ಲಿ ಅವರು ಕೋರ್ಟಿಗೆ ಹೋಗಿದ್ದಾರೆ, ಮತ್ತೆ ಇದು ಸರ್ಕಾರದ ಮುಂದೆ ವಾಪಸ್ ಬಂದಿದೆ. ಆದರೆ ಸರ್ಕಾರದ ನೇಮಕಾತಿಗಳಲ್ಲಿ ಈ ರೀತಿ ಬಹುಶಃ ತಾವು ಏನು ಮೀಸಲಾತಿ ಪ್ರಮಾಣವನ್ನು ಪಾಲನೆ ಮಾಡಬೇಕಾಗಿದೆ ಆ ಪಾಲನೆ ಮಾಡದಿರುವ ನೂರಾರು ಪ್ರಕರಣಗಳನ್ನು ನಾನು ಕೊಡಬಲ್ಲೆ. ಇವೊತ್ತು ನೀವು ಜಸ್ಟಿಸ್ ಕೊಡಲಿಕ್ಕೆ ಯೋಚನೆ ಮಾಡುತ್ತಿದ್ದೀರಿ. ಆದರೆ ಆವೊತ್ತು ಇದನ್ನು ಪಾಲನೆ ಮಾಡದೆ ಇರುವಂಥ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ. ಈ ವ್ಯವಸ್ಥೆಯನ್ನು ಸುಧಾರಣೆ ಮಾಡಲು ಏನು ಕ್ರಮ ತೆಗೆದುಕೊಳ್ಳುತ್ತೀರಿ? ಎಲ್ಲಿಯವರೆಗೆ ಈ ರೀತಿ ವಯೋಲೇಶನ್ ಮುಂದುವರೆಸಿಕೊಂಡು ಹೋಗುತ್ತೀರಿ? ಯಾವುದಕ್ಕೆ ಆದ್ಯತೆ?

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೆ, ನೇಮಕಾತಿ ಮಾಡುವಾಗಲೇ ರೋಸ್ಟರ್ ಸಿಸ್ಟಂ ಅನ್ನು ಅಡಾಪ್ಟ್ ಮಾಡಿಕೊಂಡು ನೇಮಕಾತಿ ಮಾಡಬೇಕಾಗಿತ್ತು. ರೋಸ್ಟರ್ ಇಲ್ಲದೆ ನೇಮಕಾತಿ ಮಾಡಲು ಬರುವುದಿಲ್ಲ.

**ಶ್ರೀ ಸಿ.ಹೆಚ್.ವಿಜಯಶಂಕರ್:-** ಮಾನ್ಯ ಸಭಾಪತಿಯವರೆ, ತಾವು ಇವೊತ್ತು ಘನ ನ್ಯಾಯಾಲಯದ, ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಕ್ರಮವನ್ನು ತೆಗೆದುಕೊಳ್ಳಲು ಹೊರಟಿದ್ದೀರಿ. ಆದರೆ ನಾನು ನಿಮ್ಮಲ್ಲಿ ಕೇಳಿಕೊಳ್ಳುವುದೆನೆಂದರೆ ಈ ರೋಸ್ಟರ್ ವಿಚಾರದಲ್ಲಿ ಏನು ವಯೋಲೇಶನ್ ಆಗುತ್ತಿದೆ ಇದು ನೂರಾರು ಇಲಾಖೆಗಳಲ್ಲಿ ಆಗುತ್ತಿದೆ. ನಾನು ಈಗ ಬ್ಯಾಕ್ವರ್ಡ್ ಕ್ಲಾಸ್ ಕಮಿಟಿಯಲ್ಲಿದ್ದೇನೆ. ಬೇರೆ ಬೇರೆ ಇಲಾಖೆಗಳಲ್ಲಿ ಈ ರೀತಿಯ ವ್ಯತ್ಯಾಸಗಳಾಗುತ್ತಿರುವುದನ್ನು ನಾವು ಹತ್ತಾರು ಬಾರಿ ಚರ್ಚೆ ಮಾಡಿದ್ದೇವೆ. ಆದ್ದರಿಂದ ನಮಗೆ ಒಂದು ಭರವಸೆ ಬೇಕಾಗಿದೆ ಅದೇನೆಂದರೆ ಸರ್ಕಾರ ನೇಮಕಾತಿ ವಿಚಾರದಲ್ಲಿ ಯಾರಿಗೆ ಅನ್ಯಾಯವಾಗಿದೆ ಅವರು ಕೋರ್ಟ್ ಹತ್ತುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆಯಲ್ಲ, ರೋಸ್ಟರ್ ಮೆಂಟೇನ್ ಆಗುತ್ತಿಲ್ಲವೆಮದು ಆ ವರ್ಗಗಳು ತಮ್ಮ ಹಿತಾಸಕ್ತಿಗೋಸ್ಕರ ಘನ ನ್ಯಾಯಾಲಯಕ್ಕೆ ಹೋಗುವಂಥ ವಾತಾವರಣ ಇದೆಯಲ್ಲ ಅದು ತಪ್ಪಿಸುವಂಥ ಒಂದು ಭರವಸೆಯನ್ನು ತಾವು ಕೊಡಬೇಕು.

**ಸಭಾಪತಿಯವರು:-** ನಾವು ನಮ್ಮ ಸದನದಲ್ಲಿ ಒಂದು ಸಣ್ಣ ಸಿಸ್ಟಂ ನಡೆಸುತ್ತಿದ್ದೇವೆ. ಈ ತರಹ ಬಿಲ್‌ಗಳು ಬಂದಾಗ ತಮ್ಮ ಪಕ್ಷದ ಸದಸ್ಯರು ಇದರ ಬಗ್ಗೆ ಯಾರಾದರೂ ಮಾತನಾಡುತ್ತಾರೆಯೇ ಎಂದು ಮುಖ್ಯ ಸಚೇತಕರನ್ನು ಕೇಳುತ್ತೇವೆ. ಅವರು ಇಂತಿಂಥವರು ಇಂತಿಂಥ ಬಿಲ್‌ಗಳ ಮೇಲೆ ಮಾತನಾಡುತ್ತಾರೆಂದು ಪತ್ರವನ್ನು ಕಳುಹಿಸುತ್ತಾರೆ. ಇದಕ್ಕೆ ರೂಲ್ಸ್ ಸಪೋರ್ಟ್ ಏನೂ ಇಲ್ಲ. ನಾವು ಒಂದು ಸಿಸ್ಟಂ ಅನ್ನು ಮಾಡಿಕೊಂಡಿದ್ದೇವೆ. ಅದರ ಪ್ರಕಾರ ಮುಖ್ಯ ಸಚೇತಕರು ನನಗೆ ಒಂದು ಪತ್ರವನ್ನು ಕಳುಹಿಸಿದ್ದಾರೆ. ಅದರಲ್ಲಿ ಶ್ರೀ ಸಿ.ಹೆಚ್.ವಿಜಯಶಂಕರ್‌ರವರು ಹಾಗೂ ರಘುನಾಥರಾವ್ ಮಲ್ಕಾಪುರೆಯವರು ಮತನಾಡುತ್ತಾರೆಂದು ಹೇಳಿದ್ದಾರೆ. ನಾನು ಅವರಿಬ್ಬರಿಗೆ ಅವಕಾಶ ಕೊಡಬೇಕೆಂದಿದ್ದೇನೆ. ಬೇರೆಯವರು ನಾನು ಮಾತನಾಡುತ್ತೇನೆಂದು ಕೈ ಎತ್ತಿದರೆ ಹೇಗೆ? ತಾವುಗಳು ತಮ್ಮ ಮುಖ್ಯ ಸಚೇತಕರಿಗೆ ಹೇಳುವುದು ಒಳ್ಳೆಯದು. ಏಕೆಂದರೆ ಅವರು ಒಟ್ಟಾಗಿ ಸೇರಿ ತೀರ್ಮಾನ ಮಾಡಿದ್ದೇವೆಂದು ಹೇಳಿದ್ದಾರೆ. ಹಾಗೆ

ಮಾಡದಿದ್ದರೆ ಒಂದು ಬಿಲ್ ಅನ್ನು ನಾನು ಎಷ್ಟು ಹೊತ್ತು ನಡೆಸಲಿ? ನಾನು ಇಬ್ಬರಿಗೆ ಮಾತ್ರ ಅವಕಾಶ ಕೊಡುತ್ತೇನೆ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೆ, ನಿನ್ನೆ ಎರಡು ನಿಮಿಷ ಬಿಟ್ಟರೆ ನಾನು ಈ ಸದನದಲ್ಲಿ ಮಾತನಾಡಲೇ ಇಲ್ಲ.

**ಶ್ರೀ ರಘುನಾಥರಾವ್ ಮಲ್ಕಾಪುರೆ:-** ಮಾನ್ಯ ಸಭಾಪತಿಯವರೆ, ನಾನೊಬ್ಬ ಇಂಜಿನಿಯರ್, ಇದು ಇಂಜಿನಿಯರ್‌ರವರಿಗೆ ಸಂಬಂಧಪಟ್ಟಂಥ ವಿಚಾರ. ನಾನು ಮಾತನಾಡಬೇಕೆಂದು ಮುಖ್ಯ ಸಚೇತಕರಲ್ಲಿ ವಿನಂತಿಯನ್ನು ಮಾಡಿಕೊಂಡಿದ್ದೇನೆ. ದಯಮಾಡಿ ನನಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ನಿಮಗೆ ಅವಕಾಶ ಕೊಡುತ್ತೇನೆ. ಮೊದಲು ಅವರು ಎರಡು ನಿಮಿಷ ಮಾತನಾಡಲಿ.

**ಶ್ರೀ ಡಿ.ವಿ.ಸದಾನಂದಗೌಡ:-** ಮಾನ್ಯ ಸಭಾಪತಿಯವರೆ, ಸೋಮಣ್ಣನವರು ಕೂಡ ಎರಡು ನಿಮಿಷ ಮಾತನಾಡಲಿ.

**ಶ್ರೀ ವಿ.ಸೋಮಣ್ಣ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಆವತ್ತಿನ ದಿವಸ ಕೃಷ್ಣ ಮೇಲ್ದಂಡೆ ಯೋಜನೆಯನ್ನು ಪ್ರಾರಂಭ ಮಾಡಿದಂತಹ ದಿನಗಳಲ್ಲಿ ಕೆಲಸವನ್ನು ಮಾಡುವುದಕ್ಕೆ ಯಾವುದೇ ಇಂಜಿನಿಯರ್‌ಗಳು ಬರುತ್ತಿರಲಿಲ್ಲ. ಆವತ್ತು ಯಾವುದೇ ಅಧಿಕಾರಿಯನ್ನು ಅಲ್ಲಿ ಕೆಲಸ ಮಾಡುವುದಕ್ಕೆ ಹಾಕಿದರೆ 8 ದಿವಸಗಳ ಕಾಲ ಮಾಡಿದಂತಹ ಉದಾಹರಣೆ ಇರಲಿಲ್ಲ. ಆದುದರಿಂದ ಆವತ್ತಿನ ಪರಿಸ್ಥಿತಿಯನ್ನು ಅವಲೋಕನ ಮಾಡಿ, ಇಂಜಿನಿಯರ್‌ಗಳನ್ನು ಕೆಲಸಕ್ಕೆ ತೆಗೆದುಕೊಂಡಿರುವುದು. ಅಂತಹ ಸಂದರ್ಭದಲ್ಲಿ ಇದನ್ನು ಮಾಡಿದ್ದಾರೆ. ಮಾಡುವ ಸಂದರ್ಭದಲ್ಲಿ ಉಚ್ಛ ನ್ಯಾಯಾಲಯ ಕೊಟ್ಟಿರತಕ್ಕಂತಹ ತೀರ್ಪು ಏನಿದೆ ಅದನ್ನು ಸರ್ವೋಚ್ಛ ನ್ಯಾಯಾಲಯ ಮಾಡಿರತಕ್ಕಂತಹ ತೀರ್ಮಾನ ಏನನಿದೆ, ಮಾನವೀಯ ಎನ್ನುವುದಕ್ಕಿಂತಲೂ ಹೆಚ್ಚಾಗಿ ಇವರ ಸೇವೆಯನ್ನು ಕೂಡ ಪರಿಗಣಿಸಿ ಅವರನ್ನು ಯಾವ ರೀತಿಯಾಗಿ ಕೆಲಸಕ್ಕೆ

ತೆಗೆದುಕೊಳ್ಳಬೇಕು ಎನ್ನುವದರ ಬಗ್ಗೆಯೂ ಕೂಡ ಒಂದು ಮಾನದಂಡವನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಹೆಚ್ಚಿನ ಚರ್ಚೆಯಾಗತಕ್ಕಂತಹ ಅವಶ್ಯಕತೆ ಇಲ್ಲ. ಇಂತಹ ಸಂದರ್ಭಗಳನ್ನು ನಾವು ಸಾಕಷ್ಟು ನೋಡಿದ್ದೇವೆ. ಆದ್ದರಿಂದ ಇದನ್ನು ಮಾಡತಕ್ಕಂತಹ ಔಚಿತ್ಯಕ್ಕಿಂತಲೂ ಹೆಚ್ಚಾಗಿ ಆ ೪೧೭ ಜನ ಯಾರಿದ್ದಾರೆ ಅವತ್ತು ಅಲ್ಲಿ ಅವರುಗಳು ಕೆಲಸ ಮಾಡದೇ ಇದ್ದಿದ್ದರೆ ಇವತ್ತು ಆ ಯೋಜನೆ ಎಲ್ಲಿಯೋ ಒಂದು ಕಡೆ ಪೂರ್ತಿಯಾಗುತ್ತಿತ್ತೋ ಇಲ್ಲವೋ ಎನ್ನುವ ಅನುಮಾನ ಇರುತ್ತದೆ. ದಯಮಾಡಿ ಈಗ ಸರ್ಕಾರ ಏನು ತೆಗೆದುಕೊಂಡು ಬಂದಿದ್ದಾರೆ ಇದಕ್ಕೆ ನಾವು ಒಪ್ಪಿಕೊಳ್ಳುತ್ತೇವೆ ಎನ್ನುವದಕ್ಕಿಂತಲೂ ಹೆಚ್ಚಾಗಿ ಇಂತಹ ಸಮಸ್ಯೆಗಳು ಎಷ್ಟಿದೆ ಎನ್ನುವುದಕ್ಕಿಂತಲೂ ಹೆಚ್ಚಾಗಿ ಇಂತಹ ಅಪರೂಪದ ಕೆಲಸ ಮಾಡತಕ್ಕಂತಹ ಇಂಜಿನಿಯರ್‌ಗಳು ಯಾರಿದ್ದಾರೆ ಅವರ ಮನಸ್ಸಿಗೂ ಕೂಡ ನೋವು ಆಗಬಾರದು. ದಯಮಾಡಿ ಇದನ್ನು ನಾವು ಸ್ವಾಗತಿಸುತ್ತೇವೆ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ ಒಂದು ವಿಧೇಯಕವನ್ನು ಏನು ಜಲಸಂಪನ್ಮೂಲ ಸಚಿವರು ಮಂಡನೆ ಮಾಡಿದ್ದಾರೆ ಇದನ್ನು ನಾನು ಸ್ವಾಗತಿಸುತ್ತೇನೆ. ಏಕೆಂದರೆ 417 ಇಂಜಿನಿಯರ್‌ಗಳು ಅವರ ಭವಿಷ್ಯದ ಒಂದು ಪ್ರಶ್ನೆಯಾಗಿದೆ. 417 ಇಂಜಿನಿಯರ್‌ಗಳು, ಸಹಾಯಕ ಇಂಜಿನಿಯರ್‌ಗಳು 1993ನೇ ಇಸವಿಯಿಂದ 2002ನೇ ಇಸವಿಯವರೆಗೆ ಈ ಸಹಾಯಕ ಇಂಜಿನಿಯರ್‌ಗಳು ಒಂದು ತಿಂಗಳಿಗೆ 3,500 ರೂಪಾಯಿಗಳಿಗೆ ಮತ್ತು ಕಿರಿಯ ಇಂಜಿನಿಯರ್ 2,600 ರೂಪಾಯಿಗಳ ಸಂಬಳಕ್ಕೆ ಐದು ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ಅದಾದ ಮೇಲೆ ಅವರ ಸೇವೆಯನ್ನು ಪರಿಗಣಿಸಿ ಮತ್ತೆ ಆ ಜಲಸಂಪನ್ಮೂಲ ಇಲಾಖೆಯಲ್ಲಿ ಕೃಷ್ಣ ಜಲಭಾಗ್ಯ ನಿಗಮದಲ್ಲಿ ಅವರ ಸೇವೆ ಅವಶ್ಯಕತೆ ಇತ್ತು. ಹಾಗಾಗಿ ಅವರನ್ನು ಸರ್ಕಾರ ಖಾಯಂಗೊಳಿಸಿದೆ. ಆದರೆ ಸಮಸ್ಯೆ ಏನಾಗಿದೆ ಎಂದರೆ, ಮಾನ್ಯ ಹಿರಿಯರೆಲ್ಲರೂ ಹೇಳಿದ ಹಾಗೆ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಅವರ ಸಕ್ರಮವಿಲ್ಲವೆಂದು ಹೇಳಿ ಅದನ್ನು ರದ್ದು ಮಾಡಿದ್ದಾರೆ. ಅದಕ್ಕೆ ಯಾವುದಾದರು ಒಂದು ದಾರಿಯನ್ನು ಹುಡುಕಿ

ಸರ್ಕಾರ ಅವರನ್ನು ಪುನರ್ ನೇಮಕ ಮಾಡುತ್ತಿರುವುದು ಸಂತೋಷ. ಆದರೆ ಇದರಲ್ಲಿ ನನ್ನದು ಎರಡು ಮೂರು ಆಕ್ಷೇಪ ಇದೆ. ಏನು ಈ 417 ಇಂಜಿನಿಯರ್‌ಗಳು ಕೆಲಸವನ್ನ ಮಾಡುತ್ತಿದ್ದಾರೆ ಅವರುಗಳು ಕಳೆದ 20 ವರ್ಷಗಳಿಂದ ಕೆಲಸವನ್ನು ಮಾಡುತ್ತಿದ್ದಾರೆ. ಅದರಲ್ಲಿ 75 ಜನ ಸಹಾಯಕ ಇಂಜಿನಿಯರ್‌ಗಳು ಈಗಾಗಲೇ ಸಹಾಯ ಕಾರ್ಯನಿರ್ವಾಹಕರಾಗಿ ಬಡ್ತಿಯನ್ನು ಹೊಂದಿದ್ದಾರೆ. 10 ಜನ ಕಿರಿಯ ಇಂಜಿನಿಯರ್‌ಗಳು ಸಹಾಯಕ ಕಾರ್ಯನಿರ್ವಾಹಕರಾಗಿ ಬಡ್ತಿಯನ್ನು ಹೊಂದಿದ್ದಾರೆ. As per Karnataka Civil Service Rules (K.C.S.R.), ಯಾವ ಒಬ್ಬ ಅಸಿಸ್ಟೆಂಟ್ ಇಂಜಿನಿಯರ್ ಇರಬಹುದು, ಜೂನಿಯರ್ ಇಂಜಿನಿಯರ್ ಇರಬಹುದು, 10 ವರ್ಷಗಳ ಸೇವೆ ಸಲ್ಲಿಸಿದ ನಂತರ ಅವರು ಗ್ರೇಡ್-1ಗೆ ಬಂದು ಬಿಡುತ್ತಾರೆ. They Are eligible for A.E.E. ಆದರೆ ಖಾಲಿ ಹುದ್ದೆಗಳು ಇಲ್ಲದ ಕಾರಣ ಎಲ್ಲಾ ಇಂಜಿನಿಯರ್‌ಗಳಿಗೂ ಬಡ್ತಿ ಸಿಕ್ಕಿಲ್ಲ. ಅಂದರ ಹೆಚ್ಚು ಕಡಿಮೆ 417 ಇಂಜಿನಿಯರ್‌ಗಳು ಕೂಡ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಮೋಷನ್‌ಗೆ eligible. ಇವರ ನೇಮಕಾತಿ ಏನಾದರು ರದ್ದಾದರೆ ಇಷ್ಟು ಕುಟುಂಬಗಳು ಬೀದಿಗೆ ಬಂದು ಬಿಡುತ್ತದೆಂದು ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆಂದರೆ, ಪ್ರಮೋಷನ್ ಆದಂತಹ A.E.E. ಗಳು ಅಂದರೆ 75 ಜನ ಅಸಿಸ್ಟೆಂಟ್ ಇಂಜಿನಿಯರ್‌ಗಳು 10 ಜೂನಿಯರ್ ಇಂಜಿನಿಯರ್‌ಗಳು ಹೊಸ ನೇಮಕಾತಿಗೆ ಬಂದಮೇಲೆ ಅವರು ಜೂನಿಯರ್ ಇಂಜಿನಿಯರ್‌ಗಳಾಗಿ, ಅಸಿಸ್ಟೆಂಟ್ ಇಂಜಿನಿಯರ್‌ಗಳಾಗಿ ಕೆಲಸ ಮಾಡಬೇಕಾಗುತ್ತದೆ. ಅವರ protection ಗೆ, as they are already working from 7-10 years as A.E.E., ಆ ಒಂದನ್ನು ಯಾವ ರೀತಿಯಾಗಿ ಉಳಿಸಿಕೊಳ್ಳುತ್ತೀರಿ. ಎರಡನೆಯದಾಗಿ ಪುನರ್ ನೇಮಕಾತಿಯಲ್ಲಿ ಪ್ರತಿವರ್ಷಕ್ಕೆ ಐದು ಬೋನಸ್ ಅಂಕಗಳನ್ನು ಕೊಟ್ಟು ಗರಿಷ್ಠ 30 ಅಂಕಗಳನ್ನು ಕೊಟ್ಟು ಅವರುಗಳನ್ನು ನೇಮಕಾತಿ ಮಾಡಿಕೊಳ್ಳುತ್ತೇವೆಂದು ಹೇಳಲಾಗಿದೆ. 30 ಅಂಕಗಳನ್ನು ಕೊಟ್ಟರು 417 ಇಂಜಿನಿಯರ್‌ಗಳಲ್ಲಿ ಕೆಲವು ನೇಮಕಾತಿಯಾಗುವುದಿಲ್ಲವೆಂದು ಸಂಶಯ ಇದೆ. ಎಲ್ಲರೂ ನೇಮಕಾತಿಯಾದರೆ ಬಹಳ ಸಂತೋಷ. ಅವರುಗಳನ್ನು ನೇಮಕಾತಿ

ಮಾಡಿಕೊಳ್ಳುವುದಕ್ಕೆ ಆಗದೇ ಹೋದರೆ ಅವರನ್ನು ಯಾವ ಮಾನದಂಡದ ಮೇಲೆ ನೇಮಕಾತಿಯನ್ನು ಮಾಡಿಕೊಳ್ಳುತ್ತೀರಿ? ಮೂರನೆಯದಾಗಿ ಈಗಾಗಲೇ ಹೇಳಿರುವಂತಹ ಅವರ ಸೇವಾ ಭದ್ರತೆ ಮತ್ತು ಪಿಂಚಣಿ ಸೌಲಭ್ಯಗಳು 2002ನೇ ಇಸವಿಯಿಂದ ಪರಿಗಣಿಸಬೇಕೆಂದು ವಿನಂತಿ. ಈ ಮೂರು ವಿಷಯಗಳ ಬಗ್ಗೆ ಈ ವಿಧೇಯಕದಲ್ಲಿ ಎಲ್ಲಿಯೂ ಸೇರಿಸಿಲ್ಲ. ಮುಂದೆ ಈ ಉದ್ಯೋಗಿಗಳಿಗೆ ಸಮಸ್ಯೆಯಾಗಬಹುದು. ಆದ್ದರಿಂದ ಇವುಗಳ ಬಗ್ಗೆ ಕೂಡ ಈ ವಿಧೇಯಕದಲ್ಲಿ ಸೇರಿದ್ದರೆ ಒಳ್ಳೆಯದಾಗುತ್ತಿತ್ತು ಎಂದು ತಮ್ಮ ಮುಖಾಂತರ ಸಚಿವರಿಗೆ ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಎಂ.ಸಿ.ನಾಣಯ್ಯ(ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಿ.ಹೆಚ್.ವಿಜಯಶಂಕರ್‌ರವರು 14(4)ರ ಅಡಿಯಲ್ಲಿ ಈ ವಿಚಾರವನ್ನು ಎತ್ತಿದ್ದಾರೆ. ಮತ್ತು ಈ ಮೀಸಲಾತಿ ನಿಯಮಗಳನ್ನು ಉಲ್ಲೇಖ ಆಗಿದೆ ಎಂದು ಬಹುಶಃ ಅವರು ಹೇಳಿದರು. ಅವರ ಗಮನಕ್ಕೆ ತರುವುದೇನೆಂದರೆ, 1994 ರಲ್ಲಿ ನಾನು ಕಾನೂನು ಸಚಿವನಾಗಿದ್ದೆ. ಶ್ರೀ ಕೃಷ್ಣ ಜಲಾ ಭಾಗ್ಯ ನಿಗಮ ಅಂದರೆ ಆ ಸಂದರ್ಭದಲ್ಲಿ ಕೆಲಸ ಮಾಡುವುದಕ್ಕೆ ಇರತಕ್ಕಂತಹ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಏಕೆ ಅವರನ್ನು ಬಹಳ ತ್ವರಿತವಾಗಿ ನೇಮಕ ಮಾಡಿಕೊಳ್ಳಬೇಕಾಗಿತ್ತು ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕಾರಣ ಏನೆಂದರೆ, 2000ನೇ ಇಸವಿಯೊಳಗೆ ಆ ಬಚಾವತ್ ಆಯೋಗದ ನೀರನ್ನು ನಾವು ಉಪಯೋಗಿಸಿಕೊಳ್ಳದೇ ಹೋದರೆ, 2000ನೇ ಇಸವಿ ಕಳೆದಾದ ಮೇಲೆ ಎಷ್ಟು ನೀರನ್ನು ಉಪಯೋಗ ಮಾಡಿಕೊಳ್ಳದಿದ್ದ ಅಷ್ಟು ನೀರು ಕೂಡ general pool ಗೆ ಹೋಗುತ್ತದೆ ಎಂದು ಹೇಳುವಂತಹ ಒಂದು ಭಾವನೆ ಮತ್ತು ಕಾನೂನಿನ ಅಡಿಯಲ್ಲಿ ಅದು ನಡೆಯುತ್ತದೆ ಎಂದು ಹೇಳುತ್ತಿರತಕ್ಕಂತಹ ಒಂದು ಸಂಶಯ ನಮ್ಮೆಲ್ಲರಿಗೂ ಬಂದು ಬಿಟ್ಟಿತು. ಆ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಒಟ್ಟು 417 ಜನರನ್ನು ನೇಮಕ ಮಾಡುವಂತಹ ಸಂದರ್ಭದಲ್ಲಿ ಉದ್ಯೋಗ ವಿನಿಮಯ ಕೇಂದ್ರದ ಮುಖಾಂತರ ಅರ್ಹತೆಯ ಆಧಾರದ ಮೇಲೆ roster system ಅನ್ನು ಕೂಡ ಅನುಸರಿಸಿಕೊಂಡೇ ನೇಮಕ ಮಾಡಿರತಕ್ಕಂಥದ್ದು. Roster system ಪ್ರಕಾರ

ಅಲ್ಲಿ 417 ಜನ ಇಂಜಿನಿಯರ್‌ಗಳನ್ನು ನೇಮಕ ಮಾಡಿಕೊಂಡು ಅವರನ್ನೇ ಮುಂದುವರೆಸಿಕೊಂಡು ಹೋಗಿ ಆಯಿತು. ಅವರು ಎಲ್ಲಿಯವರೆಗೆ ಎಂದರೆ 1,500 ರೂಪಾಯಿಗಳು, 2,600 ರೂಪಾಯಿಗಳವರೆಗೆ ಮುಂದುವರೆಯುವುದು. ಕಡೆಗೆ 2002ನೇ ಇಸವಿಯಲ್ಲಿ One Time Operation ಎಂದು ಹೇಳಿ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು. ನಮ್ಮ ಕಾಲದಲ್ಲಿಯೂ ಬಹಳ ಚರ್ಚೆಯಾಗಿತ್ತು. ಶ್ರೀಮಾನ್ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಯಾಗಿದ್ದಾಗ ಸಚಿವ ಸಂಪುಟದಲ್ಲಿ ಒಂದು ವಿಶೇಷವಾಗಿರತಕ್ಕಂತಹ ನಿಯಮಾವಳಿಯನ್ನು ರಚನೆ ಮಾಡಿ ಆ ನಿಯಮಾವಳಿಯಲ್ಲಿ ಅವರೆಲ್ಲರೂ ಕೂಡ ನಾನು ಹೇಳುತ್ತೇನೆ, ಸರ್ಕಾರಿ ಸೇವೆಯಲ್ಲಿ regularize ಮಾಡಿಯಾಯಿತು. ಆ regularrize ಮಾಡಿಯಾದ ಮೇಲೆ ಹೊಸದಾಗಿ ಬಂದಿರತಕ್ಕಂತಹ diploma holders ಮತ್ತು ಇಂಜಿನಿಯರ್, ಅಲ್ಲಿಯವರೆಗೆ ಪಾಪ 10 ವರ್ಷಗಳ ಕಾಲ ಕೆಲಸ ಮಾಡಿ, ಆ ದೊಡ್ಡ ಪ್ರಮಾಣದಲ್ಲಿರತಕ್ಕಂತಹ ಕೆಲಸವನ್ನು ಅಲ್ಲಿ ಮಾಡಿಯಾಯಿತು. 10 ವರ್ಷ ಕಳೆದಾದ ಮೇಲೆ ಇವರುಗಳನ್ನು regularize ಮಾಡುವುದಕ್ಕೆ ಶುರು ಮಾಡುತ್ತಾರೆಂದು ಅದು ನೇರವಾದ ಹುದ್ದೆಗೆ ಬಂತಲ್ಲಾ ಆ ಸಂದರ್ಭದಲ್ಲಿ ಇವರುಗಳು ಏನು ಮಾಡಿಬಿಟ್ಟರು ಎಂದರೆ K.A.T. ಗೆ ಹೋದರು. K.A.T. ಗೆ ಹೋದಾದ ಮೇಲೆ ಆ diploma holders ನ ಮತ್ತು ಇಂಜಿನಿಯರ್‌ಗಳು ಸಲ್ಲಿಸಿದ ಅರ್ಜಿಯನ್ನು ವಜಾ ಮಾಡಿ, ಸರ್ಕಾರ ತೆಗೆದುಕೊಂಡಿರತಕ್ಕಂತಹ ತೀರ್ಮಾನ ಸಿಂಧು ಎಂದು ಮಾಡಿದರು. ಅದಾದ ಮೇಲೆ ಉಚ್ಚ ನ್ಯಾಯಾಲಯಕ್ಕೆ ಹೋಯಿತು. ಉಚ್ಚ ನ್ಯಾಯಾಲಯದವರು ಆ ಸಂದರ್ಭದಲ್ಲಿ ಏನು ಮಾಡಿದರು ಎಂದರೆ ಇದನ್ನು ನೀವು ಅರ್ಜಿಯನ್ನು ಕರೆದು ನಿಯಮದ ಅಡಿಯಲ್ಲಿ ನೇಮಕಾತಿಯನ್ನು ಮಾಡಬೇಕಾಗಿತ್ತು. Adhoc basis ಮೇಲೆ ಮಾಡಿರತಕ್ಕಂತಹ ಕ್ರಮ ಸರಿಯಲ್ಲ. ಆದ್ದರಿಂದ ಎಷ್ಟು ಹುದ್ದೆ ಇದೆ ಎಂದು ಹೇಳುತ್ತಿರತಕ್ಕಂಥದ್ದನ್ನು ನೀವು ಪತ್ರಿಕೆಗಳಲ್ಲಿ ಜಾಹಿರಾತನ್ನು ಹಾಕಿ ಆ ಮುಖಾಂತರ ಅವರನ್ನು ನೇಮಕ ಮಾಡಿ ಎನ್ನುವಂತಹ ಆದೇಶವನ್ನು ಕೊಟ್ಟರು. ಅದಾದ ಮೇಲೆ ಸರ್ವೋಚ್ಚ ನ್ಯಾಯಾಲಯಕ್ಕೆ ಹೋಯಿತು.

ಸರ್ವೋಚ್ಚ ನ್ಯಾಯಾಲಯಕ್ಕೆ ಹೋದಾದ ಮೇಲೆ ಸರ್ವೋಚ್ಚ ನ್ಯಾಯಾಲಯದಲ್ಲಿಯೂ ಕೂಡ ಹೈಕೋರ್ಟ್‌ನ ಆದೇಶವನ್ನು ಎತ್ತಿ ಹಿಡಿದರರು. ಎತ್ತಿ ಹಿಡಿದಂತಹ ಸಂದರ್ಭದಲ್ಲಿ ಹೊಸದಾಗಿ ನೀವು ನೇಮಕ ಮಾಡುತ್ತಿರುವಂತಹ ಸಂದರ್ಭದಲ್ಲಿ ಇವರೆಲ್ಲರೂ ಕೂಡ ಹೊಸದಾಗಿರತಕ್ಕಂತಹ ನೇಮಕಾತಿಗೆ ಅರ್ಜಿಯನ್ನು ಹಾಕಲಿ. ಅರ್ಜಿಯನ್ನು ಹಾಕುವಂತಹ ಸಂದರ್ಭದಲ್ಲಿ ಅವರ ವಯಸ್ಸು ಮೀರಿದ್ದಿದ್ದರೂ ಕೂಡ ಅವರಿಗೆ ಅವಕಾಶವನ್ನು ಕೊಡಬೇಕೆಂದು ಮಾಡಿ. 13.12.2013ರ ಒಳಗಡೆ ಈ process ನ್ನು complete ಮಾಡಬೇಕೆಂದು ಆದೇಶವನ್ನು ಕೊಟ್ಟ ಹಿನ್ನಲೆಯಲ್ಲಿ ಬಹುಶಃ ಬಹಳ ತ್ವರಿತವಾಗಿ ಇದನ್ನು ತೆಗೆದುಕೊಂಡು ಬಂದಿದ್ದಾರೆ. ಇದರಲ್ಲಿ ಯಾವುದೇ ರೀತಿಯ ಮೋಸ ಇಲ್ಲ. ಯಾವುದೇ ರೀತಿಯ roster ನ್ನು ಪಾಲನೆ ಮಾಡದೇ ತೆಗೆದುಕೊಂಡಿಲ್ಲ. ಎಲ್ಲವನ್ನು ಮಾಡಿದ್ದಾರೆ. ಆದರೆ 10 ವರ್ಷಗಳ ಕಾಲ ಒಂದು ತಿಂಗಳಿಗೆ 1,500 ರೂಪಾಯಿಗಳಿಂದ 2,600 ರೂಪಾಯಿಗಳ ಸಂಬಳಕ್ಕೆ ಕೆಲಸವನ್ನು ಮಾಡಿ 2000ನೇ ಇಸವಿಯೊಳಗೆ ಎಲ್ಲಿಯಾದರು ನೀರು ಸಿಗದೇ ಹೋದರೆ, ಆ ನೀರು ಇನ್ನು ಎಲ್ಲಿಯಾದರು ಇನ್ನೊಬ್ಬರ ಪಾಲು ಆಗುತ್ತದೆಂದು ಅವರುಗಳು ಕೆಲಸ ಮಾಡಿದರಲ್ಲಾ ಅದನ್ನು ನೆನಪು ಮಾಡಿಕೊಂಡು ಈ ಒಂದು ವಿಧೇಯಕವನ್ನು ಸುಪ್ರೀಂ ಕೋರ್ಟ್‌ನವರು ಹೇಳಿದ್ದರಿಂದ ಈ ಒಂದು ತಿದ್ದುಪಡಿ ವಿಧೇಯಕವನ್ನು ಮಾಡಬೇಕು ಎನ್ನುವ ಹಿನ್ನಲೆಯಲ್ಲಿ ರಾಜ್ಯ ಸರ್ಕಾರ ಅವರೆಲ್ಲರ ಜೊತೆಯಲ್ಲಿ ಚರ್ಚೆ ಮಾಡಿ, ಇದನ್ನು ತೆಗೆದುಕೊಂಡು ಬಂದಿದ್ದಾರೆ. ಬಹುಶಃ ಆ ಕೆಲಸವನ್ನು ಮಾಡೋಣ. ಎಲ್ಲವನ್ನು ಕೂಡ ನಾನು ಹೇಳುತ್ತೇನೆ ಸಂವಿಧಾನ ಬದ್ಧವಾಗಿ, ಕಾನೂನು ಬದ್ಧವಾಗಿ, ನಿಯಮ ಬದ್ದವಾಗಿ ಮಾಡಿದ್ದಾರೆ. ಬಹುಶಃ ಇದನ್ನು ನಾವು ನೇರವಾಗಿ pass ಮಾಡೋಣ.

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಯವರೆ, ಇದರಲ್ಲಿ ನಾನು ಇದಕ್ಕೆ ಪೂರಕವಾಗಿ ಒಂದು ವಾಕ್ಯವನ್ನು ಸೇರಿಸಿ ಬಿಡುತ್ತೇನೆ.

**ಸಭಾಪತಿಯವರು:-** ಮಾನ್ಯ ಡಿ.ಎಸ್.ವೀರಯ್ಯನವರೆ, ದಯವಿಟ್ಟು ಕುಳಿತುಕೊಳ್ಳಿ. ನಿಮ್ಮ ನಾಯಕರು ಈ ವಿಧೇಯಕವನ್ನು ಸ್ವಾಗತ ಮಾಡಿದ್ದಾರೆ.

ಅದರ ಮೇಲೆ ನೀವು ಚರ್ಚೆ ಮಾಡತ್ತೀರಾ? ಮಂತ್ರಿಗಳು ಹೇಳಲಿ. ದಯಮಾಡಿ ಕುಳಿತುಕೊಳ್ಳಿ. ನನ್ನ ಕೆಲಸವನ್ನು ನೀವು ಮಾಡಬೇಡಿ. ನಾನು ಮಾಡುತ್ತೇನೆ. ನನ್ನ ಕೆಲಸವನ್ನು ಬೇರೆ ಯಾರು ಮಾಡುವುದು ಬೇಡ. ದಯಮಾಡಿ ಕುಳಿತುಕೊಳ್ಳಿ. ನಿಮ್ಮ ನಾಯಕರು ಸ್ವಾಗತ ಮಾಡಿದ ಮೇಲೆ ಮುಗಿಯಿತು. ಅವರು ವಿರೋಧ ಮಾಡಿದ್ದಿದ್ದರೆ ನೀವು ಮಾತನಾಡಬಹುದಿತ್ತು. ನಾಯಕರು ಸ್ವಾಗತ ಮಾಡಿದ ಮೇಲೆ ಮುಗಿದು ಹೋಯಿತು. ನಾನೇನು ಮಾಡುವುದಕ್ಕೆ ಬರುವುದಿಲ್ಲ. ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಎಂ.ಬಿ.ಪಾಟೀಲ್(ಜಲ ಸಂಪನ್ಮೂಲ ಸಚಿವರು):–** ಮಾನ್ಯ ಸಭಾಪತಿಯವರೆ, ಈಗಾಗಲೇ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ಇವರುಗಳೆಲ್ಲರೂ ಗುಲ್ಬರ್ಗಾ, ಬಿಜಾಪುರ, ರಾಯಚೂರು, ಬೀದರ್, ಬಳ್ಳಾರಿ ಎಲ್ಲಾ ಹಿಂದುಳಿದ ಜಿಲ್ಲೆಗಳಿಂದ ಬಂದಂಥವರು. ಎರಡನೆಯದಾಗಿ ಇದರಲ್ಲಿ ಎಸ್‌ಸಿ/ಎಸ್‌ಟಿ ಜನಾಂಗದ ಅರ್ಜಿಗಳು ಕೂಡ ಬಹಳ ಗಣನೀಯ ಪ್ರಮಾಣದಲ್ಲಿ ಸುಮಾರು 47 ಜನ ಇದ್ದಾರೆ. ಅಲ್ಲಿ roster ಎಲ್ಲವನ್ನೂ ಕೂಡ ಪಾಲನೆ ಮಾಡಿದೆ. ಮೂರನೆಯದಾಗಿ ನಮ್ಮ ಸದ್ಯರು ಇವರಿಗೆ ಸೇವಾ ಭದ್ರತೆಯನ್ನು ಕೊಡಬೇಕೆಂದು. ಸೆಕ್ಷನ್ 11ರಲ್ಲಿ ದಯವಿಟ್ಟು ನೋಡಬೇಕು. ಅವರಿಗೆ ಎಲ್ಲಾ protection ಕೊಡಲಾಗಿದೆ. 2002ನೇ ಇಸವಿಯಿಂದ ಮಾತ್ರ ಅವರನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ.

**ಶ್ರೀ ಸಿ.ಹೆಚ್.ವಿಜಯಶಂಕರ್:–** ಮಾನ್ಯ ಸಭಾಪತಿಯವರೇ, ನೇಮಕಾತಿಯಲ್ಲಿ ಏನು ಮೀಸಲಾತಿಯನ್ನು ಪಾಲಿಸಬೇಕಾಗಿತ್ತು ಅದು ಪಾಲನೆಯಾಗಿಲ್ಲ ಎನ್ನುವಂತಹ ಮಾಹಿತಿ ಕೂಡ ಇದೆ.

**ಸಭಾಪತಿಯವರು:–** ಮಾನ್ಯ ವಿಜಯಶಂಕರ್‌ರವರೇ, ನಿಮ್ಮ ನಾಯಕರು ಸ್ವಾಗತ ಮಾಡಿದಂತಹ ವಿಚಾರವನ್ನು ನೀವು ವಿರೋಧ ಮಾಡಿದರೆ ಹೇಗೆ? ಇಂತಹ ಸಂದರ್ಭದಲ್ಲಿ ನಾನು ಏನು ಹೇಳುವುದಕ್ಕಾಗುತ್ತದೆ, ನಿಮ್ಮ ನಾಯಕರನ್ನು ನಾನು ಕೇಳಬೇಕಾಗುತ್ತದೆ. ನಿಮ್ಮ ನಾಯಕರು ಸ್ವಾಗತ ಮಾಡಿದ ಮೇಲೂ ನೀವು ವಿರೋಧ ಮಾಡುತ್ತೀರಿ

ಎಂದರೆ, ಇಂತಹ ವಿಚಾರಗಳನ್ನು ನೀವು ನಿಮ್ಮ party forum ನಲ್ಲಿ ಚರ್ಚೆ ಮಾಡಬೇಕಾಗುತ್ತದೆ.

**ಶ್ರೀ ಡಿ.ವಿ.ಸದಾನಂದಗೌಡ(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯಯವರೇ, ಸರ್ಕಾರ ತಂದಿರುವಂತಹ ಈ ವಿಧೇಯಕ ಏನಿದೆ ಇದು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿರುವಂತಹ ವಿಷಯದ ಬಗ್ಗೆ, ಹೈಕೋರ್ಟ್‌ನಲ್ಲಿ ಒಂದು ಸಣ್ಣ ತಿದ್ದುಪಡಿಯನ್ನು ತಂದುದರ ಆಧಾರದಲ್ಲಿ ಇದನ್ನು ಮಾಡುತ್ತಿರುವುದು. ಇವೊತ್ತು ನಾವು ಏನಾದರೂ ವ್ಯತ್ಯಾಸಗಳನ್ನು ಮಾಡಿದರೆ, ಯಾರು ಈ ರಾಜ್ಯದ ಹಿತಾಸಕ್ತಿಯನ್ನು ಕಾಪಾಡುವುದಕ್ಕಾಗಿ ಸುಮಾರು ಹತ್ತು-ಹದಿನೈದು-ಇಪ್ಪತ್ತು ವರ್ಷಗಳಿಂದ ದುಡಿದಿರುವವರಿಗೆ ದೊಡ್ಡ ಅನ್ಯಾಯವನ್ನು ಮಾಡಿದಂತಾಗುತ್ತದೆ. ಈ ಭಾಗದ ಎಲ್ಲ ನೀರಾವರಿ ವ್ಯವಸ್ಥೆಗಳಿಗೆ ಅವರು ಅಡಿಪಾಯವಾಗಿ ಕೆಲಸ ಮಾಡಿದ್ದಾರೆ. ಆದರೆ ನಮ್ಮ ವಿಜಯಶಂಕರ್‌ರವರು ತಿಳಿಸಿರುವಂತೆ ಈ ರೀತಿಯ ಗೊಂದಲಗಳಿಂದಾಗಿ ರೋಸ್ಟರ್ ಮುಂತಾದ ವಿಷಯಗಳಲ್ಲಿ ಆಗಾಗ ಪ್ರಶ್ನೆಗಳಾಗುತ್ತವೆ, ಸರ್ಕಾರ ಖಂಡಿತವಾಗಿಯೂ ಇದರ ಬಗ್ಗೆ ಮುಂದಿನ ದಿನಗಳಲ್ಲಿ ಬೇರೆ ಎಲ್ಲ ಇಲಾಖೆಗಳಲ್ಲಿ ಕೂಡ ಗಮನ ಹರಿಸಬೇಕಾಗುತ್ತದೆ ಎಂಬುದು ಅವರ ಭಾವನೆಯಾಗಿದೆ.

**ಶ್ರೀ ಎಂ.ಬಿ.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಇದು ಯಾವ ಪರಿಸ್ಥಿತಿಯಲ್ಲಾಗಿದೆ ಎನ್ನುವಂತಹ ವಿಚಾರವನ್ನು ಈಗಾಗಲೇ ಹಿರಿಯ ಸದಸ್ಯರಾದ ಸನ್ಮಾನ್ಯ ನಾಣಯ್ಯನವರು ತಿಳಿಸಿದ್ದಾರೆ. ಇದು one time measure. ಮತ್ತೊಂದು ವಿಚಾರವೆಂದರೆ, ಮಾನ್ಯ ಸದಸ್ಯರೆಲ್ಲರೂ ಈಗ ಏನು ಒಂದು ಆತಂಕವನ್ನು ವ್ಯಕ್ತಪಡಿಸಿದ್ದಾರೆ, 417 ಮಾತ್ರವಲ್ಲ, ಆ ದಿನಾಂಕಕ್ಕೆ ಅಂದರೆ ದಿನಾಂಕ:10.02.1990 ರಿಂದ ಅರ್ಹರಾಗಿರುವಂತಹ ಎಲ್ಲ ಅಭ್ಯರ್ಥಿಗಳನ್ನು ಕೂಡ ಗಣನೆಗೆ ತೆಗೆದುಕೊಳ್ಳಲಾಗುತ್ತದೆ, ಈ ವಿಚಾರದಲ್ಲಿ ಯಾವುದೇ ಗೊಂದಲವಿಲ್ಲ. ಇನ್ನು Article 14 ನಲ್ಲಿ ಯಾವುದೇ violation ಕೂಡ ಮಾಡುತ್ತಿಲ್ಲ. Five percent weightage ಕೊಟ್ಟು ನೇಮಕಾತಿ ಪ್ರಕ್ರಿಯೆಗಳ ಪ್ರಕಾರವಾಗಿಯೇ ಇವರನ್ನು ನೇಮಕ ಮಾಡಲಾಗುತ್ತಿದೆ

ಎನ್ನುವಂತಹ ವಿಚಾರವನ್ನು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತಿದ್ದೇನೆ. ಅದಕ್ಕಾಗಿ ಈ ವಿಧೇಯಕಕ್ಕೆ ಮಾನ್ಯ ಸದಸ್ಯರೆಲ್ಲರೂ ಅಂಗೀಕಾರವನ್ನು ನೀಡಬೇಕೆಂದು ವಿನಂತಿಸುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ; "ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2013ರ ಕರ್ನಾಟಕ ಸಿವಿಲ್ ಸೇವೆಗಳು (ಜಲಸಂಪನ್ಮೂಲ ಸೇವೆ) (ಸಹಾಯಕ ಇಂಜಿನಿಯರ್‌ಗಳ ಮತ್ತು ಕಿರಿಯ ಇಂಜಿನಿಯರ್‌ಗಳ ವಿಶೇಷ ನೇಮಕಾತಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ರಿಂದ 13ರ ವರೆಗೆ**

**ಸಭಾಪತಿಯವರು:–** "ಖಂಡ **2** ರಿಂದ **13** ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 13ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಎಂ.ಬಿ.ಪಾಟೀಲ್(ಜಲಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೇ, 2013ರ ಕರ್ನಾಟಕ ಸಿವಿಲ್ ಸೇವೆಗಳು (ಜಲಸಂಪನ್ಮೂಲ ಸೇವೆ) (ಸಹಾಯಕ ಇಂಜಿನಿಯರ್‌ಗಳ ಮತ್ತು ಕಿರಿಯ ಇಂಜಿನಿಯರ್‌ಗಳ ವಿಶೇಷ ನೇಮಕಾತಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2013ರ ಕರ್ನಾಟಕ ಸಿವಿಲ್ ಸೇವೆಗಳು (ಜಲಸಂಪನ್ಮೂಲ ಸೇವೆ) (ಸಹಾಯಕ ಇಂಜಿನಿಯರ್‌ಗಳ ಮತ್ತು ಕಿರಿಯ ಇಂಜಿನಿಯರ್‌ಗಳ ವಿಶೇಷ ನೇಮಕಾತಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಸಭಾಪತಿಯವರು:-** ಈಗ ಸಭೆಯ ಗಮನಕ್ಕೆ ಒಂದು ವಿಚಾರವನ್ನು ತರಬಯಸುತ್ತಿದ್ದೇನೆ. ಇವೊತ್ತು ಒಂದು ಪುಸ್ತಕ ಬಿಡುಗಡೆ ಕಾರ್ಯಕ್ರಮ ಇರುವ ವಿಚಾರ ತಮಗೆಲ್ಲರಿಗೂ ಗೊತ್ತಿದೆ. ಆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಬೇಕಾಗಿರುವುದರಿಂದ ಮಾನ್ಯ ಉಪ ಸಭಾಪತಿಯವರನ್ನು ಈ ಪೀಠದಲ್ಲಿ ಕೂರಿಸಿ ಸದನದ ಮುಂದಿನ ಕಲಾಪಗಳನ್ನು ನಡೆಸಲು ಅನುವು ಮಾಡಿಕೊಟ್ಟು ನಾನು ತೆರಳಲಿದ್ದೇನೆ. ಇವೊತ್ತಿನ ಪುಸ್ತಕ ಬಿಡುಗಡೆಗೆ ಸಂಬಂಧಿಸಿದ ಕುಟುಂಬದ ಬಗ್ಗೆ ಬಲ್ಲವರು ಕೂಡ ನನ್ನೊಂದಿಗೆ ಆ ಕಾರ್ಯಕ್ರಮಕ್ಕೆ ಬರಬೇಕಾಗುತ್ತದೆ. ದಯವಿಟ್ಟು ಬನ್ನಿ, ಆ ಕಾರ್ಯಕ್ರಮ

ಮುಗಿದ ಕೂಡಲೇ ನಾನು ಈ ಸದನಕ್ಕೆ ವಾಪಸ್ ಬರುತ್ತೇನೆ, ಹಾಗಾಗಿ ಈ ಸಭೆ ಮುಂದುವರೆಯತ್ತದೆ, ಈಗ ಮಾನ್ಯ ಶಾಣಪ್ಪನವರು ಪ್ರಸ್ತಾಪಿಸಲಿರುವ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಂಡು ನಂತರ ಉಳಿದ ವಿಧೇಯಕವನ್ನು ತೆಗೆದುಕೊಳ್ಳಲು ಮಾನ್ಯ ಮುಖ್ಯಮಂತ್ರಿಯವರು ಸಹ ಇಚ್ಛಿಸಿದ್ದಾರೆ. ಹಾಗಾಗಿ ಈಗ ಮಾನ್ಯ ಶಾಣಪ್ಪನವರು ಸರ್ಕಾರದ ಗಮನವನ್ನು ಸೆಳೆಯಬಹುದಾಗಿದೆ.

**(ಈ ಹಂತದಲ್ಲಿ ಉಪ ಸಭಾಪತಿಯವರಾದ ಶ್ರೀಮತಿ ವಿಮಲಾಗೌಡ ಅವರು ಪೀಠವನ್ನಲಂಕರಿಸಿದರು)**

## 9. ಗಮನ ಸೆಳೆಯುವ ಸೂಚನೆ

## ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಕಮಲನಗರದ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರ ಹತ್ಯೆಯಾಗಿರುವ ಬಗ್ಗೆ.

**ಶ್ರೀ ಕೆ.ಬಿ.ಶಾಣಪ್ಪ (ನಾಮನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಕಮಲನಗರದ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರಾದ ಶ್ರೀ ಗಣಪತರಾವ್ ಕದಂ ಅವರ ಹತ್ಯೆಯಾಗಿರುವ ಬಗ್ಗೆ ಮಾನ್ಯ ಗೃಹ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ ಹಾಗೂ ಈ ವಿಚಾರವಾಗಿ ಪ್ರಸ್ತಾಪಿಸಲು ಅವಕಾಶ ಕೋರಿ ನೆನ್ನೆಯ ದಿವಸ ನಾನು ಬಹಳ ಉದ್ವೇಗಕ್ಕೊಳಗಾಗಿ ವರ್ತಿಸಿದ್ದೇನೆ. ಆದಕಾರಣ ದಯಮಾಡಿ ಕ್ಷಮಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ಕೆ.ಜೆ.ಜಾರ್ಜ್(ಗೃಹ ಸಚಿವರು):-** ಸನ್ಮಾನ್ಯ ಸಭಾಪತಿಯವರೇ,

ಬೀದರ್ ಜಿಲ್ಲೆಯ ಔರಾದ ತಾಲೂಕಿನ ಕಮಲನಗರ ಗ್ರಾಮದಲ್ಲಿ ದಿನಾಂಕ 15/09/2013 ರಂದು ರಾತ್ರಿ 9.30 ರಿಂದ 10.30 ರವರೆಗೆ ಅವಧಿಯಲ್ಲಿ ಶ್ರೀ ಗಣಪತರಾವ್ ಕದಂ, ಮಾಜಿ ಜಿಲ್ಲಾ ಪಂಚಾಯತ ಸದಸ್ಯರು, ಇವರನ್ನು ಯಾರೋ ದುಷ್ಕರ್ಮಿಗಳು ಅವರ ತೋಟದ

ಮನೆಯಲ್ಲಿ ಕೊಲೆ ಮಾಡಿದ್ದು, ಈ ಬಗ್ಗೆ ಡಾ॥ ಪ್ರದೀಪ ತಂದೆ ಗಣಪತರಾವ್ ಕದಂ ಸಾ: ಕಮಲನಗರ ರವರು ನೀಡದ ದೂರಿನ ಅನ್ವಯ ಕಮಲನಗರ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂ. 196/2013 ಕಲಂ 302 ಐಪಿಸಿ ನೇದ್ದರ ಅಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

ಈ ಪ್ರಕರಣದಲ್ಲಿ ಆರೋಪಿತರ ಪತ್ತೆಗಾಗಿ ಸಿ.ಪಿ.ಐ. ಕಮಲನಗರ ಹಾಗೂ ಪಿ.ಐ. ಡಿ.ಸಿ.ಐ.ಬಿ. ಬೀದರ ರವರ ನೇತೃತ್ವದ ಎರಡು ಪ್ರತ್ಯೇಕ ತಂಡಗಳನ್ನು ರಚಿಸಿದ್ದು, ಸದರಿ ತಂಡಗಳು ನೆರೆಯ ರಾಜ್ಯಗಳಾದ ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶದ ಗಡಿ ಜಿಲ್ಲೆಗಳಾದ ಮೇದಕ, ಸಂಗಾರಡ್ಡಿ, ಅದಿಲಾಬಾದ ಹಾಗೂ ಲಾತೂರ, ನಾಂದೇಡ ಜಿಲ್ಲೆಯ ಅಪರಾಧ ವಿಭಾಗದ ಪೊಲೀಸರ ಸಹಾಯ ಪಡೆದು ಆರೋಪಿತರ ಪತ್ತೆಯ ಕಾರ್ಯದಲ್ಲಿ ನಿರತರಾಗಿರುತ್ತಾರೆ. ಇದಲ್ಲದೇ ಮೃತ ಶ್ರೀ ಗಣಪತರಾವ್ ಕದಂ ರವರು ಒಂದು ಶಿಕ್ಷಣ ಸಂಸ್ಥೆಯ ಅಧ್ಯಕ್ಷನಾಗಿದ್ದು, ಆ ಶಿಕ್ಷಣ ಸಂಸ್ಥೆಯ ಇತರ ಸದಸ್ಯರೊಂದಿಗೆ ಏನಾದರೂ ವೈಮನಸ್ಸು ಇತ್ತೋ ಹೇಗೋ ಎಂಬುವುದರ ಬಗ್ಗೆಯು ಸಹ ಮಾಹಿತಿ ಕಲೆ ಹಾಕಲಾಗುತ್ತಿದೆ.

ಆದಷ್ಟು ಬೇಗ ಈ ಪ್ರಕರಣದಲ್ಲಿ ಆರೋಪಿತರನ್ನು ಬಂಧಿಸಲಾಗುವುದು ಹಾಗೂ ಮೃತನ ಕುಟುಂಬದವರಿಗೆ ಈಗಾಗಲೇ ಸೂಕ್ತ ರಕ್ಷಣೆ ನೀಡಲಾಗಿದೆ.

**ಶ್ರೀ ಕೆ.ಬಿ.ಶಾಣಪ್ಪ:-** ಸನ್ಮಾನ್ಯ ಸಭಾಪತಿಯವರೇ, ಸುಮಾರು 4 ತಿಂಗಳ ಹಿಂದೆ ಕೊಲೆಯಾಗಿರುವಂತಹ ಶ್ರೀಯುತ ಕದಂ ಅವರು ಭಾರತೀಯ ಜನತಾ ಪಕ್ಷದ ಜಿಲ್ಲಾ ಪಂಚಾಯತ್ ಸದಸ್ಯರಾಗಿದ್ದರು. ಮಹಾತ್ಮ ಪೊಲೆಂ ಎನ್ನುವಂತಹ ಒಂದು ಎಜುಕೇಶನ್ ಟ್ರಸ್ಟ್‌ನ್ನು ನಡೆಸುತ್ತಿದ್ದರು. ಅವರು ದಲಿತ ವರ್ಗಕ್ಕೆ ಸೇರಿದವರಾಗಿದ್ದು, ಇಡೀ ಬೀದರ್‌ನಲ್ಲಿ ಅನೇಕ ಸಾಮಾಜಿಕ ಕೆಲಸಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದರಲ್ಲಿ ಅವರು ಯಾವಾಗಲೂ ಎತ್ತಿದಕೈ. ಆಗಷ್ಟೇ ಹುಟ್ಟಿದ ಹಸುಳೆಗಳನ್ನು ಯಾರಾದರೂ ಬೀದಿಯಲ್ಲಿ ಬಿಟ್ಟು ಹೋಗಿದ್ದರೆ ಅವುಗಳನ್ನು ಕೂಡ ತಂದು ಸಾಕುವಂತಹ ವ್ಯಕ್ತಿ ಇವರಾಗಿದ್ದರು.

ಮಾನ್ಯ ಸಭಾಪತಿಯರೇ, ಈ ವಿಚಾರದಲ್ಲಿ ನಮ್ಮ ಕಳಕಳಿ ಏನೆಂದರೆ, ಸುಮಾರು 4 ತಿಂಗಳ ಹಿಂದೆ ಸನ್ಮಾನ್ಯ ಮುಖ್ಯಮಂತ್ರಿಯವರು ನಮ್ಮ ಗುಲ್ಬರ್ಗಾಕ್ಕೆ ಭೇಟಿ ಕೊಟ್ಟಿದ್ದಂತಹ ಸಂದರ್ಭದಲ್ಲಿ ಬೀದರ್‌ನ ಸುಮಾರು ನೂರಿನ್ನೂರು ಜನರು ಕದಂ ಅವರ ಕೊಲೆಗೆ ಕಾರಣರಾದವರನ್ನು ಪತ್ತೆ ಹಚ್ಚಬೇಕೆಂದು ಒತ್ತಾಯಿಸಿ ಒಂದು ಜಾತಾ ನಡೆಸಿ ಮನವಿಯನ್ನು ಸಲ್ಲಿಸಿದ್ದರು. ಆದರೆ ಇದುವರೆಗೂ ಇವರನ್ನು ಕೊಲೆ ಮಾಡಿದವರು ಯಾರೆಂಬುದು ಪತ್ತೆಯಾಗಿಲ್ಲ, ಕದಂ ಅವರನ್ನು ಅವರ ತೋಟದ ಮನೆಯಲ್ಲಿಯೇ ಅಂದು ರಾತ್ರಿ ಸುಮಾರು 9.30 ರಿಂದ 10.00 ಗಂಟೆ ಸಮಯದಲ್ಲಿ ಹತ್ಯೆ ಮಾಡಿರುವುದಾಗಿ ತಿಳಿದುಬಂದಿದೆ. ಅವರ ಮಕ್ಕಳು ಮತ್ತು ನೌಕರರು ಫೋನ್ ಮಾಡಿದಾಗ ಫೋನ್ ಏಕೆ ತೆಗೆದುಕೊಳ್ಳುತ್ತಿಲ್ಲ ಎಂದು ಬಂದು ನೋಡಿದಾಗ ಅವರು ಕೊಲೆಯಾಗಿರುವ ವಿಚಾರ ಗೊತ್ತಾಗಿದೆ. ಅವರನ್ನು ಬಹಳ ಬರ್ಬರವಾಗಿ ಹತ್ಯೆ ಮಾಡಲಾಗಿದೆ. ಗಣಪತರಾವ್ ಕದಂ ಅವರ ಮೊದಲಿನ ಭಾವಚಿತ್ರ, ಕೊಲೆಯಾದ ನಂತರ ತೆಗೆದ ಫೋಟೋ ಮತ್ತು ಇದುವರೆಗೆ ಅವರನ್ನು ಹತ್ಯೆಗೈದವರನ್ನು ಪತ್ತೆಹಚ್ಚಬೇಕೆಂದು ಸಲ್ಲಿಸಲಾಗಿರುವ ಮನವಿ ಪತ್ರಗಳ ಪ್ರತಿಗಳೆಲ್ಲಾ ಇರುವಂತಹ ಒಂದು ಕಡತವನ್ನು ನಾನು ತಮ್ಮ ಮೂಲಕ ಮಾನ್ಯ ಗೃಹ ಸಚಿವರಿಗೆ ಕಳುಹಿಸಿಕೊಡುತ್ತೇನೆ.

(6–30 ಗಂಟೆ)

ನಮ್ಮ ಕಳಕಳಿ ಏನೆಂದರೆ, ಹೈದ್ರಾಬಾದ್ ಕರ್ನಾಟಕವಾದಂತಹ ಬೀದರ್ ಮತ್ತು ಗುಲ್ಬರ್ಗಾದಲ್ಲಿ ಈ ರೀತಿಯಾದಂತಹ ಕೊಲೆಗಳು ಬಹಳಷ್ಟು ಆಗಿದೆ. ಬೆಂಗಳೂರಿನಲ್ಲಿ ಕಳೆದ ಅಧಿವೇಶನದಲ್ಲಿ ನಾನು ತಮಗೆ ಒಂದು ಪ್ರಶ್ನೆಯನ್ನು ಕೇಳಿದ್ದೆ. "ಜೀವ ಮತ್ತು ಮಾಲು" ಒಂದು ವರ್ಷದಲ್ಲಿ ಸುಮಾರು 32 ಕೋಟಿ ರೂಪಾಯಿಗಳಷ್ಟು ಕಳ್ಳತನವಾಗಿದೆ. Recovery ಆಗಿದ್ದು ಕೇವಲ 4 ಕೋಟಿ ರೂಪಾಯಿಗಳು ಮಾತ್ರ. ನಾನು ಬೀದರ್ ಜಿಲ್ಲೆಗೆ ಸಂಬಂಧಪಟ್ಟಿದ್ದು ಮಾತ್ರ ಹೇಳುತ್ತಿದ್ದೇನೆ ವಿನಃ ಗುಲ್ಬರ್ಗಾ, ಯಾದಗಿರಿ, ಕೊಪ್ಪಳ ಇವುಗಳ ಬಗ್ಗೆ ಹೇಳುತ್ತಿಲ್ಲ. ಅದಕ್ಕಾಗಿ ನಾನು ತಮ್ಮನ್ನು ಪದೇ ಪದೇ

request ಮಾಡಿದೆ. ದಯಮಾಡಿ ಒಂದು investigation ಮಾಡಿ, ಏಕೆಂದರೆ, ಈಗಿನ modern age ನಲ್ಲಿ ಮನುಷ್ಯನಿಗೆ Forensic Laboratory Science ಇದೆ, ಬೇಕಾದಷ್ಟು ಸೌಲಭ್ಯಗಳು ಇವೆ, ಶ್ವಾನದಳ ಇದೆ ಅವುಗಳು ದಾರಿ ತೋರಿಸುತ್ತವೆ. For the last four months police people were not in a position to trace the culprits. ಅವರ ಹೆಂಡತಿ ಮಕ್ಕಳು ಭಯಭೀತರಾಗಿದ್ದಾರೆ. ಅವರು ನನ್ನ ಬಳಿ ಬಂದು ಏನ್ರೀ ನಮ್ಮ ರಾಜ್ಯದಲ್ಲಿ ದಲಿತರ ರಕ್ಷಣೆ ಮಾಡುವವರು ಯಾರು ಇಲ್ಲವೆ ಎಂದು ಕೇಳಿದರು. ಅದಕ್ಕೆ ನಾನು ಹೇಳಿದೆ, ಇದು ದಲಿತರ ವಿಷಯವಲ್ಲ, ಈ ರೀತಿಯಾಗಿ ಅನೇಕ ಕಡೆ ನಡೆಯುತ್ತವೆ. ಇದಕ್ಕೆ ಕಾರಣವೇನು ಎಂಬುದನ್ನು ಗುರುತಿಸುವುದಕ್ಕೆ ಬೇಕಾದಷ್ಟು ಜನ Experts ಇದ್ದಾರೆ. Unless and until ಕಾರಣಗಳು ಇಲ್ಲದೆ ಈ ರೀತಿ ನಡೆಯುವುದಿಲ್ಲ. What is the cause behind it? ನೀವು ಹೇಳುತ್ತೀರಿ ಮೃತ ಶ್ರೀ ಗಣಪತರಾವ್ ಕದಂ ರವರು ಒಂದು ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿದ್ದರು, ಅವರಿಗೆ ಆ ಶಿಕ್ಷಣ ಸಂಸ್ಥೆಯ ಇತರ ಸದಸ್ಯರೊಂದಿಗೆ ಏನಾದರೂ ವೈಮನಸ್ಸು ಇತ್ತೋ ಹೇಗೋ ಎಂಬುದರ ಬಗ್ಗೆಯು ಸಹ ಮಾಹಿತಿ ಕಲೆ ಹಾಕುತ್ತಿದ್ದೇವೆಂದು ತಿಳಿಸಿದ್ದೀರಿ. We don’t want to point towards anybody else? ಯಾವುದು ಒಂದು clue ತೆಗೆದುಕೊಂಡಾದರು ಇದರ ಬಗ್ಗೆ ತನಿಖೆ ಮಾಡಿಸಿ, ಏಕೆಂದರೆ, ಅದು ಮಹಾರಾಷ್ಟ್ರದ ಗಡಿ ಭಾಗಕ್ಕೆ ಹೊಂದಿಕೊಂಡಿದೆ. ಬೇಕಾದರೆ ಮಹಾರಾಷ್ಟ್ರ ಪೊಲೀಸರ ಸಹಾಯ ಬೇಕಾದರೆ ತೆಗೆದುಕೊಳ್ಳಿ, ಆಂಧ್ರ ಪ್ರದೇಶದ ಪೊಲೀಸರ ಸಹಾಯ ತೆಗೆದುಕೊಳ್ಳಿ, ದಯಮಾಡಿ ಏನಾದರು ಮಾಡಿ culprits ಅನ್ನು ಕಂಡು ಹಿಡಿದು ಅವರನ್ನು ನ್ಯಾಯಾಂಗ ಬಂಧನಕ್ಕೆ ತೆಗೆದುಕೊಳ್ಳಿ. ಅಲ್ಲಿರುವಂತಹ ಜನರು ಮುಂದಿನ ದಿನಗಳಲ್ಲಿ ನಾವು ಹೇಗೆ ಬದುಕಬೇಕು ಎಂದು ಭಯಭೀತರಾಗಿದ್ದಾರೆ. ನಮ್ಮ ಪಕ್ಷದ ಜನರಲ್ ಸೆಕ್ರೆಟರಿ ಮಲ್ಕಾಪೂರೆ ಅವರು ಅಲ್ಲಿಯ ಶಾಸಕರು. ಈ ಘಟನೆ ಅವರ ಭಾಗದಲ್ಲಿ ನಡೆದಿರುವುದು. ಅವರು ನಾವು ಕೂಡಿ ಈ ವಿಷಯವನ್ನು ಯಾವ ನಿಯಮದ ಅಡಿಯಲ್ಲಿ ಸದನದಲ್ಲಿ ಪ್ರಸ್ತಾಪ ಮಾಡೋಣವೆಂದು ಚರ್ಚಿಸಿದಾಗ ಇದನ್ನು Adjournment Motion ಅಡಿಯಲ್ಲಿ ಬೇಡ calling

attention ಮೂಲಕ ಸದನದ ಗಮನವನ್ನು ಸೆಳೆಯೋಣವೆಂದು ತೀರ್ಮಾನಸಿದೆವು, ಇದಕ್ಕೆ ಮಾನ್ಯ ಸಭಾಪತಿಯವರು ಸಹ ಅನುಮತಿ ನೀಡಿದರು. ಇದರ ಬಗ್ಗೆ ನಾನು ಹೆಚ್ಚು ಹೇಳುವಂತಹ ಅವಶ್ಯಕತೆ ಇಲ್ಲ, ಎಲ್ಲಾ ಮಾಹಿತಿಗಳು ಇದರಲ್ಲಿದೆ. ಹಾಗಾಗಿ ನಮ್ಮ ನಾಯಕರು ಹಾಗೂ ಆ ಭಾಗದ ಸದಸ್ಯರಾದಂತಹ ಶ್ರೀ ರಘುನಾಥ್ ರಾವ್ ಮಲ್ಕಾಪೂರೆಯವರು ಈ ಕಮಲನಗರ ಗ್ರಾಮಕ್ಕೆ ಹತ್ತಿರದಲ್ಲಿರುವವರು. ಅವರು ಸಹ ಇದರ ಬಗ್ಗೆ ಮಾಹಿತಿ ಚೆಲ್ಲುತ್ತಾರೆ ಎಂಬುದು ನನ್ನ ಅನಿಸಿಕೆ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ದಿವಂಗತ ಶ್ರೀ ಗಣಪತರಾವ್ ಕದಂ, ಇವರು ಬೀದರ್ ಜಿಲ್ಲೆಯ ಔರಾದ ತಾಲ್ಲೂಕಿನ ಕಮಲನಗರದ ನಿವಾಸಿಗಳು. ಬಹಳ ಸಜ್ಜನ ವ್ಯಕ್ತಿ, ಹಾಗೂ ದಲಿತ ಮುಖಂಡರಾಗಿದ್ದರು. ಇವರು ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರಾಗಿದ್ದರು. ಅಲ್ಲದೆ ಹಿಂದೆ ಔರಾದ ತಾಲ್ಲೂಕ್ ಬೋರ್ಡಿನ ಉಪಾಧ್ಯಕ್ಷರಾಗಿದ್ದರು. ಗ್ರಾಮಪಂಚಾಯಿತಿಯ ಅಧ್ಯಕ್ಷರಾಗಿದ್ದರು. ಸುಮಾರು 40 ವರ್ಷಗಳಿಂದ ಸತತವಾಗಿ ರಾಜಕೀಯ ಜೀವನದಲ್ಲಿ, ಸಾಮಾಜಿಕ ಜೀವನದಲ್ಲಿ ಇದ್ದಂತಹ ವ್ಯಕ್ತಿ. ಕಮಲನಗರ ಒಂದು ದೊಡ್ಡ ಪಟ್ಟಣ. ಈ ಹಿಂದೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಕಮಲನಗರವನ್ನು ತಾಲ್ಲೂಕು ಎಂದು ಘೋಷಣೆ ಮಾಡಿದರು. ಇಂತಹ ದೊಡ್ಡ ಪಟ್ಟಣದಲ್ಲಿ ಒಬ್ಬ ಪ್ರತಿಷ್ಠಿತ ವ್ಯಕ್ತಿಯ ಕೊಲೆಯಾಗಿ ಮೂರು ತಿಂಗಳಾದರು ಒಬ್ಬ ಆರೋಪಿಯನ್ನು ಬಂಧಿಸಿಲ್ಲ. ಮಾನ್ಯ ಗೃಹ ಸಚಿವರು ಬೀದರ್ ಜಿಲ್ಲೆಗೆ ಬಂದಾಗ ಅವರ ಬಂಧುಗಳು ತಮ್ಮನ್ನು ಭೇಟಿ ಮಾಡಿದ್ದರು. ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಅವರ ಕಳಕಳಿಯನ್ನು ಹಂಚಿಕೊಂಡಿದ್ದರು. ನಮ್ಮ ಬೀದರ್ ಜಿಲ್ಲೆ ಯಾವ ರೀತಿ ಇದೆ ಎಂದರೆ, ಒಂದು ಕಡೆ ಮಹಾರಾಷ್ಟ್ರ ಗಡಿಭಾಗ, ಇನ್ನೊಂದು ಕಡೆ ಆಂಧ್ರದ ಗಡಿಭಾಗ. ಹಾಗಾಗಿ ನಾವು ನಮ್ಮ ಯಾವುದೇ ಒಂದು ಮನವಿಯನ್ನು ಸಲ್ಲಿಸಬೇಕೆಂದರೆ ಬೆಂಗಳೂರಿಗೆ ಬರಬೇಕು ಅಂದರೆ ಸುಮಾರು 750 ಕಿ.ಮೀ. ದೂರ ಬರಬೇಕು. ನಮ್ಮ ಜಿಲ್ಲೆಯ ಜನ

ಭಯಭೀತರಾಗಿದ್ದಾರೆ, ಕಾನೂನು ಸುವ್ಯವಸ್ಥೆಯು ಹದಗೆಟ್ಟಿದೆ. ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮಾನ್ಯ ಗೃಹ ಸಚಿವರಲ್ಲಿ ವಿನಂತಿಸುವುದೇನೆಂದರೆ, ಮೂರು ತಿಂಗಳಾದರು ನಿಮ್ಮ ಇಲಾಖೆಯ ಅಧಿಕಾರಿಗಳು, ಜಿಲ್ಲಾ ಪೊಲೀಸ್ ಅಧಿಕಾರಿಗಳು ಒಬ್ಬ ಆರೋಪಿಯನ್ನು ಬಂಧಿಸುವುದಕ್ಕೆ ಆಗಲಿಲ್ಲವೆಂದರೆ ಅವರಿಂದ ಈ ಕೇಸನ್ನು handle ಮಾಡುವುದಕ್ಕೆ ಆಗುತ್ತಿಲ್ಲ. ದಯವಿಟ್ಟು ಈ ಕೇಸನ್ನು CIDಗೆ refer ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಇದಕ್ಕೆ ಇನ್ನೊಂದು ಉದಾಹರಣೆಯನ್ನು ಕೊಡಬಯಸುತ್ತೇನೆ. ಕಳೆದ ತಿಂಗಳು 22ನೇ ತಾರೀಖು ಸಂಜೆ ಐದೂವರೆ ಗಂಟೆಗೆ 55 ವರ್ಷದ ಒಬ್ಬ ವೃದ್ಧ ಹೆಣ್ಣುಮಗಳು ತನ್ನ ಮಗನ ಜೊತೆ ಮೋಟಾರ್ ಸೈಕಲ್‌ನಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಎದುರಿಗೆ ತರಕಾರಿಯನ್ನು ಕೊಂಡುಕೊಳ್ಳುವುದಕ್ಕೆ ಹೋಗಿದ್ದರು. ತರಕಾರಿ ತೆಗೆದುಕೊಂಡು ಹೋಗುವ ಸಮಯದಲ್ಲಿ ಆ ಸ್ಥಳಕ್ಕೆ ಪಾರ್ಶ್ವವಾಯು ಪೀಡಿತರಾಗಿದ್ದಂತಹ ಅವರ ಗಂಡ ಆಟೋದಲ್ಲಿ ಹೋಗಿದ್ದಾರೆ. ಆಗ ಆ ತಾಯಿ ತನ್ನ ಮಗನಿಗೆ, ನೋಡಪ್ಪ ನೀನು ನಿನ್ನ ತಂದೆಯನ್ನು ಕರೆದುಕೊಂಡು ಹೋಗು ನಾನು ತರಕಾರಿ ತೆಗೆದುಕೊಂಡು ಮನೆಗೆ ಬರುತ್ತೇನೆ ಎಂದು ಹೇಳಿ ಅವರನ್ನು ಕಳುಹಿಸುತ್ತಾರೆ. ಆದರೆ ಆ ತಾಯಿ ರಾತ್ರಿ ಸುಮಾರು 8 ಗಂಟೆಯಾದರೂ ಮನೆಗೆ ಬರಲಿಲ್ಲ. ಆಗ ಅವರ ಮನೆಯವರು ನನಗೆ ದೂರವಾಣಿ ಮುಖಾಂತರ ನನಗೆ ಆ ದಿವಸ ನಡೆದಂತಹ ವಿದ್ಯಮಾನಗಳನ್ನು ಹಾಗೂ ಆ ತಾಯಿ ಮನೆಗೆ ಬಾರದೆ ಇರುವ ವಿಷಯವನ್ನು ತಿಳಿಸಿದರು. ಆಗ ನಾನು ಈ ವಿಷಯವನ್ನು ಸಂಬಂಧಪಟ್ಟಂತಹ ಎಲ್ಲಾ ಅಧಿಕಾರಿಗಳಿಗೂ ದೂರವಾಣಿ ಮೂಲಕ ತಿಳಿಸಿದೆ. ಅಲ್ಲದೆ ನೋಡಿ ಆ ಕುಟುಂಬದವರಿಗೆ ಇದರ ಬಗ್ಗೆ ಏಕೋ ಅನುಮಾನ ಬರುತ್ತಿದೆ, ದಯವಿಟ್ಟು ಇದರ ಬಗ್ಗೆ ತನಿಖೆ ಮಾಡಿ ಎಂದು ಹೇಳಿದೆ. ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಗೃಹಸಚಿವರ ಗಮನವನ್ನು ಸೆಳೆಯಬಯಸುತ್ತೇನೆ, ಮೊನ್ನೆ ದಿವಸ 1ನೇ ತಾರೀಖು ಬೀದರ್‌ನಿಂದ ಸುಮಾರು 13 ಕಿಲೋ ಮೀಟರ್ ದೂರದಲ್ಲಿ ಒಂದು ನಿರ್ಜನ ಪ್ರದೇಶದಲ್ಲಿ ಅವರ ದೇಹ ಸಿಕ್ಕಿದೆ. ಅಂದರೆ ಆ ದೇಹ ಕೊಳೆತು

ನಾಯಿ–ನರಿಗಳು ತಿಂದು ಅವರ ಮುಖವನ್ನು ಮಾತ್ರ ಉಳಿಸಿವೆ. ಅಂದರೆ ಸತ್ತ ಹೆಣದ ವಾಸನೆ ಬಂದ ಮೇಲೆ ಆ ಹೆಣ್ಣು ಮಗಳನ್ನು ಪತ್ತೆ ಹಚ್ಚಿದ್ದಾರೆ. ನನಗೆ ಅನ್ನಿಸುವುದೇನೆಂದರೆ ಈ ಪ್ರಕರಣವನ್ನು ನೋಡಿದಾಗ ನಮ್ಮ ಬೀದರ್ ಜಿಲ್ಲೆಯಲ್ಲಿ ಕಾನೂನಿನ ಸುವ್ಯವಸ್ಥೆ ಹೇಗಿದೆ ಎಂಬುದಕ್ಕೆ ಒಂದು ಕೈಗನ್ನಡಿ ಎನ್ನಿಸುತ್ತಿದೆ. ಇದನ್ನು ಮಾನ್ಯ ಗೃಹ ಸಚಿವರು ಗಂಭೀರವಾಗಿ ಪರಿಗಣಿಸಬೇಕು. ಶ್ರೀ ಗಣಪತರಾವ್ ಕದಂ ಇವರ ಕೊಲೆ ಪ್ರಕರಣದ ಜೊತೆಗೆ ಈ ಪ್ರಕರಣವನ್ನು ತೆಗೆದುಕೊಳ್ಳಬೇಕು. ಆ ಹೆಣ್ಣು ಮಗಳ ಹೆಸರು ಶ್ರೀಮತಿ ಅನ್ನಪೂರ್ಣೇಶ್ವರಿ, ಗಂಡ ತಿಪ್ಪಾರೆಡ್ಡಿ, ಶಾಖೆ ಬೀದರ್. ಇವರ ಹೆಸರನ್ನು ಮಾನ್ಯ ಗೃಹ ಸಚಿವರು ಬರೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ. ಈ ಎರಡೂ ಪ್ರಕರಣಗಳನ್ನು CIDಗೆ refer ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕಳಕಳಿಯಿಂದ ವಿನಂತಿಸುತ್ತೇನೆ.

**ಶ್ರೀ ಡಿ.ಎಸ್.ವೀರಯ್ಯ(ವಿಧಾನ ಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಕೊಲೆಯಾದ ಶ್ರೀ ಗಣಪತರಾವ್ ಕದಂ ಯಾರಿದ್ದಾರೆ ಅವರು ಸಾಮಾನ್ಯ ವ್ಯಕ್ತಿ ಅಲ್ಲ. ಅವರು ಅನಾಥ ಮಕ್ಕಳನ್ನು ದತ್ತು ತೆಗೆದುಕೊಂಡು ಅವರನ್ನು ಉನ್ನತೀಕರಿಸುವುದಕ್ಕಾಗಿ ತ್ಯಾಗ ಮಾಡುತ್ತಿದ್ದಂತಹ ಸಮಾಜ ಮುಖಿಯ ವ್ಯಕ್ತಿ. ಈ ರೀತಿಯಾದಂತಹ ಸಾವನ್ನು ಪೊಲೀಸರು ಈ ರೀತಿ ಲಘುವಾಗಿ ತೆಗೆದುಕೊಂಡು ಅವರ ಸಾವನ್ನು ಪತ್ತೆ ಹಚ್ಚುವುದಕ್ಕಾಗಲಿಲ್ಲ. ನಿಮಗೆ ಬೇಕು ಎಂದರೆ ಕೊಲೆ ಮಾಡಿ ಹೊರ ರಾಷ್ಟ್ರಕ್ಕೆ ಹೋದಂತಹ ಒಬ್ಬ ಕೊಲೆಗಾರನನ್ನು ಮೂರು ದಿವಸದೊಳಗೆ ಪತ್ತೆ ಹಚ್ಚಿ ಅವರನ್ನು ಹಿಡಿದುಕೊಂಡು ಬರುತ್ತೀರಿ. ಆದರೆ ಒಬ್ಬ ದಲಿತ, ಅದರಲ್ಲೂ ಒಬ್ಬ ಸಮಾಜ ಸೇವಕ, ಜಿಲ್ಲಾ ಪಂಚಾಯತಿಯ ಸದಸ್ಯರಾದವರು ಸತ್ತಾಗ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದೆಯೇ ಬೇಜವಾಬ್ದಾರಿತನದಿಂದ ಮೂರು ತಿಂಗಳಾದರೂ ಅಪರಾಧಿಗಳನ್ನು ಬಂಧಿಸದೆ ಇರುವುದು ಖಂಡನೀಯವಾದಂತಹ ವಿಷಯ. ಮಾನ್ಯ ರಘುನಾಥ್ ರಾವ್ ಮಲ್ಕಾಪೂರೆಯವರು ಹೇಳಿದಂತೆ ಇದಕ್ಕೆ CID ತನಿಖೆ ಆಗಬೇಕೆಂದು ನಾನು ಸಹ ಆಗ್ರಹಿಸುತ್ತಿದ್ದೇನೆ. ಈ ಪ್ರಕರಣದ ಹಿಂದೆ ರಾಜಕೀಯ ಕೈವಾಡವಿದೆಯೇ

ಎಂದು ಕಂಡುಹಿಡಿಯಬೇಕು. ಸರ್ಕಾರ ಇವರು ಒಂದು ಶಿಕ್ಷಣ ಸಂಸ್ಥೆಯನ್ನು ನಡೆಸುತ್ತಿದ್ದರು ಆದುದರಿಂದ ವೈಮನಸ್ಸು ಇತ್ತು ಎಂದು ಉತ್ತರದಲ್ಲಿ ತಿಳಿಸಿದೆ. ಹಾಗಾದರೆ ಈ ರಾಜ್ಯದಲ್ಲಿ ಎಷ್ಟು ಜನ ಶಿಕ್ಷಣ ಸಂಸ್ಥೆಯನ್ನು ನಡೆಸುತ್ತಿಲ್ಲ? ಒಂದು ವೇಳೆ ಶಿಕ್ಷಣ ಸಂಸ್ಥೆಯವರ ಮೇಲೆ ಅನುಮಾನವಿದ್ದರೆ ಅದರ ವಸ್ತುಸ್ಥಿತಿಯನ್ನು ಕಂಡು ಹಿಡಿಯುವುದಕ್ಕೆ ಮೂರು ತಿಂಗಳ ಕಾಲಾವಕಾಶ ಬೇಕೆ? ಏಕೆ ಈ ರೀತಿ ಚೆಲ್ಲಾಟವಾಡುತ್ತಿದ್ದೀರಿ? ಈತ ಒಬ್ಬ ಸಾಮಾನ್ಯ ವ್ಯಕ್ತಿ ಅಲ್ಲ. ಈತನ ಸಾವನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕಾದಂತಹ ಸರ್ಕಾರ ಬಹಳ ಲಘುವಾಗಿ ಪರಿಗಣಿಸಿರುವುದು ಬಹಳ ಖಂಡನೀಯ. ಆದಕಾರಣ ಇದನ್ನು CIDಗೆ ಒಪ್ಪಿಸಬೇಕು. ಇದನ್ನು ಒಪ್ಪಿಸುವ ಮುಖಾಂತರ ಇನ್ನು ಮುಂದೆ ಈ ರೀತಿಯಾದಂತಹ ಪ್ರಕರಣಗಳು ಆಗಬಾರದು. ಇಲ್ಲಿ ಒಬ್ಬ ದಲಿತ ಅನ್ನುವುದು ಮುಖ್ಯವಲ್ಲ, ಈತ ಒಬ್ಬ ರಾಜಕಾರಣಿಯಾಗಿದ್ದರೂ ಸಹ ಇವರನ್ನು ಕೊಲೆ ಮಾಡಿದಂಥವರನ್ನು ಇದುವರೆಗೂ ಹುಡುಕಿ ಅರೆಸ್ಟ್ ಮಾಡದೆ ಕಾನೂನಿನ ಕ್ರಮ ಜರುಗಿಸದೆ ಇರುವಂತಹ Sub-Inspector and Circle Inspector ಇಬ್ಬರನ್ನು ಕೂಡಲೆ ಅಮಾನತ್ತಿನಲ್ಲಿಡಬೇಕೆಂದು ನಾನು ಆಗ್ರಹಿಸುತ್ತೇನೆ.

**ಶ್ರೀ ಡಿ.ವಿ.ಸದಾನಂದಗೌಡ(ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇದು ಎಷ್ಟು ಗಂಭೀರವಾದ ವಿಷಯವೆಂದರೆ, ಒಬ್ಬ ಪರಿಶಿಷ್ಟ ಜಾತಿಗೆ ಸೇರಿದಂತಹ ವ್ಯಕ್ತಿ ಜಿಲ್ಲಾ ಪಂಚಾಯತ್, ಗ್ರಾಮ ಪಂಚಾಯತ್ ಅಧ್ಯಕ್ಷರಾಗಿದ್ದರೂ ಸಹ, ಇವರಿಗೆ ಮೀಸಲಾತಿ ಇರಬಹುದು, ಆದರೂ ಕೂಡ ಇವರು ರಾಜಕೀಯವಾಗಿ ಬೆಳೆಯಬೇಕಾದರೆ ಬಹಳ ಕಷ್ಟವಿದೆ. ಅಷ್ಟು ಸುಲಭದ ಮಾತಲ್ಲ. ಸಾಧಾರಣವಾಗಿ ಇಂತಹ ವ್ಯವಸ್ಥೆಗಳಲ್ಲಿ ಇಂತಹ ಒಬ್ಬ ವ್ಯಕ್ತಿಯ ಹತ್ಯೆಯಾಗಿದೆ ಎಂದರೆ ಇದರ ಬಗ್ಗೆ ಸರ್ಕಾರ ಬಹಳ ಗಂಭೀರವಾಗಿ ಪರಿಗಣಿಸದೆ ಇರುವುದು ದುರ್ದೈವದ ಸಂಗತಿ ಎಂದು ಭಾವಿಸುತ್ತೇನೆ. ಮಾನ್ಯ ಶಾಣಪ್ಪನವರು ಹೇಳಿದರು, ಈ ಪ್ರಕರಣದ ಬಗ್ಗೆ ತನಿಖೆ ಮಾಡಿಸಬೇಕೆಂದು ತಿಳಿಸಲು ಸುಮಾರು 200 ಜನರು ಮಾನ್ಯ ಮುಖ್ಯಮಂತ್ರಿಗಳ ಬಳಿ ಹೋಗಿದ್ದರಂತೆ. ಆದರೂ ಸಹ ಏನೂ ಆಗಲಿಲ್ಲ.

ಇದರ ಒಟ್ಟು ಸಾರಾಂಶವೇನೆಂದರೆ, ಒಬ್ಬ ವ್ಯಕ್ತಿಯ ಮೇಲೆ ಸಾರ್ವಜನಿಕರಿಗೆ ಎಷ್ಟು ಗೌರವ ಇತ್ತು ಎನ್ನುವುದಕ್ಕೆ ಇವರು ಕೊಲೆಯಾದ ದಿವಸ ಇಡೀ ಬೀದರ್ ಬಂದ್ ಆಗಿದೆ. ಬೀದರ್ ಬಂದ್ ಆದಾಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿರಬಹುದು, ಆ ಭಾಗದ ಡಿ.ಐ.ಜಿ. ಇರಬಹುದು ಇದರ ಗಂಭೀರತೆಯ ಬಗ್ಗೆ ಅರ್ಥ ಮಾಡಿಕೊಳ್ಳಲಿಲ್ಲವೆಂದರೆ ಏನು ಅನ್ನಿಸುತ್ತದೆ? ಯಾರೋ ಒಬ್ಬ ಸಾಮಾನ್ಯ ವ್ಯಕ್ತಿಯ ಸಾವಾಯಿತು. ಅವನ ಮೇಲೆ ವೈಮನಸ್ಸು ಇದ್ದ ಕಾರಣ ಯಾರೋ ಕೊಲೆ ಮಾಡಿರಬಹುದು ಎಂದು ತಿಳಿದುಕೊಳ್ಳಬಹುದಾಗಿತ್ತು. ಆದರೆ ಇಡೀ ಸಾರ್ವಜನಿಕರು ಈ ಮನುಷ್ಯನ ಮೇಲೆ ಗೌರವ ಇಟ್ಟ ಕಾರಣ ಬೀದರ್ ಬಂದ್ ಆಯಿತು. ಬಂದ್ ಮಾಡಿದ ಮೇಲೆಯೂ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲಿಲ್ಲ. ಆದ ಕಾರಣ ನಾನು ಹೇಳುವುದೇನೆಂದರೆ, ಮಾನ್ಯ ಶಾಣಪ್ಪನವರು ಈ ವಿಷಯದ ಬಗ್ಗೆ ಕಳೆದ ನಾಲ್ಕು ದಿವಸದಿಂದಲೂ ಹೇಳುತ್ತಿದ್ದರು. ಏನೆಂದರೆ ಇಂತಹ ಒಂದು ಪರಿಸ್ಥಿತಿಯಲ್ಲಿಯೂ ಸಹ ಪೊಲೀಸರು ಏನು ಮಾಡುತ್ತಿಲ್ಲವಲ್ಲ ಎಂಬ ಕಳವಳವನ್ನು ವ್ಯಕ್ತಪಡಿಸುತ್ತಿದ್ದರು. ನಾನು ತಮ್ಮ ಮುಖಾಂತರ ಮಾನ್ಯ ಗೃಹ ಸಚಿವರಿಗೆ ತಿಳಿಸುವುದೇನೆಂದರೆ, ಆ ವಿಭಾಗದ ಪೊಲೀಸರಲ್ಲಿ ಜನ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ಈ ವಿಚಾರವಾಗಿ ಶಾಣಪ್ಪನವರು ಮಾತನಾಡಿದ ನಂತರ ಇದನ್ನೆಲ್ಲ scrutiny ಮಾಡಿ, ತನಿಖೆ ನಡೆಸಿ, ಸೂಕ್ತ ನಿರ್ದೇಶನ ನೀಡುವ ಸಲುವಾಗಿ ಅಲ್ಲಿಗೆ ವಿಶೇಷ ಅಧಿಕಾರಿಯನ್ನಾಗಿ ಕಮೀಷನರ್ ಅವರನ್ನೇ ಕಳುಹಿಸಿಕೊಡುವುದಾಗಿ ಹೇಳಿದ್ದಾರೆ. ಅದೂ ಕೂಡ ನಡೆಯಲಿಲ್ಲ ಎನ್ನುವುದು ಅಲ್ಲಿರುವವರ ವಾದ. ಇದರ ಹಿಂದೆ ಯಾರೋ ಒಬ್ಬ ಪ್ರಭಾವಿ ವ್ಯಕ್ತಿಗಳ ಕೈವಾಡವಿದೆ. ಆದ್ದರಿಂದಲೇ ತನಿಖೆ ಸ್ವಲ್ಪಮಟ್ಟಿಗಿನ ವೇಗವನ್ನು ಕಳೆದುಕೊಂಡಿದೆ ಎನ್ನುವುದು ಎಲ್ಲರ ವಾದವಾಗಿದೆ. ಆದ್ದರಿಂದ ಸರ್ಕಾರ ನಿಶ್ಚಯವಾಗಿ Investigation Agency ಅನ್ನು ಬದಲಾವಣೆ ಮಾಡಬೇಕು. ನಿಮ್ಮ ಇಲಾಖೆಯ Investigation Agency ಮೇಲೆ ಯಾರಿಗೂ ವಿಶ್ವಾಸವಿಲ್ಲ. ದಯಮಾಡಿ ಈ ಪ್ರಕರಣವನ್ನು ಸಿಐಡಿಗೆ ಒಪ್ಪಿಸಿ, ಅದಕ್ಕೆ ಇಷ್ಟು ದಿವಸದಲ್ಲಿ ತನಿಖೆ ಮುಗಿಸಬೇಕೆನ್ನುವ ಕಾಲಮಿತಿಯನ್ನು ಹಾಕಿ,

ತೀವ್ರವಾಗಿ ಕೆಲಸ ಆಗುವ ರೀತಿಯಲ್ಲಿ ಒಬ್ಬ ಉತ್ತಮ ಅಧಿಕಾರಿಯನ್ನು ನೇಮಿಸಬೇಕೆಂದು ನಾನು ಸರ್ಕಾರಕ್ಕೆ ಆಗ್ರಹವನ್ನು ಮಾಡುತ್ತೇನೆ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಗಳೇ, ನನ್ನ ಒಂದು ಸಲಹೆ ಏನೆಂದರೆ, ಕಳೆದ ಅಧಿವೇಶನದಲ್ಲಿಯೂ ಗುಲ್ಬರ್ಗಾದಲ್ಲಿ ಒಂದು ಕಮೀಷನರ್ ಕಚೇರಿಯನ್ನು ತೆರೆಯುವ ಕುರಿತು ಸಹ ಗೃಹ ಸಚಿವರು ಒಂದು ಆಶ್ವಾಸನೆಯನ್ನು ನೀಡಿದ್ದರು. ಮುಖ್ಯಮಂತ್ರಿಗಳು ಸಹ ಅಲ್ಲಿಗೆ ಬಂದಿದ್ದಾಗ ಗುಲ್ಬರ್ಗಾದಲ್ಲಿ ಒಂದು ಕಮೀಷನರ್ ಕಚೇರಿಯನ್ನು ಮಾಡುವ ನಿರ್ಣಯ ಸರ್ಕಾರಕ್ಕಿದೆ ಎನ್ನುವ ಮಾತನ್ನು ಹೇಳಿದ್ದರು. ಈಗ ಹುಬ್ಬಳ್ಳಿ ಮತ್ತು ಬೆಳಗಾವಿಗೆ ಕಮೀಷನರ್ ಕಚೇರಿಯನ್ನು ನೀಡಲಾಗಿದೆ. ಅದೇ ಪ್ರಕಾರ Gulbarga became a vast city now. ಅದು ಆರು ಜಿಲ್ಲೆಗಳಿಗೆ ಸೆಂಟರ್ ಆಗಿದೆ. ಅಲ್ಲಿ ಒಂದು ಕಮೀಷನರ್ ಆಫೀಸ್ ಬರಬೇಕು. ಆಗ ಅಲ್ಲಿರತಕ್ಕ ಎಲ್ಲಾ ಅಧಿಕಾರಿಗಳು ನೆಟ್ಟಗೆ ಆಗುತ್ತಾರೆ. Immediately we can approach the Commissioner. ಈಗ ಐಜಿಪಿ ಇದ್ದಾರೆ. Subject to this point let me tell you, first of all let us trace the culprits and book them to the court. ಬಾಕಿ ಅಲ್ಲಿ ಏನೇನು ಮಾಡಬೇಕೆನ್ನುವ ವಿಚಾರವನ್ನು ಅಲ್ಲಿನ ಶಾಸಕರು, ಸಚಿವರು ಆ ಭಾಗಕ್ಕೆ ಬಂದಾಗ we will narrate all these things.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಗಳೇ, ದಿವಂಗತ ಗಣಪತ್ ರಾವ್ ಕದಂರವರು ದಲಿತ ಹಿಂದುಳಿದ ಸಮಾಜದಿಂದ ಬಂದವರಾದರೂ ಕೂಡ ಮಾನವೀಯತೆಯ ಮನಸ್ಸನ್ನು ಹೊಂದಿದ್ದವರು. ಅವರ ಇತಿಹಾಸವನ್ನು ನೋಡಿದಾಗ ಅನಾಥ ಶಿಶು ಮಕ್ಕಳನ್ನು ತಂದು ಸಾಕಿ ಸಲುಹಿದಂತಹ ಸಾಮಾಜಿಕ ಕಾರ್ಯಕರ್ತ ಹಾಗೂ ಹಲವಾರು ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದ್ದಾರೆ. ಅವರ ಹಿನ್ನೆಲೆಯನ್ನು ನೋಡಿದರೆ ಕೇವಲ ದಲಿತ ಸಮುದಾಯದವರು ಮಾತ್ರ ಮೆರವಣಿಗೆ ಮಾಡಲಿಲ್ಲ. ಇವತ್ತಿನ ದಿವಸ ರಾಷ್ಟ್ರೀಯ ಬಸವ ದಳದವರು ಇದ್ದಾರೆ, Buddhist Society of India ದವರು ಇದ್ದಾರೆ, Mission and Vision Society of Indiaದವರು

ಇದ್ದಾರೆ. ಈ ರೀತಿ ಎಲ್ಲಾ ಸಮುದಾಯದ ಜನರು ಇವತ್ತು ಈ ರೀತಿಯ ಕೊಲೆಯನ್ನು ಯಾರು ಮಾಡಿದ್ದಾರೆ ಅವರನ್ನು ಹಿಡಿಯಲೇ ಬೇಕೆನ್ನುವ ಹೋರಾಟ, ಒತ್ತಡವನ್ನು ಇಡೀ ಬೀದರ್ ಜಿಲ್ಲೆಯಲ್ಲಿ ನಡೆಸಿದ್ದು ನಮ್ಮ ಕಣ್ಣ ಮುಂದಿದೆ. ಎಲ್ಲರಿಗೂ ಭಯ ಹುಟ್ಟಿಸುವಂತಹ ಒಂದು ವಾತಾವರಣ ಅಲ್ಲಿ ನಿರ್ಮಾಣ ಆಗಿದೆ. ಸಾರ್ವಜನಿಕ ಜೀವನದಲ್ಲಿರುವವರಿಗೆ ಯಾವತ್ತು ಯಾರಿಗೆ ಏನಾಗುತ್ತದೋ ಎನ್ನುವ ಭಯದ ವಾತಾವರಣ ನಿರ್ಮಾಣ ಆಗಿದೆ. ಹೀಗಾಗಿ ಈಗಾಗಲೇ ನಮ್ಮ ಸಹೋದ್ಯೋಗಿಗಳು ಬೇಡಿಕೆ ಮಾಡಿಕೊಂಡಿರುವ ಹಾಗೆ ಸಿಐಡಿ ಮೂಲಕ ಈ ಕೊಲೆಯ ತನಿಖೆಯನ್ನು ತ್ವರಿತ ಗತಿಯಲ್ಲಿ ಮಾಡಿಸಬೇಕು. ಇದರಿಂದ ಗುಲ್ಬರ್ಗಾ ಬೀದರ್‌ನಂತಹ ಹೈದರಾಬಾದ್-ಕರ್ನಾಟಕ ಭಾಗದಲ್ಲಿ ಪೊಲೀಸ್ ಇಲಾಖೆ ಬಗ್ಗೆ ಹೆಚ್ಚಿನ ವಿಶ್ವಾಸ ಮೂಡತಕ್ಕ ಕೆಲಸ ಆಗಬೇಕು. ಮುಂದಿನ ದಿನಮಾನಗಳಲ್ಲಿ ಸಾರ್ವಜನಿಕ ಸೇವೆಯಲ್ಲಿ ಕೆಲಸ ಮಾಡುವವರಿಗೆ ವಿಶ್ವಾಸ ಮೂಡಿಸತಕ್ಕ ಕೆಲಸವನ್ನು ಮಾಡಬೇಕೆನ್ನುವ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಜೆ.ಜಾರ್ಜ್(ಗೃಹ ಸಚಿವರು):-** ಮಾನ್ಯ ಸಭಾಪತಿಗಳೇ, ಈಗಾಗಲೇ ಹಿರಿಯ ಸದಸ್ಯರಾದ ಮಾನ್ಯ ಶಾಣಪ್ಪನವರು ಗಮನ ಸೆಳೆಯುವ ಸೂಚನೆಯನ್ನು ನೀಡಿದ್ದಾರೆ. ನನಗೆ ಅವರ ಕಳಕಳಿ ಅರ್ಥವಾಗುತ್ತದೆ. ಏಕೆಂದರೆ, ನಾನು ನಮ್ಮ ಅಧಿಕಾರಿಗಳ Departmental Review Meeting ಸಲುವಾಗಿ ಬೀದರ್‌ಗೆ ಹೋಗಿದ್ದೆನು. ನನ್ನೊಂದಿಗೆ ADGP Crime, ADGP Law and Order ಸಹ ಇದ್ದರು. ಅಲ್ಲಿ ಒಂದು delegation ಬಂದು ಈ ವಿಚಾರವನ್ನು ನನಗೆ ಹೇಳಿದರು. ಅಧಿಕಾರಿಗಳ ಜೊತೆಯಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿದ್ದೆನು, ಅವರು ಇದರ ತನಿಖೆಗಾಗಿ ಎರಡು team ಅನ್ನು ಮಾಡಿದ್ದಾರೆ. ಅಲ್ಲಿರುವ ಸಮಸ್ಯೆ ಏನೆಂದರೆ, ಅವರು Farm House ನಲ್ಲಿ ಅವರ ಕೊಲೆಯಾಗಿದೆ, ಕೊಲೆ ಮಾಡಿರುವ ಸಂದರ್ಭದಲ್ಲಿ ಯಾವುದೇ ಬೆಲೆಬಾಳುವ ವಸ್ತುಗಳನ್ನು ಅಲ್ಲಿಂದ ತೆಗೆದುಕೊಂಡು ಹೋಗಿರುವುದಿಲ್ಲ. ಇದರ ಹಿಂದಿನ ಉದ್ದೇಶ ನೋಡಿದರೆ ಇದು ಲಾಭಕ್ಕಾಗಿ ಮಾಡಿರುವ ಕೊಲೆಯಲ್ಲ. ಈ ಕೊಲೆಯ ಹಿಂದೆ ಯಾರದ್ದೋ ಕೈವಾಡ ಇದೆ, ಇಲ್ಲಿ

ಏನಾಗಿದೆ ಎಂದರೆ ಇದೊಂದು ಆಂಧ್ರ ಮತ್ತು ಮಹಾರಾಷ್ಟ್ರದ ಗಡಿ ಪ್ರದೇಶ. ಇಲ್ಲಿ ತನಿಖೆ ನಡೆಸಲಾಗುತ್ತಿದೆ. ಇಲ್ಲಿ ಕೆಲವರು ಜನರನ್ನು ಬಾಡಿಗೆ ಪಡೆದು ಈ ಕೃತ್ಯಗಳನ್ನು ನಡೆಸಿ, ಬೇರೆ ರಾಜ್ಯಗಳಿಗೆ ಹೋಗುವುದು ನಡೆಯುತ್ತಿದೆ, ಸುಪಾರಿ ಕೊಲೆಗಳು ನಡೆಯುತ್ತಿವೆ ಎನ್ನುವ ಮಾಹಿತಿ ಬಂದಿದೆ. ನಾವು ಈ ವಿಚಾರವನ್ನು ಲಘುವಾಗಿ ಪರಿಗಣಿಸದೇ ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಕೊಲೆಯಾಗಿರುವ ವಿಚಾರದಲ್ಲಿ ಅಲ್ಲಿರುವವರೆಲ್ಲರೂ ಬಹಳ ಒಳ್ಳೆಯ ಮಾತುಗಳನ್ನು ಹೇಳಿದ್ದಾರೆ. ಅವರು ಸಮಾಜಕ್ಕೆ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಅದರಲ್ಲಿಯೂ ಅವರು ಪರಿಶಿಷ್ಟ ಜಾತಿಗೆ ಸೇರಿದವರು, ಸಾಕಷ್ಟು ಸಾಮಾಜಿಕ ಕೆಲಸಗಳನ್ನು ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಸಹ ಈ ವಿಚಾರವನ್ನು ಬಹಳ ಗಂಭೀರವಾಗಿ ಪರಿಗಣಿಸಿದ್ದಾರೆ. ಈಗ ಈ ತನಿಖೆಗಾಗಿ ಎರಡು team ಗಳನ್ನು ಮಾಡಿದ್ದು, ಒಂದು Local Inspector team, ಇನ್ನೊಂದು ನಮ್ಮ DCIV Inspector ತಂಡವನ್ನು ಮಾಡಲಾಗಿದೆ. ಈಗ ತಮ್ಮೆಲ್ಲರ ಅನಿಸಿಕೆ ನಮಗೆ ಅರ್ಥವಾಗಿದೆ, ಈ ಕೊಲೆ ಮಾಡಿರುವವರು ಯಾರೇ ಆಗಿರಲಿ, ಅವರನ್ನು ನ್ಯಾಯದ ಮುಂದೆ ತಂದು ಅವರಿಗೆ ಶಿಕ್ಷೆ ಕೊಡಿಸಬೇಕೆನ್ನುವುದು ನಮ್ಮ ಸರ್ಕಾರದ ಉದ್ದೇಶ. ಈಗೆಲ್ಲಾ ಈ ಕೊಲೆಯನ್ನು ಸಿಐಡಿ ತನಿಖೆಗೆ ಒಪ್ಪಿಸಬೇಕೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಸದಾನಂದಗೌಡರು ಹೇಳಿದ ಮಾತನ್ನು ನಾನು ಒಪ್ಪುವುದಿಲ್ಲ, ನಮ್ಮ ಪೊಲೀಸ್ ಅಧಿಕಾರಿಗಳ ಬಗ್ಗೆ ನಮಗೆ ನಂಬಿಕೆ ಇಲ್ಲವೆಂದಲ್ಲ, 3 ತಿಂಗಳಾದರೂ ತನಿಖೆ ಆಗದೆ ಇರುವುದಕ್ಕೆ ಕಾರಣ ಏನೆಂಬುದನ್ನು ನಾನು ಹೇಳಿದ್ದೇನೆ. ಇನ್ನೂ ಹೆಚ್ಚಿನ ತನಿಖೆಗಾಗಿ ಈ ಕೊಲೆ ಪ್ರಕರಣವನ್ನು ಸಿಐಡಿ ತನಿಖೆಗೆ ಒಪ್ಪಿಸಲು ನಾವು ಆದೇಶವನ್ನು ಹೊರಡಿಸುತ್ತೇವೆ. ಈ ಪ್ರಕರಣವನ್ನು ಸಿಐಡಿಗೆ ಒಪ್ಪಿಸಿ ಆದಷ್ಟು ಬೇಗನೆ ಯಾರೇ ತಪ್ಪಿತಸ್ಥರಾಗಲೀ ಅವರನ್ನು ಕಂಡುಹಿಡಿದು ನ್ಯಾಯದ ಮುಂದೆ ತಂದು ಅವರಿಗೆ ತಕ್ಕ ಶಿಕ್ಷೆ ನೀಡಲಾಗುವುದು ಎನ್ನುವ ಭರವಸೆಯನ್ನು ನಾನು ನೀಡುತ್ತೇನೆ.

## 10. ಶಾಸನ ರಚನೆ

## (ಅ) ಕರ್ನಾಟಕ ರಾಜ್ಯ ಮಹಿಳಾ ಆಯೋಗ (ತಿದ್ದುಪಡಿ) ವಿಧೇಯಕ, 2013

## ಪರ್ಯಾಲೋಚನಾ ಪ್ರಸ್ತಾವ

**ಶ್ರೀಮತಿ ಉಮಾಶ್ರೀ(ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ರಾಜ್ಯ ಮಹಿಳಾ ಆಯೋಗ ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಶ್ರೀಮತಿ ಉಮಾಶ್ರೀ(ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಗಳೇ, ಕರ್ನಾಟಕ ರಾಜ್ಯ ಮಹಿಳಾ ಆಯೋಗದ ವಿಧೇಯಕಕ್ಕೆ ತಿದ್ದುಪಡಿಯನ್ನು ತರಲು ನಾನು ಬಯಸುತ್ತೇನೆ. ಈ ಆಯೋಗದಲ್ಲಿ ಅಧ್ಯಕ್ಷರನ್ನು ಒಳಗೊಂಡಂತೆ 6 ಜನ ಸದಸ್ಯರು ಇರುತ್ತಾರೆ. ಅದರಲ್ಲಿ ಒಂದು ಸ್ಥಾನ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮೀಸಲಾಗಿಡಲಾಗಿದೆ. ಇದರಲ್ಲಿ ಹಿಂದುಳಿದ ವರ್ಗದವರನ್ನು ಸೇರ್ಪಡೆ ಮಾಡಿ ಸಾಮಾಜಿಕ ನ್ಯಾಯದಲ್ಲಿ ಅವರಿಗೂ ಸಹ ಸವಲತ್ತು ಲಭ್ಯವಾಗಬೇಕೆನ್ನುವ ಕಾರಣದಿಂದ ಈ ವಿಧೇಯಕಕ್ಕೆ ತಿದ್ದುಪಡಿಯನ್ನು ನಾವು ತಂದಿದ್ದೇವೆ. ಅದಕ್ಕಾಗಿ ಈ ಸದನ ಒಪ್ಪಿಗೆಯನ್ನು ಕೊಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಗಳೇ, ಈ ತಿದ್ದುಪಡಿ ವಿಧೇಯಕದಲ್ಲಿ ಒಂದು ಪದ mistake ಆಗಿದೆ. ಅದೇನೆಂದರೆ ಅನುಸೂಚಿತ ಜಾತಿಗೆ ಸೇರಿದ ಒಬ್ಬ ಸದಸ್ಯ, ಅನುಸೂಚಿತ ಪಂಗಡಗಳಿಗೆ ಸೇರಿದ ಒಬ್ಬ ಸದಸ್ಯ ಮತ್ತು ಇತರೆ ಹಿಂದುಳಿದ ವರ್ಗಕ್ಕೆ ಸೇರಿದ ಒಬ್ಬ ಸದಸ್ಯ ಇರತಕ್ಕದ್ದು ಎಂದಿದೆ, ಮಹಿಳಾ ಆಯೋಗದಲ್ಲಿರುವವರು ಎಲ್ಲರೂ ಮಹಿಳೆಯರೇ ಆಗಿರುವುದರಿಂದ ಅದನ್ನು 'ಸದಸ್ಯಳು' ಎಂದು ಮಾಡಬೇಕು.

**ಡಾ: ಎ.ಹೆಚ್.ಶಿವಯೋಗಿಸ್ವಾಮಿ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಸಭಾನಾಯಕರ ಹಾಗೂ ಮಾನ್ಯ ಸಚಿವರ ಗಮನಕ್ಕೆ ಒಂದು ವಿಷಯವನ್ನು ತರಬಯಸುತ್ತೇನೆ. ವಿಶೇಷವಾಗಿ ಈ ವಿಧೇಯಕಗಳನ್ನು ಮಾಡಬೇಕಾದರೆ ನಾವು ಮೊದಲು draft ಅನ್ನು ಇಂಗ್ಲೀಷ್‌ನಲ್ಲಿ ಮಾಡುತ್ತಾರೆ, ನಂತರ ಅದನ್ನು ಕನ್ನಡಕ್ಕೆ ಅವರು ತರ್ಜುಮೆ ಮಾಡುತ್ತಾರೆಂದು ನನಗೆ ಅನಿಸುತ್ತದೆ. ಅದಕ್ಕೆ ಕಾರಣವೇನೆಂದರೆ ಇಲ್ಲಿ ಒಂದು ವ್ಯತ್ಯಾಸ ಆಗಿದೆ. ಅದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಬಿಲ್‌ನಲ್ಲಿ 3ನೆಯದು ನೋಡಿ Constitution of Commission ಇದೆ ಅದರಲ್ಲಿನ sub section 'ಸಿ' ಅನ್ನು ನೋಡಿ. ಅಲ್ಲಿ ಕಮೀಷನ್‌ನಲ್ಲಿ ಯಾರು ಯಾರು ಸದಸ್ಯರಿರಬೇಕೆಂದು ಬರೆದಿದ್ದೀರಿ. "The Secretary to Governnment, in charge of Women and Child Development" ಎಂದು ಇದೆ. ಅಂದರೆ ಅವರನ್ನು Ex Officio Member ಎಂದು ಮಾಡಿದ್ದೀರಿ. ಕನ್ನಡದಲ್ಲಿ ಅದರ ಅರ್ಥ ಏನಾಗಿದೆ ಎಂದು ನೋಡಿ. ಕನ್ನಡದಲ್ಲಿ 'ಆಯೋಗದ ರಚನೆ' ಎಂಬ ಶೀರ್ಷಿಕೆಯಲ್ಲಿ ಏನು ಬರೆದಿದೆ ಅಂದರೆ 'ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ' ಎಂದು ಇದೆ. ಅಲ್ಲಿ ಕಾರ್ಯದರ್ಶಿ ಅಷ್ಟೆ. ಪ್ರಭಾರದಲ್ಲಿರುವ ಕಾರ್ಯದರ್ಶಿ ಅಂದರೆ ಬೇರೆ ಅರ್ಥ ಆಗುತ್ತದೆ. ಆದ್ದರಿಂದ ತಾವು ತರ್ಜುಮೆ ಮಾಡಿಸುವಾಗ, ಬಿಲ್ ಅನ್ನು ಸದನಕ್ಕೆ ತರುವಾಗ ತಾವು ನೋಡಿದರೆ ಈ ಸಣ್ಣಪುಟ್ಟ ಅಪಾರ್ಥಗಳು ಬರುವ ಶಬ್ದಗಳು ತಪ್ಪುತ್ತವೆ. ಇಂಗ್ಲೀಷ್‌ನಲ್ಲಿ ಕೂಡ ವ್ಯತ್ಯಾಸವಿದೆ. 'The Secretary to Government, Department of Women and Child Development' ಎಂದಿದ್ದರೆ ಸಾಕಾಗುತ್ತಿತ್ತು. ಇಲ್ಲಿ in charge ಎಂದು ಬರೆದಿರುವುದರಿಂದ ಅದನ್ನು ಪ್ರಭಾರ ಎಂದು ಮಾಡಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೆ, Secretary should be the Ex Officio ಮಖ್ಖಿ ಕಾ ಮಖ್ಖಿ ಅದು ಹೇಗೆ ಇದೆ ಅದನ್ನು ಬರೆದಿದ್ದಾರೆ.

**ಡಾ: ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೆ, 'in charge' ಎಂದು ಬರೆಯುವುದರ ಬದಲು 'department of' ಎಂದು ಬರೆದಿದ್ದರೆ ಸರಿಯಾಗಿ ಆಗುತ್ತಿತ್ತು. ಅದು ಇಲ್ಲಿ ಕೂಡ ಇಲಾಖೆಯ ಕಾರ್ಯದರ್ಶಿ ಎಂದು ಆಗುತ್ತಿತ್ತು. ಇದನ್ನು ಸ್ವಲ್ಪ ಗಮನಿಸಬೇಕು.

**ಪ್ರೊ: ಪಿ.ವಿ.ಕೃಷ್ಣಭಟ್:-** ಮಾನ್ಯ ಸಭಾಪತಿಯವರೆ, ಆಕ್ಟ್‌ನಲ್ಲಿ ಆ ರೀತಿಯೇ ಇದೆ.

**ಡಾ: ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೆ, ಆಕ್ಟ್‌ನಲ್ಲಿ ಆ ರೀತಿ ಇದ್ದರೆ ತಪ್ಪಾಗುತ್ತದೆ. ಪ್ರತಿ ಇಲಾಖೆಯೊಳಗೆ in charge Secretary ಯಾವಾಗ ಇರುತ್ತಾರೆಂದರೆ ನಿಮಗೆ regular Secretary ಇಲ್ಲದಿರುವಾಗ in charge Secretary ಇರುತ್ತಾರೆ.

**ಡಾ: ಹೆಚ್.ಸಿ.ಮಹಾದೇವಪ್ಪ:-** ಮಾನ್ಯ ಸಭಾಪತಿಯವರೆ, ಅವರು ಹೇಳಿದ್ದು ಸರಿ. ಆದರೆ different meaning ಇದ್ದರು Secretary in charge of Women and Child Development ಎಂದು ಅಷ್ಟೆ.

**ಡಾ: ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೆ, ಹಾಗಾದರೆ ಕನ್ನಡದಲ್ಲಿ ಪ್ರಭಾರ ಅಂದರೆ ಬೇರೆ ಆಗುವುದಿಲ್ಲವೇ?

**ಡಾ: ಹೆಚ್.ಸಿ.ಮಹಾದೇವಪ್ಪ:-** ಮಾನ್ಯ ಸಭಾಪತಿಯವರೆ, ಇಂಗ್ಲೀಷ್ ಪದದ ಅರ್ಥ ಯಾವ ಯಾವ ಸಂದರ್ಭದಲ್ಲಿ ಯಾವ ಯಾವ ರೀತಿ ಬೇಕಾದರು ವ್ಯಾಖ್ಯಾನ ಮಾಡಿಕೊಳ್ಳಬಹುದು. Secretary in charge ಅಂದರೆ Departmental Secretary ಎಂದೇ ಅರ್ಥ.

**ಡಾ: ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೆ, ಸಚಿವರು defend ಮಾಡಿಕೊಂಡರೆ ನನ್ನ ಅಭ್ಯಂತರವೇನೂ ಇಲ್ಲ. ನಾನು correction ದೃಷ್ಟಿಯಿಂದ ಹೇಳುತ್ತಿದ್ದೇನೆ.

**ಡಾ: ಹೆಚ್.ಸಿ.ಮಹಾದೇವಪ್ಪ:-** ಮಾನ್ಯ ಸಭಾಪತಿಯವರೆ, ನಾನು defend ಮಾಡಿಕೊಳ್ಳುತ್ತಿಲ್ಲ.

**ಡಾ: ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೆ, ನಾನು correction ದೃಷ್ಟಿಯಿಂದ ಹೇಳುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, subject to correction.

**ಡಾ: ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೆ, ಸದಸ್ಯನಿರತತಕ್ಕದ್ದು. ಸದಸ್ಯರಿಳತಕ್ಕದ್ದು ಎನ್ನುವುದಕ್ಕೆ ವ್ಯತ್ಯಾಸ ಬರುತ್ತದೆ. ಆದ್ದರಿಂದ ಸದಸ್ಯನು, ಸದಸ್ಯಳು ಎನ್ನುವ ಬದಲು ಸದಸ್ಯರಿರತಕ್ಕದ್ದು ಎಂದು ಮಾಡಿದರೆ ಒಳ್ಳೆಯದು.

**ಶ್ರೀ ಕೆ.ಮೋನಪ್ಪ ಭಂಡಾರಿ:-** ಮಾನ್ಯ ಸಭಾಪತಿಯವರೆ, ಇದರಲ್ಲಿ ಇಂಗ್ಲೀಷ್ ಮತ್ತು ಕನ್ನಡಕ್ಕೆ ಇನ್ನೊಂದು ಕಡೆ ವ್ಯತ್ಯಾಸವಿದೆ. ಮೂರನೇ ಪ್ರಕರಣ ತಿದ್ದುಪಡಿಯನ್ನು ನೋಡಿ. ಕರ್ನಾಟಕ ರಾಜ್ಯ ಮಹಿಳಾ ಆಯೋಗ ಅಧಿನಿಯಮ 55ರ ಅಧಿನಿಯಮ 17ರ ಎರಡನೇ ಪ್ರಕರಣದ 2ನೇ ಉಪಖಂಡದ 'ಬಿ' ಖಂಡದ ಮೊದಲನೇ ಪರಾಂತಕದಲ್ಲಿ ಅನುಸೂಚಿತ ಜಾತಿಗೆ ಸೇರಿದ ಒಬ್ಬ ಸದಸ್ಯನಿರತಕ್ಕದ್ದು. ಅನುಸೂಚಿತ ಪಂಗಡಕ್ಕೆ ಸೇರಿದ ಒಬ್ಬ ಸದಸ್ಯ ಹಾಗೂ ಇತರ ಹಿಂದುಳಿದ ವರ್ಗಕ್ಕೆ ಸೇರಿದ ಒಬ್ಬ ಸದಸ್ಯನಿರತಕ್ಕದ್ದು ಎಂಬ ಪದಗಳನ್ನು ಮತ್ತು ಅಲ್ಪವಿರಾಮ ಚಿಹ್ನೆಯನ್ನು ಪರಿಗಣಿಸತಕ್ಕದ್ದು ಎಂದು ಇದೆ. ಆದರೆ ಇಂಗ್ಲೀಷ್‌ನಲ್ಲಿ ಅದು ಇಲ್ಲ. ಪೂರ್ತಿ ಬಿಟ್ಟು ಹೋಗಿದೆ Scheduled Castes, Scheduled Tribes and Other Backward Classes ಎಂದು ಬರೆದಿದೆ. ಇಂಗ್ಲೀಷ್‌ನಲ್ಲಿ ಎಷ್ಟು ಸದಸ್ಯರಿರಬೇಕೆಂಬ ಬಗ್ಗೆ ಸೇರಿಸಿಕೊಂಡಿಲ್ಲ.

**ಶ್ರೀಮತಿ ಉಮಾಶ್ರೀ:-** ಮಾನ್ಯ ಸಭಾಪತಿಯವರೆ, six men's to be nominated ಎಂದು ಇದೆ.

**ಶ್ರೀ ಕೆ.ಮೋನಪ್ಪ ಭಂಡಾರಿ:-** ಮಾನ್ಯ ಸಭಾಪತಿಯವರೆ, six members ಇದೆ. But, how many members you are going to insert in

each cast and each tribes ಎಂದು ಬರೆದಿಲ್ಲ. ಇಂಗ್ಲೀಷ್‌ನಲ್ಲಿ one member shall be ಎಂದು ಬೇಕು.

**ಡಾ: ಎ.ಹೆಚ್.ಶಿವಯೋಗಿಸ್ವಾಮಿ:–** ಮಾನ್ಯ ಸಭಾಪತಿಯವರೆ, ಅವಸರದಲ್ಲಿ ಬಿಲ್ ಅನ್ನು ತಂದಿದ್ದಾರೆ ಅದಕ್ಕಾಗಿ ಹೀಗೆ ಆಗಿದೆ.

**ಶ್ರೀ ಕೆ.ಮೋನಪ್ಪ ಭಂಡಾರಿ:–** ಮಾನ್ಯ ಸಭಾಪತಿಯವರೆ, ಇದರಲ್ಲಿ one member has to be inserted. ಇದರಲ್ಲಿ ಬರಿ Scheduled Castes and Scheduled Tribes ಎಂದು ಮಾತ್ರ ಇದೆ. So, what is the number you are going to include ಎಂಬ ಬಗ್ಗೆ ಇಲ್ಲ.

**ಶ್ರೀಮತಿ ಉಮಾಶ್ರೀ:–** ಮಾನ್ಯ ಸಭಾಪತಿಯವರೆ, ಅವರ ಸಲಹೆಗಳನ್ನು ನಾವು ತಿದ್ದುಪಡಿಯ ಸಂದರ್ಭದಲ್ಲಿ ಬಳಸುತ್ತೇವೆ.

**ಪ್ರೊ. ಪಿ.ವಿ.ಕೃಷ್ಣಭಟ್:–** ಮಾನ್ಯ ಸಭಾಪತಿಯವರೆ, ಇದರಲ್ಲಿ ಆಕ್ಟ್‌ನಲ್ಲಿರುವ ಪ್ರಕಾರ ಪರಂತು ಈ ಖಂಡದಡಿ ನಾಮ ನಿರ್ದೇಶಿತರಾಗಿರತಕ್ಕಂಥ ಬಹುತೇಕ ಸದಸ್ಯರು ಮಹಿಳೆಯರಾಗಿರತಕ್ಕದ್ದು ಎಂದು ಇದೆ. ಬಹುತೇಕ ಅಂದರೆ ಎಷ್ಟು ಜನ ಎಂದು ಇದರಲ್ಲಿ specific ಆಗಿ mention ಮಾಡಿಲ್ಲ. ಬಹುತೇಕ ಅಂದರೆ ಎಲ್ಲರು ಎಂದು ಆಗುವುದಿಲ್ಲ. ಬಹುತೇಕ ಅಂದರೆ majority ಅಥವಾ ಹೆಚ್ಚಿನವರು ಎಂದು ಆಗುತ್ತದೆ. ಆದ್ದರಿಂದ ಅದರಲ್ಲಿ ಎಷ್ಟು ಜನ ಮಹಿಳೆಯರಿರಬೇಕು, ಎಷ್ಟು ಜನ ಪುರುಷರಿರಬೇಕೆಂದು ಸ್ಪಷ್ಟತೆ ಇಲ್ಲ. ಇನ್ನೊಂದು ಸದಸ್ಯ ಎಂದು ಇದೆ, ಅದು ಇದ್ದರೆ ಪುರುಷ ಸದಸ್ಯರಾಗುತ್ತದೆ. ಸದಸ್ಯನು, ಸದಸ್ಯಳು ಎನ್ನುವ ಬದಲು ಸದಸ್ಯರಿರತಕ್ಕದ್ದು ಎಂದು ಮಾಡಿದರೆ ಒಳ್ಳೆಯದು ಎಂದು ಡಾ: ಎ.ಹೆಚ್.ಶಿವಯೋಗಿಸ್ವಾಮಿಯವರು ಹೇಳಿದ್ದಾರೆ. ನಾನು ಒಂದು ಸಂಗತಿಯನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಕಳೆದ ಸುಮಾರು ಎಂಟು ತಿಂಗಳಿಂದ ಆಯೋಗದ ಅಧ್ಯಕ್ಷರನ್ನು ನೇಮಕ ಮಾಡಿಲ್ಲ. ಹಿಂದೆ ಅಧ್ಯಕ್ಷರಾಗಿರತಕ್ಕಂಥ ಶ್ರೀಮತಿ ಮಂಜುಳಾರವರು ಅವರು ರಾಜಿನಾಮೆಯನ್ನು ಕೊಟ್ಟಿದ್ದಾರೆ. ಆ ನಂತರ ಆ ಹುದ್ದೆಯು ಇಲ್ಲಿಯವರೆಗೂ

ಖಾಲಿ ಇದೆ. ಇತ್ತೀಚೆಗೆ ಮಹಿಳೆಯರಿಗೆ ಸಂಬಂಧಪಟ್ಟಿರತಕ್ಕಂಥ ಸಮಸ್ಯೆಗಳು ದಿನ ನಿತ್ಯ ರಾಶಿ ರಾಶಿಯಾಗಿ ಹೊರಗಡೆ ಬರುತ್ತಿವೆ. ಆಗ ಮಂಜುಳಾರವರು ಅಧ್ಯಕ್ಷರಾಗಿದ್ದಾಗ ನಾನು ಕೆಲವು ಬಾರಿ ಅಲ್ಲಿಗೆ ಹೋಗಿದ್ದೆ. ಬಹಳಷ್ಟು ಜನ ತಮ್ಮ ದೂರುಗಳನ್ನು, ದುಮ್ಮಾನಗಳನ್ನು ಹೊತ್ತುಕೊಂಡು ಅಲ್ಲಿ ಬರುತ್ತಿರುವವರಿದ್ದರು. ವಿಶೇಷವಾಗಿ ಮೈಸೂರು ಜಿಲ್ಲೆಯಲ್ಲಿ ಅಲ್ಲಿಂದ ಈ ಹೆಣ್ಣುಮಕ್ಕಳು ಕಾಣೆಯಾಗಿರುವಂಥದ್ದು ಮತ್ತು ಅವರನ್ನು ಅಪಹರಿಸುವಂಥದ್ದು ಮತ್ತೊಂದು ಪ್ರಸಂಗಗಳು ಸಾಕಷ್ಟು ಆಗಿದ್ದವು. ಅದರ ವಿಷಯವಾಗಿ ಮಂಜುಳಾರವರು ಒಂದು ಮಹಿಳಾ ಸಮಿತಿಯನ್ನು ಮಾಡಿದ್ದರು. ಅದರ ವರದಿ ಕೂಡ ಇವೊತ್ತು ಮಹಿಳಾ ಆಯೋಗದಲ್ಲಿದೆ. ಆದರೆ ಸುಮಾರು ಎಂಟು ತಿಂಗಳಿಂದ ಇದಕ್ಕೆ ಅಧ್ಯಕ್ಷರು ಇಲ್ಲವೇ ಇಲ್ಲ. ಈ ಎಲ್ಲಾ ಸಮಸ್ಯೆಗಳ ಬಗ್ಗೆ ಗಮನಹರಿಸತಕ್ಕಂಥ ಯಾವುದೇ ವ್ಯವಸ್ಥೆ ಇಲ್ಲದೆ ಇರುವಂಥದ್ದು ಬಹಳ ಒಳ್ಳೆಯ ಸಂಗತಿ ಅಲ್ಲ. ಸಾಧ್ಯವಾದಷ್ಟು ಬೇಗನೆ ಮಹಿಳಾ ಆಯೋಗದ ಅಧ್ಯಕ್ಷರನ್ನು ತಾವು ನೇಮಕ ಮಾಡಬೇಕು. ಮತ್ತು ಈ ರೀತಿಯ ಮಹಿಳೆಯರಿಗೆ ಸಂಬಂಧಪಟ್ಟಂಥ ಅನೇಕ ಗಂಭೀರವಾದ ಏನು ಸಮಸ್ಯೆಗಳು ಇವೊತ್ತು ಬರುತ್ತಿವೆ ಅದಕ್ಕೆ ಮಹಿಳಾ ಆಯೋಗ ತತ್‌ಕ್ಷಣದಲ್ಲಿ ಸ್ಪಂದಿಸುವ ರೀತಿಯಲ್ಲಿ ತಾವು ಕ್ರಮ ಕೈಗೊಳ್ಳುತ್ತೀರಿ ಎಂದು ಅಪೇಕ್ಷೆಯನ್ನು ವ್ಯಕ್ತಪಡಿಸುತ್ತೇನೆ. ಇದು ಒಂದೇ ತಿದ್ದುಪಡಿ ಇರುವುದರಿಂದ ಇದರ ಬಗ್ಗೆ ಹೆಚ್ಚು ಮಾತನಾಡುವ ಅವಶ್ಯಕತೆ ಇಲ್ಲವೆಂದು ನಾನು ಭಾವಿಸುತ್ತೇನೆ. ಈ ಎರಡು ಸಂಗತಿಗಳಿಗೆ ತಾವು ಸ್ಪಷ್ಟೀಕರಣ ಕೊಟ್ಟರೆ ಒಳ್ಳೆಯದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, provided that at least one member each shall be from the Scheduled Castes and Scheduled Tribes. Respectively one member from the Backward Community is to be added as a member. That is to be inserted in the English version. ಆಗ ಅದು ಸರಿಯಾಗುತ್ತದೆ. ಒಟ್ಟು ಆರು ಜನ ಇರುತ್ತಾರೆ. ಒಬ್ಬರು ಪರಿಶಿಷ್ಟ ಜಾತಿಯವರು, ಒಬ್ಬರು ಪರಿಶಿಷ್ಟ ಪಂಗಡದವರು, ಉಳಿದವರು ಯಾವ ಕಮ್ಯುನಿಟಿಯವರು ಎಂದು ಇಲ್ಲ.

ಅದು ಹಾಗೆಯೇ open ಇತ್ತು. ಅದರಲ್ಲಿ ಒಬ್ಬರು other Backward ನವರನ್ನು ಸೇರಿಸಿಕೊಳ್ಳಬೇಕು. ಆ ತಿದ್ದುಪಡಿಯೊಂದಿಗೆ ಇದನ್ನು ಒಪ್ಪಬಹುದು.

**ಪ್ರೊ. ಪಿ.ವಿ.ಕೃಷ್ಣಭಟ್:–** ಮಾನ್ಯ ಸಭಾಪತಿಯವರೆ, ನಾಮ ನಿರ್ದೇಶಿತರಾಗಿರತಕ್ಕಂಥ ಬಹುತೇಕ ಸದಸ್ಯರು ಮಹಿಳೆಯರಾಗಿರತಕ್ಕದ್ದು ಎಂದು ಇದೆ. ಅದನ್ನು ಸ್ಪಷ್ಟಪಡಿಸಿದರೆ ಸಾಕು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೆ, ಪ್ರೊಫೆಸರ್‌ರವರು ಏನು ಹೇಳಿದ್ದಾರೆ ಅದರ ಪ್ರಕಾರ.

**ಉಪಸಭಾಪತಿಯವರು:–** ಅದನ್ನು ಸಚಿವರು ಉತ್ತರದಲ್ಲಿ ಹೇಳುತ್ತಾರೆ, ಎಲ್ಲರು ಕುಳಿತುಕೊಳ್ಳಿ.

**ಶ್ರೀ ಡಿ.ವಿ.ಸದಾನಂದಗೌಡ:–** ಮಾನ್ಯ ಸಭಾಪತಿಯವರೆ, ಸಮಾಜದಲ್ಲಿ ಮಹಿಳೆಯರ ಬಗ್ಗೆ ಭಾರೀ ಕಾಳಜಿ ಇರುವಂಥ, ಮಹಿಳೆಯರಿಗಿಂತ ಹೆಚ್ಚು ಕಾಳಜಿ ಇರುವಂಥ ಗಂಡಸರು ಇರುತ್ತಾರೆ, ಅದಕ್ಕೆ ಬೇಕಾಗಿ ಅಂತಹವರನ್ನೇನಾದರು ಹೆಕ್ಕಿ ಹಾಕುತ್ತಾರೋ ಗೊತ್ತಿಲ್ಲ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಮಹಿಳೆಯರ ಬಗ್ಗೆ ಕಾಳಜಿ ಇರುವವರು ಗಂಡಸರೆ, ಶೋಷಣೆ ಮಾಡುವವರು ಕೂಡ ಗಂಡಸರೆ.

**ಶ್ರೀ ಡಿ.ಎಸ್.ವೀರಯ್ಯ:–** ಮಾನ್ಯ ಸಭಾಪತಿಯವರೆ, ಇಲ್ಲಿ ಕಡೇ ಪಕ್ಷ ಎನ್ನುವ ಪದ ಬಳಕೆ ಆಗಿದೆ. ಅಂದರೆ at least ಎಂದು ಇದ್ದರು ಇರಬಹುದು ಎಂದು ಆಗುತ್ತದೆ. ಆದ್ದರಿಂದ ಅಲ್ಲಿ ಕಡ್ಡಾಯವಾಗಿ ಎಂದು ಹಾಕಿ ಅಥವಾ ಕನಿಷ್ಠ ಎಂದು ಹಾಕಿ ಯಾವಾಗಲೂ mandatory words ಇರಬೇಕು. Recommendatory words ಇರಬಾರದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ನಾನು ಈಗಾಗಲೇ ಹೇಳಿದ್ದೇನೆ. ಆರು ಜನ ಸದಸ್ಯರು ಅದರಲ್ಲಿ ಒಬ್ಬರು ಪರಿಶಿಷ್ಠ ಜಾತಿ, ಒಬ್ಬರು ಪರಿಶಿಷ್ಠ ಪಂಗಡದವರು ಇನ್ನು ನಾಲ್ಕು ಏನು open ಇತ್ತು...

**ಶ್ರೀ ಎಸ್.ಆರ್.ಪಾಟೀಲ್:-** 6 ಜನ ಸದಸ್ಯರಲ್ಲಿ ಒಬ್ಬರು ಪರಿಶಿಷ್ಟ ಜಾತಿ ಮತ್ತು ಒಬ್ಬರು ಪರಿಶಿಷ್ಟ ಪಂಗಡದವರಿದ್ದು, ಇನ್ನುಳಿದ 4 ಸದಸ್ಯರಲ್ಲಿ Backward Community ಯವರು ಒಬ್ಬರು ಇರಬೇಕೆಂದು ಮಾಡಿರುವುದು. ಈಗ ಪರಿಶಿಷ್ಟ ಜಾತಿ ಮತ್ತು ಒಬ್ಬರು ಪರಿಶಿಷ್ಟ ಪಂಗಡದವರೊಬ್ಬರು ಕಡ್ಡಾಯವಾಗಿ ಇರಬೇಕೆಂದು ಮಾಡಿರುವಂತೆ Backward Community ನವರು ಒಬ್ಬರು ಕಡ್ಡಾಯವಾಗಿ ಇರಬೇಕೆಂದು ತಿದ್ದುಪಡಿ ಮಾಡಲಾಗಿದೆ. Let's not go in between the line.

**ಶ್ರೀ ಡಿ.ಎಸ್.ವೀರಯ್ಯ:-** ಯಾವುದೇ ಕಾನೂನನ್ನು ನೋಡಿದಾಗ 'shall' ಎಂದು ಇರುವುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ **'ಕಡೆಯ ಪಕ್ಷ'** ಎನ್ನುವಂತಹದ್ದು....

**Sri S.R.PATIL:-** It is applicable even to a Backward Community Member, "Shall' is a must.

**ಶ್ರೀ ಡಿ.ಎಸ್.ವೀರಯ್ಯ:-** ಇದು ambiguity ಆಗುತ್ತದೆ. ನಂತರ ಯಾವರೀತಿ ಬೇಕೋ ಆ ರೀತಿ interpretation ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡುತ್ತದೆ. ಆದ್ದರಿಂದ ಕಡ್ಡಾಯವಾಗಿ ಎಂದು ಹಾಕಬೇಕು. ಅದು mandatory ಮತ್ತು ಸಂವಿಧಾನಬದ್ಧವಾಗಿ ಇರಬೇಕು. ಕಡೆ ಪಕ್ಷ ಎಂದು ಹೇಳಿದರೂ at least ಎಂದಾಗುತ್ತದೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, at least ಎಂದರೆ shall ಎಂದಾಗುವುದಿಲ್ಲವೇ?

**ಶ್ರೀ ಡಿ.ಎಸ್.ವೀರಯ್ಯ:-** ಇಲ್ಲ, shall ಎಂದಾಗುವುದಿಲ್ಲ. At least ಗೂ shall ಗೂ ಬಹಳ ವ್ಯತ್ಯಾಸ ಇದೆ. ಆ ರೀತಿ ಪದ ಬಳಕೆ ಸರಿಯಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಆಯಿತು, ನಾವು ಒಪ್ಪಿಕೊಂಡಿದ್ದೇವೆ.

**ಶ್ರೀಮತಿ ಉಮಾಶ್ರೀ:–** ಇದನ್ನು ಸದುದ್ದೇಶ ಮತ್ತು ಸಾಮಾಜಿಕ ನ್ಯಾಯದ ತಳಹದಿಯಲ್ಲಿ ಅವಕಾಶಗಳನ್ನು ಕಲ್ಪಿಸಿಕೊಡಲು ತಂದಿರುವ ತಿದ್ದುಪಡಿಯಾಗಿದೆ. ಇದರಲ್ಲಿ ಮಾನ್ಯ ಸದಸ್ಯರು ಕೊಟ್ಟಿರುವ ಎಲ್ಲಾ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ತಿದ್ದುಪಡಿಗೆ ಮುಂದಾಗುತ್ತೇವೆ. ಆದ್ದರಿಂದ ವಿಧೇಯಕಕ್ಕೆ ಅನುಮತಿ ಕೊಡಬೇಕೆಂದು ಕೋರುತ್ತೇನೆ.

**ಉಪ ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2013ರ ಕರ್ನಾಟಕ ರಾಜ್ಯ ಮಹಿಳಾ ಆಯೋಗ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು

**ಖಂಡ 2**

**ಉಪ ಸಭಾಪತಿಯವರು:–** "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

(ಖಂಡ 2ನ್ನು ವಿಧೆಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಉಪ ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕ ಭಾಗವಾಗಿರುತ್ತದೆ.)

**ಪ್ರಸ್ತಾವದ ಅಂಗೀಕಾರ**

**ಶ್ರೀಮತಿ ಉಮಾಶ್ರೀ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲ ಚೇತನ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2013ರ ಕರ್ನಾಟಕ ರಾಜ್ಯ ಮಹಿಳಾ ಆಯೋಗ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಉಪ ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2013ರ ಕರ್ನಾಟಕ ರಾಜ್ಯ ಮಹಿಳಾ ಆಯೋಗ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಉಪ ಸಭಾಪತಿಯವರು:–** ಈಗ ವಸತಿ ಸಚಿವರ ವಿಧೇಯಕವನ್ನು ತೆಗೆದುಕೊಳ್ಳೋಣ.

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೇ, ದಯವಿಟ್ಟು ಹೆದರಿಕೊಳ್ಳಬೇಕಾದ ಅವಶ್ಯಕತೆ ಇಲ್ಲ. ಈಗ 7 ಗಂಟೆ ಆಗಿದೆ, ಬೆಳಿಗ್ಗೆ 11 ಗಂಟೆಗೆ ಸೇರಿದ್ದೇವೆ. ಇನ್ನು ಎಷ್ಟು ಸಮಯ?

**ಶ್ರೀ ಎಸ್.ಆರ್.ಪಾಟೀಲ್:–** ಎಲ್ಲವನ್ನು ಅಂಗೀಕಾರ ಕೊಡುವುದಾದರೆ 10 ನಿಮಿಷಗಳಲ್ಲಿ ಮುಗಿಸೋಣ.

**(ಆ) ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) (ತಿದ್ದುಪಡಿ) ವಿಧೇಯಕ, 2013**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು) (ವಸತಿ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2013ರ ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದರಲ್ಲಿ ದೊಡ್ಡ ತಿದ್ದುಪಡಿ ಏನೂ ಇಲ್ಲ, ಕೊಳಚೆ ನಿರ್ಮೂಲನಾ ಮಂಡಳಿಯ ನಾಮಾವಳಿಯನ್ನು 'ಕೊಳಚೆ ಪ್ರದೇಶ ಅಭಿವೃದ್ಧಿ ಮಂಡಳಿ' ಎಂದು ಬದಲಾಯಿಸುವ ಸಲುವಾಗಿ ಈ ವಿಧೇಯಕವನ್ನು ತಂದಿದ್ದೇವೆ. ಏಕೆಂದರೆ, ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯ ನಾಮಾವಳಿಯು ಕೊಳಚೆ ಪ್ರದೇಶವನ್ನು ನಾಶಪಡಿಸುವುದು ಅಥವಾ ನಿರ್ನಾಮ ಮಾಡುವ ಅರ್ಥ ಬರುತ್ತದೆ ಎನ್ನುವ ಭಾವನೆಯಿಂದ. ಇದು ಕೊಳಚೆ ಪ್ರದೇಶಗಳ ನಿವಾಸಿಗಳಿಗೆ ಮೂಲ ಸೌಕರ್ಯವನ್ನು ಒದಗಿಸುವುದು, ಕೊಳಚೆ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳುವುದು, ಮೂಲ ಸೌಕರ್ಯಗಳನ್ನು ಒದಗಿಸುವುದರ ಮೂಲಕ ಕೊಳಚೆ ಪ್ರದೇಶಗಳ ನಿವಾಸಿಗಳ ಜೀವನ ಮಟ್ಟ ಸುಧಾರಣೆ ಮಾಡುವ ಉದ್ದೇಶದಿಂದ ಈ ಮಂಡಳಿಯು ಸ್ಥಾಪನೆಯಾಗಿದೆ. ಇಲ್ಲಿ ಕರ್ನಾಟಕ ಕೊಳಚೆ ಪ್ರದೇಶಗಳನ್ನು ಒಮ್ಮೆ ನಾಶಪಡಿಸುವುದು ಅಥವಾ ನಿರ್ನಾಮ ಮಾಡುವ ಭಾವನೆ ಬರುತ್ತದೆ. ಆ ದೃಷ್ಟಿಯಿಂದ ಇದು ಕೊಳಚೆ ಪ್ರದೇಶಗಳನ್ನು ನಾಶಪಡಿಸುವುದು ಅಥವಾ ನಿರ್ನಾಮ ಮಾಡುವುದು ಅಲ್ಲ, ಕೊಳಚೆ ಪ್ರದೇಶಗಳ ಸರ್ವತೋಮುಖ ಅಭಿವೃದ್ಧಿ ಕಡೆಗೆ ಕ್ರಮ ಕೈಗೊಳ್ಳುವುದಾಗಿದೆ. ಆ ದೃಷ್ಟಿಯಿಂದ ಕೊಳಚೆ ನಿರ್ಮೂಲನಾ ಮಂಡಳಿಯ ನಾಮಾವಳಿಯನ್ನು ಕೊಳಚೆ ಪ್ರದೇಶ ಅಭಿವೃದ್ಧಿ ಮಂಡಳಿ ಎಂದು ತಿದ್ದುಪಡಿ ಮಾಡುವುದಾಗಿದೆ. ಇದಿಷ್ಟು ಮಾತ್ರ ಆಗಿದೆ. It is very simple.

**ಶ್ರೀ ಬಿ.ಜೆ.ಪುಟ್ಟಸ್ವಾಮಿ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಕೇವಲ ಎರಡು ನಿಮಿಷ ಮಾತನಾಡುವುದಿದ್ದು,

ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನ ಬಡವರಲ್ಲಿ ಅತ್ಯಂತ ಬಡವರಾಗಿದ್ದು, ಅಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಹಾಗೂ ಅತ್ಯಂತ ಹಿಂದುಳಿದ ವರ್ಗದ ಜನರು ವಾಸಿಸುತ್ತಾರೆ. ಇವತ್ತು ಕೇಂದ್ರ ಸರ್ಕಾರದಿಂದ ಬೇಕಾದಷ್ಟು grant ಬಂದು, ಅದರಿಂದ ಮನೆಗಳನ್ನು ಕಟ್ಟುತ್ತಿದ್ದಾರೆ. ಮನೆಗಳನ್ನು ಕಟ್ಟುವವರೆಗೂ ಸುಮ್ಮನಿದ್ದು, ಕಟ್ಟಿದ ನಂತರ ಕೊಳಚೆ ನಿವಾಸಿಗಳು ಮೊದಲಿದ್ದ ಶೆಡ್‌ನಲ್ಲಿಯೇ ಇರುತ್ತಾರೆ, ಕಟ್ಟಿದ ಮನೆಗಳನ್ನು ಗಟ್ಟಿಯಾದ ಜನ ಅಥವಾ ರಾಜಕಾರಣಿಗಳು occupy ಮಾಡುತ್ತಿದ್ದಾರೆ. ಈ ರೀತಿ ಎಲ್ಲಾ ಕಡೆ ಆಗಿದ್ದು, ಇದಕ್ಕೆ ಅಡೆತಡೆ ಇಲ್ಲ. ಇವತ್ತು ಅನೇಕ ಮನೆಗಳನ್ನು Slum Clearance Board ನಿಂದ ಕಟ್ಟಿದ ನಂತರ ಆ ಮನೆಗಳಿಗೆ ಹೋಗಬೇಕಾದ eligibility ಇರುವವರು ಹೋಗುತ್ತಿಲ್ಲ. ಇದಕ್ಕೆ ಈಗ ಸರ್ಕಾರ ಅಭಿವೃದ್ಧಿ ಮಂಡಳಿ ಎಂದು ತಂದಿದ್ದು, ಅಭಿವೃದ್ಧಿ ಮಾಡಬೇಕೆಂದರೆ ಮೊದಲು ಕೊಳಚೆ ಪ್ರದೇಶದ ಶೆಡ್‌ಗಳಲ್ಲಿರುವವರೆಲ್ಲರಿಗೂ 1994ರಲ್ಲಿ Identification Card ಕೊಟ್ಟಿದ್ದು, ಈ Identification Card ಇರುವವರಿಗೆ ಮಾತ್ರ ಮನೆಗಳನ್ನು ಕೊಡಬೇಕೆ ಹೊರತು ಹೊಸಬರಿಗೆ ಮನೆಗಳನ್ನು ಕೊಡಬಾರದು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ಲಗ್ಗೆರೆ ಪ್ರದೇಶದಲ್ಲಿ 150 ಎಕರೆ ಜಮೀನನ್ನು ನೀಡಿದ್ದು, ಇವತ್ತು ಅದನ್ನು ಸರ್ವೆ ಮಾಡಿಸಿ, ಬೌಂಡರಿ ಫಿಕ್ಸ್ ಮಾಡಿ, fencing ಹಾಕಿದ್ದು, ಎಲ್ಲರೂ ಕೊಳಚೆ ಪ್ರದೇಶಕ್ಕೆ ಮೀಸಲಿಟ್ಟ ಜಾಗವನ್ನು ರಾಜಕಾರಣಿಗಳು, ತೋಳ್ಬಲ ಇರುವವರೆಲ್ಲರೂ occupy ಮಾಡಿಕೊಂಡಿದ್ದಾರೆ. ಇದನ್ನು ತೆರವುಗೊಳಿಸುವ ಬಗ್ಗೆ ನಾನು ಕಳೆದ ಅಧಿವೇಶನದಲ್ಲಿ ಪ್ರಶ್ನೆಯನ್ನು ಕೇಳಿದ್ದೆನು. ಅದನ್ನು ತೆರವುಗೊಳಿಸಿ ಕೊಳಚೆ ನಿವಾಸಿಗಳಿಗೆ ಒಳ್ಳೆಯ ಮನೆಗಳನ್ನು ಕಟ್ಟಿಕೊಡಬೇಕೆಂದು ಹೇಳಿದ್ದರೂ, ಇವತ್ತಿನವರೆಗೂ ಸರ್ಕಾರದಿಂದ ಪ್ರಶ್ನೆಗೆ ಉತ್ತರ ಬಂದಿಲ್ಲ ಮತ್ತು ಕ್ರಮವನ್ನು ತೆಗೆದುಕೊಂಡಿಲ್ಲ. ಇನ್ನು ಮುಂದಾದರೂ ಲಗ್ಗೆರೆಯಲ್ಲಿ unauthorized ಆಗಿ occupy ಮಾಡಿಕೊಂಡಿರುವವರನ್ನು ತೆರವುಗೊಳಿಸಬೇಕೆಂದು ಕೇಳಿಕೊಂಡು, ಕೊಳಚೆ

ಪ್ರದೇಶ ಉದ್ಧಾರವಾಗಬೇಕಾದರೆ ಈ ಸಲಹೆಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕೆಂದು ವಿನಂತಿಸುತ್ತೇನೆ.

**ಶ್ರೀ ಅಶ್ವಥನಾರಾಯಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕೊಳಚೆ ಅಭಿವೃದ್ಧಿ ಮಂಡಳಿ ಮತ್ತು ಕೊಳಚೆ ನಿರ್ಮೂಲನಾ ಮಂಡಳಿಗೆ ಇಂಗ್ಲೀಷ್‌ನಲ್ಲಿ Karnataka Slum Clearance Board ಎಂದು ಇದೆ. ಕನ್ನಡದಲ್ಲಿ ನಿರ್ಮೂಲನಾ ಎಂಬುದನ್ನು ಅಭಿವೃದ್ಧಿ ಎಂದು ಬದಲಾವಣೆ ಮಾಡಿ ತಂದಿದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಗುಲ್ಬರ್ಗ ಅಭಿವೃದ್ಧಿ ಪ್ರಾಧಿಕಾರ ಎಂದು ಇವೆ. ಆದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೂ, ಕೊಳಚೆ ನಿರ್ಮೂಲನಾ ಅಭಿವೃದ್ಧಿ ಪ್ರಾಧಿಕಾರಕ್ಕೂ ಎಷ್ಟು ವ್ಯತ್ಯಾಸ ಬರಬಹುದೆಂದು ಯೋಚನೆ ಮಾಡಬೇಕು. ಕನ್ನಡ–ಇಂಗ್ಲೀಷ್‌ನಲ್ಲಿ ಪದಗಳಿಗೆ ಸಾಕಷ್ಟು ವ್ಯತ್ಯಾಸ ಬರುತ್ತದೆ. ಇದರ ಬಗ್ಗೆ ಯಾರು ಸಲಹೆ ಕೊಟ್ಟರೋ ನನಗಂತೂ ಅರ್ಥವಾಗುತ್ತಿಲ್ಲ. ಕೊಳಚೆ ಪ್ರದೇಶದಲ್ಲಿ ವಾಸ ಮಾಡುವ ಕೆಟ್ಟ ಪರಿಸ್ಥಿತಿಯನ್ನು ನಿರ್ಮೂಲನೆ ಮಾಡಿ ಅಭಿವೃದ್ಧಿ ತರಬೇಕು. ಆದರೆ ನಿರ್ಮೂಲನಾ ಪದವನ್ನೇ ಬಳಸದೇ ಕೊಳಚೆ ಅಭಿವೃದ್ಧಿ ಎಂದರೆ ಏನರ್ಥ? ಇದನ್ನು ಯಾವ ಸಾಹಿತಿ ಬರೆದುಕೊಟ್ಟರೋ ಗೊತ್ತಿಲ್ಲ. ನನಗೆ ಇದನ್ನು ಯಾರು ಪ್ರಸ್ತಾವನೆ ಮಾಡಿದ್ದಾರೆ ಹಾಗೂ ಕಳುಹಿಸಿಕೊಟ್ಟಿದ್ದಾರೆ ಎಂದು ಗೊತ್ತಿದೆ. ಈ ವಿಧೇಯಕವನ್ನು ತೆಗೆದುಕೊಂಡು ಬರಲಿ, ಆದರೆ ಅವರನ್ನು ಅಭಿವೃದ್ಧಿ ಮಾಡುವ ದೃಷ್ಟಿಯಲ್ಲಿ ಮಾಡಲಿ. ಸನ್ಮಾನ್ಯ ಸಭಾಪತಿಯವರೇ, Mysore Urban Development Authority ಮತ್ತು Bangalore Development Authority ಎಂದು ಏನಿದೆ ಇದರಲ್ಲಿ "Development" ಎನ್ನುವುದಕ್ಕೆ ಮತ್ತು ಅಲ್ಲಿಗೆ ಯಾವ ಪದವನ್ನು ಸೇರಿಸುತ್ತಾರೆ ಎನ್ನುವುದನ್ನು ಅವರು ತಿಳಿಸಬೇಕು.

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಅಲ್ಲಿಗೆ ಏನು ಸೇರಿಸಬೇಕು ಎನ್ನುವುದನ್ನು ಅವರೇ ಹೇಳಲಿ.

**ಶ್ರೀ ಅಶ್ವತ್ ನಾರಾಯಣ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪ್ರತಾಪಚಂದ್ರ ಶೆಟ್ಟರು ಏನೇನೋ ಹೇಳುವುದಕ್ಕೆ ಹೋಗಬಾರದು. ನನಗೂ ಕನ್ನಡದ ಬಗ್ಗೆ ಸ್ವಲ್ಪ ವಿಚಾರಗಳು ಗೊತ್ತಿವೆ. ಯಾರೋ ಈ ಬದಲಾವಣೆಯನ್ನು ಬರೆದುಕೊಟ್ಟರು ಎಂದು ಅದನ್ನೇ ಜಾರಿಗೆ ತರುವುದು ಸೂಕ್ತವಲ್ಲ. ಯಾವ ಪತ್ರಿಕೆಯಲ್ಲಿ ಈ ವಿಚಾರ ಪ್ರಕಟವಾಗಿತ್ತು ಎನ್ನುವುದು ಸಹ ನಮಗೆ ಗೊತ್ತಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಯಾರೋ ಬರೆದುಕೊಟ್ಟಿರುವುದನ್ನು ಜಾರಿಗೆ ತರುವಷ್ಟು ವಿವೇಚನೆ ಇಲ್ಲದವರು ಅಲ್ಲ ನಾವು. ಇದು ಸಾಮಾನ್ಯ ಜ್ಞಾನಕ್ಕೆ ಸಂಬಂಧಪಟ್ಟ ವಿಚಾರವಾಗಿದೆ.

**ಉಪ ಸಭಾಪತಿಯವರು:-** ಮಾನ್ಯ ಅಶ್ವತ್ ನಾರಾಯಣ್‌ರವರೇ, ಈ ಬದಲಾವಣೆಯಲ್ಲಿ ಏನು ಸಮಸ್ಯೆ ಇದೆ. ಏನು ಬದಲಾವಣೆ ಆಗಬೇಕು, ಏನು ತಿದ್ದುಪಡಿಯಾಗಬೇಕು ಅದನ್ನು ಹೇಳಿ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, "ಕೊಳಚೆ ನಿರ್ಮೂಲನ ಮಂಡಲಿ" ಎನ್ನುವುದಕ್ಕೆ ಬದಲಾಗಿ "ಕೊಳಚೆ ಅಭಿವೃದ್ಧಿ ಮಂಡಲಿ" ಎಂದು ಬದಲಾವಣೆ ಮಾಡಲಾಗಿದೆ. ಅದರಲ್ಲಿ ಏನಿದೆ?

**ಶ್ರೀ ಅಶ್ವತ್ ನಾರಾಯಣ:-** ಸನ್ಮಾನ್ಯ ಸಭಾಪತಿಯವರೇ, ಇಂಗ್ಲೀಷ್‌ನಲ್ಲಿ "Slum Clearance Board" ಎಂದು ಇದೆ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಬೇರೆ ಬೇರೆ ಸಂದರ್ಭಗಳಲ್ಲಿ ಕ್ಲಿಷ್ಟವಾಗಿರುವಂತಹ ವಿಷಯಗಳು ಸದನದ ಮುಂದೆ ಬಂದಾಗ ಅವರು ಚರ್ಚೆ ಮಾಡಲಿ, ನಾವು ಬೇಡವೆನ್ನುವುದಿಲ್ಲ. ಮಾನ್ಯ ಪುಟ್ಟಸ್ವಾಮಿಯವರು ಈ ವಿಧೇಯಕಕ್ಕೆ ಸಂಬಂಧವಿಲ್ಲದಿದ್ದರೂ ಒಂದು ಸಲಹೆಯನ್ನು ಮಾಡಿದರು.

**ಉಪ ಸಭಾಪತಿಯವರು:-** ಮಾನ್ಯ ಅಶ್ವತ್‌ನಾರಾಯಣ್‌ರವರೇ, ಏನು ಬದಲಾವಣೆ ಆಗಬೇಕು, ಅಷ್ಟನ್ನು ಮಾತ್ರ ಹೇಳಿ. ಚರ್ಚೆಗೆ ಹೋಗುವುದು ಬೇಡ.

**ಶ್ರೀ ಅಶ್ವತ್ ನಾರಾಯಣ:–** ಸನ್ಮಾನ್ಯ ಸಭಾಪತಿಯವರೇ, 'ಕೊಳಚೆ ನಿರ್ಮೂಲನ ಮಂಡಳಿ' ಎಂದು ಈಗ ಇದೆ. ಅದನ್ನು ಬದಲಾವಣೆ ಮಾಡಿ 'ಕೊಳಚೆ ಅಭಿವೃದ್ಧಿ ಮಂಡಲಿ' ಎಂದು ಮಾಡಿದರೆ ಅದರ ಅರ್ಥವೇ ಬೇರೆ ಆಗುತ್ತದೆ. ಕೊಳಚೆಯನ್ನು ಅಭಿವೃದ್ಧಿ ಮಾಡುತ್ತಾರೆಯೇ? ಏನು ಇದರ ಅರ್ಥ ಎನ್ನುವುದನ್ನು ಅವರು ಸ್ಪಷ್ಟಪಡಿಸಬೇಕಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಈಗ ನಾವು ತಿದ್ದುಪಡಿ ತರುತ್ತಿರುವುದು "ಕೊಳಚೆ ಪ್ರದೇಶ ಅಭಿವೃದ್ಧಿ ಮಂಡಲಿ" ಎಂದು "ಕೊಳಚೆ ಅಭಿವೃದ್ಧಿ" ಎಂದು ಅಲ್ಲ. ತಂದಿರುವಂತಹ ತಿದ್ದುಪಡಿ ಸರಿಯಾಗಿದೆ.

**ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಅಶ್ವತ್ ನಾರಾಯಣರವರು ಹೇಳಿದಂತೆ ಕನ್ನಡದಲ್ಲಿ "ಕೊಳಚೆ ಪ್ರದೇಶ ಅಭಿವೃದ್ಧಿ ಮಂಡಳಿ" ಎಂದು ಆಗಬಹುದು. ಆದರೆ, ಇಂಗ್ಲೀಷ್‌ನಲ್ಲಿ ಅದು "Slum Area Development Board" ಎನ್ನುವ ಅರ್ಥದಿಂದಾಗಿ ತಪ್ಪು ಸಂದೇಶವನ್ನು ನೀಡುತ್ತದೆ. ಅದನ್ನು ಸರಿಪಡಿಸಿ ಎನ್ನುವುದು ನನ್ನ ಸಲಹೆಯಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದ ನಿರ್ದೇಶನದಂತೆ ನಾವು ಈ ತಿದ್ದುಪಡಿಯನ್ನು ಕೈಗೊಂಡಿದ್ದೇವೆ. ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ ಈಗಾಗಲೇ "ಕೊಳಚೆ ಪ್ರದೇಶಾಭಿವೃದ್ಧಿ ಮಂಡಲಿ" ಎಂದು ಬದಲಾವಣೆಯನ್ನು ಮಾಡಿದ್ದಾರೆ. This has been proposed to maintain uniformity as per the direction given by the Central Government. ಈ ನಿಟ್ಟಿನಲ್ಲಿ ನಮಗೆ ಯವುದೇ ಸಾಹಿತಿಗಳ ಸಲಹೆ ಆಗಿಲ್ಲ. This has been proposed to maintain uniformity throughout the territory of India. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಒಂದೇ ರೀತಿ ಇರಬೇಕೆನ್ನುವ ಹಿನ್ನೆಲೆಯಲ್ಲಿ ಈ ತಿದ್ದುಪಡಿಯನ್ನು ತರಲಾಗಿದೆ. ಆ ಹಿನ್ನೆಲೆಯಲ್ಲಿ "ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಲಿ" ಎನ್ನುವುದನ್ನು "ಕರ್ನಾಟ ಕೊಳಚೆ ಪ್ರದೇಶಾಭಿವೃದ್ಧಿ ಮಂಡಳಿ" ಎಂದು

ತಿದ್ದುಪಡಿ ಮಾಡಲಾಗಿದೆ. ಮಾನ್ಯ ಪುಟ್ಟಸ್ವಾಮಿಯವರು ಗುರುತಿನ ಚೀಟಿಯ ಬಗ್ಗೆ ಪ್ರಸ್ತಾಪ ಮಾಡಿದ್ದರು. . . . .

**ಶ್ರೀ ಎಂ.ಸಿ.ನಾಣಯ್ಯ:-** ಸನ್ಮಾನ್ಯ ಸಭಾಪತಿಯವರೇ, ಒಂದು ಶಬ್ದದ ಮೇಲೆ ಏತಕ್ಕೋಸ್ಕರ ಇಷ್ಟೊಂದು ಚರ್ಚೆ? ವಿಧೇಯಕವನ್ನು ಪಾಸ್ ಮಾಡಬಹುದು.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಸ್ವಾಮಿಯವರು ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಕೊಳಚೆ ನಿವಾಸಿಗಳಿಗೆ ಮನೆಗಳನ್ನು ಕಟ್ಟಿಕೊಟ್ಟ ನಂತರ ತೋಳ್ಬಲ ಇರುವವರು ಬಂದು ಅಲ್ಲಿ ವಾಸ ಮಾಡಬಾರದು ಎಂದು ಹೇಳಿದ್ದಾರೆ. ಯಾರು ಕೊಳಚೆ ನಿವಾಸಿಗಳಿದ್ದಾರೆ ಅವರಿಗೆ ಮತ್ತು ಯಾರ ಹತ್ತಿರ ಗುರುತಿನ ಚೀಟಿ ಇರುತ್ತದೆ ಅವರಿಗೆ ಮನೆಗಳನ್ನು ಕೊಡುವಂತಹ ಕೆಲಸ ಮಾಡಲಾಗುತ್ತದೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಲಗ್ಗೆರೆ ಪ್ರದೇಶದ ಬಗ್ಗೆಯೂ ಅವರು ಸ್ಪಷ್ಟಪಡಿಸಬೇಕಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಲಗ್ಗೆರೆ ಪ್ರದೇಶದ ಬಗ್ಗೆ ಮಾನ್ಯ ಸದಸ್ಯರು ಏನು ಸಲಹೆಯನ್ನು ಕೊಟ್ಟಿದ್ದಾರೆ ಅದರ ಬಗ್ಗೆ ತೀವ್ರವಾಗಿ ಮತ್ತು ಗಂಭೀರವಾಗಿ ಪರಿಶೀಲಿಸಿ ಸೂಕ್ತವಾಗಿರುವ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

**ಉಪ ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ರಿಂದ 5ರವರೆಗೆ**

**ಉಪ ಸಭಾಪತಿಯವರು:–** "ಖಂಡ 2 ರಿಂದ 5ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 5ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಉಪ ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಎಸ್.ಆರ್.ಪಾಟೀಲ್(ಸಭಾ ನಾಯಕರು, ವಸತಿ ಸಚಿವರ ಪರವಾಗಿ):–** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಉಪ ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

## (ಇ) ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2013

### ಪರ್ಯಾಲೋಚನಾ ಪ್ರಸ್ತಾವ

**ಶ್ರೀ ವಿ.ಶ್ರೀನಿವಾಸ ಪ್ರಸಾದ್(ಕಂದಾಯ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

### ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ವಿ.ಶ್ರೀನಿವಾಸ ಪ್ರಸಾದ್:–** ಸನ್ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ತಂದಿರುವ ಉದ್ದೇಶವೇನೆಂದರೆ, ಪ್ರಸ್ತುತ 1964ರ ಕರ್ನಾಟಕ ಭೂ ಕಂದಾಯ ಅಧಿನಿಯಮವು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಭೂಮಿಯನ್ನು ವಿಧಾನ ಸಭೆಯ ಸದಸ್ಯರು ಮುಖ್ಯಸ್ಥರಾಗಿರುವ ತಾಲ್ಲೂಕು ಮಟ್ಟದ ಸಮಿತಿಯ ಮೂಲಕ ಹಂಚಿಕೆ ಮತ್ತು ಮಂಜೂರು ಮಾಡಲು ಉಪಬಂಧ ಕಲ್ಪಿಸಿದೆ. ವಿಧಾನಸಭಾ ಕ್ಷೇತ್ರದ ಸೀಮಾ ನಿರ್ಣಯದ ಪರಿಣಾಮವಾಗಿ ತಾಲ್ಲೂಕಿನ ಕೆಲವು ಪ್ರದೇಶಗಳು ಅಕ್ಕಪಕ್ಕದ ತಾಲ್ಲೂಕುಗಳಲ್ಲಿ ಪರಸ್ಪರ ವ್ಯಾಪ್ತವಾಗಿ ಅದರಿಂದ ಯಾವ ವಿಧಾನಸಭಾ ಸದಸ್ಯರು ತಾಲ್ಲೂಕು ಮಟ್ಟದ ಸಮಿತಿಗೆ ಮುಖ್ಯಸ್ಥರಾಗಬೇಕೆನ್ನುವ ಗೊಂದಲವನ್ನುಂಟು ಮಾಡಿದೆ. ಈ ಅಸಂಗತಿಯನ್ನು ತಪ್ಪಿಸುವುದಕ್ಕಾಗಿ ಅವಶ್ಯವಿರುವ ಕಡೆಗಳಲ್ಲಿ ವಿಧಾನಸಭಾ ಚುನಾವಣಾ ಕ್ಷೇತ್ರಕ್ಕಾಗಿ ಪ್ರತ್ಯೇಕ ಸಮಿತಿಯನ್ನು ರಚಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಕರ್ನಾಟಕ ಭೂ ಕಂದಾಯ ನಿಯಮ 1964ಕ್ಕೆ ತಿದ್ದುಪಡಿ ತರುವುದು ಅವಶ್ಯವೆಂದು ಪರಿಗಣಿಸಲಾಗಿದ್ದು, ವಿಷಯವು ತುರ್ತುಸ್ವರೂಪವಾದುದ್ದರಿಂದ ಮತ್ತು ಕರ್ನಾಟಕ ವಿಧಾನ ಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದೆ ಇದ್ದುದರಿಂದ ಕರ್ನಾಟಕ ಭೂ ಕಂದಾಯ ತಿದ್ದುಪಡಿ ಆದ್ಯಾದೇಶ 2013, ಕರ್ನಾಟಕ ಆದ್ಯಾದೇಶ

ಸಂಖ್ಯೆಯನ್ನು ದಿನಾಂಕ: 12.10.13ರಂದು ಹೊರಡಿಸಲಾಗಿದೆ. ಆದ್ದರಿಂದ ಇದಕ್ಕೆ ತಮ್ಮ ಅನುಮತಿಯನ್ನು ಬಯಸುತ್ತಿದ್ದೇನೆ.

**ಶ್ರೀ ಡಿ.ವಿ.ಸದಾನಂದಗೌಡ (ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಬಹಳ ಹಿಂದೇ ಈ ಕೆಲಸ ಆಗಬೇಕಾಗಿತ್ತು ಎನ್ನುವುದು ನನ್ನ ಭಾವನೆಯಾಗಿದೆ. ಒಂದು ಕ್ಷೇತ್ರದಲ್ಲಿ ಇಬ್ಬರು ಮೂರು ಜನ ಶಾಸಕರು ಇದ್ದರೆ ಅವರುಗಳ ನಡುವೆ ನಾನು ಅಧ್ಯಕ್ಷನಾಗಬೇಕು ನಾನು ಅಧ್ಯಕ್ಷನಾಗಬೇಕು ಎನ್ನುವಂತಹ ಭಾವನೆ ಸ್ವಾಭಾವಿಕವಾಗಿ ಇದ್ದೇ ಇರುತ್ತದೆ. ಈ ಹಿನ್ನೆಲೆಯಲ್ಲಿ ಈಗ ತಂದಿರುವಂತಹ ತಿದ್ದುಪಡಿ ಸರಿಯಾದಂತಹ ತಿದ್ದುಪಡಿ ಎಂದು ಹೇಳಬಹುದಾಗಿದೆ. ಹಲವಾರು ವಿಧಾನಸಭಾ ಕ್ಷೇತ್ರಗಳಿಗೆ ಎರಡು ಮೂರು ತಾಲ್ಲೂಕುಗಳು ಸೇರುವಂತಹ ಭಾಗಗಳು ಇವೆ. ಶೃಂಗೇರಿಯಲ್ಲಿ ಒಂದು ವಿಧಾನಸಭಾ ಕ್ಷೇತ್ರಕ್ಕೆ ಮೂರು ತಾಲ್ಲೂಕು ಸೇರುತ್ತದೆ. ಇದರಿಂದ ಏನಾಗುತ್ತದೆ ಎಂದರೆ, ಸ್ವಾಭಾವಿಕವಾಗಿ ಆ ಭಾಗದಲ್ಲಿ ಇರುವಂತಹ ಶಾಸಕರು ಅಧ್ಯಕ್ಷರಾಗಬೇಕೆಂದು ಇದ್ದರೂ ಸಹ ಹಲವಾರು ಸಂದರ್ಭಗಳಲ್ಲಿ ವಿಭಿನ್ನ ಪ್ರಕ್ರಿಯೆಗಳು ಆಗಬಹುದು. ಇದಕ್ಕೇನಾದರು ಕ್ರಮವನ್ನು ತೆಗೆದುಕೊಳ್ಳುವಂತಾಗಬೇಕು. ಎರಡನೆಯದಾಗಿ, ಒಂದು ವಿಧಾನಸಭಾ ಕ್ಷೇತ್ರಕ್ಕೆ ಬೇರೆ ಬೇರೆ ತಾಲ್ಲೂಕುಗಳ ಭಾಗಗಳು ಸೇರುತ್ತವೆ. ಉದಾಹರಣೆಗೆ ಹೇಳಬೇಕಾದರೆ, ಪುತ್ತೂರು ತಾಲ್ಲೂಕಿನ ಅರ್ಧ ಭಾಗ ಸುಳ್ಯಾಕ್ಕೆ ಸೇರುತ್ತದೆ. ಉಡುಪಿಯಲ್ಲಿ ಮೂರು ತಾಲ್ಲೂಕುಗಳು ಸೇರುತ್ತವೆ. ಇಂತಹ ಭಾಗಗಳಲ್ಲಿ ಅಧಿಕಾರಿಗಳನ್ನು ಇದಕ್ಕೆ ನೇಮಿಸಿ ಯಾವುದಾದರೊಂದು ಹೊಸ ತಂತ್ರಗಾರಿಕೆಯನ್ನು ಉಪಯೋಗಿಸುವುದು ಬಹಳ ಅವಶ್ಯಕವಾಗಿದೆ. ಈ ವಿಧೇಯಕಕ್ಕೆ ನನ್ನ ಸಹಮತಿಯನ್ನು ಸೂಚಿಸುತ್ತಾ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ವಿ.ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ನಾಣಯ್ಯನವರು ಬೇರೆ ರೂಪದಲ್ಲಿ ಈ ವಿಚಾರ ಚರ್ಚೆಗೆ ಬಂದಾಗ 'ಕೇವಲ ಸಮಿತಿಗಳನ್ನು ಮಾಡುವಲ್ಲಿ ಬಗರ್‌ಹುಕುಂ ಮಾಡುವುದರಿಂದ ರೈತರಿಗೆ ನ್ಯಾಯ ಸಿಗುತ್ತದೆ ಎನ್ನುವುದು ಎಷ್ಟರ ಮಟ್ಟಿಗೆ

ಸರಿ, there should be some qualitative change ಎಂದು ಹೇಳಿದ್ದಾರೆ. ಗುಣಾತ್ಮಕ ಬದಲಾವಣೆ ಆಗುವ ರೀತಿಯಲ್ಲಿ ನೀವು ಪ್ರಯತ್ನಪಡಬೇಕು ಎಂದು ಹೇಳಿದ್ದರು. ಆ ರೀತಿಯಾದಂಥ ಸಲಹೆಗಳನ್ನು ಕೊಟ್ಟರೆ ಅದನ್ನು ಸೇರಿಸಿ, ನಾವು ಆದೇಶವನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ.

**ಶ್ರೀ ಎಂ.ಸಿ.ನಾಣಯ್ಯ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಕಾನೂನು ಬಂದ ನಂತರ ಬದಲಾವಣೆ ಮಾಡಬೇಕಾದರೆ ಪುನಃ ತಿದ್ದುಪಡಿಯನ್ನು ತರಬೇಕು. ನಾನು ಅನುಭವದ ಆಧಾರದ ಮೇಲೆ ಹೇಳುತ್ತಿದ್ದೇನೆ. ಯಾರಿಗೆ ಇದರ ಲಾಭ ದೊರಕಬೇಕೋ ಅವರಿಗೆ ಮಾತ್ರ ಇದರ ಲಾಭ ದೊರಕಬೇಕು. ಇತರರು ಯಾರಿಗೂ ಇದರ ಲಾಭ ದೊರಕಬಾರದು. ಈ ಹಿನ್ನೆಲೆಯಲ್ಲಿ ನನ್ನ ಒಂದು ಸಲಹೆ ಇದೆ. ಕಳೆದ ಸಂದರ್ಭದಲ್ಲಿಯೂ ಸಹ ನಾನು ಹೇಳಿದ್ದೆ. ವಿಧಾನ ಸಭಾ ಸದಸ್ಯರು ಅಥವಾ ವಿಧಾನ ಪರಿಷತ್ತಿನ ಸದಸ್ಯರು ಏಕೆ ಅದರ ಅಧ್ಯಕ್ಷರಾಗಬೇಕು? ನಮ್ಮ ಕೆಲಸವೇನೆಂದರೆ, ಅಧಿಕಾರಿಗಳು ಮಾಡುವ ಕೆಲಸದಲ್ಲಿ ಲೋಪವಿದ್ದರೆ, ತಪ್ಪಿದ್ದರೆ ಅದನ್ನು ಹುಡುಕಿ ಅಧಿಕಾರಿಗಳು ಆ ತಪ್ಪನ್ನು ತಿದ್ದಿಕೊಳ್ಳುವುದಕ್ಕೆ ಹೇಳುವ ಅಧಿಕಾರ ನಮಗಿದೆ. ನಾವೇ ಅಧ್ಯಕ್ಷರಾಗಿ ಅಲ್ಲಿ ಯಾರೋ ಒಬ್ಬರು ಕಾರ್ಯದರ್ಶಿ ಕುಳಿತುಕೊಂಡು ನಮ್ಮ ಉಕ್ತಲೇಖನದ ಮೇಲೆ ಅವರಿಗೆ ಹೇಳಿ ಬರೆಯಿಸಿಕೊಂಡು, ಆ ಪ್ರಕಾರ ಮಾಡುವುದು. ಕಡೆಗೆ ಆ ಅಧಿಕಾರಿ ಏನು ಆಗುತ್ತಾನೆಂದರೆ, he become a guinni pig and he becomes a scapegoat. ದಯಮಾಡಿ ಇದರ ಬಗ್ಗೆ ವಿಚಾರ ಮಾಡಿ. ಇದು ಏಕೆ ಆಗಬೇಕು? ನಾವು ಪಾಲಿಸಿಯನ್ನು ಮಾಡತಕ್ಕಂಥ ಜನ. ನಾವುಗಳು ಕುಳಿತು ಚರ್ಚೆ ಮಾಡಿ ಕಾನೂನನ್ನು ತರುತ್ತೇವೆ. We are the ‘policy makers’. ‘Policy makers’ ನಾವಾದ ನಂತರ, being the Chairman, why should we sit in judgment over that? We are the Legislators. ಕಾನೂನನ್ನು ಮಾಡುವವರು ನಾವು. ಕಾನೂನನ್ನು ಮಾಡಿದ ನಂತರ ಆ ಕಾನೂನನ್ನು ಜಾರಿಗೆ ತರಬೇಕಾದವರು ನಮ್ಮ ಅಧಿಕಾರಿ ವರ್ಗ, ನಮ್ಮ ಕೈ ಕೆಳಗೆ ಕೆಲಸ ಮಾಡತಕ್ಕಂಥವರು. ಆ ಅಧಿಕಾರಿ ವರ್ಗ ಮಾಡತಕ್ಕಂಥ ಕೆಲಸವನ್ನು,

ಕಾನೂನನ್ನು ಮಾಡಿ ಅಲ್ಲಿಯೇ ಕುಳಿತುಕೊಂಡು ಆ ಕೆಲಸವನ್ನು ನಾನೇ ಮಾಡಬೇಕೆಂಬುದು ಸರಿಯೇ?

**ಶ್ರೀ ಶ್ರೀನಿವಾಸ ಪ್ರಸಾದ್:-** ನಮ್ಮ ಬಗ್ಗೆ ನಿಮಗೆ ವಿಶ್ವಾಸವಿಲ್ಲವೇ?

**ಶ್ರೀ ಎಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೆ, ನಾನು ವಿಶ್ವಾಸದ ಬಗ್ಗೆ ಮಾತನಾಡುತ್ತಿಲ್ಲ.

**ಶ್ರೀ ಶ್ರೀನಿವಾಸ ಪ್ರಸಾದ್:-** ಕಾನೂನು ಮಾಡುವವನಿಗೆ ಜವಾಬ್ದಾರಿಯನ್ನು ಕೊಟ್ಟರೆ, ಕಾನೂನು ಪ್ರಕಾರವಾಗಿ ಏನು ಮಾಡುತ್ತಿದ್ದಾರೆಂದು ಅವರಿಗೆ ಅರ್ಥವಾಗುತ್ತದೆ.

**ಶ್ರೀ ಎಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೆ, ಈ ಅಂಶವನ್ನು ನಾನು ಏಕೆ ಹೇಳುತ್ತಿದ್ದೇನೆಂದು ಹೇಳುತ್ತೇನೆ. ನಾನು ವಿಶ್ವಾಸವಿಲ್ಲವೆಂದು ಹೇಳುವುದಕ್ಕೆ ತಯಾರಿಲ್ಲ. ಆದರೆ ಅನುಭವದ ಆಧಾರದ ಮೇಲೆ ಇದು ಯಾವ ರೀತಿಯಾಗಿ ನಡೆಯಿತು ಎಂಬುದು ಅವರಿಗೆ ಗೊತ್ತಾಗಿದೆ ಅಲ್ಲವೇ? ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕೆಂದರೆ ಒಬ್ಬ ಅಧಿಕಾರಿ ಒಬ್ಬ ಅಧ್ಯಕ್ಷನಾಗಿ ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ ಅವನು ಲೋಪ ಮಾಡಿದರೆ ಅಥವಾ ಅವನು ಎಲ್ಲಾದರೂ documents ಗಳನ್ನು manipulte ಮಾಡಿದರೆ, documents ಗಳನ್ನು insert ಮಾಡಿದರೆ ಕೂಡಲೇ ಅವನನ್ನು ಅಮಾನತ್ತು ಮಾಡಿ ಮನೆಗೆ ಕಳುಹಿಸಬಹುದು. ಆದರೆ ಶಾಸಕನನ್ನು ಏನು ಮಾಡುತ್ತಾರೆ? ಹತ್ತಾರು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂತು. ಲೋಕಾಯುಕ್ತಕ್ಕೆ ರೆಫರ್ ಮಾಡಬೇಕಾದಂಥ ಒಂದು ಪರಿಸ್ಥಿತಿ ನಿರ್ಮಾಣವಾಯಿತು. ಅದರ ಮೇಲೆ ಸರ್ಕಾರ ಬೇಕಾದಷ್ಟು ತನಿಖೆಯನ್ನು ಮಾಡಿ ಆಯಿತು. ಇಂತಹ ಒಂದು ಪರಿಸ್ಥಿತಿಯಲ್ಲಿ ಏಕೆ ಇದನ್ನು ಮಾಡಬೇಕು ಎಂಬುದನ್ನು ದಯಮಾಡಿ ಸರ್ಕಾರ ವಿಚಾರ ಮಾಡಲಿ. Why should we?

**ಶ್ರೀ ಡಿ.ವಿ.ಸದಾನಂದಗೌಡ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ನಾಣಯ್ಯನವರು ಹೇಳುವ ವಿಚಾರವಾಗಿ ನನಗೆ

ಮತ್ತು ಅವರಿಗೆ ಸ್ವಲ್ಪ ವ್ಯತ್ಯಾಸಗಳಿವೆ. I differ with the views advanced by Mr. Nanaiah. ಕಾರಣವೇನೆಂದರೆ, ಈ ಸಮಿತಿಗಳು ಮತ್ತೊಂದು ಇರುವುದು ಏಕೆ? ಕೇವಲ ಅಧಿಕಾರಿಗಳೇ ಮಾಡುವುದಿದ್ದರೆ ತಹಸೀಲ್ದಾರರು ಅಥವಾ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು grant ಮಾಡುವಂಥಾದ್ದನ್ನು ಮಾಡಬಹುದು. ಹಾಗಾಗಿ ಸಮಿತಿಯ ಅವಶ್ಯಕತೆಗಳು ಏನೆಂದರೆ, ಬೇರೆ ಬೇರೆ ನಿಯಮಾವಳಿಗಳು ಇದ್ದರೂ ಕೂಡ ಸ್ಥಳೀಯವಾಗಿ ಅಲ್ಲಿರುವಂಥ ಅತಿಕ್ರಮಣದ ಬಗ್ಗೆ ಒಂದಷ್ಟು ಹೆಚ್ಚು ಮಾಹಿತಿಗಳು ಅಲ್ಲಿರುವಂಥ ಜನಪ್ರತಿನಿಧಿಗಳಿಗೆ ಬಾಕಿಯವರಿಗೆ ಇರುತ್ತದೆ ಎಂಬುದು ಮೊದಲನೆಯ ವಿಚಾರ.

ಇನ್ನು ಎರಡನೆಯದಾಗಿ, ಜನಪ್ರತಿನಿಧಿ ಏನಾದರೂ ರಾಜಕಾರಣ ಮಾಡುತ್ತಾರೆಂದರೆ, ಅಧಿಕಾರಿಗಳು ರಾಜಕಾರಣ ಮಾಡುವುದಿಲ್ಲವೇ? ಅಧಿಕಾರಿಗಳನ್ನು ಹತೋಟಿಯಲ್ಲಿಡುವುದಕ್ಕೆ ಇನ್ನಷ್ಟು ಸುಲಭವಾಗುತ್ತದೆ. ಆದರೆ ಆ ಕ್ಷೇತ್ರದ ಒಬ್ಬ ಜನಪ್ರತಿನಿಧಿ ಅಲ್ಲಿದ್ದಾಗ ಅವನಿಗೆ ಸಾರ್ವಜನಿಕರ ಭಯ ಇರುತ್ತದೆ, ಇಲ್ಲವೆಂದು ನಾನು ಹೇಳುವುದಿಲ್ಲ. For each and every rule, there is an exception. ಆದಕಾರಣ ಪ್ರತಿಯೊಬ್ಬರೂ ಒಂದೇ ರೀತಿಯಾಗಿ ಇರುವುದಿಲ್ಲ. ಆದರೆ ಇಲ್ಲಿ ಜನಪ್ರತಿನಿಧಿಗಳಿದ್ದರೆ ಜನಪ್ರತಿನಿಧಿಗಳಿಗೆ ಸಾರ್ವಜನಿಕರ ಭಯವೂ ಸಹ ಇರುತ್ತದೆ, ಒಂದಷ್ಟು ಬದ್ಧತೆ ಇರುತ್ತದೆ. ಹಾಗಾಗಿ ಈಗ ಏನಿದೆ ಅದು ನನ್ನ ಅಭಿಪ್ರಾಯದಲ್ಲಿ ಸರಿಯಾಗಿದೆ. ಆದರೆ ಮಾನ್ಯ ನಾಣಯ್ಯನವರು ಹೇಳಿದಂತೆ ಕೆಲವು ಕಡೆಗಳಲ್ಲಿ ಸಾಕಷ್ಟು ಘಟನೆಗಳು ನಡೆದಿವೆ. ನಾನು ಇಲ್ಲವೆಂದು ಹೇಳುವುದಿಲ್ಲ.

**ಶ್ರೀ ಶ್ರೀನಿವಾಸ ಪ್ರಸಾದ್:-** ಅಧಿಕಾರಿಗಳಿದ್ದರೂ ದೂರು ಬರುತ್ತದೆ, ಶಾಸಕರು ಇದ್ದರೂ ದೂರು ಬರುತ್ತದೆ.

**ಶ್ರೀ ರಾಮಚಂದ್ರಗೌಡ:-** ಜನಪ್ರತಿನಿಧಿಗಳಿಗೆ 5 ವರ್ಷಗಳಿಗೊಮ್ಮೆ ಪರೀಕ್ಷೆ ಇದೆ. ಅವರು ಆ ಪರೀಕ್ಷೆಯನ್ನು ಎದುರಿಸಬೇಕು.

**ಶ್ರೀ ಎಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೆ, ಅಂತಹ ಜನಪ್ರತಿನಿಧಿಗಳು ಆಯ್ಕೆಯಾಗುವುದು ಬಹಳ ಸುಲಭ. ಏಕೆಂದರೆ ಕೈಯಲ್ಲಿ, ಜೇಬಲ್ಲಿ ಬೇಕಾದಷ್ಟು ದುಡ್ಡಿದ್ದರೆ ಅವರು ಏಕೆ ಆಯ್ಕೆಯಾಗುವುದಿಲ್ಲ. ದಯವಿಟ್ಟು ನೀವು ಅದನ್ನು ತಿಳಿದುಕೊಳ್ಳಿ. ಇವತ್ತು ಚುನಾವಣೆ ಎಂದರೆ 5 ಕೋಟಿ, 10 ಕೋಟಿ. ಆದ್ದರಿಂದ ಯಾರ ಹತ್ತಿರ ಬಲ, ಶಕ್ತಿ ಹಣ ಇದೆ ಅವರೇ ಚನಾವಣೆಯಲ್ಲಿ ಗೆದ್ದು ಬರುವವರು. ಉಳಿದವರು ಗೆದ್ದು ಬರುವುದು ಬಹಳ ಕಷ್ಟ. ಎಲ್ಲಾದರು ಕೆಲವು exceptions ಇರಬಹುದು.

**ಶ್ರೀ ಶ್ರೀನಿವಾಸ ಪ್ರಸಾದ್:-** ಸನ್ಮಾನ್ಯ ಸಭಾಪತಿಯವರೆ, ನಾವು ಕೂಡ ಶಾಸಕರಾಗಿ ಕೆಲಸ ಮಾಡಿದ್ದೇವೆ. ನಾನೂ ಕೂಡ ಬಗರ್ ಹುಕುಂ ಸಾಗುವಳಿ ಸಮಿತಿಯ ಅಧ್ಯಕ್ಷನಾಗಿ...

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೆ, ವಿಧಾನ ಪರಿಷತ್ ಸದಸ್ಯರನ್ನು ಅಲ್ಲಿ ಕೇವಲ ಸದಸ್ಯರನ್ನಾಗಿ ಮಾಡಬಾರದು, ಅವರನ್ನು ಉಪಾಧ್ಯಕ್ಷರನ್ನಾಗಿ ಮಾಡಬೇಕು.

**ಡಾ॥ ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೆ, ಮಾನ್ಯ ಮಧುಸೂದನ್‌ರವರು ವಿಧಾನ ಪರಿಷತ್ ಸದಸ್ಯರನ್ನು ಉಪಾಧ್ಯಕ್ಷರನ್ನಾಗಿ ಮಾಡಬೇಕೆಂದು ಹೇಳಿದರು. ಅವರನ್ನು ಉಪಾಧ್ಯಕ್ಷರನ್ನಾಗಿ ಮಾಡಬಾರದು.

**ಶ್ರೀ ಶ್ರೀನಿವಾಸ ಪ್ರಸಾದ್:-** ಸನ್ಮಾನ್ಯ ಸಭಾಪತಿಯವರೆ, ಇದನ್ನು ಮಾಡಿದರೆ ಏನು ಬೇಕಾಗಿಲ್ಲ. ಇದನ್ನು ಮಾಡಿರುವ ಉದ್ದೇಶವೇನು? ತಾಲ್ಲೂಕಿನಿಂದ ತಂದಿರುವುದು ಕ್ಷೇತ್ರವಾರು, efficient ಆಗಿರಲಿ. ಸ್ವಲ್ಪ ಬದಲಾವಣೆಗಳನ್ನು ಮಾಡೋಣ ಎನ್ನುವ ದೃಷ್ಟಿಯಿಂದ ಇದನ್ನು ಕ್ಷೇತ್ರವಾರು ಮಾಡಿದ್ದೇವೆ. ನಾವು ಕೂಡ ಶಾಸಕರಾಗಿ ಕೆಲಸವನ್ನು ಮಾಡಿದ್ದೇವೆ. ಉದಾಹರಣೆಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಕ್ಷೇತ್ರದಲ್ಲಿ ಬಗರ್ ಹುಕುಂ ಸಾಗುವಳೀದು ಏನಾಗುತ್ತಿದೆ ಎಂದು ನೋಡುವುದಕ್ಕೆ ಅವಕಾಶವಿರುವುದಿಲ್ಲ. ಏಕೆಂದರೆ ಮುಖ್ಯಮಂತ್ರಿಗಳಿಗೆ ಮೂರು ತಾಲ್ಲೂಕಿನ ಮೂರು ಹೋಬಳಿಗಳು ಸೇರಿಬಿಟ್ಟಿವೆ. ಅಂದರೆ ಅವರು

ಮುಖ್ಯಮಂತ್ರಿಗಳಾಗಿರುವುದರಿಂದ ಅವರು ಬೇರೆಯವರನ್ನು ನೇಮಕ ಮಾಡಬಹುದು. ತಾಲ್ಲೂಕುವಾರು ಇರುವುದರಿಂದ ಬೇರೆಯವರಿಗೆ ಅವಕಾಶವೇ ಇಲ್ಲ. ಈ ಲಿಮಿಟೇಶನ್ ಆದ ನಂತರ ಅವರಿಗೆ ಬೇರೆ ಬೇರೆ ತಾಲ್ಲೂಕಿನ ಕೆಲವು ಭಾಗಗಳು ಸೇರಿ ಅವರ ಕ್ಷೇತ್ರ ಆಗಿರುತ್ತದೆ. ಆದ್ದರಿಂದ ಬಹಳ ಮುಖ್ಯವಾಗಿರುವುದು ಬಗರ್ ಹುಕುಂ ಸಾಗುವಳಿದು ಬಹಳ ವರ್ಷಗಳಿಂದ ಇರತಕ್ಕಂಥ ಒಂದು ಸಮಸ್ಯೆಯಾಗಿದೆ. ಬಡವನಿಗೆ, ಬಡ ರೈತನಿಗೆ ಸಹಾಯ ಮಾಡತಕ್ಕಂಥಾದ್ದು ಆದ್ದರಿಂದ ಅಲ್ಲಿನ ಶಾಸಕನಿಗೆ ಆಳವಾಗಿ ವಿಚಾರ ಗೊತ್ತಿರುತ್ತದೆ. ಅವರ ಕ್ಷೇತ್ರದಲ್ಲಿ ಅವರಿಗೆ ಒಂದು commitment ಇರುತ್ತದೆ. ಯಾವ ರೈತ ಎಷ್ಟು ವರ್ಷಗಳಿಂದ ಅಲ್ಲಿ ಸಾಗುವಳಿಯನ್ನು ಮಾಡುತ್ತಿದ್ದಾನೆ, ಅವನಿಗೆ ಯಾವ್ಯಾವ ಗೈಡ್‌ಲೈನ್ಸ್ ಮೇಲೆ ಭೂಮಿಯನ್ನು ಕೊಡಬೇಕು ಎನ್ನತಕ್ಕಂತಾದ್ದು ಇರುತ್ತದೆ ಮತ್ತು ಅಧಿಕಾರೇತರ ಸದಸ್ಯರಿಗೂ ಕೂಡ ಗೊತ್ತಿರುತ್ತದೆ. ಅವರೆಲ್ಲರೂ ಸ್ಥಳೀಯರೆ, ಕ್ಷೇತ್ರಕ್ಕೆ ಸಂಬಂಧಪಟ್ಟವರೇ ಆಗಿರುವುದರಿಂದ ಅವರಿಗೆ who is what, ಯಾರು ಏನು, ಏನು ಮಾಡುತ್ತಿದ್ದಾರೆ ಎಂಬ ಬಗ್ಗೆ ಸ್ಪಷ್ಟವಾದ ಚಿತ್ರಣ ಗೊತ್ತಿರುವುದರಿಂದ ಅವನು ಆ ಸಮಿತಿಯಲ್ಲಿದ್ದು, ಆ ಚರ್ಚೆಯಲ್ಲಿ ಭಾಗವಹಿಸಿ, ಅದಕ್ಕೆ ಯಾವ ರೀತಿಯಾಗಿ ಅವಕಾಶವನ್ನು ಕೊಡಬೇಕು. ಅವನಿಗೆ ಸಕ್ರಮ ಮಾಡಬೇಕು ಎನ್ನತಕ್ಕಂಥ ಅರಿವು, ತಿಳುವಳಿಕೆ, ಮಾಹಿತಿ ಇರುತ್ತದೆ ಎನ್ನುವ ದೃಷ್ಟಿಯಿಂದ ಮಾಡಲಾಗಿದೆ. ಮಾನ್ಯ ನಾಣಯ್ಯನವರು ಹೇಳುವ ವಿಚಾರವನ್ನು ನಾನು ಒಪ್ಪುತ್ತೇನೆ. M.L.A. ಗಳು ಎಲ್ಲಾ ಕಡೆಯಲ್ಲಿಯೂ ಸಹ ಆಗಿಲ್ಲ. ಅವರು ಹೇಳಿದ ಹಾಗೆ ಕೆಲವು ಕಡೆ ಆಗಿದೆ. ಅದರ ಬಗ್ಗೆ ನಾವು ಲೋಕಾಯುಕ್ತಕ್ಕೂ ಸಹ ದೂರನ್ನು ಕೊಟ್ಟಿದ್ದೇವೆ. ತನಿಖೆಯನ್ನು ಮಾಡಬೇಕು. ಎನ್ನತಕ್ಕಂಥಾದ್ದು ಮುಕ್ತವಾಗಿದೆ. ಬಹುಶಃ ಇದನ್ನು ಕ್ಷೇತ್ರವಾರು ಮಾಡಿದಾಗ ಅವರು ಹೇಳಿದ ಹಾಗೆ ನನ್ನ ಮನಸ್ಸಿನಲ್ಲಿ ಒಂದು ವಿಚಾರವಿದೆ. ಚರ್ಚೆ ಮಾಡಿ ಇದನ್ನು ಯಾವ ರೀತಿಯಲ್ಲಿ ಗುಣಾತ್ಮಕವಾಗಿ ಬದಲಾವಣೆಯನ್ನು ತರಲಿಕ್ಕೆ ಸಾಧ್ಯವೊ ಆ ಪ್ರಯತ್ನವನ್ನು ನಾನು ಬೇರೆ ರೀತಿಯಲ್ಲಿ ಚರ್ಚೆ ಮಾಡಿ ನೋಡಿ, ಅವರಿಗೆ ಆ

ರೀತಿಯಾದಂಥ ಗೈಡ್‌ಲೈನ್ಸ್ ಕೊಡುವುದಕ್ಕೂ ಸಹ ಪ್ರಯತ್ನವನ್ನು ಮಾಡಿ ಮಾಡಿಕೊಡುತ್ತೇವೆ.

**ಉಪ ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**

**ಖಂಡ 2 ಮತ್ತು 3**

**ಉಪ ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ಮತ್ತು 3 ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಉಪ ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಉಪ ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**(ಉ) ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ 2012**

**(ಉಭಯ ಸದನಗಳಿಂದ ಅಂಗೀಕಾರವಾದಂತೆ ಮತ್ತು ಘನತೆವೆತ್ತ ರಾಜ್ಯಪಾಲರಿಂದ ಪುನರ್ ಪರಿಗಣನೆಗೆ ಸಂದೇಶದೊಂದಿಗೆ ಹಿಂದಿರುಗಿಸಿರುವ ವಿಧೇಯಕ)**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ವಿ. ಶ್ರೀನಿವಾಸ್ ಪ್ರಸಾದ್(ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಉಭಯ ಸದನಗಳಿಂದ ಅಂಗೀಕಾರವಾದಂತೆ ಮತ್ತು ಘನತೆವೆತ್ತ ರಾಜ್ಯಪಾಲರಿಂದ ಪುನರ್ ಪರಿಗಣನೆಗಾಗಿ ಸಂದೇಶದೊಂದಿಗೆ ಹಿಂದಿರುಗಿಸಿರುವ 2012ನೇ ಸಾಲಿನ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

(7–30 ಗಂಟೆ)

**ಶ್ರೀ ಶ್ರೀನಿವಾಸ್ ಪ್ರಸಾದ್(ಕಂದಾಯ ಸಚಿವರು):–** ಮಾನ್ಯ ಸಭಾಪತಿಗಳೆ, ಕಳೆದ ಸರ್ಕಾರ ಇದ್ದಾಗ ಈ ಕುರಿತು ಉಭಯ ಸದನಗಳಲ್ಲಿ

ಚರ್ಚೆಯಾಗಿತ್ತು. ನಂತರ ಇದನ್ನು ಮಾನ್ಯ ರಾಜ್ಯಪಾಲರಿಗೆ ಕಳುಹಿಸಿದಾಗ ಅವರಿಂದ ascent ಸಿಗಲಿಲ್ಲ. ಅದಕ್ಕೆ ಅವರು ಕಾರಣಗಳನ್ನು ಕೊಟ್ಟು ಪುನರ್ ಪರಿಶೀಲನೆಗಾಗಿ ಕಳುಹಿಸಿ ಕೊಟ್ಟಿದ್ದಾರೆ. ನಾವು ಮಂತ್ರಿಮಂಡಲದಲ್ಲಿ ಇದರ ಬಗ್ಗೆ ಚರ್ಚೆ ಮಾಡಿದೆವು. ಕಳೆದ ಹತ್ತಾರು ವರ್ಷಗಳಿಂದ ನಗರ ಪ್ರದೇಶಗಳಲ್ಲಿ ಯಾರ್‍ಯಾರು ಸರ್ಕಾರಿ ಭೂಮಿಯನ್ನು ಅತಿಕ್ರಮಣ ಮಾಡಿದ್ದಾರೋ ಅಥವಾ ಅಕ್ರಮವಾಗಿ ಕಟ್ಟಿರುವ 20x30 ಅಳತೆಯ ಮನೆಯನ್ನು ಸಕ್ರಮ ಮಾಡಿಕೊಳ್ಳುವುದಕ್ಕೆ ತಿದ್ದುಪಡಿಯನ್ನು ತಂದಿದ್ದೇವೆ. ಮಾನ್ಯ ರಾಜ್ಯಪಾಲರು ಎರಡೂ ಸದನಗಳಿಗೆ ಕಳುಹಿಸಿ ಕೊಟ್ಟು ಅದರಲ್ಲಿ ಪ್ರಸ್ತಾಪ ಮಾಡಿದ 3 ಅಂಶಗಳನ್ನು ಗಣನೆಗೆ ತೆಗೆದುಕೊಂಡು observations ಮಾಡಿ ಅವರಿಗೆ ಕಳುಹಿಸಿ ಕೊಟ್ಟಿದ್ದೇವೆ. ಅವರು ಮಾಡಿರುವ observations ಎಂದರೆ, ಸರ್ಕಾರ ಒಂದು ಕಡೆ ಶ್ರೀ ಎ.ಟಿ.ರಾಮಸ್ವಾಮಿ ಮತ್ತು ಬಾಲಸುಬ್ರಹ್ಮಣ್ಯಂ ರವರ ಅಧ್ಯಕ್ಷತೆಯಲ್ಲಿ ಸಮಿತಿ ನೇಮಕ ಮಾಡಿ, ಅದು 11 ಲಕ್ಷ ಎಕರೆಯಷ್ಟು ಸರ್ಕಾರಿ ಭೂಮಿಯನ್ನು ಆಕ್ರಮಿಸಿಕೊಂಡಿದ್ದಾರೆ ಎಂದು ಹೇಳಿದೆ. ಇನ್ನೊಂದು ಕಡೆ ಸರ್ಕಾರ, ಸಕ್ರಮ ಮಾಡಬೇಕಾಗಿರುವುದರ ಬಗ್ಗೆ ಹೇಳುತ್ತಿದೆ ಎನ್ನುವುದು ಅವರ observations ಆಗಿದೆ. ಎರಡನೆಯದು, Joint Legislature Committee ವರದಿ ಕೂಡ ಇದೇರೀತಿ ಇದೆ. ಮೂರನೆಯದು, ಸುಪ್ರೀಂ ಕೋರ್ಟ್‌ನ decision ಕೂಡ quote ಮಾಡಿದ್ದಾರೆ. ಇದು ಸುಪ್ರೀಂ ಕೋರ್ಟ್‌ನಲ್ಲಿ ಕೂಡ ಜೆಸ್ಪಾಲ್‌ಸಿಂಗ್ ಹಾಗೂ ಇತರರ ವಿರುದ್ಧ ಆಗಿರುವ ಜಡ್ಜ್‌ಮೆಂಟ್. ಈ ಮೂರನ್ನು ಪ್ರಸ್ತಾಪ ಮಾಡಿ ಅದರ ಬಗ್ಗೆ ಸ್ಪಷ್ಟನೆ ಕೊಡಬೇಕು ಎಂದು ಕೇಳಿದ್ದಾರೆ. ಬಹುಶಃ ನಾವು ಈಗಾಗಲೇ ಇದಕ್ಕೆ ಸಂಬಂಧಪಟ್ಟಂತೆ ಕಾನೂನು ಸಚಿವರು, ನಾವು ಮತ್ತು ಮಂತ್ರಿ ಮಂಡಲ ಚರ್ಚೆ ಮಾಡಿ, ರಾಜ್ಯಪಾಲರಿಗೆ ಮನದಟ್ಟಾಗುವಂತಹ ರೀತಿಯಲ್ಲಿ ಮತ್ತು Joint Legislature Committee ಇರಬಹುದು, ಶ್ರೀ ಎ.ಟಿ.ರಾಮಸ್ವಾಮಿ ಮತ್ತು ಬಾಲಸುಬ್ರಹ್ಮಣ್ಯಂರವರ ವರದಿ ಇರಬಹುದು ಅಥವಾ ಸುಪ್ರೀಂ ಕೋರ್ಟ್ decision ಇರಬಹುದು. ಇವುಗಳೆಲ್ಲವನ್ನು ಗಣನೆಗೆ ತೆಗೆದುಕೊಂಡು, ಎಲ್ಲೂ ಕೂಡ ಲೋಪದೋಷ ಬರದೇ ಇರುವ ರೀತಿಯಲ್ಲಿ ಸ್ಪಷ್ಟೀಕರಣವನ್ನು

ಕೊಟ್ಟಿದ್ದೇವೆ. ಕೆಳಮನೆಯಲ್ಲಿ ಈ ವಿಧೇಯಕ ಈಗಾಗಲೇ ಪಾಸ್ ಆಗಿದೆ. ತಾವೂ ಕೂಡ ಇದಕ್ಕೆ ಅನುಮತಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಸಿ.ಹೆಚ್.ವಿಜಯಶಂಕರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ನಗರ ಪ್ರದೇಶದಲ್ಲಿ ಆಕ್ರಮಿತ ಭೂಮಿಯಲ್ಲಿ ವಾಸದ ಮನೆ ಕಟ್ಟಿಕೊಂಡಿರುವಂತಹ ಪ್ರಕರಣದಲ್ಲಿ ಭೂಮಂಜೂರಾತಿ ಮಾಡುವಂತಹ ಒಂದು ವಿಧೇಯಕವನ್ನು ಸದನದ ಮುಂದೆ ತಂದಿದ್ದಾರೆ. ಹಿಂದೆ ಅನೇಕ ಬಾರಿ ಬಹುಶಃ ಸಾಕಷ್ಟು ದೀರ್ಘ ಚರ್ಚೆಯಾಗಿದೆ. ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುವುದೇನೆಂದರೆ, ತಾವು ಸಕ್ರಮಗೊಳಿಸುವಂಥ ಸಂದರ್ಭದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಮಹಾನಗರ ಪಾಲಿಕೆಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯಿತಿಗಳನ್ನು ಅದರ ವ್ಯಾಪ್ತಿಗೆ ಒಳಪಡಿಸಿದ್ದೀರಿ. ಆದರೆ ಇದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲಿ, ಕಂದಾಯ ಭೂಮಿಯಲ್ಲಿ ಮನೆಯನ್ನು ಕಟ್ಟಿಕೊಂಡಿರುವಂಥವರ ಸ್ಥಿತಿ–ಗತಿಗಳೇನಾಗುತ್ತದೆ ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ. ಹಾಗಾಗಿ ತಾವು ಪರಿಗಣಿಸುವ ಸಮಯದಲ್ಲಿ ಯಾರು ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಈ ರೀತಿ ಅನಧಿಕೃತವಾಗಿ ಮನೆಗಳನ್ನು ಕಟ್ಟಿಕೊಂಡು ಜೀವನ ಮಾಡುತ್ತಿದ್ದಾರೋ ಅವರನ್ನು ಕೂಡ ವ್ಯಾಪ್ತಿಗೆ ತರಬೇಕು, ಆ ದಿಸೆಯಲ್ಲಿ ತಮ್ಮ ಚಿಂತನೆಯನ್ನು ಹರಿಸಬೇಕು ಎಂದು ಮನವಿ ಮಾಡುತ್ತೇನೆ. ಪಟ್ಟಣ ಪಂಚಾಯಿತಿಯನ್ನು ತಾವು ಇದರಲ್ಲಿ ಕಾಣಿಸಿದ್ದೀರಿ. ಪಟ್ಟಣ ಪಂಚಾಯಿತಿಯ ಕೆಳಗೆ ಬರುವ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವವರಿಗೂ ಇದು ಅನ್ವಯವಾಗಬೇಕು.

**ಶ್ರೀ ವಿ.ಶ್ರೀನಿವಾಸ್ ಪ್ರಸಾದ್:–** ಕಲಂ 94(ಸಿ)ಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ಈ ಅವಕಾಶ ಇದೆ.

**ಶ್ರೀ ಸಿ.ಹೆಚ್.ವಿಜಯಶಂಕರ್:–** ತಾವು ವಿಧೇಯಕದಲ್ಲಿ 20x30 ಅಡಿ ಅಳತೆಯ ಮನೆ ಕಟ್ಟಿಕೊಂಡಿರುವವರ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಈ ಅಳತೆ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ನಗರ ಪಾಲಿಕೆಗಳ ವ್ಯಾಪ್ತಿಗೆ ಸರಿ ಹೋಗಬಹುದು. ಆದರೆ, ಕೆಳಹಂತದಲ್ಲಿ, 30x40 ರಲ್ಲಿ ಕಟ್ಟಿಕೊಂಡಿದ್ದರೆ,

40x40ರಲ್ಲಿ ಕಟ್ಟಿಕೊಂಡಿದ್ದರೆ ಅಂಥದ್ದನ್ನು ಒಡೆದು ಹಾಕಬೇಕೇ ಬೇಡವೇ ಎಂಬ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಏಕೆಂದರೆ, ಅದು ಕಟ್ಟಿ ಕೊಂಡಿರುವಂತಹ ಮನೆಯ ವಿಚಾರವಾಗಿದೆ. ಕಟ್ಟಿಕೊಂಡಿರುವ ಮನೆಗಳ ಹಿನ್ನೆಲೆಯಲ್ಲಿ ತಾವು ಕೇವಲ 20x30ಕ್ಕೆ ಸೀಮಿತವಾಗಿ, ಇದಕ್ಕಿಂತ 5–10 ಅಡಿ ಹೆಚ್ಚಾಗಿ ಕಟ್ಟಿಕೊಂಡು ವಾಸವಾಗಿದ್ದರೆ ಅಂತಹ ಸಮಯದಲ್ಲಿ ಅಧಿಕಾರಿಗಳು, ಹೆಚ್ಚಾಗಿ ಕಟ್ಟಿರುವುದನ್ನು ಒಡೆದು ಹಾಕಬೇಕು ಎಂದು ತೀರ್ಮಾನಕ್ಕೆ ಬಂದರೆ ಬಡವರಿಗೆ ಕಷ್ಟವಾಗುತ್ತದೆ. ಹತ್ತಾರು ವರ್ಷಗಳ ಹಿಂದೆಯೇ ಮನೆಯನ್ನು ಕಟ್ಟಿಕೊಂಡು ವಾಸವಾಗಿದ್ದು, ಅವರು 5–10 ಅಡಿ ಹೆಚ್ಚಾಗಿ ಕಟ್ಟಿಕೊಂಡಿದ್ದರೂ ಅದಕ್ಕೆ ನೀವು ಸಕಾರಾತ್ಮಕವಾಗಿ ಸ್ಪಂದಿಸಬೇಕಾಗುತ್ತದೆ, ವಿಶೇಷ ವಿನಾಯಿತಿ ಕೊಡುವ ಕೆಲಸ ಮಾಡಬೇಕು ಎಂದು ವಿನಂತಿ ಮಾಡುತ್ತೇನೆ.

**ಶ್ರೀ ವಿ.ಶ್ರೀನಿವಾಸ್ ಪ್ರಸಾದ್:–** ಮೊದಲು 20x30, ಇಷ್ಟೇ ಏಕೆ 25x35, ಅಷ್ಟೇ ಏಕೆ 30x40ಕ್ಕೂ ವಿಸ್ತರಣೆ ಮಾಡಿ ಎಂದು ಕೇಳಬಹುದು. ಇದಕ್ಕೆ ಕೊನೆಯೇ ಇಲ್ಲವಾಗುತ್ತದೆ.

**ಶ್ರೀ ಸಿ.ಹೆಚ್.ವಿಜಯಶಂಕರ್:–** ಹೊಸದಾಗಿ ನಿವೇಶನ ಮಂಜೂರು ಮಾಡುವವರಿಗೆ ಈ ನಿಯಮ ಸರಿ ಇದೆ. ಆದರೆ ಈಗ ಕಟ್ಟಿರುವ ಮನೆಗಳನ್ನು ನೀವು ಸಕ್ರಮ ಮಾಡುವುದಕ್ಕೆ ಹೊರಟಿದ್ದೀರಿ. ವಾಸವಾಗಿರುವ ಮನೆಗಳಿಗೆ ಈ ವಿಧಿಯನ್ನು ಹಾಕುತ್ತಿರುವ ಹಿನ್ನೆಲೆಯಲ್ಲಿ ಬಹುಶಃ ಅಧಿಕಾರಿಗಳು ಅದಕ್ಕೆ **stick-on** ಆಗಿ, 5–10 ಅಡಿ ಹೆಚ್ಚಾಗಿ ಕಟ್ಟಿಕೊಂಡಿದ್ದರೆ ಅಂತಹ ಮನೆಗಳನ್ನು ಒಡೆದು ಹಾಕುವ ಪರಿಸ್ಥಿತಿ ನಿರ್ಮಾಣ ಆಗಬಹುದು. ಹೊಸದಾಗಿ ನಿವೇಶನ ಕೊಡುವ ಸಂದರ್ಭದಲ್ಲಿ 20x30ಕ್ಕೆ ಸೀಮಿತರಾಗಿ. ಆದರೆ, ಕಟ್ಟಿರುವ ಮನೆಗಳಿಗೆ ಈ ನಿಯಮ ಅನ್ವಯವಾದರೆ ಅದರಿಂದ ಉಂಟಾಗುವ ಪರಿಸ್ಥಿತಿ ಕಡೆ ತಾವು ಗಮನಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಒಂದು ಕಡೆ ತಾವು ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಚಿಂತನೆ ಮಾಡುತ್ತಿದ್ದೀರಿ. ಇದು ಸ್ವಾಗತಾರ್ಹ ವಿಚಾರವಾಗಿದೆ. ಏಕೆಂದರೆ, ಯಾರು ನಿರಪರಾಧಿ ಇದ್ದಾನೋ ಅವನಿಗೆ ರಕ್ಷಣೆ ಕೊಡಬೇಕು ಎನ್ನುವುದು

ನಿಮ್ಮ ಚಿಂತನೆಯಾಗಿದೆ. ಅದನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ಇನ್ನೊಂದು ಕಡೆ, ನಗರ ಪ್ರದೇಶದ ವ್ಯಾಪ್ತಿಯಲ್ಲಿ ನಕಲಿ ಪ್ರಮಾಣ ಪತ್ರಗಳು ಸೃಷ್ಟಿಯಾಗಿವೆ. ನಕಲಿ ವ್ಯವಹಾರಗಳು ಬಹಳ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿವೆ. ಬಹಳ ದೊಡ್ಡ ಪ್ರಮಾಣದಲ್ಲಿ ಸರ್ಕಾರಿ ಆಸ್ತಿ ಈ ಹಿನ್ನೆಲೆಯಲ್ಲಿ ದುರುಪಯೋಗ ಆಗಿದೆ. ಇದರ ಕಡೆಗೂ ತಾವು ಗಮನಕೊಡಬೇಕಾಗುತ್ತದೆ. 11 ಲಕ್ಷ ಎಕರೆಗಿಂತ ಹೆಚ್ಚಿನ ಪ್ರಮಾಣದ ಭೂಮಿ, ಯಾರು ಉಳ್ಳವರಿದ್ದಾರೋ, ಬಲಾಢ್ಯರಿದ್ದಾರೋ ಅವರ ಸ್ವಾಧೀನದಲ್ಲಿದೆ ಎನ್ನುವಂಥ ಅಂಶ ರಾಜ್ಯಪಾಲರು ಕಳುಹಿಸಿರುವ ವರದಿಯಲ್ಲಿ ಇದೆ. ನಾನು ಖಾಸಗಿಯಾಗಿ ಮತ್ತು ಅರಣ್ಯ ಇಲಾಖೆಯ ಮಂತ್ರಿಯಾಗಿ ಕೆಲಸ ಮಾಡಿರುವ ಹಿನ್ನೆಲೆಯಲ್ಲಿ, 10-20-50 ಎಕರೆ ಸರ್ಕಾರಿ ಭೂಮಿಯನ್ನು ಯಾರು ಆಕ್ರಮಣ ಮಾಡಿಕೊಂಡು ಕುಳಿತುಕೊಂಡಿದ್ದಾರೋ ಅಂಥವರನ್ನು ತೆರವುಗೊಳಿಸಿ, ಆ ಭೂಮಿಯನ್ನು ವಾಪಸ್ಸು ತೆಗೆದುಕೊಳ್ಳುವ ಕೆಲಸಕ್ಕೆ ಆದ್ಯತೆ ಕೊಡಬೇಕು ಮತ್ತು ಅದು ತಮ್ಮ ನೇತೃತ್ವದಲ್ಲಿ ಆಗಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ 20x30 ಚದರ ಅಡಿ ಅಳತೆಯಲ್ಲಿ ಕಟ್ಟಿಕೊಂಡಿರುವ ಮನೆಗಳನ್ನು ಸಕ್ರಮಗೊಳಿಸಬೇಕು ಎನ್ನುವ ಚಿಂತನೆ ಸರ್ಕಾರದ್ದಿರಬಹುದು. ಆದರೆ, ಭೂಮಾಫಿಯಾದವರಿಗೆ ಬೆಂಗಳೂರು ನಗರದಲ್ಲಿ ನೀವಾಗಿ ನೀವು ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಬೆಂಗಳೂರು ನಗರದಲ್ಲಿ **contractors**, ಬೇರೆ ಬೇರೆ **builders** ಗಳು ಅವರವರ ಕೆಲಸಗಾರರಿಗೆ ಸರ್ಕಾರಿ ಭೂಮಿಯಲ್ಲಿ ಶೆಡ್ ಹಾಕಿಸಿ ಕೊಟ್ಟಿರುತ್ತಾರೆ. ಇಂಥದ್ದನ್ನು ಅವರ ಹೆಸರಿಗೆ **confirm** ಮಾಡಿದರೆ ಮುರನೆ ದಿವಸವೇ ಇಂಥವರು ತಮ್ಮ ಹೆಸರಿಗೆ ಮಾಡಿಕೊಳ್ಳುತ್ತಾರೆ. ಇವತ್ತು ಎಲ್ಲಾ **Slum Board area** ಗಳಲ್ಲಿ ಇದೇರೀತಿ ನಡೆಯುತ್ತಿದೆ. ಎಲ್ಲಾ ಸರ್ಕಾರಿ ಭೂಮಿಯಲ್ಲಿ ಶೆಡ್ ಹಾಕಿಸುವುದು, ನಂತರ ಅವರ ಹೆಸರಿನಲ್ಲಿ ರೆಗ್ಯುಲರೈಸ್ ಮಾಡಿದರೆ ಅವರನ್ನು ಖಾಲಿ ಮಾಡಿಸಿ ತಾವು ಪಡೆದುಕೊಳ್ಳುತ್ತಾರೆ.

ಹೀಗಾಗಬಾರದು ಎಂದು, ಅಲ್ಲಿದ್ದವರಿಗೆಯೇ ಆ ಮನೆ ಆಗಬೇಕು ಎಂದು 1994ರಲ್ಲಿ **identification** ಕೊಡಿಸಿದ್ದೇ ಆ ಉದ್ದೇಶದಿಂದ ಎನ್ನುವುದನ್ನು ಮರೆಯಬಾರದು. ಈ ಪ್ರಾಪರ್ಟಿಯನ್ನು ನೀವು ಬಡವರಿಗೆ **confirm** ಮಾಡಿದರೆ ಅದು ಅವರಿಗೇ ದಕ್ಕಬೇಕು ಎನ್ನುವ ವಿಚಾರವಾಗಿ ಇದರಲ್ಲಿ ಯಾವುದೇ specific clause ಇಲ್ಲ. ಇವತ್ತು ನೀವು **confirm** ಮಾಡಿದರೆ ನಾಳೆ ಆತ ಅದನ್ನು ಮಾರಿಕೊಳ್ಳಬಹುದು. ಬೆಂಗಳೂರು ಸಿಟಿ 18 ಕಿ.ಮೀ. ಒಳಗಿರುವ ಜಾಗ ಎಂದರೆ ಬಹಳ ಬೆಲೆಯುಳ್ಳದ್ದಾಗಿರುತ್ತದೆ. ಒಂದು ಎಕರೆಗೆ ₹ 10 ಕೋಟಿ, ₹ 20 ಕೋಟಿ ಬೆಲೆ ಇರುತ್ತದೆ. ಒಂದು ಕಡೆ ನೀವು ಸರ್ಕಾರದ ಆಸ್ತಿಯನ್ನು ಉಳಿಸಬೇಕಾದರೆ ಒತ್ತುವರಿ ತೆರವು ಮಾಡಿಸಬೇಕು ಎಂದು ಹೇಳುತ್ತೀರಿ, ಇನ್ನೊಂದು ಕಡೆ, ರೆಗ್ಯುಲರೈಸ್ ಮಾಡಬೇಕು ಎಂದು ಹೇಳುತ್ತೀರಿ. ಈ ಯೋಜನೆಯಲ್ಲಿ ಶೇಕಡ 20–25ರಷ್ಟು ಜನ ಬಡವರಿಗೆ ಅನುಕೂಲವಾಗಬಹುದು. ಇನ್ನೂ ಶೇಕಡ 75ರಷ್ಟು ಭೂಮಿ **land mafia**ಗೆ ಹೋಗುತ್ತದೆ ಎನ್ನುವ ಮಾತನ್ನು ನಿಮ್ಮ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ವಿ.ಶ್ರೀನಿವಾಸ ಪ್ರಸಾದ್:–** ಅತಿಕ್ರಮಣವನ್ನು ತೆರವುಗೊಳಿಸಬೇಕು ಎನ್ನುವ ಉದ್ದೇಶದಿಂದ ಇದನ್ನು ತರುತ್ತಿದ್ದೇವೆ. ಇವರು BPL ಕುಟುಂಬಕ್ಕೆ ಸೇರಿದವರಾಗಿರುತ್ತಾರೆ. . . .

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಗಳೆ, contractors ಮತ್ತು builders ಇಂತಹ ಭೂಮಿಯಲ್ಲಿ ಶೆಡ್‌ಗಳನ್ನು ಹಾಕಿಕೊಟ್ಟಿರುತ್ತಾರೆ. ಹೊರ ರಾಜ್ಯದವರು ಇಲ್ಲಿಗೆ ಬಂದು ಸರ್ಕಾರಿ ಭೂಮಿಯನ್ನು ಅತಿಕ್ರಮಣ ಮಾಡಕೊಂಡಿರುತ್ತಾರೆ. ನೀವು ಅವರಿಗೆ confirm ಮಾಡಿದ ತಕ್ಷಣ ಅವರನ್ನು ಖಾಲಿ ಮಾಡಿಸಿ ಇನ್ನೊಂದು ಕಡೆ ಶೆಡ್ ಹಾಕಿಕೊಡುತ್ತಾರೆ. ಇಂಥದ್ದನ್ನು ನಾನು ಕಣ್ಣಾರೆ ನೋಡಿದ್ದೇನೆ. ಇಂತಹ ಕೆಲಸವನ್ನು ನಮ್ಮ ಕೆಲವು ರಾಜಕಾರಣಿಗಳೇ ಮಾಡುತ್ತಿದ್ದಾರೆ. ಅದನ್ನು ನಾನೇ practical ಆಗಿ ನೋಡಿದ್ದೇನೆ. ಅದನ್ನು ನಮ್ಮ ರಾಜಕಾರಣಿಗಳೇ ಮಾಡಿದ್ದಾರೆ. Shift ಮಾಡಿಕೊಂಡು ದುಡ್ಡು ಮಾಡಿಕೊಂಡಿದ್ದಾರೆ. ಆದ್ದರಿಂದ ನೀವು confirm ಮಾಡಿದ ಮೇಲೆ ಆ ಜಾಗವನ್ನು ಮಾರಬಾರದು. ಅದನ್ನು ಬೇರೆ

ವರ್ಗಾವಣೆ ಮಾಡಿದರೆ ಅದು ಸರ್ಕಾರಕ್ಕೆ ಬರಬೇಕು ಎಂದು ಏನಾದರೂ clause ಇರಬೇಕು ಎನ್ನುವುದು ನನ್ನ ಅಭಿಮತ.

**ಶ್ರೀ ಭಾನುಪ್ರಕಾಶ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಸ್ಪಷ್ಟೀಕರಣಕ್ಕೋಸ್ಕರ ಇದನ್ನು ಸೇರಿಸಬೇಕೆಂದು ಕೇಳುತ್ತಿದ್ದೇನೆ. ವಿಧೇಯಕದಲ್ಲಿ 18 ಕಿಲೋಮೀಟರ್, 10 ಕಿಲೋಮೀಟರ್, 3 ಕಿಲೋಮೀಟರ್ ಎಂದು ಅಂತರವನ್ನು ನಮೂದಿಸಿದ್ದಾರೆ. ಬಹಳ ವ್ಯವಹಾರಿಕವಾಗಿ ಇವರ ಹತ್ತಿರ ಮೀಟಿಂಗ್ ಮಾಡಿದಂತಹ ಸಂದರ್ಭದಲ್ಲಿ N.O.C. ಗಳನ್ನು ಕೇಳುವುದಕ್ಕೆ ಹೋದಾಗ 3 ಕಿಲೋಮೀಟರ್ ಎಲ್ಲಿಂದ ಎಂದು. ಕೆಲವರು ಬಸ್ ನಿಲ್ದಾಣದಿಂದ ಮೂರು ಕಿಲೋಮೀಟರ್ ಎಂದು ಹೇಳುತ್ತಾರೆ, ಕೆಲವರು ಆ ಊರಿನ ಕೊನೆ ಗಡಿ ಎಂದು ಹೇಳುತ್ತಾರೆ. ಕೆಲವರು ಸರ್ವೆ ನಂಬರ್ ಎಂದು ಹೇಳುತ್ತಾರೆ, ಈ ರೀತಿ ಬಹಳ ವಿಚಿತ್ರವಾದ ರೀತಿಯಲ್ಲಿ interpretation ಗಳು ನಡೆಯುತ್ತಿವೆ. ಹಾಗಾಗಿ ಕಿಲೋಮೀಟರ್ ಎಲ್ಲಿಂದ ಎನ್ನುವುದನ್ನು ಸ್ಪಷ್ಟವಾದ ಆದೇಶದೊಂದಿಗೆ ಸರ್ಕಾರ ಇದನ್ನು ತಿದ್ದುಪಡಿ ಮಾಡಬೇಕೆಂದು ನನ್ನ ಪ್ರಾರ್ಥನೆ. ಇಲ್ಲದಿದ್ದರೆ ಸ್ಥಾನೀಯ ಅಧಿಕಾರಿ ಎಷ್ಟು ಕಿಲೋಮೀಟರ್ ದೂರ ಎನ್ನುವುದನ್ನು ಅವರು ನಿರ್ಧಾರ ಮಾಡುತ್ತಾರೆ. ಎಲ್ಲಿಯವರೆಗೆ ಎಂದರೆ ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ, ಯಾವುದೋ ಒಂದು ಸರ್ವೆ ನಂಬರ್‌ಗೆ ಆ ಕಿಲೋಮೀಟರ್ ಕೊನೆಯಾದರೆ ಇನ್ನೊಂದು ಸರ್ವೆ ನಂಬರ್ ಅದಕ್ಕೆ ಸೇರಿದರೆ ಅದರಿಂದ ಮುಂದಕ್ಕೂ ಕೂಡ ಮೂರು ಕಿಲೋಮೀಟರ್ ಎಂದು ಅರ್ಥೈಸಿರುವಂಥದ್ದು ಕೂಡ ವ್ಯಾವಹಾರಿಕವಾಗಿ ನಡೆದಿದೆ. ಮಾನ್ಯ ಹಿರಿಯ ಸಚಿವರು ಇದರ ಬಗ್ಗೆ ವಿಶೇಷವಾದ ಗಮನಹರಿಸಿ ಎಲ್ಲಿಂದ ಕಿಲೋಮೀಟರ್ ಎನ್ನುವುದನ್ನು ಸ್ಪಷ್ಟಪಡಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಶ್ರೀ ಎಂ.ಸಿ.ನಾಣಯ್ಯ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಡೆಗೆ ಸರ್ಕಾರವೇ ಒಂದು ತೀರ್ಮಾನಕ್ಕೆ ಬಂದಿದ್ದಾರೆಯೇ? ಸರ್ಕಾರಿ ಜಮೀನುಗಳು ನಗರ ಪ್ರದೇಶದ ಒಳಗಡೆ ಇರತಕ್ಕಂಥದ್ದನ್ನು ಕೂಡ ಈ ರೀತಿ ಅಕ್ರಮ ಪ್ರವೇಶ ಮಾಡಿಕೊಂಡು

ಅವೆಲ್ಲವೂ ಸಕ್ರಮ ಮಾಡಬೇಕೆನ್ನುವ ಪರಿಸ್ಥಿತಿಯಲ್ಲಿ ನಮ್ಮ ನಗರ ಪ್ರದೇಶಗಳನ್ನು ಈಗ ಅವರು ಎತ್ತಿಕೊಳ್ಳಲಿ. ಮಾನ್ಯ ಪುಟ್ಟಸ್ವಾಮಿಯವರು ಹೇಳಿದ್ದಾರೆ. ಇದರ ಲಾಭವನ್ನು ಯಾರಿಗೆ ಕೊಡುತ್ತಿದ್ದಾರೆ? ಇದರ ಲಾಭವನ್ನು ಯಾರಿಗೆ ಕೊಡುತ್ತಾರೆ ಎಂಬುದನ್ನು ಮಾನ್ಯ ಸಚಿವರು ಹೇಳಲಿ. ರಾಜ್ಯಪಾಲರು ಬರೆದಿರತಕ್ಕಂಥ ಪತ್ರದಲ್ಲಿ message ಇದೆಯಲ್ಲಾ ನಾನು ಹೇಳುತ್ತೇನೆ, that message is correct. ನಮಗೆ ಈಗ ಬದ್ಧತೆ ಬೇಕು. ಸರ್ಕಾರ ಜಮೀನುಗಳಲ್ಲಿ ಎಲ್ಲಾದರೂ ಇವತ್ತು ಸಮುದಾಯ ಭವನವನ್ನು ಕಟ್ಟಬೇಕಾಗುತ್ತದೆ, ಒಂದು ಅಂಗನವಾಡಿಯನ್ನು ಕಟ್ಟಬೇಕಾಗುತ್ತದೆ, ಒಂದು Revenue Office ನ್ನು ಕಟ್ಟಬೇಕಾಗುತ್ತದೆ ಅಥವಾ Co-operative Society ಗೆ ಒಂದು ಕಟ್ಟಡವನ್ನು ಕಟ್ಟಬೇಕಾಗುತ್ತದೆ. ಸರ್ಕಾರಕ್ಕೆ ಐದು ಸೆಂಟ್ಸ್ ಜಾಗ ಸಿಕ್ಕುವುದಿಲ್ಲ. ಏಕೆ ಜಾಗ ಸಿಕ್ಕುವುದಿಲ್ಲವೆಂದರೆ ಎಲ್ಲರೂ encroachment ಮಾಡಿಕೊಂಡಿದ್ದಾರೆ. ನಮ್ಮ ವ್ಯವಸ್ಥೆ ಎಲ್ಲಿಯವರೆಗೆ ತಲುಪಿದೆ ಎಂದರೆ, ಯಾರು ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡು ಹೋಗುತ್ತಾರೆ ಅವರೆಲ್ಲರಿಗೂ ಕೂಡ ವಿಧೇಯಕದ ಮುಖಾಂತರ ಅದನ್ನು ಸಕ್ರಮ ಮಾಡುವಂಥದ್ದನ್ನು ಮಾಡಿ ಅವರಿಗೆ ರಕ್ಷಣೆಯನ್ನು ಕೊಡತಕ್ಕಂಥದ್ದನ್ನು ಮಾಡಿದ್ದೇವೆ. ಯಾರಿಗೆ ಶಕ್ತಿ ಇರುವುದಿಲ್ಲ, ಯಾರು ಬಡವರು ಇರುತ್ತಾರೆ, ಯಾರು ಸರ್ಕಾರಕ್ಕೆ ಅರ್ಜಿಯನ್ನು ಹಾಕಿ 10-15 ವರ್ಷ ಕುಳಿತಿರುತ್ತಾರೆ ಅವರಿಗೆ ಒಂದು ಸೆಂಟ್ಸ್, ಎರಡು ಸೆಂಟ್ಸ್ ಜಾಗ ಕೊಡದಿರತಕ್ಕಂಥ ಪರಿಸ್ಥಿತಿ ಇವತ್ತಿಗೂ ಇದೆ. ಅವರು ಯಾರಿಗೂ ಸರ್ಕಾರದಿಂದ ಕೊಡುವುದಕ್ಕಾಗಲಿಲ್ಲ. ಕಂದಾಯ ಇಲಾಖೆಯಿಂದ ಬರತಕ್ಕಂಥದ್ದು ಏನು ಎಂದರೆ "no land is available for grant" ಎಂದು ಎಲ್ಲಾ ಜಿಲ್ಲೆಯಿಂದ ಬರುತ್ತಿದೆ. ಆದರೆ, ಈ ರೀತಿ encroachment ಮಾಡಿಕೊಂಡಿರುವಂಥವರಿಗೆ ನಾವೇ ಒಂದು ಶಾಸನವನ್ನು ರಚನೆ ಮಾಡುವುದರ ಮುಖಾಂತರ ಇದನ್ನು ಸಕ್ರಮ ಮಾಡಬೇಕೆಂದು ನಾವೇ ಕಾನೂನನ್ನು ರಚನೆ ಮಾಡಿಬಿಟ್ಟರೆ ಮತ್ತೆ ನಾವು ಕಾನೂನನ್ನು ಏಕೆ ಮಾಡಬೇಕು? ಯಾರಿಗೆ ಕಾನೂನು ಮಾಡುವುದು ಎಂದರೆ, ಸಹಕಾರ ಸಂಘ-ಸಂಸ್ಥೆಗಳಲ್ಲಿ ಸಾಲವನ್ನು ತೆಗೆದುಕೊಂಡಿರುವವರ ಬಹಳಷ್ಟು ಜನರಿದ್ದರು. ಪಾಪದ ಜನರು ಐದು ಸಾವಿರ, ಹತ್ತು ಸಾವಿರ

ರೂಪಾಯಿ ಸಾಲ ತೆಗೆದುಕೊಂಡಿರತಕ್ಕಂಥವರು ಯಾರಿದ್ದಾರೆ ಅವರು ಸಮಯಕ್ಕೆ ಸರಿಯಾಗಿ ಮರು ಪಾವತಿ ಮಾಡಿ ಸಾಲ ಪಡೆದುಕೊಂಡಿರತಕ್ಕಂಥವರಿಗೆ ಸಾಲ ಮನ್ನಾ ಯೋಜನೆ, ಸಾಲ ಬಡ್ಡಿ ಮನ್ನಾ ಯೋಜನೆಯಿಂದ ಲಾಭ ಸಿಕ್ಕಿದೆಯೇ? ಯಾರ್ಯಾರು ಎರಡು ಲಕ್ಷ, ಮೂರು ಲಕ್ಷ, ಹತ್ತು ಲಕ್ಷ, ಹದಿನೈದು ಲಕ್ಷ, ಇಪ್ಪತ್ತು ಲಕ್ಷ ತೆಗೆದುಕೊಂಡರು ಅವರು ಕೋಟಿಗಟ್ಟಲೆ ಸಂಪಾದನೆ ಮಾಡಿಕೊಂಡರು. 72 ಸಾವಿರ ಕೋಟಿ ರೂಪಾಯಿ ಕೇಂದ್ರ ಸರ್ಕಾರದ ಸಾಲ ಮನ್ನಾ ಯೋಜನೆಯಲ್ಲಿ ಯಾರು ತೆಗೆದುಕೊಂಡಿದ್ದಾರೆ? ಅದು ಮಾನ್ಯ ಸಚಿವರಿಗೆ ಗೊತ್ತಿದೆ. ಒಬ್ಬೊಬ್ಬ ವ್ಯಕ್ತಿ commercial bank ನಿಂದ ಸಾಲ ತೆಗೆದುಕೊಂಡವರಿಗೆ 50–60 ಲಕ್ಷ ರೂಪಾಯಿ ಲಾಭ ಆಗಿದೆ. ಅವರಿಗೆ Non-Performing Asset ಬಂದು ಬಿಟ್ಟಿತು. ಇದರ ಹಿಂದೆ ನಮ್ಮ ರಾಜಕೀಯ ಪಕ್ಷದವರು ಮತ್ತು ರಾಜಕೀಯವನ್ನು ಮಾಡುತ್ತಿರತಕ್ಕಂಥವರು ನಾವು ಇದ್ದೇವೆ. ಇದೆಲ್ಲಾ ಆಡಳಿತ ಪಕ್ಷದಲ್ಲಿದ್ದಾಗ ಬರುವುದು. ಈಗ ಚುನಾವಣೆ ಬರಬೇಕಾದರೆ ಇವೆಲ್ಲಾ ಬೇಕಲ್ಲವೆ? ಈ ಹಿಂದೆ ಗ್ರಾಮಾಂತರ ಪ್ರದೇಶದಲ್ಲಿ ಬಡವರು ಮನೆ ಕಟ್ಟಿಕೊಂಡಿರುವಂತಹ ಸಂದರ್ಭದಲ್ಲಿ ಒಂದು ಶಾಸನವನ್ನು ತಂದರು. ಆ ಸಂದರ್ಭದಲ್ಲಿ ಮಾನ್ಯ ಈಶ್ವರಪ್ಪನವರು ಇದ್ದರು. ಆಗ ನಾವು ಬಹಳ ದೊಡ್ಡ ಪ್ರಮಾಣದಲ್ಲಿ ಚರ್ಚೆಯನ್ನು ಮಾಡಿದ್ದೇವೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥವರು ಸರ್ಕಾರಿ ಜಮೀನಿನಲ್ಲಿ 20x30 ಅಡಿಯಲ್ಲಿ ಮನೆಗಳನ್ನು ಕಟ್ಟಿಕೊಂಡಿರುವಂಥವರು ಅಥವಾ ಗುಡಿಸಲುಗಳನ್ನು ಕಟ್ಟಿಕೊಂಡಿರುವಂಥವರಿಗೆ ಕೊಡಬೇಕೆಂದು ಬಂದಂತಹ ಸಂದರ್ಭದಲ್ಲಿ ನಾವು ಯಾರು ಬೇಡ ಎಂದು ಹೇಳಲಿಲ್ಲ. ಈಗ ಅದನ್ನು ತಂದು ನಗರ ಪ್ರದೇಶಗಳಲ್ಲೂ ಮಾಡಿಬಿಟ್ಟರೆ 30x40ಕ್ಕೆ 1200 sq.ft. ಆಯಿತು ಅಥವಾ 20x30ಕ್ಕೆ 600 sq.ft. ಆಯಿತು. ಬೆಂಗಳೂರು ಮಹಾನಗರ ಪಾಲಿಕೆಯ ಸರಹದ್ದಿನಲ್ಲಿರತಕ್ಕಂಥ ಸ್ಥಳದಲ್ಲಿ ಒಂದು square foot ಗೆ ಎಷ್ಟು? 1500, 2000, 3000 ರೂಪಾಯಿ ಇದೆ. 20x30 ಸೈಟ್‌ಗಳಿಗೆ ಕಂಟ್ರಾಕ್ಟ್‌ದಾರರು ಇದ್ದಾರಲ್ಲಾ ಆ ಒಬ್ಬೊಬ್ಬ ಕಂಟ್ರಾಕ್ಟ್‌ದಾರರು ಏನು ಮಾಡಿದ್ದಾರೆಂದರೆ ಕಂಟ್ರಾಕ್ಟ್‌ದಾರರ ಜೊತೆಯಲ್ಲಿ ಕೆಲಸ ಮಾಡುತ್ತಿರುವ ಕೂಲಿಗಾರರ ಹೆಸರಿನಲ್ಲಿ

ಕೆಲವು ಜಾಗಗಳಲ್ಲಿ ಶೆಡ್ ಹಾಕಿಕೊಂಡು ಬಿಟ್ಟಿದ್ದಾರೆ. ಆ ಶೆಡ್‌ನ ವಿಸ್ತಾರ ಎಷ್ಟಿದೆ ಎಂದರೆ, 100x120, 200x100 ಇದೆ. ಏಳೆಂಟು ಜನ ಕೂಲಿಗಳು ಶೆಡ್ ಹಾಕಿಕೊಂಡಿದ್ದಾರೆ. ಅದರ ವಿಸ್ತೀರ್ಣ ಎಷ್ಟಾಗುತ್ತದೆ ಎಂದರೆ, it may be about 10,000 square feet. ಇವತ್ತಿನ ಲೆಕ್ಕದಲ್ಲಿ ಒಂದೂವರೆ ಕೋಟಿ ರೂಪಾಯಿ ಆಯಿತು. ಇದನ್ನೆಲ್ಲಾ ಸಕ್ರಮ ಯಾರ ಹೆಸರಿನಲ್ಲಿ ಮಾಡುತ್ತಾರೆ? ಕೇವಲ ರಾಜಕಾರಣಕ್ಕೋಸ್ಕರ ಮಾಡಿಕೊಂಡು ಈ ಅಧಿಕಾರ ಗುತ್ತಿಗೆಗೋಸ್ಕರ, Vote Bank ಮಾಡುವಂಥದ್ದಕ್ಕೆ ಅಥವಾ ಇದರಲ್ಲಿ ಹಣ ಮಾಡುವ ಉದ್ದೇಶ ಬಹಳ ದೊಡ್ಡದಾಗಿದೆ. ನಗರ ಪ್ರದೇಶದೊಳಗೆ ಇರತಕ್ಕಂಥ ಈ ಭೂಮಾಫಿಯಾಗಳು ಅಲ್ಲಿ ಇಲ್ಲಿ encroachment ಮಾಡಿಕೊಂಡಿದ್ದಾರಲ್ಲಾ ಅವರೆಲ್ಲರಿಗೂ ಇದನ್ನು ಸಕ್ರಮ ಮಾಡಿಕೊಟ್ಟರೆ ಯಾರ್‍ಯಾರ ಹೆಸರಿನಲ್ಲಿ ಮಾಡುತ್ತಾರೆ? ಎಲ್ಲರಿಗೂ ಸಕ್ರಮ ಮಾಡಬೇಕಾದರೆ ಸರ್ಕಾರ ಏನು ಷರತ್ತುಗಳನ್ನು ಹಾಕಿದೆ? ಯಾರಿಗೆ ಸಕ್ರಮ ಮಾಡಬಹುದು ಎಂದು ಸರ್ಕಾರ ಷರತ್ತನ್ನು ಹಾಕಿದೆಯೇ? ಬಡವರು ಯಾರು ಇದ್ದಾರೆ ಅಥವಾ ಬಡತನ ರೇಖೆಗಿಂತ ಕೆಳ ಭಾಗದಲ್ಲಿದ್ದವರಿಗೆ ಮಾಡಿದ್ದಾರೆಯೇ? ನಾವು ಗ್ರಾಮಾಂತರ ಪ್ರದೇಶದಲ್ಲಿ ಮಾಡಬೇಕಾದರೆ ಬಡವರು ಯಾರಿದ್ದಾರೆ, ಬಡತನ ರೇಖೆಗಿಂತ ಕೆಳ ಭಾಗದಲ್ಲಿರತಕ್ಕಂಥವರು ಯಾರಿದ್ದಾರೆ, 20x30, 30x40 ಸೈಟ್ ಮಾಡಿಕೊಂಡಿರತಕ್ಕಂಥವರಿಗೆ ಮಾತ್ರವೇ ಹೊರತು ಬಾಕಿ ಯಾರಿಗೂ ಇಲ್ಲ ಎಂದು ನಾವು ಮಾಡಿದ್ದೆವು. ಅದನ್ನು ಇದಕ್ಕೆ ಏಕೆ ತರಲಿಲ್ಲ? Guidelinesನಲ್ಲಿ ತರುತ್ತಾರೆಯೇ? Guidelines ಮಾಡಬೇಕೆಂದು ಹೊರಟಿದ್ದಾರೆ, ಸಕ್ರಮ ಮಾಡಬೇಕಾದರೆ guidelines ಒಂದನ್ನು ಹಾಕಿಕೊಂಡಿದ್ದಾರೆ. ಆದರೆ, ನಾವು ಗ್ರಾಮಾಂತರ ಪ್ರದೇಶದಲ್ಲಿ ಸಕ್ರಮ ಮಾಡಬೇಕೆಂದು ಆ ವಿಧೇಯಕವನ್ನು 94(c) ಯಲ್ಲಿ ತಂದಾಗ ಅದನ್ನು ಕಾನೂನಿನಲ್ಲೇ ನಾವು ಅಳವಡಿಸಿಕೊಂಡು ಬಿಟ್ಟೆವು. ಯಾರಿಗೆ ಕೊಡಬೇಕು, ಯಾರಿಗೆ ಕೊಡಬಾರದು ಎಂದು ಕಾನೂನಿನಲ್ಲೇ ಅಳವಡಿಸಿದ್ದೆವು. ಈಗ ಕಾನೂನಿನಲ್ಲಿ ಅಳವಡಿಸಿರತಕ್ಕಂಥದ್ದು ಇಲ್ಲ. ಮಾನ್ಯ ಮಂತ್ರಿಗಳಿಗೆ ಸಾಮಾಜಿಕ ಕಳಕಳಿ ನಮಗಿಂತಲೂ ಬಹಳಷ್ಟು ಹೆಚ್ಚು ಇದೆ. ಆದರೆ, ಈ ಜಮೀನುಗಳನ್ನು ಕಬಳಿಸಿಕೊಂಡು ಭೂಮಾಫಿಯಾ ಕೈಯಲ್ಲಿ ನಾವು ಸಿಕ್ಕಿ ಹಾಕಿಕೊಂಡು land

grabbers ಮತ್ತು dons ಇವರ ಕೈಗೆಲ್ಲಾ ಮಾಡುವಂಥದ್ದಕ್ಕೆ ಈ regularization ತಂದರೆ ನಿಜವಾಗಿಯೂ ಯಾವುದೇ ಸರ್ಕಾರ ಈ ರೀತಿಯ ಕಾನೂನನ್ನು ತಂದು, ಒಂದು ಕಡೆ ಸರ್ಕಾರದವರು encroachment ಮಾಡಿಕೊಂಡಿರುವುದನ್ನು ಕಿತ್ತು ಹಾಕಿದ್ದರೆ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲು ಮಾಡಿ ಎಂದು ಹೇಳುವ ಕಾನೂನು ನಮ್ಮಲ್ಲಿ ಇದೆ. ಇದು 1990-91ರ ಕಾನೂನು. ಯಾರಾದರು ಒಬ್ಬ ಸರ್ಕಾರಿ ಜಮೀನನ್ನು ಅತಿಕ್ರಮಣ ಮಾಡಿಕೊಂಡಿರತಕ್ಕಂಥವನು ಅತಿಕ್ರಮಣ ಮಾಡಿರುವ ಜಮೀನನ್ನು ಬಿಡಬೇಕು, ಅವನು ಬಿಡದಿದ್ದರೆ ಅವನ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲು ಮಾಡಬೇಕೆನ್ನುವ ಕಾನೂನು ನಮ್ಮಲ್ಲಿ ಇದೆ. ಹಾಗಾದರೆ ಇದನ್ನೆಲ್ಲಾ ಸಕ್ರಮ ಮಾಡಿದರೆ ಆ ಕಾನೂನನ್ನು repeal ಮಾಡಿಬಿಡಲಿ. ಆ ಕಾನೂನು ಏಕೆ? ಈ ವಿಷಯದಲ್ಲಿ ರಾಜ್ಯಪಾಲರು ಒಂದು messageನ್ನು ಕಳುಹಿಸಿರುವುದು ತಪ್ಪಾ? ಬಾಕಿ ಇರತಕ್ಕಂಥ ವಿಷಯಗಳಲ್ಲಿ ನಮಗೆ ಭಿನ್ನಾಭಿಪ್ರಾಯಗಳು ಉಂಟು. ನಾನು ಇಲ್ಲ ಎಂದು ಹೇಳುವುದಕ್ಕೆ ತಯಾರಿಲ್ಲ. ಬೇಕಾದಷ್ಟು ಭಿನ್ನಾಭಿಪ್ರಾಯಗಳು ನಮಗೂ ಉಂಟು. ಮಾನ್ಯ ರಾಜ್ಯಪಾಲರು ತೆಗೆದುಕೊಂಡಿರುವಂತಹ ಕೆಲವು ತೀರ್ಮಾನಗಳಲ್ಲಿ ನಿಜವಾಗಿಯೂ ನಮಗೆ ಭಿನ್ನಾಭಿಪ್ರಾಯ ಉಂಟು. ಭಿನ್ನಾಬಿಪ್ರಾಯಗಳು ಇದ್ದಂತಹ ಸಂದರ್ಭದಲ್ಲಿ ಅವರು ಕಳುಹಿಸಿರತಕ್ಕಂಥ ಈ ಮೆಸೆಜ್ ಇದೆಯಲ್ಲಾ, ಹಾಗಾದರೆ ಸರ್ಕಾರಕ್ಕೆ ಎ.ಟಿ.ರಾಮಸ್ವಾಮಿರವರ committee ಏಕೆ ಬೇಕು, ಬಾಲಸುಬ್ರಮಣ್ಯಂರವರ committee ಏಕೆ ಬೇಕು? ಹಾಗಾದರೆ ಎಲ್ಲವನ್ನು ಸಕ್ರಮ ಮಾಡಿಬಿಡಿ. ಈಗ 12 ಲಕ್ಷ ಎಕರೆ ಸರ್ಕಾರಿ ಜಮೀನು, 5 ಲಕ್ಷ ಎಕರೆ ಅರಣ್ಯ ಜಮೀನು, 17 ಲಕ್ಷ ಎಕರೆಗಳನ್ನು ಮಾಡಿರತಕ್ಕಂಥದ್ದು. ಬೆಂಗಳೂರು ನಗರದ ಒಳಗಡೆ ಸುಮಾರು 44 ಸಾವಿರ ಎಕರೆ ಜಮೀನು ಮಾಡಿದ್ದಾರೆ ಎಂದು ಎ.ಟಿ.ರಾಮಸ್ವಾಮಿಯವರ ವರದಿಯಲ್ಲಿ ಹೇಳಿದ್ದಾರೆ. ಹಾಗಾದರೆ ಈ ರೀತಿ ತರುವುದಾದರೆ ಈ 30x40 ಏಕೆ? ಯಾರ‍್ಯಾರು ಎಷ್ಟೆಷ್ಟು ಮಾಡಿಕೊಂಡಿದ್ದಾರೆ ಅವರೆಲ್ಲರಿಗೂ ಸಕ್ರಮವನ್ನು ಮಾಡಿಬಿಟ್ಟರೆ ಮುಂದಿನ ಚುನಾವಣೆಗೆ ಯಾರು ಒಂದು ನಯಾ ಪೈಸೆಯನ್ನು ಖರ್ಚು ಮಾಡಬೇಕಾಗಿಲ್ಲ. ಅವರೇ ಯಾರ‍್ಯಾರು ಚುನಾವಣೆಗೆ ನಿಲ್ಲುತ್ತಾರೆ

ಅವರಿಗೆಲ್ಲಾ ಹಣ ಕೊಟ್ಟುಬಿಟ್ಟು ನಿಮ್ಮನ್ನೆಲ್ಲಾ ಗೆಲ್ಲಿಸಿಬಿಡುತ್ತಾರೆ. ಎಲ್ಲರೂ ನಿಮ್ಮನ್ನು ಗೆಲ್ಲಿಸುತ್ತಾರೆ. ನೀವು ಏನು ಮಾಡಬೇಕಾಗಿಲ್ಲ. ಅದಕ್ಕೆ ನಾನಂತೂ ತಯಾರಾಗಿಲ್ಲ. ದಯವಿಟ್ಟು ಈ ಕೆಲಸವನ್ನು ಮಾಡಬೇಡಿ. ಇದು ದೊಡ್ಡ ಪಾಪದ ಕೆಲಸ. ಪಾಪದವರಿಗೆ, ಚಿಕ್ಕವರಿಗೆ, ಬಡವರಿಗೆ, 10x20 ಅಳತೆಯ ನಿವೇಶನದವರಿಗೆ ಸಕ್ರಮವನ್ನು ಮಾಡಬೇಕಾಗುತ್ತದೆ. ಕೊಳಚೆ ಪ್ರದೇಶದವರಿಗೆ ನಾವು ಇನ್ನೂ ಮನೆಗಳನ್ನು ಕಟ್ಟಿಕೊಡುವುದಕ್ಕಾಗಲಿಲ್ಲ. Slum ನಲ್ಲಿ ಇರತಕ್ಕಂಥವರಿಗೆ ಇನ್ನು ಕೂಡ ನಾವು ಮಾಡುವುದಕ್ಕಾಗಲಿಲ್ಲ. ಈಗ ನಾವು ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಹಾಗಾದರೆ ಏಕೆ ಈ ತಿದ್ದುಪಡಿಯನ್ನು ತಂದಿದ್ದಾರೆ? ರಾಜ್ಯಪಾಲರು ಅದನ್ನು ಹಿಂದಕ್ಕೆ ಕಳುಹಿಸಿದ ಮೇಲೆ ಅವರ ಮೇಲೆ ಬಹಳ ದೊಡ್ಡದಾದ ಗೂಬೆಯನ್ನು ಕೂರಿಸಿದರು. ಎಲ್ಲೋ ಒಂದು ಕಡೆ ಒಳ್ಳೆಯ ಕೆಲಸವನ್ನು ಮಾಡಿದಾಗ ಅವರು ಒಳ್ಳೆಯದನ್ನು ಮಾಡಿದ್ದಾರೆಂದು ಒಪ್ಪಿಕೊಳ್ಳೋಣ. ಕೆಟ್ಟ ಕೆಲಸವನ್ನು ಮಾಡಿದಾಗ ಅವರು ಕೆಟ್ಟ ಕೆಲಸ ಮಾಡಿದ್ದಾರೆ ಎಂದು ಹೇಳುವ ಅಧಿಕಾರವನ್ನು ನಾವು ಇಟ್ಟುಕೊಳ್ಳೋಣ. ಆದರೆ, ಮಾನ್ಯ ಮಂತ್ರಿಗಳೇ, ಸುಪ್ರೀಮ್ ಕೋರ್ಟ್‌ನವರು ಹೇಳಿದ್ದಾರಲ್ಲಾ, ಸುಪ್ರೀಮ್ ಕೋರ್ಟ್‌ನವರು ಕೊಟ್ಟಿರತಕ್ಕಂಥ ಈ ಆದೇಶವನ್ನು legislation ತರುವಂಥದ್ದಕ್ಕೆ ಅದು ಪೂರಕವಾಗಿದೆ ಎಂದು ನೀವು ಯಾವ ರೀತಿ ಹೇಳುತ್ತೀರಾ ಹೇಳಿ? ನಿಜ, ಅದು 2011ರ judgment. ಹಳೆಯ judgment ಅಲ್ಲ. It is as follows:-

"The Hon'ble Supreme Court in its judgment dated 28/01/2011 in Jaipal Singh vs. State of Punjab has categorically said that long duration. …"

ನೀವು ಈಗ ಏನು ಮಾಡಿದ್ದೀರಿ? ಇದು long duration ಅಲ್ಲ. 2012ರ ಮಾರ್ಚ್ ಒಳಗಡೆ ಕಟ್ಟಿಕೊಂಡವರಿಗೆ ಮಾಡಿದ್ದೀರಿ. 2010ರಲ್ಲಿ ಕಟ್ಟಿಕೊಂಡವನಿಗೆ ಇದೆ. ಈಗ ಏನು ಕಾನೂನು ಬಂದಿದೆ, ಅದರ ಬಗ್ಗೆ ಚರ್ಚೆ ಆಗುತ್ತಿದೆಯಲ್ಲಾ, ಈ ಕಾನೂನು ಬರುತ್ತದೆ ಎಂದು ಗೊತ್ತಾದ ಕೂಡಲೇ ಏನಾಗಿದೆ ಎಂದರೆ ಕೂಡಲೇ ಎಲ್ಲೆಲ್ಲಿ ಜಾಗ ಇದೆ, ಅಂತಹ

ಕಡೆಗಳಿಗೆ ಹೋಗಿ 4–5 ಕಂಬಗಳನ್ನು ಹಾಕುವುದರೊಂದಿಗೆ ಶೆಡ್ ಹಾಕಿಕೊಂಡು ಜನರು ಕುಳಿತುಕೊಂಡಿದ್ದಾರೆ. Sir, it has happened now. ಇವರುಗಳು ಯಾರೂ ಸಹ ಪಾಪದವರು ಆಗಿರುವುದಿಲ್ಲ. ಇವರುಗಳಿಗೆ ಹೇಳಿಕೊಟ್ಟು, ನನ್ನ ಪರವಾಗಿ ಅಲ್ಲಿ ಕುಳಿತುಕೋ ಎಂದು ಹೇಳಿ ಕೂರಿಸುತ್ತಾರೆ. ಅವರುಗಳು ಯಾರು ಎಂದರೆ, land mafiaಗಳ ಕೈ ಕೆಳಗೆ ಕೆಲಸ ಮಾಡುವವರಿರುತ್ತಾರೆ. ಆ ಶೆಡ್‌ಗಳಿಗೆಲ್ಲಾ ನಂಬರ್‌ಗಳನ್ನು ಹಾಕಿಕೊಂಡು ಕುಳಿತಿರುತ್ತಾರೆ. ಈ ಕಾನೂನು ಬರುತ್ತದೆ, ಬಂದಾದ ಮೇಲೆ ಇದು ನಮಗೆ regularize ಆಗುತ್ತದೆ ಎಂದು ಗೊತ್ತಾದ ಮೇಲೆ ಅವರುಗಳೆಲ್ಲರೂ ಹೋಗಿ ಈ ಕೆಲಸವನ್ನು ಮಾಡಿಕೊಂಡಿರುತ್ತಾರೆ. ಮತ್ತೆ ನಿಮಗೆ ಎಲ್ಲಿ ಜಮೀನು ಉಳಿಯುತ್ತದೆ? ಬೇಡ ಸರ್. ನೀವು ಇದನ್ನು ಕೆಳಗಿನ ಮನೆಯಲ್ಲಿ pass ಮಾಡಿಕೊಂಡು ಬಂದಿದ್ದೀರಿ. ಏತಕ್ಕೆ pass ಮಾಡಿಕೊಂಡು ಬಂದಿದ್ದೀರಿ ಎಂದರೆ, ಇದರ ಹಿಂದೆಯೂ ಸಹ ಒಂದು ಲಾಬಿ ಇದೆ. ಇಲ್ಲವೆಂದು ಹೇಳಿದರೆ ನಾನು ಒಪ್ಪುವುದಿಲ್ಲ. There is a powerful lobby. ಈಗ ನಾವು ಎಲ್ಲಿಗೆ ತಲುಪಿದ್ದೇವೆಂದರೆ ನಾವು ಯಾವ ಒಂದು ಉದ್ದೇಶವನ್ನು ಇಟ್ಟುಕೊಂಡು ಈ legislation ತರಬೇಕೆಂದು ತಾವು ಹೇಳಿ. See, we are the law makers. Can we be under the mercy of someone else? ಈ ರೀತಿಯ legislation ಅನ್ನು ತರುವುದರ ಮೂಲಕ ನಾವು ಏನು ಮಾಡುತ್ತಿದ್ದೇವೆಂದರೆ 'we are also persons who can be bought' ಎನ್ನುವಂತಹ ಪರಿಸ್ಥಿತಿಯನ್ನು ನಾವು ನಿರ್ಮಾಣ ಮಾಡುತ್ತಿದ್ದೇವೆ.

**ಶ್ರೀ ಗೋ.ಮಧುಸೂದನ್:–** ಆ 20x30 ಸೈಟ್ ಬಗ್ಗೆ ತಾವು ಹೇಳಿದಿರಲ್ಲಾ, ಸಿಟಿಯಲ್ಲಿ ಇರುವಂತಹ ಯಾವುದೇ ಒಬ್ಬ ಬಿಪಿಎಲ್ ಕಾರ್ಡ್‌ದಾರನು ಕೊಂಡುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಆ 20x30 ಸೈಟ್ ಅಂದರೆ 600 ಚದುರ ಅಡಿಗಳು ಆಯಿತು, minimum 1000 ರೂ.ಗಳನ್ನಿಟ್ಟುಕೊಂಡರೂ ಸಹ minimum 6,00,000 ರೂಪಾಯಿಗಳಾಗುತ್ತದೆ. ಈ 6 ಲಕ್ಷ ರೂಪಾಯಿಗಳನ್ನು ಕೊಟ್ಟು ಯಾವ ಬಿಪಿಎಲ್ ಕಾರ್ಡ್‌ದಾರನು ಕೊಂಡುಕೊಳ್ಳುವುದಕ್ಕೆ ಸಾಧ್ಯ?

(ಗೊಂದಲ)

**Sri M. C. NANAIAH:-** I will come to that. ಇಲ್ಲಿ ಕೊಂಡುಕೊಳ್ಳುವ ಪ್ರಶ್ನೆ ಬರುವುದಿಲ್ಲ. ಯಾರು ಮನೆಯನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ, ಅವರಿಗೆ ಕೊಡುವ ವಿಚಾರ. ಶ್ರೀಯುತ ಕೃಷ್ಣ ಬೈರೇಗೌಡರಿಗೆ ನಾನು ಇಲ್ಲಿ ಒಂದು ವಿಚಾರವನ್ನು ಹೇಳಲಿಕ್ಕೆ ಬಯಸುತ್ತೇನೆ. ಯಾರು ಈ ಪಾಪದ ಬಿಪಿಎಲ್ ಕಾರ್ಡ್‌ದಾರರು ಇದ್ದಾರೆ, ಅವರು ನಿಮ್ಮ ಮನೆಯ ಪಕ್ಕದಲ್ಲಿರುವಂತಹ ಈ 20x30 ಸೈಟ್‌ನಲ್ಲಿ ಶೆಡ್ ಹಾಕುವುದಕ್ಕೆ ಬಿಡುತ್ತಾರೆಯೇ? ಹಾಕಿಕೊಂಡವರು ಯಾರು ಎಂದರೆ ಆ ಮನೆಯವನೇ ಬೇರೆ ಯಾರೋ ಒಬ್ಬರನ್ನು ಶೆಡ್ ಹಾಕಿಕೊಟ್ಟು ಕೂರಿಸಿರುತ್ತಾನೆ. ಎಲ್ಲಾ ಕಡೆ ನಡೆಯುತ್ತಿದೆ ಎಂದು ಹೇಳಬೇಡಿ. This is a racket. ಈ ಬೆಂಗಳೂರು ನಗರದ ಒಳಗಡೆ 1998 ರಿಂದ ಇಂತಹ ಪ್ರಕರಣಗಳು ನಡೆದುಕೊಂಡು ಬಂದಿರುತ್ತದೆ. ಈ racket ಇವತ್ತು, ನಿನ್ನೆಯದಲ್ಲ. ಈ ಬಗ್ಗೆ ನಾನೇ 1991ರಲ್ಲಿ ಕಾನೂನನ್ನು ತಂದಿರುತ್ತೇನೆ. ತಂದಿರುವ ಈ ಕಾನೂನನ್ನು 1994ರಲ್ಲಿ close ಮಾಡಬೇಕೆಂದು ಹೇಳಿದೆ. 1994 ಆದ ಮೇಲೆ ಇದನ್ನು ಮಾಡಲಿಕ್ಕೆ ಬಿಡಬಾರದು ಎಂದು ಹೇಳಿದೆ. ಕಡೆಗೆ ನಮಗೆಲ್ಲರಿಗೂ ಒತ್ತಾಯ ಬಂತು. ಕಡೆಗೆ 1998 ಅಕ್ಟೋಬರ್ 31ಕ್ಕೆ ಮುಕ್ತಾಯ ಮಾಡಬೇಕೆಂದು ತೀರ್ಮಾನಕ್ಕೆ ಬರಲಾಯಿತು. 1998 ಅಕ್ಟೋಬರ್ 31ಕ್ಕೆ ಅದು ಮುಗಿಯಬೇಕಾಗಿತ್ತು. ಇದು One Time Operation…

**ಶ್ರೀ ಕೃಷ್ಣಬೈರೇಗೌಡ (ಕೃಷಿ ರಾಜ್ಯ ಸಚಿವರು):–** ಮಾನ್ಯ ಸಭಾಪತಿಯವರೆ, ಈ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ಆದರೆ, ಮಾನ್ಯ ಸದಸ್ಯರು ಕೇಳಿದ್ದರಿಂದ ಅದರ ಬಗ್ಗೆ ಹೇಳುತ್ತಿದ್ದೇನೆ. ಮಾನ್ಯ ಸದಸ್ಯರು ಭೂ ಕಬಳಿಕೆಯ ವಿಚಾರವಾಗಿ ಹೇಳುತ್ತಿದ್ದಾರೆ. ಅದು ನಿಜವಾದಂತಹ ವಿಚಾರ. ಆದರೆ, ಭೂ ಕಬಳಿಕೆ ಎಕರೆಗಳಲ್ಲಿ ಆಗುತ್ತದೆ. ಯಾರೋ ಸರ್ಕಾರಿ ಜಾಗದಲ್ಲಿ ಬಡವರು ಮನೆ ಕಟ್ಟಿಕೊಂಡ ಕೂಡಲೇ ಅದನ್ನು ನಾವು ಭೂ ಕಬಳಿಕೆ ಎಂದು ಹೇಳಲಿಕ್ಕೆ ಆಗುವುದಿಲ್ಲ. ಮತ್ತೆ ಇನ್ನೊಂದು ವಿಚಾರವನ್ನು ಪರಿಗಣಿಸಬೇಕಾಗಿರುವುದು ಏನೆಂದರೆ, ಇದರಲ್ಲಿ

100 ಜನಕ್ಕೆ ಹಕ್ಕುಪತ್ರ ಸಿಕ್ಕುತ್ತದೆ ಎಂದು ತಿಳಿದುಕೊಳ್ಳಿ. 100ರಲ್ಲಿ ಕನಿಷ್ಠ 90 ಜನರು ಬಡವರು ಇರುತ್ತಾರೆ. ಇದರಲ್ಲಿ ಬೇರೆಯವರು ಸಹ ಸೇರಿಕೊಂಡಿರುತ್ತಾರೆ. ಇಲ್ಲವೆಂದು ನಾನು ಹೇಳುವುದಿಲ್ಲ. ಅವರಿಗೆ ನಾವು ತಪ್ಪಿಸಲಿಕ್ಕೆ ಹೋಗಿ 90 ಜನರು ಏನು ಮನೆಗಳನ್ನು ಕಟ್ಟಿಕೊಂಡಿದ್ದಾರೆ, ಆ ಮನೆಗಳನ್ನು ಕೆಳಗಡೆ ಇಳಿಸಲಿಕ್ಕೆ ಸಾಧ್ಯವೇ? ಅವರನ್ನು ನಾವು ಅಲ್ಲಿಂದ ಹೊರಗೆ ಹಾಕಲಿಕ್ಕೆ ಸಾಧ್ಯವೇ? ಅವರು ಬಡವರಿದ್ದಾರೆ. ತಾವು ಬಂದು ನೋಡಬಹುದು. ನನ್ನ ಮನೆಯಿಂದ ಕೇವಲ 20 ಮೀಟರ್ ದೂರದಲ್ಲಿನ ಖರಾಬ್ ಜಾಗದಲ್ಲಿ ಯಾವುದೋ ಕಾಲದಲ್ಲಿ ಮನೆಯನ್ನು ಕಟ್ಟಿಕೊಂಡಿದ್ದಾರೆ. ಇದರ ಜೊತೆಗೆ ಹಿಂದೆ Taluk Board ಎಂದು ಇದ್ದುದು ತಮಗೆ ಗೊತ್ತಿದೆ. Taluk Board ನಿಂದ ಹಕ್ಕುಪತ್ರವನ್ನು ಕೊಟ್ಟಿದ್ದಾರೆ. ಆದರೆ, ಅಂದು ಅಲ್ಲಿ ಅದಕ್ಕೆ ಸರಿಯಾಗಿ ನೋಂದಣಿ ಮಾಡಿರುವುದಿಲ್ಲ. ಯಾವುದೋ ಒಂದು ಹಕ್ಕುಪತ್ರವನ್ನು ಬರೆದುಕೊಟ್ಟುಬಿಟ್ಟಿದ್ದಾರೆ. ಇವತ್ತು ಅದಕ್ಕೆ ತಾಳೆಯಾಗುವಂತಹ ದಾಖಲೆಗಳಿಲ್ಲ. ಹೀಗಾಗಿ ಅವರದ್ದು, ಖಾತೆಯಾಗುತ್ತಲ್ಲ, ರಿಜಿಸ್ಟರ್ ಆಗುತ್ತಿಲ್ಲ, ಅವರಿಗೆ ಒಂದು ಸೂಕ್ತವಾದಂತಹ ದಾಖಲೆ ಇರುವುದಿಲ್ಲ. ಅವರಿಗೆ ನಾವು relief ಕೊಡಬೇಕಾಗುತ್ತದೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಅಂತಹವರು ಎಷ್ಟು ಜನರಿದ್ದಾರೆಂದು ನಿಮ್ಮ ಹತ್ತಿರ list ಇದೆಯೇ?

**ಶ್ರೀ ಕೃಷ್ಣಬೈರೇಗೌಡ:–** ಮಾನ್ಯ ಸದಸ್ಯರು ನಾನು ಹೇಳುವುದನ್ನು ಕೇಳಿಸಿಕೊಳ್ಳಬೇಕು. ನೀವು ನನ್ನ ಜೊತೆ ಬನ್ನಿ. ನಾನು ಕರೆದುಕೊಂಡು ಹೋಗಿ ತೋರಿಸುತ್ತೇನೆ. ನನ್ನ ಮನೆ ಎಲ್ಲಿದೆ ಎಂದು ತಮಗೆ ಗೊತ್ತಿದೆ. ನಾನು ಕರೆದುಕೊಂಡು ಹೋಗಿ ತೋರಿಸುತ್ತೇನೆ. ಅದು ನಮ್ಮ ಮನೆ ಎದುರುಗಡೆಯೇ ಇದೆ. ಹೀಗಾಗಿ, ಬಡವರು 20x30 ಸೈಟ್‌ನಲ್ಲಿ ಮನೆಯನ್ನು ಕಟ್ಟಿಕೊಂಡಿರುತ್ತಾರೆ. ಅಂತಹವರಿಗೆ ಈ ಕಾನೂನನ್ನು ಮಾಡಿದರೆ ಅನುಕೂಲವಾಗುತ್ತದೆ. ಭೂ ಕಬಳಿಕೆ ಮಾಡುವವರಿದ್ದಾರೆ, ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ ಈ ಕಾನೂನನ್ನು ಮಾಡಿದರೆ ಬಹುತೇಕವಾಗಿ ಬಡವರಿಗೆ ಅನುಕೂಲವಾಗುತ್ತದೆ. ಹಿಂದೆ ತಾವು ಒಂದು ಅವಕಾಶವನ್ನು

ಕೊಟ್ಟಿದ್ದೀರಿ. ಆದರೆ, ಅಂದು ಎಷ್ಟೋ ಜನ ಬಡವರು ಅರ್ಜಿಯನ್ನು ಹಾಕಿಕೊಳ್ಳುವುದಕ್ಕೆ ಆಗಲಿಲ್ಲ. ಈ ಕಾನೂನನ್ನು 1994ರಲ್ಲಿ close ಮಾಡಬೇಕೆಂದು deadline ಕೊಟ್ಟಿದ್ದೆವು ಎಂದು ತಾವು ಹೇಳಿದಿರಿ. ಸುಮಾರು ಜನರು ಅರಿವು ಇಲ್ಲದೇ ಇದ್ದವರು ಇದಕ್ಕೆ ಅರ್ಜಿಯನ್ನು ಹಾಕುವುದಕ್ಕೆ ಆಗಿರುವುದಿಲ್ಲ. ಅದಕ್ಕೋಸ್ಕರವೇ ಇನ್ನೊಂದು ಅವಕಾಶವನ್ನು ಕೊಡುತ್ತಿರುವುದಾಗಿದೆ ಅಷ್ಟೆ. ಇದರಲ್ಲಿ ಸ್ವಲ್ಪಮಟ್ಟಿಗೆ ದುರುಪಯೋಗ ಆಗಬಹುದು, ಆಗುವುದಿಲ್ಲವೆಂದು ಹೇಳಲಿಕ್ಕೆ ಆಗುವುದಿಲ್ಲ. ಆದರೆ, ಇದಕ್ಕೆ rules ಮಾಡುವಾಗ ಆದಷ್ಟು ಮಟ್ಟಿಗೆ ಅದಕ್ಕೆ ಕಡಿವಾಣ ಹಾಕುವುದಕ್ಕೆ ನಾವು ಪ್ರಯತ್ನ ಮಾಡಬಹುದು. ಆದರೆ, ಬಹುತೇಕವಾಗಿ ಯಾರೋ ಬಡವರು ಬಂದು, ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿರುವವರ ಮನೆಗಳನ್ನು ನಾವು ಇವತ್ತು demolition ಮಾಡಲಿಕ್ಕೆ ಆಗುವುದಿಲ್ಲ, ಅವರನ್ನು ಖಾಲಿ ಮಾಡಿಸುವುದಕ್ಕೂ ಆಗುವುದಿಲ್ಲ. ಇವತ್ತು ಈ ಕಡೆ ಅವರನ್ನು ನಾವು ತ್ರಿಶಂಕು ಪರಿಸ್ಥಿತಿಯಲ್ಲಿಟ್ಟಿದ್ದೇವೆ. ಆ ತ್ರಿಶಂಕು ಪರಿಸ್ಥಿತಿಗೆ ಒಂದು ಮೋಕ್ಷ ಕೊಡುವಂತಹ ಪ್ರಯತ್ನ ಇದಾಗಿದೆ.

**Sri M.C.NANAIAH:-** I entirely agree with him. 1994ರಲ್ಲಿ ಈ ಕಾನೂನನ್ನು cut-off date ಮಾಡಬೇಕೆಂದು ಹೇಳಿದ್ದೆವು. ಆಗ 1994 ಡಿಸೆಂಬರ್ ಒಳಗಡೆ ನೀವು ಅರ್ಜಿಗಳನ್ನು ಹಾಕಬೇಕೆಂದು ಹೇಳಿದ್ದೆವು. ಆ ವಿಚಾರವಾಗಿ ಎಲ್ಲವೂ ದೊಡ್ಡದಾಗಿ ಪ್ರಚಾರವಾಯಿತು. ಅಧಿಕಾರಿಗಳು ಎಲ್ಲಾ ಜಾಗಗಳಿಗೆ ಹೋಗಿ ಐಡೆಂಟಿಫೈ ಮಾಡಿಕೊಂಡು ಬಂದಿದ್ದಾರೆ. ಇವತ್ತು ನಾನು ಮಂತ್ರಿಗಳನ್ನು ಕೇಳುವುದೇನೆಂದರೆ, ಶ್ರೀಯುತ ಕೃಷ್ಣ ಬೈರೇಗೌಡರವರು ಹೇಳುವಂತಹ ವಿಚಾರಗಳು ಏನಿವೆ, ಅಂದರೆ ಆ ರೀತಿಯ ಪ್ರಕರಣಗಳು ಏನಿವೆ, ತಹಶೀಲ್ದಾರ್ ಕಚೇರಿಗಳಲ್ಲಿ ಆ ರೀತಿಯಲ್ಲಿ identify ಮಾಡಿರುವಂತಹದ್ದು, ಆ ರೀತಿಯಲ್ಲಿ ಅರ್ಜಿ ಹಾಕಿರುವಂತಹವರ ಪಟ್ಟಿಯಿದ್ದು, ಆ ಪಟ್ಟಿಯನ್ನು ಯಾವುದೋ ಕಾರಣಕ್ಕೆ ಕೊಟ್ಟಿಲ್ಲದೆ, ಈಗ ಆ ಒಂದು ಪಟ್ಟಿ ಇರಬೇಕಲ್ಲವೇ? ಅಂತಹ ಪಟ್ಟಿಗಳು ಇದ್ದಲ್ಲಿ ಅವುಗಳನ್ನು ಕೊಡುವುದು ಬೇಡವೆಂದು ಹೇಳಲಿಕ್ಕೆ ತಯಾರಿಲ್ಲ. ಆ ಪಟ್ಟಿಗಳನ್ನು ಕೊಡಲೇ

ಬೇಕಾಗುತ್ತದೆ. 25–30 ವರ್ಷಗಳಿಂದ ವಾಸ ಮಾಡುತ್ತಿರುವವರಿಗೆ ನಾವು ಕೊಡಲೇಬೇಕು. ಅರ್ಜಿಗಳು ಹಾಕದೇ ಬಾಕಿ ಇರುವಂತಹವರ ಮನೆಗಳು ಯಾವ ರೀತಿಯಲ್ಲಿರುತ್ತವೆಂದು ನಮಗೂ ಗೊತ್ತಾಗುತ್ತದೆ. ಅವುಗಳು ಬಹಳ ಹಳೆಯ ಮನೆಗಳಾಗಿರುತ್ತವೆ. ಆ ಸಂದರ್ಭದಲ್ಲಿ ಪ್ರತಿಯೊಂದು ಜಾಗಕ್ಕೆ ಹೋಗಿ ಸರ್ವೆ ಮಾಡಿ ಗುರುತು ಮಾಡಿಕೊಂಡು ಬಂದಿದ್ದಾರೆ. ಸರ್ವೆ ಮಾಡಿರುವಂತಹದ್ದು ನಿಮ್ಮ ತಹಶೀಲ್ದಾರ್ ಕಚೇರಿಯಲ್ಲಿ ಇರುತ್ತದೆ. ಈ land grab ಗಳು ಬಂದಿರುವಂತಹದ್ದು ಯಾವಾಗ ಎಂದರೆ 2002ನೇ ವರ್ಷ ಕಳೆದ ಮೇಲೆ ಬಂದಿರುವಂತಹದ್ದಾಗಿದೆ. 2002ನೇ ವರ್ಷ ಕಳೆದ ಮೇಲೆ ಈ ಭೂಮಿಗೆ ಚಿನ್ನದ ಬೆಲೆ ಏನು ಬಂತು, ಆ ಸಂದರ್ಭದಲ್ಲಿ ಶುರುವಾಗಿರುವಂತಹದ್ದು ಈ land grab. ಅಲ್ಲಿಯವರೆಗೆ land grab ಮಾಡುವವರು ಯಾರೂ ಇರಲಿಲ್ಲ. ಆ ಸಂದರ್ಭದಲ್ಲಿ ಯಾರಿಗೆ ಕೊಡಬೇಕೆನ್ನುವುದನ್ನು ನೀವು ಮನಸ್ಸಿನಲ್ಲಿಟ್ಟುಕೊಳ್ಳಿ. ನಾನು ಬೇಡವೆಂದು ಹೇಳುವುದಿಲ್ಲ. ಅವರು ಹೇಳಿರುವಂತಹ ಪ್ರಕರಣಗಳು ಸಹ ಇವೆ. ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ, ಅದರ ಲಾಭವನ್ನು ಬಾಕಿ ಇರುವಂತಹ ಎಷ್ಟೋ ಜನರು ಪ್ರಯೋಜನವನ್ನು ಪಡೆದುಕೊಂಡು ಅದೆಲ್ಲವನ್ನೂ ಕೊಡಲಿಕ್ಕೆ ಇರುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಬಿಟ್ಟರೆ ನಾವು ಸಾಮಾಜಿಕ ನ್ಯಾಯಕ್ಕೋಸ್ಕರ ಈ ಕಾನೂನನ್ನು ಮಾಡುತ್ತಿದ್ದೇವೆಯೇ ಎನ್ನುವ ವಿಚಾರವನ್ನು ಮಾನ್ಯ ಸಭಾಪತಿಯವರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಹಾಗಾದರೆ, ಈ ವಿಚಾರದಲ್ಲಿ ಒಂದು ಕೆಲಸವನ್ನು ಮಾಡಿ. ನೀವು ಈಗ ಕಾನೂನನ್ನು ತಂದಿದ್ದೀರಿ. ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಬಹುಶಃ ಇದು ಯಾರಿಗೂ ಅನ್ವಯವಾಗುವುದಿಲ್ಲ. ಅನ್ವಯ ಮಾಡಬೇಕೆಂದಾದರೆ, ಶ್ರೀಮಾನ್ ಕೃಷ್ಣಬೈರೇಗೌಡರು ಹೇಳಿರುವಂತಹ ಪ್ರಕರಣಗಳು ಇವೆ. ನಿಮಗೆ 1994ನೇ ಇಸವಿ ನಿಮಗೆ cut-off date ಆಗಬೇಕಾಗಿತ್ತು. ರಾಜ್ಯಪಾಲರ ಹೇಳಿದ ಪ್ರಕಾರ ಇದು 1994ನೇ ಇಸವಿಗೆ ಇದು ಆಗಬೇಕಾಗಿತ್ತು. ಅದು One Time Operaton ಎಂದು ನಾವು ಅವಕಾಶವನ್ನು ಕೊಟ್ಟಿದ್ದೆವು. 1994ನೇ ಇಸವಿಯಿಂದಲೇ ಅದನ್ನು ಮಾಡಲಿಕ್ಕೆ ಆಗದೇ ಈಗ 20 ವರ್ಷಗಳು

ಕಳೆದಾದ ಮೇಲೆ ಈ ಕಾನೂನು ಬರುತ್ತಿದೆ. ಹಾಗಾದರೆ, 20 ವರ್ಷಗಳ ಹಿಂದೆ ಮನೆಗಳನ್ನು ಕಟ್ಟಿರುವುದು ಎಂದು ನೀವು ತೀರ್ಮಾನ ಮಾಡಬೇಕಲ್ಲವೇ? ಇತ್ತೀಚಿನ ವರ್ಷಗಳಲ್ಲಿ ಎಲ್ಲರೂ ಈ ರೀತಿಯ ಕೆಲಸಗಳನ್ನು ಮಾಡಿಕೊಂಡು ಹೋಗಿದ್ದಾರೆ. ಯಾವುದೂ ಸಹ ಉಳಿದಿಲ್ಲ. ಆದ್ದರಿಂದ, ಯಾರಿಗೆ ಕೊಡಬೇಕೆಂದು ನಿಮ್ಮ ಕಾನೂನಿನಲ್ಲಿ ಇರುವುದಿಲ್ಲ. ಸ್ವಲ್ಪಮಟ್ಟಿಗೆ ಅವನು ಚೆನ್ನಾಗಿದ್ದು, ಅವನು 20x30 ಸೈಟ್‌ನಲ್ಲಿ ಮನೆಯನ್ನು ಕಟ್ಟಿಕೊಂಡಿದ್ದರೆ, ಅವನಿಗೆ ನೀವು ಆ ಮನೆಯನ್ನು ಕೊಡುತ್ತೀರಾ? ಕೆಲವು ಸಂದರ್ಭಗಳಲ್ಲಿ 10–20 ವರ್ಷಗಳಿಂದ ಮನೆಯನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದರೆ, ಅವನಿಗೆ ಎಷ್ಟು ಕೊಡಬೇಕಾಗುತ್ತದೆ, ಎಷ್ಟು ಕೊಡಬಾರದು ಎನ್ನುವುದು ಇದೆ. ಈ regularization ಈಗ ಏನು ಬಂದಿದೆ, ರೆವಿನ್ಯೂ ಸೈಟ್‌ಗಳ regularization ಏನು ಆಯಿತು,

**ಉಪ ಸಭಾಪತಿಯವರು:–** ಶ್ರೀಯುತ ನಾಣಯ್ಯನವರೆ. ...

**ಶ್ರೀ ಎಂ.ಸಿ.ನಾಣಯ್ಯ:–** ಇದನ್ನು ಮಾಡಬೇಕಾಗುತ್ತದೆ, ಇದರ ಹಿಂದೆ racket ಉಂಟು ಎಂದು ನಾನು ಹೇಳುವುದಿಲ್ಲ.

**ಉಪ ಸಭಾಪತಿಯವರು:–** ಈ ವಿಷಯ ಗೊತ್ತಿದೆ. ಬದಲಾವಣೆಗಳೂ ಏನಾದರೂ ಇದ್ದರೆ, ಸೂಚಿಸಿ.

**ಶ್ರೀ ಎಂ.ಸಿ.ನಾಣಯ್ಯ:–** ಈ legislation ಅನ್ನು ತರುವಂತಹ ಸಂದರ್ಭದಲ್ಲಿ ನನಗೂ ಮತ್ತು ಶ್ರೀಮಾನ್ ಈಶ್ವರಪ್ಪನವರಿಗೂ ಜಗಳ ಆಗಿದ್ದು ನಿಜ. Rural areaಕ್ಕೆ ತಂದಾಗ ನಾನು ಖಂಡಿತವಾಗಿಯೂ ಸಹ ನಾನು ಜಗಳ ಮಾಡಲಿಲ್ಲ. Urban areaಕ್ಕೆ ತಂದಾಗ ನಾನು ಅವರ ಜೊತೆ ಜಗಳ ಮಾಡಿದ್ದೇನೆ. ಯಾರಿಗೆ ಇದನ್ನು ತರುತ್ತಿದ್ದೀರಿ ಎಂದು ನಾನು ಅವರಿಗೆ ಕೇಳಿದ್ದೇನೆ. ಇದರ ಹಿಂದೆ ಬಹಳ ದೊಡ್ಡದಾಗಿರುವಂತಹ racket ಇದೆ. ಈ racket ಹಿಂದೆ ಬಹಳ ದೊಡ್ಡದಾಗಿರುವಂತಹ ಹಣದ ವ್ಯವಹಾರ ನಡೆದಿದೆ. ಇದರಲ್ಲಿ ಬಹಳಷ್ಟು ಜನ ರಾಜಕಾರಣಿಗಳು ಮತ್ತು ಇತರರು ಇದ್ದಾರೆ, ಇದರಲ್ಲಿ ಭೂ ಮಾಫಿಯಾಗಳು ಇದ್ದಾರೆಂದು ಆ ಸಂದರ್ಭದಲ್ಲಿ

ನಾನು ಹೇಳಿದೆ. ಆ ಸಂದರ್ಭದಲ್ಲಿ ಇದನ್ನು ಸುಮ್ಮನೆ ಬಿಟ್ಟಿದ್ದರೆ ಸರಿ ಹೋಗುತ್ತಿತ್ತು. ರಾಜ್ಯಪಾಲರ ಹತ್ತಿರ ಹೋದಾಗ ಅದನ್ನು ಅವರು reject ಮಾಡಿದ್ದರಿಂದ ಅದನ್ನು ಹಾಗೆಯೇ ಬಿಟ್ಟರು. ಆ ಕಾಲದಲ್ಲಿ ಅವರು ಬಿಟ್ಟರು. ಈಗ ನೀವು ಈ ಕಾಲದಲ್ಲಿ ತಂದಿದ್ದೀರಿ. ಅಂದರೆ, ಅವರು ಮತ್ತು ನೀವು ತಂದಿರುವುದಕ್ಕೆ ಸಾಮ್ಯತೆ ಇದೆಯೇ? Sir, I am totally against this bill. ಆದರೆ, ಒಂದು ವಿಷಯವನ್ನು ಹೇಳಲಿಕ್ಕೆ ಬಯಸುತ್ತೇನೆ. ಶ್ರೀಯುತ ಕೃಷ್ಣಬೈರೇಗೌಡರು ಹೇಳಿರುವಂತಹ ವಿಚಾರಕ್ಕೆ ಸಂಬಂಧಪಟ್ಟಂತೆ ನಿಮ್ಮ ರೆವಿನ್ಯೂ ಇಲಾಖೆಗಳಲ್ಲಿ ಇರುವಂತಹದ್ದನ್ನು ಸಂಪೂರ್ಣವಾಗಿ ಪರಿಶೀಲನೆ ಮಾಡಿ. There should be a proper inspection now. ಆ ತಪಾಸಣೆಯ ವರದಿಯನ್ನು ಕೊಟ್ಟರೆ ಅಂದರೆ, ನಿಮ್ಮ ತಪಾಸಣೆ ಎಂದರೆ ಆ Revenue Inspector ಏನಿದ್ದಾರೆ, ಅವರು ಹೋಗಿ ಮಹಜರ್ ಮಾಡಿ ವರದಿಯನ್ನು ಕೊಡುತ್ತಾರೆ. Revenue Inspector ಏನು ಮಾಡುತ್ತಾರೆಂದು ನಿಮಗೆಲ್ಲಾ ಗೊತ್ತಿದೆ. ಮಂತ್ರಿಗಳಿದ್ದಾರೆಂದು ತಿಳಿದುಕೊಂಡು ಆ ಹಳ್ಳಿಯ ಬಡ ಜನ ಬಂದು ನಿಮಗೆ ಅರ್ಜಿಯನ್ನು ಕೊಡಬಹುದು. ಆದರೆ, ಆ Revenue Inspector ಮತ್ತು ಗ್ರಾಮ ಲೆಕ್ಕಿಗರನ್ನು ಅವರು ಕಾಣಲಿಕ್ಕೆ ಸಾಧ್ಯವೇ ಇಲ್ಲ.

(8–00 ಗಂಟೆ)

That is the situation. ದಯವಿಟ್ಟು ವಿಚಾರ ಮಾಡಿ. ನೀವು ಇದನ್ನು ತರಲೇಬೇಕೆಂದು ತೀರ್ಮಾನ ಮಾಡಿದರೆ ನಾವು ಏನು ಮಾಡುವುದಕ್ಕಾಗುತ್ತದೆ? ಏನೂ ಮಾಡುವುದಕ್ಕಾಗುವುದಿಲ್ಲ. 1998 ಅನ್ನು ಒಂದು cut-off date ನಿಗದಿ ಮಾಡಿದ ಮೇಲೆ ಅಲ್ಲಿಂದ ಪುನಃ ಇದನ್ನು 5 ವರ್ಷ ಮುಂದೂಡಿ ಎಂದು ನಮಗೆ ಬಂತು. ಆಗ ಮುಖ್ಯಮಂತ್ರಿಯಾಗಿದ್ದಂತಹ ಮಾನ್ಯ ಜೆ.ಹೆಚ್.ಪಟೇಲ್ ಅವರು ಮತ್ತು ಆಗ ಕಾನೂನು ಮಂತ್ರಿಯಾಗಿದ್ದ ನಾನು, we did not allow it to happen. ಇದನ್ನು ಮೂರು ಸಲ ಮುಂದೂಡಿದ್ದೇವೆ. ಮತ್ತೆ ಮತ್ತೆ ಮುಂದೂಡಿ, ಮುಂದೂಡಿ 1998 ರಿಂದ 2013 ಕ್ಕೆ ಇದನ್ನು ತಂದಿದ್ದೇವೆ. ಪುನಃ ಪುನಃ ಇದನ್ನು ಮಾಡಿಕೊಂಡು ಬಂದಿದ್ದೇವೆ. ನಾಳೆ ವಿಧಾನ ಸೌಧದ ಸುತ್ತಮುತ್ತ

30x40 ಅಳತೆಯಲ್ಲಿ ಎಲ್ಲಿಯಾದರೂ ಕೂಡ ಅಕ್ರಮ ಮಾಡಿಕೊಂಡಿದ್ದರೆ ಅದನ್ನೂ ಕೂಡ ರೆಗ್ಯುಲರೈಸ್ ಮಾಡುವ ಪ್ರಸಂಗ ಬಂದೀತು, ದಯವಿಟ್ಟು ಇದರ ಬಗ್ಗೆ ಯೋಚನೆ ಮಾಡಿ ಎಂದು ಹೇಳಬಯಸುತ್ತೇನೆ. Subject to the condition, let there be a proper enquiry and survey. ಯಾರ್ಯಾರು ಇದ್ದಾರೆ ಎಂಬ ಬಗ್ಗೆ ಪರಿಶೀಲನೆ ಮಾಡಿ ನೋಡಲಿ. ಎಲ್ಲೆಲ್ಲಿ ಅರ್ಜಿ ಹಾಕಿದ್ದಾರೆ ಎಂಬುದನ್ನೂ ನೋಡಲಿ. ಮತ್ತು ಪೆಂಡಿಂಗ್ ಅರ್ಜಿಗಳು ಎಷ್ಟು ಇವೆ ಎಂಬುದನ್ನೂ ಕೂಡ ನೋಡಲಿ. ಇದೆಲ್ಲದರ ಜೊತೆಗೆ ಅರ್ಜಿ ಹಾಕದೇ ಇರುವವರ ಬಗ್ಗೆ ಕೂಡ ವಿಚಾರ ಮಾಡಿ ನೋಡಲಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ನನಗೆ ಎರಡು ನಿಮಿಷ ಅವಕಾಶವನ್ನು ಮಾಡಕೊಡಿ. ನೀವು ಆಗಲೇ ನನ್ನನ್ನು ಕರೆದಿದ್ದೀರಿ.

**ಉಪ ಸಭಾಪತಿಯವರು:-** ಈಗಾಗಲೇ ಸಾಕಷ್ಟು ಸಮಯ ಆಗಿದೆ. 8-00 ಗಂಟೆಯಾಗಿದೆ.

**ಶ್ರೀ ಅಶ್ವಥ್ ನಾರಾಯಣ್:-** ನಾವು ಇದರ ಬಗ್ಗೆ ಮಾತನಾಡಬೇಕೆಂದು ನಮ್ಮ ಹೆಸರುಗಳನ್ನು ಕಳಿಸಿದ್ದೇವೆ. ಇದು ಬಹಳ ಮುಖ್ಯವಾದದ್ದಾಗಿದೆ.

**ಶ್ರೀ ಡಿ.ವಿ.ಸದಾನಂದಗೌಡ:-** ಶಾಸಕರುಗಳು ಇಂತಹ ವಿಷಯಗಳಲ್ಲಿ ಚರ್ಚೆ ಮಾಡಬೇಕಾದ ಅಗತ್ಯವಿದೆ. ತಾವು ಅವರುಗಳಿಗೆ ಮಾತನಾಡಲು ಒಂದೆರಡು ನಿಮಿಷ ಅವಕಾಶ ಮಾಡಿಕೊಡಬೇಕೆಂದು ವಿನಂತಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಕೃಷಿ ಸಚಿವರು ಹೇಳಿದ ಹಾಗೆ ಇದರಲ್ಲಿ ಅನೇಕರು ಬಡವರಿದ್ದಾರೆ. ಶೇಕಡಾ 80-90 ಪರ್ಸೆಂಟ್ ಬಡವರಿದ್ದಾರೆ. ನಿಮ್ಮ ಸಲಹೆ ಸೂಚನೆಗಳನ್ನು ಕೊಡಿ.

**ಶ್ರೀ ಡಿ.ವಿ.ಸದಾನಂದಗೌಡ:-** ಇದರ ಸಾಧಕ-ಬಾಧಕಗಳು ಮತ್ತು ನೀವು ಇದರ ಬಗ್ಗೆ ಕಾನೂನುಗಳನ್ನು ರಚನೆ ಮಾಡುವ ಸಂದರ್ಭದಲ್ಲಿ ಮತ್ತು ಇದನ್ನು ಇಂಪ್ಲಿಮೆಂಟ್ ಮಾಡುವ ಬಗ್ಗೆ ಬೇಕಾದ ಗೈಡ್‌ಲೈನ್ಸ್

ಫ್ರೇಮ್ ಮಾಡುವ ಸಂದರ್ಭಗಳಲ್ಲಿ ಏನು ಆಗಬೇಕು ಎಂಬ ಬಗ್ಗೆ ಸಲಹೆಗಳನ್ನು ನಾವು ಕೊಡಬೇಕಲ್ಲವೇ? ಮಾನ್ಯ ನಾಣಯ್ಯನವರು ಹೇಳಿದ್ದಕ್ಕೆ ನೂರಕ್ಕೆ ನೂರರಷ್ಟು ನಮ್ಮದು ಸಹಮತ ಇದೆ. ಅದರಲ್ಲಿ ಎರಡು ಮಾತು ಇಲ್ಲ. ಆದರೆ ಇವತ್ತಿನ ಪರಿಸ್ಥಿತಿಯನ್ನು ಕೂಡ ನೋಡಬೇಕಾಗುತ್ತದೆ. ಇವತ್ತು ನಗರ ಪ್ರದೇಶದಲ್ಲಿ ಹಲವಾರು ವರ್ಷಗಳಿಂದ ಕೂತವರಿಗೆ ಅದನ್ನು ಸಕ್ರಮೀಕರಣ ಮಾಡುವುದು ತಪ್ಪು ಎಂದು ನಾನು ಹೇಳುತ್ತಿಲ್ಲ. ಆದರೆ ಆ ರಾಕೆಟ್‌ಗಳು ಮತ್ತು ಅದರ ಹಿಂದೆ ಇರುವಂತಹ ರಾಜಕೀಯ ವ್ಯವಸ್ಥೆಗಳು ಇವೆಲ್ಲವೂ ಕೂಡ ಸತ್ಯ ಸಂಗತಿಗಳಾಗಿವೆ. ಆದರೂ ಕೂಡ ಎಷ್ಟರ ಮಟ್ಟಿಗೆ ಇದನ್ನು ತಡೆಯುವುದಕ್ಕೆ ಸಾಧ್ಯವೋ ಅಷ್ಟರಮಟ್ಟಿಗೆ ಬೇಕಾದಂತಹ ಗೈಡ್‌ಲೈನ್ಸ್ ಅನ್ನು ಮಾಡಬೇಕಾದ ಅವಶ್ಯಕತೆ ಇದೆ. ಮಾನ್ಯ ಅಶ್ವಥ್‌ನಾರಾಯಣ್ ಅವರು ಕಾರ್ಮಿಕರು. ಈ ಶಾಸನಗಳನ್ನು ಮಾಡುವಾಗ ಶಾಸಕರಿಗೆ ಮಾತನಾಡಲು ಹೆಚ್ಚಿನ ಅವಕಾಶಗಳನ್ನು ಕೊಡಲೇಬೇಕಾಗುತ್ತದೆ. ಬೇರೆಯದ್ದರಲ್ಲಿ ಬೇಕಾದರೆ ನೀವು ಮೊಟಕು ಮಾಡಿ. ಶಾಸಕರು ಇಲ್ಲಿ ಬಂದಿರುವುದೇ ಶಾಸನ ಮಾಡುವುದಕ್ಕೆ. ಶಾಸನದಲ್ಲಿ ಆಗುವಂತಹ ವ್ಯತ್ಯಾಸಗಳ ಬಗ್ಗೆ ಇಲ್ಲಿ ಬೆಳಕನ್ನು ಚೆಲ್ಲುವುದಕ್ಕೆ. ನಮ್ಮನ್ನು ಏನಾದರೂ ನೀವು curtail ಮಾಡುವುದು ಖಂಡಿತವಾಗಿ ಸರಿಯಲ್ಲ. ಆದುದರಿಂದ ನೀವು ಮಾನ್ಯ ಗಣೇಶ್ ಕಾರ್ಣಿಕ್ ಮತ್ತು ಅಶ್ವಥ್‌ನಾರಾಯಣ್ ಅವರಿಬ್ಬರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ. ಇನ್ನು ಯಾರು ಮಾತನಾಡುವುದಿಲ್ಲ. ಅವರ ಸಲಹೆಗಳನ್ನು ಸರ್ಕಾರ ಸ್ವೀಕಾರ ಮಾಡಬೇಕು.

**ಕ್ಯಾ: ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೆ, ನಾನು ಬಹಳ ಬೇಗನೆ ಮುಗಿಸುತ್ತೇನೆ. ಮಾನ್ಯ ನಾಣಯ್ಯನವರು ಈ ವಿಚಾರದ ಬಗ್ಗೆ ಬಹಳ ಬೆಳಕನ್ನು ಚೆಲ್ಲಿದ್ದಾರೆ ನಾನು ಅದನ್ನು ಮತ್ತೆ ಇಲ್ಲಿ ಪುನರುಚ್ಚಾರ ಮಾಡಿ ಹೇಳುವುದಕ್ಕೆ ಹೋಗುವುದಿಲ್ಲ. ನಗರಕ್ಕೆ ಸಂಬಂಧಪಟ್ಟಂತೆ ನನಗೆ ಇದರ ಬಗ್ಗೆ ಒಂದು ಆತಂಕ ಇದೆ. ಆದರೆ ಇದು ನನಗರಕ್ಕೆ ಮಾತ್ರ ಸೀಮಿತವಾಗಿಲ್ಲ. ಕೆಲವು ವಿಚಾರಗಳ ಬಗ್ಗೆ ಮಾತ್ರ ನಾನು ನಮ್ಮ ಮುಖ್ಯಮಂತ್ರಿಗಳವರಲ್ಲಿ ಸ್ಪಷ್ಟೀಕರಣವನ್ನು ಕೇಳಬಯಸುತ್ತೇನೆ. ಗ್ರಾಮಾಂತರ

ಪ್ರದೇಶದಲ್ಲಿ ಇದು ಬಹಳವಾಗಿ ಅಗತ್ಯವಿದೆ. ಅಲ್ಲಿ ಕೆಲವು ಸಮಸ್ಯೆಗಳೂ ಕೂಡ ಇವೆ. ಇದನ್ನು ಆ ಭಾಗಗಳಲ್ಲಿ ಮಾಡಬೇಕಾಗಿದೆ. ಈ ವಿಧೇಯಕಕ್ಕೆ ಇಲ್ಲಿ ಒಪ್ಪಿಗೆಯನ್ನು ನೀಡುವುದರಿಂದ ಗ್ರಾಮಾಂತರ ಪ್ರದೇಶದಲ್ಲಿ ಜಾರಿಗೆ ತರುವುದಕ್ಕೆ ಸಾಧ್ಯವಿದೆಯೇ? ಇದರ ಜೊತೆಯಲ್ಲಿ ತಾವೆಲ್ಲರೂ ಉಲ್ಲೇಖ ಮಾಡಿದ ಹಾಗೆ ನಗರ ಪ್ರದೇಶದಲ್ಲಿ ಅತ್ಯಂತ ಕೆಳ ವರ್ಗದವರು ಸರ್ಕಾರೀ ಜಾಗವನ್ನು ಅತಿಕ್ರಮಣ ಮಾಡಿಕೊಂಡು ಅಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಮಾನ್ಯ ನಾಣಯ್ಯನವರು ಮತ್ತಿತರರು ಆತಂಕವನ್ನು ವ್ಯಕ್ತಪಡಿಸಿದ ಹಾಗೆ ಇಲ್ಲಿ ಎಲ್ಲೋ ಒಂದು ಕಡೆಯಲ್ಲಿ ಇದನ್ನು ಲ್ಯಾಂಡ್ ಮಾಫಿಯಾದವರು ದುರುಪಯೋಗ ಮಾಡಿಕೊಳ್ಳುವ ಸಾಧ್ಯತೆ ಹೆಚ್ಚಾಗಿ ಇದೆ. ಹಾಗಾಗಿ ಈ ಸಮಸ್ಯೆಯನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕಾಗಿದೆ. ಹಾಗಾಗಿ ಈ ವಿಧೇಯಕದಲ್ಲಿ ಗ್ರಾಮಾಂತರ ಪ್ರದೇಶವನ್ನು ಪ್ರತ್ಯೇಕವಾಗಿ ಮಾಡಿದ್ದೇ ಆದರೆ ಒಳ್ಳೆಯದೇನೋ. ವಿಚಾರ ಮಾಡಿ ಅಲ್ಲಿ ಖಂಡಿತವಾಗಿ ಇದನ್ನು ಮಾಡಬೇಕು. ಮಾನ್ಯ ಕೃಷ್ಣಾ ಬೈರೇಗೌಡರವರು ನಗರ ಪ್ರದೇಶಗಳಲ್ಲಿ ಕೂಡ ಬಡವರು ಸರ್ಕಾರಿ ಜಾಗಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆಂದು ಹೇಳಿದರು. ಪ್ರಾಮಾಣಿಕವಾಗಿ ಬಡವರು ಈ ಜಾಗಗಳಲ್ಲಿ ಮನೆಯನ್ನು ಕಟ್ಟಿಕೊಂಡಿರುವವರು 10 ಪರ್ಸೆಂಟ್ ಇರಬಹುದು. ಅವರನ್ನು ಹೊರಗೆ ಇಡುವುದಕ್ಕೆ ಏನು ಮಾಡುತ್ತೀರಿ? ಇದರ ಬಗ್ಗೆ ವಿಮರ್ಶೆ ಮಾಡುವುದಕ್ಕೆ ಅವಕಾಶ ಇದೆಯೇ? ಮತ್ತು 15 ವರ್ಷವಾದ ಮೇಲೆ ಇದನ್ನು ಮಾರಾಟ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಇದರಿಂದ ಕೂಡ ಲ್ಯಾಂಡ್ ಮಾಫಿಯಾ ಆಗುವುದಕ್ಕೆ ಅವಕಾಶ ಆಗುತ್ತದೆ. ನಾವು ತಂದಿದ್ದ ವಿಧೇಯಕ ಕೂಡ ಜಾರಿಗೆ ಬರಲಿಲ್ಲ. ಅದು ಮುಂದೆ ಹೋಗಲಿಲ್ಲ. ದಯವಿಟ್ಟು ಇದನ್ನು ಪರಭಾರೆ ಮಾಡುವುದಕ್ಕೆ ಅವಕಾಶ ಕೊಡಬೇಡಿ. ಆ ರೀತಿ ಮಾಡುವುದಕ್ಕೆ ಸಾಧ್ಯವಿದೆಯೇ ನೋಡಿ. ಕಡ್ಡಾಯವಾಗಿ ಬಿ.ಪಿ.ಎಲ್. ಕಾರ್ಡುದಾರರಿಗೆ ಎಂದು ಏಕೆ ಇದನ್ನು ಜಾರಿಗೆ ತರುವುದಕ್ಕೆ ಅವಕಾಶ ಇಲ್ಲ ಎಂಬುದರ ಬಗ್ಗೆ ವಿಚಾರ ಮಾಡಿ ನೋಡಿ. ಅದಕ್ಕೆ ಅವಕಾಶ ಕೊಡಬೇಕು. ನಾವು ಮಾಡಿರದಿದ್ದರೆ ನೀವು ಮಾಡಿ ಎಂದು ಹೇಳುತ್ತಿದ್ದೇನೆ.

**ಶ್ರೀ ಎಂ.ಸಿ.ನಾಣಯ್ಯ:–** ಬಿ.ಪಿ.ಎಲ್. ಕಾರ್ಡುದಾರರಿಗೆ ಕೊಡಬೇಕೆಂದು ಹೇಳುವುದಾದರೆ, ನಗರ ಪ್ರದೇಶದವರಿಗೆ ಯಾವ ರೀತಿ ಕೊಡುತ್ತಾರೆ ಅದೇ ರೀತಿಯಲ್ಲಿ ನಗರ ಪ್ರದೇಶದವರಿಗೂ ಕೊಡಬೇಕಾಗುತ್ತದೆ. ಅವರು ಯಾರಿಗೆ ಬೇಕಾದರೂ ಕೊಟ್ಟುಕೊಳ್ಳಲು ಆಗುತ್ತದೆಯೇನು? ಬಿ.ಪಿ.ಎಲ್. ಕಾರ್ಡು ಇಲ್ಲ ಎಂದರೆ ಯಾರಿಗೆ ಬೇಕಾದರು ಕೊಡಲು ಆಗುತ್ತದೆಯೇನು? This is a racket to make money.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ನಾನು ಮುಗಿಸಿ ಬಿಡುತ್ತೇನೆ. ತಮ್ಮ ವಿಧೇಯಕದಲ್ಲಿ ಇದರ ಬಗ್ಗೆ ಹೇಗೆ ಗೊಂದಲ ಆಗುತ್ತಿದೆ ಎನ್ನುವುದಕ್ಕೆ ತಾವೇ ಅದರಲ್ಲಿ ಉಲ್ಲೇಖ ಮಾಡಿದ್ದೀರಿ. **"ಅರ್ಜಿದಾರನು ಸ್ವಾಮ್ಯವನ್ನು ಹೊಂದಿಲ್ಲದೆ ಬೇರೊಬ್ಬ ವ್ಯಕ್ತಿಗೆ ಸೇರಿದ್ದಲ್ಲಿ"** ಎಂದು ಇದೆ. ಅಂದರೆ ತಮಗೆ ಗೊತ್ತಿದೆ ಈ ಕಾನೂನನ್ನು ನಾವು ಎಲ್ಲಿಯಾದರೂ ಪಾಸ್ ಮಾಡಿದ್ದೇ ಆದಲ್ಲಿ ಇದರಲ್ಲಿ ಗೊಂದಲವನ್ನು ಸೃಷ್ಟಿ ಮಾಡುವುದಕ್ಕೆ ಬೇರೆ ಯಾರೋ ಅರ್ಜಿ ಹಾಕುತ್ತಾರೆ. ಅದನ್ನು ಪ್ರೂವ್ ಮಾಡುವುದಕ್ಕೆ ತಮ್ಮಲ್ಲಿ ದಾಖಲೆ ಏನು ಇದೆ? ತಮಗೇ ಗೊತ್ತಿರುವ ಹಾಗೆ ಇದರಲ್ಲಿ ದುರುಪಯೋಗ ಆಗುವ ಸಾಧ್ಯತೆ ಇರುವುದರಿಂದ "ಈ ಬಿ.ಪಿ.ಎಲ್. ಕಾರ್ಡ್‌ನವರಿಗೆ ಮಾತ್ರ" ಅನ್ನು ಕಡ್ಡಾಯಗೊಳಿಸಬೇಕಾಗಿ ವಿನಂತಿ. ಇನ್ನು ಈ ವಿಧೇಯಕದ ಕನ್ನಡ ಭಾಷೆಯಲ್ಲಿನ 9ನೇ ಅಂಶದಲ್ಲಿ ಮಂಜೂರಾದ ಭೂಮಿಯಲ್ಲಿನ ವಾಸದ ಮನೆಯ ಆಕ್ರಮಿಸಿಕೊಂಡ ಭೂಮಿಯು ಎಂದು ಇದರಲ್ಲಿ ಇದೆ. ಯಾರು ಇದನ್ನು ಅವರಿಗೆ ಮಂಜೂರು ಮಾಡಿದ್ದಾರೆ? ನಮ್ಮ ಕಾನೂನು ಇರುವಂಥಾದ್ದೇ ಅಕ್ರಮವಾಗಿ ಮನೆ ಕಟ್ಟಿರುವಂತಹವರಿಗೆ ಎಂದು ಇದೆ. ಹೀಗಿರುವಾಗ ಅವರಿಗೆ ನಾವು ಆ ಜಾಗವನ್ನು ಮಂಜೂರೇ ಮಾಡಿಲ್ಲ. ತಾವೇ ಇದನ್ನು ಉಲ್ಲೇಖ ಮಾಡಿದ್ದೀರಿ. "ಮಂಜೂರಾದ ಭೂಮಿಯಲ್ಲಿನ ವಾಸದ ಮನೆಯು ಆಕ್ರಮಿಸಿಕೊಂಡ ಭೂಮಿಯು ಎಂದು" ಇದರಲ್ಲಿ ಇದೆ. ಅದರಲ್ಲಿ ತಮ್ಮ wordings ತಪ್ಪು ಇರಬಹುದು. ಆ ಭೂಮಿ ಅವರಿಗೆ ಮಂಜೂರಾಗಿಲ್ಲ. ಅಕ್ರಮವಾಗಿ ಮನೆ ಕಟ್ಟಿಕೊಂಡಿದ್ದಾರೆ. ಇದನ್ನು ತಿದ್ದುಪಡಿ ಮಾಡದೇ ಇದ್ದಲ್ಲಿ ಅದು ಬೇರೆ ಅರ್ಥವನ್ನು ಕೊಡುತ್ತದೆ. ಈ ವಿಧೇಯಕ

ಆದ ನಂತರ ತಾನೇ ತಾವು ಅವರಿಗೆ ನೀಡುವುದು. ಗ್ರಾಮಾಂತರದಲ್ಲಿ 20x30 ಅಳತೆಯಲ್ಲಿ ಮನೆಯನ್ನು ಕಟ್ಟಿಕೊಂಡವರ ಸಂಖ್ಯೆ ಬಹಳ ಕಡಿಮೆ ಇರಬಹುದು. ಆದರೆ ಅವರು ಅದರ ಸುತ್ತಮುತ್ತ ಗ್ರಾಮೀಣ ಪ್ರದೇಶದಲ್ಲಿ 20x30 ಅಂದರೆ ಸಮಾರು ಎರಡೂವರೆ ಸೆಂಟ್ಸ್ ಆಗುತ್ತದೆ. ಮಿನಿಮಮ್ ಅಂದರೆ 5 ಸೆಂಟ್ಸ್ ಜಾಗದಲ್ಲಿ ಕಟ್ಟಿಕೊಂಡಿರುತ್ತಾರೆ. ಗ್ರಾಮಾಂತರ ಪ್ರದೇಶಕ್ಕೆ ಸಂಬಂಧಿಸಿದ ಹಾಗೆ ಈ ವಿಧೇಯಕವನ್ನು ಪ್ರತ್ಯೇಕವಾಗಿ ತನ್ನಿ. ಅದೇ ರೀತಿ ಬೆಂಗಳೂರು ಮಹಾ ನಗರ ಪಾಲಿಕೆ, ನಗರ ಸಭೆ, ಪುರಸಭೆಗಳಿಗೆ ಸಂಬಂಧಪಟ್ಟಂತೆ ಬೇರೆ ವಿಧೇಯಕವನ್ನು ತಂದರೆ ಒಳ್ಳೆಯದೆಂದು ನನ್ನ ಅಭಿಪ್ರಾಯ. ನಾವುಗಳೆಲ್ಲರೂ ಈ ಸದನದಲ್ಲಿ ಏನೇನು ಸಲಹೆ ಸೂಚನೆಗಳನ್ನು ನೀಡಿದ್ದೇವೆ ಅವೆಲ್ಲವುಗಳನ್ನು ಒಳಗೊಂಡಂತೆ ವಿಧೇಯಕವನ್ನು ಮಂಡನೆ ಮಾಡಬೇಕೆಂದು ವಿನಂತಿಸುತ್ತೇನೆ. ಆ ರೀತಿಯಾಗಿ ತಾವು ಮಾಡದೇ ಇದ್ದರೆ ತಾವು ಹೇಳಿದ ಹಾಗೆ ಶೇಕಡ 15 ಇರುವ ಈ ಲ್ಯಾಂಡ್ ಮಾಫಿಯಾದವರಿಂದ ಖಂಡಿತವಾಗಿ ಇದರ ದುರುಪಯೋಗ ಆಗುತ್ತದೆ. ಇದಕ್ಕೆ ಅವಕಾಶವನ್ನು ಕೊಡಬಾರದು. 94ಸಿ ಅನ್ನು 1998ರವರೆಗೆ ವಿಸ್ತರಣೆ ಮಾಡಬೇಕೆಂಬ ಸಲಹೆ ಇತ್ತು. ಆದರೆ 2011ಕ್ಕೆ ವಿಸ್ತರಣೆ ಮಾಡುತ್ತೀರಿ. ಈಗ 2012ಕ್ಕೆ ಮಾಡುತ್ತಿದ್ದೀರಿ. ನೀವು ಈ ಅವಧಿಯನ್ನು ಯಾವಾಗ ವಿಸ್ತರಣೆ ಮಾಡುತ್ತೀರಿ ಆಗ ಅಷ್ಟು ಸಂಖ್ಯೆಗಳು ಜಾಸ್ತಿಯಾಗುತ್ತಾ ಹೋಗುತ್ತದೆ. ಆದರೆ ಸರ್ಕಾರದವರು ಅದಕ್ಕೆ ಅವಕಾಶವನ್ನು ಮಾಡಿಕೊಡಬಾರದೆಂದು ವಿನಂತಿ. ಪ್ರಾಮಾಣಿಕವಾಗಿ ಯಾರು ಬಡವರಿದ್ದಾರೆ ಯಾರು ಪ್ರಾಮಾಣಿಕರು ದಲಿತರು ಇದ್ದಾರೆ, ಅತ್ಯಂತ ಕನಿಷ್ಠ ಮಟ್ಟದಲ್ಲಿದ್ದಾರೆ ಅವರಿಗೆ ವಾಸವನ್ನು ಮಾಡಲಿಕ್ಕೆ ಮನೆಯನ್ನು ಕಟ್ಟಿ ಕೊಡುವುದು ಸರ್ಕಾರದ ಜವಾಬ್ದಾರಿಯಾಗಿದೆ. ಆದರೆ ಇದರ ದುರುಪಯೋಗವಾಗುವುದಕ್ಕೆ ಅವಕಾಶವನ್ನು ಮಾಡಿಕೊಡಬಾರದು. ಇದರಲ್ಲಿನ ತುಂಬಾ ಸಂಗತಿಯನ್ನು ಬದಲಾವಣೆ ಮಾಡಬೇಕಾಗಿದೆ. ಇದನ್ನು ಪರಿಗಣಿಸಬೇಕೆಂದು ಮನವಿ. ದಯವಿಟ್ಟು ಈ ನನ್ನ ಸಲಹೆಗಳನ್ನು ಪರಿಗಣಿಸಬೇಕೆಂದು ವಿನಂತಿ ಮಾಡಿ ನನಗೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಎಂ.ಸಿ.ನಾಣಯ್ಯ:-** ಒಂದು ವಿಚಾರ ಹೇಳುವುದನ್ನು ಮರೆತಿದ್ದೆ. ಇದರಲ್ಲಿ;

***MEMORANDUM REGARDING DELEGATED LEGISLATION***

***Clause 2.*** *– Section 94 CC empowers the State Government to make rules to prescribe the fee and amount for regularization of unauthorized constructions of dwelling house and to prescribe the conditions and restrictions for such regularization.*

ನೀವು ರೂಲ್ಸ್ ಅನ್ನು ಮಾಡುವುದಕ್ಕೆ ಇರತಕ್ಕಂತಾದ್ದು. ಈ ರೂಲ್ಸ್ ಅನ್ನು ಸಂಪೂರ್ಣವಾಗಿ ಮಾಡುವವರೆಗೆ kindly take us into confidence. Delegated Legislation ಗೆ rules frame ಮಾಡಬೇಕಲ್ಲವೇ? ರೂಲ್ಸ್ ಅನ್ನು ಸಂಪೂರ್ಣವಾಗಿ ಮಾಡುವುದಕ್ಕೆ clause.2ರಲ್ಲಿ 94 ಸಿಸಿ ಯಲ್ಲಿ Delegated Legislation ಅನ್ನು ತೆಗೆದುಕೊಂಡಿದ್ದೀರಿ. That means we have to frame the rules now. ಆ rules frame ಮಾಡುವಾಗ ನೀವು ಇದನ್ನು ಯಾರಿಗೆ ಕೊಡಬೇಕು ಯಾರು ಇದಕ್ಕೆ ಅರ್ಹರು ಎಂಬೆಲ್ಲವನ್ನು ಮಾಡಬೇಕಾಗುತ್ತದೆ. ಯಾರಿಗೆ ಕೊಡಬೇಕು ಮತ್ತು ಮಾರಾಟ ಮಾಡುವುದಕ್ಕೆ ಹಾಕುವ ಷರತ್ತು ಅವೆಲ್ಲವೂ ತಮ್ಮ ಅಧಿಕಾರಕ್ಕೆ ಬಿಟ್ಟಿದ್ದು. ಆಗಲಾದರೂ ನೀವು ನಮ್ಮನ್ನೆಲ್ಲಾ confidence ಗೆ ತೆಗೆದುಕೊಳ್ಳುತ್ತೀರಾ? ನೀವು ಈ ಮನೆಗಳನ್ನು ಕೊಟ್ಟಾದ ಮೇಲೆ 15 ವರ್ಷಗಳವರೆಗೆ ಇದನ್ನು ಮಾರಾಟ ಮಾಡಬಾರದೆಂದು ಹೇಳುತ್ತಿದ್ದೀರಿ.

**(ಈ ಹಂತದಲ್ಲಿ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಎಂ.ಸಿ.ನಾಣಯ್ಯ:-** ನೀವು ಇದನ್ನು ಮಾರಾಟ ಮಾಡುವುದಕ್ಕೆ ಏಕೆ ಅವಕಾಶ ಮಾಡಿಕೊಡುತ್ತೀರಿ? ಮಾರಾಟ ಮಾಡಲೇಬಾರದೆಂದು ಮಾಡಿ. ಉದಾಹರಣೆಗೆ ಹೇಳುವುದಾದರೆ, ಎಸ್.ಸಿ. ಎಸ್.ಟಿ. ಅವರಿಗೆ ನೀಡಿದ ಮನೆಯನ್ನು ಯಾರಿಗೂ ಮಾರಾಟ ಮಾಡಬಾರದು ಒಂದು ವೇಳೆ

ಅವರಿಂದ ಬೇರೆಯವರು ತೆಗೆದುಕೊಂಡರೂ ಕೂಡ ಅದನ್ನು forfeit ಮಾಡುವುದಕ್ಕೆ ನಿಮಗೆ ಅಧಿಕಾರ ಇದೆ. ಯಾರಿಗೆ ಯಾರು ಏಕೆ ಕೊಡಬೇಕು? ನೀವು ಯಾರಿಗೆ ಕೊಡುತ್ತೀರಿ ಅವರಲ್ಲಿಯೇ ಶಾಶ್ವತವಾಗಿ ಕಡೆಯವರೆವಿಗೂ ಇರಬೇಕು. ಯಾರಾದರೂ ಮಾರಾಟ ಮಾಡಿದ್ದು ಗಮನಕ್ಕೆ ಬಂದರೆ, State Government shall have the right to forfeit it to the Government. ಯಾರೇ ಅದನ್ನು ಖರೀದಿ ಮಾಡಿದರೂ ಕೂಡ ಅದನ್ನು forfeit ಮಾಡಿಕೊಳ್ಳಬೇಕು. ಆ ಒಂದು ಅಧಿಕಾರವನ್ನು ತಾವು ಇಟ್ಟುಕೊಳ್ಳಬೇಕು. ಇದನ್ನು ನೀವು ಒಪ್ಪಿಕೊಳ್ಳಬೇಕಾಗುತ್ತದೆ. ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಈ ಮನೆಗಳನ್ನು ಸಕ್ರಮ ಮಾಡುವಾಗ ಕಾನೂನಿನಲ್ಲಿ ಕೆಲವು ಕಂಡೀಷನ್ಸ್‌ಗಳನ್ನು ಏನು ಹಾಕಿದ್ದೇವೆ ಅದನ್ನೇ follow ಮಾಡಬೇಕಾಗುತ್ತದೆ. ಯಾರೇ ಖರೀದಿ ಮಾಡಿದರು ಕೂಡ ನಾವು ಅದನ್ನು forfeit ಮಾಡಿಕೊಳ್ಳಬೇಕು. ಆದ್ದರಿಂದ ಇದನ್ನು ನೀವು ಒಪ್ಪಿಕೊಳ್ಳಬೇಕಾಗುತ್ತದೆ. ಮತ್ತು rural area ಗಳಲ್ಲಿ ನಾವು ಏನು condition ಹಾಕಿದ್ದೇವೆ, ಕಾನೂನನ್ನು ಮಾಡಿದ್ದೇವೆ, ಅದನ್ನೆ follow ಮಾಡಲು ನೀವು delegated legislaton ಅನ್ನು ತೆಗೆದುಕೊಂಡಿದ್ದೀರಿ. Delegated legislaton ಅನ್ನು rules ಮಾಡುವಾಗ ನಾವು ಮಾಡುತ್ತೇವೆಂದು ಹೇಳುತ್ತಿದ್ದೀರಿ. ದಯಮಾಡಿ ಆ ಸಂದರ್ಭದಲ್ಲಾದರು will you kindly take us into confidence. Just call for a meeting, we will be with you. ಒಂದು ಮಾತನ್ನು ತಮಗೆ ಹೇಳಲಿಚ್ಛಿಸುತ್ತೇನೆ. ಮಾನ್ಯ ರಾಜ್ಯಪಾಲರು ಕೊಟ್ಟಿರತಕ್ಕಂಥ ಮೆಸೇಜ್ ಇದೆಯಲ್ಲ ಅದಕ್ಕೆ ಮತ್ತು ಸುಪ್ರೀಮ್ ಕೋರ್ಟ್ ಜಡ್ಜ್‌ಮೆಂಟ್ ಇದರ ಬಗ್ಗೆ ನಾಳೆ ಯಾರಾದರು ಕೋರ್ಟಿಗೆ ಹೋಗುತ್ತಾರೆ. ಸುಪ್ರೀಮ್ ಕೋರ್ಟಿನ ಜಡ್ಜ್‌ಮೆಂಟ್ ಅನ್ನು ಎತ್ತಿಕೊಂಡು ಕೋರ್ಟಿಗೆ ಹೋಗುತ್ತಾರೆ. ನಿಮ್ಮ legislation ಅಷ್ಟು ಸುಲಭದಲ್ಲಿ it will not stand on scrutiny of the High Court ofr Supreme Court. ದಯಮಾಡಿ ಇದನ್ನು ತಾವು ದಯಮಾಡಿ ಗಮನದಲ್ಲಿಟ್ಟುಕೊಳ್ಳಿ ಎಂದು ನಾನು ತಮಗೆ ಹೇಳಲಿಚ್ಛಿಸುತ್ತೇನೆ.

**ಶ್ರೀ ಅಶ್ವತ್ಥ್‌ನಾರಾಯಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈ ಬಿಲ್‌ಗೆ ಸಂಬಂಧಪಟ್ಟ ಹಾಗೆ ನಾನು ಎರಡು ಮೂರು ವಿಷಯಗಳನ್ನು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಸರ್ಕಾರ ಇದ್ದಾಗ ಈ ಬಿಲ್ ಎರಡೂ ಸದನಗಳಲ್ಲಿ ಪಾಸ್ ಆಗಿತ್ತು. ಇದರ ಜೊತೆಯಲ್ಲಿ ನಾವು ಇನ್ನು ಎರಡು ಬಿಲ್‌ಗಳನ್ನು ಕಳುಹಿಸಿಕೊಟ್ಟಿದ್ದೇವೆ. ಅದು ಅಕ್ರಮ–ಸಕ್ರಮ ಮಾಡುವುದಕ್ಕೋಸ್ಕರ. ಈಗ ವಿಶೇಷವಾಗಿ ಬೆಂಗಳೂರು ನಗರ ಪ್ರದೇಶ, ಪಟ್ಟಣ ಪ್ರದೇಶಕ್ಕೆ ತಾವು ಏನೂ ಈ ಬಿಲ್ ಅನ್ನು ತಂದಿದ್ದೀರಿ. ಬೆಂಗಳೂರು ಸುತ್ತಮುತ್ತ ಇರತಕ್ಕಂಥ ಕೆಲವು ರೆವೆನ್ಯೂ ಬಡಾವಣೆಗಳು, ಬಿ.ಡಿ.ಎ. ನೋಟಿಫೈಡ್ ಲ್ಯಾಂಡ್, ಹೌಸಿಂಗ್ ಬೋರ್ಡ್, ನೋಟಿಫೈಡ್ ಲ್ಯಾಂಡ್‌ಗಳಲ್ಲಿ ಕೆಲವೊಂದು ರೈತರುಗಳು ಇದ್ದಾರೆ. ಉದಾಹರಣೆಗೆ ಐದು ಎಕರೆ ಜಮೀನು ಬಿ.ಡಿ.ಎ. ಗೆ acquire ಆಯಿತು. ಉದಾಹರಣೆಗೆ ಶ್ರೀ ಎಸ್.ಎಂ.ಕೃಷ್ಣಾರವರ ಕಾಲದಲ್ಲಿ ವಿಶ್ವೇಶ್ವರಯ್ಯ ಬಡಾವಣೆಗೆ acquire ಆಯಿತು. ಅಲ್ಲಿ ರೈತನ ಒಂದು ಮನೆ ಇತ್ತು. ಸರ್ವೆ ನಂಬರ್ ಪ್ರಕಾರ ಆ ಮನೆ ಕೂಡ acquire ಆಗಿಹೋಗಿದೆ. ಇವೊತ್ತಿಗೂ ಅವನ ಮನೆ regularize ಮಾಡಿಕೊಳ್ಳಲು ಆಗುತ್ತಿಲ್ಲ. ಈ ತರಹ ಕೆಲವು ಮನೆಗಳು, ಬೆಂಗಳೂರು ಸುತ್ತಮುತ್ತ ಇರತಕ್ಕಂಥ ಕೆಲವು ರೆವೆನ್ಯೂ ನಿವೇಶನಗಳನ್ನು ಅಕ್ರಮ ಸಕ್ರಮ ಮಾಡಿ ಅದರಿಂದ 15–20 ಕೋಟಿ ಆದಾಯ ಬರುತ್ತದೆಂದು ಸದನದಲ್ಲಿ ಚರ್ಚೆಯಾಯಿತು. ಸರ್ಕಾರ ಅದಕ್ಕೊಂದು ಸಬ್‌ಕಮಿಟಿ ಮಾಡಿತು. ಶ್ರೀ ಅಶೋಕ್‌ರವರು, ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡುರವರು ಹಾಗೂ ಶ್ರೀಮತಿ ಶೋಭಾರವರು ಸಬ್‌ಕಮಿಟಿಯ ಒಂದು ವರದಿಯನ್ನು ಸನ್ಮಾನ್ಯ ರಾಜ್ಯಪಾಲರಿಗೆ ಕೊಟ್ಟರು. ಎರಡೂ ಸದನಗಳಲ್ಲಿ ಆ ಬಿಲ್‌ಗಳನ್ನು ಪಾಸ್ ಮಾಡಿ. ಮಾನ್ಯ ರಾಜ್ಯಪಾಲರಿಗೆ ಕಳುಹಿಸಿಕೊಡಲಾಯಿತು. ಇದರಲ್ಲಿ land grabbing ವಿಷಯದ ಸಾಕಷ್ಟು ವಿಚಾರ ಇದೆ, ಆದ್ದರಿಂದ ಇದನ್ನು ಪಾಸ್ ಮಾಡುವುದಿಲ್ಲವೆಂದು ಅದನ್ನು ರಾಜ್ಯಪಾಲರು ವಾಪಸ್ ಕಳುಘಿಕೊಟ್ಟರು. ನಮ್ಮ ಸರ್ಕಾರ ಆ ಬಿಲ್ ಅನ್ನು ಪಾಸ್ ಮಾಡಲಿಲ್ಲ. ತಿರುಗಿ ಇವೊತ್ತು ಈ ಬಿಲ್ ಅನ್ನು ವಾಪಸ್ಸು ತರುತ್ತಿದ್ದೀರಿ ಅಂದರೆ ಏನು? ರೈತ ತನ್ನ

ಜಮೀನಿನಲ್ಲಿ ಕಟ್ಟಿರುವ ಮನೆಯನ್ನು regularize ಮಾಡಿಕೊಳ್ಳಲಾಗುತ್ತಿಲ್ಲ. ಆದರೆ ಇವೊತ್ತು ಸರ್ಕಾರಿ ಜಾಗದಲ್ಲಿ ಕಟ್ಟಿಕೊಂಡಿರುವ ಮನೆಯನ್ನು regularize ಮಾಡಿಕೊಡಲು ಹೊರಟಿದ್ದೀರಿ. ವಿಶೇಷವಾಗಿ ಶ್ರೀ ಎ.ಟಿ.ರಾಮಸ್ವಾಮಿಯವರ ವರದಿಯಾಗಲಿ, BMTF (Bangalore Metroplitan Task Force) Report ಆಗಲಿ, ಈಗಾಗಲೇ complaint ಮಾಡಿದ್ದಾರೆ. ವಿಶೇಷವಾಗಿ valley ಜಾಗದಲ್ಲಿ ಮನೆ ಕಟ್ಟಿಕೊಂಡಿರತಕ್ಕಂಥವು, ಪಾರ್ಕ್ ಜಾಗದಲ್ಲಿ ಮನೆ ಕಟ್ಟಿಕೊಂಡಿರತಕ್ಕಂಥವು, ಮತ್ತೆ ಗೋಮಾಳ ಜಾಗದಲ್ಲಿ ಮನೆ ಕಟ್ಟಿಕೊಂಡಿರತಕ್ಕಂಥ ಮನೆಗಳನ್ನು regularize ಮಾಡಿಕೊಟ್ಟರೆ ಕಷ್ಟ. ಇವೊತ್ತು valley zone ಎಲ್ಲಾ ಕ್ಲೋಸ್ ಆಗಿದೆ. ಮಳೆ ಬಂದಂಥ ಸಂದರ್ಭದಲ್ಲಿ ಅಲ್ಲಿ ನೀರು ತುಂಬಿಕೊಳ್ಳುತ್ತದೆ. ಆದ್ದರಿಂದ ಆ ಮನೆಯನ್ನು ತೆಗೆಯಬೇಕೆಂದು ಸರ್ಕಾರಕ್ಕೆ ವರದಿ ಕೊಟ್ಟಿದ್ದಾರೆ. ಈಗ ಇವೆಲ್ಲವೂ ಸಹ regularize ಆಗಿಬಿಡುತ್ತವೆ. ತಿರುಗಿ ಮಳೆ ಬಂದಾಗ ಅವುಗಳ ಬಗ್ಗೆ ಎಲ್ಲಾ ಕಡೆ ಟೀಕೆ ಟಿಪ್ಪಣಿ ಮಾಡುತ್ತಾರೆ. ಆದ್ದರಿಂದ ಮಾನ್ಯ ನಾಣಯ್ಯನವರು ಹೇಳಿದ ಹಾಗೆ ನೀವು ಗ್ರಾಮಾಂತರ ಪ್ರದೇಶಕ್ಕೆ ಮಾಡುವುದರ ಬಗ್ಗೆ ನಮ್ಮ ವಿರೋಧ ಇಲ್ಲ. ನಗರ ಪ್ರದೇಶದಲ್ಲಿ ಮಾಡುವುದಿದ್ದರೆ, ಲಕ್ಷಾಂತರ ಖಾಸಗಿ ಬಡಾವಣೆಗಳಿಗೆ ಬಿ.ಡಿ.ಎ. ನೋಟಿಫೈಡ್ ಲ್ಯಾಂಡ್‌ನಲ್ಲಿ ಬಡವರು ಮನೆ ಕಟ್ಟಿಕೊಂಡಿರತಕ್ಕಂಥ ಜಾಗ ಇದೆ. ಅಂತಹ ವಿಷಯವನ್ನು ತೆಗೆದುಕೊಂಡು ಬನ್ನಿ. ಅದರಿಂದ ಸರ್ಕಾರಕ್ಕೆ ಸಾವಿರಾರು ಕೋಟಿ ಆದಾಯ ಬರುತ್ತದೆ. ಅರ್ಜಿಗಳ ಸಮಿತಿಯ ಮುಂದೆ ಒಂದು ಅರ್ಜಿ ಇದೆ. ಸನ್ಮಾನ್ಯ ಉಪ ಸಭಾಪತಿಯವರು ಅದಕ್ಕೆ ಅಧ್ಯಕ್ಷರು. ದಾಸರಹಳ್ಳಿಯಲ್ಲಿ ಒಂದು ಗೋಮಾಳದ ಜಾಗ ಇದೆ. ಅದು ಐವತ್ತು ಕೋಟಿ ಬೆಲೆ ಬಾಳುತ್ತದೆ. ಒಬ್ಬ ಕಾರ್ಪೋರೇಟರ್ ತನ್ನ ಸರ್ವೆ ನಂಬರ್ ಪಕ್ಕದಲ್ಲಿ ಗೋಮಾಳ ಸರ್ವೆ ನಂಬರ್ ಹಾಕಿ ಸೈಟ್ ಮಾಡಿ ರಿಜಿಸ್ಟರ್ ಮಾಡಿಕೊಟ್ಟಿದ್ದಾರೆ. ಇವೊತ್ತು regularize ಮಾಡಿದರೆ ಸರ್ಕಾರಿ ಜಾಗದಲ್ಲಿ ಯಾರೋ ದುಡ್ಡು ಮಾಡಿಕೊಂಡು ಹೋಗುತ್ತಾರೆ. ಲಾಭ ಯಾರಿಗೆ ಬಂತು? ನನ್ನ ಸರ್ವೆ ನಂಬರ್ ಪಕ್ಕದಲ್ಲಿ ಐದು ಎಕರೆ ಗೋಮಾಳ ಇದ್ದರೆ ಆ ಸರ್ವೆ ನಂಬರ್ ಸೇರಿಸಿ ಬಿಟ್ಟು ಸೈಟ್ ಮಾಡಿ ಕೊಟ್ಟುಬಿಡುತ್ತೇವೆ.

ತೆಗೆದುಕೊಳ್ಳುವವನಿಗೆ ಅದು ಗೋಮಾಳವೋ ಇಲ್ಲವೋ ಎಂದು ಏನು ಗೊತ್ತಿರುತ್ತದೆ. ಅಶ್ವತ್ಥ್‌ನಾರಾಯಣ ಸರ್ವೆ ನಂಬರ್ ಹಾಕಿದ್ದಾನೆ, ರಿಜಿಸ್ಟರ್ ಮಾಡಿಕೊಟ್ಟಿದ್ದಾನೆ ಅನ್ನುವುದಷ್ಟೇ ಗೊತ್ತಿರುತ್ತದೆ. ಆದರೆ ಅದು ಗೋಮಾಳ ಜಮೀನು ಎಂದು ತೆಗೆದುಕೊಂಡಿರುವವರಿಗೆ ಗೊತ್ತಿರುವುದಿಲ್ಲ. ಇಂತಹ ಸಾಕಷ್ಟು ಅರ್ಜಿಗಳು ನಿಮ್ಮ ರೆವಿನ್ಯೂ ಇಲಾಖೆಯಲ್ಲಿಯೇ ಇವೆ. ಇಂತಹದ್ದೊಂದು ಕೇಸ್ ಅರ್ಜಿಗಳ ಸಮಿತಿಯ ಮುಂದೆ ಒಂದು ಅರ್ಜಿ ಬಂದಿದೆ. ಇವೊತ್ತು ನಿಮ್ಮ ಪ್ರಕಾರ ಅದು regularize ಆಗುತ್ತದೆ. ಇದನ್ನು ಮಾಡಿದರೆ ಕಳ್ಳನಿಗೆ ಬೀಗದ ಕೈ ಕೊಟ್ಟ ಹಾಗೆ ಆಗುತ್ತದೆ. ದಯಮಾಡಿ ಇದನ್ನು ಇನ್ನು ಚರ್ಚೆ ಮಾಡಿ. ಇನ್ನೊಂದು ಅಧಿವೇಶನದಲ್ಲಿ ತೆಗೆದುಕೊಂಡು ಬನ್ನಿ. ದಯಮಾಡಿ ಇಂತಹವುದಕ್ಕೆಲ್ಲಾ ಅವಕಾಶ ಮಾಡಿ ಕೊಡುವುದು ಬೇಡ. ಮಾನ್ಯ ಜೆ.ಹೆಚ್.ಪಟೇಲರ ಕಾಲದಲ್ಲಿ ಅಕ್ರಮ ಸಕ್ರಮ ಮಾಡಬೇಕೆಂದು 38(ಸಿ)ಗೆ ತಿದ್ದುಪಡಿ ತಂದರು. 38(ಸಿ) ಅಂದರೇನು ಅಂದರೆ ನನ್ನ ಸ್ವಂತ ಜಮೀನಿನಲ್ಲಿ ರೆವಿನ್ಯೂ ಲೇಔಟ್‌ನಲ್ಲಿ ನಾನೊಂದು ಮನೆಯನ್ನು ಕಟ್ಟಿಕೊಂಡಿದ್ದೇನೆ. ಈಗ ಯಳಂದೂರು, ಚಾಮರಾಜನಗರ, ಕೊಳ್ಳೆಗಾಲದಿಂದ ಬಂದಂಥವರು ತಲಘಟ್‌ಪೂರದಲ್ಲಿ ಒಂದು ರೆವಿನ್ಯೂ ಸೈಟ್ ತೆಗೆದುಕೊಳ್ಳುತ್ತಾರೆ. ಅದು ಸರ್ಕಾರಿ ಜಮೀನು ಅಲ್ಲ, ಸ್ವಂತ ಹಿಡುವಳಿ ಜಮೀನಿನಲ್ಲಿ ಖಾಸಗಿ ಬಡಾವಣೆಯಲ್ಲಿ ಸೈಟು ತೆಗೆದುಕೊಂಡಿದ್ದಾರೆ. ಇದನ್ನು regularize ಮಾಡಿ. ಸರ್ಕಾರಕ್ಕೆ ಸಾವಿರಾರು ಕೋಟಿ ಆದಾಯ ಬರುತ್ತದೆ. ಇದರಿಂದ ಸರ್ಕಾರಕ್ಕೆ ಏನೂ ಆದಾಯ ಬರುವುದಿಲ್ಲ. ಯಾರೋ developers ಗೆ ಅನುಕೂಲವಾಗುತ್ತದೆ. ಶ್ರೀ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಶಾಂತಿನಗರದಲ್ಲಿ ಫುಟ್‌ಬಾಲ್ ಸ್ಟೇಡಿಯಂ ಪಕ್ಕ ನೂರಾರು ಕೋಟಿ ರೂಪಾಯಿ ಬೆಲೆ ಬಾಳುವಂಥ ಜಾಗದಲ್ಲಿ slum ಇತ್ತು. ಅಲ್ಲಿರುವವರಿಗೆ ಬೇರೆ ಕಡೆ ಜಾಗ ಮಾಡಿ rehabilitation ಮಾಡಿದರು. ನೀವು ಕೂಡ ಆ ರೀತಿ rehabilitation ಮಾಡಿ. ನೀವು ಬರೀ ಒಂದು ಸಾವಿರ–ಎರಡು ಸಾವಿರ ಎಂದು ಹೇಳುತ್ತೀರಿ. ಜೆ.ಪಿ.ನಗರ, ಜಯನಗರ, ಶಾಂತಿನಗರ ಕಡೆಗಳಲ್ಲೆಲ್ಲಾ ಹತ್ತು–ಹದಿನೈದು ಸಾವಿರ ಚದರ ಅಡಿ ಜಾಗ ಇದೆ. ಕೃಷ್ಣಬೈರೇಗೌಡರವರು ತಾಲ್ಲೂಕು

ಬೋರ್ಡ್ ಇತ್ತು ಎಂದು ಹೇಳಿದರು. ಒಂದು ಎರಡು genuine case ಗಳಿರಬಹುದು. ನೀವು ನಿಮ್ಮ ತಹಸೀಲ್ದಾರ್ ಕಛೇರಿ, ಎ.ಸಿ.ಕಛೇರಿಗಳಿಂದ ವರದಿ ತರಿಸಿ ನೋಡಿ. ಪ್ರತಿಯೊಂದು ಪ್ರಕರಣಗಳನ್ನು ಅಧ್ಯಯನ ಮಾಡಿ. ಇದಕ್ಕೂ ಮುಂಚೆ ನಾವು ಕೊಳಚೆ ನಿರ್ಮೂಲನಾ ಮಂಡಳಿಯ ಒಂದು ವಿಚಾರವನ್ನು study ಮಾಡಿದ್ದೇವೆ. ಈಗಾಗಲೇ ಸರ್ಕಾರದ ಹತ್ತಿರ ಯಾವುದು slum ಗಳಿವೆ ಎಂದು ಮಾಹಿತಿ ಇದೆ. ನೀವು slumಗಳಲ್ಲಿ ವಾಸ ಮಾಡುತ್ತಿರುವಂಥವರಿಗೆ ಹಕ್ಕುಪತ್ರವನ್ನು ಕೊಡಿ. ಅವರಿಗೆ regularize ಮಾಡಿ ಕೊಡಿ. ಇದು ಉಪಯೋಗ ಆಗುತ್ತದೆಯೇ ಹೊರತು ನೂರಾರು ಕೋಟಿ ರೂಪಾಯಿ ಬೆಲೆ ಬಾಳುವಂಥ ಜಾಗದಲ್ಲಿ regularize ಮಾಡುವುದು ಇದೆಯಲ್ಲ ಅದನ್ನು ದಯಮಾಡಿ ಪುನರ್‌ಪರಿಶೀಲನೆ ಮಾಡಬೇಕು. ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ರೆವಿನ್ಯೂ ಬಡಾವಣೆಗಳನ್ನು ಸಹ ಅಕ್ರಮ ಸಕ್ರಮ ಮಾಡಬೇಕೆನ್ನುವ ಬಿಲ್ ಅನ್ನು ಕಳುಹಿಸಿಕೊಟ್ಟಿದ್ದೆವು ಅದನ್ನು ಕೂಡ ತೆಗೆದುಕೊಂಡು ಬನ್ನಿ ಅದನ್ನು ಚರ್ಚೆ ಮಾಡಿ. ಅದು ಉಪಯೋಗಕ್ಕೆ ಬರುತ್ತದೆಯೇ ಹೊರತು ಈ ತರಹ ತಂದರೆ ಎಲ್ಲೋ ಒಂದು ಕಡೆ ನಾವು land grabbing cases ಗೆ ನಾವು ಸಹಕಾರ ಕೊಡುವುದು ಬೇಡ. ದಯಮಾಡಿ ತಾವು ಹಿರಿಯ ಸಚಿವರಿದ್ದೀರಿ ತಾವು ಇದನ್ನು ಪುನರ್‌ಪರಿಶೀಲನೆ ಮಾಡಬೇಕೆನ್ನುವ ಒತ್ತಡವನ್ನು ನಾನು ಹೇರುತ್ತಿದ್ದೇನೆ.

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಮ್ಮಲ್ಲಿ ಈಗಾಗಲೇ 10–15–20 ವರ್ಷಗಳಿಂದ ಮುನಿಸಿಪಾಲಿಟಿ ಅಥವಾ ರೆವಿನ್ಯೂ ಲ್ಯಾಂಡ್ ಅಥವಾ ಅರಣ್ಯ ಜಮೀನು ಇದೆ. ಆದರೆ ಅದರ ಮೇಲೆ ಇರುವಂಥ ಕಟ್ಟಡ ಮಾತ್ರ ಮಾಲೀಕನ ಹೆಸರಿನ ಮೇಲೆ ಇದೆ. ಅಲ್ಲಿ ಕಟ್ಟಡ ಇದೆ, ಮುನಿಸಿಪಾಲಿಟಿಯವರು ಟ್ಯಾಕ್ಸ್ ತೆಗೆದುಕೊಳ್ಳುತ್ತಾರೆ. ಆದರೆ ಅವರ ಹೆಸರಿನ ಮೇಲೆ ಇನ್ನು ಕಟ್ಟಡ ಆಗಿಲ್ಲ. ಇಂತಹ ಎಷ್ಟೋ ಕೇಸ್‌ಗಳಿವೆ. ಆದ್ದರಿಂದ ಯಾರ ಯಾರ ಹೆಸರಿನ ಮೇಲೆ ಮುನಿಸಿಪಾಲಿಟಿಯ ಉತಾರ ಇದೆ, ಕಟ್ಟಡದ ಬಗ್ಗೆ ಉತಾರ ಇದೆ, ಅಂತಹವರಿಗೆ regularize ಮಾಡಿದರೆ ಬಹಳ ಒಳ್ಳೆಯದು. ಅದರಲ್ಲಿ

ಬಡವರು ಬರುತ್ತಾರೆ, ಶ್ರೀಮಂತರು ಬರುತ್ತಾರೆ ಅದಕ್ಕೆ ಏನೂ ಮಾಡುವುದಕ್ಕೆ ಬರುವುದಿಲ್ಲ. ಅವರ ಹತ್ತಿರ ದಾಖಲೆ ಇದ್ದೇ ಇರುತ್ತದೆ. ಆದ್ದರಿಂದ ಈ ಬಿಲ್ ಅನ್ನು ಪಾಸ್ ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಡಿ.ವಿ.ಸದಾನಂದಗೌಡ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ನಾವು ನಮ್ಮ ಕಡೆಯಿಂದ ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಈ ಸಕ್ರಮೀಕರಣ ಮಾಡುವಂಥದ್ದಕ್ಕೆ ಒಂದು ರೀತಿಯಲ್ಲಿ ನಮ್ಮ ಸಹಮತಗಳು ಎಲ್ಲಿಯವರೆಗೆ ಇದೆ ಅಂದರೆ ಏನು 94(ಸಿ)ಗೆ ಗ್ರಾಮೀಣ ಪ್ರದೇಶಕ್ಕೆ ಮಾಡಿದಂಥ ರೂಲ್ಸ್ ಅನ್ನು ಅದೇ ರೂಲ್ಸ್‌ನ ಆಧಾರದ ಮೇಲೆ ಬಿ.ಪಿ.ಎಲ್. ಇದಕ್ಕೆಲ್ಲಾ ಇದನ್ನು ಸಕ್ರಮೀಕರಣ ಮಾಡುವಂಥದ್ದಕ್ಕೆ ನಮ್ಮ ಸಹಮತ ಇದೆ. ನಾನು ಇಲ್ಲ ಎಂದು ಹೇಳುವುದಿಲ್ಲ. ಇಲ್ಲದಿದ್ದರೆ ಇದರ ಬಗ್ಗೆ ಇನ್ನಷ್ಟು ಚರ್ಚೆಗಳಾಗಬೇಕು. ನಮ್ಮ ಅಶ್ವತ್ಥ್‌ನಾರಾಯಣರವರು ಎಲ್ಲೆಲ್ಲಿ ಏನೇನಾಗುತ್ತಿದೆ ಎಂದು ಉದಾಹರಣೆಗಳನ್ನೇ ಕೊಟ್ಟರು. ಇಂತಹ ಸಂದರ್ಭದಲ್ಲಿ ಇಷ್ಟು ದೊಡ್ಡ ಪ್ರಮಾಣದ ಹಗರಣಗಳು, ರ್‍ಯಾಕೆಟ್ ಆಗುತ್ತದೆಂದರೆ, ಭೂ ಮಾಫಿಯಾಕ್ಕೆ ನಾವು ಬೆಂಬಲ ಕೊಡುವಂಥದ್ದಾಗಬಾರದು. ಅವರು ಮಾತು ಎತ್ತಿದರೆ ನಿಮ್ಮ ಸರ್ಕಾರ ಹೀಗೆ ಮಾಡಿತ್ತು ಎಂದು ಹೇಳುತ್ತಾರೆ. 94(ಸಿ)ಗೆ ನಮ್ಮ ಸರ್ಕಾರ ಏನು rules frame ಮಾಡಿದೆ ಈ ಅಕ್ರಮ ಸಕ್ರಮಕ್ಕೆ ಕೂಡ ಅದೇ ರೀತಿಯ rules ಅನ್ನು frame ಮಾಡಬೇಕೆನ್ನುವ ಇರಾದೆ ನಮ್ಮಲ್ಲಿತ್ತು. ಆದರೆ ಏನು ಮಾಡುವುದು ನಾವು ಇಲ್ಲಿ ಬಂದು ಕುಳಿತಿದ್ದೇವೆ. ನೀವು ಅಲ್ಲಿ ಹೋಗಿ ಕುಳಿತಿದ್ದೀರಿ. ನೀವು ಈಗ ಏನು ಮಾಡುತ್ತಿದ್ದೀರಿ? 94(ಸಿ)ಗೆ ಮಾಡಿರುವಂಥ rules ಅನ್ನು ಇದಕ್ಕೆ apply ಮಾಡಲು ನೀವು ತಯಾರಿಲ್ಲದ ರೀತಿಯಲ್ಲಿ ನೀವು ಮಾಡುತ್ತಿದ್ದೀರಿ. ನಾನು ಇಷ್ಟೇ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಮಗೆ ಅನಿವಾರ್ಯವಾಗುತ್ತದೆ. ನೀವು ಇದನ್ನು ಪಾಸ್ ಮಾಡಿಕೊಳ್ಳಬಹುದು, ಆದರೆ ಇದರಲ್ಲಿ ಇನ್ನು ಹೆಚ್ಚು ಪರಿಣಾಮಕಾರಿಯಾದಂಥ ಚರ್ಚೆಗಳು ಆಗಬೇಕು. ಪ್ರಾಯಶಃ ಇನ್ನಷ್ಟು ದೊಡ್ಡ ರೀತಿಯಲ್ಲಿ ಇದರ ಬಗ್ಗೆ ಚರ್ಚೆಗಳು ನಡೆಯಬೇಕು. ಒಂದು ಜಂಟಿ

ಸದನ ಸಮಿತಿಗೆ ಇದನ್ನು refer ಮಾಡಬೇಕು. ಅಲ್ಲಿ refer ಮಾಡಿ ಅಲ್ಲಿ ಇದರ ಸಾಧಕ ಬಾಧಕಗಳನ್ನು ಚರ್ಚೆ ಮಾಡಿ ಅವರು ಆ ಕೆಲಸ ಕಾರ್ಯಗಳನ್ನು ಮಾಡಬೇಕು. ಏಕೆಂದರೆ ಇದು ಸಣ್ಣ ಸಂಗತಿಯಲ್ಲ. ಇದರಿಂದ ಕರ್ನಾಟಕದಲ್ಲಿ ಹತ್ತು ಸಾವಿರ ಕೋಟಿ ರೂಪಾಯಿಗಳ ವ್ಯವಹಾರ ನಡೆಯುವಂಥ ಸಂಗತಿ. ನಾವು ರಾಜ್ಯಪಾಲರಿಗೆ ಕಳುಹಿಸಿದ್ದೇವೆ, ಅವರು ಸಹಿ ಮಾಡಲಿಲ್ಲ ಎಂದು ಇವರು argument ಮಾಡಬಹುದು. ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ 94(ಸಿ)ಗೆ ನಾವು ಬಿ.ಪಿ.ಎಲ್. ಮತ್ತು ಬಾಕಿ rules frame ಮಾಡಿದ್ದೇವೆ, ಇಂತಹವರಿಗೆ ಹೀಗೆ ಕೊಡಬೇಕೆನ್ನುವಂಥ rules ಅನ್ನು frame ಮಾಡಬೇಕು ಎಂದು ಹೇಳುವಂಥ ಸಂಗತಿಗಳನ್ನು ಈಗಾಗಲೇ ಚರ್ಚೆ ಮಾಡಿಯಾಗಿದೆ. ನೀವು ಇದಕ್ಕು ಕೂಡ ಆ rules ಅನ್ನೇ frame ಮಾಡಿ. ಏಕೆಂದರೆ ಇದು ಅಕ್ರಮ ಮಾಡಿರುವಂಥದ್ದನ್ನು ಸಕ್ರಮೀಕರಣ ಮಾಡುವಂಥದ್ದು ಹೊರತು ಅಕ್ರಮ ಮಾಡುವವರಿಗೆ ಬೆಂಬಲ ಮಾಡುವಂಥ ಒಂದು ವಿಧೇಯಕ ಇದು ಆಗಬಾರದು. ಅಕ್ರಮ ಮಾಡುವವರಿಗೆ ಬೆಂಬಲ ಮಾಡುವಂಥ ವಿಧೇಯಕವಾದರೆ ಇಡೀ ರಾಜ್ಯದ ಜನತೆಗೆ ನಾವು ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಆದಕಾರಣ ನನ್ನ ಆಗ್ರಹ ಇದೆ, ನನ್ನ ವಿನಂತಿ ಇದೆ, ಇದನ್ನು ಜಂಟಿ ಸದನ ಸಮಿತಿಗೆ refer ಮಾಡಬೇಕು.

Joint Select Committeeಗೆ ಇದನ್ನು refer ಮಾಡಬೇಕು. ಬೇಕಾದರೆ ಮತ್ತೆ ವಿಧಾನ ಸಭೆಗೆ ಈ ವಿಧೇಯಕವನ್ನು ತೆಗೆದುಕೊಂಡು ಹೋಗಿ ಪಾಸ್ ಮಾಡಿಕೊಳ್ಳಿ. ನಮ್ಮದು ಏನೂ ಅಭ್ಯಂತರವಿಲ್ಲ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೆ, ಈಗ ಈ ವಿಧೇಯಕ ವಿಧಾನ ಸಭೆಯಲ್ಲಿ ಪಾಸ್ ಆಗಿ ಬಂದಿದೆಯಲ್ಲಾ? ಮತ್ತೆ ಯಾವ ರೀತಿಯಾಗಿ Joint Select Committee ಯನ್ನು ಮಾಡುವುದಕ್ಕಾಗುತ್ತದೆ?

**ಶ್ರೀ ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೆ, ನಮ್ಮ ಸದನದ ಸಮಿತಿಯನ್ನೇ ಮಾಡಿ.

**ಶ್ರೀ ಡಿ.ವಿ.ಸದಾನಂದಗೌಡ:-** ಮಾನ್ಯ ಸಭಾಪತಿಯವರೆ, ನಮ್ಮ ಸದನ ಸಮಿತಿಯನ್ನೇ ಮಾಡಿ. ನಾನು ಹೆಚ್ಚು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಇದರ ಬಗ್ಗೆ ಅಲ್ಲಿ ಇನ್ನಷ್ಟು ವಿಸ್ತೃತವಾಗಿ ಚರ್ಚೆಗಳನ್ನು ಮಾಡೋಣ. ಮುಂದಿನ ದಿನಗಳಲ್ಲಿ Guidelines ಗಳು ಏನಿರಬೇಕು, rules ಏನು frame ಮಾಡಬೇಕು ಎನ್ನುವುದರ ಬಗ್ಗೆಯೂ ಕೂಡ ಅದರಲ್ಲಿಯೇ ಒಂದು detail ಚರ್ಚೆಗಳನ್ನು ಮಾಡಿ, ಇದನ್ನು ಕೈಗೆತ್ತಿಗೊಂಡು ಇದರಿಂದಾಗಿ ನಾವು ಒಂದು wrong message ಗಳನ್ನು ಕೊಟ್ಟು ನಾವು ಕೂಡ ಅವರೊಟ್ಟಿಗೆ ಇದ್ದೇವೆ ಎನ್ನುವಂಥದ್ದನ್ನು ಕೊಡುವಂಥದ್ದಲ್ಲ. ಘನತೆವೆತ್ತ ರಾಜ್ಯಪಾಲರು ವಾಪಸ್ಸು ಕಳುಹಿಸಿಕೊಟ್ಟಿರುವಂತಹ ಹಿನ್ನೆಲೆ ಮತ್ತು ಸುಪ್ರೀಂ ಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಈ ಕೆಲಸ ಕಾರ್ಯಗಳನ್ನು ಮಾಡುವಂತಹ ಅನಿವಾರ್ಯತೆ ಮತ್ತು ಅವಶ್ಯಕತೆ ಇದೆ. ಆದಕಾರಣ ಇದನ್ನು ಮಾಡಬೇಕು ಎನ್ನುವಂತಹ ಆಗ್ರಹವನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ಮಾಡುತ್ತಿದ್ದೇನೆ.

**ಸಭಾಪತಿಯವರು:-** ಚರ್ಚೆಯ ಹಿನ್ನಲೆಯಲ್ಲಿ ವಿರೋಧ ಪಕ್ಷದ ನಾಯಕರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅವರ ಅಭಿಪ್ರಾಯವನ್ನು ಕೂಡ ವ್ಯಕ್ತ ಮಾಡಿದ್ದಾರೆ.

**ಶ್ರೀ ವಿ.ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೆ, ಏನು ಈ ಮಸೂದೆಯು ಕೆಳಮನೆಯಲ್ಲಿ ಪಾಸ್ ಆಗಿ ಇಲ್ಲಿಗೆ ಬಂದಿದೆ. ಇದರ ಬಗ್ಗೆ ಆ ಮನೆಯಲ್ಲಿಯೂ ಕೂಡ ಚರ್ಚೆ ಮಾಡುವಂತಹ ಸಮಯದಲ್ಲಿ ವಿರೋಧ ಪಕ್ಷದ ನಾಯಕರು ಮತ್ತು ಎಲ್ಲಾ ಹಿರಿಯ ಸದಸ್ಯರುಗಳು ಮತ್ತು ಸದಸ್ಯರುಗಳು ಅನೇಕ ಸಲಹೆಗಳನ್ನೂ ಕೂಡ ಕೊಟ್ಟಿದ್ದಾರೆ. ಇದರ ಹಿನ್ನೆಲೆಯನ್ನೂ ಕೂಡ ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಹಿಂದೆ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರದಲ್ಲಿದ್ದಾಗ ಈ ವಿಧೇಯಕ ಎರಡು ಮನೆಯಲ್ಲಿಯೂ ಕೂಡ ಚರ್ಚೆಯಾದಂತಹ ಸಂದರ್ಭದಲ್ಲಿ ತಾವುಗಳೆಲ್ಲರೂ ಕೂಡ ಆ ಚರ್ಚೆಯಲ್ಲಿ ಭಾಗವಹಿಸಿದ್ದೀರೆಂದು ನಾನು ಭಾವಿಸುತ್ತೇನೆ. ಆದರೆ ಒಳ್ಳೆಯ ಸದುದ್ದೇಶದಿಂದ ಎರಡು ಸದನದಲ್ಲಿಯೂ ಕೂಡ ಈ ವಿಧೇಯಕವನ್ನು

ಪಾಸ್ ಮಾಡಿದ್ದಾರೆ. ಈ ವಿಧೇಯಕ ಪಾಸ್ ಆದಮೇಲೆ ರಾಜ್ಯಪಾಲರ ಅಂಕಿತಕ್ಕಾಗಿ ಕಳುಹಿಸಿದಂತಹ ಸಂದರ್ಭದಲ್ಲಿ ರಾಜ್ಯಪಾಲರು ಅದನ್ನು ಪರಾಮರ್ಶೆ ಮಾಡಿ ಸಮ್ಮತಿಯನ್ನು ಕೊಡದೇ ವಾಪಸ್ಸು ಕಳುಹಿಸಿದ್ದಾರೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ವಿಧೇಯಕ ವಾಪಸ್ಸು ಬಂದಿದೆ. ಯಾವ ಕಾರಣಕ್ಕಾಗಿ ಸಮ್ಮತಿಯನ್ನು ಕೊಟ್ಟಿಲ್ಲ ಎನ್ನುವುದಕ್ಕೆ ಮೂರ್‍ನಾಲ್ಕು ಕಾರಣಗಳನ್ನೂ ಕೂಡ ಕೊಟ್ಟಿದ್ದಾರೆ. ಮೊದಲನೆಯದಾಗಿ ನಾನು ಹೇಳಿದಂತೆ ಡಾ: ಬಾಲಸುಬ್ರಮಣ್ಯಂರವರು ಕೊಟ್ಟಿರುವಂತಹ ವರದಿ ಮತ್ತು ಶ್ರೀ ಎ.ಟಿ.ರಾಮಸ್ವಾಮಿಯವರ ನೇತೃತ್ವದ Joint Legislature Committee ವರದಿಯ ಬಗ್ಗೆ ಕೂಡ ಹೇಳಿದ್ದಾರೆ. ತಾವು ಹೇಳಿದಂತೆ ಸುಪ್ರೀಂ ಕೋರ್ಟ್ ನೀಡಿರುವಂತಹ ತೀರ್ಪನ್ನೂ ಕೂಡ quote ಮಾಡಿ, ಸ್ಪಷ್ಟೀಕರಣವನ್ನು ಕೇಳಿದ್ದಾರೆ. ನಾವು ಅದಕ್ಕೆ ಸಚಿವ ಸಂಪುಟದಲ್ಲಿ ಚರ್ಚೆ ಮಾಡಿ, ಆನಂತರ ಅದನ್ನು ನಾನು ಮತ್ತು ನಮ್ಮ ಕಾನೂನು ಮತ್ತು ಸುವ್ಯವಸ್ಥೆಯ ಸಚಿವರು ಹಾಗೂ ಕೃಷಿ ಸಚಿವರು ನಾವೆಲ್ಲರೂ ಕೂಡ ಇದರ ಬಗ್ಗೆ ಚರ್ಚೆ ಮಾಡಿ, ತಾವುಗಳು ಎರಡು ಸದನದಲ್ಲಿ ಚರ್ಚೆ ಮಾಡಿದಂತಹ ಸಂದರ್ಭದಲ್ಲಿ ಚುನಾಯಿತ ಪ್ರತಿನಿಧಿಗಳು ಏನಿದ್ದಾರೆ, ಇದು ಬೆಂಗಳೂರಿಗೆ ಮಾತ್ರ ಇದೇನು ಸೀಮಿತವಾಗಿರತಕ್ಕಂಥದ್ದಲ್ಲ. Land mafias and land grabbers ಬರೀ ಬೆಂಗಳೂರಿಗೆ ಮಾತ್ರ ಸೀಮಿತವಾಗಿ ನೋಡುತ್ತಿದ್ದೇನೆ. ಕರ್ನಾಟಕ ರಾಜ್ಯದ ಎಲ್ಲಾ ಕಡೆಯೂ ಮಾಡತಕ್ಕಂಥದ್ದು. ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಪಟ್ಟಣಗಳಲ್ಲಿಯೂ ವಾಸ ಮಾಡತಕ್ಕಂತಹ ಈ ಬಡವರು ಯಾರಿದ್ದಾರೆ ಸರ್ಕಾರಿ ಜಮೀನಿನಲ್ಲಿ ಮನೆ ಕಟ್ಟಿಕೊಂಡಿರುವಂಥವರಿಗೆ ಅಕ್ರಮವಾಗಿ ಕಟ್ಟಿರತಕ್ಕಂಥದ್ದನ್ನು ಸಕ್ರಮ ಮಾಡಬೇಕೆಂದು ನಮಗೆ ಮತ್ತು ತಮ್ಮೆಲ್ಲರಿಗೂ ಉದ್ದೇಶ ಇರತಕ್ಕಂಥದ್ದು. ಹಾಗಾಗಿ ನಾವು ಚರ್ಚೆ ಮಾಡಿ ಕಾನೂನು ಇಲಾಖೆಯವರ ಜೊತೆಯಲ್ಲಿಯೂ ಕೂಡ ಚರ್ಚೆ ಮಾಡಿ, ರಾಜ್ಯಪಾಲರು ಇದನ್ನು ವಾಪಸ್ಸು ಕಳುಹಿಸಿ ಯಾವ ರೀತಿ ಸ್ಪಷ್ಟೀಕರಣ ಕೇಳಿದ್ದಾರೆ, ಈ ಮೂರು ಅಂಶಗಳ ಬಗ್ಗೆ ಅರ್ಥ ಮಾಡಿಕೊಂಡು ನಾವುಗಳು ಚರ್ಚೆ ಮಾಡಿ, ಯಾವ ರೀತಿಯಾಗಿ ಈ ಅಕ್ರಮವಾಗಿರುವುದನ್ನು ಸಕ್ರಮ ಮಾಡಿಕೊಡಬಹುದು ಎನ್ನುವುದರ ಬಗ್ಗೆ ನಮ್ಮ ಕೃಷಿ ಸಚಿವರಾದ ಶ್ರೀ

ಕೃಷ್ಣಬೈರೇಗೌಡರು ತುಂಬಾ ಚೆನ್ನಾಗಿ ಹೇಳಿದರು. ಅದೇ ರೀತಿ ಶಾಸಕರುಗಳು ಕೂಡ ಕಣ್ಣಾರೆ ಕಂಡಿರುವುದು ಇದೆ. ಬಡವರು ಕಳೆದ 10–15 ವರ್ಷಗಳಿಂದ ಯಾವ ರೀತಿಯಾಗಿ ವಾಸ ಮಾಡುತ್ತಿದ್ದಾರೆ ಎನ್ನುವಂತಹ ಪರಿಸ್ಥಿತಿಯನ್ನು ಅವಲೋಕನ ಮಾಡಿ, ಚರ್ಚೆ ಮಾಡಿ ತೆಗೆದುಕೊಂಡು ಬಂದಿರತಕ್ಕಂಥದ್ದು. ಅವರು ಹೇಳಿದ ಹಾಗೆ ನೀವು ಬೆಂಗಳೂರಿನಲ್ಲಿ ನಾನು ಕಂದಾಯ ಸಚಿವನಾದ ಮೇಲೆ land mafia ಯಾವ ರೀತಿಯಾಗಿದೆ ಎಂದು ನಾನು ನೋಡಿದ್ದೇನೆ. ಇಲ್ಲಿ land ಗೆ ಸಂಬಂಧಪಟ್ಟಂತಹ disputes and litigations Bangalore Urban District ನಲ್ಲಿ 3,000 ಕೇಸ್‌ಗಳು ಇರತಕ್ಕಂಥದ್ದು. ನಾವು ಬಡವರ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ನಮಗೂ ಕೂಡ ಶ್ರೀ ಎ.ಟಿ.ರಾಮಸ್ವಾಮಿಯವರ ನೇತೃತ್ವದ ಜಂಟಿ ಸದನ ಸಮಿತಿಯವರು ಮತ್ತು ಡಾ:ಬಾಲಸುಬ್ರಮಣ್ಯಂರವರು ಕೊಟ್ಟಿರತಕ್ಕಂತಹ ವರದಿಯನ್ನು 12 ಲಕ್ಷ ಎಕರೆ ಜಾಗವನ್ನು ಯಾವ ರೀತಿಯಾಗಿ ಒತ್ತುವರಿಯನ್ನು ಮಾಡಿದ್ದಾರೆ, ಅದನ್ನು ಏನು ಮಾಡಬೇಕು ಎನ್ನುವುದರ ಬಗ್ಗೆ ಕೂಡ ಸಲಹೆಗಳನ್ನು ಕೊಟ್ಟಿದ್ದಾರೆ. Now we are at it. ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಯೋಚನೆಯನ್ನು ಮಾಡುತ್ತಿದ್ದೇವೆ. ಈಗಾಗಲೇ ಬೆಂಗಳೂರು ನಗರದಲ್ಲಿ ಅಕ್ರಮವಾಗಿ ಒತ್ತುವರಿಯಾದಂತಹ ಜಾಗವನ್ನು ಸಾಕಷ್ಟು ವಾಪಸ್ಸು ತೆಗೆದುಕೊಂಡಿದ್ದೇವೆ. ಬೆಂಗಳೂರು ನಗರದಲ್ಲಿ ಕಟ್ಟಿರತಕ್ಕಂಥವರು ಸರ್ಕಾರಿ ಜಾಗದಲ್ಲಿ ಕಟ್ಟಿರತಕ್ಕಂಥವರು. ಹತ್ತಾರು ವರ್ಷಗಳಿಂದ ಹಿಂದೆ ಯಾರಿಗೆ ಮನೆ ಇರಲಿಲ್ಲವೋ ಅವತ್ತಿನ ದಿವಸ ಅವರು ಬಿಪಿಎಲ್ ಕುಟುಂಬಕ್ಕೆ ಸೇರಿದವರು. ಇವತ್ತಿನ ದಿವಸ ಅವರು ಆರ್ಥಿಕವಾಗಿ ಮೇಲೆ ಬಂದಿರಬಹುದು. ನಾವು ಇಲ್ಲವೆಂದು ಹೇಳುವುದಿಲ್ಲ. Land mafias and land grabbers ಇರಬಹುದು. ಈ ರೀತಿ 5% ನಿಂದ 10% ಇದೆ ಎಂದು ಹೇಳಿ, 90% ಬಡವರಿಗೆ ಅನ್ಯಾಯವನ್ನು ಸರಿಪಡಿಸದೇ ಇರುವುದಕ್ಕಾಗುವುದಿಲ್ಲ. ಹಾಗಾಗಿ ಬಡವರಿಗೆ ಯಾವುದೇ ರೀತಿಯಲ್ಲಿ ನಾವು ಅವನಿಗೆ ಅಕ್ರಮವನ್ನು ಸಕ್ರಮ ಮಾಡಿಕೊಟ್ಟರೂ ಕೂಡ, ಅವನಿಗೆ ಪರಿಶೀಲಿಸಿ ಮಾಡಿಕೊಡುತ್ತೇವೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರುಗಳಿಗೆ ಹೇಳುತ್ತೇನೆ. ಯಾರೋ land mafia ದವನು ಕಟ್ಟಿಕೊಟ್ಟಿದ್ದಾನೆ ಅವನಿಗೆ

ನಾವು regularize ಮಾಡುತ್ತೇವೆ, ಮತ್ತೆ ಅವನು asset ಹಾಕುತ್ತಾನೆ, ಕೋಟ್ಯಾಂತರ ರೂಪಾಯಿಗಳನ್ನು ಕಬಳಿಸುತ್ತಾನೆ ಎನ್ನುವಂತಹ ದೃಷ್ಟಿಯಿಂದಲ್ಲ. ಅರ್ಜಿದಾರ 01.01.2001ನೇ ಇಸವಿಯ ಮೊದಲನೆಯ ದಿನಕ್ಕೆ ಏನು ವಾಸದ ಮನೆಯನ್ನು ನಿರ್ಮಿಸುವುದಕ್ಕಾಗಿ ರುಜುವಾತನ್ನು ಸಲ್ಲಿಸತಕ್ಕಂಥದ್ದನ್ನು ಎನ್ನುವುದನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ವಾಸದ ಮನೆ ಇಲ್ಲದ ಯಾವುದೇ ಖಾಲಿ ಭೂಮಿಯನ್ನು ಸಕ್ರಮಗೊಳಿಸತಕ್ಕಂಥದ್ದಲ್ಲ. ಅಂತಹ ಭೂಮಿಯ ಮಂಜೂರಾತಿ ಅರ್ಜಿಯನ್ನು ಸಲ್ಲಿಸಿದ ವ್ಯಕ್ತಿಗೆ ಆತನ ಕುಟುಂಬದ ಯಾವೊಬ್ಬ ಸದಸ್ಯನಿಗೂ ಕೂಡ ನಗರ ಪ್ರದೇಶದೊಳಗೆ ಯಾವುದೇ ಕಟ್ಟಡ ಅಥವಾ ನಿವೇಶನ ಇದ್ದಲ್ಲಿ ಭೂಮಿಗೆ ಮಂಜೂರಾತಿಯನ್ನು ನೀಡತಕ್ಕಂಥದ್ದಲ್ಲ. ಯಾವೊಬ್ಬ ವ್ಯಕ್ತಿಯು ತನ್ನ ಹೆಸರಿನಲ್ಲಿಯಾಗಲಿ ಅಥವಾ ತನ್ನ ಕುಟುಂಬದ ಯಾವೊಬ್ಬ ವ್ಯಕ್ತಿಯ ಹೆಸರಿನಲ್ಲಿಯಾಗಲಿ ಒಂದಕ್ಕಿಂತ ಹೆಚ್ಚಿನ ವಾಸದ ಮನೆಯ ಭೂಮಿಯ ಮಂಜೂರಾತಿಗೆ ಅರ್ಹನಾಗಿರುವುದಿಲ್ಲ. ಹಾಗಾಗಿ ಇದನ್ನು ಕಟ್ಟಿದಂತಹ ಉದ್ದೇಶ ಹೊರತುಪಡಿಸಿ ಬೇರೆ ಯಾವುದೇ ಉದ್ದೇಶಕ್ಕೆ ಬಳಸತಕ್ಕಂಥದ್ದಲ್ಲ. ಅದನ್ನು ಬೇರೆ ಯಾವುದೇ ಉದ್ದೇಶಕ್ಕೆ ಬಳಸುವಂತಿಲ್ಲ ಎನ್ನುವಂತಹ condition ಹಾಕಿದ್ದೇವೆ. ಒಂದು ಸಾರಿ ಮನೆಯನ್ನು ಕಟ್ಟಿದ ಮೇಲೆ ಬೇರೆ ಉದ್ದೇಶಕ್ಕೆ ಯಾರು ಕೂಡ ಉಪಯೋಗಿಸುವಂಥದ್ದಲ್ಲ. ಅದು ವಾಸದ ಮನೆಯಾಗಿಯೇ ಉಳಿಯಬೇಕು ಎನ್ನುವುದನ್ನು ಕೂಡ ಅದನ್ನು ಯಾವುದೇ ರೀತಿಯಲ್ಲಿ ಮಾರಾಟ ಮಾಡುವುದಕ್ಕೆ ಅವಕಾಶ ಇಲ್ಲವೆಂದು ನಾವು ಮಾಡಿದ್ದೇವೆ. ಅದರಲ್ಲಿ ಮೂರು ಕೂಡ, Supreme Court directons ಇರಬಹುದು, ಬೇರೆ ಬೇರೆ Joint Legislature Committee report ಇರಬಹುದು, ಇದೆಲ್ಲವನ್ನು ಬಿಟ್ಟು ಬೇರೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ, ನಗರದಲ್ಲಿ ರಾಜ ಕಾಲುವೆ ಇರಬಹುದು, high tension wires ಬಂದಿರುವಂತಹ ಕಡೆ ಇರಬಹುದು ಅಥವಾ ಬೇರೆ authority ಗೆ ಸೇರಿದಂತಹ ಜಾಗಗಳಿರಬಹುದು. ಬೇರೆ ಬೇರೆ ಬಿಬಿಎಂಪಿ ಇರಬಹುದು, ಇದ್ಯಾವುದನ್ನು ಕೂಡ ನಾವು ಮುಟ್ಟಿಲ್ಲ. ಕೇವಲ ಸರ್ಕಾರಿ ಜಾಗದಲ್ಲಿ ಹತ್ತಾರು ವರ್ಷಗಳ ಹಿಂದೆ ಕಟ್ಟಿಕೊಂಡಿರುವಂತಹ ಕಡು

ಬಡವನಿಗೆ ಸಕ್ರಮ ಮಾಡಿಕೊಡುತ್ತೇವೆ ಎನ್ನುವುದು. ಸಕ್ರಮ ಮಾಡಿಕೊಡುವಂಥದ್ದು ಈ ಸದನದಲ್ಲಿ ಚರ್ಚೆಯಾಗಿ ಹೊರಬಂದಿರತಕ್ಕಂತಹ ವಿಷಯವಾಗಿ. ಎರಡು ಸದನದಲ್ಲಿಯೂ ಕೂಡ ಚರ್ಚೆಯಾಗಿದೆ. ಎರಡು ಮೂರು ಸಾರಿ ಚರ್ಚೆಯಾಗಿದೆ. ತಾವೆಲ್ಲರೂ ಕೂಡ ಚರ್ಚೆಯಲ್ಲಿ ಭಾಗಿಯಾಗಿರತಕ್ಕಂಥವರೆ. ಇವತ್ತು ನೀವುಗಳು ಇಲ್ಲ ಎಂದು ಹೇಳುತ್ತಿರುವುದು ನನ್ನ ಮನಸ್ಸಿಗೆ ಯಾಕೋ ಹಿಡಿಸುತ್ತಿಲ್ಲ. ಅದಕ್ಕೆ ರಾಜ್ಯಪಾಲರು ಕೇಳಿರತಕ್ಕಂಥದ್ದಕ್ಕೆ ಏಕೆ assent ಕೊಡಲಿಲ್ಲ ಎನ್ನುವುದನ್ನು ಸ್ಪಷ್ಟವಾದಂತಹ ರೀತಿಯಲ್ಲಿ ಕೊಟ್ಟಿದ್ದೇವೆ. ಈ ಮೂರು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಎಲ್ಲಿಯೂ ಕೂಡ ಇದಕ್ಕೆ ಉಲ್ಲಂಘನೆ ಆಗದಂತಹ ರೀತಿಯಲ್ಲಿ ಬಡವರನ್ನು ಕೂಡ ರಕ್ಷಣೆ ಮಾಡಬೇಕು ಕಾನೂನು ಅಡಿಯಲ್ಲಿಯೂ ಕೂಡ ಇದು ಆಗಬೇಕು ಎನ್ನುವ ಇಚ್ಛೆಯಲ್ಲಿ ಸುದೀರ್ಘವಾಗಿ ಚರ್ಚೆ ಮಾಡಿ ಮಾಡಿದ್ದೇವೆ. ಬಡವರಿಗೋಸ್ಕರವಾಗಿ ಇಡೀ ರಾಜ್ಯದಾದ್ಯಂತ ಬಹಳ ವರ್ಷಗಳಿಂದ ಕಣ್ಣಿಗೆ ಎಣ್ಣೆಯನ್ನು ಬಿಟ್ಟುಕೊಂಡು ಕಾಯುತ್ತಿದ್ದಾರೆ. ಬರತಕ್ಕಂತಹ ಈ responsible Government ಜವಾಬ್ದಾರಿಯುತವಾದಂತಹ ಸರ್ಕಾರಗಳು ನಮ್ಮ ಪಾಲಿಗೂ ಏನಾದರು ಮಾಡುತ್ತಾರೆಯೇ ಎನ್ನುವಂತಹ ರೀತಿಯಲ್ಲಿ ಬಹಳ ಆಶಾಭಾವನೆಯನ್ನು ಇಟ್ಟುಕೊಂಡು ಮಾಡಿರತಕ್ಕಂಥದ್ದು. ಅವರ ನೆರವಿಗೆ ಹೋಗಬೇಕು, ಅವರ ಸಹಾಯಕ್ಕೆ ಹೋಗಬೇಕು ಎನ್ನುವ ದೃಷ್ಟಿಯಿಂದ ಈ ಮಸೂದೆಯನ್ನು ಮಾಡಿದ್ದೇವೆ. ದಯವಿಟ್ಟು ಇದರ ಬಗ್ಗೆ ಕೆಳಮನೆಯಲ್ಲಿಯೂ ಕೂಡ ಚರ್ಚೆಯಾಗಿದೆ. ಅಲ್ಲಿಯೂ ಕೂಡ ಜೆಡಿಎಸ್ ನವರು, ಬಿಜೆಪಿ ಯವರು ಎಲ್ಲರೂ ಕೂಡ ಮಾತನಾಡಿ ಅವರ ಒಪ್ಪಿಗೆಯನ್ನು ಕೂಡ ಕೊಟ್ಟಿದ್ದಾರೆ. ಈ ಮಸೂದೆಯನ್ನು ಪಾಸ್ ಮಾಡಿ ಕೊಟ್ಟಿದ್ದಾರೆ. ದಯವಿಟ್ಟು ತಾವುಗಳು ಕೂಡ ಇದಕ್ಕೆ 94ಸಿ ಗೆ ಒಪ್ಪಿಗೆಯನ್ನು ಕೊಟ್ಟ ಹಾಗೆ 94 ಸಿಸಿ ಗೂ ಎರಡನೆಯ ತಿದ್ದುಪಡಿಗೆ ಒಪ್ಪಿಗೆ ಕೊಡಬೇಕು ಎಂದು ತಮ್ಮ ಮುಖಾಂತರ ಮಾನ್ಯ ಸದಸ್ಯರುಗಳನ್ನು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಡಿ.ವಿ.ಸದಾನಂದಗೌಡ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ನಾವು ಒಪ್ಪಿಗೆ ಕೊಡುವುದಿಲ್ಲವೆಂದು ಹೇಳುತ್ತಿಲ್ಲ. ನಾವು ಬಡವರ ಪರವಾಗಿ ಕೂಡ ಇದ್ದೇವೆ. ಆದರೆ ಬಡವರ ಹೆಸರಿನಲ್ಲಿ ಈ ರೀತಿಯಾಗಿ ನಡೆಯುತ್ತದೆಯಲ್ಲಾ ಇದು ಆಗಬಾರದು. ಆದುದರಿಂದ ನಾನು ಮಾನ್ಯ ಸಚಿವರಲ್ಲಿ ಹೇಳುವುದೇನೆಂದರೆ, ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಹೇಳಲಿ. 94 ಸಿ ಗೆ ಗ್ರಾಮೀಣ ಪ್ರದೇಶದ ಜನರಿಗೆ ಮಾಡಿದಂತಹ ಕಾನೂನಿಗೆ ರೂಲ್ಸ್‌ನ್ನು ಇದಕ್ಕೂ ಕೂಡ ನಾವು ಅಪ್ಲೈ ಮಾಡುತ್ತೇವೆಂದು ಹೇಳಬೇಕು. ಮಾನ್ಯ ಸಚಿವರು 2012ನೇ ಇಸವಿಯ ಜನವರಿ ಮೊದಲನೆಯ ದಿನಕ್ಕೆ ಮೊದಲು ಇದು ಹತ್ತಾರು ವರ್ಷಗಳ ಹಿಂದಲ್ಲ. 2012ನೇ ಜನವರಿ ಮೊದಲು ಅಂದರೆ ಹತ್ತಾರು ವರ್ಷಗಳ ಹಿಂದಿನದಲ್ಲ. 1994, 1995, 2000 ಇಸವಿಯದಲ್ಲ. ಇದು ಒಂದು ವರ್ಷದ ಹಿಂದೆ ಜಾಗವನ್ನು encroach ಮಾಡಿದವರಿಗೂ ಇದರಲ್ಲಿ ಲಾಭವಾಗುತ್ತದೆ. ಅದಕ್ಕೆ ನಾನು ಬರೀ ಸ್ಪಷ್ಟವಾಗಿ ಹೇಳುತ್ತೇನೆ. ಇದು ಕೇವಲ ಬೆಂಗಳೂರಿಗೆ ಮಾತ್ರ ಸೀಮಿತವಾಗಿಲ್ಲ. ಮೈಸೂರಿನಲ್ಲಿ, ಮಂಗಳೂರಿನಲ್ಲಿ ಎಲ್ಲಾ ಕಡೆಗಳಲ್ಲಿಯೂ ಕೂಡ ಈ ವ್ಯವಸ್ಥೆಗಳಿದೆ. ನಾನೇನು ಇಲ್ಲವೆಂದು ಹೇಳುವುದಿಲ್ಲ. ಆದರೆ ಇವತ್ತು ಈ ರೀತಿಯ ವ್ಯವಸ್ಥೆಯನ್ನು ಮಾಡುವಾಗ, ಆ ಸಾಮಾಜಿಕ ನ್ಯಾಯದ ಬಗ್ಗೆ ಪದೇ ಪದೇ ಮಾತನಾಡುವವರು, ಆ ಸಾಮಾಜಿಕ ನ್ಯಾಯದ ಪರಿಕಲ್ಪನೆಗೆ ಸರಿಯಾದಂತಹ rules frame ಮಾಡುವುದಕ್ಕೆ ಏಕೆ ಹಿಂದೆ ಮುಂದೆ ನೋಡುತ್ತಿದ್ದಾರೆ? ಈಗಲೂ ಕೂಡ ಸದನದಲ್ಲಿ ಹೇಳಲಿ. Let it go on record. 94(ಸಿ) ಆ ಗ್ರಾಮೀಣ ಪ್ರದೇಶದ ಅಕ್ರಮ ಸಕ್ರಮಕ್ಕೆ ಏನು rules ಮಾಡಿದ್ದೇವೆ ಆ rule ನ್ನೇ ಇದಕ್ಕೂ ಕೂಡ apply ಮಾಡುತ್ತೇವೆ. ಏಕೆಂದರೆ ಸಮಾನತೆಯ ಆಧಾರದ ಮೇಲೆ ಸಾಮಾಜಿಕ ನ್ಯಾಯದ ಆಧಾರದಲ್ಲಿ ಏನು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ, ಮಾನ್ಯ ಸಚಿವರು ಹೇಳಿದ್ದು ಸರಿ ಇದೆ. ಕೆಳಗಿನ ಮನೆಯಲ್ಲಿ ಒಪ್ಪಿಕೊಂಡಿದ್ದಾರೆ. ಮೇಲಿನ ಮನೆಯಲ್ಲಿ ಒಪ್ಪಿಕೊಂಡಿದ್ದಾರೆ ಎಂದು ಹೇಳುವಂಥದ್ದರಲ್ಲಿ ಪ್ರಶ್ನೆ ಇಲ್ಲ. ಇವತ್ತು ಮಾತನಾಡಿದಂತಹ ನಮ್ಮ ಪ್ರತಿಯೊಬ್ಬ ಶಾಸಕನೂ ಕೂಡ 8–10 ಜನ ಮಾತನಾಡಿದಂಥವರು ಕೂಡ...

(8–30 ಗಂಟೆ)

**ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು):–** ಮಾನ್ಯ ಸಭಾಪತಿಯವರೇ, ನಾನು ಈ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಕೇಳಬಯಸುವುದೇನೆಂದರೆ, ಒಬ್ಬ ಬಡವ ಹುಟ್ಟಿನಿಂದ ಬಡವನಿರಬಹುದು, ಆದರೆ ಅವನು ಸಾಯುವವರೆಗೂ ಬಡವನಾಗಿಯೇ ಬದುಕಬೇಕೇ, ಅವನು ಬಡತನದಿಂದ ಹೊರಗೆ ಬರಬಾರದೆ, ಬಂದರೆ ಅದು ತಪ್ಪೇ ಎನ್ನುವುದು ನನ್ನ ಪ್ರಶ್ನೆ. ಅವನು ಮನೆ ಕಟ್ಟಿಕೊಂಡು 20 ವರ್ಷ ಆಗಿರಬಹುದು, 25 ವರ್ಷ ಆಗಿರಬಹುದು, 30 ವರ್ಷ ಆಗಿರಬಹುದು. ಬಹುಶಃ ಅವನು ಬಡವನಲ್ಲದಿದ್ದರೆ ಇಂತಹ ಜಾಗದಲ್ಲಿ ಬಂದು ಹರುಕಲು–ಮುರುಕಲು ಮನೆ ಕಟ್ಟಿಕೊಳ್ಳುತ್ತಿರಲಿಲ್ಲ. ಅವನು ಮನೆ ಕಟ್ಟಿಕೊಳ್ಳುವಾಗ ಬಡವನಿದ್ದ, ತದನಂತರದ ದಿನಗಳಲ್ಲಿ ಅವನ ಜೀವನದಲ್ಲಿ ಸುಧಾರಣೆ ಆಗಿರಬಹುದು, ಆ ರೀತಿ ಅವರ ಜೀವನದಲ್ಲಿ ಸುಧಾರಣೆ ಆಗಿದ್ದರೆ ಅದು ಅನ್ಯಾಯವೇ, ತಪ್ಪೇ ಎನ್ನುವುದನ್ನು ದಯಮಾಡಿ ತಾವು ಪರಾಮರ್ಶೆ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

**ಶ್ರೀ ಡಿ.ವಿ.ಸದಾನಂದಗೌಡ:–** ಸನ್ಮಾನ್ಯ ಸಭಾಪತಿಯವರೇ, ನಮ್ಮ ಒಂದಿಷ್ಟು ಅನುಮಾನಗಳು ಇನ್ನೂ clear ಆಗಿಲ್ಲ. ಇವರೆಲ್ಲರ ಹೇಳಿಕೆಗಳಿಂದ ನಮ್ಮ ಅನುಮಾನಗಳು ಜಾಸ್ತಿಯಾಗುತ್ತಿವೆಯೇ ಹೊರತು ಕಡಿಮೆಯಾಗುತ್ತಿಲ್ಲ. ಇಂತಹ ಸಂದರ್ಭಗಳಲ್ಲಿ ಪಾರದರ್ಶಕತೆ ಎನ್ನುವಂತಹ ಶಬ್ದಕ್ಕೆ ಅರ್ಥ ಕೊಡುವಂತಹ ರೀತಿಯಲ್ಲಿ ನಮ್ಮ ನಡವಳಿಕೆಗಳು ಇರಬೇಕಾಗುತ್ತದೆ. ಇವೊತ್ತು ಪ್ರತಿಯೊಂದಕ್ಕು ಮಧ್ಯಪ್ರವೇಶ ಮಾಡುತ್ತಿದ್ದಾರೆ. ನಿಯಮ 116ರ ಪ್ರಕಾರ ನಾವು ತಮಗೆ ಪತ್ರವನ್ನು ಕೂಡ ಕಳುಹಿಸಿಕೊಟ್ಟಿದ್ದೇವೆ. ಈ ವಿಚಾರದಲ್ಲಿ ಹೆಚ್ಚು ವಿಮರ್ಶೆ ಮಾಡಬೇಕಾದಂತಹ ಅವಶ್ಯಕತೆ ಇರುವುದರಿಂದ ಇದನ್ನು ದಯಮಾಡಿ ಪರಿಶೀಲನಾ ಸಮಿತಿಯ ಪರಿಶೀಲನೆಗೆ refer ಮಾಡಬೇಕು ಮತ್ತು ಅದರ ಆಧಾರದ ಮೇಲೆ ಚರ್ಚೆಗಳು ನಡೆದ ಮೇಲೆ ಖಂಡಿತವಾಗಿಯೂ ಆ ಜಾಗಗಳಲ್ಲಿ ವಾಸಿಸುತ್ತಿರುವಂತಹ ಬಿಪಿಎಲ್ ಪಡಿತರದಾರರು ಯಾರಿದ್ದಾರೆ ಅವರಿಗೆ ಈ

ಅವಕಾಶಗಳಾಗಬೇಕು ಎನ್ನುವಂಥದ್ದು ನಮ್ಮ ಸ್ಪಷ್ಟವಾದಂತಹ ಅಭಿಪ್ರಾಯವಾಗಿದೆ. ಅದಕ್ಕಾಗಿ ತಾವು ಅದರ ಬಗ್ಗೆ ತೀರ್ಮಾನಗಳನ್ನು ತೆಗೆದುಕೊಳ್ಳಬೇಕೆಂಬುದು ನಮ್ಮ ಅಭಿಪ್ರಾಯವಾಗಿದೆ.

**ಶ್ರೀ ಎಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೇ, ಸರ್ಕಾರ ಈ ವಿಚಾರವನ್ನು ಪ್ರತಿಷ್ಠೆಯ ಪ್ರಶ್ನೆಯಾಗಿ ತೆಗೆದುಕೊಳ್ಳುವುದು ಬೇಡ. ಈ ವಿಧೇಯಕ ಬಡವರ ಪರವಾಗಿರಬೇಕು, ಈ ಅವಕಾಶ ಬಡವರಿಗೆ ಸಿಗಬೇಕು ಎನ್ನುವಂತಹ ವಿಚಾರದಲ್ಲಿ ನಾವು ಸಹ ಸರ್ಕಾರದ ಜೊತೆಯಲ್ಲಿದ್ದೇವೆ. ಆದರೆ ಈಗ ತಂದಿರುವಂತಹ ವಿಧೇಯಕವೇನಿದೆ ಅದಕ್ಕೆ ಇದೇ ಮಾದರಿಯಲ್ಲಿ ಮಂಜೂರಾತಿ ದೊರೆತರೆ ಖಂಡಿತವಾಗಿಯೂ ಅದರ ಪರಿಣಾಮ ಬಡವರ ಪರವಾಗಿರುವುದಿಲ್ಲ, ಅದು ಭೂ ಕಬಳಿಕೆದಾರರ ಪರವಾಗಿರುತ್ತದೆ ಎನ್ನುವುದು ನಮ್ಮೆಲ್ಲರ ಅಭಿಮತ. ಬಹುಶಃ ತಾವು ಇದನ್ನು ಯಾವ ರೀತಿ ಭಾವಿಸುತ್ತೀರೋ ನನಗೆ ಗೊತ್ತಿಲ್ಲ. ಆದ್ದರಿಂದ ನಾವು-ನೀವೆಲ್ಲರೂ ಕುಳಿತುಕೊಂಡು ಈ ವಿಚಾರದಲ್ಲಿ ಚರ್ಚೆ ಮಾಡೋಣ. ನಾವು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ನಿಯಮ 116 ಪ್ರಕಾರ ಒಂದು ಪತ್ರವನ್ನು ತಮಗೆ ಕಳುಹಿಸಿಕೊಟ್ಟಿದ್ದೇವೆ, that this matter be referred to the Select Committee of this House.

**ಶ್ರೀ ವಿ.ಶ್ರೀನಿವಾಸ ಪ್ರಸಾದ್(ಕಂದಾಯ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಬಹಳ ದಿವಸಗಳಿಂದ ಇದರ ಬಗ್ಗೆ ಚರ್ಚೆ ನಡೆಯುತ್ತಿದೆ. ಕೆಳಮನೆಯಲ್ಲಿ ಕೂಡ ಈ ವಿಧೇಯಕದ ಬಗ್ಗೆ ಇದೇ ರೀತಿ ಚರ್ಚೆಯಾಗಿ ಈಗ ಅದಕ್ಕೆ ಮಂಜೂರಾತಿ ದೊರೆತಿದೆ. ಹಿಂದಿನ ಸರ್ಕಾರ ತಂದಿದ್ದಂತಹ ಈ ವಿಧೇಯಕದ ಬಗ್ಗೆ ಎರಡೂ ಸದನಗಳಲ್ಲಿ ಸುದೀರ್ಘವಾಗಿ ಚರ್ಚೆಗಳನ್ನು ಮಾಡಿ ಸನ್ಮಾನ್ಯ ರಾಜ್ಯಪಾಲರ ಅಂಕಿತಕ್ಕಾಗಿ ಕಳುಹಿಸಿಕೊಡಲಾಗಿತ್ತು. ಈ ವಿಧೇಯಕ ರಾಜ್ಯಪಾಲರಿಂದ ವಾಪಸ್ ಬಂದಂತಹ ಹಿನ್ನೆಲೆಯಲ್ಲಿ ಇದರ ಬಗ್ಗೆ ಯಾವ ರೀತಿ ಮಾಡಬಹುದು ಎಂಬ ಬಗ್ಗೆ ಚರ್ಚೆ ಮಾಡಿ ಅವರಿಗೆ ಸಮ್ಮತವಾಗುವ ರೀತಿಯಲ್ಲಿ ನಾವು ಅವರಿಗೆ ಸ್ಪಷ್ಟೀಕರಣವನ್ನು ಕಳುಹಿಸಿಕೊಟ್ಟಿದ್ದೇವೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ರಾಜ್ಯಪಾಲರು ಆ ಕಡತದ ಮೇಲೆ 'ಪುನರ್‌ಪರಿಶೀಲಿಸಿ' ಎಂದು ಬರೆದಿದ್ದಾರೆ.

**ಶ್ರೀ ವಿ.ಶ್ರೀನಿವಾಸ ಪ್ರಸಾದ್:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಮಾನ್ಯ ಸದಸ್ಯರು ಏನೇನು ಅಂಶಗಳನ್ನು ನಮ್ಮ ಗಮನಕ್ಕೆ ತೆಗೆದುಕೊಂಡು ಬಂದಿದ್ದಾರೆಯೋ ಅವುಗಳೆಲ್ಲವನ್ನೂ ನಾವು ಗಮನದಲ್ಲಿಟ್ಟುಕೊಂಡು rules frame ಮಾಡುವಂತಹ ಸಂದರ್ಭದಲ್ಲಿ ಅಳವಡಿಸಿಕೊಳ್ಳುತ್ತೇವೆ.

**ಶ್ರೀ ಡಿ.ವಿ.ಸದಾನಂದಗೌಡ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ರಾಜ್ಯಪಾಲರು ಗ್ರಾಮೀಣ ಪ್ರದೇಶಕ್ಕೆ ಸಂಬಂಧಿಸಿದಂತೆ ಮಾತ್ರ 94(ಸಿ)ಗೆ ಅಂಕಿತ ಹಾಕಿದ್ದರು, ನಗರ ಪ್ರದೇಶವನ್ನು ಹೊರತುಪಡಿಸಿರುವುದಕ್ಕೆ ಕಾರಣಗಳನ್ನು ಕೂಡ ಅವರು ನೀಡಿದ್ದಾರೆ. ನಾವು ಯಾವುದೋ ಒಂದು ರೀತಿಯಲ್ಲಿ ಆ ಕಾರಣಗಳಿಗೆ ಸಮಂಜಸವಾದ ಉತ್ತರಗಳನ್ನು ಕೊಟ್ಟು ಈ ಸದನ ಮತ್ತೆ ಮಾನ್ಯ ರಾಜ್ಯಪಾಲರ ಅಂಕಿತಕ್ಕೆ ಕಳುಹಿಸಿಕೊಟ್ಟಿದ್ದರೆ ಅದಕ್ಕೆ ಗೌರವ ಸಿಗುತ್ತಿತ್ತು. ಆ ರೀತಿ ಮಾಡದೆ ರಾಜ್ಯಪಾಲರು ವಾಪಸ್ ಕಳುಹಿಸಿಕೊಟ್ಟಿದ್ದರೆ ಅದಕ್ಕೆ ಗೌರವ ಸಿಗುತ್ತಿತ್ತು. ಆ ರೀತಿ ಮಾಡದೆ ರಾಜ್ಯಪಾಲರು ವಾಪಸ್ ಕಳುಹಿಸಿದ್ದರು, ಅದನ್ನು ಇನ್ನೊಮ್ಮೆ ನಾವು ಅಂಗೀಕಾರ ಮಾಡಿ ಕಳುಹಿಸಿದರೆ ನಡೆಯುತ್ತದೆ ಎಂದುಕೊಂಡು ಕೇವಲ ಪ್ರತಿಷ್ಠೆಯ ಮೇಲೆ ಇದನ್ನು ನಡೆಸುವುದು ಅಷ್ಟು ಸೂಕ್ತವಲ್ಲ. ಇವೊತ್ತು ಮಾನ್ಯ ರಾಜ್ಯಪಾಲರು ಮಾಡಿದ್ದನ್ನೆಲ್ಲಾ ಸರಿ ಎಂದು ಒಪ್ಪಿಕೊಳ್ಳುವಂತಹ ಸ್ಥಿತಿಯಲ್ಲಿ ವಿರೋಧ ಪಕ್ಷದವರಾಗಲಿ, ಆಡಳಿತ ಪಕ್ಷದವರಾಗಲಿ ಇಲ್ಲ.

ಸರ್ಕಾರವನ್ನು ಸರಿಯಾಗಿ ನಡೆಸುತ್ತಿಲ್ಲ ಎನ್ನುವಂತಹ ವಿಚಾರವನ್ನು ಸನ್ಮಾನ್ಯ ರಾಜ್ಯಪಾಲರು ಕೂಡ ಇತ್ತೀಚೆಗೆ ಹಲವಾರು ಸಂದರ್ಭಗಳಲ್ಲಿ ಮಾಧ್ಯಮಗಳ ಮುಖಾಂತರ ತಿಳಿಸಿದ್ದಾರೆ. ಇವೊತ್ತು ಕೂಡ ಇದನ್ನು ಅವರು ಸಂಶಯದಿಂದಲೇ ವಾಪಸ್ ಕಳುಹಿಸಿಕೊಟ್ಟಿದ್ದಾರೆ, ಇವರು rules frame ಮಾಡುವಾಗ ಖಂಡಿತವಾಗಿಯೂ ಈ ರಾಜ್ಯದ ಜನರಿಗೆ ದಾರಿ ತಪ್ಪಿಸುತ್ತಾರೆ

ಎನ್ನುವಂತಹ ಸಂಶಯಕ್ಕಾಗಿಯೇ ಅವರು ಇದನ್ನು ಪುನಃ ವಾಪಸ್ ಕಳುಹಿಸಿಕೊಟ್ಟಿರುವುದು. ಆದಕಾರಣ ಮತ್ತೆ ಸರ್ಕಾರದವರು ದಾರಿ ತಪ್ಪಿಸದಂತೆ ನೋಡಿಕೊಳ್ಳುವ ಜವಾಬ್ದಾರಿ ಈ ಸದನದ ನಮಗೂ ಸಹ ಇದೆ. ಅದಕ್ಕಾಗಿ ಈ ವಿಧೇಯಕವನ್ನು ಇನ್ನಷ್ಟು ವಿಮರ್ಶೆ ಮಾಡುವುದಕ್ಕಾಗಿ ನಿಯಮ 116ರ ಪ್ರಕಾರ ಪರಿಶೀಲನಾ ಸಮಿತಿಗೆ ಕಳುಹಿಸಿಕೊಡಬೇಕೆಂದು ನಾನು ಮತ್ತು ನಮ್ಮ ಜೆ.ಡಿ.ಎಸ್. ನಾಯಕರು ಕೇಳಿಕೊಂಡಿದ್ದೇವೆ. **"ವಿಧೇಯಕವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂಬ ಪ್ರಸ್ತಾವನೆಯನ್ನು ಅಂಗೀಕರಿಸಿದ ತರುವಾಯ ವಿಧೇಯಕವನ್ನು ಪರಿಶೀಲನಾ ಸಮಿತಿಗೆ ಕಳುಹಿಸಬೇಕೆಂದು ಯಾವುದೇ ಸದಸ್ಯ ಸೂಚಿಸಬಹುದು ಮತ್ತು ಅಂತಹ ಪ್ರಸ್ತಾವವನ್ನು ಅಂಗೀಕರಿಸಿದರೆ ಆ ವಿಧೇಯಕವನ್ನು ಪರಿಶೀಲನಾ ಸಮಿತಿಗೆ ಕಳುಹಿಸತಕ್ಕದ್ದು ಮತ್ತು ವಿಧಾನ ಪರಿಷತ್‌ನಲ್ಲಿ ಮೊದಲು ಮಂಡಿಸಲಾಗುವ ವಿಧೇಯಕಗಳಿಗೆ ಪರಿಶೀಲನಾ ಸಮಿತಿಯ ಸಂಬಂಧಪಟ್ಟ ನಿಯಮಾವಳಿಗಳು ಆ ತರುವಾಯ ಅನ್ವಯಿಸತಕ್ಕದ್ದು"** ಎಂದು ತಿಳಿಸಲಾಗಿದೆ. ಈ ನಿಯಮದ ಪ್ರಕಾರವಾಗಿಯೇ ಈ ವಿಧೇಯಕವನ್ನು ಪರಿಶೀಲನಾ ಸಮಿತಿಯ ಪರಿಶೀಲನೆಗೆ ಒಪ್ಪಿಸಬೇಕೆಂದು ನಾವು ಕೇಳುತ್ತಿದ್ದೇವೆ ಅಷ್ಟೇ ಹೊರತು ಈ ವಿಚಾರದಲ್ಲಿ ನಮಗೆ ಅವರ ಜೊತೆಯಲ್ಲಿ ಯಾವುದೇ ವಾದ-ವಿವಾದಗಳಾಗಲಿ, ಮಾತುಕತೆಗಳಾಗಲಿ ಇಲ್ಲ.

**ಶ್ರೀ ಎಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನಾವು ಇಷ್ಟನ್ನು ಹೇಳಿದ್ದೇವೆ. ಇದರ ಜೊತೆಯಲ್ಲಿ ಮಾನ್ಯ ರಾಜ್ಯಪಾಲರು ಒಂದು ಸಂದೇಶವನ್ನು ಎರಡು ಸದನಗಳಿಗೂ ಕಳುಹಿಸಿಕೊಟ್ಟಿದ್ದಾರೆ. ಆ ಬಗ್ಗೆ ಕೆಳಮನೆಯಲ್ಲಿ ಏನು ತೀರ್ಮಾನ ತೆಗೆದುಕೊಂಡಿದ್ದಾರೆಯೋ ನನಗೆ ಗೊತ್ತಿಲ್ಲ, ಆದರೆ ಈ ಸದನದಲ್ಲಿ ಮಾನ್ಯ ರಾಜ್ಯಪಾಲರು ಕಳುಹಿಸಿಕೊಟ್ಟಿರುವಂತಹ ಸಂದೇಶ ಏನಿದೆ ಇದನ್ನು ನಿಜವಾಗಿಯೂ ನಾವು ಗಂಭೀರವಾಗಿ ಪರಿಗಣಿಸಲೇಬೇಕಾಗಿದೆ. ಏಕೆಂದರೆ ಸನ್ಮಾನ್ಯ ರಾಜ್ಯಪಾಲರು ತಿಳಿಸಿರುವಂತಹ ವಿಚಾರ ಯಾವುದಿದೆ ಅದಕ್ಕೆ ನಾವು ಗೌರವ ಕೊಡಲೇಬೇಕು. ಆ ವಿಚಾರದ ಬಗ್ಗೆ ನಾವು ಕೂಲಂಕುಷವಾಗಿ ಚರ್ಚೆ

ಮಾಡಿದ ಮೇಲೆ ಅವರ ಆದೇಶಕ್ಕನುಗುಣವಾಗಿ, ಅವರ ಚಿಂತನೆ ಮತ್ತು ನಮ್ಮ ಚಿಂತನೆಗಳಿಗೆ ಅನುಗುಣವಾಗಿ ನಾವು ಒಂದು ವಿಧೇಯಕವನ್ನು ತರಲೇಬೇಕು. ಈ ವಿಧೇಯಕದ ಬಗ್ಗೆ ನಮ್ಮ ಯಾವುದೆ ರೀತಿಯ ವಿರೋಧವಿಲ್ಲ, ಆದರೆ ಯಾರಿಗೆ ಕೊಡಬೇಕು, ಹೇಗೆ ಕೊಡಬೇಕು, ಆ ನಿಯಮಗಳು ಯಾವ ರೀತಿ ಇರಬೇಕು ಎಂಬುದಕ್ಕೆ ಸೀಮಿತವಾಗಿ ಮಾತ್ರ ನಾವು ಚರ್ಚೆ ಮಾಡುತ್ತಿದ್ದೇವೆ. ಆ ರೀತಿ ಮಾಡಿದರೆ ನಾವು ರಾಜ್ಯಪಾಲರ ಸಂದೇಶಕ್ಕೂ ಗೌರವ ಕೊಟ್ಟಂತಾಗುತ್ತದೆ ಮತ್ತು ನಮ್ಮ ಚಿಂತನೆಗಳಿಗನುಗುಣವಾಗಿ ವಿಧೇಯಕವನ್ನು ತಂದಂತೆಯೂ ಆಗುತ್ತದೆ. ಈಗಾಗಲೇ ನಾವು ಹೇಳಿದ್ದೆಲ್ಲವೂ ತಮಗೆ ಮನದಟ್ಟಾಗಿದೆ, ಈ ವಿಧೇಯಕವನ್ನು ತಂದರೆ ನೇರವಾಗಿ ಅದರಿಂದಾಗುವಂತಹ ಪರಿಣಾಮಗಳೇನೆಂಬುದು ತಮಗೂ ಗೊತ್ತಿದೆ, ಮಾನ್ಯ ಸಚಿವರ ವಿಚಾರವನ್ನು ಒಂದು ಸಂದರ್ಭದಲ್ಲಿ ನಾನು ಒಪ್ಪುತ್ತೇನೆ, ಏಕೆಂದರೆ ಅವರು ಯಾವಾಗಲೂ ಸತ್ಯ ಮತ್ತು ನೈಜತೆಯನ್ನು ಬಿಟ್ಟು ಹೋಗುವವರಲ್ಲ ಎನ್ನುವ ನಂಬಿಕೆ ಇರುವುದರಿಂದ ಯಾವುದೇ ಸಂದರ್ಭದಲ್ಲಿಯೂ ಅವರ ತೀರ್ಮಾನವನ್ನು ಒಪ್ಪುತ್ತೇನೆಯೇ ಹೊರತು ಬೇರೆಯವರು ಹೇಳಿದರೆ ನಾನು ಒಪ್ಪುವುದಿಲ್ಲ.

**ಡಾ||ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಅದನ್ನು endorse ಮಾಡುತ್ತೇವೆ.

**ಶ್ರೀ ವಿ.ಶ್ರೀನಿವಾಸ ಪ್ರಸಾದ್:-** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಸಾಧಕ-ಬಾಧಕಗಳು, ಸನ್ಮಾನ್ಯ ರಾಜ್ಯಪಾಲರ ಚಿಂತನೆಗಳು, ಅವರ ಭಾವನೆಗಳೆಲ್ಲವನ್ನೂ ನಾವು ಅರ್ಥ ಮಾಡಿಕೊಂಡು ಬಡವರ ಹಿತದೃಷ್ಟಿಯಿಂದ ಈ ವಿಧೇಯಕವನ್ನು ತಂದಿದ್ದೇವೆ. 'ಸುಮಾರು ಹದಿನೈದು-ಇಪ್ಪತ್ತು ವರ್ಷಗಳ ಹಿಂದೆ ಮೂಲತಃ ತುಂಬಾ ಬಡವರಾಗಿದ್ದಂತಹವರು, ಇವೊತ್ತು ಅವರ ಜೀವನ ಸ್ವಲ್ಪಮಟ್ಟಿಗೆ ಸುಧಾರಿಸಿದ್ದರೆ ಅದು ಅಪರಾಧವೆ, Is it a crime.' ಎಂದು ಈಗಾಗಲೇ ಮಾನ್ಯ ಕೃಷಿ ಸಚಿವರು ಕೇಳಿದರು. ಅವರು ಬಡವರಾಗಿಲ್ಲದಿದ್ದರೆ ಸರ್ಕಾರಿ ಜಾಗದಲ್ಲಿ ಅಕ್ರಮವಾಗಿ ಮನೆ

ಕಟ್ಟಿಕೊಳ್ಳುವಂತಹ ಪ್ರಯತ್ನವನ್ನೇ ಮಾಡುತ್ತಿರಲಿಲ್ಲ. ಹಾಗಾಗಿ ಸುಮಾರು ಹದಿನೈದು–ಇಪ್ಪತ್ತು ವರ್ಷಗಳ ಹಿಂದೆ ಅವರ ಬದುಕು ಹೇಗಿತ್ತು ಎಂಬುದನ್ನು ಕೂಡ ನಾವು ನೋಡಬೇಕಾಗುತ್ತದೆ. ಅವರು ಬಹಳ ಆಸೆ ಇಟ್ಟುಕೊಂಡು ಬಹಳ ಕನಸುಗಳನ್ನು ಕಟ್ಟಿಕೊಂಡಿದ್ದಾರೆ. ಬೆಂಗಳೂರಿನಲ್ಲಿ ನಮ್ಮಂತಹ ಬಡವರಿಗೂ ಒಂದು ಮನೆ ಕಟ್ಟಿಕೊಳ್ಳುವುದಕ್ಕೆ ಅವಕಾಶವಿದೆ ಎನ್ನುವಂತಹ ಭಾವನೆ ಅವರ ಮನಸ್ಸಿನಲ್ಲಿ ಬಂದಿದೆ. ಹೀಗಾಗಿ ಇದರ ಸಾಧಕ–ಬಾಧಕಗಳನ್ನೆಲ್ಲಾ ಚರ್ಚೆ ಮಾಡಿಯೇ ನಾವು ಈ ತೀರ್ಮಾನಕ್ಕೆ ಬಂದಿದ್ದೇವೆ. ಬಹುಶಃ ಹಿಂದಿನ ಸರ್ಕಾರ ಕೂಡ ಇದೇ ಉದ್ದೇಶದಿಂದ ಈ ವಿಧೇಯಕವನ್ನು ತಂದಿರಬಹುದು. ಆದ್ದರಿಂದ ನಿಯಮಗಳನ್ನು ಮಾಡುವಂತಹ ಸಂದರ್ಭದಲ್ಲಿ ನಾವು ಮಾನ್ಯ ಸದಸ್ಯರು ವ್ಯಕ್ತಪಡಿಸಿರುವ ಭಾವನೆಗಳನ್ನು ಅರ್ಥಮಾಡಿಕೊಂಡು ಆ ಬದಲಾವಣೆಗಳನ್ನು ಅಳವಡಿಸಿಕೊಳ್ಳುವಂತಹ ಕೆಲಸವನ್ನು ಮಾಡುತ್ತೇವೆ. ಬಡವರ ಹಿತದೃಷ್ಟಿಯಿಂದ ಈ ಸದನ ನಾವು ತಂದಿರುವಂತಹ ವಿಧೇಯಕಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ವಿಧೇಯಕವನ್ನು ಈಗ ಮಂಜೂರಾತಿ ಮಾಡಿಕೊಡಿ, ನಾವು ಮುಂದೆ ಕಾನೂನನ್ನು ರಚನೆ ಮಾಡುವಂತಹ ಸಂದರ್ಭದಲ್ಲಿ, ನಿಯಮಗಳನ್ನು ರಚನೆ ಮಾಡುವಂತಹ ಸಂದರ್ಭದಲ್ಲಿ ಆ ಬಗ್ಗೆ ಚರ್ಚೆ ಮಾಡೋಣ ಎಂದು ಕೇಳುತ್ತಿದ್ದಾರೆ. ಆದರೆ ಸರ್ಕಾರ ಈ ವಿಧೇಯಕವನ್ನೇನು ತಂದಿದೆ, ಇದು ಇದೇರೀತಿಯಾಗಿ ಮಂಜೂರಾದರೆ, ನಾಳೆ ತರುವಂತಹ ಯಾವುದೇ ನಿಯಮಗಳಲ್ಲಿ ಇದನ್ನು ಒಳಪಡಿಸುವುದಕ್ಕಾಗುವುದಿಲ್ಲ. ಆದ್ದರಿಂದ ಕಾನೂನಿನಲ್ಲಿಯೇ ಇದನ್ನು ಯಾವ ರೀತಿ ತರಬೇಕೆಂಬುದನ್ನು ನಾವು–ನೀವೆಲ್ಲರೂ ಒಟ್ಟಿಗೆ ಸೇರಿ ಜಂಟಿ ಪರಿಶೀಲನಾ ಸಮಿತಿಯಲ್ಲಿ ಚರ್ಚೆ ಮಾಡೋಣ. ಹಿಂದೆ ಕೂಡ ಬಹಳಷ್ಟು ಸಂದರ್ಭಗಳಲ್ಲಿ ಜಂಟಿ ಪರಿಶೀಲನಾ ಸಮಿತಿಗಳು ರಚನೆಯಾಗಿವೆ.

**Sri S.R.PATIL:-** It will go years together.

**ಶ್ರೀ ಎಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೇ, ಇಲ್ಲ, years together ಇದನ್ನು ತೆಗೆದುಕೊಂಡು ಹೋಗುವಂತಹ ಪರಿಸ್ಥಿತಿ ಇಲ್ಲ. We will do that. ನಾಳೆ ಏನಾಗುತ್ತದೆ ಎಂದರೆ, within a period of six months.

**ಡಾ||ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೇ, ಕಾಲಮಿತಿಯಲ್ಲಿಯೇ ಚರ್ಚೆ ನಡೆಯಲಿ, ಇನ್ನು 3 ತಿಂಗಳಿನಲ್ಲಿಯೇ ಚರ್ಚೆ ಮಾಡಿ ತೀರ್ಮಾನಕ್ಕೆ ಬರೋಣ.

**ಶ್ರೀ ವಿ.ಶ್ರೀನಿವಾಸ ಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇನು ಸಲಹೆಗಳು ಮತ್ತು ಮಾರ್ಗಸೂಚಿಗಳನ್ನು ಕೊಟ್ಟಿದ್ದಾರೆ, ಅವೆಲ್ಲವನ್ನೂ ನಾವು ಗಮನದಲ್ಲಿಟ್ಟುಕೊಂಡು ಯಾವ ರೀತಿ ಮಾಡಬೇಕೆಂಬುದನ್ನು ನಾವು ಖಂಡಿತವಾಗಿಯೂ ಮಾಡುತ್ತೇವೆ. ಆದ್ದರಿಂದ ದಯಮಾಡಿ ವಿರೋಧ ಪಕ್ಷದವರು ಈ ವಿಧೇಯಕವನ್ನು ಮಂಜೂರು ಮಾಡಿಕೊಡಬೇಕೆಂದು ನಾನು ಮತ್ತೊಮ್ಮೆ ವಿನಂತಿಸುತ್ತೇನೆ.

**ಶ್ರೀ ಎಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೇ, ನಾವು ಮಾಡಿರುವಂತಹ ಚರ್ಚೆಯ ಹಿನ್ನೆಲೆಯಲ್ಲಿ ನಾವು ಸೂಚಿಸಿರುವಂತಹ ಸಲಹೆಗಳನ್ನು ಒಳಗೊಂಡಂತೆ ನಾಳೆ ಅವರು ಒಂದು (ತಿದ್ದುಪಡಿ) ವಿಧೇಯಕವನ್ನು ಮಂಡಿಸುವುದಾದರೆ ಅದರಲ್ಲಿ ನಮ್ಮ ಆಕ್ಷೇಪಣೆ ಏನೂ ಇಲ್ಲ. ಅದನ್ನು ಬಿಟ್ಟು ಮಾನ್ಯ ಸಚಿವರು as it is ಈ ವಿಧೇಯಕವನ್ನು ಈಗ ಮಂಜೂರು ಮಾಡಿಕೊಡಿ, ನಾವು ನಂತರ ಸದಸ್ಯರ ಸಲಹೆಗಳ ಬಗ್ಗೆ ವಿಚಾರ ಮಾಡುತ್ತೇವೆ ಎಂದರೆ ಅದಕ್ಕೆ ನಾವು ಒಪ್ಪುವುದಿಲ್ಲ. ಹಾಗಾದರೆ ಈ ವಿಧೇಯಕ ಜಂಟಿ ಪರಿಶೀಲನಾ ಸಮಿತಿಯ ಪರಿಶೀಲನೆಗೆ ಹೋಗಲಿ, ಅಲ್ಲಿ ಎರಡೂ ಕಡೆಯ ಸದಸ್ಯರು ಕುಳಿತು ಈ ವಿಧೇಯಕದ ಬಗ್ಗೆ ಚರ್ಚೆ ಮಾಡಿ, ಎಲ್ಲರಿಗೂ ಸರ್ವಸಮ್ಮತವಾದಂತಹ ರೀತಿಯಲ್ಲಿ ಮುಂದಿನ ಅಧಿವೇಶನದಲ್ಲಿ ಒಂದು ವಿಧೇಯಕವನ್ನು ತಂದಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರವನ್ನು ಎಲ್ಲರೂ ಮೆಚ್ಚುವಂತಹ ರೀತಿಯಲ್ಲಿ ನಾವು ಕೂಡ ಈ ವಿಧೇಯಕವನ್ನು ಮಾಡಿಕೊಡುತ್ತೇವೆ. ಆ ವಿಚಾರದಲ್ಲಿ ನಾವು ತಮಗೆ ಬೆಂಬಲ ನೀಡುತ್ತೇವೆ.

**ಡಾ||ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೇ, ನನಗೆ ನೆನಪಿರುವ ಪ್ರಕಾರ ಸನ್ಮಾನ್ಯ ರಾಜ್ಯಪಾಲರಿಂದ ಒಂದು ಕರಡು ವಿಧೇಯಕ ವಾಪಸ್ ಕಳುಹಿಸಲ್ಪಟ್ಟು **'ಇದನ್ನು ಪುನರ್ಪರಿಶೀಲನೆ ಮಾಡಿ'** ಎಂದು ಹೇಳಿರುವುದು ಇದೇ ಮೊದಲ ಸಲವೆನಿಸುತ್ತದೆ.

**ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇಲ್ಲ, ಇದೇ ಸದನದಲ್ಲಿ ತಂದಿರುವಂತಹ ಎಷ್ಟೋ ವಿಧೇಯಕಗಳು ಸನ್ಮಾನ್ಯ ರಾಜ್ಯಪಾಲರಿಂದ back reference ಆಗಿರುವಂತಹ ಸಾಕಷ್ಟು ಉದಾಹರಣೆಗಳಿವೆ.

**ಶ್ರೀ ಡಿ.ವಿ.ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, ನಮಗೆ ರಾಜ್ಯಪಾಲರ ಬಗ್ಗೆ ಗೌರವವಿದೆ. ಆದರೆ, he has put it in writing. ಮಾಧ್ಯಮಗಳಿಗೆ ತಿಳಿಸಿರುವಂತಹ ವಿಚಾರಗಳ ಬಗ್ಗೆ ನಾವು ಹೇಳಿರಬಹುದು, ಆದರೆ ಅಧಿಕೃತವಾಗಿ ಸಂವಿಧಾನಬದ್ಧವಾಗಿ ನೇಮಕಗೊಂಡಿರುವಂತಹ ಒಬ್ಬರು ರಾಜ್ಯಪಾಲರು ಇಂತಹ ವಿಚಾರದ ಬಗ್ಗೆ ಪುನರ್ ಪರಿಶೀಲನೆಗೆ ಕಳುಹಿಸಿದ ಮೇಲೆ, it is our duty….

**ಶ್ರೀ ಡಿ.ವಿ.ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, he has put it in writing. ಯಾವುದೆಲ್ಲಾ ಬಾಕಿ ಇರುವುದನ್ನು ಮತ್ತೊಂದನ್ನು ನಾವು ಮಾಧ್ಯಮಗಳಿಗೆ ಹೇಳಿರಬಹುದು. ಆದರೆ ಅಧಿಕೃತವಾಗಿ ಸಂವಿಧಾನಬದ್ಧವಾದ ರಾಜ್ಯಪಾಲರು ಇಂತಹ ವಿಚಾರಗಳ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿ ಎಂದು ಹೇಳಿದ ಮೇಲೆ it is our duty.

**ಸಭಾಪತಿಯವರು:-** ಮಾನ್ಯ ಸಚಿವರು ಏನು ಹೇಳುತ್ತಾರೆ ಎಂಬುದನ್ನು ಕೇಳೋಣ.

**ಶ್ರೀ ಶ್ರೀನಿವಾಸ್ ಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧಪಕ್ಷದ ನಾಯಕರು ನಾವು ಕಳಿಸಿದಾಗ ಮಾನ್ಯ ರಾಜ್ಯಪಾಲರು ಇದಕ್ಕೆ ಸಮ್ಮತಿ ನೀಡಲಿಲ್ಲ, ಆದರೆ ಈಗ ನೀವು ಕಳಿಸಿದಾಗ ಇದಕ್ಕೆ ಹೇಗೆ ಸಮ್ಮತಿ ನೀಡಿದರು ಎಂದು ಕೇಳುತ್ತಿದ್ದಾರೆ. ಆದರೆ ಅವರು ಕೊಟ್ಟ

ಕಾರಣಗಳಿಗೆ ನಾವು ಬಹಳ ಸ್ಪಷ್ಟವಾಗಿ ಸ್ಪಷ್ಟೀಕರಣ ಕೊಟ್ಟಿದ್ದೇವೆ ಮತ್ತು ಸ್ಪಂದಿಸಿದ್ದೇವೆ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಹಾಗಾಗಿ ದಯಮಾಡಿ ಮಾನ್ಯ ಸಭಾಪತಿಯವರಲ್ಲಿ ಕೇಳಿಕೊಳ್ಳುವುದೇನೆಂದರೆ he can proceed with this.

**ಡಾ||ಎ.ಹೆಚ್.ಶಿವಯೋಗಿಸ್ವಾಮಿ:-** ತಾವು ಒತ್ತಾಯ ಮಾಡಬೇಡಿ. ಇದು ಕಮಿಟಿಗೆ ಹೋಗಲೇಬೇಕಾಗುತ್ತದೆ.

**ಸಭಾಪತಿಯವರು:-** ಈಗ ನಡೆದಿರುವಂತಹ ಸಾಕಷ್ಟು ಚರ್ಚೆಯನ್ನು ನಾನು ಗಮನಿಸಿದ್ದೇನೆ. ಗೌರವಾನ್ವಿತ ವಿರೋಧ ಪಕ್ಷದ ನಾಯಕರಾದ ಶ್ರೀ ಡಿ.ವಿ.ಸದಾನಂದಗೌಡರು, ಜೆ.ಡಿ.ಎಸ್. ಮುಖಂಡರಾದಂತಹ ಮಾನ್ಯ ಎಂ.ಸಿ.ನಾಣಯ್ಯನವರು ಇಬ್ಬರೂ ಸೇರಿ 116ನೇ ಪರಿಚ್ಛೇದದ ಪ್ರಕಾರ ಈ ಬಿಲ್ಲನ್ನು Select Committeeಗೆ ರೆಫರ್ ಮಾಡಬೇಕೆಂದು ನನಗೆ ಒಂದು ಪತ್ರವನ್ನು ಕಳುಹಿಸಿದ್ದಾರೆ. ಇದು ನಮ್ಮ ಪದ್ಧತಿ ಅಲ್ಲ. ಇತ್ತೀಚಿನ ವರ್ಷಗಳಲ್ಲಿ ಈ ರೀತಿ ಆಗಿಲ್ಲ. ಈ ಹಿಂದೆ ಆಗಿದೆ. ಸರ್ಕಾರ ಇದನ್ನು ಒಪ್ಪುವುದಾದರೆ ಪ್ರಶ್ನೆಯೇ ಇಲ್ಲ, ಇಲ್ಲವೆಂದರೆ ಇದನ್ನು ಸದನದ ಮತಕ್ಕೆ ಹಾಕಬೇಕಾಗಿದೆ. ಇದು ನನಗೆ ಇಕ್ಕಟ್ಟಿನ ಪರಿಸ್ಥಿತಿ ಬಂದಿದೆ. ನಾನು ಸಭಾಪತಿ ಆದಮೇಲೆ ಈ ರೀತಿಯಾದಂತಹ ಇಕ್ಕಟ್ಟಿನ ಪರಿಸ್ಥಿತಿ ಬಂದಾಗಲೆಲ್ಲಾ ಸರ್ಕಾರ ಮತ್ತು ವಿರೋಧ ಪಕ್ಷದವರ ಜೊತೆ ಮಾತನಾಡಿ ಮತದ ಮೂಲಕ ಬೇಡ, ಸಹಮತದ ಮೂಲಕ ಮಾಡೋಣವೆಂದು ಮಾಡಿದ್ದೇವೆ.

**ಡಾ||ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು ಇದನ್ನು ಒಪ್ಪಬೇಡಿ, ಪರಿಶೀಲನಾ ಸಮಿತಿಗೆ ಹಾಕಿಬಿಡಿ.

(ಗೊಂದಲ)

**ಶ್ರೀ ಹೆಚ್.ಎಸ್.ಮಹದೇವಪ್ರಸಾದ್:-** ಈ ಹಿಂದೆ ಈ ವಿಷಯ ಸದನದಲ್ಲಿ ಪ್ರಸ್ತಾಪ ಆಗದಿದ್ದರೆ ಪರವಾಗಿಲ್ಲ, ಆದರೆ ಈ ಹಿಂದೆ ಈ ವಿಷಯ ಚರ್ಚೆ ಆದಾಗ ಇದನ್ನು ಒಪ್ಪಿಕೊಂಡು ಈಗ ಇದನ್ನು ಬೇಡ ಎಂದು ಹೇಳಿದರೆ ಹೇಗೆ?

(ಗೊಂದಲ)

**ಸಭಾಪತಿಯವರು:-** ಎಲ್ಲರೂ ಈ ರೀತಿಯಾಗಿ ಒಟ್ಟಿಗೆ ಮಾತನಾಡಿದರೆ ಹೇಗೆ?

**ಶ್ರೀ ಎಸ್.ಆರ್.ಪಾಟೀಲ್ (ಸಭಾ ನಾಯಕರು):-** ಈ ಬಿಲ್ಲನ್ನು ತಂದವರು ನೀವೇ. ಇದಕ್ಕೆ ನೀವೇ author. ನಿಮಗೆ ನಮ್ಮ ಸಹಮತವನ್ನು ವ್ಯಕ್ತಪಡಿಸಿದ್ದೆವು, ಈಗ ನೀವು ನಿಮ್ಮ ಧ್ವನಿಯನ್ನು ಬದಲಿಸಿದರೆ ಹೇಗೆ?

**ಶ್ರೀ ಎಂ.ಸಿ.ನಾಣಯ್ಯ:-** ಮಾನ್ಯ ಸಭಾನಾಯಕರ ಗಮನಕ್ಕೆ ನಾನು ಒಂದು ವಿಷಯವನ್ನು ತರುತ್ತೇನೆ. ಮಾನ್ಯ ಈಶ್ವರಪ್ಪನವರು ಈ ಬಿಲ್ಲನ್ನು ತಂದಂತಹ ಸಂದರ್ಭದಲ್ಲಿ ನಾವು ನೀವು ಇಲ್ಲಿಯೇ ಕುಳಿತಿದ್ದೆವು, ನೀವು ನಮ್ಮ ಸಾಲಿನಲ್ಲಿ ಕುಳಿತುಕೊಂಡಿದ್ದಿರಿ. ಆ ಸಂದರ್ಭದಲ್ಲಿ ಈ ಬಿಲ್ಲಿನ ಬಗ್ಗೆ ಏನೆಲ್ಲಾ ಹೇಳಿದೆವು? ಮಾನ್ಯ ಮತ್ತಿಕಟ್ಟಿಯವರೇ, ನೀವು ನಮ್ಮ ಪಕ್ಕದಲ್ಲಿಯೇ ಕುಳಿತುಕೊಂಡಿದ್ದೀರಿ ಅಲ್ಲವೇ? ಆ ಸಂದರ್ಭದಲ್ಲಿ ನಾವು ಈ ಬಿಲ್ಲನ್ನು ಯಾವ ಉದ್ದೇಶದಿಂದ ತರಲಾಗಿದೆ ಎಂದು ನಮಗೆಲ್ಲಾ ತಿಳಿದಿದೆ ಎಂದು ಬಹಳ ದೊಡ್ಡದಾಗಿ ಹೇಳಿದೆವು, ಕಡೆಗೆ ಈ ಬಿಲ್ಲನ್ನು ತರಬೇಡಿ, ಇದನ್ನು ತಂದರೆ ನಾವು ಒಪ್ಪುವುದಿಲ್ಲವೆಂದು ಹೇಳಿ ನಾವು ಇಲ್ಲಿ ಧರಣಿ ಮಾಡಿದ್ದು ನಿಮಗೆ ಮರೆತುಹೋಯಿತೆ? ಆ ಸಂದರ್ಭದಲ್ಲಿ ನಮ್ಮ ನಮ್ಮ ಮೇಲೆ ಜಬರ್‌ದಸ್ತ್ ಮಾಡಿ ಪಾಸ್ ಮಾಡಿಕೊಂಡು ಹೋದರು.

**ಡಾ॥ಎ.ಹೆಚ್.ಶಿವಯೋಗಿಸ್ವಾಮಿ:-** ಆಗ ಬೇಡವೆಂದು ಹೇಳಿದವರು ಈಗ ಏಕೆ ಬೇಕು ಎಂದು ಹೇಳುತ್ತಿದ್ದೀರಿ? ಸ್ಥಾನ ಬದಲಾವಣೆ ಆದಮೇಲೆ ವಿಚಾರಣೆಯು ಸಹ ಬದಲಾವಣೆ ಆಗುತ್ತದೆಯೇ?

**ಶ್ರೀ ಮತ್ತಿಕಟ್ಟಿ ವೀರಣ್ಣ:-** ಇದನ್ನು reconsideration ಮಾಡುವುದಕ್ಕೆ ಮಾನ್ಯ ರಾಜ್ಯಪಾಲರು ಕೇಳಿದಂತಹ ಎಲ್ಲಾ ಕ್ಲಾರಿಫಿಕೇಶನ್‌ಗೂ ಸರ್ಕಾರ ಕ್ಲಿಯರ್ ಮಾಡಿದೆ ಎಂದು ಹೇಳಿದೆನಷ್ಟೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಈಗ ನಾವು ಅದನ್ನೇ reconsideration ಮಾಡುವುದು.

**ಶ್ರೀ ಮತ್ತಿಕಟ್ಟೆ ವೀರಣ್ಣ:-** ಮಾನ್ಯ ಪುಟ್ಟಸ್ವಾಮಿಯವರು ಏಕೆ ಈ ರೀತಿ ಮಾತನಾಡುತ್ತಿದ್ದಾರೆ? ಅವರು ಅಲ್ಲಿಯೂ ಇಲ್ಲ, ಇಲ್ಲಿಯೂ ಇಲ್ಲ.

(ಗೊಂದಲ)

**ಸಭಾಪತಿಯವರು:-** ನಾನು ಇನ್ನೂ ವಿಷಯವನ್ನೇ ಮುಗಿಸಲಿಲ್ಲ. ನಾನು ಸುಮಾರು 25 ವರ್ಷದಿಂದಲೂ ಈ ಸದನದ ಸದಸ್ಯನಾಗಿದ್ದೇನೆ. ಯಾವುದೇ ಬಿಲ್ಲನ್ನು ಮತಕ್ಕೆ ಹಾಕಿ ಮಾಡುವ ಪದ್ಧತಿ ನಾವು ಮಾಡಿಲ್ಲ, ಸಹಮತವನ್ನು ವ್ಯಕ್ತಪಡಿಸಿದ್ದೇವೆ. ಈ ಹಿನ್ನಲೆಯಲ್ಲಿ ಇದನ್ನ ಮತಕ್ಕೆ ಹಾಕಲೇಬೇಕು ಎಂದು ಹೇಳುವುದಾದರೆ ಕಾನೂನಿನ ಪ್ರಕಾರ ಮತಕ್ಕೆ ಹಾಕಲೇ ಬೇಕಾಗುತ್ತದೆ. ಆದರೆ ಈ ಹಿಂದೆ ಮತಕ್ಕೆ ಹಾಕದೆಯೇ ಒಂದು ಬಿಲ್ಲನ್ನು ಸಹಮತದೊಂದಿಗೆ ಮಾಡಿದ್ದೇವೆ.

**ಶ್ರೀ ಕೃಷ್ಣಬೈರೇಗೌಡ:-** ಸನ್ಮಾನ್ಯ ಸಭಾಪತಿಯವರೇ, ನಾನು ಮತ್ತೊಮ್ಮೆ ಎಲ್ಲರಲ್ಲಿಯೂ ಮನವಿ ಮಾಡುತ್ತೇನೆ. ವಾಸ್ತವಾಂಶವೇನೆಂದರೆ...

**ಸಭಾಪತಿಯವರು:-** ಆಯಿತು, ಈಗ ನಾನು ಏನು ಮಾಡಬೇಕು ಹೇಳಿ. ನಾನು ಮತಕ್ಕೆ ಹಾಕಬೇಕೆ ಅಥವಾ ಸಹಮತದಿಂದ ಮಾಡುತ್ತೀರ ಹೇಳಿ.

**ಶ್ರೀ ಎಸ್.ಆರ್.ಪಾಟೀಲ್(ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, we will have a discussion with our Chief Minister. ನಾಳೆಯವರೆಗೆ ಇದನ್ನು . . .

**ಶ್ರೀ ಎಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೇ, ನಾವು ಅವರಿಗೆ ಸಮಯ ಕೊಡಲೇಬೇಕಾಗುತ್ತದೆ, ಏಕೆಂದರೆ ಅವರು ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡಬೇಕಾಗುತ್ತದೆ, ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಒಪ್ಪಿಗೆ ನೀಡಬೇಕಾಗುತ್ತದೆ. ಆನಂತರ ಇದನ್ನು Select Committee ಗೆ ಅಥವಾ Joint Select Committee ಗೆ ಕೊಡೋಣ.

**ಶ್ರೀ ಎಸ್.ಆರ್.ಪಾಟೀಲ್:–** ಆದರೆ ತಮ್ಮಲ್ಲಿ ನಮ್ಮ ಮನವಿ ಏನೆಂದರೆ, ಬಡವರ ಪರವಾಗಿ ನೀವು ಇರಬೇಕು. ಅನೇಕ ವರ್ಷದಿಂದ ತಲೆಮೇಲೆ ಸೂರು ಇಲ್ಲದಿರುವಂತಹ ಅನೇಕ ಬಡವರಿದ್ದಾರೆ.

**ಶ್ರೀ ಎಂ.ಸಿ.ನಾಣಯ್ಯ:–** ತಲೆ ಮೇಲೆ ಯಾರಿಗೆ ಸೂರಿಲ್ಲ ಅವರಿಗೆ ಕೊಡಿ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, we are deadly against the land grabbers. We will never encourage such activities.

**ಡಾ||ಎ.ಹೆಚ್.ಶಿವಯೋಗಿಸ್ವಾಮಿ:–** ನಮ್ಮ ಅಭಿಪ್ರಾಯವು ಸಹ ಅದೇ ರೀತಿ ಇದೆ. ನಾವು ಸಹ ಬಡವರ ಪರವಾಗಿಯೇ ಇದ್ದೇವೆ.

(ಗೊಂದಲ)

**ಶ್ರೀ ಕೃಷ್ಣ ಬೈರೇಗೌಡ:–** ಲ್ಯಾಂಡ್ ಮಾಫಿಯಾ ಎಕರೆಗಟ್ಟಲೆ ಮಾಡಿರುವವರನ್ನು ಹಿಡಿಯಿರಿ. 20x30 ಅಳತೆಯಲ್ಲಿ ಯಾವ ಲ್ಯಾಂಡ್ ಮಾಫಿಯಾ ಅಂತ ಮಾತನಾಡುತ್ತೀರಿ? ಎಕರೆಗಟ್ಟಲೆ ಮಾಡಿರುವವರನ್ನು ಬಿಟ್ಟು, ಯಾರೋ ಬಡವರು 20x30 ಅಳತೆಯಲ್ಲಿ ಒಂದು ಮನೆ ಕಟ್ಟಿಕೊಂಡಿದ್ದರೆ ಅವರ ಮನೆಗೆ ಲ್ಯಾಂಡ್ ಮಾಫಿಯಾ ಎಂದು ಹೇಳುತ್ತೀರಲ್ಲ? ಎಕರೆಗಟ್ಟಲೆ ಮಾಡಿರುವವರನ್ನು ಹಿಡಿದು ಬಲಿ ಹಾಕಿ. ಅದು ಬಿಟ್ಟು ಬಡವರು 20x30 ಅಳತೆಯಲ್ಲಿ ಮನೆ ಕಟ್ಟಿಕೊಂಡಿದ್ದರೆ ಅದಕ್ಕೆ ಲ್ಯಾಂಡ್ ಮಾಫಿಯಾ ಎಂದು ಹೇಳುತ್ತಿದ್ದೀರಲ್ಲ?

(ಗೊಂದಲ)

**ಶ್ರೀ ಅಶ್ವತ್ಥ್ ನಾರಾಯಣ:–** ಮಾನ್ಯ ಸಭಾಪತಿಯವರೇ,,,,,,

(ಗೊಂದಲ)

**ಸಭಾಪತಿಯವರು:–** ಮಾತನಾಡಬೇಡಿ ಎಂದು ಹೇಳಿದರೂ ಮಾತನಾಡುತ್ತಿದ್ದೀರಲ್ಲ. ನಾನು ಹೇಳುವುದನ್ನು ಕೇಳಿಸಿಕೊಳ್ಳದೆಯೇ ಎಲ್ಲರೂ ಮಾತನಾಡುತ್ತಿದ್ದೀರಿ. ನಾನು ನಿಮ್ಮ ವಾದ ವಿವಾದ ಎಲ್ಲಾ ಕೇಳಿದಮೇಲೆ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಒಂದು ತಂಡದ ನಾಯಕರು ಇಬ್ಬರೂ ಸೇರಿ ನನಗೆ ಒಂದು ಪತ್ರವನ್ನು ಕಳುಹಿಸಿದ್ದಾರೆ. ಅದರ ಮೇಲೆ ನನ್ನ ರೂಲಿಂಗ್ ಕೊಡುವುದಕ್ಕೆ ಮುಂಚೆ ಸರ್ಕಾರದ ಅಭಿಪ್ರಾಯ ಪಡೆದುಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡುತ್ತಿದ್ದೇನೆ. ಈ ಸಂದರ್ಭದಲ್ಲಿ ನಾನು ಒಂದೆರಡು ವಿಷಯಗಳನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ನಮ್ಮ ಸದನದಲ್ಲಿ ಬಹಳಷ್ಟು ಸಲ ಈ ರೀತಿಯಾದಂತಹ ಸಂದರ್ಭ ಬಂದಾಗ ಸಹಮತದ ಮೂಲಕ ನಾವು ಮಾಡಿದ್ದೇವೆ. ಧ್ವನಿ ಮತಕ್ಕೆ ಹಾಕಲೇಬೇಕು ಎಂದು ಹೇಳಿದರೆ ಧ್ವನಿ ಮತಕ್ಕೆ ಹಾಕುತ್ತೇವೆ. ಆದರೆ regular ಆಗಿ ಮತಕ್ಕೆ ಹಾಕುವಂತಹ ಪದ್ಧತಿಯನ್ನು ಆದಷ್ಟು avoid ಮಾಡಿದ್ದೇವೆ. ನನ್ನ 25 ವರ್ಷಗಳ ರಾಜಕೀಯ ಜೀವನದಲ್ಲಿ ಎಂದೂ ಈ ರೀತಿ ಆಗಿಲ್ಲ. ಇದು healthy democracy ಆಗುತ್ತದೆ. ಬಹಳಷ್ಟು ಬಾರಿ ನಮ್ಮ ಸದನದಲ್ಲಿ ಸರ್ಕಾರಕ್ಕೆ ಬಹುಮತ ಇಲ್ಲದೇ ಇರುವಂತಹ ಸಂಗತಿಗಳು ಬರುತ್ತವೆ. ಯಾರಿಗೂ ಮುಜುಗರ ಮಾಡುವಂಥದ್ದಲ್ಲ. ಇಲ್ಲಿ ಚರ್ಚೆಯಲ್ಲಿ ವೇದಿಕೆ ಒಂದು ಆಗಬೇಕು. ಬಹುಮತದ ಆಧಾರದ ಮೇಲೆ ಏನೂ ತೀರ್ಮಾನ ಮಾಡದೆ ಸಹಮತ ಆಧಾರದ ಮೇಲೆ ಮಾಡಿದ್ದೇವೆ. ಆ ಹಿನ್ನಲೆಯಲ್ಲಿ ಅವರು ಕಳಿಸಿರುವಂಥದ್ದರ ಬಗ್ಗೆ ನನಗೆ ನೀವೆಲ್ಲರೂ ಒತ್ತಾಯ ಮಾಡಿದರೆ ಬೇರೆ ದಾರಿಯೇ ಇಲ್ಲ, ಸಹಮತಕ್ಕೆ ಹಾಕಲೇಬೇಕಾಗುತ್ತದೆ. ಅದಕ್ಕೋಸ್ಕರ ಮತಕ್ಕೆ ಹಾಕುವುದಕ್ಕೆ ನನ್ನ ಅಭಿಪ್ರಾಯವನ್ನು ನಾನು ಹೇಳುತ್ತಿದ್ದೇನೆ, ಮತಕ್ಕೆ ಹಾಕಲೇ ಬೇಕಾದಂತಹ ಅನಿವಾರ್ಯ ಬಂದರೆ ನಾನು ಹಾಕಲೇ ಬೇಕಾಗುತ್ತದೆ, ನಾನು ಇಲ್ಲಿ ಕುಳಿತುಕೊಂಡು ಕಾನೂನು ಬಿಟ್ಟು ಮಾಡುವುದಕ್ಕೆ ಬರುವುದಿಲ್ಲ. ಆದುದರಿಂದ ಅದಕ್ಕೆ ಮುಂಚೆ ಸರ್ಕಾರದ ಒಂದು ಅಭಿಪ್ರಾಯವನ್ನು ಕೇಳಿದೆ. ಮಾನ್ಯ ಸಭಾನಾಯಕರು ಒಂದು ಮಾತನ್ನು ಹೇಳಿದರು. ಅದಕ್ಕೆ ಮಾನ್ಯ ಸಚಿವರು ತಮ್ಮ ಸಹಮತವನ್ನು ವ್ಯಕ್ತಪಡಿಸಿದ್ದಾರೆ. ಆದುದರಿಂದ ಈ ವಿಷಯದ ಚರ್ಚೆಯನ್ನು ಸದ್ಯಕ್ಕೆ ಇಲ್ಲಿಗೆ ನಿಲ್ಲಿಸೋಣ,

ನಾಳೆ ಈ ವಿಷಯವನ್ನು ಪುನಃ ಮುಂದುವರೆಸೋಣ, ನಾವು ನಮ್ಮ ಮುಖ್ಯಮಂತ್ರಿಗಳನ್ನು, ಹಿರಿಯರನ್ನು ಕೇಳಿಕೊಂಡು ವಾಪಸ್ಸು ಬರುತ್ತೇವೆ ಎಂದು ತಮ್ಮ ಅಭಿಪ್ರಾಯವನ್ನು ತಿಳಿಸುತ್ತೇವೆಂದು ಮಾನ್ಯ ಸಭಾ ನಾಯಕರು ಹೇಳಿರುವ ಹಿನ್ನೆಲೆಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ನಾಣಯ್ಯನವರು ಕೊಟ್ಟಿರುವ ಈ ಪತ್ರದ ಸಮೇತ ಈ ವಿಧೇಯಕದ ಚರ್ಚೆಯನ್ನು ಇವತ್ತು ಇಲ್ಲಿಗೆ ಸ್ಥಗಿತಗೊಳಿಸಿದ್ದೇನೆ, ನಾಳೆ ಅದನ್ನು ಮುಂದುವರೆಸುತ್ತೇನೆ. ಇದು ನನ್ನ ರೂಲಿಂಗ್.

ಈಗ ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕಾ ಸಚಿವರು, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ (ಎರಡನೇ ತಿದ್ದುಪಡಿ) ವಿಧೇಯಕ, 2013ರ ಪ್ರಸ್ತಾವನೆಯನ್ನು ಪರ್ಯಾಲೋಚಿಸಬೇಕೆಂದು ಸೂಚಿಸಬೇಕು.

## (ಊ) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ಎರಡನೇ ತಿದ್ದುಪಡಿ) ವಿಧೇಯಕ, 2013

## ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಶಾಮನೂರು ಶಿವಶಂಕರಪ್ಪ(ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕಾ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

## ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಶಾಮನೂರು ಶಿವಶಂಕರಪ್ಪ:–** ಮಾನ್ಯ ಸಭಾಪತಿಯವರೆ, ರೈತರಿಗೆ ವಿಸ್ತೃತವಾದ ಮಾರುಕಟ್ಟೆ ಸಂಪರ್ಕ ಕಲ್ಪಿಸುವುದು, ಮಾರುಕಟ್ಟೆ ವ್ಯವಹಾರಗಳಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸುವುದು ಹಾಗೂ ರೈತರಿಗೆ ಹಣ ಪಾವತಿಯಲ್ಲಿ ಆಗುವ ವಿಳಂಬವನ್ನು ತಪ್ಪಿಸಲು ಕೃಷಿ ಮಾರುಕಟ್ಟೆ ಕ್ಷೇತ್ರದಲ್ಲಿ

ಸುಧಾರಣೆಗಳನ್ನು ತರುವ ನಿಟ್ಟಿನಲ್ಲಿ ಕೆಲವು ತಿದ್ದುಪಡಿಗಳನ್ನು ಈ ಮಸೂದೆ ಮುಖಾಂತರ ಮಂಡಿಸುತ್ತಿದ್ದೇನೆ.

ಕೃಷಿ ಮಾರುಕಟ್ಟೆಗಳಲ್ಲಿ ಸ್ಪರ್ಧೆಯನ್ನು ಹೆಚ್ಚಿಸಬೇಕಾದರೆ ಈಗಿರುವ ನಿರ್ಬಂಧಗಳನ್ನು ಸಡಿಲಿಸಿ ರಾಜ್ಯದ ಯಾವುದೇ ಮಾರುಕಟ್ಟೆಯಲ್ಲಿ ವ್ಯವಹಾರ ಮಾಡಲು ಖರೀದಿದಾರರಿಗೆ ಏಕೀಕೃತ ಲೈಸೆನ್ಸ್ ನೀಡಲು ಅವಕಾಶ ಕಲ್ಪಿಸುವುದು.

ಉಗ್ರಾಣ ಆಧಾರಿತ ಮಾರಾಟವನ್ನು ಪ್ರೋತ್ಸಾಹಿಸಲು ಉಗ್ರಾಣಗಳನ್ನು ಉಪ ಮಾರುಕಟ್ಟೆ ಪ್ರಾಂಗಣಗಳನ್ನಾಗಿ ಘೋಷಿಸಲು ಅವಕಾಶ ಕಲ್ಪಿಸುವುದು.

ರೈತರ ಉತ್ಪಾದಕ ಸಂಘಟನೆಗಳನ್ನು ಪ್ರೋತ್ಸಾಹಿಸಲು ಸಹಕಾರಿ ಸಂಘಗಳಿಗೆ ನೀಡಿರುವಂತೆಯೇ ಇಂತಹ ಸಂಘಗಳಿಗೆ ಕೂಡ ಮಾರಾಟ ಶುಲ್ಕ ವಿನಾಯಿತಿ ನೀಡುವುದು.

ತರಕಾರಿ, ಹೂವುಗಳು ಹಾಗೂ ಹಣ್ಣುಗಳ ಮೇಲಿನ ಮಾರಾಟ ಶುಲ್ಕ ಕೈಬಿಡುವುದು. ಅದರ ಬದಲಿಗೆ ಮಾರುಕಟ್ಟೆ ಸಮಿತಿಯ ಸೇವೆಯನ್ನು ಪಡೆಯುವ ಖರೀದಿದಾರರಿಂದ ಬಳಕೆ ಶುಲ್ಕವನ್ನು ವಸೂಲಿ ಮಾಡಲು ಅವಕಾಶ ಕಲ್ಪಿಸುವುದು.

ಒಪ್ಪಂದ ಕೃಷಿ ಪ್ರಕ್ರಿಯೆಯಲ್ಲಿ ಇರುವ ಕೆಲವು ತೊಡಕುಗಳನ್ನು ನಿವಾರಿಸಲು ಅಂತಹ ಒಪ್ಪಂದಗಳನ್ನು ನೋಂದಣಿ ಮಾಡುವ ಹಾಗೂ ವ್ಯಾಜ್ಯ ತೀರ್ಮಾನ ಮಾಡುವ ಅಧಿಕಾರವನ್ನು ಇಲಾಖೆಯ ಅಧಿಕಾರಿಗಳಿಗೆ ನೀಡುವುದು. ಖಾಸಗಿ ಮಾರುಕಟ್ಟೆಗಳಲ್ಲಿ ಹೆಚ್ಚಿನ ಬಂಡವಾಳವನ್ನು ಆಕರ್ಷಿಸುವ ಉದ್ದೇಶದಿಂದ ಮಾರುಕಟ್ಟೆ ಶುಲ್ಕದಲ್ಲಿ ರಿಯಾಯಿತಿ ನೀಡಲು ಹಾಗೂ ಖಾಸಗಿ ಮಾರುಕಟ್ಟೆಗಳಲ್ಲಿ ಒದಗಿಸಬೇಕಾದ ಸವಲತ್ತುಗಳನ್ನು ನಿಗದಿಗೊಳಿಸಲು ಅವಕಾಶ ಕಲ್ಪಿಸುವುದು.

2010ರಲ್ಲಿ ಕೇಂದ್ರ ಸರ್ಕಾರವು ರಚಿಸಿದ ರಾಜ್ಯ ಕೃಷಿ ಮಾರುಕಟ್ಟೆ ಸಚಿವರುಗಳ ಸಮಿತಿಯ ವರದಿಯನ್ನು ಪರಿಗಣಿಸಿ ಹಾಗೂ ರಾಜ್ಯ ಸರ್ಕಾರ ರಚಿಸಿದ ಕೃಷಿ ಮಾರುಕಟ್ಟೆ ಸುಧಾರಣಾ ಸಮಿತಿಯ ವರದಿಯಲ್ಲಿನ

ಶಿಫಾರಸ್ಸುಗಳನ್ನು ಒಪ್ಪಿ ಅನುಷ್ಠಾನ ಮಾಡುವ ನಿಟ್ಟಿನಲ್ಲಿ ಈ ತಿದ್ದುಪಡಿಗಳು ಅತ್ಯಾವಶ್ಯಕವಾಗಿದೆ.

ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಕೃಷಿ ಮಾರುಕಟ್ಟೆ ಸುಧಾರಣಾ ಸಮಿತಿಯ ಶಿಫಾರಸ್ಸುಗಳನ್ನು ಈ ವರ್ಷದಲ್ಲಿ ಅನುಷ್ಠಾನ ಮಾಡುವ ಬಗ್ಗೆಯೂ ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಅಧಿನಿಯಮಕ್ಕೆ ತಿದ್ದುಪಡಿ ಮಾಡುವ ಬಗ್ಗೆ ಘೋಷಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ಮಸೂದೆ, 2013ನ್ನು ಮಂಡಿಸುತ್ತಿದ್ದೇನೆ ಮತ್ತು ಈ ಒಂದು ಮಸೂದೆಯಲ್ಲಿರತಕ್ಕಂಥ ವಿಚಾರಗಳನ್ನು ನಮ್ಮ ಅಧಿಕಾರಿಗಳು ಹನ್ನೊಂದು ಜಿಲ್ಲೆಗಳಲ್ಲಿ ಖರೀದಿದಾರರು, ವ್ಯಾಪಾರಸ್ಥರು ಹಾಗೂ ರೈತರೊಂದಿಗೆ ಚರ್ಚಿಸಿದ್ದಾರೆ, ಸುಮಾರು 1846 ಜನ ಈ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದಾರೆ ಹಾಗೂ ಇದನ್ನು ಒಪ್ಪಿ ಕೊಂಡಾಡಿದ್ದಾರೆ. ಈ ನಿಟ್ಟಿನಲ್ಲಿ ಈ ಮಸೂದೆಯನ್ನು ಸದನವು ಅಂಗೀಕಾರ ನೀಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಡಿ.ವಿ.ಸದಾನಂದಗೌಡ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಈ ಸರ್ಕಾರ ಇತ್ತೀಚೆಗೆ ತರುವಂಥ ಎಲ್ಲಾ ವಿಧೇಯಕಗಳು ಸಂಶಯಾಸ್ಪದಕವಾಗಿರುವಂಥದ್ದನ್ನು ನಾವು ಕಾಣುತ್ತಿದ್ದೇವೆ. ನಾನು ಏಕೆ ಎಂದು ಕೂಡ ಹೇಳಬಯಸುತ್ತೇನೆ. ಕೇಂದ್ರ ಸರ್ಕಾರದ್ದು ಎಂದು ಕೆಲವು ವಿಷಯಗಳನ್ನು ತಾವು ಹೇಳಿದ್ದೀರಿ. ಅದು ನಿಜ. ಏಕೆಂದರೆ ಕೇಂದ್ರ ಸರ್ಕಾರ ಕೂಡ ಈ ಎಫ್‌ಡಿಐ ಮತ್ತು ಮಲ್ಟಿನ್ಯಾಶನಲ್ ಕಂಪನಿಗಳಿಗೆ ಸಪೋರ್ಟ್ ಕೊಡುವಂಥದ್ದನ್ನು ನಾವು ನೋಡುತ್ತಿದ್ದೇವೆ. ಈ ವಿಧೇಯಕ ಕೂಡ ಈ ಮಲ್ಟಿನ್ಯಾಶನಲ್ ಕಂಪನಿಗಳಿಗೆ ಪೂರಕವಾಗಿ ಆಗುತ್ತದೆಂದು ನನ್ನ ಸ್ಪಷ್ಟವಾದಂಥ ಅಭಿಪ್ರಾಯ. ಈಗಾಗಲೇ ಈಗಿರುವಂಥ ಎ.ಪಿ.ಎಂ.ಸಿ. ನಿಷ್ಕ್ರಿಯವಾಗಿದೆ. ನಾವು ಹಲವಾರು ಎ.ಪಿ.ಎಂ.ಸಿ.ಗಳಿಗೆ ಬೀಗ ಜಡಿದಿರುವಂಥದ್ದನ್ನು ನಾವು ಕಾಣುತ್ತೇವೆ. ಇದನ್ನು ಮಾಡುವುದರಿಂದ ನೀವು ಎಲ್ಲಾ ಎ.ಪಿ.ಎಂ.ಸಿ.ಗಳನ್ನು ಬಂದ್ ಮಾಡಬೇಕಾಗುತ್ತದೆ. ನೀವು ಸೆಂಟ್ರಿಕ್ (Centric) ಎಂದು ಮಾಡಿ ಬೇರೆ ಕಡೆಗಳಿಗೆ ಗೋಡೌನ್‌ಗಳಿಗೆ

ಪರವಾನಿಗೆಯನ್ನು ಕೊಡುವುದು, ಮತ್ತೊಂದು ಕೊಡುವುದರಿಂದ ಏನಾಗುತ್ತದೆಂದರೆ ಈಗ ಇರುವಂಥ ಎ.ಪಿ.ಎಂ.ಸಿ.ಗಳು ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುವಂಥ ಸಂಗತಿಗಳಾಗುತ್ತವೆ. ನೀವು ಇದರಲ್ಲಿ ಏನಾಗುತ್ತದೆಂದು ಹೇಳುವಂಥದ್ದನ್ನು ನಿಶ್ಚಯವಾಗಿ ನೋಡಿ. ನೀವು ವಾಲ್‌ಮಾರ್ಟ್ (Walmart), ಮೆಟ್ರೋ (Metro) ಇವರಿಗೆ ಒಂದೊಂದು ಊರಿನಲ್ಲಿ ಒಂದೊಂದು ಮಾಡಿ, ಅಲ್ಲಿನ ಸಣ್ಣ ವ್ಯಾಪಾರಸ್ಥರಿಗೆ ತೊಂದರೆಯಾಗುವಂಥದ್ದನ್ನು ಮಾಡಿ ಎಂದು ಏನೋ ಒಂದು ಒಳ ಒಪ್ಪಂದ ಇದ್ದ ಹಾಗೆ ನಮಗೆ ಕಾಣಲಿಕ್ಕೆ ಪ್ರಾರಂಭವಾಗಿದೆ. ಈ ರೀತಿಯ ಮಲ್ಟಿನ್ಯಾಶನಲ್ ಕಂಪನಿಗಳ ಜೊತೆ ನಿಮ್ಮ ಏನೋ ಒಳ ಒಪ್ಪಂದ ಇದ್ದು... ಇದು ನನ್ನ ಸಂಶಯ ಇದೆ, ಇದಕ್ಕೆ ತಾವು ಉತ್ತರ ಕೊಡಬೇಕು. ಇದರಿಂದಾಗಿ ಈ ಮಲ್ಟಿನ್ಯಾಶನಲ್ ಕಂಪನಿಗಳಿಗೆ ಪರೋಕ್ಷವಾದಂಥ ಒಂದು ಪ್ರೋತ್ಸಾಹ, ನಮ್ಮ ಲೋಕಲ್ ವ್ಯಾಪಾರಸ್ಥರಿಗೆ ಇದರಿಂದ ತೊಂದರೆಯಾಗುವಂಥದ್ದು. ಲೇಟೆಸ್ಟ್ ಟೆಕ್ನಾಲಜಿಯನ್ನು ಉಪಯೋಗ ಮಾಡಿಕೊಳ್ಳಬೇಕು, ಎಲ್ಲೆಲ್ಲಿ ಆನ್‌ಲೈನ್ ಆಗುತ್ತದೆ ಅದರ ಉಪಯೋಗವನ್ನು ಮಾಡಿಕೊಳ್ಳಬೇಕೆನ್ನುವ ವಿಚಾರವನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದರ ಬಗ್ಗೆ ನನ್ನ ಸಹಮತ ಇದೆ. ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಇದರ ಸಾಧಕ–ಬಾಧಕಗಳ ಬಗ್ಗೆ ಗಂಭೀರವಾದಂಥ ಚಿಂತನೆಯನ್ನು ಮಾಡುವಂಥ ಅವಶ್ಯಕತೆ ಇದೆ. ಒಬ್ಬ ಸಾಮಾನ್ಯ ವಹಿವಾಟುದಾರನಿಗೆ ಒಂದು ಮಾರುಕಟ್ಟೆಯಿಂದ ಇನ್ನೊಂದು ಮಾರುಕಟ್ಟೆಗೆ ಹೋಗಿ ವ್ಯಾಪಾರ ಮಾಡುವಂಥ ಶಕ್ತಿ ಇರುವುದಿಲ್ಲ. ಅವನು ಎಲ್ಲೋ ಒಂದು ಮಾರುಕಟ್ಟೆಯಲ್ಲಿ ಮಾಡುತ್ತಾನೆ. ಆದರೆ ಆ ದೊಡ್ಡ ದೊಡ್ಡ ಮಾರುಕಟ್ಟೆಗಳು ಎಲ್ಲೋ ಪ್ರವೇಶ ಮಾಡಿಬಿಟ್ಟರೆ ಏನಾಗುತ್ತದೆ? ಹಾಗಾಗಿ automatically ಈ ಸಣ್ಣ ವ್ಯಾಪಾರಸ್ಥರಿಗೆ ಒಂದಿಷ್ಟು ತೊಂದರೆಯಾಗುತ್ತದೆ. ನಮ್ಮಲ್ಲಿ ಧಾರಣೆಗಳು ಸಿಗಲಿಕ್ಕೆ, ಮತ್ತೊಂದು ಸಿಗಲಿಕ್ಕೆ, ಹೆಚ್ಚು ಹೆಚ್ಚು ಆಗಬಹುದು ಎಂದು ಎಲ್ಲೋ ಒಂದು ದೂರದೃಷ್ಟಿ ಇದೆ. ನಾವು ಈಗ ಅಕ್ರಮ–ಸಕ್ರಮವನ್ನು ನೋಡಿದ್ದೇವೆ, ಅದೇ ರೀತಿ ಇದರಲ್ಲಿಯೂ ದೊಡ್ಡ ದೊಡ್ಡ ತಿಮಿಂಗಲಗಳು ಈ ಸಣ್ಣ ಸಣ್ಣವರನ್ನೆಲ್ಲಾ ನುಂಗಿ ನೀರು ಕುಡಿಯುವಂಥ ಕೆಲಸಕಾರ್ಯಗಳು

ಇದರಿಂದಾಗುವಂಥ ಎಲ್ಲಾ ಸಂಶಯಗಳು ಕೂಡ ಇವೆ. ಇದು ನನ್ನ ವೈಯಕ್ತಿಕವಾದಂಥ ಅಭಿಪ್ರಾಯ.

ಇನ್ನು ನೀವು ಎ.ಪಿ.ಎಂ.ಸಿ.ಗಳ ವ್ಯಾಜ್ಯ ಪರಿಹಾರ ಸಮಿತಿಗಳನ್ನು ರದ್ದು ಮಾಡಿ ಅಧಿಕಾರಿಗಳಿಗೆ ಕೊಟ್ಟುಬಿಟ್ಟು ಆರಾಮವಾಗಿ ಇರುವಂಥ ಪ್ರಯತ್ನವನ್ನು ಮಾಡುತ್ತೀದ್ದೀರಿ. ಇದು ಸರಿಯೇ? ಇದು ಸರಿಯಲ್ಲ. ಆದ್ದರಿಂದ ನಾನು ಬಹಳ ಸ್ಪಷ್ಟವಾಗಿ ತಮಗೆ ಹೇಳುವುದೇನೆಂದರೆ ಇದರ ಬಗ್ಗೆ ತಾವು ಇನ್ನಷ್ಟು ವಿಶ್ಲೇಷಣೆಗಳನ್ನು ಮಾಡಬೇಕು. Multinational Companies ಗಳು ನಮ್ಮ ದೇಶದ ಸಾಮಾನ್ಯ ವ್ಯಾಪಾರಸ್ಥರ ಮೇಲೆ ಸವಾರಿ ಮಾಡುವಂಥ ಕೆಲಸಕಾರ್ಯಗಳಾಗಬಾರದು. ನೀವು ಪ್ರಾಂಗಣಗಳನ್ನು, 'online' ಮಾಡುವಂಥದ್ದರಲ್ಲಿ ನಮ್ಮ ಹಿತಾಸಕ್ತಿಯನ್ನು ಬಲಿ ಕೊಡುವಂಥದ್ದಾಗಬಾರದು. ನಮ್ಮ ಎ.ಪಿ.ಎಂ.ಸಿ., ಗಳಿಗೆ ಬೀಗ ಜಡಿಯುವಂಥ ಕೆಲಸವನ್ನು ನಮ್ಮ ಸರ್ಕಾರವೇ ಮಾಡಿದರೆ ಏನು ಸ್ವಾಮಿ ಇದು? ಇದರಲ್ಲಿ ಏನಾದರು ಅರ್ಥ ಇದೆಯೇ? ಹಾಗಾಗಿ ಇದರಲ್ಲಿ ಹತ್ತು ಹಲವು ಸಂಶಯಗಳಿವೆ, ಇದನ್ನು ಕ್ಲ್ಯಾರಿಫೈ ಮಾಡಿ.

**ಶ್ರೀ ಕವಟಗಿಮಠ್ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ ನಿಯಂತ್ರಣ ಮತ್ತು ಅಭಿವೃದ್ಧಿ (ತಿದ್ದುಪಡಿ) ವಿಧೇಯಕದ ಬಗ್ಗೆ ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಸಾಕಷ್ಟು ವಿಚಾರಗಳ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ನಾನು ವಿವರಣೆಗೆ ಹೋಗುವುದಿಲ್ಲ. ಆದರೆ ಈ ವಿಧೇಯಕವನ್ನು ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ನಮ್ಮ ಭಾಗದಲ್ಲಿರತಕ್ಕಂಥ ಎ.ಪಿ.ಎಂ.ಸಿ., ವಿಷಯಗಳ ಬಗ್ಗೆ ಸಹಿತ ಸನ್ಮಾನ್ಯ ಸಚಿವರ ಗಮನಕ್ಕೆ ತರಲಿಕ್ಕೆ ಬಯಸುತ್ತಿದ್ದೇನೆ. ಇಡೀ ರಾಜ್ಯದಲ್ಲಿ ಅತ್ಯಂತ ದೊಡ್ಡ ಕೃಷಿ ಮಾರುಕಟ್ಟೆ ಉತ್ಪನ್ನ ಸಮಿತಿಗಳು ಬೆಳಗಾವಿ ಜಿಲ್ಲೆಯಲ್ಲಿವೆ. ಇವೊತ್ತು ಆ ಸಮಿತಿಗಳ ಪರಿಸ್ಥಿತಿ ಏನಾಗಿದೆ ಎಂದರೆ ಆ ಗೋಡೌನ್‌ಗಳನ್ನು ಕಾವಲುಗಾರರನ್ನಾಗಿ ಮಾಡುವಂಥ ವ್ಯವಸ್ಥೆಯಲ್ಲಿ ನಾವಿದ್ದೇವೆ. ನಿನ್ನೆ ಸಚಿವರು ನನಗೆ ಒಂದು ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಒಂದು ಉತ್ತರವನ್ನು ಕೊಟ್ಟಿದ್ದಾರೆ. ಅದರಲ್ಲಿ

ಅವುಗಳನ್ನೆಲ್ಲಾ strengthen ಮಾಡುತ್ತೇವೆನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಗಡಿ ಭಾಗದಲ್ಲಿರತಕ್ಕಂಥ ಸಂಕೇಶ್ವರ ಇರಬಹುದು, ನಿಪ್ಪಾಣಿ ಇರಬಹುದು, ಮಹಾಲಿಂಗಪುರ ಇರಬಹುದು, ಬಾಗಲಕೋಟೆ ಜಿಲ್ಲೆಯಲ್ಲಿರತಕ್ಕಂಥ ಅನೇಕ ಕೃಷಿ ಮಾರುಕಟ್ಟೆ ಉತ್ಪನ್ನ ಸಮಿತಿಗಳು ಪಕ್ಕದ ಬೇರೆ ರಾಜ್ಯಗಳಿಗೆ ಇವೊತ್ತು ಸರಕನ್ನು ನಮ್ಮ ರೈತರು ಕೃಷಿ ಉತ್ಪನ್ನ ಮಾರುಕಟ್ಟೆಗಳಿಗೆ ತಮ್ಮ ಎಲ್ಲಾ ವಸ್ತುಗಳನ್ನು ಮಹಾರಾಷ್ಟ್ರ ರಾಜ್ಯಕ್ಕೆ, ಬೇರೆ ರಾಜ್ಯಗಳಿಗೆ ಹೋಗತಕ್ಕಂಥ ಸಂದರ್ಭಗಳಲ್ಲಿ ನಮ್ಮ ರಾಜ್ಯದಲ್ಲಿರತಕ್ಕಂಥ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳನ್ನು ಬಲಪಡಿಸತಕ್ಕಂಥ ಕೆಲಸಗಳು ಇವೊತ್ತು ಆಗಬೇಕಾಗಿದೆ. ಅಲ್ಲಿರತಕ್ಕಂಥ ಗೋಡೌನ್‌ಗಳನ್ನು ಬೇರೆಯವರಿಗೆ ಬಾಡಿಗೆಗೆ ಕೊಟ್ಟು ಆ ಬಾಡಿಗೆ ಆಧಾರದ ಮೇಲೆ ಆ ಎ.ಪಿ.ಎಂ.ಸಿ.ಗಳು ನಡೆಯುತ್ತಿವೆ. ಇವೊತ್ತು ನಿಪ್ಪಾಣಿಯಲ್ಲಿ 170 ಎಕರೆ ಜಾಗ ಆ ಎ.ಪಿ.ಎಂ.ಸಿ.ಗೆ ಇದೆ. ಆದರೆ ಅಲ್ಲಿ ಯಾವುದೂ ವ್ಯವಹಾರ ಇಲ್ಲ. ಸದಲಗಾದಲ್ಲಿ ಎ.ಪಿ.ಎಂ.ಸಿ. ಇದೆ ಅದರ ಬಗ್ಗೆ ಇದು ಎ.ಪಿ.ಎಂ.ಸಿ.ಯೋ ಅಥವಾ ಯಾವುದೋ ವಸ್ತುಗಳನ್ನು ಇಡತಕ್ಕಂಥ ಒಂದು ಗೋಡೌನೋ ಎಂದು ಒಂದು ದೊಡ್ಡ article ಪ್ರಕಟಣೆಯಾಗಿತ್ತು. ಅಂದರೆ ನಮ್ಮ ಎ.ಪಿ.ಎಂ.ಸಿ.ಗಳ ಪರಿಸ್ಥಿತಿ ಏನಿದೆ ಎಂದು ತಮ್ಮ ಮುಖಾಂತರ ಮಾನ್ಯ ಸಚಿವರ

(9–00 ಗಂಟೆ)

ಗಮನಕ್ಕೆ ತರಬಯಸುತ್ತೇನೆ. ದಯಮಾಡಿ ಈ ಒಂದು ವಿಧೇಯಕವನ್ನು ಚರ್ಚಿಸತಕ್ಕಂಥ ಸಂದರ್ಭದಲ್ಲಿ ಈ ಎ.ಪಿ.ಎಂ.ಸಿ., ಗಳನ್ನು ಬಲಪಡಿಸತಕ್ಕಂಥ ಕೆಲಸ ಸಚಿವರು ಮಾಡಬೇಕು ಮತ್ತು ವ್ಯಾಪಾರಿ ವೃತ್ತಿಯಿಂದ ಬಂದಿರತಕ್ಕಂಥ ಶಾಮನೂರು ಶಿವಶಂಕರಪ್ಪನವರು ಈ ಒಂದು ವಿಷಯದಲ್ಲಿ ಹೆಚ್ಚಿನ ಒಂದು ಆಸಕ್ತಿಯನ್ನು ವಹಿಸುತ್ತಾರೆನ್ನುವ ವಿಶ್ವಾಸ ನನ್ನದು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಾನು ಮಾನ್ಯ ಸಚಿವರಲ್ಲಿ ಕೇವಲ ಎರಡು ಸ್ಪಷ್ಟೀಕರಣಗಳನ್ನು ಕೇಳಲು ಬಯಸುತ್ತೇನೆ. ಒಂದನೆಯದು ಇದರಲ್ಲಿ Trading license ಅನ್ನು ನೀಡುವುದಕ್ಕೆ ಏನು ಮಾನದಂಡಗಳಿವೆ? ಯಾರೋ ಒಬ್ಬರು ಒಂದು Trading license ಅನ್ನು ಪಡೆದರೆ ಆತ ಇಡೀ ಕರ್ನಾಟಕ ರಾಜ್ಯದಲ್ಲಿ ಎಲ್ಲಿ ಬೇಕಾದರು ಟ್ರೇಡಿಂಗ್ ಮಾಡಲಿಕ್ಕೆ ಅವಕಾಶ ಇದೆ. ಈ ಹಿಂದೆ ಎ.ಪಿ.ಎಂ.ಸಿ., ರೈತರಿಗೆ ಸೀಮಿತವಾಗಿತ್ತು. ಆದ್ದರಿಂದ Trading licenseಅನ್ನು ನೀಡುವುದಕ್ಕೆ ಏನು ಮಾನದಂಡಗಳಿವೆ? ಆತ ಎಲ್ಲೆಲ್ಲಿ ಕಾರ್ಯನಿರ್ವಹಣೆ ಮಾಡಬೇಕೆನ್ನುವ ಸ್ಪಷ್ಟೀಕರಣವನ್ನು ನೀಡಬೇಕು.

ಇನ್ನು ಎರಡನೆಯದಾಗಿ ತಾವು ಆಂಗ್ಲ ಭಾಷೆಯ ಪ್ರತಿಯ ಮೂರನೆಯ ಪುಟದಲ್ಲಿ "8. Amendment of section 133" ಎಂಬ ಶೀರ್ಷಿಕೆಯ ಅಡಿಯಲ್ಲಿ "In Section 133 of the principal Act, after the words "any class of co-operative societies", the words "or farmers producer organizations in the State" shall be inserted" ಎಂದು ಹಾಕಿದ್ದೀರಿ. 'Farmers producer organizations' ಅಂದರೆ ಏನು ಎಂದು ನನಗೆ ಗೊತ್ತಾಗಲಿಲ್ಲ. 'Farmers producer organizations in the State' ಎಂದು ಹೇಳಿದರೆ ಇದರ ಅರ್ಥ ಏನು ಎಂದು ತಾವು ಸ್ಪಷ್ಟೀಕರಣ ಕೊಡಬೇಕೆಂದು ವಿನಂತಿ ಮಾಡುತ್ತೇನೆ. ಏಕೆಂದರೆ ಕನ್ನಡದಲ್ಲಿ ನೀವು ಹಾಕಿರುವ ಅರ್ಥವೇ ಬೇರೆಯಾಗುತ್ತದೆ. ಆದರೆ ಇಂಗ್ಲೀಷ್‌ನಲ್ಲಿ ಹಾಕಿರುವ ಅರ್ಥ ಬೇರೆಯೇ ಇದೆ. ರಾಜ್ಯದಲ್ಲಿನ ಕೃಷಿಕರ ಉತ್ಪನ್ನ ಸಂಘಗಳಿಗೆ ಎಂದು ಕನ್ನಡದಲ್ಲಿದೆ. ಇಂಗ್ಲೀಷ್‌ನಲ್ಲಿ 'Farmers producer…' ಎಂದು ಬಂದುಬಿಟ್ಟಿದೆ. ಅದೇನೆಂದು ಸ್ಪಷ್ಟೀಕರಣ ಮಾಡಬೇಕು. ಆ ಮೇಲೆ ಈ ಸಂಘಗಳ structure ಏನು? ನಾವು ಹತ್ತು ಜನ ಸೇರಿ ಒಂದು ಸಂಘ ಮಾಡತ್ತೇವೆಂದರೆ ಯಾವ ಕಾಯಿದೆಯನ್ವಯ ಬರುತ್ತದೆ? ಸಹಕಾರ

ಸಂಘಗಳ ಕಾಯಿದೆಯಡಿಯಲ್ಲಿ ಬರುತ್ತದೆಯೇ? ಅಥವಾ Companies Act ಕಾಯಿದೆಯಡಿಯಲ್ಲಿ ಬರುತ್ತದೆಯೇ ಅಥವಾ The Indian Trusts Act ನಲ್ಲಿ ಬರುತ್ತದೆಯೇ? ಎಂದು ಡಿಫೈನ್ ಮಾಡದಿದ್ದರೆ ಯಾರೋ ಒಂದು ಎಂಟು ಹತ್ತು ಜನ ಸೇರಿಕೊಂಡು ಒಂದು ಸಂಘವನ್ನು ಮಾಡಿಕೊಂಡು ಇದರಲ್ಲಿ ಸೇರಿಕೊಳ್ಳುವುದಕ್ಕೆ ಅವಕಾಶ ಇರುತ್ತದೆ. ಈ ಸ್ಪಷ್ಟೀಕರಣ ಮುಂದೆ ಅತ್ಯಂತ ಪ್ರಮುಖ ಆಗುತ್ತದೆ. ಈ ಎರಡು ಸ್ಪಷ್ಟೀಕರಣವನ್ನು ನೀಡಬೇಕೆಂದು ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಗೋ.ಮಧುಸೂದನ್(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಲೈಸನ್ಸ್ ನೀಡಿಕೆ ಎನ್ನುವ ಕಂಡಿಕೆಯಲ್ಲಿ 3ನೇ ಅಂಶ ಇದೆ. ಅದೇನೆಂದರೆ ಮಾರುಕಟ್ಟೆ ಸಮಿತಿಯ ಅಥವಾ ಸಮಿತಿಯು ಹಾಗೆ ಅಧಿಕಾರ ನೀಡಿದರೆ ಅದರ ಅಧ್ಯಕ್ಷನು, ಮಾರುಕಟ್ಟೆ ಪ್ರದೇಶದಲ್ಲಿ ಸಾಮಾನ್ಯವಾಗಿ ವಾಸಿಸದ ಯಾವನೇ ವ್ಯಾಪಾರಿಯು ಕೃಷಿ ಉತ್ಪನ್ನದ ನೆಲೆಯನ್ನು ನಗದಾಗಿ ಸಂದಾಯ ಮಾಡಿದ ಹೊರತು ಯಾವುದೇ ಅಂಥ ಕೃಷಿ ಉತ್ಪನ್ನವನ್ನು ಖರೀದಿಸತಕ್ಕುದಲ್ಲ, ಇದು ಸರಿ ಇದೆ. ಅಂದರೆ ಯಾರೋ ಹೊರಗಡೆಯವನು ಬರುತ್ತಾನೆ ಅವನು ನಾಳೆ ದುಡ್ಡು ಕೊಡುತ್ತಾನೋ ಇಲ್ಲವೋ ಎನ್ನುವುದು ಏನು ಗ್ಯಾರಂಟಿ? ಅವನು ಉದ್ರಿ-ಗಿದ್ರಿ ಕೊಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಪೂರ್ಣ ದುಡ್ಡು ಕೊಟ್ಟುಬಿಟ್ಟು ಅವನು ಆಮೇಲೆ ವ್ಯಾಪಾರ ಪ್ರಾರಂಭ ಮಾಡಬೇಕು. ಆದರೆ ನಾವು ಅವನಿಗೆ ಕೊಡುತ್ತಿರುವ ಲೈಸನ್ಸ್ ಕೇವಲ ಒಂದು ತಿಂಗಳಿಗೆ ಮಾತ್ರ. ಆದ್ದರಿಂದ ಅವನು ಸುಗ್ಗಿ ಸಮಯದಲ್ಲಿ ಒಂದು ತಿಂಗಳು ಮಾತ್ರ ಬರುತ್ತಾನೆ. ಅವನು ಅಂಗಡಿ ಕೂಡ ತೆಗೆದುಕೊಳ್ಳುವುದಿಲ್ಲ, ಅವನು ಇಲ್ಲಿಯ ವ್ಯಾಪಾರಸ್ಥನು ಅಲ್ಲ, ಅವನು ಇಲ್ಲಿಯ ನಿವಾಸಿ ಕೂಡ ಅಲ್ಲ, ಅವನು ಏನೂ ಇರುವುದಿಲ್ಲ, ಚೀಲದಲ್ಲಿ ದುಡ್ಡು ತೆಗೆದುಕೊಂಡು ಬಂದಿರುತ್ತಾನೆ. ದುಡ್ಡು ಕೊಡುತ್ತಾನೆ ಎಲ್ಲಾ ಮಾಲ್ ಅನ್ನು ಖರೀದಿ ಮಾಡುತ್ತಾನೆ ನಂತರ ಹೊರಟು

ಹೋಗುತ್ತಾನೆ. ವರ್ಷ ಪೂರ್ತಿ ಮಾರುಕಟ್ಟೆಗೆ ಅವನಿಗೆ ಏನೂ ಸಂಬಂಧ ಇಲ್ಲ. ಮಾರುಕಟ್ಟೆ ಬೆಳೆಸುವುದರಲ್ಲಿ ಅವನ ಪಾತ್ರ ಏನೂ ಇಲ್ಲ, ರೈತರ ಜೊತೆ ಕೂಡ ಅವನ ಏನೂ ಸಂಬಂಧ ಇಲ್ಲ. ಈ ರೀತಿಯಾಗಿ ಒಬ್ಬ multi-national ಆಗಿರುವಂಥ ಒಬ್ಬ ದೊಡ್ಡ ವ್ಯಕ್ತಿ ಬರುತ್ತಾನೆ, ದುಡ್ಡು ಕೊಟ್ಟು ಖರೀದಿ ಮಾಡಿಕೊಂಡು ಹೋಗುತ್ತಾನೆಂದರೆ ಅವನು ಬರೀ ಮಾಲ್ ಅನ್ನು ಅಷ್ಟೇ ಖರೀದಿ ಮಾಡುತ್ತಿದ್ದಾನೆಂದು ಅಲ್ಲ, ಅವನು ಎ.ಪಿ.ಎಂ.ಸಿ., ಕೂಡ ಖರೀದಿ ಮಾಡುತ್ತಿದ್ದಾನೆಂದು ಅರ್ಥ. ಅವನು ಅಲ್ಲಿರುವಂಥ ಎಲ್ಲಾ ವ್ಯಾಪಾರಸ್ಥರನ್ನು ಕೂಡ ಖರೀದಿ ಮಾಡುತ್ತಿದ್ದಾನೆಂದು ಅರ್ಥ. ಅಲ್ಲಿರುವಂಥ ರೈತರನ್ನು, ವ್ಯವಹಾರವನ್ನು ಕೂಡ ಖರೀದಿ ಮಾಡುತ್ತಿದ್ದಾನೆಂದು ಅರ್ಥ. ಆ ಕಾರಣಕ್ಕೋಸ್ಕರವಾಗಿ ಇದು ಸ್ಥಳೀಯ ಎಲ್ಲಾ ಮಾರುಕಟ್ಟೆಯಲ್ಲಿ ಬಹಳಷ್ಟು ವರ್ಷಗಳಿಂದ ನಡೆದು ಬಂದಿದೆ. ಮಾನ್ಯ ಸಭಾಪತಿಯವರೆ, ಬೇರೆ ವ್ಯಾಪಾರಕ್ಕಿಂತ ಈ ವ್ಯಾಪಾರ ಭಿನ್ನವಾಗಿದೆ.

**ಸಭಾಪತಿಯವರು:–** ಈಗ ತಾವು ವಿಷಯಕ್ಕೆ ಬನ್ನಿ. ಏನು ಆಗಬೇಕೆಂದು ಮಾತ್ರ ಹೇಳಿ. ಸಮಯ ನೋಡಿ ಈಗಾಗಲೇ 9 ಗಂಟೆ ಆಗಿದೆ.

**ಶ್ರೀ ಗೋ.ಮಧುಸೂದನ್:–** ಮಾನ್ಯ ಸಭಾಪತಿಯವರೆ, ಆ ರೈತರು ಆ ಅನಾಜ್ ವ್ಯಾಪಾರಿ ಯಾರು ಇರುತ್ತಾರೆ ಅವರನ್ನು ನಂಬಿರುತ್ತಾರೆ, ಅವರು ಸುಗ್ಗಿ ಸಮಯದಲ್ಲಿ ಬಂದು ದವಸಧಾನ್ಯಗಳನ್ನು ಅಳೆದುಬಿಟ್ಟು ಹೋಗಿರುತ್ತಾರೆ. ಅವನ ಹತ್ತಿರ ಪಟ್ಟಿ ಮಾಡಿಸಿಕೊಂಡು ಹೋಗಿರುತ್ತಾರೆ. ಆ ಮೇಲೆ ಸ್ವಲ್ಪ ರೇಟ್ ಬಂದ ನಂತರ ಅವರ ಹತ್ತಿರ ಸ್ವಲ್ಪ ದುಡ್ಡು ತೆಗೆದುಕೊಳ್ಳುವಂಥ ವ್ಯವಹಾರಗಳು ನಡೆಯುತ್ತವೆ. ಇಂಥದ್ದೆಲ್ಲಾ ನಡೆಯುವಂಥ ಸಂದರ್ಭದಲ್ಲಿ ಇವರು ಅತ್ಯಂತ ಕಡಿಮೆ ಬೆಲೆ ಇರಬೇಕಾದಂಥ ಸಂದರ್ಭದಲ್ಲಿ ಸುಗ್ಗಿನಲ್ಲಿ ಒಂದೇ ಬಾರಿಗೆ ಎಲ್ಲಾ ಖರೀದಿ

ಮಾಡಿಕೊಂಡು ಹೋದರೆ ನಿಮ್ಮ ಇಡೀ ಎ.ಪಿ.ಎಂ.ಸಿ. ಮಾರುಕಟ್ಟೆ ಹದಿನೈದು ದಿವಸಕ್ಕೆ ಬಂದ್ ಆಗಿ ಹೋಗುತ್ತದೆ. ವರ್ಷಪೂರ್ತಿ ವ್ಯಾಪಾರವೂ ಇಲ್ಲ, ವರ್ಷಪೂರ್ತಿ ರೈತರು ತರುವ ಹಾಗೆ ಇಲ್ಲ, ವರ್ಷಪೂರ್ತಿ ಅಂಗಡಿಯವರಿಗೆ ಕೆಲಸ ಕೂಡ ಇಲ್ಲ, ವರ್ಷಪೂರ್ತಿ ಲೈಸನ್ಸ್ ಕೂಡ ಇಲ್ಲ. ಅವನಿಗೂ ವ್ಯಾಪಾರಸ್ಥರಿಗೂ, ರೈತರಿಗೂ, ಎ.ಪಿ.ಎಂ.ಸಿ.,ಗೂ ಏನೂ ಸಂಬಂಧ ಇಲ್ಲದೆ ಇರುವಂಥ ಒಬ್ಬ ವ್ಯಕ್ತಿ ಬರೀ ದುಡ್ಡು ತೆಗೆದುಕೊಂಡು ಬಂದು ಇಡೀ ಎ.ಪಿ.ಎಂ.ಸಿ., ಯ ವ್ಯವಹಾರವನ್ನು ಖರೀದಿ ಮಾಡಿಕೊಂಡು ಹೋಗುವಂಥ ಅವಕಾಶ ಇದೆ. ಇದರಿಂದ ಮತ್ತೊಂದು East India Company ಈ ದೇಶಕ್ಕೆ ಬರಲಿಕ್ಕೆ ಸಂಪೂರ್ಣವಾದಂಥ red carpet welcome ಇದರಿಂದಾಗುತ್ತದೆ. ಆ ಕಾರಣಕ್ಕೋಸ್ಕರ ಇದು ರೈತರ ಹಿತಕ್ಕೆ ಮಾರಕ, ನಮ್ಮ ದೇಶದ ಹಿತಕ್ಕೆ ಮಾರಕ ಎನ್ನುವಂಥ ವಿಷಯವನ್ನು ತಮ್ಮ ಮೂಲಕ ನಾನು ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಶಾಮನೂರು ಶಿವಶಂಕರಪ್ಪ (ಕೃಷಿ ಮಾರುಕಟ್ಟೆ ಹಾಗೂ ತೋಟಗಾರಿಕಾ ಸಚಿವರು):-** ಮಾನ್ಯ ಸಭಾಪತಿಯವರೆ, ಈ ತಿದ್ದುಪಡಿಯನ್ನು ರೈತರ ಹಿತಕ್ಕೋಸ್ಕರ ತಂದಿರುವುದು ಹೊರತಾಗಿ ಖರೀದಿದಾರರ ಹಿತಕ್ಕೋಸ್ಕರ ಅಲ್ಲವೆಂದು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. Regulatory markets ಗಳಲ್ಲಿ ರೈತರ ಮಾಲನ್ನು ಖರೀದಿದಾರರು ಕೊಂಡುಕೊಂಡ ಮೇಲೆ ಹದಿನೈದು ದಿವಸ, ತಿಂಗಳ ನಂತರ ದುಡ್ಡು ಕೊಡುತ್ತಾರೆ. Commission Agent ರೈತರಿಗೆ ಎರಡು ದಿವಸದಲ್ಲಿ ಬಿಲ್ ಕೊಡುತ್ತಾರೆ ಮತ್ತು ರೈತರಿಗೆ ಬಡ್ಡಿ ಹಾಕುತ್ತಾರೆ. ಈ ಬಿಲ್ ಪ್ರಕಾರ ದರ ಕಡಿಮೆ ಇದ್ದಾಗ ಮಾರಾಟ ಮಾಡಬೇಕೆಂದಲ್ಲ. ದರ ಕಡಿಮೆ ಇದ್ದಾಗ ರೈತ ಗೋಡೌನ್‌ನಲ್ಲಿ ಮಾಲನ್ನು stock ಮಾಡಿಕೊಳ್ಳುತ್ತಾನೆ. ಅಲ್ಲಿಂದ ಸರ್ಟಿಫಿಕೇಟ್ ಅನ್ನು ಪಡೆಯುತ್ತಾನೆ, ಹಣ ಬೇಕೆಂದರೆ ಬ್ಯಾಂಕ್‌ನಲ್ಲಿ pledge ಮಾಡುತ್ತಾನೆ. ಇದರಿಂದ ಸ್ಪರ್ಧಾತ್ಮಕವಾದ ದರಗಳು

ರೈತರಿಗೆ ದೊರೆಯುತ್ತವೆ. ಅದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ನಾನು ರೈತನು ಹೌದು, ವ್ಯಾಪಾರಸ್ಥನು ಹೌದು, Industrialist ಕೂಡ ಹೌದು, Educationalist ಕೂಡ ಹೌದು, ರಾಜಕಾರಣಿಯೂ ಹೌದು. ಹೀಗಾಗಿ ನನ್ನಲ್ಲಿ ಎಲ್ಲಾ ವ್ಯಕ್ತಿತ್ವ ಇದೆ. ಇದರ ಸಾಧಕ–ಬಾಧಕಗಳನ್ನು ಅಧಿಕಾರಿಗಳೊಂದಿಗೆ ಚರ್ಚೆ ಮಾಡಿದ್ದೇನೆ. ಇದರಿಂದ ರೈತರಿಗೆ ವಿಶೇಷವಾದ ಸವಲತ್ತುಗಳು ದೊರಕುತ್ತವೆ. ಕೆಲವರು ಒಂದೇ ಸಾರಿ ಖರೀದಿ ಮಾಡಿಕೊಂಡು ಹೋಗಿಬಿಡುತ್ತಾರೆ ಎಂದು ಹೇಳುತ್ತಿದ್ದಾರೆ. ಆದರೆ ಒಂದೇ ಸಾರಿ ಖರೀದಿ ಮಾಡಿಕೊಂಡು ಹೋಗಲು ಸಾಧ್ಯವಿಲ್ಲ. ರೈತನು ಬೆಲೆ ಬಂದಾಗ ಮಾರುತ್ತೇನೆ ಎಂದು godown ನಲ್ಲಿ ಇಟ್ಟುಕೊಳ್ಳುತ್ತಾನೆ. ಬೆಲೆ ಜಾಸ್ತಿ ಇರುವಾಗ ಮಾರುತ್ತಾನೆ. ಇಲ್ಲದಿದ್ದರೆ ಕೆಲವು ವ್ಯಾಪಾರಸ್ಥರು ಬೆಲೆ ಕಡಿಮೆ ಮಾಡಿ, ಖರೀದಿ ಮಾಡುವುದಕ್ಕೆ ring ಮಾಡಿಕೊಂಡು ಬಿಡುತ್ತಾರೆ. ಅಂತಹದ್ದಕ್ಕೆ ಆಸ್ಪದವಿರುವುದಿಲ್ಲ. ಪಾರದರ್ಶಕತೆಯಿಂದ ಖರೀದಿ ಮಾಡಲು online ನಲ್ಲಿ ಮಾಡಿದಾಗ ದಾವಣಗೆರೆ ಇರಬಹುದು, ಮೈಸೂರು ಇರಬಹುದು ಅಥವಾ ಬೆಂಗಳೂರು ಇರಬಹುದು, ಯಾವ ಊರಿನಲ್ಲಿ ಯಾವ ದರ ಇದೆ ಎಂದು ರೈತರಿಗೆ ಗೊತ್ತಾಗುತ್ತದೆ. ಅವನು ಮಾರುವುದಕ್ಕೆ ಇಷ್ಟಪಟ್ಟರೆ ಮಾರಬಹುದು, ಇಲ್ಲದಿದ್ದರೆ godown ನಲ್ಲಿಟ್ಟು ಸರ್ಟಿಫಿಕೇಟ್ ತೆಗೆದುಕೊಂಡು ಹಣ ತೆಗೆದುಕೊಳ್ಳಬಹುದು. ಈ ರೀತಿ ಇರುವುದರಿಂದ ರೈತರಿಗೆ ತುಂಬಾ ಅನುಕೂಲವಾಗುತ್ತದೆ. ಅಲ್ಲದೇ Trade License ಒಂದೇ ತರಹ ಇರುವುದರಿಂದ ಪ್ರತಿ ಜಿಲ್ಲೆಯಲ್ಲಿಯೂ District Officers ಇರುತ್ತಾರೆ. ಅವರು ಎಲ್ಲಿ ಬೇಕಾದರೂ ವ್ಯಾಪಾರ ಮಾಡಲು ಲೈಸೆನ್ಸ್ ಇಷ್ಯೂ ಮಾಡುತ್ತಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಯಾವುದೇ ಒಳ ಒಪ್ಪಂದ ಇಲ್ಲ. ಇದು ನಮ್ಮ ಬಡವರ ಸರ್ಕಾರ, ಅದರಲ್ಲಿಯೂ ಶಿವಶಂಕರಪ್ಪ APMC ಮಂತ್ರಿಯಾಗಿರುವಾಗ ಆ ರೀತಿ ಆಗುವುದಿಲ್ಲ ಎಂದು

ಮನವರಿಕೆ ಮಾಡಿಕೊಡುತ್ತೇನೆ. ರೈತರ ಹೆಸರಿನಲ್ಲಿ ವ್ಯಾಪಾರಸ್ಥರು ಕೊಡುವ ಕಟು ಟೀಕೆಗಳನ್ನು ನಿಲ್ಲಿಸಲು ಅಂತರಜಾಲದ ಮೂಲಕ ಮಾರುಕಟ್ಟೆ ನಿರ್ಮಾಣ ಮಾಡಿ, ರೈತರ ಖಾತೆಗೆ ನೇರವಾಗಿ ಹಣ ಸಂದಾಯವಾಗುತ್ತದೆ. ಇದು ಅಂತರಜಾಲದ ವ್ಯವಸ್ಥೆ ಮುಖಾಂತರ ಮಾತ್ರ ಸಾಧ್ಯ. ಈ ಎಲ್ಲಾ ಅನುಕೂಲತೆಗಳು ರೈತರಿಗೆ ದೊರಕಲಿ ಎಂದು ಮಾಡಿದ್ದೇವೆ. ಇದಲ್ಲದೇ ಬೇರೆ ಯಾವುದೇ ವಿಚಾರ ಅಥವಾ Multi-National Companiesಗಳಿಗೆ ಮಾರಾಟ ಮಾಡುವುದಾಗಲೀ, ಬೇರೆ ಯಾವುದೇ ಉದ್ದೇಶ ಇಲ್ಲ ಎಂದು ಮಾನ್ಯ ಸದಸ್ಯರಿಗೆ ಮನವರಿಕೆ ಮಾಡಿಕೊಡಲು ಪ್ರಯತ್ನ ಮಾಡುತ್ತಿದ್ದೇನೆ. ಒಟ್ಟಿನಲ್ಲಿ ಈ ವಿಧೇಯಕದಿಂದ ರೈತರಿಗೆ ತುಂಬಾ ಅನುಕೂಲವಾಗುತ್ತದೆ. ಇದರ ಬಗ್ಗೆ ಯೋಚನೆ ಮಾಡುವುದು ಬೇಕಾಗಿಲ್ಲ. ನಾನು ಆಗಲೇ ಹೇಳಿದಂತೆ ಗುಲ್ಬರ್ಗ, ಬೀದರ್, ಬಿಜಾಪುರ, ರಾಯಚೂರು, ಯಾದಗಿರಿ, ಗದಗ್, ಕೊಪ್ಪಳ, ಶಿವಮೊಗ್ಗ, ದಾವಣಗೆರೆ, ಚೆನ್ನಗಿರಿ ಇತ್ಯಾದಿ ಕಡೆಗಳಲ್ಲಿ ಸಭೆ ಮಾಡಿದ್ದಾರೆ. ಉತ್ತರ ಕನ್ನಡದ ಶಿರಸಿ, ಸಿದ್ದಾಪುರ, ಯಲ್ಲಾಪುರ, ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ, ಸಾಗರ, ಭದ್ರಾವತಿ, ಹೊಸನಗರ, ಸೊರಬ, ತೀರ್ಥಹಳ್ಳಿ, ಗದಗ್‌ನ ರೋಣ, ನರಗುಂದ, ಮುಂಡರಗಿ, ಲಕ್ಷ್ಮೇಶ್ವರ, ಕೊಪ್ಪಳ, ರಾಯಚೂರಿನ ರಾಯಚೂರು, ಮಾನ್ವಿ, ಲಿಂಗಸಗೂರು, ಸಿಂಧನೂರು, ದೇವದುರ್ಗ, ಬಿಜಾಪುರದ ಬಿಜಾಪುರ, ಸಿಂಧಗಿ, ತಾಳಿಕೋಟೆ, ಇಂಡಿ, ಬೀದರ್‌ನಲ್ಲಿ ಬೀದರ್, ಬಸವಕಲ್ಯಾಣ, ಹುಮ್ನಾಬಾದ್, ಔರಾದ್, ಭಾಲ್ಕಿ, ಗುಲ್ಬರ್ಗ ಜಿಲ್ಲೆಯ ಗುಲ್ಬರ್ಗ, ಚಿತ್ತಾಪುರ, ಚಿಂಚೋಳಿ, ಜೇವರ್ಗಿ, ಸೇಡಂ, ತುಮಕೂರು ಜಿಲ್ಲೆಯ ತುಮಕೂರು, ಗುಬ್ಬಿ, ಹುಲಿಯೂರುದುರ್ಗ, ತಿಪಟೂರು, ತುರುವೇಕೆರೆ, ಹುಳಿಯೂರ್, ಇಷ್ಟು ಕಡೆ ನಮ್ಮ ಅಧಿಕಾರಿಗಳು ರೈತರ ಮತ್ತು ಖರೀದಿದಾರರ ಹಾಗೂ ದಳ್ಳಾಳಿಗಳ ಜೊತೆ ಸಭೆ ಮಾಡಿ ಅವರ ಅಭಿಪ್ರಾಯವನ್ನು ಕೇಳಿದಾಗ ಎಲ್ಲರೂ 'ಬಹಳ

ಚೆನ್ನಾಗಿದೆ, ಇದು ಒಳ್ಳೆಯದು' ಎಂದು ಒಪ್ಪಿದ್ದಾರೆ. ಆದ್ದರಿಂದ ದಯವಿಟ್ಟು ಎಲ್ಲರೂ ಒಪ್ಪಿಗೆ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಅರುಣ್ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರೈತರಿಗೆ ಒಳ್ಳೆಯ ಬೆಲೆ ಕೊಡಿಸಬೇಕು ಎಂಬುದು ಸರಿ, ಆದರೆ ಇದಕ್ಕೆ ಉಗುರಿನಲ್ಲಿ ಹೋಗುವುದಕ್ಕೆ ಕೊಡಲಿ ತೆಗೆದುಕೊಂಡು ನಿಂತಿದ್ದಾರೆ. ಪಾರದರ್ಶಕವಾಗಿ ಎಲ್ಲಾ ಕಡೆ online bidding ಮಾಡಲಿ, ಬೇಕಾದ ಬೆಲೆ ಸಿಗುತ್ತದೆ. ಆದರೆ Single License ಮಾಡಿದರೆ ನಾಳೆ ಇಡೀ APMC ಕಾಯಿದೆಯನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ಈಗ ನಾನು ಒಂದು ಲೈಸೆನ್ಸ್ ತೆಗೆದುಕೊಂಡರೆ ಇಡೀ ರಾಜ್ಯದಲ್ಲಿ ನನಗೆ ಮಳಿಗೆಗಳನ್ನು allot ಮಾಡುತ್ತಾರೆಯೇ?

**ಡಾ|| ಶಾಮನೂರು ಶಿವಶಂಕರಪ್ಪ:-** ರೈತರ ಮಾಲನ್ನು ಖರೀದಿ ಮಾಡಿ, ಖರೀದಿದಾರರು ತಿಂಗಳುಗಟ್ಟಲೆ ಹಣ ಕೊಡದಿದ್ದರೆ ಏನು ಮಾಡುವುದು?

**ಶ್ರೀ ಅರುಣ್ ಶಹಾಪುರ (ಶಿಕ್ಷಕರ ಕ್ಷೇತ್ರ):-** ಅದು ಸರಿ, ಆದರೆ Single License ಬೇಡ. ಇಡೀ ರಾಜ್ಯಕ್ಕೆ ಒಂದೇ ಲೈಸೆನ್ಸ್ ಮಾಡುತ್ತಿರುವುದು ರೈತರಿಗೂ ಒಳ್ಳೆಯದಾಗುವುದಿಲ್ಲ ಮತ್ತು ವ್ಯಾಪಾರಸ್ಥರಿಗೂ ಒಳ್ಳೆಯದಾಗುವುದಿಲ್ಲ. ಇದು APMC conceptಗೆ ವಿರೋಧವಾಗಿರುವುದಾಗಿದೆ.

**ಶ್ರೀ ಕೃಷ್ಣ ಭೈರೇಗೌಡ (ಕೃಷಿ ರಾಜ್ಯ ಸಚಿವರು):-** ಮಾನ್ಯ ಸಭಾಪತಿಯವರೇ, ಬೀದರ್‌ನಲ್ಲಿ ಪದಾರ್ಥ ಇದ್ದಾಗ ಬೆಂಗಳೂರಿನವರು ಆ ಪದಾರ್ಥಕ್ಕೆ bid ಮಾಡಿದರೆ ರೈತನಿಗೆ ಒಳ್ಳೆಯ ಬೆಲೆ ಸಿಗುತ್ತದೋ ಇಲ್ಲವೋ ಎಂಬುದನ್ನು ಹೇಳಬೇಕು. Single License ಮಾಡಿದರೆ ರೈತರಿಗೆ ಒಳ್ಳೆಯದಾಗುತ್ತದೆ. ಒಂದೊಂದು ಬಾರಿ ಒಂದು ಜಿಲ್ಲೆಯಲ್ಲಿ ಬೆಲೆ ಬಿದ್ದು

ಹೋಗಿರುತ್ತದೆ ಹಾಗೂ ಮತ್ತೊಂದು ಜಿಲ್ಲೆಯಲ್ಲಿ ಸಾಕಷ್ಟು ಬೆಲೆ ಇರುತ್ತದೆ. ಈರುಳ್ಳಿ ಬೆಲೆ ಏರುಪೇರಾಗುತ್ತಿರುವುದನ್ನು ದೈನಂದಿನ ಜೀವನದಲ್ಲಿ ಎಲ್ಲರೂ ನೋಡುತ್ತಿದ್ದಾರೆ. ಕೆಲವು ಕಡೆ ಹೆಚ್ಚು ಇದೆ, ಕೆಲವು ಕಡೆ ಕಡಿಮೆ ಇದೆ. ದೂರದಲ್ಲಿರುವವರಿಗೆ ಬೇಡಿಕೆ ಇದ್ದು ಅವರಿಗೆ ಪದಾರ್ಥ ಸಿಗುವುದಿಲ್ಲ. ಅವರು ದೂರದ ಊರಿಂದಲೇ bid ಮಾಡಿದರೆ ರೈತನಿಗೆ ಒಳ್ಳೆಯ ಬೆಲೆ ಸಿಗುವುದಿಲ್ಲವೇ ಎಂದು ವಿಮರ್ಶೆ ಮಾಡಬೇಕು.

**ಶ್ರೀ ಡಿ.ವಿ.ಸದಾನಂದಗೌಡ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಈ ಇಷ್ಯೂಗಳು ನಿಜವಾಗಿ ರೈತರಿಗೆ ಮಾರಕವಾಗುತ್ತದೆ. ಏಕೆಂದರೆ, ಜಾಗತಿಕ ಮಟ್ಟದ ದೊಡ್ಡ ದೊಡ್ಡ Wal-Mart ಇರಬಹುದು, Metro ಇರಬಹುದು, ಇಂತಹವರಿಗೆ ಬಹಳ ಲಾಭ ಆಗುತ್ತದೆ. ಕೆಲವರು ಭಾರಿ ಬಂಡವಾಳ ಹೂಡಿಕೆ ಮಾಡುತ್ತಾರೆ, ಕೆಲವು ಸಣ್ಣಪುಟ್ಟ ವ್ಯಾಪಾರಿಗಳು ಇರುತ್ತಾರೆ. Online ಬಾಕಿಯೆಲ್ಲಾ ಟ್ರೇಡಿಂಗ್‌ಗಳಿಂದ ಮಾರುಕಟ್ಟೆ ಮತ್ತೊಂದು ಆಗಬಹುದು. ನಮಗೆ ನಿಶ್ಚಯವಾಗಿ ಗೊತ್ತಿರುವಂತೆ ಏನಾದರೂ ಮಾಡಿ ರೈತ ವಿರೋಧಿ ಕಾರ್ಯಾಚರಣೆ ಮಾಡಬೇಕೆಂದು ನಿಶ್ಚಯ ಮಾಡಿದ್ದಾರೆ. ಈ ವಿಧೇಯಕವನ್ನು ಒಪ್ಪಿಕೊಳ್ಳಲು ತಯಾರಿಲ್ಲ ಹಾಗೂ ದಯವಿಟ್ಟು ಇದನ್ನು ವಿಥ್‌ಡ್ರಾ ಮಾಡಬೇಕು. ಜಾಗತಿಕ ಎಂದರೆ ಯಾರು? ವಿದೇಶಿಯರನ್ನು ಸೇರಿಸಿಕೊಂಡು ರೈತರಿಗೆ ತೊಂದರೆ ಮಾಡುವುದನ್ನು ವಿರೋಧ ಮಾಡುತ್ತೇವೆ ಹಾಗೂ ಇದನ್ನು ವಿರೋಧಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

**(ಈ ಹಂತದಲ್ಲಿ ಬಿಜೆಪಿ ಪಕ್ಷದ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿ ಸದನದಿಂದ ಹೊರನಡೆದರು)**

**ಶ್ರೀ ಕೃಷ್ಣ ಭೈರೇಗೌಡ:–** ಇದು ರೈತರಿಗೆ ಅನುಕೂಲವಾಗುವ ತಿದ್ದುಪಡಿ, ರೈತರು ಬೆಳೆದ ಬೆಳೆಗಳಿಗೆ ಒಳ್ಳೆಯ ಬೆಲೆ ಸಿಗಬೇಕೆಂಬ

ಉದ್ದೇಶದಿಂದ ಮಾಡಿದ್ದಾರೆ. ಒಳ್ಳೆಯ ಮಾರುಕಟ್ಟೆ ಸಿಗಬೇಕೆಂಬ ಉದ್ದೇಶದಿಂದ ತಂದಿರುವುದು ಹಾಗೂ ರೈತರ ಪರವಾಗಿರುವುದು. ರೈತರ ಬೆಳೆಗೆ ಒಳ್ಳೆಯ ಬೆಲೆ ಸಿಗಬೇಕೆಂಬುದು ಈ ಕಾನೂನಿನ ತಿದ್ದುಪಡಿಯ ಉದ್ದೇಶವಾಗಿದೆ. ಅದನ್ನು ಪಾಸು ಮಾಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2013ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು

**ಖಂಡ 2ರಿಂದ 8ರವರೆಗೆ**

**ಸಭಾಪತಿಯವರು:–** "ಖಂಡ 2ರಿಂದ 8ರವರೆಗೆ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2ರಿಂದ 8ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಡಾ॥ ಶಾಮನೂರು ಶಿವಶಂಕರಪ್ಪ (ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2013ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

“ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2013ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**11. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**ಕಾರ್ಯದರ್ಶಿ:–** ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2013ನೇ ಸಾಲಿನ ರಾಜೀವಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯಗಳ ತಿದ್ದುಪಡಿ ವಿಧೇಯಕವನ್ನು ಸಭೆಯ ಮುಂದಿಡುತ್ತಿದ್ದೇನೆ.

## 12. ಪ್ರಕಟಣೆ

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ;

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ:04.12.2013ರಂದು 2013ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಮತ್ತು ಕೆಲವು ಇತರ ಕಾನೂನುಗಳ(ತಿದ್ದುಪಡಿ) ವಿಧೇಯಕ ಹಾಗೂ 2013ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್(ಎರಡನೇ ತಿದ್ದುಪಡಿ) ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಮತ್ತು ಈ ಕೆಳಕಂಡ ವಿಧೇಯಕಗಳನ್ನು ತಿದ್ದುಪಡಿಗಳೊಂದಿಗೆ ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಕೃಷಿ ವಿಜ್ಞಾನ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2013

2. ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ (ತಿದ್ದುಪಡಿ) ವಿಧೇಯಕ, 2013

3. ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕ,2013.

ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗಳವರೆಗೆ ಮುಂದೂಡಲಾಗಿದೆ.

**(ಸದನವು ರಾತ್ರಿ 9 ಗಂಟೆ 21 ನಿಮಿಷಗಳಿಗೆ ಮುಕ್ತಾಯಗೊಂಡು ಪುನಃ ದಿನಾಂಕ 05ನೇ ಡಿಸೆಂಬರ್ ಮಾಹೆ 2013ರ ಗುರುವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು.)**